ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತಮಹಾಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೨

ಅನುವಾದಕ:
ಸಾಹಿತ್ಯ ಮತ್ತು ಕನ್ನಡ ವಿದ್ವಾನ್
ಚಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ,
ಸಂಸ್ಕೃತ ಪಂಡಿತ,
ಪ್ರೈಸಿಂಗ್ ಕಾಲೇಜು, ಮೈಸೂರು.

ಮೈಸೂರು :
ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್
೧೯೪೯

ಪೀಠಿಕೆ

ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡವು ಪ್ರಕೃತಿಪ್ರಧಾನವಾದ ಸೃಷ್ಟಿನಿರೂಪಣೆಯಿಂದ ಪ್ರಾರಂಭವಾಗುವುದು. ಸೃಷ್ಟ್ಯುನ್ಮುಖನಾದ ಪರಮಾತ್ಮನು ಯೋಗಶಕ್ತಿಯಿಂದ ದ್ವಿರೂಪನಾಗಿ ಶೋಭಿಸುವನು. ಅವನ ದಕ್ಷಿಣಾರ್ಧಾಂಗವು ಪುರುಷನೆಂದೂ, ವಾಮಾರ್ಧಾಂಗವು ಪ್ರಕೃತಿಯೆಂದೂ ಸಿದ್ಧವಾಗುವುದು. ಅನಂತರ ಪ್ರಕೃತಿಯು ಯೋಗಬಲದಿಂದ ಪಂಚವಿಧವಾಗಿ, ದುರ್ಗಾ, ರಾಧಾ, ಲಕ್ಷ್ಮಿ, ಸರಸ್ವತಿ ಮತ್ತು ಸಾವಿತ್ರಿ ಎಂದು ಪ್ರಖ್ಯಾತಳಾಗುವಳು. ಅಂತೆಯೇ ಪುರುಷನು ಯೋಗಶಕ್ತಿಯಿಂದ ದ್ವಿರೂಪವನ್ನು ಹೊಂದಿ ಶ್ರೀಕೃಷ್ಣ ಮತ್ತು ನಾರಾಯಣನೆಂಬ ಹೆಸರುಗಳಿಂದ ಖ್ಯಾತಿಹೊಂದುವನು. ಶ್ರೀಕೃಷ್ಣನ ನಾಭಿಕಮಲದಿಂದ ಚತುರ್ಮುಖ ಬ್ರಹ್ಮನೂ, ಪೂರ್ಣಾಂಶದಿಂದ ಮಹಾದೇವನು ವ್ಯಕ್ತರಾಗುವರು. ರಾಧಾದೇವಿಯು ಶ್ರೀಕೃಷ್ಣನನ್ನೂ, ಲಕ್ಷ್ಮಿ ಮತ್ತು ಸರಸ್ವತಿಯರು ನಾರಾಯಣನನ್ನೂ, ಸಾವಿತ್ರಿಯು ಬ್ರಹ್ಮನನ್ನೂ, ದುರ್ಗಾಂಬಿಕೆಯು ಮಹಾದೇವನನ್ನು ವರಿಸುವರು. ಇತ್ತ ಪುರುಷನಿಂದ ಗರ್ಭಹೊಂದಿದ ಪ್ರಕೃತಿಯು ಸುವರ್ಣಾಂಡವೊಂದನ್ನು ಪ್ರಸುವಿಸಿ ವಿಶ್ವಗೋಳಕದಲ್ಲಿ ಬಿಸುಡುವಳು. ಸಹಸ್ರವರ್ಷಗಳು ಕಳೆದನಂತರ ಆ ಅಂಡದಿಂದ ಮಹಾವಿರಾಟನು ವ್ಯಕ್ತನಾಗುವನು. ಅನಂತರ ಅವನ ಪ್ರತಿರೋಮಕೂಪಗಳಲ್ಲೂ ಅಡಗಿದ್ದ ಸ್ಥಾವರಜಂಗಮಾತ್ಮಕವಾದ ವಿಶ್ವವು ವ್ಯಕ್ತವಾಗುವುದು.

ಗೋಲೋಕದ ರಾಸಮಂಡಲದಲ್ಲಿ ರಾಸಕ್ರೀಡಾಸಕ್ತರಾಗಿದ್ದ ರಾಧಾಕೃಷ್ಣರ ಅವಯವಗಳಿಂದ ಗಂಗೆಯು ಆವಿರ್ಭವಿಸಿ ಶ್ರೀಕೃಷ್ಣನ ಅಪ್ಪಣೆಯಂತೆ ನಾರಾಯಣನನ್ನು ವರಿಸುವಳು. ಈ ದೇವಿಯರೆಲ್ಲರೂ ವಿಶ್ವಪೂಜ್ಯರಾಗುವರು. ರಜೋಗುಣ ಪ್ರಾಬಲ್ಯದಿಂದ ಗಂಗೆ, ಲಕ್ಷ್ಮಿ ಮತ್ತು ಸರಸ್ವತೀದೇವಿಯರು ಅಸೂಯಾಪರರಾಗಿ ಅನ್ಯೋನ್ಯಕಲಹವಾಡಿ, ಶಾಪಪ್ರತಿಶಾಪಗಳನ್ನು ಹೊಂದುವರು. ಶಾಪಹೊಂದಿದ ಲಕ್ಷ್ಮಿಯು ತುಳಸೀರೂಪದಿಂದಲೂ ಗಂಗಾಸರಸ್ವತಿಯರು ನದೀರೂಪದಿಂದಲೂ ಭಾರತದಲ್ಲಿ ಅವತರಿಸಿ, ಕಲಿಯುಗದ ಹತ್ತುಸಾವಿರ ವರ್ಷಗಳು ಕಳೆದನಂತರ ಶಾಪವಿಮುಕ್ತರಾಗಿ ತಮ್ಮ ಲೋಕಕ್ಕೆ ತೆರಳುವರು.

ಪಂಚಪ್ರಕೃತಿಯ ಚರಿತ್ರೆಯೂ, ಗಂಗೆ, ತುಳಸಿ ಮತ್ತು ವಸುಂಧರಾ ದೇವಿಯರ ಮಾಹಾತ್ಮ್ಯವೂ ಈ ಸಂಪುಟದಲ್ಲಿ ಅಡಕವಾಗಿದೆ. ರಜೋಗುಣವನ್ನು ದೂರಮಾಡಿ ಸತ್ವಗುಣಪ್ರಧಾನರಾಗುವುದೇ ಮುಕ್ತಿಗೆ ಮೆಟ್ಟಿಲೆಂಬುದು ಇಲ್ಲಿಯ ಸನ್ನಿವೇಶಗಳಿಂದ ಸ್ಪಷ್ಟವಾಗುತ್ತದೆ.

ಈ ಮಹಾಪುರಾಣವನ್ನು ಕರ್ಣಾಟಕಭಾಷೆಯಲ್ಲಿ ಪ್ರಚಾರಗೊಳಿಸಲು ಕಾರಣ ಕರ್ತರೂ, ಪರಮೋದಾರಿಗಳೂ, ಕರ್ಣಾಟಕಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರಿಗೂ, ಅವರ ಬಂಧುಮಿತ್ರಕಳತ್ರಾದಿಗಳಿಗೂ ಚಿರಕಾಲ ಸುಖಸಂತೋಷವನ್ನೀಯಲೆಂದು ಮೂಲಪ್ರಕೃತಿಯಾದ ದುರ್ಗಾಂಬಿಕೆಯನ್ನು ಪ್ರಾರ್ಥಿಸುವ,

ವಿರೋಧಿ ಸಂ॥ ದ
ಚೈತ್ರ ಶುಕ್ಲ ನವಮಿ

ಅನುವಾದಕ,
ಬಿ. ಎಸ್. ಕೃಷ್ಣಪ್ಪ

ವಿಷಯಾನುಕ್ರಮಣಿಕೆ

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಪ್ರಥಮೋಽಧ್ಯಾಯಃ ||

|| ನಾರದ ಉವಾಚ ||

ಗಣೇಶಜನನೀ ದುರ್ಗಾ ರಾಧಾ ಲಕ್ಷ್ಮೀಃ ಸರಸ್ವತೀ |
ಸಾವಿತ್ರೀ ವೈ ಸೃಷ್ಟಿವಿಧೌ ಪ್ರಕೃತಿಃ ಪಂಚಧಾ ಸ್ಮೃತಾ || ೧ ||

ಆವಿರ್ಬಭೂವ ಸಾ ಕೇನ ಕಾ ವಾ ಸಾ ಜ್ಞಾನಿನಾಂ ವರಾ |
ಕಿಂ ವಾ ತಲ್ಲಕ್ಷಣಂ ಬ್ರೂಹಿ ಸಾಽಭವತ್ಪಂಚಧಾ ಕಥಂ || ೨ ||

ಸರ್ವಾಸಾಂ ಚರಿತಂ ಪೂಜಾವಿಧಾನಂ ಕಥಮೀಪ್ಸಿತಂ |
ಅವತಾರಂ ಕುತ್ರ ಕಸ್ಯಾಸ್ತನ್ಮಾಂ ವ್ಯಾಖ್ಯಾತುಮರ್ಹಸಿ || ೩ ||

ಒಂದನೆಯ ಅಧ್ಯಾಯವು

೧. ನಾರದ:—ಎಲೈ, ನಾರಾಯಣಮಹರ್ಷಿಗಳೇ, ಗಣೇಶನ ತಾಯಿಯಾದ ದುರ್ಗಾಂಬಿಕೆಯೂ, ರಾಧೆ, ಲಕ್ಷ್ಮಿ, ಸರಸ್ವತಿ ಮತ್ತು ಸಾವಿತ್ರಿದೇವಿಯರೂ, ಪ್ರಕೃತಿರೂಪಿಣಿಯರೆಂದೂ, ಸೃಷ್ಟಿಗೆ ಮೊದಲು ಪರಬ್ರಹ್ಮನಲ್ಲಿಯೇ ಐಕ್ಯಳಾಗಿರುವ ಪ್ರಕೃತಿಯು ಸೃಷ್ಟಿಕಾಲದಲ್ಲಿ ಈ ಐದು ವಿಭಾಗವಾಗಿ ಅವತರಿಸುವಳೆಂದೂ, ತಾವು ವಿವರಿಸಿದಿರಿ.

೨. ಜ್ಞಾನಿಶ್ರೇಷ್ಠಳಾದ ಆ ಪ್ರಕೃತಿಯು ಯಾರಿಂದ ಹೇಗೆ ಅವತರಿಸಿದಳೆಂಬುದನ್ನೂ, ಅವಳ ಲಕ್ಷಣವನ್ನೂ, ಅವಳು ಹೇಗೆ ಐದು ಬಗೆಯಾದಳೆಂಬುದನ್ನೂ ದಯವಿಟ್ಟು ವಿಶದಪಡಿಸುವಿರಾ ?

೩. ಅಲ್ಲದೆ ಆ ಪಂಚವಿಧದೇವಿಯರ ಚರಿತ್ರೆಯನ್ನೂ, ಅವರವರಿಗೆ ಇಷ್ಟವಾದ ಪೂಜಾಕ್ರಮವನ್ನೂ, ಅವರಲ್ಲಿ ಯಾರು ಯಾರು ಎಲ್ಲೆಲ್ಲಿ ಅವತರಿಸಿದರೆಂಬುದನ್ನೂ ಕೃಪಾಳುಗಳಾದ ತಾವು ನನಗೆ ವಿವರಿಸಬೇಕು.

॥ ನಾರಾಯಣ ಉವಾಚ ॥

ಪ್ರಕೃತೇರ್ಲಕ್ಷಣಂ ವತ್ಸ ಕೋ ವಾ ವಕ್ತುಂ ಕ್ಷಮೋ ಭವೇತ್ ।
ಕಿಂಚಿತ್ತಥಾಽಪಿ ವಕ್ಷ್ಯಾಮಿ ಯಚ್ಛ್ರುತಂ ಧರ್ಮವಕ್ತ್ರತಃ ॥ ೪ ॥

ಪ್ರಕೃಷ್ಟವಾಚಕಃ ಪ್ರಶ್ಚ ಕೃತಿಶ್ಚ ಸೃಷ್ಟಿವಾಚಕಃ ।
ಸೃಷ್ಟೌ ಪ್ರಕೃಷ್ಟಾ ಯಾ ದೇವೀ ಪ್ರಕೃತಿಃ ಸಾ ಪ್ರಕೀರ್ತಿತಾ ॥ ೫ ॥

ಗುಣೇ ಪ್ರಕೃಷ್ಟಸತ್ತ್ವೇ ಚ ಪ್ರಶಬ್ದೋ ವರ್ತತೇ ಶ್ರುತೌ ।
ಮಧ್ಯಮೋ ಕೃಶ್ಚ ರಜಸಿ ತಿಶಬ್ದಸ್ತಮಸಿ ಸ್ಮೃತಃ ॥ ೬ ॥

ತ್ರಿಗುಣಾತ್ಮಸ್ವರೂಪಾ ಯಾ ಸರ್ವಶಕ್ತಿಸಮನ್ವಿತಾ ।
ಪ್ರಧಾನಾ ಸೃಷ್ಟಿಕರಣೇ ಪ್ರಕೃತಿಸ್ತೇನ ಕಥ್ಯತೇ ॥ ೭ ॥

---

೪. ನಾರಾಯಣಮಹರ್ಷಿ:—ಎಲೈ, ವತ್ಸ ನಾರದನೇ, ವಾಗತೀತಳಾದ ಪ್ರಕೃತಿಯ ಲಕ್ಷಣವನ್ನು ನಿಷ್ಕರ್ಷೆಯಾಗಿ ತಿಳಿಸಲು ಯಾರಿಂದಲೂ ಸಾಧ್ಯವಾಗದು. ಆದರೂ ಧರ್ಮಪುರುಷನ ಬಾಯಿನಿಂದ ನಾನು ಕೇಳಿದ ಅಲ್ಪಸ್ವಲ್ಪ ಲಕ್ಷಣವನ್ನು ಸಾಧ್ಯವಾದಷ್ಟು ವಿವರಿಸುವೆನು.

೫. 'ಪ್ರ' ಎಂದರೆ ಪ್ರಕೃಷ್ಟವೆಂದೂ, 'ಕೃತಿ' ಎಂದರೆ ಸೃಷ್ಟಿ ಎಂದೂ ಅರ್ಥವಾಗುವುದರಿಂದ ಸೃಷ್ಟಿಯಲ್ಲಿ ಪ್ರಕೃಷ್ಟ (ಉತ್ತಮ) ಳಾದವಳು ಪ್ರಕೃತಿ ಎಂದು ಪ್ರಸಿದ್ಧಿ ಪಡೆದಳು.

೬-೭. 'ಪ್ರ' ಎಂದರೆ ಪ್ರಕೃಷ್ಟವಾದ ಸತ್ವಗುಣವೆಂದೂ, 'ಕೃ' ಎಂದರೆ ಮಧ್ಯಮವಾದ ರಜೋಗುಣವೆಂದೂ, 'ತಿ' ಎಂದರೆ ಅಧಮವಾದ ತಮೋಗುಣವೆಂದೂ ಶ್ರುತ್ಯುಕ್ತವಾಗಿರುವುದರಿಂದ, ತ್ರಿಗುಣಾತ್ಮಸ್ವರೂಪಳೂ, ಸರ್ವಶಕ್ತಿ ಸಮನ್ವಿತಳೂ, ಸೃಷ್ಟಿಯಲ್ಲಿ ಪ್ರಧಾನಳೂ ಆದವಳೇ ಪ್ರಕೃತಿ ಎಂದು ಪ್ರಕಾರಾಂತರವಾಗಿ ಹೆಸರುವಾಸಿಯಾದಳು.

ಪ್ರಥಮೇ ವರ್ತತೇ ಪ್ರಶ್ಚ ಕೃತಿಸ್ಸ್ಯಾತ್ಸೃಷ್ಟಿವಾಚಕಃ |
ಸೃಷ್ಟೇರಾದ್ಯಾ ಚ ಯಾ ದೇವೀ ಪ್ರಕೃತಿಃ ಸಾ ಪ್ರಕೀರ್ತಿತಾ || ೮ ||

ಯೋಗೇನಾತ್ಮಾ ಸೃಷ್ಟಿವಿಧೌ ದ್ವಿಧಾ ರೂಪೋ ಬಭೂವ ಸಃ |
ಪುಮಾಂಶ್ಚ ದಕ್ಷಿಣಾರ್ಧಾಂಗೋ ವಾಮಾಂಗಃ ಪ್ರಕೃತಿಃ ಸ್ಮೃತಃ || ೯ ||

ಸಾ ಚ ಬ್ರಹ್ಮಸ್ವರೂಪಾ ಸ್ಯಾನ್ಮಾಯಾ ನಿತ್ಯಾ ಸನಾತನೀ |
ಯಥಾತ್ಮಾ ಚ ಯಥಾ ಶಕ್ತಿರ್ಯಥಾಗ್ನೌ ದಾಹಿಕಾ ಸ್ಮೃತಾ || ೧೦ ||

ಅತ ಏವ ಹಿ ಯೋಗೀಂದ್ರಃ ಸ್ತ್ರೀಪುಂಭೇದಂ ನ ಮನ್ಯತೇ |
ಸರ್ವಂ ಬ್ರಹ್ಮಮಯಂ ಬ್ರಹ್ಮನ್ಪಶ್ಯತ್ಪಶ್ಯತಿ ನಾರದ || ೧೧ ||

---

೮. 'ಪ್ರ' ಎಂದರೆ ಪ್ರಥಮವೆಂದೂ, 'ಕೃತಿ' ಎಂದರೆ ಸೃಷ್ಟಿ ಎಂದೂ ಅರ್ಥವಾಗುವುದರಿಂದ, ಸರ್ವಸೃಷ್ಟಿಗೂ ಪ್ರಥಮಳಾದವಳೇ–ಪ್ರಕೃತಿ ಎಂದು ಸ್ಪಷ್ಟವಾಗುವುದು.

೯. ಪೂರ್ವದಲ್ಲಿ–ಸೃಷ್ಟ್ಯುನ್ಮುಖನಾದ ಪರಮಾತ್ಮನು ತನ್ನ ಯೋಗಶಕ್ತಿಯಿಂದ ಇಬ್ಬಗೆಯಾದನು. ಅದರಲ್ಲಿ ದಕ್ಷಿಣಾರ್ಧವು ಪುರುಷನೆಂದೂ, ವಾಮಾರ್ಧವು ಪ್ರಕೃತಿಯೆಂದೂ ಪ್ರಸಿದ್ಧವಾಯಿತು.

೧೦. ಸನಾತನಿಯೂ, ಮಾಯಾಮಯಿಯೂ ಆದ ಆ ಪ್ರಕೃತಿಯು ಬ್ರಹ್ಮಸ್ವರೂಪಳೂ, ಆತ್ಮನಂತೆ ನಿತ್ಯಳೂ ಅಹುದು. ಅಗ್ನಿಯಲ್ಲಿ ದಾಹಶಕ್ತಿಯು ನಿತ್ಯವಾಗಿರುವಂತೆ ಆತ್ಮನಲ್ಲಿ ಪ್ರಕೃತಿಯು ನಿತ್ಯಳಾಗಿರುವಳು.

೧೧. ಆದ್ದರಿಂದಲೇ ಯೋಗಿವರ್ಯನು ಪುಂಸ್ತ್ರೀಭೇದವನ್ನು ಕಾಣದೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತ್ಯನುಗುಣವಾಗಿ ವಿಶ್ವವೆಲ್ಲವನ್ನೂ ಬ್ರಹ್ಮಮಯವೆಂದು ತಿಳಿಯುವನು.

ಸ್ವೇಚ್ಛಾಮಯಸ್ಯೇಚ್ಛಯಾ ಚ ಶ್ರೀಕೃಷ್ಣಸ್ಯ ಸಿಸೃಕ್ಷಯಾ ।
ಸಾವಿರ್ಬಭೂವ ಸಹಸಾ ಮೂಲಪ್ರಕೃತಿರೀಶ್ವರೀ ॥ ೧೨ ॥

ತದಾಜ್ಞಯಾ ಪಂಚವಿಧಾ ಸೃಷ್ಟಿಕರ್ಮಣಿ ಭೇದತಃ ।
ಅಥ ಭಕ್ತಾನುರೋಧಾದ್ವಾ ಭಕ್ತಾನುಗ್ರಹವಿಗ್ರಹಾ ॥ ೧೩ ॥

ಗಣೇಶಮಾತಾ ದುರ್ಗಾ ಯಾ ಶಿವರೂಪಾ ಶಿವಪ್ರಿಯಾ ।
ನಾರಾಯಣೀ ವಿಷ್ಣುಮಾಯಾ ಪೂರ್ಣಬ್ರಹ್ಮಸ್ವರೂಪಿಣೀ ॥ ೧೪ ॥

ಬ್ರಹ್ಮಾದಿದೇವೈರ್ಮನುಭಿರ್ಮುನಿಭಿಃ ಪೂಜಿತಾ ಸದಾ ।
ಸರ್ವಾಧಿಷ್ಠಾತೃದೇವೀ ಸಾ ಬ್ರಹ್ಮರೂಪಾ ಸನಾತನೀ ॥ ೧೫ ॥

---

೧೨. ಸ್ವೇಚ್ಛಾಮಯನಾದ ಶ್ರೀಕೃಷ್ಣಪರಮಾತ್ಮನಿಗೆ ಸೃಷ್ಟ್ಯುನ್ಮುಖತೆಯುಂಟಾದ ಕೂಡಲೇ ಆ ಸರ್ವಶಕ್ತಿಸ್ವರೂಪಳಾದ ಮೂಲಪ್ರಕೃತಿಯು ಆವಿರ್ಭವಿಸಿದಳು.

೧೩. ಆ ಪರಮಾತ್ಮನ ಅಪ್ಪಣೆಯಂತೆ ಸೃಷ್ಟಿಕರ್ಮಾನುಗುಣವಾಗಿ ಪ್ರಕೃತಿಯು ಪಂಚವಿಧಳಾದಳು. ಭಕ್ತವತ್ಸಲೆಯಾದ ಆಕೆಯು ಭಕ್ತಾನುಗ್ರಹಕ್ಕಾಗಿ ಭಕ್ತರಿಗೆ ಅಭೀಪ್ಸಿತವಾದ ಆಯಾಯ ವಿಗ್ರಹವನ್ನು ಧರಿಸಿದಳೆಂದೂ ಹೇಳಬಹುದು.

೧೪. ಆ ಪ್ರಕೃತಿಯು ಪಂಚವಿಧದೇವಿಯರಲ್ಲಿ ಶಿವನ ಪತ್ನಿಯೂ, ಗಣೇಶನ ಮಾತೆಯೂ ಆದ ದುರ್ಗಾದೇವಿಯೇ ಮೊದಲನೆಯವಳು. ಆಕೆಯು ಪೂರ್ಣಬ್ರಹ್ಮ ಸ್ವರೂಪಿಣಿಯೂ, ವಿಷ್ಣುಮಾಯಾಮಯಿಯೂ, ನಾರಾಯಣಿಯೂ, ಮಂಗಳ ರೂಪಿಣಿಯೂ ಆಗಿದ್ದಾಳೆ.

೧೫. ಬ್ರಹ್ಮರೂಪಿಣಿಯೂ, ಸನಾತನಿಯೂ, ಸರ್ವಾಧಿಷ್ಠಾತೃದೇವಿಯೂ ಆದ ಆಕೆಯು ಬ್ರಹ್ಮಾದಿದೇವತೆಗಳಿಂದಲೂ, ಮನುಮುನಿಮಾನವರಿಂದಲೂ ಸದಾ ಪೂಜಿತಳಾಗಿದ್ದಾಳೆ.

ಯಶೋಮಂಗಲಧರ್ಮಶ್ರೀಸತ್ಯಪುಣ್ಯಪ್ರದಾಯಿನೀ ।
ಮೋಕ್ಷಹರ್ಷಪ್ರದಾತ್ರೀಯಂ ಶೋಕದುಃಖಾರ್ತಿನಾಶಿನೀ ॥ ೧೬ ॥

ಶರಣಾಗತದೀನಾರ್ತಪರಿತ್ರಾಣಪರಾಯಣಾ ।
ತೇಜಃಸ್ವರೂಪಾ ಪರಮಾ ತದಧಿಷ್ಠಾತೃದೇವತಾ ॥ ೧೭ ॥

ಸರ್ವಶಕ್ತಿಸ್ವರೂಪಾ ಚ ಶಕ್ತಿರೀಶಸ್ಯ ಸಂತತಂ ।
ಸಿದ್ಧೇಶ್ವರೀ ಸಿದ್ಧರೂಪಾ ಸಿದ್ಧಿದಾ ಸಿದ್ಧಿದೇಶ್ವರೀ ॥ ೧೮ ॥

ಬುದ್ಧಿರ್ನಿದ್ರಾ ಕ್ಷುತ್ಪಿಪಾಸಾ ಚ್ಛಾಯಾ ತಂದ್ರಾ ದಯಾ ಸ್ಮೃತಿಃ ।
ಜಾತಿಃ ಕ್ಷಾಂತಿಶ್ಚ ಶಾಂತಿಶ್ಚ ಕಾಂತಿರ್ಭ್ರಾಂತಿಶ್ಚ ಚೇತನಾ ॥ ೧೯ ॥

ತುಷ್ಟಿಃ ಪುಷ್ಟಿಸ್ತಥಾಲಕ್ಷ್ಮೀರ್ವೃತ್ತಿರ್ಮಾತಾ ತಥೈವ ಚ ।
ಸರ್ವಶಕ್ತಿಸ್ವರೂಪಾ ಸಾ ಕೃಷ್ಣಸ್ಯ ಪರಮಾತ್ಮನಃ ॥ ೨೦ ॥

---

೧೬. ಆ ದುರ್ಗಾಮಾತೆಯು, ಭಕ್ತರ ಪೀಡಾದುಃಖಗಳನ್ನು ನಾಶಗೊಳಿಸಿ, ಕೀರ್ತಿಮಂಗಳಗಳನ್ನೂ, ಧರ್ಮಪುಣ್ಯಗಳನ್ನೂ, ಸತ್ಯಸಂಪತ್ತುಗಳನ್ನೂ, ಮೋಕ್ಷ ಹರ್ಷಗಳನ್ನೂ ದಯಪಾಲಿಸುವಳು.

೧೭–೧೮. ಶರಣಾಗತರಾದ ದೀನರ ರಕ್ಷಣೆಯಲ್ಲಿ ನಿರತಳೂ, ಪರಮತೇಜಃ ಸ್ವರೂಪಳೂ, ಸರ್ವಶಕ್ತಿಸ್ವರೂಪಿಣಿಯೂ, ಈಶ್ವರನ ಸಂತತಶಕ್ತಿಸ್ವರೂಪಳೂ, ಸಿದ್ಧೇಶ್ವರಿಯೂ ಮತ್ತು ಸಿದ್ಧರೂಪಳೂ ಆದ ಆ ದುರ್ಗಾಂಬಿಕೆಯೇ ಎಲ್ಲ ಕಾರ್ಯ ಗಳಿಗೂ ಸಿದ್ಧಿದಾಯಕಳು.

೧೯–೨೦. ಆ ದುರ್ಗಾಮಾತೆಯು, ಕೃಷ್ಣಪರಮಾತ್ಮನಿಂದ ಜನಿಸಿದ ಬುದ್ಧಿ, ನಿದ್ರೆ, ಹಸಿವು, ಬಾಯಾರಿಕೆ, ಮಂಕುತನ, ತೂಕಡಿಕೆ, ದಯೆ, ನೆನಪು, ಜಾತಿ, ಕ್ಷಮೆ, ಶಾಂತಿ, ಕಾಂತಿ, ಭ್ರಾಂತಿ, ಚೇತನಾ, ತುಷ್ಟಿ, ಪುಷ್ಟಿ, ಲಕ್ಷ್ಮಿ, ವೃತ್ತಿ, ಮಾತಾ, ಮುಂತಾದ ಸಮಸ್ತ ಶಕ್ತಿಸ್ವರೂಪಿಣಿಯೂ ಕೂಡ ಆಗಿದ್ದಾಳೆ.

ಉಕ್ತಃ ಶ್ರುತೌ ಶ್ರುತಗುಣಶ್ಚಾತಿಸ್ವಲ್ಪೋ ಯಥಾಗಮಂ ।
ಗುಣೋಽಸ್ತ್ಯನಂತೋಽನಂತಾಯಾ ಅಪರಾಂ ಚ ನಿಶಾಮಯ ॥ ೨೧ ॥

ಶುದ್ಧಸತ್ವಸ್ವರೂಪಾ ಯಾ ಪದ್ಮಾ ಚ ಪರಮಾತ್ಮನಃ ।
ಸರ್ವಸಂಪತ್ಸ್ವರೂಪಾ ಯಾ ತದಧಿಷ್ಠಾತೃದೇವತಾ ॥ ೨೨ ॥

ಕಾಂತಾ ದಾಂತಾತಿಶಾಂತಾ ಚ ಸುಶೀಲಾ ಸರ್ವಮಂಗಲಾ ।
ಲೋಭಾನ್ಮೋಹಾತ್ಕಾಮರೋಷಾನ್ಮದಾಹಂಕಾರತಸ್ತಥಾ ॥ ೨೩ ॥

ತ್ಯಕ್ತಾನುರಕ್ತಾ ಪತ್ಯುಶ್ಚ ಸರ್ವಾದ್ಯಾ ಚ ಪತಿವ್ರತಾ ।
ಪ್ರಾಣತುಲ್ಯಾ ಭಗವತಃ ಪ್ರೇಮಪಾತ್ರೀ ಪ್ರಿಯಂವದಾ ॥ ೨೪ ॥

---

೨೧. ಶ್ರುತಿಪ್ರಸಿದ್ಧಳಾದ ಆಕೆಯ ಕೆಲವು ಗುಣಗಳನ್ನು ಮಾತ್ರ ನಾನು ತಿಳಿದಂತೆ ವಿವರಿಸಿದೆನು. ಅನಂತಳಾದ ಆಕೆಯ ಗುಣವೂ ಅನಂತವಾಗಿದೆ. (ಎಣಿಸಲಾರದಷ್ಟಿದೆ). ಈಗ ಮತ್ತೊಬ್ಬ ಶಕ್ತಿಯ ಸ್ವರೂಪವನ್ನು ವಿವರಿಸುವೆನು, ಅವಧರಿಸು.

೨೨. ಶುದ್ಧಸತ್ವಗುಣಸಂಪನ್ನಳೂ, ಪರಮಾತ್ಮನ ಸರ್ವಸಂಪತ್ಸ್ವರೂಪಳೂ, ಸಂಪತ್ತಿಗೆ ಅಧಿಷ್ಠಾತೃದೇವತೆಯೂ ಆದ ಮಹಾಲಕ್ಷ್ಮಿಯೇ ಪ್ರಕೃತಿಯ ಎರಡನೆಯ ಭೇದಕ್ಕೆ ಸೇರಿದವಳು.

೨೩–೨೪. ಮನೋಪರಳೂ, ಇಂದ್ರಿಯನಿಗ್ರಹಪರಳೂ, ಶಾಂತಳೂ, ಸುಶೀಲಳೂ, ಸರ್ವಮಂಗಲಸ್ವರೂಪಳೂ ಆದ ಆ ಲಕ್ಷ್ಮೀದೇವಿಯು ಕಾಮಾದ್ಯರಿಷಡ್ವರ್ಗಗಳಿಗೆ ಅಧೀನಳಾಗದೆ, ತನ್ನ ಪತಿದೇವನಲ್ಲೇ ಅನುರಕ್ತಳಾಗಿ, ಪತಿವ್ರತೆಯರೆಲ್ಲರಿಗೂ ಅಗ್ರೇಸರಳಾಗಿ ಶ್ರೀಮನ್ನಾರಾಯಣನಿಗೆ ಪ್ರೇಮಪಾತ್ರಳೂ, ಪ್ರಾಣಸಮಳೂ, ಪ್ರಿಯಂವದಳೂ ಆಗಿದ್ದಾಳೆ.

ಸರ್ವಸಸ್ಯಾತ್ಮಿಕಾ ಸರ್ವಜೀವನೋಪಾಯರೂಪಿಣೀ ।
ಮಹಾಲಕ್ಷ್ಮೀಶ್ಚ ವೈಕುಂಠೇ ಪತಿಸೇವಾಪರಾಯಣಾ ॥ ೨೫ ॥

ಸ್ವರ್ಗೇ ಚ ಸ್ವರ್ಗಲಕ್ಷ್ಮೀಶ್ಚ ರಾಜಲಕ್ಷ್ಮೀ ಚ ರಾಜಸು ।
ಗೃಹೇ ಚ ಗೃಹಲಕ್ಷ್ಮೀಶ್ಚ ಮರ್ತ್ಯಾನಾಂ ಗೃಹಿಣಾಂ ತಥಾ ॥ ೨೬ ॥

ಸರ್ವೇಷು ಪ್ರಾಣಿದ್ರವ್ಯೇಷು ಶೋಭಾ ರೂಪಾ ಮನೋಹರಾ ।
ಪ್ರೀತಿರೂಪಾ ಪುಣ್ಯವತಾಂ ಪ್ರಭಾರೂಪಾ ನೃಪೇಷು ಚ ॥ ೨೭ ॥

ವಾಣಿಜ್ಯರೂಪಾ ವಣಿಜಾಂ ಪಾಪಿನಾಂ ಕಲಹಂಕರೀ ।
ದಯಾಮಯೀ ಭಕ್ತಮಾತಾ ಭಕ್ತಾನುಗ್ರಹಕಾರಿಕಾ ॥ ೨೮ ॥

ಚಪಲೇ ಚಪಲಾ ಭಕ್ತಸಂಪದೋ ರಕ್ಷಣಾಯ ಚ ।
ಜಗಜ್ಜೀವನ್ಮೃತಂ ಸರ್ವಂ ಯಯಾ ದೇವ್ಯಾ ವಿನಾ ಮುನೇ ॥ ೨೯ ॥

೨೫–೨೬. ಸರ್ವಸಸ್ಯಸ್ವರೂಪಳೂ, ಸಮಸ್ತರ ಜೀವನೋಪಾಯರೂಪಿಣಿಯೂ, ಆದ ಆ ಮಹಾಲಕ್ಷ್ಮಿಯು ವೈಕುಂಠದಲ್ಲಿ ಪತಿಸೇವಾಪರಾಯಣಳಾಗಿದ್ದರೂ, ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿಯೆಂದೂ, ರಾಜರಿಗೆಲ್ಲಾ ರಾಜ್ಯಲಕ್ಷ್ಮಿಯೆಂದೂ, ಭೂಲೋಕದ ಗೃಹಸ್ಥರ ಮನೆಗಳಲ್ಲಿ ಗೃಹಲಕ್ಷ್ಮಿಯೆಂದೂ ಹೆಸರುವಾಸಿಯಾಗಿ ನೆಲೆಸಿದ್ದಾಳೆ.

೨೭–೨೮. ಮನೋಹರಳಾದ ಆ ಮಹಾಲಕ್ಷ್ಮಿಯು ಸಮಸ್ತ ಪ್ರಾಣಿ ಮತ್ತು ದ್ರವ್ಯಗಳಲ್ಲಿ ಶೋಭಾರೂಪಳಾಗಿಯೂ, ಪುಣ್ಯವಂತರಿಗೆ ಪ್ರೀತಿರೂಪಳಾಗಿಯೂ, ರಾಜರಿಗೆ ಪ್ರಭಾರೂಪಳಾಗಿಯೂ, ವರ್ತಕರಿಗೆ ವಾಣಿಜ್ಯರೂಪಳಾಗಿಯೂ, ಪಾಪಿಗಳಿಗೆ ಕಲಹಕಾರಿಣಿಯಾಗಿಯೂ, ಉಳಿದೆಲ್ಲರಿಗೂ ದಯಾಮಯಿಯೂ, ಭಕ್ತಮಾತೆಯೂ, ಭಕ್ತಾನುಗ್ರಹಕಾರಿಣಿಯೂ ಆಗಿದ್ದಾಳೆ.

೨೯. ಚಪಲರಿಗೆ ಚಪಲಳೂ, ಭಕ್ತರ ಸಂಪತ್ತನ್ನು ಸಂರಕ್ಷಿಸುವವಳೂ, ಆದ ಆ ಮಹಾಲಕ್ಷ್ಮಿಯಿಲ್ಲದಿದ್ದರೆ ಸಮಸ್ತ ಪ್ರಪಂಚವೂ, ಬದುಕಿದ್ದರೂ ಸತ್ತಂತೆಯೇ.

ಶಕ್ತಿರ್ದ್ವಿತೀಯಾ ಕಥಿತಾ ವೇದೋಕ್ತಾ ಸರ್ವಸಮ್ಮತಾ ।
ಸರ್ವಪೂಜ್ಯಾ ಸರ್ವವಂದ್ಯಾ ಚಾನ್ಯಾಂ ಮತ್ತೋ ನಿಶಾಮಯ ॥ ೩೦ ॥

ವಾಗ್ಬುದ್ಧಿವಿದ್ಯಾಜ್ಞಾನಾಧಿದೇವತಾ ಪರಮಾತ್ಮನಃ ।
ಸರ್ವವಿದ್ಯಾಸ್ವರೂಪಾ ಯಾ ಸಾ ಚ ದೇವೀ ಸರಸ್ವತೀ ॥ ೩೧ ॥

ಸುಬುದ್ಧಿಃ ಕವಿತಾ ಮೇಧಾ ಪ್ರತಿಭಾಸ್ಸ್ಮೃತಿದಾ ಸತಾಂ ।
ನಾನಾಪ್ರಕಾರಸಿದ್ಧಾಂತ ಭೇದಾರ್ಥಕಲ್ಪನಾಪ್ರದಾ ॥ ೩೨ ॥

ವ್ಯಾಖ್ಯಾ ಬೋಧಸ್ವರೂಪಾ ಚ ಸರ್ವಸಂದೇಹಭಂಜಿನೀ ।
ವಿಚಾರಕಾರಿಣೀ ಗ್ರಂಥಕಾರಿಣೀ ಶಕ್ತಿರೂಪಿಣೀ ॥ ೩೩ ॥

ಸರ್ವಸಂಗೀತಸಂಧಾನತಾಲಕಾರಣರೂಪಿಣೀ ।
ವಿಷಯಜ್ಞಾನವಾಗ್ರೂಪಾ ಪ್ರತಿವಿಶ್ವಂ ಚ ಜೀವಿನಾಂ ॥ ೩೪ ॥

---

೩೦. ವೇದೋಕ್ತಳೂ, ಸರ್ವಪೂಜ್ಯಳೂ, ಎರಡನೆಯ ಶಕ್ತಿರೂಪಿಣಿಯೂ ಆದ ಮಹಾಲಕ್ಷ್ಮಿಯ ವಿಚಾರವನ್ನು ವಿವರಿಸಿದುದಾಯಿತು. ಈಗ ಮೂರನೆಯ ಶಕ್ತಿದೇವಿಯನ್ನು ತಿಳಿಸುವೆನು, ಅವಧರಿಸು.

೩೧. ಪರಮಾತ್ಮನಿಂದ ಜನಿಸಿದ ವಾಕ್, ಬುದ್ಧಿ, ಜ್ಞಾನ ಮುಂತಾದುವಕ್ಕೆ ಅಧಿದೇವತೆಯೂ, ಸರ್ವವಿದ್ಯಾಸ್ವರೂಪಿಣಿಯೂ ಆದ ಸರಸ್ವತೀದೇವಿಯೇ ಮೂರನೆಯ ಶಕ್ತಿಸ್ವರೂಪಳು.

೩೨. ಸತ್ಪುರುಷರಿಗೆ ಸದ್ಬುದ್ಧಿಯನ್ನೂ, ಕವಿತಾಶಕ್ತಿಯನ್ನೂ, ಧಾರಣಾ ಶಕ್ತಿಯನ್ನೂ, ಪ್ರತಿಭಾ ಮತ್ತು ಸ್ಮರಣಶಕ್ತಿಯನ್ನೂ, ನಾನಾಪ್ರಕಾರವಾದ ಸಿದ್ಧಾಂತ ಗಳನ್ನು ಅರಿತು ಅರ್ಥಮಾಡುವ ಶಕ್ತಿಯನ್ನೂ ಆ ಸರಸ್ವತೀದೇವಿಯು ದಯ ಪಾಲಿಸುವಳು.

೩೩–೩೪. ಮನುಜರಿಗೆ ವ್ಯಾಖ್ಯಾನಶಕ್ತಿಯನ್ನು ಕೊಟ್ಟು ಎಲ್ಲ ಸಂದೇಹ ಗಳನ್ನೂ ಪರಿಹರಿಸಿ ವಿಚಾರಶಕ್ತಿಯನ್ನೂ, ಗ್ರಂಥರಚನಾಶಕ್ತಿಯನ್ನೂ ದಯ ಪಾಲಿಸುವಳು. ಸಮಸ್ತ ಸಂಗೀತಗಳನ್ನೂ, ಅವಕ್ಕೆ ಅನುಗುಣವಾದ ತಾಲಲಯ ಗಳನ್ನೂ, ವಿಷಯಜ್ಞಾನವನ್ನೂ ಆ ವಾಗ್ದೇವಿಯು ಜನರಿಗೆ ಬೋಧಿಸುವಳು.

ಯಯಾ ವಿನಾ ಚ ವಿಶ್ವೌಘೋ ಮೂಕೋ ಮೃತಸಮಃ ಸದಾ ।
ವ್ಯಾಖ್ಯಾ ಮುದ್ರಾಕರಾ ಶಾಂತಾ ವೀಣಾಪುಸ್ತಕಧಾರಿಣೀ ॥ ೩೫ ॥

ಶುದ್ಧಸತ್ವಸ್ವರೂಪಾ ಯಾ ಸುಶೀಲಾ ಶ್ರೀಹರಿಪ್ರಿಯಾ ।
ಹಿಮಚಂದನಕುಂದೇಂದುಕುಮುದಾಂಭೋಜಸನ್ನಿಭಾ ॥ ೩೬ ॥

ಜಪಂತೀ ಪರಮಾತ್ಮಾನಂ ಶ್ರೀಕೃಷ್ಣಂ ರತ್ನಮಾಲಯಾ ।
ತಪಸ್ಸ್ವರೂಪಾ ತಪಸಾಂ ಫಲದಾತ್ರೀ ತಪಸ್ವಿನೀ ॥ ೩೭ ॥

ಸಿದ್ಧಿವಿದ್ಯಾಸ್ವರೂಪಾ ಚ ಸರ್ವಸಿದ್ಧಿಪ್ರದಾ ಸದಾ ।
ದೇವೀ ತೃತೀಯಾ ಗದಿತಾ ಶ್ರೀಯುಕ್ತಾ ಜಗದಂಬಿಕಾ ॥ ೩೮ ॥

ಯಥಾಗಮಂ ಯಥಾ ಕಿಂಚಿದಪರಾಂ ಸಂನಿಬೋಧ ಮೇ ।
ಮಾತಾ ಚತುರ್ಣಾಂ ವೇದಾನಾಂ ವೇದಾಂಗಾನಾಂ ಚ ಛಂದಸಾಂ ॥ ೩೯ ॥

೩೫–೩೬. ವಾಗ್ದೇವಿಯೊಬ್ಬಳಿಲ್ಲದಿದ್ದರೆ ನಿಖಿಲವಿಶ್ವವೂ ಮೂಕವಾಗಿ ಮೃತಪ್ರಾಯವಾಗುತ್ತಿತ್ತು. ವ್ಯಾಖ್ಯಾಮುದ್ರಾಕರಳೂ, ಶಾಂತಳೂ, ವೀಣಾಪುಸ್ತಕಪಾಣಿಯೂ, ಶುದ್ಧಸತ್ವಸ್ವರೂಪಳೂ, ಸುಶೀಲಳೂ, ಶ್ರೀಹರಿಗೆ ಪ್ರಿಯಳೂ, ಹಿಮ, ಚಂದನ, ಗಂಧ, ಮೊಲ್ಲೆಹೂವು, ಚಂದ್ರ, ನೈದಿಲೆ, ತಾವರೆಗಳಂತೆ ಶುಭ್ರಳೂ ಆದ ಆ ಸರಸ್ವತಿಯ ಮಹಿಮೆಯನ್ನು ವರ್ಣಿಸಲಸದಳವು.

೩೭–೩೮. ಯಾವಾಗಲೂ ಕೈಯಲ್ಲಿ ರತ್ನಮಾಲೆಯೊಂದನ್ನು ಧರಿಸಿ ಶ್ರೀಕೃಷ್ಣಪರಮಾತ್ಮನ ದಿವ್ಯನಾಮವನ್ನು ಜಪಿಸುತ್ತಿರುವ ತಪಃಸ್ವರೂಪಳೂ, ತಪಸ್ವಿನಿಯೂ, ತಪಃಫಲದಾತೆಯೂ, ಸಿದ್ಧಿವಿದ್ಯಾಸ್ವರೂಪಳೂ, ಸರ್ವಸಿದ್ಧಿಪ್ರದಳೂ ಆದ ಪ್ರಕೃತಿಯ ಮೂರನೆಯ ಭೇದರೂಪಳಾದ ಜಗದಂಬಿಕೆಯ (ಸರಸ್ವತಿಯ) ಸ್ವರೂಪವನ್ನು ತಿಳಿಸಿದುದಾಯಿತು.

೩೯–೪೧ ಈಗ ಆಗಮಶಾಸ್ತ್ರಾನುಗುಣವಾಗಿ ನಾಲ್ಕನೇ ದೇವಿಯ ಲಕ್ಷಣವನ್ನು ವಿವರಿಸುವೆನು. ಚತುರ್ವೇದಗಳಿಗೂ, ವೇದಾಂಗಗಳಿಗೂ, ಗಾಯತ್ರ್ಯಾದಿ

ಸಂಧ್ಯಾವಂದನಮಂತ್ರಾಣಾಂ ತಂತ್ರಾಣಾಂ ಚ ವಿಚಕ್ಷಣಾ ।
ದ್ವಿಜಾತಿಜಾತಿರೂಪಾ ಚ ಜಪರೂಪಾ ತಪಸ್ವಿನೀ ॥ ೪೦ ॥

ಬ್ರಾಹ್ಮಣ್ಯತೇಜೋರೂಪಾ ಚ ಸರ್ವಸಂಸ್ಕಾರಕಾರಿಣೀ ।
ಪವಿತ್ರರೂಪಾ ಸಾವಿತ್ರೀ ಗಾಯತ್ರೀ ಬ್ರಹ್ಮಣಃ ಪ್ರಿಯಾ ॥ ೪೧ ॥

ತೀರ್ಥಾನಿ ಯಸ್ಯಾಃ ಸಂಸ್ಪರ್ಶಂ ದರ್ಶಂ ವಾಂಛಂತಿ ಶುದ್ಧಯೇ ।
ಶುದ್ಧಸ್ಫಟಿಕಸಂಕಾಶಾ ಶುದ್ಧಸತ್ವಸ್ವರೂಪಿಣೀ ॥ ೪೨ ॥

ಪರಮಾನಂದರೂಪಾ ಚ ಪರಮಾ ಚ ಸನಾತನೀ ।
ಪರಬ್ರಹ್ಮಸ್ವರೂಪಾ ಚ ನಿರ್ವಾಣಪದದಾಯಿನೀ ॥ ೪೩ ॥

ಬ್ರಹ್ಮತೇಜೋಮಯೀ ಶಕ್ತಿಸ್ತದಧಿಷ್ಠಾತೃದೇವತಾ ।
ಯತ್ಪಾದರಜಸಾ ಪೂತಂ ಜಗತ್ಸರ್ವಂ ಚ ನಾರದ ॥ ೪೪ ॥

ಛಂದಸ್ಸುಗಳಿಗೂ, ಮಾತೃಸ್ವರೂಪಳೂ, ಸಂಧ್ಯಾವಂದನೆಯ ಮಂತ್ರ ಮತ್ತು ತಂತ್ರಗಳ ಬೋಧನೆಯಲ್ಲಿ ಕುಶಲಳೂ, ದ್ವಿಜಾತಿರೂಪಳೂ, ಜಪಸ್ವರೂಪಳೂ, ತಪಸ್ವಿನಿಯೂ, ಬ್ರಹ್ಮವರ್ಚಸ್ವರೂಪಳೂ, ಸರ್ವಸಂಸ್ಕಾರಕಾರಿಣಿಯೂ, ಪವಿತ್ರಳೂ ಬ್ರಹ್ಮಪತ್ನಿಯೂ ಆದ ಗಾಯತ್ರಿಯೆಂಬ ಬೇರೊಂದು ಹೆಸರುಳ್ಳ ಸಾವಿತ್ರೀದೇವಿಯೇ ನಾಲ್ಕನೆಯವಳು.

೪೨-೪೩. ಶುದ್ಧಸ್ಫಟಿಕಮಣಿಯಂತೆ ಶುಭ್ರಳೂ, ಶುದ್ಧಸತ್ವಗುಣಸ್ವರೂಪಳೂ, ಪರಮಾನಂದಮಯಳೂ, ಪುರಾತನಳೂ, ಶ್ರೇಷ್ಠಳೂ, ಪರಬ್ರಹ್ಮಸ್ವರೂಪಳೂ, ಮುಕ್ತಿದಾಯಕಳೂ ಆದ ಸಾವಿತ್ರಿದೇವಿಯ ದರ್ಶನವನ್ನೂ ಮತ್ತು ಸ್ಪರ್ಶವನ್ನೂ ಪಡೆದು ಶುದ್ಧಿಗೊಳ್ಳಲು ಸಮಸ್ತ ಪುಣ್ಯತೀರ್ಥಗಳೂ ಬಯಸುವುವು.

೪೪. ಬ್ರಹ್ಮತೇಜೋಮಯಿಯೂ, ಬ್ರಹ್ಮಶಕ್ತಿಗೆ ಅಧಿಷ್ಠಾತೃದೇವತೆಯೂ ಆದ ಸಾವಿತ್ರಿದೇವಿಯ ಪಾದಧೂಳಿಯಿಂದ ನಿಖಿಲಪ್ರಪಂಚವೂ ಪಾವನವಾಗುವುದು.

ದೇವೀ ಚತುರ್ಥೀ ಕಥಿತಾ ಪಂಚಮೀಂ ವರ್ಣಯಾಮಿ ತೇ ।
ಪ್ರೇಮಪ್ರಾಣಾಧಿದೇವೀ ಯಾ ಪಂಚಪ್ರಾಣಸ್ವರೂಪಿಣೀ ॥ ೪೫ ॥

ಪ್ರಾಣಾಧಿಕಪ್ರಿಯತಮಾ ಸರ್ವಾದ್ಯಾ ಸುಂದರೀ ವರಾ ।
ಸರ್ವಸೌಭಾಗ್ಯಯುಕ್ತಾ ಚ ಮಾನಿನೀ ಗೌರವಾನ್ವಿತಾ ॥ ೪೬ ॥

ವಾಮಾರ್ಧಾಂಗಸ್ವರೂಪಾ ಚ ಗುಣೈಸ್ತೇಜಸಾ ಸಮಾ ।
ಪರಾ ವರಾ ಸರ್ವಮಾತಾ ಪರಮಾದ್ಯಾ ಸನಾತನೀ ॥ ೪೭ ॥

ಪರಮಾನಂದರೂಪಾ ಚ ಧನ್ಯಾ ಮಾನ್ಯಾ ಚ ಪೂಜಿತಾ ।
ರಾಸಕ್ರೀಡಾಧಿದೇವೀ ಚ ಕೃಷ್ಣಸ್ಯ ಪರಮಾತ್ಮನಃ ॥ ೪೮ ॥

ರಾಸಮಂಡಲಸಂಭೂತಾ ರಾಸಮಂಡಲಮಂಡಿತಾ ।
ರಾಸೇಶ್ವರೀ ಸುರಸಿಕಾ ರಾಸಾವಾಸನಿವಾಸಿನೀ ॥ ೪೯ ॥

೪೫-೪೬. ಇಂತು ನಾಲ್ಕನೆಯ ದೇವಿಯನ್ನು ವರ್ಣಿಸಿದಂದಾಯಿತು. ಮುಂದೆ ಐದನೆಯ ದೇವಿಯಾದ ರಾಧೆಯ ಸ್ವರೂಪವನ್ನು ವಿವರಿಸುವೆನು. ಆ ರಾಧಾದೇವಿಯು, ಪ್ರೇಮಸ್ವರೂಪನಾದ ಶ್ರೀಕೃಷ್ಣಪರಮಾತ್ಮನ ಪ್ರಾಣಾಧಿದೇವಿಯೂ, ಪಂಚಪ್ರಾಣ ಸ್ವರೂಪಳೂ, ಪ್ರಾಣಕ್ಕಿಂತಲೂ ಅಧಿಕ ಪ್ರಿಯತಮಳೂ, ಆದಿಶಕ್ತಿಸ್ವರೂಪಳೂ, ದಿವ್ಯಸುಂದರಿಯೂ, ಸರ್ವಸೌಭಾಗ್ಯಯುತಳೂ, ಪತಿವ್ರತಾಶಿರೋಮಣಿಯೂ, ಮಾನವತಿಯೂ, ಎಲ್ಲರಿಂದಲೂ ಗೌರವಿತಳೂ, ಆಗಿದ್ದಾಳೆ.

೪೭-೪೮. ಶ್ರೀಕೃಷ್ಣಪರಮಾತ್ಮನ ವಾಮಾರ್ಧಾಂಗಿಯೂ, ಸುಗುಣಾನ್ವಿತಳೂ, ಪರಮಾತ್ಮನ ತೇಜಃಸ್ವರೂಪಳೂ, ಜಗಜ್ಜನನಿಯೂ, ಪುರಾತನಳೂ, ಸರ್ವಶ್ರೇಷ್ಠಳೂ, ಪರಮಾನಂದಸ್ವರೂಪಳೂ, ಆದ ಆ ರಾಧಾದೇವಿಯು ಸರ್ವಪೂಜಿತಳೂ, ಪರಮಾತ್ಮನ ರಾಸಕ್ರೀಡಾಧಿದೇವತೆಯೂ ಆಗಿದ್ದಾಳೆ.

೪೯-೫೦. ರಾಸಮಂಡಲದಲ್ಲಿ ಸಂಭವಿಸಿದವಳೂ, ರಾಸಮಂಡಲಕ್ಕೆ ಅಲಂಕಾರಪ್ರಾಯಳೂ, ರಾಸೇಶ್ವರಿಯೂ, ರಸಿಕರಮಣಿಯೂ, ರಾಸಮಂಡಲದಲ್ಲಿ

ಗೋಲೋಕವಾಸಿನೀ ದೇವೀ ಗೋಪೀವೇಷವಿಧಾಯಿಕಾ ।
ಪರಮಾಹ್ಲಾದರೂಪಾ ಚ ಸಂತೋಷಾಮರ್ಷರೂಪಿಣೀ ॥ ೩೦ ॥

ನಿರ್ಗುಣಾ ಚ ನಿರಾಕಾರಾ ನಿರ್ಲಿಪ್ತಾತ್ಮಸ್ವರೂಪಿಣೀ ।
ನಿರೀಹಾ ನಿರಹಂಕಾರಾ ಭಕ್ತಾನುಗ್ರಹವಿಗ್ರಹಾ ॥ ೩೧ ॥

ವೇದಾನುಸಾರಧ್ಯಾನೇನ ವಿಜ್ಞೇಯಾ ಸಾ ವಿಚಕ್ಷಣೈಃ ।
ದೃಷ್ಟಿರ್ದೃಷ್ಟಾ ಸಹಸ್ರೇಷು ಸುರೇಂದ್ರೈರ್ಮುನಿಪುಂಗವೈಃ ॥ ೩೨ ॥

ವಹ್ನಿಶುದ್ಧಾಂಶುಕಾಧಾನಾ ರತ್ನಾಲಂಕಾರಭೂಷಿತಾ ।
ಕೋಟಿಚಂದ್ರಪ್ರಭಾಜುಷ್ಟಶ್ರೀಯುಕ್ತಾ ಭಕ್ತವಿಗ್ರಹಾ ॥ ೩೩ ॥

ಶ್ರೀಕೃಷ್ಣಭಕ್ತಿದಾಸ್ಯೈಕದಾಯಿನೀ ಸರ್ವಸಂಪದಾಂ ।
ಅವತಾರೇ ಚ ವಾರಾಹೇ ವೃಷಭಾನುಸುತಾ ಚ ಯಾ ॥ ೩೪ ॥

ವಾಸಿಸುವಳೂ, ಆದ ಆ ರಾಧಾದೇವಿಯು ಪರಮಾತ್ಮಸ್ವರೂಪವಾದ ಗೋಲೋಕದಲ್ಲಿ ಗೋಪೀವೇಷವನ್ನು ಧರಿಸಿಕೊಂಡು ಸರ್ವರಿಗೂ ಪರಮಾಹ್ಲಾದದಾಯಕಳಾಗಿದ್ದಾಳೆ.

೩೧–೩೨. ಭಕ್ತಾನುಗ್ರಹಕ್ಕಾಗಿ ದಿವ್ಯಸುಂದರಾಕಾರವನ್ನು ಧರಿಸಿರುವ ಆಕೆಯು ಪರಮಾತ್ಮಾಭಿನ್ನಳಾದುದರಿಂದ ನಿರ್ಗುಣಳೂ, ನಿರಾಕಾರಳೂ, ನಿರ್ಲಿಪ್ತಳೂ, ನಿರೀಹಳೂ, ನಿರಹಂಕಾರಳೂ ಆಗಿ ವೇದೋಕ್ತಕ್ರಮದಂತೆ ಧ್ಯಾನಿಸುವ ಕುಶಲಮತಿಗಳಾದ ಸಾವಿರಾರು ಮುನಿಶ್ರೇಷ್ಠರುಗಳಲ್ಲಿ ಕೆಲವರಿಗೆ ಪ್ರಸನ್ನಳಾಗಿ ಪ್ರತ್ಯಕ್ಷಳಾಗಿದ್ದಾಳೆ.

೩೩–೩೪. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ರತ್ನಾಲಂಕಾರಭೂಷಿತಳಾಗಿ, ಕೋಟಿಚಂದ್ರರ ಕಾಂತಿಯಿಂದ ಶೋಭಿಸುವ ಮುಖವುಳ್ಳವಳೂ, ಭಕ್ತವತ್ಸಲೆಯೂ ಆದ ಆ ರಾಧಾದೇವಿಯು ಸಕಲರಿಗೂ ಶ್ರೀಕೃಷ್ಣಪರಮಾತ್ಮನಲ್ಲಿ ಭಕ್ತಿಯನ್ನೂ, ಅವನ ದಾಸ್ಯವನ್ನೂ, ಸರ್ವಸಂಪತ್ತನ್ನೂ ಇತ್ತು ಪರಿಪಾಲಿಸುವಳು. ಶ್ರೀಕೃಷ್ಣಪರಮಾತ್ಮನು ವರಾಹತಾರಮಾಡಿದ್ದಾಗ ಈಕೆಯು ವೃಷಭಾನುವಿನ ಪುತ್ರಿಯಾಗಿ ಜನಿಸಿದ್ದಳು.

ಯತ್ಪಾದಪದ್ಮಸಂಸ್ಪರ್ಶಪವಿತ್ರಾ ಚ ವಸುಂಧರಾ ।
ಬ್ರಹ್ಮಾದಿಭಿರದೃಷ್ಟಾ ಯಾ ಸರ್ವದೃಷ್ಟಾ ಚ ಭಾರತೇ ॥ ೫೫ ॥

ಸ್ತ್ರೀರತ್ನಸಾರಸಂಭೂತಾ ಕೃಷ್ಣವಕ್ಷಃಸ್ಥಲಸ್ಥಿತಾ ।
ತಥಾ ಘನೇ ನವಘನೇ ಲೋಲಾ ಸೌದಾಮಿನೀ ಮುನೇ ॥ ೫೬ ॥

ಷಷ್ಟಿವರ್ಷಸಹಸ್ರಾಣಿ ಪ್ರತಪ್ತಂ ಬ್ರಹ್ಮಣಾ ಪುರಾ ।
ಯತ್ಪಾದಪದ್ಮನಖರದೃಷ್ಟಯೇ ಚಾತ್ಮಶುದ್ಧಯೇ ॥ ೫೭ ॥

ಸ್ವಪ್ನೇಽಪಿ ನೈವ ದೃಷ್ಟಃ ಸ್ಯಾತ್ಪ್ರತ್ಯಕ್ಷೇಽಪಿ ಚ ಕಾ ಕಥಾ ।
ತೇನೈವ ತಪಸಾ ದೃಷ್ಟಾ ಭೂರಿವೃಂದಾವನೇ ವನೇ ॥ ೫೮ ॥

೫೫-೫೬. ಯಾವ ದೇವಿಯ ಚರಣಾರವಿಂದಸ್ಪರ್ಶಮಾತ್ರದಿಂದ ಭೂಮಂಡಲವು ಪವಿತ್ರವಾಗುವುದೋ, ಯಾರನ್ನು ಬ್ರಹ್ಮಾದಿದೇವತೆಗಳೂ ಪ್ರತ್ಯಕ್ಷವಾಗಿ ನೋಡಲಸಾಧ್ಯವೋ, ಆ ರಾಧಾದೇವಿಯನ್ನು ಭಾರತದಲ್ಲಿರುವ ವಿಷ್ಣುಭಕ್ತರು ಮಾತ್ರ ನೋಡಬಲ್ಲರು. ಉತ್ತಮಸ್ತ್ರೀಯರಿಗೆಲ್ಲ ಸಾರಭೂತಳೂ, ಕೃಷ್ಣಪರಮಾತ್ಮನ ವಕ್ಷಃಸ್ಥಳದಲ್ಲಿ ನೆಲೆಸಿರುವಳೂ ಆದ ಆ ದೇವಿಯು ವರ್ಷರ್ತುವಿನ ನವಮೇಘದೊಳಗೆ ಚಂಚಲವಾಗಿರುವ ಮಿಂಚಿನಂತೆ ಹೊಳೆಯುವಳು.

೫೭. ಆ ರಾಧಾದೇವಿಯ ಪಾದಕಮಲಗಳ ಪವಿತ್ರರೇಕುಗಳನ್ನು ಸಂದರ್ಶಿಸಿ ಆತ್ಮಶುದ್ಧಿಯನ್ನು ಪಡೆಯಲು ಚತುರ್ಮುಖ ಬ್ರಹ್ಮನು ಪೂರ್ವದಲ್ಲಿ ಅರವತ್ತು ಸಾವಿರವರ್ಷಕಾಲ ತಪಸ್ಸುಮಾಡಿದನು.

೫೮. ಸ್ವಪ್ನದಲ್ಲಿಯೂ ಆ ದೇವಿಯನ್ನು ನೋಡಲಾಗದ ಬ್ರಹ್ಮನು ಪ್ರತ್ಯಕ್ಷವಾಗಿ ನೋಡುವುದೆಂತು? ಅದಕ್ಕಾಗಿ ವೃಂದಾವನದಲ್ಲಿಯೇ ಬಹಳಕಾಲ ತಪಸ್ಸುಮಾಡಿ ಕೊನೆಗೆ ಆಕೆಯ ದಿವ್ಯದರ್ಶನವನ್ನು ಪಡೆದನು.

ಕಥಿತಾ ಪಂಚಮೀ ದೇವೀ ಸಾ ರಾಧಾ ಪರಿಕೀರ್ತಿತಾ ।
ಅಂಶರೂಪಾ ಕಲಾರೂಪಾ ಕಲಾಂಶಾಂಶಸಮುದ್ಭವಾ ॥ ೫೯ ॥

ಪ್ರಕೃತೇಃ ಪ್ರತಿ ವಿಶ್ವಂ ಚ ರೂಪಂ ಸ್ಯಾತ್ಸರ್ವಯೋಷಿತಃ ।
ಪರಿಪೂರ್ಣತಮಾಃ ಪಂಚವಿಧಾದೇವ್ಯಃ ಪ್ರಕೀರ್ತಿತಾಃ ॥ ೬೦ ॥

ಯಾ ಯಾ ಪ್ರಧಾನಾಂಶರೂಪಾ ವರ್ಣಯಾಮಿ ನಿಶಾಮಯ ।
ಪ್ರಧಾನಾಂಶಸ್ವರೂಪಾ ಚ ಗಂಗಾ ಭುವನಪಾವನೀ ॥ ೬೧ ॥

ವಿಷ್ಣುಪಾದಾಬ್ಜಸಂಭೂತಾ ದ್ರವರೂಪಾ ಸನಾತನೀ ।
ಪಾಪಿಪಾಪೇಧ್ಮದಾಹಾಯ ಜ್ವಲದಿಂಧನರೂಪಿಣೀ ॥ ೬೨ ॥

ದರ್ಶನಸ್ಪರ್ಶನಸ್ನಾನಪಾನೈರ್ನಿರ್ವಾಣದಾಯಿನೀ ।
ಗೋಲೋಕಸ್ಥಾನಗಮನಸುಸೋಪಾನಸ್ವರೂಪಿಣೀ ॥ ೬೩ ॥

೫೯-೬೦. ಮೇಲೆ ಹೇಳಿದ ರಾಧಾದೇವಿಯು ಪ್ರಕೃತಿಯ ಐದನೆಯ ವಿಭಾಗಕ್ಕೆ ಸೇರಿದವಳು. ಇನ್ನೂ ಪ್ರತಿಲೋಕದಲ್ಲೂ ಪ್ರಕೃತಿಯ ಅಂಶರೂಪರೂ, ಕಲಾರೂಪರೂ, ಕಲಾಂಶಾಂಶರೂಪರೂ ಆದ ಸ್ತ್ರೀಯರು ನೆಲೆಸಿಯೇ ಇರುವರು. ಆದರೆ ಮೇಲೆ ವಿವರಿಸಿದ ಐದು ದೇವಿಯರು ಮಾತ್ರ ಪ್ರಕೃತಿಯ ಪರಿಪೂರ್ಣ ಸ್ವರೂಪಿಣಿಯರು.

೬೧. ಈಗ ಪ್ರಕೃತಿಯ ಪ್ರಧಾನಾಂಶದಿಂದ ಅವತರಿಸಿದ ದೇವಿಯರ ಚರಿತ್ರೆಯನ್ನು ವರ್ಣಿಸುವೆನು. ಅವರಲ್ಲಿ ಭುವನಪಾವನಿಯಾದ ಗಂಗೆಯೊಬ್ಬಳು ಪ್ರಧಾನಾಂಶಜಳು.

೬೨-೬೩. ಆ ಗಂಗೆಯು ವಿಷ್ಣುವಿನ ಪಾದಕಮಲದಿಂದ ಜನಿಸಿ, ಜಲರೂಪಿಣಿಯಾಗಿಯೂ, ಪಾಪಿಗಳ ಪಾಪವೆಂಬ ಕಟ್ಟಿಗೆಯನ್ನು (ಸೌದೆಯನ್ನು) ಸುಡಲು ಉರಿಯುತ್ತಿರುವ ಕೊಳ್ಳಿಯ ಸ್ವರೂಪಿಣಿಯಾಗಿಯೂ, ತನ್ನ ದರ್ಶನ, ಸ್ಪರ್ಶನ ಸ್ನಾನ ಮತ್ತು ಪಾನಮಾಡಿದವರಿಗೆ ಮೋಕ್ಷದಾಯಕಿಯಾಗಿಯೂ, ತೇಜೋಮಯವಾದ ಗೋಲೋಕಕ್ಕೆ ಹೋಗಲು ಸೋಪಾನಸ್ವರೂಪಿಣಿಯಾಗಿಯೂ ಇದ್ದಾಳೆ.

ಪವಿತ್ರರೂಪಾ ತೀರ್ಥಾನಾಂ ಸರಿತಾಂ ಚ ಪರಾ ವರಾ ।
ಶಂಭುಮೌಲಿಜಟಾಮೇರುಮುಕ್ತಾಪಂಕ್ತಿಸ್ವರೂಪಿಣೀ ॥ ೬೪ ॥

ತಪಸ್ಸಂಪಾದಿನೀ ಸದ್ಯೋ ಭಾರತೇ ಚ ತಪಸ್ವಿನಾಂ ।
ಶಂಖಪದ್ಮಕ್ಷೀರನಿಭಾ ಶುದ್ಧಸತ್ವಸ್ವರೂಪಿಣೀ ॥ ೬೫ ॥

ನಿರ್ಮಲಾ ನಿರಹಂಕಾರಾ ಸಾಧ್ವೀ ನಾರಾಯಣಪ್ರಿಯಾ ।
ಪ್ರಧಾನಾಂಶಸ್ವರೂಪಾ ಚ ತುಲಸೀ ವಿಷ್ಣುಕಾಮಿನೀ ॥ ೬೬ ॥

ವಿಷ್ಣುಭೂಷಣರೂಪಾ ಚ ವಿಷ್ಣುಪಾದಸ್ಥಿತಾ ಸತೀ ।
ತಪಸ್ಸಂಕಲ್ಪಪೂಜಾದಿ ಸದ್ಯಸ್ಸಂಪಾದಿನೀ ಮುನೇ ॥ ೬೭ ॥

ಸಾರಭೂತಾ ಚ ಪುಷ್ಪಾಣಾಂ ಪವಿತ್ರಾ ಪುಣ್ಯದಾ ಸದಾ ।
ದರ್ಶನಸ್ಪರ್ಶನಾಭ್ಯಾಂ ಚ ಸದ್ಯೋ ನಿರ್ವಾಣದಾಯಿನೀ ॥ ೬೮ ॥

೬೪–೬೫. ಪುಣ್ಯತೀರ್ಥಗಳಿಗೆಲ್ಲ ಪವಿತ್ರಳೂ, ನದಿಗಳಲ್ಲೆಲ್ಲಾ ಶ್ರೇಷ್ಠಳೂ, ಪರಮೇಶ್ವರನ ತಲೆಯಲ್ಲಿರುವ ಜಟೆಯೆಂಬ ಮೇರುಪರ್ವತದ ಮುತ್ತಿನ ಸಾಲಿನಂತಿರುವವಳೂ ಆದ ಆ ಗಂಗೆಯು ಭರತಖಂಡದಲ್ಲಿ ತಪವೆಸಗುವ ತಪಸ್ವಿಗಳಿಗೆ ತಪಃಸಿದ್ಧಿಯನ್ನು ತ್ವರಿತವಾಗಿ ಸಂಪಾದಿಸಿಕೊಡುವವಳೂ, ಶಂಖ, ಪದ್ಮ, ಕ್ಷೀರ(ಹಾಲು)ಗಳಂತೆ ಶುಭ್ರಳೂ, ಶುದ್ಧಸತ್ವಗುಣಸಂಪನ್ನಳೂ ಆಗಿದ್ದಾಳೆ.

೬೬. ಪರಿಶುದ್ಧಸ್ವರೂಪಳೂ, ನಿರಹಂಕಾರಳೂ, ಪತಿವ್ರತಾಶಿರೋಮಣಿಯೂ, ನಾರಾಯಣನಿಗೆ ಪ್ರಿಯಳೂ ಆದ ತುಲಸೀದೇವಿಯೂ ಪ್ರಕೃತಿಯ ಪ್ರಧಾನಾಂಶದಿಂದ ಸಂಭವಿಸಿದವಳು.

೬೭–೬೮. ಯಾವಾಗಲೂ, ವಿಷ್ಣುವಿನ ಪಾದಪದ್ಮದಲ್ಲಿ ನೆಲೆಸಿಕೊಂಡು ಅವನಿಗೆ ಅಲಂಕಾರಪ್ರಾಯಳಾಗಿ, ಸಕಲರಿಗೂ ತಪಃಸಿದ್ಧಿ, ಸಂಕಲ್ಪಸಿದ್ಧಿ, ಪೂಜಾಸಿದ್ಧಿಗಳನ್ನು ಕೊಡಬಲ್ಲವಳಾದ ಆ ತುಳಸೀದೇವಿಯು ಪತ್ರ ಪುಷ್ಪಗಳಿಗೆಲ್ಲಾ ಶ್ರೇಷ್ಠಳೆನಿಸಿಕೊಂಡು ಪವಿತ್ರಳೂ, ಪುಣ್ಯಕರಳೂ ಆಗಿ ತನ್ನ ದರ್ಶನವನ್ನೂ, ಸ್ಪರ್ಶವನ್ನೂ ಮಾಡಿದವರಿಗೆ ಮೋಕ್ಷದಾಯಕಳಾಗಿದ್ದಾಳೆ.

ಕಲೌ ಕಲುಷಶುಷ್ಕೇಧ್ಮದಹನಾಯಾಗ್ನಿರೂಪಿಣೀ ।
ಯತ್ಪಾದಪದ್ಮಸಂಸ್ಪರ್ಶಾತ್ಸದ್ಯಃ ಪೂತಾ ವಸುಂಧರಾ ॥ ೬೯ ॥

ಯತ್ಸ್ಪರ್ಶದರ್ಶಂ ವಾಂಛಂತಿ ತೀರ್ಥಾನಾಮಾತ್ಮಶುದ್ಧಯೇ ।
ಯಯಾ ವಿನಾ ಚ ವಿಶ್ವೇಷು ಸರ್ವಂ ಕರ್ಮಾಸ್ತಿ ನಿಷ್ಫಲಂ ॥ ೭೦ ॥

ಮೋಕ್ಷದಾ ಯಾ ಮುಮುಕ್ಷೂಣಾಂ ಕಾಮಿನಾಂ ಸರ್ವಕಾಮದಾ ।
ಕಲ್ಪವೃಕ್ಷಸ್ವರೂಪಾ ಚ ಭಾರತೇ ವೃಕ್ಷರೂಪಿಣೀ ॥ ೭೧ ॥

ತ್ರಾಣಾಯ ಭಾರತಾನಾಂ ಚ ಪ್ರಜಾನಾಂ ಪರದೇವತಾ ।
ಪ್ರಧಾನಾಂಶಸ್ವರೂಪಾ ಚ ಮನಸಾ ಕಶ್ಯಪಾತ್ಮಜಾ ॥ ೭೨ ॥

ಶಂಕರಪ್ರಿಯಶಿಷ್ಯಾ ಚ ಮಹಾಜ್ಞಾನವಿಶಾರದಾ ।
ನಾಗೇಶ್ವರಸ್ಯಾನಂತಸ್ಯ ಭಗಿನೀ ನಾಗಪೂಜಿತಾ ॥ ೭೩ ॥

---

೬೯. ಕಲಿಯುಗದಲ್ಲಿ ಪಾಪವೆಂಬ ಒಣಗಿದ ಕಾಷ್ಠವನ್ನು ದಹಿಸಲು ಅಗ್ನಿಯಂತಿರುವ ಆ ತುಲಸೀದೇವಿಯ ಪಾದಕಮಲ ಸಂಸರ್ಗದಿಂದ ಕ್ಷಣಮಾತ್ರದಲ್ಲಿ ಭೂಮಿಯು ಪವಿತ್ರವಾಗುವುದು.

೭೦-೭೧. ಯಾವ ದೇವಿಯ ದರ್ಶನಸ್ಪರ್ಶನಗಳನ್ನು ಪಡೆದು, ಪುಣ್ಯತೀರ್ಥಗಳು ಪವಿತ್ರವಾಗುವುವೋ, ಯಾವ ದೇವಿಯನ್ನು ಬಿಟ್ಟು ಮಾಡಿದ ಸಕಲ ಪುಣ್ಯಕರ್ಮಗಳೂ ನಿಷ್ಫಲವಾಗುವುವೋ, ಮೋಕ್ಷಕಾಮಿಗಳಿಗೆ ಮೋಕ್ಷದಾಯಕಳೂ, ವಿಷಯಕಾಮಿಗಳಿಗೆ ವಿಷಯಸುಖದಾಯಕಳೂ ಆದ ಆ ತುಳಸೀದೇವಿಯು ಭರತ ಖಂಡದ ಕಲ್ಪವೃಕ್ಷದಂತಿದ್ದಾಳೆ.

೭೨. ಕಶ್ಯಪಪ್ರಜಾಪತಿಯ ಪುತ್ರಿಯಾದ ಮನಸಾದೇವಿಯು, ಭಾರತೀಯರನ್ನುದ್ಧರಿಸಲು, ಪ್ರಕೃತಿಯ ಪ್ರಧಾನಾಂಶದಿಂದ ಅವತರಿಸಿದವಳೂ, ಪೂಜ್ಯಳಾದ ಪರದೇವತೆಯೂ ಆಗಿದ್ದಾಳೆ.

೭೩-೭೪. ಶಂಕರನ ಪ್ರಿಯಶಿಷ್ಯಳೂ, ಮಹಾಜ್ಞಾನವಿಶಾರದಳೂ, ಆದ ಆ ಮನಸಾದೇವಿಯು, ಸರ್ಪರಾಜನಾದ ಆದಿಶೇಷನ ಸಹೋದರಿಯೂ, ನಾಗರಿಂದ

ನಾಗೇಶ್ವರೀ ನಾಗಮಾತಾ ಸುಂದರೀ ನಾಗವಾಹಿನೀ ।
ನಾಗೇಂದ್ರಗಣಯುಕ್ತಾ ಸಾ ನಾಗಭೂಷಣಭೂಷಿತಾ ॥ ೭೪ ॥

ನಾಗೇಂದ್ರವಂದಿತಾ ಸಿದ್ಧಯೋಗಿನೀ ನಾಗವಾಸಿನೀ ।
ವಿಷ್ಣುಭಕ್ತಾ ವಿಷ್ಣುರೂಪಾ ವಿಷ್ಣುಪೂಜಾಪರಾಯಣಾ ॥ ೭೫ ॥

ತಪಃಸ್ವರೂಪಾ ತಪಸಾಂ ಫಲದಾತ್ರೀ ತಪಸ್ವಿನೀ ।
ದಿವ್ಯಂ ತ್ರಿಲಕ್ಷವರ್ಷಂ ಚ ತಪಸ್ತಪ್ತಂ ಯಯಾ ಹರೇಃ ॥ ೭೬ ॥

ತಪಸ್ವಿನೀಷು ಪೂಜ್ಯಾ ಚ ತಪಸ್ವಿಷು ಚ ಭಾರತೇ ।
ಸರ್ವಮಂತ್ರಾಧಿದೇವೀ ಚ ಜ್ವಲಂತೀ ಬ್ರಹ್ಮತೇಜಸಾ ॥ ೭೭ ॥

ಬ್ರಹ್ಮಸ್ವರೂಪಾ ಪರಮಾ ಬ್ರಹ್ಮಭಾವನತತ್ಪರಾ ।
ಜರತ್ಕಾರುಮುನೇಃ ಪತ್ನೀ ಕೃಷ್ಣಶಂಭು ಪತಿವ್ರತಾ ॥ ೭೮ ॥

ಪೂಜಿತಳೂ, ನಾಗಶ್ರೇಷ್ಠಳೂ, ನಾಗಮಾತೆಯೂ, ನಾಗವಾಹಿನಿಯೂ, ಸರ್ಪರಾಜನಂತೆ ದಿವ್ಯಗುಣಯುತೆಯೂ, ನಾಗಾಭರಣಾಲಂಕೃತಳೂ, ನಾಗಶ್ರೇಷ್ಠರಿಂದ ವಂದಿತಳೂ, ನಾಗಶಯನಳೂ ಆಗಿ ಸಿದ್ಧಯೋಗಿನಿ ಎನಿಸಿಕೊಂಡಿದ್ದಾಳೆ.

೭೫–೭೮. ವಿಷ್ಣುಭಕ್ತಳೂ, ವಿಷ್ಣುಸ್ವರೂಪಳೂ, ವಿಷ್ಣುಪೂಜಾಪರಾಯಣಳೂ, ಆದ ಆ ಮನಸಾದೇವಿಯು ಮೂರು ದಿವ್ಯಲಕ್ಷವರ್ಷಕಾಲ ಹರಿಯನ್ನು ಕುರಿತು ತಪಸ್ಸು ಮಾಡಿ ತಪಸ್ವಿನಿಯೂ, ತಪಃಸ್ವರೂಪಳೂ, ತಪಃ ಫಲವನ್ನು ಕೊಡುವವಳೂ ಆಗಿದ್ದಾಳೆ. ಭಾರತದಲ್ಲಿರುವ ತಪಸ್ವಿ ಮತ್ತು ತಪಸ್ವಿನಿಯರಿಗೆ ಪೂಜ್ಯಳಾದ ಆಕೆಯು ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತ ಬ್ರಹ್ಮಸ್ವರೂಪಳೂ, ಬ್ರಹ್ಮಧ್ಯಾನಾಸಕ್ತಳೂ ಆಗಿದ್ದಾಳೆ. ಜರತ್ಕಾರುಮುನಿಯ ಪತ್ನಿಯೂ, ಪತಿವ್ರತೆಯೂ, ತಪಸ್ವಿಶ್ರೇಷ್ಠನಾದ ಆಸ್ತೀಕ ಮುನಿಯ ಮಾತೆಯೂ, ಶ್ರೀಕೃಷ್ಣಪರಮಾತ್ಮನಲ್ಲೂ ಶಂಭುವಿನಲ್ಲೂ ಅಚಲವಾದ ಭಕ್ತಿಯನ್ನಿಟ್ಟಿರುವವಳೂ, ಆದ ಆಕೆಯನ್ನೇ ಸರ್ಪಮಂತ್ರಾಧಿದೇವತೆಯಾದ ಜರತ್ಕಾರುವೆನ್ನುವರು.

ಆಸ್ತೀಕಸ್ಯ ಮುನೇರ್ಮಾತಾ ಪ್ರವರಸ್ಯ ತಪಸ್ವಿನಾಂ।
ಪ್ರಧಾನಾಂಶಸ್ವರೂಪಾ ಯಾ ದೇವಸೇನಾ ಚ ನಾರದ ॥ ೭೯ ॥

ಮಾತೃಕಾ ಸಾ ಪೂಜ್ಯತಮಾ ಸಾ ಚ ಷಷ್ಠೀ ಪ್ರಕೀರ್ತಿತಾ।
ಶಿಶೂನಾಂ ಪ್ರತಿ ವಿಶ್ವಂ ತು ಪ್ರತಿಪಾಲನಕಾರಿಣೀ ॥ ೮೦ ॥

ತಪಸ್ವಿನೀ ವಿಷ್ಣುಭಕ್ತಾ ಕಾರ್ತಿಕೇಯಸ್ಯ ಕಾಮಿನೀ।
ಷಷ್ಠ್ಯಾಂಶರೂಪಾ ಪ್ರಕೃತೇಸ್ತೇನ ಷಷ್ಠೀ ಪ್ರಕೀರ್ತಿತಾ ॥ ೮೧ ॥

ಪುತ್ರಪೌತ್ರಪ್ರದಾತ್ರೀ ಚ ಧಾತ್ರೀ ಚ ಜಗತಾಂ ಸದಾ।
ಸುಂದರೀ ಯುವತೀ ರಮ್ಯಾ ಸತತಂ ಭರ್ತುರಂತಿಕೇ ॥ ೮೨ ॥

ಸ್ಥಾನೇ ಶಿಶೂನಾಂ ಪರಮಾ ವೃದ್ಧರೂಪಾ ಚ ಯೋಗಿನೀ।
ಪೂಜಾ ದ್ವಾದಶಮಾಸೇಷು ಯಸ್ಯಾಃ ಷಷ್ಠ್ಯಾಃ ಸ್ತು ಸಂತತಂ ॥ ೮೩ ॥

ಪೂಜಾ ಚ ಸೂತಿಕಾಗಾರೇ ಪರಷಷ್ಠದಿನೇ ಶಿಶೋಃ।
ಏಕವಿಂಶತಿಮೇ ಚೈವ ಪೂಜಾ ಕಲ್ಯಾಣಹೇತುಕೀ ॥ ೮೪ ॥

೭೯-೮೧. ಪ್ರಕೃತಿಯ ಪ್ರಧಾನಾಂಶಸ್ವರೂಪಳೂ, ಸಪ್ತಮಾತೃಕೆಯರಲ್ಲಿ ಪೂಜ್ಯತಮಳೂ, ಷಣ್ಮುಖನ ಪತ್ನಿಯೂ, ಆದ ದೇವಸೇನೆಯನ್ನೇ ಷಷ್ಠೀದೇವಿ ಎಂದು ಕರೆಯುವುದುಂಟು. ಪ್ರಪಂಚದಲ್ಲಿರುವ ಸಮಸ್ತಶಿಶುಗಳನ್ನೂ ಸಂರಕ್ಷಿಸುವವಳೂ, ವಿಷ್ಣುಭಕ್ತಳೂ, ತಪಸ್ವಿನಿಯೂ ಆದ ಆಕೆಯು ಪ್ರಕೃತಿಯ ಆರನೆಯ ಒಂದಂಶದಿಂದ ಅವತರಿಸಿ ಷಷ್ಠೀದೇವಿ ಎನಿಸಿಕೊಂಡಳು.

೮೨-೮೪. ಸಕಲ ಜಗತ್ಸ್ರಷ್ಟಳೂ, ಸಕಲರಿಗೂ ಪುತ್ರಪೌತ್ರಪ್ರದಳೂ, ಆದ ಆ ದೇವಸೇನೆಯು ತನ್ನ ಪತಿಗೆ ಅನುಗುಣಳಾದ ಯುವತಿ ಮತ್ತು ಸುಂದರಿಯಾಗಿದ್ದರೂ, ಶಿಶುಗಳಿಗೆಲ್ಲ ವೃದ್ಧಯೋಗಿನಿಯ ಸ್ವರೂಪಳಾಗಿದ್ದಾಳೆ. ಯಾವ ಷಷ್ಠೀದೇವಿಗೆ (ದೇವಸೇನೆಗೆ) ವರ್ಷಪೂರ್ತಿಯಾಗಿ ಅಥವಾ ಸೂತಿಕಾಗೃಹದಲ್ಲಿ (ಹೆರಿಗೆಯ ಮನೆಯಲ್ಲಿ) ಮಗುವಿಗೆ ಆರನೆಯ ದಿವಸದಲ್ಲೂ ಮತ್ತು ಇಪ್ಪತ್ತೊಂದನೆಯ ದಿವಸದಲ್ಲೂ ಪೂಜೆಮಾಡುವುದರಿಂದ ಮಂಗಳವುಂಟಾಗುವುದು.

ಶಶ್ವನ್ನಿಯಮಿತಾ ಚೈಷಾ ನಿತ್ಯಾ ಕಾಮ್ಯಾಪ್ಯತಃ ಪರಾ ।
ಮಾತೃರೂಪಾ ದಯಾರೂಪಾ ಶಶ್ವದ್ರಕ್ಷಣಕಾರಿಣೀ ॥ ೮೫ ॥

ಜಲೇ ಸ್ಥಲೇ ಚಾಂತರಿಕ್ಷೇ ಶಿಶೂನಾಂ ಸ್ವಪ್ನಗೋಚರಾ ।
ಪ್ರಧಾನಾಂಶಸ್ವರೂಪಾ ಯಾ ದೇವೀ ಮಂಗಲಚಂಡಿಕಾ ॥ ೮೬ ॥

ಪ್ರಕೃತೇರ್ಮುಖಸಂಭೂತಾ ಸರ್ವಮಂಗಲದಾ ಸದಾ ।
ಸೃಷ್ಟೌ ಮಂಗಲರೂಪಾ ಚ ಸಂಹಾರೇ ಕೋಪರೂಪಿಣೀ ॥ ೮೭ ॥

ತೇನ ಮಂಗಲಚಂಡೀ ಸಾ ಪಂಡಿತೈಃ ಪರಿಕೀರ್ತಿತಾ ।
ಪ್ರತಿಮಂಗಲವಾರೇಷು ಪ್ರತಿವಿಶ್ವೇಷು ಪೂಜಿತಾ ॥ ೮೮ ॥

ಪಂಚೋಪಚಾರೈರ್ಭಕ್ತ್ಯಾ ಚ ಯೋಷಿದ್ಭಿಃ ಪರಿಪೂಜಿತಾ ।
ಪುತ್ರಪೌತ್ರಧನೈಶ್ವರ್ಯಯಶೋಮಂಗಲದಾಯಿನೀ ॥ ೮೯ ॥

---

೮೫. ಸಕಲರಿಗೂ ಮಾತೃಸ್ವರೂಪಳೂ, ದಯಾಮಯಿಯೂ ಆದ ಷಷ್ಠೀ ದೇವಿಯು ಮಕ್ಕಳಿಗೆ ನೀರಿನಲ್ಲೂ, ನೆಲದಲ್ಲೂ, ಆಕಾಶದಲ್ಲೂ ಮತ್ತು ಸ್ವಪ್ನದಲ್ಲೂ ಗೋಚರಿಸಿ, ಅವುಗಳ ರಕ್ಷಣೆಯಲ್ಲಿ ತತ್ಪರಳಾಗಿರುವುದರಿಂದ ಸದಾ ನಿಯಮಿತಳಾದರೂ, ಸಕಲರಿಂದ ನಿತ್ಯಕಾಮ್ಯಳಾಗಿದ್ದಾಳೆ.

೮೬-೮೮. ಮಂಗಳಚಂಡಿಕಾದೇವಿಯೂ ಕೂಡ ಪ್ರಕೃತಿಯ ಪ್ರಧಾನಾಂಶ ಸ್ವರೂಪಳೂ, ಪ್ರಕೃತಿಯ ಮುಖದಿಂದ ಸಂಭವಿಸಿದವಳೂ, ಯಾವಾಗಲೂ ಸರ್ವಮಂಗಲಪ್ರದಳೂ ಆಗಿದ್ದಾಳೆ. ಸೃಷ್ಟಿಯಲ್ಲಿ ಮಂಗಳಸ್ವರೂಪಳೂ, ಸಂಹಾರ ಕಾಲದಲ್ಲಿ ಕೋಪಸ್ವರೂಪಳೂ, ಆದ್ದರಿಂದ ಪಂಡಿತರಿಂದ ಮಂಗಳಚಂಡಿಕಾ ಎಂದು ಕರೆಯಲ್ಪಟ್ಟ ಆಕೆಯು ವಿಶ್ವದಲ್ಲೆಲ್ಲಾ ಪ್ರತಿಮಂಗಳವಾರವೂ ಪೂಜೆಹೊಂದುವಳು.

೮೯-೯೦. ಭಕ್ತಿಯುತವಾಗಿ ಪಂಚೋಪಚಾರ (ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ) ಗಳಿಂದ ಪೂಜಿಸುವ ಸ್ತ್ರೀಯರಿಗೆ ಪುತ್ರಪೌತ್ರರನ್ನೂ, ಧನಕನಕಾದ್ಯೈಶ್ವರ್ಯವನ್ನೂ, ಕೀರ್ತಿಮಂಗಳವನ್ನೂ ಕೊಟ್ಟು, ಶೋಕಸಂತಾಪಗಳನ್ನೂ,

ಶೋಕಸಂತಾಪಪಾಪಾರ್ತಿದುಃಖದಾರಿದ್ರ್ಯನಾಶಿನೀ ।
ಪರಿತುಷ್ಟಾ ಸರ್ವವಾಂಛಾಪ್ರದಾತ್ರೀ ಸರ್ವಯೋಷಿತಾಂ ॥ ೯೦ ॥

ರುಷ್ಟಾ ಕ್ಷಣೇನ ಸಂಹರ್ತುಂ ಶಕ್ತಾ ವಿಶ್ವಂ ಮಹೇಶ್ವರೀ ।
ಪ್ರಧಾನಾಂಶಸ್ವರೂಪಾ ಚ ಕಾಲೀ ಕಮಲಲೋಚನಾ ॥ ೯೧ ॥

ದುರ್ಗಾಲಲಾಟಸಂಭೂತಾ ರಣೇ ಶುಂಭನಿಶುಂಭಯೋಃ ।
ದುರ್ಗಾರ್ಧಾಂಶಸ್ವರೂಪಾ ಸ್ಯಾದ್ಗುಣೈಸ್ಸಾ ತೇಜಸಾ ಸಮಾ ॥ ೯೨ ॥

ಕೋಟಿಸೂರ್ಯಪ್ರಭಾಜುಷ್ಟದಿವ್ಯಸುಂದರವಿಗ್ರಹಾ ।
ಪ್ರಧಾನಾ ಸರ್ವಶಕ್ತೀನಾಂ ವರಾ ಬಲವತೀ ಪರಾ ॥ ೯೩ ॥

ಸರ್ವಸಿದ್ಧಿಪ್ರದಾ ದೇವೀ ಪರಮಾ ಸಿದ್ಧಯೋಗಿನೀ ।
ಕೃಷ್ಣಭಕ್ತಾ ಕೃಷ್ಣತುಲ್ಯಾ ತೇಜಸಾ ವಿಕ್ರಮೈರ್ಗುಣೈಃ ॥
ಕೃಷ್ಣಭಾವನಯಾ ಶಶ್ವತ್ಕೃಷ್ಣವರ್ಣಾ ಸನಾತನೀ ॥ ೯೪ ॥

ಪಾಪಪೀಡೆಗಳನ್ನೂ, ದುಃಖದಾರಿದ್ರ್ಯಗಳನ್ನೂ ನಾಶಗೊಳಿಸುವ ಆ ಮಂಗಳ ಚಂಡಿಕೆಯು ತೃಪ್ತಳಾದರೆ ಸಮಸ್ತ ಸ್ತ್ರೀಯರಿಗೂ ಸರ್ವಾಭೀಷ್ಟಫಲಗಳನ್ನೂ ಕೊಡುವಳು. ಹಾಗಲ್ಲದೆ ಕುಪಿತಳಾದರೆ ವಿಶ್ವವೆಲ್ಲವನ್ನೂ ಕ್ಷಣಕಾಲದಲ್ಲಿ ಸಂಹರಿಸಲು ಶಕ್ತಳಾಗುವಳು.

೯೧–೯೩. ಕಮಲಲೋಚನೆಯಾದ ಕಾಳಿಕಾದೇವಿಯು ದುರ್ಗಾದೇವಿಯ ಲಲಾಟದಿಂದ ಪ್ರಕೃತಿಯ ಪ್ರಧಾನಾಂಶಸ್ವರೂಪಳಾಗಿ ಅವತರಿಸಿ, ಯುದ್ಧದಲ್ಲಿ ಶುಂಭನಿಶುಂಭರನ್ನು ಸಂಹರಿಸಿ. ಸದ್ಗುಣಗಳಿಂದಲೂ, ತೇಜಸ್ಸಿನಿಂದಲೂ, ದುರ್ಗಾದೇವಿಯ ಅರ್ಧಾಂಶಸ್ವರೂಪಳಾಗಿ, ಕೋಟಿಸೂರ್ಯರ ಕಾಂತಿಯಿಂದ ಬೆಳಗುವ ದಿವ್ಯಸುಂದರ ವಿಗ್ರಹವನ್ನು ಧರಿಸಿ, ಶಕ್ತಿದೇವತೆಯರಿಗೆಲ್ಲಾ ಪ್ರಧಾನಳೂ, ಬಲಿಷ್ಠಳೂ ಮತ್ತು ಶ್ರೇಷ್ಠಳೂ ಆಗಿದ್ದಾಳೆ.

೯೪. ಸಕಲೇಷ್ಟಾರ್ಥಸಿದ್ಧಿದಾಯಕಳೂ, ಸಿದ್ಧಯೋಗಿನಿಯೂ, ಆದ ಆ ಕಾಳೀದೇವಿಯು ಕೃಷ್ಣಭಕ್ತಳೂ, ತೇಜಸ್ಸು ಪರಾಕ್ರಮ ಮತ್ತು ಗುಣಗಳಿಂದ ಕೃಷ್ಣಸಮಳೂ, ಯಾವಾಗಲೂ ಕೃಷ್ಣನನ್ನೇ ಧ್ಯಾನಿಸುವುದರಿಂದ ಕೃಷ್ಣವರ್ಣಳೂ ಆಗಿದ್ದಾಳೆ.

ಬ್ರಹ್ಮಾಂಡಂ ಸಕಲಂ ಹರ್ತುಂ ಶಕ್ತಾ ನಿಶ್ವಾಸಮಾತ್ರತಃ ।
ರಣಂ ದೈತ್ಯೈಃ ಸಮಂ ತಸ್ಯಾಃ ಕ್ರೀಡಯಾ ಲೋಕರಕ್ಷಯಾ ॥ ೯೫ ॥

ಧರ್ಮಾರ್ಥಕಾಮಮೋಕ್ಷಾಂಶ್ಚ ದಾತುಂ ಶಕ್ತಾ ಸುಪೂಜಿತಾ ।
ಬ್ರಹ್ಮಾದಿಭಿಃ ಸ್ತೂಯಮಾನಾ ಮನುಭಿರ್ಮುನಿಭಿರ್ನರೈಃ ॥ ೯೬ ॥

ಪ್ರಧಾನಾಂಶಸ್ವರೂಪಾ ಚ ಪ್ರಕೃತಿಶ್ಚ ವಸುಂಧರಾ ।
ಆಧಾರಭೂತಾ ಸರ್ವೇಷಾಂ ಸರ್ವಸಸ್ಯಪ್ರಸೂತಿಕಾ ॥ ೯೭ ॥

ರತ್ನಾಕಾರಾ ರತ್ನಗರ್ಭಾ ಸರ್ವರತ್ನಾಕರಾಶ್ರಯಾ ।
ಪ್ರಜಾದಿಭಿಃ ಪ್ರಜೇಶೈಶ್ಚ ಪೂಜಿತಾ ವಂದಿತಾ ಸದಾ ॥ ೯೮ ॥

ಸರ್ವೋಪಜೀವ್ಯರೂಪಾ ಚ ಸರ್ವಸಂಪದ್ವಿಧಾಯಿನೀ ।
ಯಯಾ ವಿನಾ ಜಗತ್ಸರ್ವಂ ನಿರಾಧಾರಂ ಚರಾಚರಂ ॥ ೯೯ ॥

೯೫–೯೬. ತನ್ನ ನಿಃಶ್ವಾಸಮಾತ್ರದಿಂದ ಸಕಲ ಬ್ರಹ್ಮಾಂಡವನ್ನೂ ಸಂಹರಿಸಲು ಶಕ್ತಳಾದ ಆಕೆಗೆ ಲೋಕರಕ್ಷಣೆಗಾಗಿ ರಾಕ್ಷಸರೊಡನೆ ಹೋರಾಡುವುದೊಂದು ಲೀಲೆಯಾಗಿದೆ. ಭಕ್ತಿಯಿಂದ ಪೂಜಿಸಿದವರಿಗೆ ಪುರುಷಾರ್ಥ ಚತುಷ್ಟಯಗಳನ್ನು ಕೊಡಬಲ್ಲ ಆಕೆಯು ಬ್ರಹ್ಮಾದಿದೇವತೆಗಳಿಂದಲೂ ಮನು, ಮುನಿ, ಮಾನವರಿಂದಲೂ ಸರ್ವದಾ ಸ್ತುತ್ಯಳಾಗಿರುವಳು.

೯೭. ಸರ್ವರಿಗೂ ಆಧಾರಭೂತಳೂ ಸಮಸ್ತ ಸಸ್ಯೋತ್ಪತ್ತಿಗೆ ಕಾರಣಳೂ ಆದ ವಸುಂಧರಾ (ಭೂಮಿ) ದೇವಿಯೂ ಪ್ರಕೃತಿಯ ಪ್ರಧಾನಾಂಶಸ್ವರೂಪಳು.

೯೮–೯೯. ರತ್ನಾಕಾರಳೂ, ರತ್ನಭರಿತಳೂ, ಸಮಸ್ತ ರತ್ನಾಕರ (ಸಮುದ್ರ) ಗಳಿಗೆ ಆಶ್ರಯಳೂ, ಪ್ರಜೆಗಳಿಂದಲೂ ಮತ್ತು ರಾಜರುಗಳಿಂದಲೂ ಸರ್ವದಾ ಪೂಜಿತಳೂ ಮತ್ತು ವಂದಿತಳೂ ಆದ ಆ ವಸುಂಧರಾದೇವಿಯು ಸರ್ವಕ್ಕೂ ಆಶ್ರಯಳಾಗಿ ಸಕಲಸಂಪತ್ತನ್ನೂ ಒದಗಿಸುವಳು. ಆಕೆಯಿಲ್ಲದಿದ್ದರೆ ಚರಾಚರಾತ್ಮಕವಾದ ಜಗತ್ತೆಲ್ಲವೂ ನಿರಾಧಾರವಾಗಿ ತ್ರಿಶಂಕುಸ್ವರ್ಗವಾಗುತ್ತಿತ್ತು.

ಪ್ರಕೃತೇಶ್ಚ ಕಲಾ ಯಾ ಯಾಸ್ತಾ ನಿಬೋಧ ಮುನೀಶ್ವರ।
ಯಸ್ಯ ಯಸ್ಯ ಚ ಯಾಃ ಪತ್ನ್ಯಸ್ತಾಃ ಸರ್ವಾ ವರ್ಣೆ

ಸ್ವಾಹಾ ದೇವೀ ವಹ್ನಿಪತ್ನೀ ತ್ರಿಷು ಲೋಕೇಷು ಪೂಜಿತಾ।
ಯಯಾ ವಿನಾ ಹವಿರ್ದತ್ತಂ ನ ಗ್ರಹೀತುಂ ಸುರಾಃ ಕ್ಷಮಾಃ ॥ ೧೦೧ ॥

ದಕ್ಷಿಣಾ ಯಜ್ಞಪತ್ನೀ ಚ ದೀಕ್ಷಾ ಸರ್ವತ್ರ ಪೂಜಿತಾ।
ಯಯಾ ವಿನಾ ಚ ವಿಶ್ವೇಷು ಸರ್ವಂ ಕರ್ಮಾಸ್ತಿ ನಿಷ್ಫಲಂ ॥ ೧೦೨ ॥

ಸ್ವಧಾ ಪಿತೄಣಾಂ ಪತ್ನೀ ಚ ಮುನಿಭಿರ್ಮನುಭಿರ್ನರೈಃ।
ಪೂಜಿತಾ ಪೈತೃಕಂ ದಾನಂ ನಿಷ್ಫಲಂ ಚ ಯಯಾ ವಿನಾ ॥ ೧೦೩ ॥

---

೧೦೦. ಎಲೈ, ನಾರದನೇ, ಪ್ರಕೃತಿಯ ಕಲೆಯಿಂದ ಜನಿಸಿ ಯಾವ ಯಾವ ದೇವತೆಗಳಿಗೆ ಯಾವ ಯಾವ ದೇವಿಯರು ಪತ್ನಿಯರಾಗಿರುವರೆಂಬುದನ್ನು ಈಗ ವರ್ಣಿಸುವೆನು. ಅವಧರಿಸು.

೧೦೧. ತ್ರಿಲೋಕಪೂಜಿತಳೂ, ಅಗ್ನಿದೇವನ ಪತ್ನಿಯೂ ಆದ ಸ್ವಾಹಾ ದೇವಿಯೂ ಪ್ರಕೃತಿಯ ಕಲೆಯಿಂದ ಜನಿಸಿದವಳು. ಆಕೆಯಿಲ್ಲದಿದ್ದರೆ ಅಗ್ನಿಯಲ್ಲಿ ಹೋಮಮಾಡಿದ ಹವಿಸ್ಸನ್ನು ದೇವತೆಗಳು ಸ್ವೀಕರಿಸಲಾಗುವುದಿಲ್ಲ.

೧೦೨. ಯಜ್ಞಪುರುಷನ ಪತ್ನಿಯಾದ ದಕ್ಷಿಣಾದೇವಿಯು ಪ್ರಕೃತಿಯ ಕಲೆಯಿಂದ ಅವತರಿಸಿ ಎಲ್ಲರಿಗೂ ಪೂಜ್ಯಳಾಗಿದ್ದಾಳೆ. ಆ ದೇವಿಗೆ ತೃಪ್ತಿಪಡಿಸದೆ ಯಾವ ಸತ್ಕರ್ಮಗಳನ್ನು ಮಾಡಿದರೂ ನಿಷ್ಫಲವಾಗುವುದು.

೧೦೩. ಮುನಿಗಳಿಂದಲೂ, ಮನುಮಾನವರಿಂದಲೂ ಪೂಜಿತಳಾದ ಪಿತೃದೇವತೆಗಳ ಪತ್ನಿಯಾದ ಸ್ವಧಾದೇವಿಯೂ ಪ್ರಕೃತಿಯ ಕಲೆಯಿಂದ ಅವತರಿಸಿ ಸರ್ವಮಾನ್ಯಳಾಗಿದ್ದಾಳೆ. ಆಕೆಯನ್ನುಳಿದು ಮಾಡಿದ ಪಿತೃತರ್ಪಣಾದಿಗಳು ನಿಷ್ಫಲವಾಗುವುವು.

ಸ್ವಸ್ತಿದೇವೀ ವಾಯುಪತ್ನೀ ಪ್ರತಿವಿಶ್ವೇಷು ಪೂಜಿತಾ ।
ಆದಾನಂ ಚ ಪ್ರದಾನಂ ಚ ನಿಷ್ಫಲಂ ಚ ಯಯಾ ವಿನಾ ॥ ೧೦೪ ॥

ಪುಷ್ಟಿರ್ಗಣಪತೇಃ ಪತ್ನೀ ಪೂಜಿತಾ ಜಗತೀತಲೇ ।
ಯಯಾ ವಿನಾ ಪರಿಕ್ಷೀಣಾಃ ಪುಮಾಂಸೋ ಯೋಷಿತೋಽಪಿ ಚ ॥ ೧೦೫ ॥

ಅನಂತಪತ್ನೀ ತುಷ್ಟಿಶ್ಚ ಪೂಜಿತಾ ವಂದಿತಾ ಸದಾ ।
ಯಯಾ ವಿನಾ ನ ಸಂತುಷ್ಟಾಃ ಸರ್ವೇ ಲೋಕಾಶ್ಚ ಸರ್ವತಃ ॥ ೧೦೬ ॥

ಈಶಾನಪತ್ನೀ ಸಂಪತ್ತಿಃ ಪೂಜಿತಾ ಚ ಸುರೈರ್ನರೈಃ ।
ಸರ್ವಲೋಕಾ ದರಿದ್ರಾಶ್ಚ ವಿಶ್ವೇಷು ಚ ಯಯಾ ವಿನಾ ॥ ೧೦೭ ॥

---

೧೦೪. ವಾಯುದೇವನ ಪತ್ನಿಯೂ, ಸಕಲರಿಂದ ಪೂಜಿತಳೂ ಆದ ಸ್ವಸ್ತಿದೇವಿಯೂ, ಪ್ರಕೃತಿಯ ಕಲೆಯಲ್ಲೊಬ್ಬಳು. ಸ್ವಸ್ತಿದೇವಿಯನ್ನು ಬಿಟ್ಟು ಮಾಡಿದ ದಾನಪ್ರತಿಗ್ರಹಗಳೆಲ್ಲಾ ನಿಷ್ಫಲವಾಗುವುವು.

೧೦೫. ಪ್ರಕೃತಿಯ ಕಲೆಯಿಂದವತರಿಸಿ, ಗಣಪತಿಯ ಪತ್ನಿಯಾಗಿರುವ ಪುಷ್ಟಿದೇವಿಯೂ ಜಗತ್ತಿನಲ್ಲೆಲ್ಲಾ ಪೂಜ್ಯಳಾಗಿರುವಳು. ಆಕೆಯಿಲ್ಲದಿದ್ದರೆ ಪುರುಷರೂ ಮತ್ತು ಸ್ತ್ರೀಯರೂ ಕ್ಷೀಣದೆಶೆಯನ್ನು ಹೊಂದುತ್ತಿದ್ದರು.

೧೦೬. ಆದಿಶೇಷನ ಪತ್ನಿಯಾದ ತುಷ್ಟಿದೇವಿಯೂ ಪ್ರಕೃತಿಯ ಕಲೆಯಿಂದ ಅವತರಿಸಿ ಸರ್ವಪೂಜಿತಳಾಗಿರುವಳು. ಆಕೆಯಿಲ್ಲದಿದ್ದರೆ ಲೋಕವು ಸಂತೋಷವೆಂಬುದನ್ನೇ ಅರಿಯಲಾಗುತ್ತಿರಲಿಲ್ಲ.

೧೦೭. ಸುರನರರಿಂದ ಪೂಜಿತಳಾದ ಸಂಪತ್ತಿದೇವಿಯು ಪ್ರಕೃತಿಯ ಕಲೆಯಿಂದ ಅವತರಿಸಿ ಸರ್ವಪೂಜಿತಳಾಗಿರುವಳು. ಆಕೆಯಿಲ್ಲದಿದ್ದರೆ ಲೋಕವು ಸಂತೋಷವೆಂಬುದನ್ನೇ ಅರಿಯಲಾಗುತ್ತಿರಲಿಲ್ಲ.

ಧೃತಿಃ ಕಪಿಲಪತ್ನೀ ಚ ಸರ್ವೈಃ ಸರ್ವತ್ರ ಪೂಜಿತಾ ।
ಸರ್ವಲೋಕಾ ಅಧೀರಾಸ್ಸ್ಯುರ್ಜಗತ್ಸು ಚ ಯಯಾ ವಿನಾ ॥ ೧೦೮ ॥

ಯಮಪತ್ನೀ ಕ್ಷಮಾ ಸಾಧ್ವೀ ಸುಶೀಲಾ ಸರ್ವಪೂಜಿತಾ ।
ಸಮುನ್ಮತ್ತಾಶ್ಚ ರುದ್ರಾಶ್ಚ ಸರ್ವೇ ಲೋಕಾ ಯಯಾ ವಿನಾ ॥ ೧೦೯ ॥

ಕ್ರೀಡಾಧಿಷ್ಠಾತೃದೇವೀ ಸಾ ಕಾಮಪತ್ನೀ ರತಿಃ ಸತೀ ।
ಕೇಲಿಕೌತುಕಹೀನಾಶ್ಚ ಸರ್ವೇ ಲೋಕಾ ಯಯಾ ವಿನಾ ॥ ೧೧೦ ॥

ಸತ್ಯಪತ್ನೀ ಸತೀ ಮುಕ್ತಿಃ ಪೂಜಿತಾ ಜಗತಾಂ ಪ್ರಿಯಾ ।
ಯಯಾ ವಿನಾ ಭವೇಲ್ಲೋಕೋ ಬಂಧುತಾ ರಹಿತಃ ಸದಾ ॥ ೧೧೧ ॥

---

೧೦೮. ಎಲ್ಲರಿಂದಲೂ, ಎಲ್ಲೆಡೆಯಲ್ಲೂ ಪೂಜಿತಳಾದ ಧೃತಿದೇವಿಯೂ ಪ್ರಕೃತಿಯ ಕಳೆಯಿಂದ ಅವತರಿಸಿ ಕಪಿಲಮಹರ್ಷಿಯ ಪತ್ನಿಯಾಗಿರುವಳು. ಆ ದೇವಿಯು ಇಲ್ಲದಿದ್ದರೆ ಜಗತ್ತಿನ ಜನರೆಲ್ಲರೂ ಹೇಡಿಗಳಾಗುತ್ತಿದ್ದರು.

೧೦೯. ಪ್ರಕೃತಿಯ ಕಲೆಯಿಂದವತರಿಸಿದವಳೂ, ಸಾಧ್ವೀಶಿರೋಮಣಿಯೂ, ಆದ ಕ್ಷಮಾದೇವಿಯು ಯಮನ ಪತ್ನಿಯಾಗಿ ಸರ್ವಪೂಜಿತಳಾಗಿದ್ದಾಳೆ. ಆ ಕ್ಷಮಾ ದೇವಿಯಿಲ್ಲದಿದ್ದರೆ ಜನರಿಗೆ ಕ್ಷಮಾಗುಣವೇ ಪರಿಚಯವಿಲ್ಲದೆ, ಎಲ್ಲರೂ ಉನ್ಮತ್ತರೂ, ರುದ್ರರೂಪಿಗಳೂ ಆಗುತ್ತಿದ್ದರು.

೧೧೦. ಪ್ರಕೃತಿಯ ಕಲಾವತಾರಿಣಿಯೂ, ಪರಮಪತಿವ್ರತೆಯೂ, ಆದ ರತಿದೇವಿಯು ಮನ್ಮಥಪತ್ನಿಯಾಗಿ ಕ್ರೀಡೆಗೆಲ್ಲ ಅಧಿದೇವತೆಯಾಗಿದ್ದಾಳೆ. ಆಕೆಯಿಲ್ಲ ದಿದ್ದರೆ ಜನರೆಲ್ಲರೂ ಕ್ರೀಡಾರಹಿತರಾಗುತ್ತಿದ್ದರು.

೧೧೧. ಜಗತ್ಪ್ರಿಯಳೂ, ಸತ್ಯಪುರುಷನ ಪತ್ನಿಯೂ. ಪತಿವ್ರತೆಯೂ, ಆದ ಮುಕ್ತಿದೇವಿಯು ಪ್ರಕೃತಿಯಕಲೆಯಿಂದವತರಿಸದಿದ್ದರೆ ಜಗತ್ತೆಲ್ಲವೂ ಆಪ್ತರಿಲ್ಲದೆ ದೈನ್ಯತೆಯನ್ನು ಆಶ್ರಯಿಸಬೇಕಾಗುತ್ತಿತ್ತು.

ಮೋಹಪತ್ನೀ ದಯಾ ಸಾಧ್ವೀ ಪೂಜಿತಾ ಚ ಜಗತ್ಪ್ರಿಯಾ ।
ಸರ್ವಲೋಕಾಶ್ಚ ಸರ್ವತ್ರ ನಿಷ್ಠುರಾಶ್ಚ ಯಯಾ ವಿನಾ ॥ ೧೧೨ ॥

ಪುಣ್ಯಪತ್ನೀ ಪ್ರತಿಷ್ಠಾ ಸಾ ಪುಣ್ಯರೂಪಾ ಚ ಪೂಜಿತಾ ।
ಯಯಾ ವಿನಾ ಜಗತ್ಸರ್ವಂ ಜೀವನ್ಮೃತಸಮಂ ಮುನೇ ॥ ೧೧೩ ॥

ಸುಕರ್ಮಪತ್ನೀ ಕೀರ್ತಿಶ್ಚ ಧನ್ಯಾ ಮಾನ್ಯಾ ಚ ಪೂಜಿತಾ ।
ಯಯಾ ವಿನಾ ಜಗತ್ಸರ್ವಂ ಯಶೋ ಹೀನಂ ಮೃತಂ ಯಥಾ ॥ ೧೧೪ ॥

ಕ್ರಿಯಾ ಉದ್ಯೋಗಪತ್ನೀ ಚ ಪೂಜಿತಾ ಸರ್ವಸಂಗತಾ ।
ಯಯಾ ವಿನಾ ಜಗತ್ಸರ್ವಮುಚ್ಛಿನ್ನಮಿವ ನಾರದ ॥ ೧೧೫ ॥

ಅಧರ್ಮಪತ್ನೀ ಮಿಥ್ಯಾ ಸಾ ಸರ್ವಧೂರ್ತೈಶ್ಚ ಪೂಜಿತಾ ।
ಯಯಾ ವಿನಾ ಜಗತ್ಸರ್ವಮುಚ್ಛಿನ್ನಂ ವಿಧಿನಿರ್ಮಿತಂ ॥ ೧೧೬ ॥

---

೧೧೨. ಸಾಧ್ವೀಶಿರೋಮಣಿಯೂ, ಮೋಹಪತ್ನಿಯೂ ಆದ ದಯಾದೇವಿಯೂ ಪ್ರಕೃತಿಯ ಕಲಾವತಾರಿಣಿಯಾಗಿ ಸರ್ವಪ್ರಿಯಳೂ, ಪೂಜ್ಯಳೂ ಆಗಿರುವಳು. ಆಕೆಯಿಲ್ಲದಿದ್ದರೆ ಲೋಕವೆಲ್ಲವೂ ನಿಷ್ಠುರಮಯವಾಗುತ್ತಿತ್ತು.

೧೧೩. ಪ್ರಕೃತಿಯ ಕಲಾರೂಪಳೂ, ಪುಣ್ಯಪುರುಷನ ಪತ್ನಿಯೂ ಆದ ಪ್ರತಿಷ್ಠಾದೇವಿಯು ಜಗತ್ತಿನಲ್ಲಿ ಪೂಜ್ಯಳಾಗಿರದಿದ್ದರೆ, ಜನರೆಲ್ಲರೂ ಜೀವನ್ಮೃತರಾಗುತ್ತಿದ್ದರು.

೧೧೪. ಸತ್ಕರ್ಮಪತ್ನಿಯೂ, ಜಗದ್ವಂದ್ಯಳೂ, ಪ್ರಕೃತಿಯ ಕಲಾರೂಪಿಣಿಯೂ ಆದ ಕೀರ್ತಿದೇವಿಯು ಇಲ್ಲದಿದ್ದರೆ, ಜಗತ್ತೆಲ್ಲವೂ, ಕೀರ್ತಿರಹಿತವಾಗಿ ಮೃತಪ್ರಾಯವಾಗುತ್ತಿತ್ತು.

೧೧೫. ಉದ್ಯೋಗಪತ್ನಿಯೂ, ಸರ್ವಪೂಜ್ಯಳೂ ಆದ ಕ್ರಿಯಾದೇವಿಯು ಇಲ್ಲದಿದ್ದರೆ ಜಗತ್ತೆಲ್ಲವೂ ಚಲನವಲನಗಳಿಲ್ಲದೆ ನಿಸ್ಪಂದವಾಗುತ್ತಿತ್ತು.

೧೧೬. ಅಧರ್ಮಪತ್ನಿಯಾದ ಮಿಥ್ಯೆಯನ್ನು (ಸುಳ್ಳು) ವಂಚಕರೆಲ್ಲರೂ ಪೂಜಿಸುವರು. ಆ ಮಿಥ್ಯೆಯಿಲ್ಲದಿದ್ದರೆ ಜಗತ್ತೆಲ್ಲವೂ ವಿಧಿನಿಯಮಕ್ಕೇ ಬದ್ಧವಾಗಬೇಕಾಗುತ್ತಿತ್ತು.

ಸತ್ಯೇ ಅದರ್ಶನಾ ಯಾ ಚ ತ್ರೇತಾಯಾಂ ಸೂಕ್ಷ್ಮರೂಪಿಣೀ ।
ಅರ್ಧಾವಯವರೂಪಾ ಚ ದ್ವಾಪರೇ ಸಂಹೃತಾ ಹ್ರಿಯಾ ॥ ೧೧೭ ॥

ಕಲೌ ಮಹಾಪ್ರಗಲ್ಭಾ ಚ ಸರ್ವತ್ರ ವ್ಯಾಪ್ತಿಕಾರಣಾತ್ ।
ಕಪಟೇನ ಸಹ ಭ್ರಾತ್ರಾ ಭ್ರಮತ್ಯೇವ ಗೃಹೇ ಗೃಹೇ ॥ ೧೧೮ ॥

ಶಾಂತಿರ್ಲಜ್ಜಾ ಚ ಭಾರ್ಯೇ ದ್ವೇ ಸುಶೀಲಸ್ಯ ಚ ಪೂಜಿತೇ ।
ಯಾಭ್ಯಾಂ ವಿನಾ ಜಗತ್ಸರ್ವಮುನ್ಮತ್ತಮಿವ ನಾರದ ॥ ೧೧೯ ॥

ಜ್ಞಾನಸ್ಯ ತಿಸ್ರೋ ಭಾರ್ಯಾಶ್ಚ ಬುದ್ಧಿರ್ಮೇಧಾ ಸ್ಮೃತಿಸ್ತಥಾ ।
ಯಾಭಿರ್ವಿನಾ ಜಗತ್ಸರ್ವಂ ಮೂಢಂ ಮೃತಸಮಂ ಸದಾ ॥ ೧೨೦ ॥

ಮೂರ್ತಿಶ್ಚ ಧರ್ಮಪತ್ನೀ ಸಾ ಕಾಂತಿರೂಪಾ ಮನೋಹರಾ ।
ಪರಮಾತ್ಮಾ ಚ ವಿಶ್ವೌಘಾ ನಿರಾಧಾರಾ ಯಯಾ ವಿನಾ ॥ ೧೨೧ ॥

೧೧೭-೧೧೮. ಯಾವ ಮಿಥ್ಯಾದೇವಿಯು, ಸತ್ಯಯುಗದಲ್ಲಿ ಕಣ್ಣಿಗೆ ಕಾಣದಂತಿದ್ದು, ತ್ರೇತಾಯುಗದಲ್ಲಿ ಸೂಕ್ಷ್ಮರೂಪಿಣಿಯಾಗಿ, ದ್ವಾಪರಯುಗದಲ್ಲಿ ಅರ್ಧಾವಯವಗಳಿಂದ ಕೂಡಿ ಲಜ್ಜಾರಹಿತಳಾಗಿದ್ದು, ಕಲಿಯುಗದಲ್ಲಿ ಬಹಳ ಪ್ರೌಢಳಾಗಿ, ತನ್ನ ಸಹೋದರನಾದ ಕಪಟ (ಮೋಸ) ನೊಡನೆ ಪ್ರತಿಗೃಹದಲ್ಲೂ ವ್ಯಾಪಿಸಿಕೊಂಡಿರುವಳು.

೧೧೯. ಸುಶೀಲ (ಒಳ್ಳೆಯ ನಡತೆ) ಪತ್ನಿಯರಾದ ಶಾಂತಿ ಮತ್ತು ಲಜ್ಜೆಯರು ಜಗತ್ತಿನಲ್ಲಿ ಅದೃಶ್ಯರಾಗಿರದಿದ್ದರೆ ಜಗತ್ತೆಲ್ಲವೂ ಹುಚ್ಚುಹುಚ್ಚಾಗುತ್ತಿತ್ತು.

೧೨೦. ಬುದ್ಧಿ, ಮೇಧಾ, ಸ್ಮೃತಿ ಎಂಬ ಮೂವರು ಜ್ಞಾನಪತ್ನಿಯರು ಜಗತ್ತಿನಲ್ಲಿಲ್ಲದಿದ್ದರೆ ಜಗತ್ತೆಲ್ಲವೂ ಮೂರ್ಖತೆಯಿಂದ ಕೂಡಿ, ಮೃತಪ್ರಾಯವಾಗುತ್ತಿತ್ತು.

೧೨೧. ಧರ್ಮಪುರುಷನ ಪತ್ನಿಯೂ, ಮನೋಹರಳೂ ಆದ ಮೂರ್ತಿ ದೇವಿಯು ಕಾಂತಿಸ್ವರೂಪಳಾಗಿರದಿದ್ದರೆ ವಿಶ್ವವೆಲ್ಲವೂ ಆಧಾರರಹಿತವಾಗುತ್ತಿತ್ತು.

ಸರ್ವತ್ರ ಶೋಭಾರೂಪಾ ಚ ಲಕ್ಷ್ಮೀರ್ಮೂರ್ತಿಮತೀ ಸತೀ ।
ಶ್ರೀರೂಪಾ ಮೂರ್ತಿರೂಪಾ ಚ ಮಾನ್ಯಾ ಧನ್ಯಾ ಚ ಪೂಜಿತಾ ॥ ೧೨೨ ॥

ಕಾಲಾಗ್ನಿರುದ್ರಪತ್ನೀ ಚ ನಿದ್ರಾ ಯಾ ಸಿದ್ಧಯೋಗಿನಾಂ ।
ಸರ್ವಲೋಕಾಃ ಸಮಾಚ್ಛನ್ನಾ ಮಾಯಾಯೋಗೇನ ರಾತ್ರಿಷು ॥ ೧೨೩ ॥

ಕಾಲಸ್ಯ ತಿಸ್ರೋ ಭಾರ್ಯಾಶ್ಚ ಸಂಧ್ಯಾರಾತ್ರಿರ್ದಿನಾನಿ ಚ ।
ಯಾಭಿರ್ವಿನಾ ವಿಧಾತ್ರಾ ಚ ಸಂಖ್ಯಾಂ ಕರ್ತುಂ ನ ಶಕ್ಯತೇ ॥ ೧೨೪ ॥

ಕ್ಷುತ್ಪಿಪಾಸೇ ಲೋಭಭಾರ್ಯೇ ಧನ್ಯೇ ಮಾನ್ಯೇ ಚ ಪೂಜಿತೇ ।
ಯಾಭ್ಯಾಂ ವ್ಯಾಪ್ತಂ ಜಗತ್ಕೃತ್ಸ್ನಂ ಭಯಯುಕ್ತಂ ಚಿಂತಿತಮೇವ ಚ ॥ ೧೨೫ ॥

ಪ್ರಭಾ ಚ ದಾಹಿಕಾ ಚೈವ ದ್ವೇ ಭಾರ್ಯೇ ತೇಜಸಸ್ತಥಾ ।
ಯಾಭ್ಯಾಂ ವಿನಾ ಜಗತ್ಸ್ರಷ್ಟುಂ ವಿಧಾತಾ ಚ ನ ಹೀಶ್ವರಃ ॥ ೧೨೬ ॥

---

೧೨೨. ಕಾಂತಿರೂಪಳಾದ ಲಕ್ಷ್ಮೀದೇವಿಯೇ, ಎಲ್ಲಾ ಕಡೆಯಲ್ಲಿಯೂ ಶ್ರೀರೂಪಳೂ ಮತ್ತು ಮೂರ್ತಿರೂಪಳೂ ಎನಿಸಿಕೊಂಡು ಎಲ್ಲರಿಂದ ಮಾನ್ಯಳೂ, ಪೂಜಿತಳೂ ಆಗಿದ್ದಾಳೆ.

೧೨೩. ನಿದ್ರಾದೇವಿಯು ಕಾಲಾಗ್ನಿರುದ್ರನ ಪತ್ನಿಯು. ಆಕೆಯ ಮಾಯಾ ಮಹಿಮೆಯಿಂದ ರಾತ್ರಿಕಾಲದಲ್ಲಿ ಲೋಕವೆಲ್ಲವೂ ಆವೃತವಾಗಿರುವುದು.

೧೨೪. ಸಂಧ್ಯಾ, ರಾತ್ರಿ ಮತ್ತು ದಿನವೆಂಬ ಮೂವರು ಕಾಲನ ಪತ್ನಿಯರು. ಅವರಿಲ್ಲದಿದ್ದರೆ, ಬ್ರಹ್ಮದೇವನಿಂದಲೂ ಕಾಲಗಣನೆಯು ಅಸಾಧ್ಯವಾಗುತ್ತಿತ್ತು.

೧೨೫. ಲೋಭಭಾರ್ಯೆಯರಾದ ಕ್ಷುತ್ (ಹಸಿವು) ಮತ್ತು ಪಿಪಾಸೆ (ಬಾಯಾರಿಕೆ)ಯರು ಜನರಿಂದ ಬಹು ಮಾನ್ಯರಾಗಿದ್ದಾರೆ. ಇಲ್ಲದಿದ್ದರೆ ಅವರಿಬ್ಬರಿಂದ ಆಕ್ರಾಂತವಾದ ನಿಖಿಲ ಜಗತ್ತೂ ಕ್ಷೋಭೆಗೊಂಡು ಚಿಂತಾಮಯವಾಗುತ್ತಿತ್ತು.

೧೨೬. ಪ್ರಭಾ (ಕಾಂತಿ) ಮತ್ತು ದಾಹಿಕಾ (ಸುಡುವಶಕ್ತಿ) ಎಂಬಿಬ್ಬರು ತೇಜಸ್ಸಿನ ಪತ್ನಿಯರು. ಅವರಿಬ್ಬರಿಲ್ಲದಿದ್ದರೆ ಸೃಷ್ಟಿಕರ್ತನೂ ಜಗತ್ಸೃಷ್ಟಿಮಾಡಲಾಗುತ್ತಿರಲಿಲ್ಲ.

ಕಾಲಕನ್ಯೇ ಮೃತ್ಯುಜರೇ ಪ್ರಜ್ವರಸ್ಯ ಪ್ರಿಯೇ ಪ್ರಿಯೇ ।
ಯಾಭ್ಯಾಂ ಜಗತ್ಸಮುಚ್ಛಿನ್ನಂ ವಿಧಾತ್ರಾ ನಿರ್ಮಿತೋ ವಿಧೌ ॥ ೧೨೭ ॥

ನಿದ್ರಾಕನ್ಯಾ ಚ ತಂದ್ರಾ ಸಾ ಪ್ರೀತಿರನ್ಯಾ ಸುಖಪ್ರಿಯೇ ।
ಯಾಭ್ಯಾಂ ವ್ಯಾಪ್ತಂ ಜಗತ್ಸರ್ವಂ ವಿಧಿಪುತ್ರ ವಿಧೋರ್ವಿಧೌ ॥ ೧೨೮ ॥

ವೈರಾಗ್ಯಸ್ಯ ಚ ದ್ವೇ ಭಾರ್ಯೇ ಶ್ರದ್ಧಾ ಭಕ್ತಿಶ್ಚ ಪೂಜಿತೇ ।
ಯಾಭ್ಯಾಂ ಶಶ್ವಜ್ಜಗತ್ಸರ್ವಂ ಜೀವನ್ಮುಕ್ತಮಿದಂ ಮುನೇ ॥ ೧೨೯ ॥

ಅದಿತಿರ್ದೇವಮಾತಾ ಚ ಸುರಭಿಶ್ಚ ಗವಾಂ ಪ್ರಸೂಃ ।
ದಿತಿಶ್ಚ ದೈತ್ಯಜನನೀ ಕದ್ರೂಶ್ಚ ವಿನತಾ ದನುಃ ॥ ೧೩೦ ॥

ಉಪಯುಕ್ತಾಃ ಸೃಷ್ಟಿವಿಧೌ ಏತಾಶ್ಚ ಪ್ರಕೃತೇಃ ಕಲಾಃ ।
ಕಲಾಶ್ಚಾನ್ಯಾಃ ಸಂತಿ ಬಹ್ವ್ಯಸ್ತಾಸು ಕಾಶ್ಚಿನ್ನಿಬೋಧ ಮೇ ॥ ೧೩೧ ॥

---

೧೨೭. ಕಾಲಕನ್ಯೆಯರೂ, ಪ್ರಜ್ವರಪ್ರಿಯೆಯರೂ ಆದ ಮೃತ್ಯು (ಸಾವು) ಮತ್ತು ಜರೆ(ಮುಪ್ಪು) ಯರು, ಬ್ರಹ್ಮನು ಸೃಷ್ಟಿಮಾಡಿದ ಜಗತ್ತೆಲ್ಲವನ್ನೂ ಆಕ್ರಮಿಸಿ ನಾಶಗೊಳಿಸುವರು.

೧೨೮. ಎಲೈ, ವಿಧಿಪುತ್ರನಾದ ನಾರದನೇ, ನಿದ್ರಾಕನ್ಯೆಯಾದ ತಂದ್ರೆಯೂ (ಮಂಕುತನ), ಸುಖಪ್ರಿಯೆಯಾದ ಪ್ರೀತಿಯೂ ಬ್ರಹ್ಮಸೃಷ್ಟವಾದ ಜಗತ್ತನ್ನೆಲ್ಲಾ ವ್ಯಾಪಿಸಿರುವರು.

೧೨೯. ಶ್ರದ್ಧೆ (ನಂಬಿಕೆ) ಮತ್ತು ಭಕ್ತಿ ಎಂಬಿಬ್ಬರು ವೈರಾಗ್ಯಪತ್ನಿಯರು. ಅವರಿಬ್ಬರಿಂದ ಜಗತ್ತೆಲ್ಲವೂ ಜೀವನ್ಮುಕ್ತಿಯನ್ನು ಹೊಂದಬಹುದು.

೧೩೦-೧೩೧. ದೇವತೆಗಳ ಮಾತೆಯಾದ ಅದಿತಿ, ಗೋವುಗಳ ಮಾತೆಯಾದ ಸುರಭಿ, ದೈತ್ಯರಜನನಿಯಾದ ದಿತಿ, ಸರ್ಪಮಾತೆಯಾದ ಕದ್ರು, ಗರುಡನ ತಾಯಿಯಾದ ವಿನತೆ, ದಾನವರ ಜನನಿಯಾದ ದನು, ಇವರೆಲ್ಲರೂ ಪ್ರಕೃತಿಯ ಕಲೆಯಿಂದವತರಿಸಿ ಸೃಷ್ಟಿಗೆ ಉಪಯುಕ್ತರಾದರು. ಪ್ರಕೃತಿಯಕಲೆಯಿಂದ ಉತ್ಪನ್ನ ರಾದ ಅನೇಕರಲ್ಲಿ ಇನ್ನೂ ಕೆಲವು ಸ್ತ್ರೀಯರನ್ನು ವಿವರಿಸುವೆನು ಅವಧರಿಸು.

ರೋಹಿಣೀ ಚಂದ್ರಪತ್ನೀ ಚ ಸಂಜ್ಞಾ ಸೂರ್ಯಸ್ಯ ಕಾಮಿನೀ ।
ಶತರೂಪಾ ಮನೋರ್ಭಾರ್ಯಾ ಶಚೀಂದ್ರಸ್ಯ ಚ ಗೇಹಿನೀ ॥ ೧೩೨ ॥

ತಾರಾ ಬೃಹಸ್ಪತೇರ್ಭಾರ್ಯಾ ವಸಿಷ್ಠಸ್ಯಾಪ್ಯರುಂಧತೀ ।
ಅಹಲ್ಯಾ ಗೌತಮಸ್ತ್ರೀ ಸ್ಯಾದನಸೂಯಾತ್ರಿಕಾಮಿನೀ ॥ ೧೩೩ ॥

ದೇವಹೂತಿಃ ಕರ್ದಮಸ್ಯ ಪ್ರಸೂತಿರ್ದಕ್ಷಕಾಮಿನೀ ।
ಪಿತೃಣಾಂ ಮಾನಸೀಕನ್ಯಾ ಮೇನಕಾ ಸಾಂಬಿಕಾಪ್ರಸೂಃ ॥ ೧೩೪ ॥

ಲೋಪಾಮುದ್ರಾ ತಥಾಹೂತಿಃ ಕುಬೇರಸ್ಯ ತು ಕಾಮಿನೀ ।
ವರುಣಾನೀ ಯಮಸ್ತ್ರೀ ಚ ಬಲೇರ್ವಿಂಧ್ಯಾವಲೀತಿ ಚ ॥ ೧೩೫ ॥

೧೩೨-೧೩೩. ಚಂದ್ರಪತ್ನಿಯಾದ ರೋಹಿಣಿಯೂ, ಸೂರ್ಯಕಾಮಿನಿಯಾದ ಸಂಜ್ಞಾದೇವಿಯೂ, ಸ್ವಾಯಂಭುವ ಮನುವಿನ ಭಾರ್ಯೆಯಾದ ಶತರೂಪೆಯೂ, ಇಂದ್ರನ ಗೇಹಿನಿಯಾದ ಶಚಿಯೂ, ಬೃಹಸ್ಪತಿಯ ಭಾರ್ಯೆಯಾದ ತಾರೆಯೂ, ವಸಿಷ್ಠನ ಪತ್ನಿಯಾದ ಅರುಂಧತಿಯೂ, ಗೌತಮ ಪ್ರಿಯೆಯಾದ ಅಹಲ್ಯೆಯೂ, ಅತ್ರಿಕಾಮಿನಿಯಾದ ಅನಸೂಯೆಯೂ ಪ್ರಕೃತಿಯ ಕಲಾವತಾರಿಣಿಯರು.

೧೩೪-೧೩೫. ಕರ್ದಮನ ಪತ್ನಿಯಾದ ದೇವಹೂತಿಯೂ, ದಕ್ಷ ಪತ್ನಿಯಾದ ಪ್ರಸೂತಿಯೂ, ಪಿತೃದೇವತೆಗಳ ಮಾನಸಕನ್ಯೆಯೂ ಅಂಬಿಕಾಮಾತೆಯೂ ಆದ ಮೇನೆಯೂ, ಅಗಸ್ತ್ಯ ಪತ್ನಿಯಾದ ಲೋಪಾಮುದ್ರೆಯೂ, ಅಂತೆಯೇ ಹೂತಿಯೂ, ಕುಬೇರನ ಪತ್ನಿಯಾದ ಮನೋರಮೆಯೂ. ವರುಣಾನಿಯೂ, ಯಮಪತ್ನಿಯೂ, ಬಲಿಚಕ್ರವರ್ತಿಯ ಪತ್ನಿಯಾದ ವಿಂಧ್ಯಾವಲಿಯೂ ಪ್ರಕೃತಿಯ ಕಲೆಯಿಂದವತರಿಸಿದವರು.

ಕುಂತೀ ಚ ದಮಯಂತೀ ಚ ಯಶೋದಾ ದೇವಕೀ ಸತೀ।
ಗಾಂಧಾರೀ ದ್ರೌಪದೀ ಸವ್ಯಾ ಸಾವಿತ್ರೀ ಸತ್ಯವತ್ಪ್ರಿಯಾ ॥ ೧೩೬ ॥

ವೃಷಭಾನುಪ್ರಿಯಾ ಸಾಧ್ವೀ ರಾಧಾಮಾತಾ ಕಲಾವತೀ।
ಮಂದೋದರೀ ಚ ಕೌಸಲ್ಯಾ ಸುಭದ್ರಾ ಕೈಕಯೀ ತಥಾ ॥ ೧೩೭ ॥

ರೇವತೀ ಸತ್ಯಭಾಮಾ ಚ ಕಾಲಿಂದೀ ಲಕ್ಷ್ಮಣಾ ತಥಾ।
ಮಿತ್ರವಿಂದಾ ನಾಗ್ನಜಿತೀ ತಥಾ ಜಾಂಬವತೀ ಪರಾ ॥ ೧೩೮ ॥

ಲಕ್ಷಣಾ ರುಕ್ಮಿಣೀ ಸೀತಾ ಸ್ವಯಂ ಲಕ್ಷ್ಮೀಃ ಪ್ರಕೀರ್ತಿತಾ।
ಕಲಾ ಯೋಜನಗಂಧಾ ಚ ವ್ಯಾಸಮಾತಾ ಮಹಾಸತೀ ॥ ೧೩೯ ॥

ಬಾಣಪುತ್ರೀ ತಥೋಷಾ ಚ ಚಿತ್ರಲೇಖಾ ಚ ತತ್ಸಖೀ।
ಪ್ರಭಾವತೀ ಭಾನುಮತೀ ತಥಾ ಮಾಯಾವತೀ ಸತೀ ॥ ೧೪೦ ॥

೧೩೬–೧೩೮. ಕುಂತಿ ದಮಯಂತಿಯರೂ, ಯಶೋದಾ ದೇವಕಿಯರೂ, ಗಾಂಧಾರಿ ದ್ರೌಪದಿಯರೂ, ಸತ್ಯವಂತನ ಪ್ರಿಯೆಯಾದ ಸಾವಿತ್ರಿಯೂ, ಪ್ರಕೃತಿಯ ಕಲಾವತಾರಿಣಿಯರು. ವೃಷಭಾನುವಿನ ಪತ್ನಿಯೂ ರಾಧೆಯ ಮಾತೆಯೂ ಆದ ಕಲಾವತಿಯೂ, ಮಂಡೋದರಿ, ಕೌಸಲ್ಯೆ, ಸುಭದ್ರೆ, ಕೈಕಯಿ, ರೇವತಿ, ಸತ್ಯಭಾಮೆ, ಕಾಳಿಂದಿ, ಲಕ್ಷ್ಮಣೆ, ಮಿತ್ರವಿಂದೆ, ನಾಗ್ನಜಿತಿ ಮತ್ತು ಜಾಂಬವತಿಯರೂ ಪ್ರಕೃತಿಯ ಕಲೆಯಿಂದ ಅವತರಿಸಿದವರು.

೧೩೯–೧೪೧. ಅಲ್ಲದೆ ಲಕ್ಷಣೆ ರುಕ್ಮಿಣಿಯರೂ, ಲಕ್ಷ್ಮಿಯ ಅವತಾರಿಣಿಯಾದ ಸೀತೆಯೂ, ವ್ಯಾಸಮಹರ್ಷಿಗಳ ಮಾತೆಯೂ ಕಲಾ ಎಂಬ ನಾಮಾಂತರವುಳ್ಳವಳೂ ಆದ ಯೋಜನಗಂಧಿಯೂ, ಬಾಣಪುತ್ರಿಯಾದ ಉಷೆಯೂ, ಅವಳ ಸಖಿಯಾದ ಚಿತ್ರಲೇಖೆಯೂ, ಪ್ರಭಾವತಿ, ಭಾನುಮತಿ ಮತ್ತು ಮಾಯಾವತಿಯರೂ, ಪರಶುರಾಮನ ಮಾತೆಯಾದ ರೇಣುಕೆಯೂ, ಬಲರಾಮನ ಜನನಿ

ರೇಣುಕಾ ಚ ಭೃಗೋರ್ಮಾತಾ ಹಲಿಮಾತಾ ಚ ರೋಹಿಣೀ ।
ಏಕಾನಂಶಾ ಚ ದುರ್ಗಾ ಸಾ ಶ್ರೀಕೃಷ್ಣಭಗಿನೀ ಸತೀ　　　　॥ ೧೪೧ ॥

ಬಹ್ವ್ಯಃ ಸಂತಿ ಕಲಾಶ್ಚೈವಂ ಪ್ರಕೃತೇರೇವ ಭಾರತೇ ।
ಯಾಯಾಶ್ಚ ಗ್ರಾಮದೇವ್ಯಸ್ತಾಃ ಸರ್ವಾಶ್ಚ ಪ್ರಕೃತೇಃ ಕಲಾಃ　　॥ ೧೪೨ ॥

ಕಲಾಂಶಾಂಶಸಮುದ್ಭೂತಾಃ ಪ್ರತಿವಿಶ್ವೇಷು ಯೋಷಿತಃ ।
ಯೋಷಿತಾಮಪಮಾನೇನ ಪ್ರಕೃತೇಶ್ಚ ಪರಾಭವಃ　　　　॥ ೧೪೩ ॥

ಬ್ರಾಹ್ಮಣೀ ಪೂಜಿತಾ ಯೇನ ಪತಿಪುತ್ರವತೀ ಸತೀ ।
ಪ್ರಕೃತಿಃ ಪೂಜಿತಾ ತೇನ ವಸ್ತ್ರಾಲಂಕಾರಚಂದನೈಃ　　　　॥ ೧೪೪ ॥

ಕುಮಾರೀ ಚಾಷ್ಟವರ್ಷೀಯಾ ವಸ್ತ್ರಾಲಂಕಾರಚಂದನೈಃ ।
ಪೂಜಿತಾ ಯೇನ ವಿಪ್ರಸ್ಯ ಪ್ರಕೃತಿಸ್ತೇನ ಪೂಜಿತಾ　　　　॥ ೧೪೫ ॥

ಯಾದ ರೋಹಿಣಿಯೂ, ಯಶೋದೆಯ ಉದರದಲ್ಲಿ ಜನಿಸಿ ಶ್ರೀಕೃಷ್ಣನ ಸಹೋದರಿಯೆಂದೆನಿಸಿಕೊಂಡ ದುರ್ಗಿಯೂ ಪ್ರಕೃತಿಯ ಕಲಾರೂಪಿಣಿಯರು.

೧೪೨. ಈ ರೀತಿಯಾಗಿ ಭರತವರ್ಷದಲ್ಲಿ ಪ್ರಕೃತಿಯ ಕಲೆಯಿಂದ ಅವತರಿಸಿದವರು ಇನ್ನೂ ಅನೇಕರಿದ್ದಾರೆ. ಗ್ರಾಮಾಭಿಮಾನಿದೇವತೆಗಳೆಲ್ಲರೂ ಪ್ರಕೃತಿಯ ಕಲೆಯಿಂದವತರಿಸಿದವರೇ.

೧೪೩. ಲೋಕದಲ್ಲಿರುವ ಸ್ತ್ರೀಯರೆಲ್ಲರೂ ಪ್ರಕೃತಿಯ ಒಂದೊಂದೂ ಕಲೆಯ ಅಂಶದ ಅಂಶದಿಂದ ಜನಿಸಿದವರಾದುದರಿಂದ, ಸ್ತ್ರೀಯರಿಗೆ ಅಪಮಾನಗೊಳಿಸಿದರೆ ಪ್ರಕೃತಿಯನ್ನೇ ಅಪಮಾನ ಗೊಳಿಸಿದಂತಾಗುವುದು.

೧೪೪. ಪತಿಪುತ್ರವತಿಯೂ, ಪತಿವ್ರತೆಯೂ ಆದ ಬ್ರಾಹ್ಮಣಸ್ತ್ರೀಯನ್ನು ವಸ್ತ್ರಾಲಂಕಾರ ಗಂಧಪುಷ್ಪಗಳಿಂದ ಗೌರವಿಸಿ ಪೂಜಿಸಿದರೆ, ಪ್ರಕೃತಿಯನ್ನು ಪೂಜಿಸಿದಂತಾಗುವುದು.

೧೪೫. ಎಂಟು ವರ್ಷದ ಬ್ರಾಹ್ಮಣಪುತ್ರಿಯನ್ನು ವಸ್ತ್ರಾಲಂಕಾರ ಚಂದನಗಳಿಂದ ಪೂಜಿಸಿದರೆ ಪ್ರಕೃತಿಯನ್ನು ಪೂಜಿಸಿದಂತಾಗುವುದು.

ಸರ್ವಾಃ ಪ್ರಕೃತಿಸಂಭೂತಾ ಉತ್ತಮಾಧಮಮಧ್ಯಮಾಃ ।
ಸತ್ವಾಂಶಾಶ್ಚೋತ್ತಮಾ ಜ್ಞೇಯಾಃ ಸುಶೀಲಾಶ್ಚ ಪತಿವ್ರತಾಃ ॥ ೧೪೬ ॥

ಮಧ್ಯಮಾ ರಜಸಶ್ಚಾಂಶಾಸ್ತಾಶ್ಚ ಭೋಗ್ಯಾಃ ಪ್ರಕೀರ್ತಿತಾಃ ।
ಸುಖಸಂಭೋಗವತ್ಯಶ್ಚ ಸ್ವಕಾರ್ಯೇ ತತ್ಪರಾಃ ಸದಾ ॥ ೧೪೭ ॥

ಅಧಮಾಸ್ತಮಸಶ್ಚಾಂಶಾ ಅಜ್ಞಾತಕುಲಸಂಭವಾಃ ।
ದುರ್ಮುಖಾಃ ಕುಲಟಾ ಧೂರ್ತಾಃ ಸ್ವತಂತ್ರಾಃ ಕಲಹಪ್ರಿಯಾಃ ॥ ೧೪೮ ॥

ಪೃಥಿವ್ಯಾಂ ಕುಲಟಾಯಾಶ್ಚ ಸ್ವರ್ಗೇ ಚಾಪ್ಸರಸಾಂ ಗಣಾಃ ।
ಪ್ರಕೃತೇಸ್ತಮಸಶ್ಚಾಂಶಾಃ ಪುಂಶ್ಚಲ್ಯಃ ಪರಿಕೀರ್ತಿತಾಃ ॥ ೧೪೯ ॥

ಏವಂ ನಿಗದಿತಂ ಸರ್ವಂ ಪ್ರಕೃತೇರ್ಭೇದಪಂಚಕಂ ।
ತಾಃ ಸರ್ವಾಃ ಪೂಜಿತಾಃ ಪೃಥ್ವ್ಯಾಂ ಪುಣ್ಯಕ್ಷೇತ್ರೇ ಚ ಭಾರತೇ ॥ ೧೫೦ ॥

೧೪೬-೧೪೮. ಉತ್ತಮಮಧ್ಯಮಾಧಮರಾದ ಸ್ತ್ರೀಯರೆಲ್ಲರೂ ಪ್ರಕೃತಿಸಂಭೂತರೇ ಅಹುದು. ಆದರೆ ಉತ್ತಮಸ್ತ್ರೀಯರು ಪ್ರಕೃತಿಯ ಸತ್ವಾಂಶದಿಂದ ಜನಿಸಿ, ಸುಶೀಲೆಯರೂ, ಪತಿವ್ರತೆಯರೂ ಆಗಿರುವರು. ಪ್ರಕೃತಿಯರಜೋಗುಣದ ಅಂಶದಿಂದ ಜನಿಸಿದ ಮಧ್ಯಮಸ್ತ್ರೀಯರು ಯಾವಾಗಲೂ ಸುಖಸಂಭೋಗ ತತ್ಪರರಾಗಿ ಸ್ವಕಾರ್ಯನಿರತರಾಗಿರುವರು. ಪ್ರಕೃತಿಯ ತಮೋಗುಣದ ಅಂಶದಿಂದ ಜನಿಸುವ ಅಧಮಸ್ತ್ರೀಯರ ಕುಲಗೋತ್ರಗಳೂ ನಿಶ್ಚಿತವಿರುವುದಿಲ್ಲ. ಅಲ್ಲದೆ ಆ ಸ್ತ್ರೀಯರು ಸರ್ವದಾ ದುಷ್ಟಸ್ವಭಾವ ಉಳ್ಳವರೂ, ಕುಲಟೆಯರೂ, ಸ್ವತಂತ್ರರೂ, ಕಲಹಪ್ರಿಯರೂ ಆಗಿರುವರು.

೧೪೯. ಭೂಲೋಕದಲ್ಲಿ ಕುಲಟೆಯರೂ, ಸ್ವರ್ಗದಲ್ಲಿ ಅಪ್ಸರಸೆಯರೂ, ಪ್ರಕೃತಿಯ ತಮೋಗುಣದಿಂದ ಜನಿಸಿ ವೇಶ್ಯಯರೆಂದು ಪ್ರಸಿದ್ಧರಾಗಿರುವರು.

೧೫೦. ಈ ಪ್ರಕಾರವಾಗಿ ನಾನು ವಿವರಿಸಿದ ಪ್ರಕೃತಿಯ ಪಂಚವಿಧ ದೇವಿಯರೂ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಸರ್ವರಿಂದಲೂ ಪೂಜಿತರಾಗಿದ್ದಾರೆ.

ಪೂಜಿತಾ ಸುರಥೇನಾದೌ ದುರ್ಗಾ ದುರ್ಗಾರ್ತಿನಾಶಿನೀ ।
ದ್ವಿತೀಯಾ ರಾಮಚಂದ್ರೇಣ ರಾವಣಸ್ಯ ವಧಾರ್ಥಿನಾ ॥ ೧೫೧ ॥

ತತ್ಪಶ್ಚಾಜ್ಜಗತಾಂ ಮಾತಾ ತ್ರಿಷು ಲೋಕೇಷು ಪೂಜಿತಾ ।
ಜಾತಾದೌ ದಕ್ಷಪತ್ನ್ಯಾಂ ಚ ನಿಹಂತುಂ ದೈತ್ಯದಾನವಾನ್ ॥ ೧೫೨ ॥

ತತೋ ದೇಹಂ ಪರಿತ್ಯಜ್ಯ ಯಜ್ಞೇ ಭರ್ತುಶ್ಚ ನಿಂದಯಾ ।
ಜಜ್ಞೇ ಹಿಮವತಃ ಪತ್ನ್ಯಾಂ ಲೇಭೇ ಪಶುಪತಿಂ ಪತಿಂ ॥ ೧೫೩ ॥

ಗಣೇಶಶ್ಚ ಸ್ವಯಂ ಕೃಷ್ಣಃ ಸ್ಕಂದೋ ವಿಷ್ಣುಕಲೋದ್ಭವಃ ।
ಬಭೂವತುಸ್ತೌ ತನಯೌ ಪಶ್ಚಾತ್ತಸ್ಯಾಶ್ಚ ನಾರದ ॥ ೧೫೪ ॥

---

೧೫೧. ಆ ಐವರಲ್ಲಿ ದುರ್ಗ (ಕೋಟೆ) ದಂತಿರುವ ವಿಘ್ನವನ್ನು ಪರಿಹರಿಸಲು ಸಮರ್ಥಳಾದ ದುರ್ಗಾದೇವಿಯು ಮೊದಲು ರಾಜ್ಯಭ್ರಷ್ಟನಾದ ಸುರಥನೆಂಬ ರಾಜನಿಂದಲೂ, ಅನಂತರ ರಾವಣಸಂಹಾರಾಕಾಂಕ್ಷಿಯಾದ ರಾಮನಿಂದಲೂ ಪೂಜೆಹೊಂದಿದಳು.

೧೫೨. ಅನಂತರ ಜಗನ್ಮಾತೆಯೂ, ತ್ರಿಲೋಕಪೂಜಿತಳೂ ಆದ ಆ ದುರ್ಗಾದೇವಿಯು ದೈತ್ಯದಾನವರ ಸಂಹಾರಕ್ಕಾಗಿ ದಕ್ಷಪ್ರಜಾಪತಿಯ ಪತ್ನಿಯಲ್ಲಿ ಸತಿ ಎಂಬ ಹೆಸರಿನಿಂದ ಅವತರಿಸಿದಳು.

೧೫೩. ಆಗ, ತನ್ನ ತಂದೆಯಾದ ದಕ್ಷಬ್ರಹ್ಮನು ಮಾಡಿದ ಯಾಗಕ್ಕೆ ತನ್ನ ಪತಿಯಾದ ಈಶ್ವರನನ್ನು ಆಹ್ವಾನಿಸದೆ ನಿಂದಿಸಲು, ಅವಮಾನಿತಳಾದ ಆ ಸತಿಯು ಯಜ್ಞಕುಂಡದಲ್ಲಿ ದೇಹತ್ಯಾಗಮಾಡಿ ಹಿಮವಂತನ ಪತ್ನಿಯಾದ ಮೇನೆಯಲ್ಲಿ ಜನ್ಮವೆತ್ತಿ ಪುನಃ ಈಶ್ವರನನ್ನೇ ಪತಿಯನ್ನಾಗಿ ವರಿಸಿದಳು.

೧೫೪. ಎಲೈ ನಾರದನೇ, ಪರ್ವತರಾಜಪುತ್ರಿಯಾದ ಆ ಪಾರ್ವತಿಗೆ ಶ್ರೀಕೃಷ್ಣ ಪರಮಾತ್ಮನ ಅಂಶದಿಂದ ಗಣೇಶನೂ, ವಿಷ್ಣುವಿನ ಕಲೆಯಿಂದ ಷಣ್ಮುಖನೂ, ಮಕ್ಕಳಾಗಿ ಜನಿಸಿದರು.

ಲಕ್ಷ್ಮೀರ್ಮಂಗಲಭೂಪೇನ ಪ್ರಥಮೇ ಪರಿಪೂಜಿತಾ ।
ತ್ರಿಷು ಲೋಕೇಷು ತತ್ಪಶ್ಚಾದ್ದೇವತಾಮುನಿಮಾನವೈಃ ॥ ೧೫೫ ॥

ಸಾವಿತ್ರೀ ಪ್ರಥಮಂ ಚಾಪಿ ಭಕ್ತ್ಯಾ ವೈ ಪರಿಪೂಜಿತಾ ।
ತತ್ಪಶ್ಚಾತ್ತ್ರಿಷು ಲೋಕೇಷು ದೇವತಾಮುನಿಮಾನವೈಃ ॥ ೧೫೬ ॥

ಆದೌ ಸರಸ್ವತೀ ದೇವೀ ಬ್ರಹ್ಮಣಾ ಪರಿಪೂಜಿತಾ ।
ತತ್ಪಶ್ಚಾತ್ತ್ರಿಷು ಲೋಕೇಷು ದೇವತಾಮುನಿಮಾನವೈಃ ॥ ೧೫೭ ॥

ಪ್ರಥಮಂ ಪೂಜಿತಾ ರಾಧಾ ಗೋಲೋಕೇ ರಾಸಮಂಡಲೇ ।
ಪೌರ್ಣಮಾಸ್ಯಾಂ ಕಾರ್ತಿಕಸ್ಯ ಕೃಷ್ಣೇನ ಪರಮಾತ್ಮನಾ ॥ ೧೫೮ ॥

ಗೋಪಿಕಾಭಿಶ್ಚ ಗೋಪೈಶ್ಚ ಬಾಲಿಕಾಭಿಶ್ಚ ಬಾಲಕೈಃ ।
ಗವಾಂ ಗಣೈಃ ಸುರಗಣೈಸ್ತತ್ಪಶ್ಚಾನ್ಮಾಯಯಾ ಹರೇಃ ॥ ೧೫೯ ॥

---

೧೫೫. ದ್ವಿತೀಯಳಾದ ಲಕ್ಷ್ಮೀದೇವಿಯು ಮೊದಲು ಮಂಗಲಭೂಪನಿಂದ ಪೂಜೆಗೊಂಡು ಅನಂತರ ದೇವತೆಗಳಿಂದಲೂ, ಮುನಿಮಾನವರಿಂದಲೂ ಲೋಕತ್ರಯದಲ್ಲೂ ಪೂಜಾರ್ಹಳಾದಳು.

೧೫೬. ಅಂತೆಯೇ ಸಾವಿತ್ರಿದೇವಿಯು ಮೊದಲು ವೈರಾಗ್ಯಪತ್ನಿಯಾದ ಭಕ್ತಿಯಿಂದ ಪೂಜೆಗೊಂಡು, ಅನಂತರ ಮೂರು ಲೋಕಗಳಲ್ಲೂ ದೇವತೆ, ಮುನಿ ಮತ್ತು ಮಾನವರಿಂದ ಪೂಜ್ಯಳಾದಳು.

೧೫೭. ಸರಸ್ವತಿದೇವಿಯೂ ಮೊದಲು ಬ್ರಹ್ಮನಿಂದ ಪೂಜಿತಳಾಗಿ ಅನಂತರ ದೇವತಾಮುನಿಮಾನವರಿಂದ ಲೋಕತ್ರಯದಲ್ಲೂ ಪೂಜಿತಳಾದಳು.

೧೫೮-೧೫೯. ರಾಧಾದೇವಿಯು ಮೊದಲು ಗೋಲೋಕದ ರಾಸಮಂಡಲದಲ್ಲಿ ಶ್ರೀಕೃಷ್ಣಪರಮಾತ್ಮನಿಂದ ಕಾರ್ತಿಕಮಾಸದ ಪೂರ್ಣಿಮೆಯ ದಿವಸ ಪೂಜಿತಳಾಗಿ, ಅನಂತರ ಗೋಪಗೋಪಿಯರಿಂದಲೂ, ಬಾಲಬಾಲೆಯರಿಂದಲೂ, ಗೋವುಗಳಿಂದಲೂ ಅಷ್ಟೇಕೆ! ದೇವತೆಗಳಿಂದಲೂ ಸಹ ಪೂಜಾರ್ಹಳಾದಳು.

ತದಾ ಬ್ರಹ್ಮಾದಿಭಿರ್ದೇವೈರ್ಮುನಿಭಿರ್ಮನುಭಿಸ್ತಥಾ ।
ಪುಷ್ಪಧೂಪಾದಿಭಿರ್ಭಕ್ತ್ಯಾ ಪೂಜಿತಾ ವಂದಿತಾ ಸದಾ ॥ ೧೬೦ ॥

ಪೃಥಿವ್ಯಾಂ ಪ್ರಥಮೇ ದೇವೀ ಸುಯಜ್ಞೇನ ಚ ಪೂಜಿತಾ ।
ಶಂಕರೇಣೋಪದಿಷ್ಟೇನ ಪುಣ್ಯಕ್ಷೇತ್ರೇ ಚ ಭಾರತೇ ॥ ೧೬೧ ॥

ತ್ರಿಷು ಲೋಕೇಷು ತತ್ಪಶ್ಚಾದಾಜ್ಞಯಾ ಪರಮಾತ್ಮನಃ ।
ಪುಷ್ಪಧೂಪಾದಿಭಿರ್ಭಕ್ತ್ಯಾ ಪೂಜಿತಾ ಮುನಿಭಿಃ ಸುರೈಃ ॥ ೧೬೨ ॥

ಕಲಾ ಯಾ ಯಾಃ ಸುಸಂಭೂತಾಃ ಪೂಜಿತಾಸ್ತಾಶ್ಚ ಭಾರತೇ ।
ಪೂಜಿತಾ ಗ್ರಾಮದೇವ್ಯಶ್ಚ ಗ್ರಾಮೇ ಚ ನಗರೇ ಮುನೇ ॥ ೧೬೩ ॥

---

೧೬೦. ಅನಂತರ ಬ್ರಹ್ಮಾದಿದೇವತೆಗಳಿಂದಲೂ, ಮುನಿಮನುಗಳಿಂದಲೂ, ಪಂಚೋಪಚಾರ ಪೂಜಿತಳೂ, ಭಕ್ತಿವಂದಿತಳೂ ಆದಳು.

೧೬೧. ಆ ರಾಧಾದೇವಿಯು ಪೃಥ್ವಿಯ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ, ಮೊದಲು ಶಂಕರನ ಉಪದೇಶಹೊಂದಿದ ಸುಯಜ್ಞನಿಂದ ಪೂಜಿತಳಾದಳು.

೧೬೨. ಅನಂತರ ಪರಮಾತ್ಮನ ಆಜ್ಞೆಯಿಂದ ದೇವತಾಮುನಿಮಾನವರು ಲೋಕತ್ರಯದಲ್ಲೂ ಆ ದೇವಿಯನ್ನು ಪುಷ್ಪಧೂಪಾದಿ ಪಂಚೋಪಚಾರಗಳಿಂದ ಪೂಜಿಸಲಾರಂಭಿಸಿದರು.

೧೬೩. ಇದೇ ರೀತಿಯಾಗಿ ಪ್ರಕೃತಿಯ ಕಲೆಯಿಂದವತರಿಸಿದ ದೇವಿಯರೂ ಮತ್ತು ಗ್ರಾಮದೇವತೆಯರೂ ಭರತಖಂಡದ ಆಯಾಯ ಗ್ರಾಮನಗರಗಳಲ್ಲಿ ಪೂಜ್ಯರಾದರು.

ಏವಂ ತೇ ಕಥಿತಂ ಸರ್ವಂ ಪ್ರಕೃತೇಶ್ಚರಿತಂ ಶುಭಂ ।
ಯಥಾಗಮಂ ಲಕ್ಷಣಂ ಚ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೬೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರಾಯಣ ನಾರದಸಂವಾದೇ• ಪ್ರಕೃತಿಸ್ವರೂಪ ತದ್ಭೇದ ವರ್ಣನಂ ನಾಮ ಪ್ರಥಮೋಽಧ್ಯಾಯಃ

---

೧೬೪. ಎಲೈ, ನಾರದಮುನಿಯೇ, ಇಂತು ಪ್ರಕೃತಿಯ ಲಕ್ಷಣವನ್ನೂ, ಚರಿತ್ರೆಯನ್ನೂ, ಶಾಸ್ತ್ರಾನುಗುಣವಾಗಿ ತಿಳಿಸಿದುದಾಯಿತು. ಮತ್ತೇನನ್ನು ತಿಳಿಯಲು ನಿನ್ನ ಅಪೇಕ್ಷೆಯಿರುವುದು?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದ ನಾರದ ನಾರಾಯಣ ಸಂವಾದದಲ್ಲಿ ಪ್ರಕೃತಿಸ್ವರೂಪ ಮತ್ತು ಅದರ ವಿಭಾಗ ವರ್ಣನಾತ್ಮಕವಾದ ಮೊದಲನೆಯ ಅಧ್ಯಾಯವು ಮುಗಿದುದು.

ಒಂದನೆಯ ಅಧ್ಯಾಯದ ಸಾರಾಂಶವು

'ಎಲೈ, ನಾರಾಯಣ ಮಹರ್ಷಿಗಳೇ, ಬ್ರಹ್ಮಖಂಡದಲ್ಲಿ ಬ್ರಹ್ಮಸ್ವರೂಪವನ್ನು ವಿಸ್ತಾರವಾಗಿ ತಿಳಿದಂತಾಯಿತು. ಆದರೆ ಅಲ್ಲಿ ಬಂದ ಪ್ರಕೃತಿಯ ವಿಚಾರವು ನನಗೆ ಸ್ಪಷ್ಟವಾಗಲಿಲ್ಲ. ಪ್ರಕೃತಿಯ ಉತ್ಪತ್ತಿ ಹೇಗೆ? ಪ್ರಕೃತಿ ಸ್ವರೂಪವಾವುದು? ಪ್ರಕೃತಿಯು ದುರ್ಗಾ, ರಾಧಾ, ಲಕ್ಷ್ಮೀ, ಸರಸ್ವತಿ, ಸಾವಿತ್ರಿ ಎಂದು ಐದು ವಿಧವಾಗಲು ಕಾರಣವೇನು? ಈ ದೇವಿಯರ ಪೂಜಾವಿಧಾನವೆಂತು? ಇವುಗಳನ್ನು ತಾವು ವಿಸ್ತಾರವಾಗಿ ಅರುಹಬೇಕು' ಎಂದು ಬೇಡಿದ ನಾರದನಿಗೆ ಉತ್ತರವೀಯುತ್ತಾ ನಾರಾಯಣ ಮಹರ್ಷಿಗಳು ಇಂತೆಂದರು—'ಎಲೈ, ವತ್ಸ ನಾರದನೇ! ಗಹನವಾದ ಪ್ರಕೃತಿ ಸ್ವರೂಪವನ್ನು ಯಥಾಮತಿ ಅರುಹುವೆನು. ತ್ರಿಗುಣಾತ್ಮಸ್ವರೂಪಳೂ, ಸರ್ವಶಕ್ತಿಸಮನ್ವಿತಳೂ, ಸೃಷ್ಟಿಯಲ್ಲಿ ಸಮರ್ಥಳೂ ಆದವಳೇ ಪ್ರಕೃತಿಯು. ಸೃಷ್ಟ್ಯುನ್ಮುಖನಾದ ಪರಮಾತ್ಮನ ವಾಮಾರ್ಧಾಂಗವೇ ಪ್ರಕೃತಿಯೆನಿಸಿದಳು. ಪರಮಾತ್ಮನ ಇಚ್ಛೆಯಂತೆ ಆಕೆಯು ಸೃಷ್ಟಿಕಾರ್ಯಕ್ಕಾಗಿ ಐದು ವಿಧವಾದಳು. ಅವರಲ್ಲಿ ಶಿವಶಕ್ತಿಸ್ವರೂಪಳಾದ ದುರ್ಗಾದೇವಿಯೂ, ನಾರಾಯಣನ ಶಕ್ತಿರೂಪಿಣಿಯಾದ ಮಹಾಲಕ್ಷ್ಮಿಯೂ, ಜ್ಞಾನಾಧಿಷ್ಠಾತ್ರಿದೇವಿಯಾದ ವಾಗ್ದೇವಿಯೂ, ಬ್ರಹ್ಮಪತ್ನಿಯಾದ ಸಾವಿತ್ರಿಯೂ, ಕೃಷ್ಣಪರಮಾತ್ಮನ ಪ್ರಾಣಪ್ರಿಯಳಾದ ರಾಧಾದೇವಿಯೂ, ಉಪಾಧಿಭೇದದಿಂದ ಭಿನ್ನರಾಗಿ ಕಾಣುವರೇ ಹೊರತು ವಸ್ತುತಃ ಅಭಿನ್ನರು. ಪ್ರಕೃತಿಯ ಅಂಶದಿಂದಲೂ, ಕಲೆಯಿಂದಲೂ, ಅಸಂಖ್ಯದೇವಿಯರು ಅವತರಿಸಿದ್ದಾರೆ. ಅವರಲ್ಲಿ ಗಂಗೆ, ತುಲಸಿ, ಮನಸಾ, ದೇವಸೇನೆ, ಚಂಡಿಕೆ, ಕಾಳಿ, ವಸುಂಧರೆ ಇವರೆಲ್ಲರೂ ಪ್ರಕೃತಿಯ ಅಂಶಜರು. ಸ್ವಾಹಾ ಮುಂತಾದ ಪತಿವ್ರತಾಶಿರೋಮಣಿಯರೂ, ಎಲ್ಲ ಗ್ರಾಮಾಭಿಮಾನಿದೇವತೆಗಳೂ, ಪ್ರಕೃತಿಯ ಕಲೆಯಿಂದಲೇ ಜನಿಸಿದವರು. ಅಷ್ಟೇಕೆ ಪ್ರಪಂಚದಲ್ಲಿರುವ ಉತ್ತಮ, ಮಧ್ಯಮ, ಅಧಮಸ್ತ್ರೀಯರೆಲ್ಲರೂ ಕ್ರಮವಾಗಿ ಪ್ರಕೃತಿಯ ಸತ್ವರಜಸ್ತಮೋಗುಣಗಳಿಂದ ಜನಿಸಿದವರು. ಆದ್ದರಿಂದ ಸ್ತ್ರೀಯರಿಗೆ ಅಪಮಾನಮಾಡಿದರೆ ಪ್ರಕೃತಿಗೇ ಅಪಮಾನ ಮಾಡಿದಂತಾಗುವುದು. ಪ್ರಕೃತಿಯ ಪೂರ್ಣಸ್ವರೂಪಿಣಿಯರಾದ ದೇವಿಯರಲ್ಲಿ

ದುರ್ಗಾದೇವಿಯು ಸುರಥನಿಂದಲೂ, ಅನಂತರ ಶ್ರೀರಾಮಚಂದ್ರನಿಂದಲೂ ಪೂಜೆಗೊಂಡಳು. ಲಕ್ಷ್ಮಿಯು ಮಂಗಳಭೂಪನಿಂದಲೂ, ಸಾವಿತ್ರಿಯು ಭಕ್ತಿಯಿಂದಲೂ, ಸರಸ್ವತಿಯು ಬ್ರಹ್ಮನಿಂದಲೂ, ರಾಧೆಯು ಶ್ರೀಕೃಷ್ಣಪರಮಾತ್ಮನಿಂದಲೂ ಮೊದಲು ಪೂಜಿತರಾಗಿ, ಅನಂತರ ಲೋಕಮಾನ್ಯರಾದರು. ಪ್ರಕೃತಿಯ ಅಂಶ ಮತ್ತು ಕಲೆಯಿಂದ ಜನಿಸಿದ ದೇವಿಯರಲ್ಲಿ ದೇಶಕಾಲಾನುಗುಣವಾಗಿ ಕೆಲವರು ಪೂಜ್ಯರಾದರು.

ಇಂತು ಯಥಾಮತಿ ಪ್ರಕೃತಿಯ ಸ್ವರೂಪವನ್ನು ತಿಳಿಸಿದುದಾಯಿತು. ಇನ್ನೇನನ್ನು ವಿವರಿಸಲಿ' ಎಂದು ನಾರಾಯಣ ಮಹರ್ಷಿಗಳು ಕೇಳಿದರು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ದ್ವಿತೀಯೋऽಧ್ಯಾಯಃ ॥

॥ ನಾರದ ಉವಾಚ ॥

ಸಮಾಸೇನ ಶ್ರುತಂ ಸರ್ವಂ ದೇವೀನಾಂ ಚರಿತಂ ವಿಭೋ ।
ವಿಬೋಧನಾರ್ಥಂ ಬೋಧಸ್ಯ ವ್ಯಾಸತೋ ವಕ್ತುಮರ್ಹಸಿ ॥ ೧ ॥

ಸೃಷ್ಟೇರಾದ್ಯಾ ಸೃಷ್ಟಿವಿಧೌ ಕಥಮಾವಿರ್ಬಭೂವ ಹ ।
ಕಥಂ ವಾ ಪಂಚಧಾ ಭೂತಾ ವದ ವೇದವಿದಾಂ ವರ ॥ ೨ ॥

ಭೂತಾ ಯಾ ಯಾಶ್ಚ ಕಲಯಾ ತಯಾ ತ್ರಿಗುಣಯಾ ಭವೇ ।
ವ್ಯಾಸೇನ ತಾಸಾಂ ಚರಿತಂ ಶ್ರೋತುಮಿಚ್ಛಾಮಿ ಸಾಂಪ್ರತಂ ॥ ೩ ॥

ಎರಡನೆಯ ಅಧ್ಯಾಯವು

೧. ನಾರದ:—ಎಲೈ, ಮಹರ್ಷಿಯೇ, ದೇವಿಯರ ಚರಿತ್ರೆಎಲ್ಲವೂ ಸಂಗ್ರಹವಾಗಿ ತಿಳಿದಂತಾಯಿತು. ಆದರೆ ನನ್ನ ತಿಳಿವಳಿಕೆಯ ವಿಸ್ತಾರಕ್ಕಾಗಿ ಪ್ರಕೃತಿ ಸ್ವರೂಪವನ್ನು ಇನ್ನೂ ವಿಶದವಾಗಿ ತಿಳಿಸಬೇಕು.

೨. ಸಕಲಸೃಷ್ಟಿಗೂ ಪ್ರಥಮಳಾದ ಪ್ರಕೃತಿಯು ಮೊದಲು ಆವಿರ್ಭವಿಸಿದು ದೆಂತು? ಅನಂತರ ಐದುಬಗೆಯಾದುದು ಹೇಗೆ? ಎಂಬುದನ್ನು ವೇದಜ್ಞರಾದ ನೀವು ವಿವರಿಸಬೇಕು.

೩. ತ್ರಿಗುಣಾತ್ಮಕಳಾದ ಆ ಪ್ರಕೃತಿಯು ಕಲೆಯಿಂದ ಪ್ರಪಂಚದಲ್ಲಿ ಜನಿಸಿದವರ ಚರಿತ್ರೆಎಲ್ಲವನ್ನೂ ವಿಸ್ತಾರವಾಗಿ ತಿಳಿಯಲು ನನಗೆ ಬಹಳ ಕುತೂಹಲ ವುಂಟಾಗಿದೆ.

ತಾಸಾಂ ಜನ್ಮಾನುಕಥನಂ ಧ್ಯಾನಂ ಪೂಜಾವಿಧಿಂ ಪರಂ ।
ಸ್ತೋತ್ರಂ ಕವಚಮೈಶ್ವರ್ಯಂ ಶೌರ್ಯಂ ವರ್ಣಯ ಮಂಗಲಂ ॥ ೪ ॥

॥ ಶ್ರೀ ನಾರಾಯಣ ಉವಾಚ ॥

ನಿತ್ಯಾತ್ಮಾ ಚ ನಭೋ ನಿತ್ಯಂ ಕಾಲೋ ನಿತ್ಯೋ ದಿಶೋ ಯಥಾ ।
ವಿಶ್ವೇಷಾಂ ಗೋಕುಲಂ ನಿತ್ಯಂ ನಿತ್ಯೋ ಗೋಲೋಕ ಏವ ಚ ॥ ೫ ॥

ತದೇಕದೇಶೋ ವೈಕುಂಠೋ ಲಂಬಭಾಗಃ ಸ ನಿತ್ಯಕಃ ।
ತಥೈವ ಪ್ರಕೃತಿರ್ನಿತ್ಯಾ ಬ್ರಹ್ಮಲೀನಾ ಸನಾತನೀ ॥ ೬ ॥

ಯಥಾಗ್ನೌ ದಾಹಿಕಾ ಚಂದ್ರೇ ಪದ್ಮೇ ಶೋಭಾ ಪ್ರಭಾ ರವೌ ।
ಶಶ್ವದ್ಯುಕ್ತಾ ನ ಭಿನ್ನಾ ಸಾ ತಥಾ ಪ್ರಕೃತಿರಾತ್ಮನಿ ॥ ೭ ॥

---

೪. ಆ ದೇವಿಯರ ಉತ್ಪತ್ತಿ, ಧ್ಯಾನಪೂಜಾವಿಧಿ, ಸ್ತೋತ್ರ, ಕವಚ ಮುಂತಾದುವುಗಳ ಕ್ರಮ, ಅವರ ಐಶ್ವರ್ಯ ಮತ್ತು ಶೌರ್ಯ ಇವುಗಳನ್ನು ದಯವಿಟ್ಟು ವಿವರಿಸಬೇಕು.

೫. ಶ್ರೀನಾರಾಯಣ ಮಹರ್ಷಿ:—ಆತ್ಮನೂ, ತದಭಿನ್ನವಾದ ಆಕಾಶ ಕಾಲದಿಕ್ಕುಗಳೂ, ಗೋಲೋಕ ಮತ್ತು ಗೋಕುಲವೂ ನಿತ್ಯವಾದುವು. ಪ್ರಾಕೃತಿಕ ಪ್ರಳಯದಲ್ಲಿಯೂ ಇವು ಅವಿನಾಶಿಯಾಗಿರುವುವು.

೬. ಅಂತೆಯೇ ಲಂಬಮಾನವೂ ಗೋಲೋಕದ ಏಕದೇಶವೂ ಆದ ವೈಕುಂಠವೂ, ಪರಬ್ರಹ್ಮನಲ್ಲಿಯೇ ಲೀನಳಾಗಿರುವ ಪ್ರಕೃತಿಯೂ, ನಿತ್ಯವಾದುವು.

೭. ಅಗ್ನಿಯಲ್ಲಿ ದಾಹಶಕ್ತಿಯೂ, ಚಂದ್ರ ಮತ್ತು ಪದ್ಮಗಳಲ್ಲಿ ಕಾಂತಿಯೂ, ಸೂರ್ಯನಲ್ಲಿ ತೇಜಸ್ಸೂ, ಅನವರತ ಅಭೇದದಿಂದಿರುವಂತೆ ಆತ್ಮಶಕ್ತಿರೂಪವಾದ ಪ್ರಕೃತಿಯೂ ಆತ್ಮನಲ್ಲಿ ಅಭೇದದಿಂದಿರುವುದು.

ವಿನಾ ಸ್ವರ್ಣಂ ಸ್ವರ್ಣಕಾರಃ ಕುಂಡಲಂ ಕರ್ತುಮಕ್ಷಮಃ ।
ವಿನಾ ಮೃದಾ ಕುಲಾಲೋ ಹಿ ಘಟಂ ಕರ್ತುಂ ನ ಹೀಶ್ವರಃ ॥ ೮ ॥

ನ ಹಿ ಕ್ಷಮಸ್ತಥಾ ಬ್ರಹ್ಮಾ ಸೃಷ್ಟಿಂ ಸ್ರಷ್ಟುಂ ತಯಾ ವಿನಾ ।
ಸರ್ವಶಕ್ತಿಸ್ವರೂಪಾ ಸಾ ತಯಾ ಸ್ಯಾಚ್ಛಕ್ತಿಮಾನ್ಸದಾ ॥ ೯ ॥

ಐಶ್ವರ್ಯವಚನಃ ಶಕ್ಷ ತಿಃ ಪರಾಕ್ರಮವಾಚಕಃ ।
ತತ್ಸ್ವರೂಪಾ ತಯೋರ್ದಾತ್ರೀ ಯಾ ಸಾ ಶಕ್ತಿಃ ಪ್ರಕೀರ್ತಿತಾ ॥ ೧೦ ॥

ಸಮೃದ್ಧಿಬುದ್ಧಿಸಂಪತ್ತಿಯಶಸಾಂ ವಚನೋ ಭಗಃ ।
ತೇನ ಶಕ್ತಿರ್ಭಗವತೀ ಭಗರೂಪಾ ಚ ಸಾ ಸದಾ ॥ ೧೧ ॥

ತಯಾ ಯುಕ್ತಃ ಸದಾತ್ಮಾ ಚ ಭಗವಾಂಸ್ತೇನ ಕಥ್ಯತೇ ।
ಸ ಚ ಸ್ವೇಚ್ಛಾಮಯಃ ಕೃಷ್ಣಃ ಸಾಕಾರಶ್ಚ ನಿರಾಕೃತಿಃ ॥ ೧೨ ॥

೮–೯. ಅಕ್ಕಸಾಲೆಯು ಚಿನ್ನವಿಲ್ಲದೆ ಕುಂಡಲವನ್ನು ಎಂತು ಮಾಡಲಾರನೋ, ಕುಂಬಾರನು ಮಣ್ಣಿಲ್ಲದೆ ಗಡಿಗೆಯನ್ನೆಂತು ಮಾಡಲಾರನೋ, ಅಂತೆಯೇ ಸರ್ವಶಕ್ತಿ ಸ್ವರೂಪಿಣಿಯಾದ ಪ್ರಕೃತಿಯಿಲ್ಲದೆ ಬ್ರಹ್ಮನು ಸೃಷ್ಟಿಮಾಡಲು ಅಸಮರ್ಥನಾಗುವನು. ಪ್ರಕೃತಿಯೇ ಬ್ರಹ್ಮನ ಸೃಷ್ಟಿಶಕ್ತಿಯು. ಅವಳಿಂದಲೇ ಬ್ರಹ್ಮನು ಸೃಜಿಸಲು ಶಕ್ತನಾಗುವನು.

೧೦. 'ಶಕ್' ಎಂದರೆ ಐಶ್ವರ್ಯವೆಂದೂ, 'ತಿ' ಎಂದರೆ ಪರಾಕ್ರಮವೆಂದೂ, ಅರ್ಥವಾಗುವುದರಿಂದ ಐಶ್ವರ್ಯ ಮತ್ತು ಪರಾಕ್ರಮವನ್ನು ಕೊಡುವವಳೂ, ತತ್ಸ್ವರೂಪಿಣಿಯೂ ಆದವಳೇ ಶಕ್ತಿ ಎನಿಸುವಳು.

೧೧. 'ಭಗ' ಎಂದರೆ ಸಮೃದ್ಧಿ, ಬುದ್ಧಿ, ಸಂಪತ್ತಿ ಮತ್ತು ಯಶಸ್ಸು ಎಂಬ ಅರ್ಥಗಳಾಗುವುವು. ಅವು ಯಾರಿಗೆ ಉಂಟೋ ಆ ಆದಿಶಕ್ತಿಯನ್ನು ಭಗವತೀ ಎಂದೂ, ಭಗಸ್ವರೂಪಳೆಂದೂ ಹೇಳುವರು.

೧೨. ಅದಕಾರಣದಿಂದಲೇ ಪ್ರಕೃತಿಶಕ್ತಿಯುತನಾದ ಆತ್ಮನನ್ನು ಭಗವಾನ್ ಎಂದು ಕರೆಯುವರು. ಆ ಕೃಷ್ಣಪರಮಾತ್ಮನು ನಿರಾಕಾರನಾದರೂ ಸ್ವೇಚ್ಛಾಮಯನಾದುದರಿಂದ ಭಕ್ತಾನುಗ್ರಹವಿಗ್ರಹಿಯಾಗುವನು.

ತೇಜೋರೂಪಂ ನಿರಾಕಾರಂ ಧ್ಯಾಯಂತೇ ಯೋಗಿನಃ ಸದಾ ।
ವದಂತಿ ತೇ ಪರಂಬ್ರಹ್ಮ ಪರಮಾತ್ಮಾನಮೀಶ್ವರಂ ॥ ೧೩ ॥

ಅದೃಶ್ಯಂ ಸರ್ವದ್ರಷ್ಟಾರಂ ಸರ್ವಜ್ಞಂ ಸರ್ವಕಾರಣಂ ।
ಸರ್ವದಂ ಸರ್ವರೂಪಾಂತಮರೂಪಂ ಸರ್ವಪೋಷಕಂ ॥ ೧೪ ॥

ವೈಷ್ಣವಾಸ್ತಂ ನ ಮನ್ಯಂತೇ ತದ್ಭಕ್ತಾಃ ಸೂಕ್ಷ್ಮದರ್ಶಿನಃ ।
ವದಂತಿ ಇತಿ ತೇ ಕಸ್ಯ ತೇಜಸ್ತೇಜಸ್ವಿನಂ ವಿನಾ ॥ ೧೫ ॥

ತೇಜೋಮಂಡಲಮಧ್ಯಸ್ಥಂ ಬ್ರಹ್ಮತೇಜಸ್ವಿನಂ ಪರಂ ।
ಸ್ವೇಚ್ಛಾಮಯಂ ಸರ್ವರೂಪಂ ಸರ್ವಕಾರಣಕಾರಣಂ ॥ ೧೬ ॥

ಅತೀವ ಸುಂದರಂ ರೂಪಂ ಬಿಭ್ರತಂ ಸುಮನೋಹರಂ ।
ಕಿಶೋರವಯಸಂ ಶಾಂತಂ ಸರ್ವಕಾಂತಂ ಪರಾತ್ಪರಂ ॥ ೧೭ ॥

೧೩–೧೪. ಯೋಗಿಗಳು "ಆ ಪರಮಾತ್ಮನು ಸರ್ವದ್ರಷ್ಟನಾದರೂ ಅದೃಶ್ಯನೆಂದೂ, ಸರ್ವರೂಪಗಳಲ್ಲಿದ್ದರೂ ಅರೂಪನೆಂದೂ, ಸರ್ವಜ್ಞನೂ, ಸರ್ವಕಾರಣನೂ, ಸರ್ವಪೋಷಕನೂ ಮತ್ತು ಸರ್ವದನೂ ಆದ ಅವನು ಕೇವಲ ನಿರಾಕಾರಪರಂಜ್ಯೋತಿಸ್ವರೂಪನೆಂದೂ" ಸರ್ವದಾ ಧ್ಯಾನಿಸುವರು.

೧೫. ವಿಷ್ಣುಭಕ್ತರೂ, ಸೂಕ್ಷ್ಮದರ್ಶಿಗಳೂ ಆದ ವೈಷ್ಣವರು ಪರಮಾತ್ಮನು ತೇಜೋಮಯನೆಂಬುವುದನ್ನು ಒಪ್ಪುವುದಿಲ್ಲ. "ತೇಜಸ್ವಿಯಾದ ಧರ್ಮಿಯಿಲ್ಲದೆ ತೇಜೋರೂಪವಾದ ಧರ್ಮವಿರುವುದೆಂತು? ಆ ತೇಜಸ್ಸು ಯಾರದು?" ಎಂದು ಅವರ ಆಕ್ಷೇಪ.

೧೬–೧೭. ಆದುದರಿಂದ ಸ್ವೇಚ್ಛಾಮಯನೂ, ಸರ್ವರೂಪನೂ, ಸರ್ವಕಾರಣ ಕಾರಣನೂ, ಪರಾತ್ಪರನೂ ಆದ ಆ ಪರಮಾತ್ಮನು ತೇಜೋಮಂಡಲಮಧ್ಯದಲ್ಲಿ ಬಹಳ ಮನೋಹರವೂ ಮತ್ತು ಸುಂದರವೂ ಆದ ರೂಪವನ್ನು ಧರಿಸಿ, ಕಿಶೋರ ವಯಸ್ಸನಾಗಿ ಸರ್ವರಿಗೂ ಆಹ್ಲಾದಕನಾಗಿದ್ದಾನೆ.

ನವೀನನೀರದಾಭಾಸಂ ರಾಸೈಕ ಶ್ಯಾಮಸುಂದರಂ ।
ಶರನ್ಮಧ್ಯಾಹ್ನಪದ್ಮೌಘಶೋಭಾಮೋಚಕಲೋಚನಂ ॥ ೧೮ ॥

ಮುಕ್ತಾಸಾರಮಹಾಸ್ವಚ್ಛದಂತಪಂಕ್ತಿಮನೋಹರಂ ।
ಮಯೂರಪುಚ್ಛಚೂಡಂ ಚ ಮಾಲತೀಮಾಲ್ಯಮಂಡಿತಂ ॥ ೧೯ ॥

ಸುನಾಸಂ ಸಸ್ಮಿತಂ ಶಶ್ವದ್ಭಕ್ತಾನುಗ್ರಹಕಾರಕಂ ।
ಜ್ವಲದಗ್ನಿವಿಶುದ್ಧೈಕಪೀತಾಂಶುಕಸುಶೋಭಿತಂ ॥ ೨೦ ॥

ದ್ವಿಭುಜಂ ಮುರಳೀಹಸ್ತಂ ರತ್ನಭೂಷಣಭೂಷಿತಂ ।
ಸರ್ವಾಧಾರಂ ಚ ಸರ್ವೇಶಂ ಸರ್ವಶಕ್ತಿಯುತಂ ವಿಭುಂ ॥ ೨೧ ॥

ಸರ್ವೈಶ್ವರ್ಯಪ್ರದಂ ಸರ್ವಂ ಸ್ವತಂತ್ರಂ ಸರ್ವಮಂಗಲಂ ।
ಪರಿಪೂರ್ಣತಮಂ ಸಿದ್ಧಂ ಸಿದ್ಧಿದಂ ಸಿದ್ಧಿಕಾರಣಂ ॥ ೨೨ ॥

೧೮–೨೦. ಸಾಕಾರನಾದ ಶ್ರೀಕೃಷ್ಣಪರಮಾತ್ಮನು ನವಮೇಘದಂತೆ ಶ್ಯಾಮಸುಂದರನಾಗಿ, ಶರನ್ಮಧ್ಯಾಹ್ನದ ತಾವರೆಯ ಕಾಂತಿಯನ್ನು ತಿರಸ್ಕರಿಸುವ ಲೋಚನದ್ವಯಗಳಿಂದಲೂ, ಮುಕ್ತಾಹಾರದಂತೆ ಸ್ವಚ್ಛವೂ, ಮನೋಹರವೂ ಆದ ದಂತಪಂಕ್ತಿಗಳಿಂದಲೂ, ಉನ್ನತವಾದ ನಾಸಿಕ(ಮೂಗು) ದಿಂದಲೂ, ಶಿಖೆಯಲ್ಲಿರುವ ನವಿಲುಗರಿಯಿಂದಲೂ, ಕಂಠದಲ್ಲಿರುವ ಮಾಲತೀ ಮಾಲೆಯಿಂದಲೂ, ಅಗ್ನಿಯಂತೆ ಪರಿಶುದ್ಧವಾದ ಉಟ್ಟ ಪೀತಾಂಬರದಿಂದಲೂ, ಸುಶೋಭಿತನಾಗಿ, ಸ್ಮಿತವದನದಿಂದ ಭಕ್ತಾನುಗ್ರಹಪರನಾಗಿದ್ದಾನೆ.

೨೧–೨೨. ಸರ್ವಾಧಾರನೂ, ಸರ್ವಶಕ್ತಿಯುತನೂ, ಸರ್ವೇಶನೂ, ವಿಶ್ವವ್ಯಾಪಿಯೂ, ಸರ್ವಮಂಗಳಸ್ವರೂಪನೂ, ಪರಿಪೂರ್ಣತಮನೂ ಆದ ಆ ಪರಮಾತ್ಮನು ರತ್ನಾಲಂಕಾರಭೂಷಿತನಾಗಿ, ಕೈಯಲ್ಲಿ ಕೊಳಲನ್ನು ಹಿಡಿದು ಸಕಲರ ಇಷ್ಟಾರ್ಥಸಿದ್ಧಿಪ್ರದನೂ, ಸರ್ವೈಶ್ವರ್ಯಪ್ರದನೂ ಆಗಿದ್ದಾನೆ.

ಧ್ಯಾಯಂತೇ ವೈಷ್ಣವಾಃ ಶಶ್ವದೇವಂ ರೂಪಂ ಸನಾತನಂ ।
ಜನ್ಮಮೃತ್ಯುಜರಾವ್ಯಾಧಿಶೋಕಭೀತಿಹರಂ ಪರಂ ॥ ೨೩ ॥

ಬ್ರಹ್ಮಣೋ ವಯಸಾ ಯಸ್ಯ ನಿಮೇಷ ಉಪಚಾರ್ಯತೇ ।
ಸ ಚಾತ್ಮಾ ಪರಮಂ ಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥ ೨೪ ॥

ಕೃಷಿಸ್ತದ್ಭಕ್ತಿವಚನೋ ನಶ್ಚ ತದ್ದಾಸ್ಯಕಾರಕಃ ।
ಭಕ್ತಿದಾಸ್ಯಪ್ರದಾತಾ ಯಃ ಸ ಕೃಷ್ಣಃ ಪರಿಕೀರ್ತಿತಃ ॥ ೨೫ ॥

ಕೃಷಿಶ್ಚ ಸರ್ವವಚನೋ ನಕಾರೋ ಬೀಜವಾಚಕಃ ।
ಸರ್ವಬೀಜಂ ಪರಂಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥ ೨೬ ॥

---

೨೩. ಮೇಲೆ ಹೇಳಿದಂತೆ ದಿವ್ಯಸುಂದರಾಕಾರನೂ, ಅನಾದಿಯೂ ಆದ ಆ ಪರಮಾತ್ಮನೇ ಭಕ್ತರ ಜನ್ಮಜರಾಮರಣಗಳನ್ನೂ, ವ್ಯಾಧಿಶೋಕಭಯಗಳನ್ನೂ ಪರಿಹರಿಸಿ ಮುಕ್ತಿಯನ್ನು ಕೊಡುವನೆಂದು ವೈಷ್ಣವರು ತಿಳಿದು ಆತನ ಸಾಕಾರ ಸ್ವರೂಪವನ್ನು ಧ್ಯಾನಿಸುವರು.

೨೪. ಯಾವ ಪರಮಾತ್ಮನ ನಿಮೇಷ (ರೆಪ್ಪೆಹೊಡೆಯು) ಕಾಲವೂ ಚತುರ್ಮುಖಬ್ರಹ್ಮನ ಜೀವಿತಕಾಲವೂ ಸಮವೆಂದು ಹೇಳುವರೋ ಆ ಪರಮಾತ್ಮನನ್ನೇ ಶ್ರೀಕೃಷ್ಣನೆಂಬ ದಿವ್ಯನಾಮದಿಂದ ಕರೆಯುವರು.

೨೫. ಕೃಷ್ ಎಂದರೆ ಪರಮಾತ್ಮನಲ್ಲಿ ಭಕ್ತಿ ಎಂದೂ, 'ನ' ಎಂದರೆ ಆ ಪರಮಾತ್ಮನ ದಾಸ್ಯವೆಂದೂ ಅರ್ಥವಾಗುವುದರಿಂದ ಭಕ್ತಿ ಮತ್ತು ದಾಸ್ಯವನ್ನು ಕೊಡುವವನೇ ಕೃಷ್ಣನೆಂದು ಪ್ರಸಿದ್ಧನಾದನು.

೨೬. ಮತ್ತೊಂದು ರೀತಿಯಲ್ಲಿ 'ಕೃಷ್' ಎಂದರೆ ಸರ್ವವೆಂದೂ 'ನ' ಎಂದರೆ ಬೀಜವೆಂದೂ ಅರ್ಥವಾಗುವುದರಿಂದ ಸರ್ವಬೀಜಸ್ವರೂಪನಾದ ಪರಬ್ರಹ್ಮನೆ, ಕೃಷ್ಣನೆನಿಸಿಕೊಳ್ಳುವನು.

ಅಸಂಖ್ಯಬ್ರಹ್ಮಣಾಂ ಪಾತೇ ಕಾಲೋಽತೀತೇಽಪಿ ನಾರದ ।
ಯದ್ಗುಣಾನಾಂ ನಾಸ್ತಿ ನಾಶಸ್ತತ್ಸಮಾನೋ ಗುಣೇನ ಚ ॥ ೨೭ ॥

ಸ ಕೃಷ್ಣಃ ಸರ್ವಸೃಷ್ಟ್ಯಾದೌ ಸಿಸೃಕ್ಷುಸ್ತ್ವೇಕ ಏವ ಚ ।
ಸೃಷ್ಟ್ಯುನ್ಮುಖಸ್ತದಂಶೇನ ಕಾಲೇನ ಪ್ರೇರಿತಃ ಪ್ರಭುಃ ॥ ೨೮ ॥

ಸ್ವೇಚ್ಛಾಮಯಃ ಸ್ವೇಚ್ಛಯಾ ಚ ದ್ವಿಧಾ ರೂಪೋ ಬಭೂವ ಹ ।
ಸ್ತ್ರೀರೂಪಾ ವಾಮಭಾಗಾಂಶಾದ್ದಕ್ಷಿಣಾಂಶಃ ಪುಮಾನ್ಸ್ಮೃತಃ ॥ ೨೯ ॥

ತಾಂ ದದರ್ಶ ಮಹಾಕಾಮೀ ಕಾಮಾಧಾರಃ ಸನಾತನಃ ।
ಅತೀವ ಕಮನೀಯಾಂ ಚ ಚಾರುಚಂಪಕಸನ್ನಿಭಾಂ ॥ ೩೦ ॥

ಪೂರ್ಣೇಂದುಬಿಂಬಸದೃಶನಿತಂಬಯುಗಲಾಂ ಪರಾಂ ।
ಸುಚಾರು ಕದಲೀಸ್ತಂಭಸದೃಶಶ್ರೋಣಿಸುಂದರೀಂ ॥ ೩೧ ॥

ಶ್ರೀಯುಕ್ತಶ್ರೀಫಲಾಕಾರಸ್ತನಯುಗ್ಮಮನೋರಮಾಂ ।
ಪುಷ್ಟ್ಯಾ ಯುಕ್ತಾಂ ಸುಲಲಿತಾಂ ಮಧ್ಯಕ್ಷೀಣಾಂ ಮನೋಹರಾಂ ॥ ೩೨ ॥

---

೨೭. ಅಸಂಖ್ಯ ಬ್ರಹ್ಮರ ಜೀವಿತಕಾಲವು ಕಳೆದರೂ ಯಾವ ಪರಮಾತ್ಮನ ಸಮಸ್ತ ಗುಣಗಳೂ ಬೀಜರೂಪವಾಗಿರುವುವೋ ಅವನಿಗೆ ಎಣೆಯಾದ ಗುಣವಂತರು ಬೇರಾರೂ ಇಲ್ಲ.

೨೮–೨೯. ಸಮಸ್ತ ಸೃಷ್ಟಿಗೂ ಪೂರ್ವದಲ್ಲಿ ಆ ಕೃಷ್ಣಪರಮಾತ್ಮನು ಏಕಾಕಿಯಾಗಿದ್ದು ಸೃಷ್ಟ್ಯುನ್ಮುಖನಾದಾಗ ಇಚ್ಛಾಮಾತ್ರಪ್ರಭುವಾದ ಅವನು ಕಾಲಪ್ರೇರಿತನಾಗಿ ಸ್ವೇಚ್ಛೆಯಿಂದಲೇ ಇಬ್ಭಾಗವಾದನು. ಅವನ ವಾಮಭಾಗವು ಸ್ತ್ರೀಯೆಂದೂ ದಕ್ಷಿಣಭಾಗವು ಪುರುಷನೆಂದೂ ಪ್ರಸಿದ್ಧವಾಯಿತು.

೩೦. ಮಹಾಕಾಮಿಯೂ, ಕಾಮಾಧಾರನೂ, ಅನಾದಿಯೂ, ಆದ ಆ ಪುರುಷನು ಸಂಪಿಗೆಯಂತೆ ಸುಂದರಳೂ, ಮನೋಹರಳೂ ಆದ ಆ ಸ್ತ್ರೀಯನ್ನು ನೋಡಿದನು.

೩೧–೩೨. ಪೂರ್ಣಚಂದ್ರಬಿಂಬದಂತೆ ಮನೋಹರವಾದ ನಿತಂಬದ್ವಯದಿಂದಲೂ, ಮನೋಹರವಾದ ಕದಳೀಸ್ತಂಭಗಳಂತಿರುವ ಊರು (ತೊಡೆ) ಯುಗಳದಿಂದಲೂ, ಶೋಭಿತಳಾದ ಆ ಸ್ತ್ರೀಯು ಬಿಲ್ವಫಲಗಳಂತಿರುವ ಸ್ತನಯುಗ್ಮಗಳಿಂದ ಮನೋಹರಳಾಗಿ ಸರ್ವಾಂಗಪುಷ್ಟಳೂ ಕೃಶೋದರಿಯೂ ಆಗಿದ್ದಳು.

ಅತೀವ ಸುಂದರೀಂ ಶಾಂತಾಂ ಸಸ್ಮಿತಾಂ ವಕ್ರಲೋಚನಾಂ ।
ವಹ್ನಿಶುದ್ಧಾಂಶುಕಾಧಾನಾಂ ರತ್ನಭೂಷಣಭೂಷಿತಾಂ ॥ ೩೩ ॥

ಶಶ್ವಚ್ಚಕ್ಷುಶ್ಚಕೋರಾಭ್ಯಾಂ ಪಿಬಂತೀಂ ಸಂತತಂ ಮುದಾ ।
ಕೃಷ್ಣಸ್ಯ ಸುಂದರಮುಖಂ ಚಂದ್ರಕೋಟಿವಿನಿಂದಕಂ ॥ ೩೪ ॥

ಕಸ್ತೂರೀ ಬಿಂದುಭಿಃ ಸಾರ್ಧಮಧಶ್ಚಂದನಬಿಂದುನಾ ।
ಸಮಂ ಸಿಂಧೂರಬಿಂದುಂ ಚ ಭಾಲಮಧ್ಯೇ ಚ ಬಿಭ್ರತೀಂ ॥ ೩೫ ॥

ಸುವಕ್ರಕಬರೀಭಾರಂ ಮಾಲತೀಮಾಲ್ಯಭೂಷಿತಂ ।
ರತ್ನೇಂದ್ರಸಾರಹಾರಂ ಚ ದಧತೀಂ ಕಾಂತಕಾಮುಕೀಂ ॥ ೩೬ ॥

ಕೋಟಿಚಂದ್ರಪ್ರಭಾಜುಷ್ಟಪುಷ್ಟಶೋಭಾಸಮನ್ವಿತಾಂ ।
ಗಮನೇ ರಾಜಹಂಸೀಂ ತಾಂ ದೃಷ್ಟ್ವಾ ಖಂಜನಗಂಜನೀಂ ॥ ೩೭ ॥

೩೩–೩೪. ಅತಿಸುಂದರಳೂ, ಶಾಂತಳೂ, ಸಸ್ಮಿತಳೂ, ಚಂಚಲಾಕ್ಷಿಯೂ, ಆದ ಆ ಸ್ತ್ರೀಯು ಅಗ್ನಿಯಂತೆ ಪರಿಶುದ್ಧವಾದ ಅಂಬರವನ್ನುಟ್ಟು, ರತ್ನಭೂಷಣ ಭೂಷಿತಳಾಗಿ ಚಂದ್ರಿಕೆಯನ್ನು ಪಾನಮಾಡುವ ಚಕೋರಪಕ್ಷಿಯಂತೆ ಕೋಟಿ ಚಂದ್ರಾಧಿಕವಾದ ಶ್ರೀಕೃಷ್ಣನ ಸುಂದರ ಮುಖವನ್ನು ದಿಟ್ಟಿಸಿ ನೋಡುತ್ತಿದ್ದಳು.

೩೫–೩೭. ಹಣೆಯ ಮಧ್ಯದಲ್ಲಿ ಕಸ್ತೂರೀ ಬೊಟ್ಟನ್ನೂ ಅದರ ಕೆಳಗಡೆ ಚಂದನ ಮತ್ತು ಸಿಂಧೂರ (ಚಂದ್ರ) ಬಿಂದುಗಳನ್ನೂ ಧರಿಸಿ, ಸುರುಳಿಸುರುಳಿಯಾದ ಕೇಶಪಾಶಗಳಲ್ಲಿ ಮಾಲತೀಮಾಲೆಯನ್ನು ಮುಡಿದು, ಕಂಠದಲ್ಲಿ ಶ್ರೇಷ್ಠರತ್ನ ಹಾರವನ್ನು ಧರಿಸಿ, ಕೋಟಿಚಂದ್ರರ ಪ್ರಭೆಯನ್ನು ಮೀರುವ ಶೋಭಾನ್ವಿತಳಾಗಿ, ಹಂಸಗಮನೆಯೂ, ಚಂಚಲಾಕ್ಷಿಯೂ ಆದ ಆಕೆಯನ್ನು ಆ ಪುರುಷನೂ ನೋಡಿದನು.

ಅತಿಮಾತ್ರಂ ತಯಾ ಸಾರ್ಧಂ ರಾಸೇಶೋ ರಾಸಮಂಡಲೇ ।
ರಾಸೋಲ್ಲಾಸೇಷು ರಹಸಿ ರಾಸಕ್ರೀಡಾಂ ಚಕಾರ ಹ ॥ ೩೮ ॥

ನಾನಾಪ್ರಕಾರ ಶೃಂಗಾರಂ ಶೃಂಗಾರೋ ಮೂರ್ತಿಮಾನಿವ ।
ಚಕಾರ ಸುಖಸಂಭೋಗಂ ಯಾವದ್ವೈ ಬ್ರಹ್ಮಣೋ ವಯಃ ॥ ೩೯ ॥

ತತಃ ಸ ಚ ಪರಿಶ್ರಾನ್ತಸ್ತಸ್ಯಾ ಯೋನೌ ಜಗತ್ಪಿತಾ ।
ಚಕಾರ ವೀರ್ಯಾಧಾನಂ ಚ ನಿತ್ಯಾನಂದಃ ಶುಭಕ್ಷಣೇ ॥ ೪೦ ॥

ಗಾತ್ರತೋ ಯೋಷಿತಸ್ತಸ್ಯಾಃ ಸುರತಾನ್ತೇ ಚ ಸುವ್ರತ ।
ನಿಸ್ಸಸಾರಶ್ರಮಜಲಂ ಶ್ರಾಂತಾಯಾಸ್ತೇಜಸಾ ಹರೇಃ ॥ ೪೧ ॥

ಮಹಾಸುರತಖಿನ್ನಾಯಾ ನಿಶ್ವಾಸಶ್ಚ ಬಭೂವ ಹ ।
ತದಾಧಾರಶ್ರಮಜಲಂ ತತ್ಸರ್ವಂ ವಿಶ್ವಗೋಲಕಂ ॥ ೪೨ ॥

---

೩೮. ರಾಸಾಧಿಪತಿಯಾದ ಆ ಪುರುಷನು ರಾಸೋಲ್ಲಾಸರಸಿಕನಾಗಿ ಆ ಸ್ತ್ರೀಯೊಡನೆ ರಾಸಮಂಡಲದಲ್ಲಿ ರಹಸ್ಯವಾಗಿ ರಾಸಕ್ರೀಡೆಯಾಡಿದನು.

೩೯. ಮೂರ್ತಿವೆತ್ತ ಶೃಂಗಾರದಂತೆ ವಿಧವಿಧವಾದ ಶೃಂಗಾರದಲ್ಲಿ ರತನಾಗಿ ಬ್ರಹ್ಮನ ಆಯುಃಪರಿಮಿತಿಯಷ್ಟು (೭೦೦೦ ಚತುರ್ಯುಗಗಳು) ಕಾಲ ಆಕೆಯೊಡನೆ ಸುಖಸಂಭೋಗವನ್ನು ಅನುಭವಿಸಿದನು.

೪೦. ಅನಂತರ ನಿತ್ಯಾನಂದಮಯನೂ, ಜಗತ್ಪಿತನೂ ಆದ ಆ ಪುರುಷನು ಪರಿಶ್ರಾಂತನಾಗಿ ಮಂಗಳಸಮಯವನ್ನರಿತು ಆಕೆಯ ಯೋನಿಯಲ್ಲಿ ವೀರ್ಯಾಧಾನ ಮಾಡಿದನು.

೪೧. ಎಲೈ, ವ್ರತಪರನಾದ ನಾರದನೇ! ಆ ಪುರುಷನ ತೇಜಸ್ಸಿನಿಂದ ಶ್ರಾಂತಳಾದ ಆ ಸ್ತ್ರೀಯ ಶರೀರದಿಂದ ಸುರತಾವಸಾನದಲ್ಲಿ ಸ್ವೇದಜಲವು ಹೊರಬಂದು ಅದೇ ಜಲಸೃಷ್ಟಿಯಾಯಿತು.

೪೨. ಸುರತಖಿನ್ನಳಾದ ಆ ರಾಧೆಗೆ ನಿಶ್ವಾಸವುಂಟಾಯಿತು. ಅವಳ ಶರೀರದಿಂದುತ್ಪನ್ನವಾದ ಬೆವರಿನ ನೀರೇ ವಿಶ್ವಗೋಳಕವನ್ನೆಲ್ಲಾ ಆಕ್ರಮಿಸಿ ಕೊಂಡಿತು. ಇಂತು ವಿಶ್ವಾಧಾರವಾದ ಜಲ ಮತ್ತು ವಾಯುವಿನ ಸೃಷ್ಟಿಯಾಯಿತು.

ಸ ಚ ನಿಶ್ವಾಸವಾಯುಶ್ಚ ಸರ್ವಾಧಾರೋ ಬಭೂವ ಹ ।
ನಿಶ್ವಾಸವಾಯುಃ ಸರ್ವೇಷಾಂ ಜೀವಿನಾಂ ಚ ಭವೇಷು ಚ ॥ ೪೩ ॥

ಬಭೂವ ಮೂರ್ತಿಮದ್ವಾಯೋರ್ವಾಮಾಂಗಾತ್ಪ್ರಾಣವಲ್ಲಭಾ ।
ತತ್ಪತ್ನೀ ಸಾ ಚ ತತ್ಪುತ್ರಾಃ ಪ್ರಾಣಾಃ ಪಂಚ ಚ ಜೀವಿನಾಂ ॥ ೪೪ ॥

ಪ್ರಾಣೋಽಪಾನಃ ಸಮಾನಶ್ಚೈವೋದಾನೋವ್ಯಾನ ಏವ ಚ ।
ಬಭೂವುರೇವ ತತ್ಪುತ್ರಾ ಅಧಃ ಪ್ರಾಣಾಶ್ಚ ಪಂಚ ಚ ॥ ೪೫ ॥

ಧರ್ಮತೋಯಾಧಿದೇವಶ್ಚ ಬಭೂವ ವರುಣೋ ಮಹಾನ್ ।
ತದ್ವಾಮಾಂಗಾಚ್ಚ ತತ್ಪತ್ನೀ ವರುಣಾನೀ ಬಭೂವ ಸಾ ॥ ೪೬ ॥

ಅಥ ಸಾ ಕೃಷ್ಣ ಶಕ್ತಿಶ್ಚ ಕೃಷ್ಣಾದ್ಗರ್ಭಂ ದಧಾರ ಹ ।
ಶತಮನ್ವಂತರಂ ಯಾವಜ್ಜ್ವಲಂತೀ ಬ್ರಹ್ಮತೇಜಸಾ ॥ ೪೭ ॥

---

೪೩. ಆ ದೇವಿಯ ನಿಶ್ವಾಸವಾಯುವೇ ಸಂಸಾರದಲ್ಲಿರುವ ಸಮಸ್ತ ಜೀವಿಗಳಿಗೂ ಪ್ರಾಣವಾಯುವೆನಿಸಿ ಜೀವನಾಧಾರವಾಯಿತು.

೪೪. ಮೂರ್ತಿವೆತ್ತ ಆ ವಾಯುದೇವನ ವಾಮಭಾಗದಿಂದ ವಾಯವಿಯು ಜನಿಸಿ ಅವನ ಪ್ರಾಣವಲ್ಲಭೆಯಾದಳು. ಜೀವಿಗಳಿಗೆ ಜೀವನಾಧಾರವಾಗಿರುವ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಐವರೇ ಆ ವಾಯುವಿನ ಮಕ್ಕಳು.

೪೫. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾವೆಂಬ ಐದು ಊರ್ಧ್ವಪ್ರಾಣಗಳೂ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆಂಬ ಐದು ಅಧಃಪ್ರಾಣಗಳೂ ವಾಯುದೇವನ ಪುತ್ರರು.

೪೬. ಅನಂತರ ಜಲಾಧಿದೇವತೆಯಾದ ವರುಣನೂ, ಅವನ ವಾಮಪಾರ್ಶ್ವದಿಂದ ಅವನ ಪತ್ನಿಯಾದ ವರುಣಾನಿಯೂ ಆವಿರ್ಭವಿಸಿದರು.

೪೭. ಶ್ರೀಕೃಷ್ಣಪರಮಾತ್ಮನ ಶಕ್ತಿರೂಪಿಣಿಯಾದ ಆ ದೇವಿಯು, ಕೃಷ್ಣನಿಂದ ಗರ್ಭಧಾರಣೆಮಾಡಿ ನೂರುಮನ್ವಂತರದವರೆಗೆ ಬ್ರಹ್ಮತೇಜಸ್ಸಿನಿಂದ ಮೆರೆಯುತ್ತಿದ್ದಳು.

ಕೃಷ್ಣಪ್ರಾಣಾಧಿದೇವೀ ಸಾ ಕೃಷ್ಣಪ್ರಾಣಾಧಿಕಪ್ರಿಯಾ ।
ಕೃಷ್ಣಸ್ಯ ಸಂಗಿನೀ ಶಶ್ವತ್ಕೃಷ್ಣವಕ್ಷಃಸ್ಥಲಸ್ಥಿತಾ ॥ ೪೮ ॥

ಶತಮನ್ವಂತರಾತೀತಕಾಲೇ ಪರಮಸುಂದರೀ ।
ಸುಷಾವಾಂಡಂ ಸುವರ್ಣಾಭಂ ವಿಶ್ವಾಧಾರಾಲಯಂ ಪರಂ ॥ ೪೯ ॥

ದೃಷ್ಟ್ವಾ ಚಾಂಡಂ ಹಿ ಸಾ ದೇವೀ ಹೃದಯೇನ ವಿದೂಯತಾ ।
ಉತ್ಸಸರ್ಜ ಚ ಕೋಪೇನ ತದಂಡಂ ಗೋಲಕೇ ಜಲೇ ॥ ೫೦ ॥

ದೃಷ್ಟ್ವಾ ಕೃಷ್ಣಶ್ಚ ತತ್ತ್ಯಾಗಂ ಹಾಹಾಕಾರಂ ಚಕಾರ ಹ ।
ಶಶಾಪ ದೇವೀಂ ದೇವೇಶಸ್ತತ್ಕ್ಷಣಂ ಚ ಯಥೋಚಿತಂ ॥ ೫೧ ॥

---

೪೮. ಶ್ರೀಕೃಷ್ಣನ ಪ್ರಾಣಾಧಿದೇವತೆಯೂ, ಪ್ರಾಣಕ್ಕಿಂತಲೂ ಅಧಿಕ ಪ್ರಿಯಳೂ ಆದ ಆ ದೇವಿಯು ಶ್ರೀಕೃಷ್ಣನ ವಕ್ಷಃಸ್ಥಳದಲ್ಲಿ ನೆಲೆಸಿ ನಿರಂತರವೂ ಕೃಷ್ಣಸಂಗತಳಾಗಿದ್ದಳು.

೪೯. ದಿವ್ಯಸುಂದರಿಯಾದ ಆ ಸ್ತ್ರೀಯು ನೂರುಮನ್ವಂತರಗಳು ಕಳೆದ ನಂತರ ವಿಶ್ವಕ್ಕೆಲ್ಲಾ ಆಧಾರವಾದ ಮತ್ತು ಸುವರ್ಣಮಯವಾದ ಒಂದು ಅಂಡವನ್ನು ಪ್ರಸುವಿಸಿದಳು.

೫೦. ಮನ್ವಂತರಗಳ ಕಾಲ ಗರ್ಭಧಾರಣೆಮಾಡಿದ ಫಲವಾಗಿ ಜನಿಸಿದ ಆ ಮೊಟ್ಟೆಯನ್ನು ನೋಡಿ ಸಂತಪ್ತಹೃದಯಳಾದ ಆ ದೇವಿಯು ಕುಪಿತಳಾಗಿ ಅದನ್ನು ಜಲದಲ್ಲಿ ತ್ಯಜಿಸಿದಳು.

೫೧. ನಿಖಿಲಪ್ರಪಂಚಕ್ಕೂ ಆಧಾರವಾದ ಆ ಮೊಟ್ಟೆಯು ಹಾಗೆ ಪರಿತ್ಯಕ್ತವಾದದ್ದನ್ನು ನೋಡಿ ಶ್ರೀಕೃಷ್ಣನು ಅನರ್ಥವಾಯಿತೆಂದು ಹಾಹಾಕಾರಮಾಡಿದ್ದಲ್ಲದೆ-ಆ ಕ್ಷಣದಲ್ಲೇ ಆ ದೇವಿಯನ್ನು ಇಂತು ಶಪಿಸಿದನು.

ಯತೋಽಪತ್ಯಂ ತ್ವಯಾ ತ್ಯಕ್ತಂ ಕೋಪಶೀಲೇ ಸುನಿಷ್ಠುರೇ ।
ಭವ ತ್ವಮನಪತ್ಯಾಪಿ ಚಾದ್ಯ ಪ್ರಭೃತಿ ನಿಶ್ಚಯಂ ॥ ೫೨ ॥

ಯಾ ಯಾಸ್ತ್ವದಂಶರೂಪಾಶ್ಚ ಭವಿಷ್ಯಂತಿ ಸುರಸ್ತ್ರಿಯಃ ।
ಅನಪತ್ಯಾಶ್ಚ ತಾಃ ಸರ್ವಾಸ್ತ್ವತ್ಸಮಾ ನಿತ್ಯಯೌವನಾಃ ॥ ೫೩ ॥

ಏತಸ್ಮಿನ್ನಂತರೇ ದೇವೀಜಿಹ್ವಾಗ್ರಾತ್ಸಹಸಾ ತತಃ ।
ಆವಿರ್ಬಭೂವ ಕನ್ಯೈಕಾ ಶುಕ್ಲವರ್ಣಾ ಮನೋಹರಾ ॥ ೫೪ ॥

ಪೀತವಸ್ತ್ರಪರೀಧಾನಾ ವೀಣಾಪುಸ್ತಕಧಾರಿಣೀ ।
ರತ್ನಭೂಷಣಭೂಷಾಢ್ಯಾ ಸರ್ವಶಾಸ್ತ್ರಾಧಿದೇವತಾ ॥ ೫೫ ॥

ಅಥ ಕಾಲಾಂತರೇ ಸಾ ಚ ದ್ವಿಧಾ ರೂಪಾ ಬಭೂವ ಹ ।
ವಾಮಾರ್ಧಾಂಗಾ ಚ ಕಮಲಾ ದಕ್ಷಿಣಾರ್ಧಾ ಚ ರಾಧಿಕಾ ॥ ೫೬ ॥

---

೫೨. ಎಲೌ, ದೇವಿಯೇ! ನೀನು ಕೋಪಶೀಲಳೂ, ಕಠಿನಸ್ವಭಾವದವಳೂ, ಆಗಿ ನಿನ್ನ ಅಪತ್ಯ (ಮಗು) ರೂಪವಾದ ಈ ಅಂಡವನ್ನು ತ್ಯಜಿಸಿದೆಯಾದ ಕಾರಣ–ಇಂದಿನಿಂದ ನೀನು ಅಪತ್ಯರಹಿತಳಾಗುವೆ.

೫೩. ಅಲ್ಲದೆ–ನಿನ್ನ ಅಂಶಾವತಾರಿಣಿಯರಾದ ದೇವತಾಸ್ತ್ರೀಯರೂ ಕೂಡ ನಿನ್ನಂತೆಯೇ ನಿತ್ಯಯೌವನವುಳ್ಳವರಾದರೂ ಅನಪತ್ಯರಾಗುವರು. (ಮಕ್ಕಳಿಲ್ಲದ ರಾಗುವರು).

೫೪–೫೫. ಶ್ರೀಕೃಷ್ಣಪರಮಾತ್ಮನು ಇಂತು ಶಪಿಸಿದನಂತರ ಆ ದೇವಿಯ ನಾಲಗೆಯ ತುದಿಯಿಂದ–ಶುದ್ಧಸ್ಫಟಿಕದಂತೆ ಬಿಳುಪಾದವಳೂ, ಮನೋಹರಳೂ, ಸರ್ವಶಾಸ್ತ್ರಾಧಿದೇವತೆಯೂ, ಆದ ಕನ್ಯೆಯೊಬ್ಬಳು ಪೀತಾಂಬರವನ್ನುಟ್ಟು, ರತ್ನಾಲಂಕಾರಗಳಿಂದ ಅಲಂಕೃತಳಾಗಿ, ವೀಣಾಪುಸ್ತಕಪಾಣಿಯಾಗಿ ಆವಿರ್ಭವಿಸಿದಳು. ಅವಳೇ ಸರಸ್ವತೀದೇವಿ.

೫೬. ಸ್ವಲ್ಪ ಹೊತ್ತಿನ ಮೇಲೆ ಆ ಮೂಲಪ್ರಕೃತಿಯು ಇಬ್ಭಾಗವಾಗಿ, ವಾಮಾರ್ಧಾಂಗವೇ ಲಕ್ಷ್ಮೀದೇವಿಯೂ, ದಕ್ಷಿಣಾರ್ಧಾಂಗವೇ ರಾಧೆಯೂ ಆದಳು.

ಏತಸ್ಮಿನ್ನಂತರೇ ಕೃಷ್ಣೋ ದ್ವಿಧಾ ರೂಪೋ ಬಭೂವ ಹ ।
ದಕ್ಷಿಣಾರ್ಧಸ್ಯಾದ್ದ್ವಿಭುಜೋ ವಾಮಾರ್ಧಶ್ಚ ಚತುರ್ಭುಜಃ ॥ ೫೭ ॥

ಉವಾಚ ವಾಣೀಂ ಶ್ರೀಕೃಷ್ಣಸ್ತ್ವಮಸ್ಯ ಭವ ಕಾಮಿನೀ ।
ಅತ್ರೈವ ಮಾನಿನೀ ರಾಧಾ ನೈವ ಭದ್ರಂ ಭವಿಷ್ಯತಿ ॥ ೫೮ ॥

ಏವಂ ಲಕ್ಷ್ಮೀಂ ಸಂಪ್ರದದೌ ತುಷ್ಟೋ ನಾರಾಯಣಾಯ ವೈ ।
ಸಂಜಗಾಮ ಚ ವೈಕುಂಠಂ ತಾಭ್ಯಾಂ ಸಾರ್ಧಂ ಜಗತ್ಪತಿಃ ॥ ೫೯ ॥

ಅನಪತ್ಯೇ ಚ ತೇ ದ್ವೇ ಚ ಯತೋ ರಾಧಾಂಶಸಂಭವೇ ।
ನಾರಾಯಣಾಂಗಾದಭವನ್ಪಾರ್ಷದಾಶ್ಚ ಚತುರ್ಭುಜಾಃ ॥ ೬೦ ॥

ತೇಜಸಾ ವಯಸಾ ರೂಪಗುಣಾಭ್ಯಾಂ ಚ ಸಮಾ ಹರೇಃ ।
ಬಭೂವುಃ ಕಮಲಾಂಗಾಚ್ಚ ದಾಸೀಕೋಟ್ಯಶ್ಚ ತತ್ಸಮಾಃ ॥ ೬೧ ॥

---

೫೭. ಆಗ ಶ್ರೀಕೃಷ್ಣನೂ ಕೂಡ ಇಬ್ಭಾಗವಾಗಿ ದಕ್ಷಿಣಾರ್ಧದಲ್ಲಿ ದ್ವಿಭುಜ ಯುತನೂ, ವಾಮಾರ್ಧದಲ್ಲಿ ಚತುರ್ಭುಜನೂ (ವಿಷ್ಣು ಅಥವಾ ನಾರಾಯಣ)ಆದನು.

೫೮–೫೯. ಆಗ ಶ್ರೀಕೃಷ್ಣನು ಸರಸ್ವತಿಯನ್ನೂ ಮತ್ತು ಲಕ್ಷ್ಮಿಯನ್ನೂ ಕುರಿತು ಶ್ರೀಮನ್ನಾರಾಯಣನಿಗೆ ಪತ್ನಿಯರಾಗುವಂತೆ ಹೇಳಿ–ರಾಧೆಯು ತನ್ನ ಹತ್ತಿರದಲ್ಲೇ ಇರಬೇಕೆಂದು ಅಪ್ಪಣೆಮಾಡಿದನು. ಆಗ ಜಗದೊಡೆಯನಾದ ನಾರಾಯಣನು ಲಕ್ಷ್ಮಿ ಮತ್ತು ಸರಸ್ವತಿಯರನ್ನು ಸ್ವೀಕರಿಸಿ ಅವರೊಡಗೂಡಿ ವೈಕುಂಠಕ್ಕೆ ತೆರಳಿದನು.

೬೦–೬೧. ಆ ದೇವಿಯರಿಬ್ಬರೂ ರಾಧೆಯ ಅಂಶದಿಂದ ಜನಿಸಿದವರಾದುದರಿಂದ ಶ್ರೀಕೃಷ್ಣನ ಶಾಪದಂತೆ ಅಪತ್ಯರಹಿತರಾದರು. ಅನಂತರ ಶ್ರೀಮನ್ನಾರಾಯಣನ ಅಂಗದಿಂದ ಚತುರ್ಭುಜರಾದ ಅನೇಕ ಪಾರ್ಷದರು ಅವತರಿಸಿ, ವಯಸ್ಸಿನಿಂದಲೂ, ತೇಜಸ್ಸಿನಿಂದಲೂ ನಾರಾಯಣನಿಗೆ ಸಮರೆನಿಸಿದರು. ಅಂತೆಯೇ ಲಕ್ಷ್ಮಿಯ ಅಂಗದಿಂದಲೂ ಆಕೆಗೆ ಸಮರಾದ ಕೋಟ್ಯಂತರ ದಾಸಿಯರು ಅವತರಿಸಿದರು.

ಅಥ ಗೋಲೋಕನಾಥಸ್ಯ ಲೋಮ್ನಾಂ ವಿವರತೋ ಮುನೇ ।
ಆಸನ್ನಸಂಖ್ಯಗೋಪಾಶ್ಚ ವಯಸಾ ತೇಜಸಾ ಸಮಾಃ ॥ ೬೨ ॥

ರೂಪೇಣ ಸುಗುಣೇನೈವ ವೇಷಾದ್ಯಾ ವಿಕ್ರಮೇಣ ಚ ।
ಪ್ರಾಣತುಲ್ಯಾಃ ಪ್ರಿಯಾಃ ಸರ್ವೇ ಬಭೂವುಃ ಪಾರ್ಷದಾ ವಿಭೋಃ ॥ ೬೩ ॥

ರಾಧಾಂಗಲೋಮಕೂಪೇಭ್ಯೋ ಬಭೂವುರ್ಗೋಪಕನ್ಯಕಾಃ ।
ರಾಧಾತುಲ್ಯಾಶ್ಚ ಸರ್ವಾಸ್ತಾ ಸಾಮ್ಯತುಲ್ಯಾಃ ಪ್ರಿಯಂವದಾಃ ॥ ೬೪ ॥

ರತ್ನಭೂಷಣಭೂಷಾಢ್ಯಾಃ ಶಶ್ವತ್ಸುಸ್ಥಿರಯೌವನಾಃ ।
ಅನಪತ್ಯಾಶ್ಚ ತಾಃ ಸರ್ವಾಃ ಪುಂಸಃ ಶಾಪೇನ ಸಂತತಂ ॥ ೬೫ ॥

ಏತಸ್ಮಿನ್ನಂತರೇ ವಿಪ್ರ ಸಹಸಾ ಕೃಷ್ಣದೇಹತಃ ।
ಆವಿರ್ಬಭೂವ ಸಾ ದುರ್ಗಾ ವಿಷ್ಣುಮಾಯಾ ಸನಾತನೀ ॥ ೬೬ ॥

ದೇವೀ ನಾರಾಯಣೀಶಾನಾ ಸರ್ವಶಕ್ತಿಸ್ವರೂಪಿಣೀ ।
ಬುದ್ಧ್ಯಧಿಷ್ಠಾತೃದೇವೀ ಸಾ ಕೃಷ್ಣಸ್ಯ ಪರಮಾತ್ಮನಃ ॥ ೬೭ ॥

೬೨–೬೩. ಅನಂತರ ಗೋಲೋಕಾಧಿಪತಿಯಾದ ಶ್ರೀಕೃಷ್ಣನ ರೋಮವಿವರಗಳಿಂದ ಅಸಂಖ್ಯಗೋಪರು ಅವತರಿಸಿ ವಯಸ್ಸುತೇಜಸ್ಸುಗಳಿಂದಲೂ, ರೂಪಗುಣಗಳಿಂದಲೂ, ವೇಷವಿಕ್ರಮಗಳಿಂದಲೂ, ಶ್ರೀಕೃಷ್ಣನ ಪ್ರಾಣಸಮರೂ, ಪ್ರಿಯರೂ ಆಗಿ ಅವನಿಗೆ ಪಾರ್ಷದರೆನಿಸಿಕೊಂಡರು.

೬೪–೬೫. ಅಂತೆಯೇ ರಾಧಾದೇವಿಯ ರೋಮಕೂಪದಿಂದ ಆಕೆಗೆ ಸಮಾನರೂ, ಪ್ರಿಯಂವದೆಯರೂ ಆದ ಗೋಪಕನ್ಯಕೆಯರೂ ರತ್ನಭೂಷಣಭೂಷಿತೆಯರಾಗಿ ಅವತರಿಸಿದರು. ಅವರೆಲ್ಲರೂ ಸ್ಥಿರಯೌವನವತಿಯರಾದರೂ ಕೃಷ್ಣಪರಮಾತ್ಮನ ಶಾಪದಿಂದ ಅನಪತ್ಯರಾದರು.

೬೬–೬೭. ಅನಂತರ ಶ್ರೀಕೃಷ್ಣಪರಮಾತ್ಮನ ಶರೀರದಿಂದ ವಿಷ್ಣುಮಾಯಾಸ್ವರೂಪಿಣಿಯೂ, ಸನಾತನಿಯೂ ಆದ ದುರ್ಗಾದೇವಿಯು ಅವತರಿಸಿದಳು. ನಾರಾಯಣೀ, ಈಶಾನಾ ಮುಂತಾದ ಶಕ್ತಿಸ್ವರೂಪಿಣಿಯಾದ ಆ ದೇವಿಯು ಕೃಷ್ಣಪರಮಾತ್ಮನ ಬುದ್ಧಿಯ ಅಧಿಷ್ಠಾತೃದೇವತೆಯೆನಿಸಿದಳು.

ದೇವೀನಾಂ ಬೀಜರೂಪಾ ಚ ಮೂಲಪ್ರಕೃತಿರೀಶ್ವರೀ ।
ಪರಿಪೂರ್ಣತಮಾ ತೇಜಃಸ್ವರೂಪಾ ತ್ರಿಗುಣಾತ್ಮಿಕಾ ॥ ೬೮ ॥

ತಪ್ತಕಾಂಚನವರ್ಣಾಭಾ ಸೂರ್ಯಕೋಟಿಸಮಪ್ರಭಾ ।
ಈಷದ್ಧಾಸಪ್ರಸನ್ನಾಸ್ಯಾ ಸಹಸ್ರಭುಜಸಂಯುತಾ ॥ ೬೯ ॥

ನಾನಾ ಶಸ್ತ್ರಾಸ್ತ್ರನಿಕರಂ ಬಿಭ್ರತೀ ಸಾ ತ್ರಿಲೋಚನಾ ।
ವಹ್ನಿಶುದ್ಧಾಂಶುಕಾಧಾನಾ ರತ್ನಭೂಷಣಭೂಷಿತಾ ॥ ೭೦ ॥

ಯಸ್ಯಾಶ್ಚಾಂಶಾಂಶಕಲಯಾ ಬಭೂವುಃ ಸರ್ವಯೋಷಿತಃ ।
ಸರ್ವವಿಶ್ವಸ್ಥಿತಾಲೋಕಾ ಮೋಹಿತಾ ಮಾಯಯಾ ಯಯಾ ॥ ೭೧ ॥

---

೬೮. ಸಮಸ್ತದೇವಿಯರಿಗೂ ಮೂಲರೂಪಳೂ, ಈಶ್ವರೀಶಕ್ತಿರೂಪಿಣಿಯೂ, ಪರಿಪೂರ್ಣತಮಳೂ ಆದ ಆ ಪ್ರಕೃತಿಯು ತೇಜಃಸ್ವರೂಪಳೂ, ತ್ರಿಗುಣಾತ್ಮಕಳೂ ಆದಳು.

೬೯. ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯುತಳೂ, ಕೋಟಿಸೂರ್ಯರ ತೇಜೋಮಯಳೂ, ಹಸನ್ಮುಖಿಯೂ ಆದ ಆ ಪ್ರಕೃತಿಗೆ ಸಹಸ್ರಬಾಹುಗಳಿದ್ದವು.

೭೦. ಆ ಸಹಸ್ರ ಬಾಹುಗಳಲ್ಲೂ ಅನೇಕ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡಿರುವ ತ್ರಿಲೋಚನೆಯಾದ ಆ ದೇವಿಯು ಅಗ್ನಿಯಂತೆ ಪರಿಶುದ್ಧವಾದ ಅಂಬರವನ್ನುಟ್ಟು ರತ್ನಾಲಂಕಾರಗಳಿಂದ ಅಲಂಕೃತಳಾಗಿದ್ದಳು.

೭೧. ಆ ಪ್ರಕೃತಿಯ ಅಂಶದಿಂದಲೂ, ಅಂಶಾಂಶದಿಂದಲೂ, ಮತ್ತು ಕಲೆಯಿಂದಲೂ ಸ್ತ್ರೀಯರು ಉತ್ಪನ್ನರಾಗಿರುವರು. ಪ್ರಪಂಚದಲ್ಲಿರುವ ಜನರೆಲ್ಲರೂ ಆಪ್ರಕೃತಿಯ ಮಾಯೆಗೊಳಗಾಗಿರುವರು.

ಸರ್ವೈಶ್ವರ್ಯಪ್ರದಾತ್ರೀ ಚ ಕಾಮಿನಾಂ ಗೃಹಮೇಧಿನಾಂ ।
ಕೃಷ್ಣಭಕ್ತಿಪ್ರದಾತ್ರೀ ಚ ವೈಷ್ಣವಾನಾಂ ಚ ವೈಷ್ಣವೀ ॥ ೭೨ ॥

ಮುಮುಕ್ಷೂಣಾಂ ಮೋಕ್ಷದಾತ್ರೀ ಸುಖಿನಾಂ ಸುಖದಾಯಿನೀ ।
ಸ್ವರ್ಗೇಷು ಸ್ವರ್ಗಲಕ್ಷ್ಮೀಃ ಸಾ ಗೃಹಲಕ್ಷ್ಮೀರ್ಗೃಹೇಷ್ವಸೌ ॥ ೭೩ ॥

ತಪಸ್ವಿಷು ತಪಸ್ಯಾ ಚ ಶ್ರೀರೂಪಾ ಸಾ ನೃಪೇಷು ಚ ।
ಯಾ ಚಾಗ್ನೌ ದಾಹಿಕಾ ರೂಪಾ ಪ್ರಭಾರೂಪಾ ಚ ಭಾಸ್ಕರೇ ॥ ೭೪ ॥

ಶೋಭಾಸ್ವರೂಪಾ ಚಂದ್ರೇ ಚ ಪದ್ಮೇಷು ಚ ಸುಶೋಭನಾ ।
ಸರ್ವಶಕ್ತಿಸ್ವರೂಪಾ ಯಾ ಶ್ರೀಕೃಷ್ಣೇ ಪರಮಾತ್ಮನಿ ॥ ೭೫ ॥

ಯಯಾ ಚ ಶಕ್ತಿಮಾನಾತ್ಮಾ ಯಯಾ ವೈ ಶಕ್ತಿಮಜ್ಜಗತ್ ।
ಯಯಾ ವಿನಾ ಜಗತ್ಸರ್ವಂ ಜೀವನ್ಮೃತಮಿವ ಸ್ಥಿತಂ ॥ ೭೬ ॥

೭೨-೭೩. ಆ ಪ್ರಕೃತಿಯು ಕಾಮಿಗಳಾದ ಸಂಸಾರಿಗಳಿಗೆ ಸಕಲೈಶ್ವರ್ಯವನ್ನೂ ಕೊಡುವ ಸಂಪಲ್ಲಕ್ಷ್ಮಿಯೂ, ವೈಷ್ಣವರಿಗೆ ವಿಷ್ಣುಭಕ್ತಿಯನ್ನುಂಟುಮಾಡುವ ಪರಮವೈಷ್ಣವಿಯೂ, ಮೋಕ್ಷಕಾಮಿಗಳಿಗೆ ಮೋಕ್ಷದಾತ್ರಿಯೂ, ಸುಖಾಪೇಕ್ಷಿಗಳಿಗೆ ಸುಖದಾಯಿನಿಯೂ ಆಗಿ ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿ ಎಂದೂ, ಗೃಹಗಳಲ್ಲಿ ಗೃಹಲಕ್ಷ್ಮಿ ಎಂದೂ ಪ್ರಸಿದ್ಧಳಾಗಿರುವಳು.

೭೪-೭೫. ತಪಸ್ವಿಗಳಿಗೆ ತಪೋರೂಪಳಾಗಿಯೂ, ರಾಜರಿಗೆ ಸಂಪತ್‌ಲಕ್ಷ್ಮಿಯಾಗಿಯೂ, ಅಗ್ನಿಯಲ್ಲಿ ದಾಹಶಕ್ತಿಸ್ವರೂಪಿಣಿಯಾಗಿಯೂ, ಸೂರ್ಯನಲ್ಲಿ ತೇಜೋರೂಪಳಾಗಿಯೂ, ಚಂದ್ರನಲ್ಲಿ ಕಾಂತಿರೂಪಿಣಿಯಾಗಿಯೂ, ಪದ್ಮಗಳಲ್ಲಿ ಶೋಭಾರೂಪಳಾಗಿಯೂ, ಇರುವ ಆ ಪ್ರಕೃತಿಯೇ ಶ್ರೀಕೃಷ್ಣಪರಮಾತ್ಮನ ಸರ್ವಶಕ್ತಿಸ್ವರೂಪಿಣಿಯಾಗಿರುವಳು.

೭೬. ಪರಮಾತ್ಮನೂ ಮತ್ತು ನಿಖಿಲಜಗತ್ತೂ ಆಕೆಯಿಂದಲೇ ಶಕ್ತಿಯುತವಾದದ್ದು. ಆ ಶಕ್ತಿರೂಪಿಣಿಯಾದ ಪ್ರಕೃತಿಯಿಲ್ಲದಿದ್ದರೆ ಜಗತ್ತೆಲ್ಲವೂ ಬದುಕಿದ್ದರೂ ಸತ್ತಂತೆಯೇ.

ಯಾ ಚ ಸಂಸಾರವೃಕ್ಷಸ್ಯ ಬೀಜರೂಪಾ ಸನಾತನೀ ।
ಸ್ಥಿತಿರೂಪಾ ಬುದ್ಧಿರೂಪಾ ಫಲರೂಪಾ ಚ ನಾರದ ॥ ೭೭ ॥

ಕ್ಷುತ್ಪಿಪಾಸಾ ದಯಾಶ್ರದ್ಧಾ ನಿದ್ರಾ ತಂದ್ರಾ ಕ್ಷಮಾ ಧೃತಿಃ ।
ಶಾಂತಿರ್ಲಜ್ಜಾ ತುಷ್ಟಿಪುಷ್ಟಿಭ್ರಾಂತಿಕಾಂತ್ಯಾದಿರೂಪಿಣೀ ॥ ೭೮ ॥

ಸಾ ಚ ಸಂಸ್ತೂಯ ಸರ್ವೇಶಂ ತತ್ಪುರಃ ಸಮುಪಸ್ಥಿತಾ ।
ರತ್ನಸಿಂಹಾಸನಂ ತಸ್ಯೈ ಪ್ರದದೌ ರಾಧಿಕೇಶ್ವರಃ ॥ ೭೯ ॥

ಏತಸ್ಮಿನ್ನಂತರೇ ತತ್ರ ಸಸ್ತ್ರೀಕಶ್ಚ ಚತುರ್ಮುಖಃ ।
ಪದ್ಮನಾಭೋ ನಾಭಿಪದ್ಮಾನ್ನಿಸ್ಸಸಾರ ಪುಮಾನ್ಮುನೇ ॥ ೮೦ ॥

---

೭೭. ಎಲೈ, ನಾರದನೇ! ಅನಾದಿಯಾದ ಆ ದೇವಿಯು ಸಂಸಾರವೆಂಬ ವೃಕ್ಷಕ್ಕೆ ಬೀಜರೂಪಳೂ, ಸ್ಥಿತಿರೂಪಳೂ, ಬುದ್ಧಿರೂಪಳೂ, ಮತ್ತು ಫಲರೂಪಳೂ ಆಗಿದ್ದಾಳೆ.

೭೮. ಅಲ್ಲದೆ ಹಸಿವು ಬಾಯಾರಿಕೆಗಳೂ, ದಯಾಶ್ರದ್ಧೆಗಳೂ, ನಿದ್ರಾತಂದ್ರಗಳೂ, ಕ್ಷಮಾಧೃತಿಗಳೂ, ಶಾಂತಿಲಜ್ಜೆಗಳೂ, ತುಷ್ಟಿಪುಷ್ಟಿಗಳೂ ಮತ್ತು ಭ್ರಾಂತಿಕಾಂತಿಗಳೂ ಕೂಡ ಆಕೆಯ ವಿಭಿನ್ನಶಕ್ತಿಗಳು.

೭೯. ಆ ದುರ್ಗಾದೇವಿಯು ಸರ್ವೇಶ್ವರನಾದ ಶ್ರೀಕೃಷ್ಣನನ್ನು ಸ್ತುತಿಸಿ ಅವನ ಮುಂದೆ ಮಂಡಿಸಿದಳು. ರಾಧಾಪತಿಯು ರತ್ನಸಿಂಹಾಸನವೊಂದನ್ನು ತೋರಿಸಿ ಅಲ್ಲಿ ಆ ದೇವಿಯು ಕುಳಿತುಕೊಳ್ಳುವಂತೆ ಹೇಳಿದನು.

೮೦. ಅಷ್ಟು ಹೊತ್ತಿಗೆ ಪದ್ಮನಾಭನಾದ ಪರಮಾತ್ಮನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಸಸ್ತ್ರೀಕನಾಗಿಯೇ ಅವತಾರಮಾಡಿದನು.

ಕಮಂಡಲುಧರಃ ಶ್ರೀಮಾಂಸ್ತಪಸ್ವೀ ಜ್ಞಾನಿನಾಂ ವರಃ ।
ಚತುರ್ಮುಖಸ್ತಂ ತುಷ್ಟಾವ ಪ್ರಜ್ವಲನ್ ಬ್ರಹ್ಮತೇಜಸಾ ॥ ೪೧ ॥

ಸುದತೀ ಸುಂದರೀ ಶ್ರೇಷ್ಠಾ ಶತಚಂದ್ರಸಮಪ್ರಭಾ ।
ವಹ್ನಿಶುದ್ಧಾಂಶುಕಾಧಾನಾ ರತ್ನಭೂಷಣಭೂಷಿತಾ ॥ ೪೨ ॥

ರತ್ನಸಿಂಹಾಸನೇ ರಮ್ಯೇ ಸ್ತುತಾ ವೈ ಸರ್ವಕಾರಣಂ ।
ಉವಾಸ ಸ್ವಾಮಿನಾ ಸಾರ್ಧಂ ಕೃಷ್ಣಸ್ಯ ಪುರತೋ ಮುದಾ ॥ ೪೩ ॥

ಏತಸ್ಮಿನ್ನಂತರೇ ಕೃಷ್ಣೋ ದ್ವಿಧಾ ರೂಪೋ ಬಭೂವ ಸಃ ।
ವಾಮಾರ್ಧಾಂಗೋ ಮಹಾದೇವೋ ದಕ್ಷಿಣೋ ಗೋಪಿಕಾಪತಿಃ ॥ ೪೪ ॥

---

೪೧. ತಪಸ್ವಿಯೂ, ಜ್ಞಾನಿಗಳಲ್ಲಿ ಶ್ರೇಷ್ಠನೂ, ತೇಜೋವಂತನೂ, ಕಮಂಡಲುಧಾರಿಯೂ ಆದ ಚತುರ್ಮುಖನು ತೇಜೋಮಯನಾದ ಆ ಪರಮಾತ್ಮನನ್ನು ಸ್ತುತಿಸಿದನು.

೪೨-೪೩. ಮನೋಹರವಾದ ದಂತಪಂಕ್ತಿಯಿಂದಲೂ, ನೂರಾರುಚಂದ್ರರ ಕಾಂತಿಯಿಂದಲೂ ಕೂಡಿ ಸುಂದರಿಯರಿಗೆಲ್ಲ ಶ್ರೇಷ್ಠಳಾದ ಆ ದೇವಿಯೂ ಕೂಡ ಅಗ್ನಿಯಂತೆ ಪರಿಶುದ್ಧವಾದ ಅಂಬರವನ್ನುಟ್ಟು ರತ್ನಭೂಷಣಗಳನ್ನು ತೊಟ್ಟು ಸರ್ವಕಾರಣನಾದ ಪರಮಾತ್ಮನನ್ನು ಸ್ತುತಿಸಿ, ತನ್ನ ಸ್ವಾಮಿಯೊಡನೆ ಶ್ರೀಕೃಷ್ಣ ಪರಮಾತ್ಮನ ಮುಂದೆ ರತ್ನಸಿಂಹಾಸನದಲ್ಲಿ ಮಂಡಿಸಿದಳು.

೪೪. ಅನಂತರ ಶ್ರೀಕೃಷ್ಣನು ಇಬ್ಭಾಗವಾಗಿ ವಾಮಾರ್ಧಾಂಗದಿಂದ ಮಹಾದೇವನೂ, ದಕ್ಷಿಣಾರ್ಧಾಂಗದಿಂದ ಗೋಪಿಕಾಪತಿಯೂ ಎನಿಸಿಕೊಂಡನು.

ಶುದ್ಧಸ್ಫಟಿಕಸಂಕಾಶಃ ಶತಕೋಟಿರವಿಪ್ರಭಃ ।
ತ್ರಿಶೂಲಪಟ್ಟಿಶಧರೋ ವ್ಯಾಘ್ರಚರ್ಮಧರೋ ಹರಃ ॥ ೮೫ ॥

ತಪ್ತಕಾಂಚನವರ್ಣಾಭಜಟಾಭಾರಧರಃ ಪರಃ ।
ಭಸ್ಮಭೂಷಣಗಾತ್ರಶ್ಚ ಸಸ್ಮಿತಶ್ಚಂದ್ರಶೇಖರಃ ॥ ೮೬ ॥

ದಿಗಂಬರೋ ನೀಲಕಂಠಃ ಸರ್ಪಭೂಷಣಭೂಷಿತಃ ।
ಬಿಭ್ರದ್ದಕ್ಷಿಣಹಸ್ತೇನ ರತ್ನಮಾಲಾಂ ಸುಸಂಸ್ಕೃತಾಂ ॥ ೮೭ ॥

ಪ್ರಜಪನ್ ಪಂಚವಕ್ತ್ರೇಣ ಬ್ರಹ್ಮಜ್ಯೋತಿಃ ಸನಾತನಂ ।
ಸತ್ಯಸ್ವರೂಪಂ ಶ್ರೀಕೃಷ್ಣಂ ಪರಮಾತ್ಮಾನಮೀಶ್ವರಂ ॥ ೮೮ ॥

ಕಾರಣಂ ಕಾರಣಾನಾಂ ಚ ಸರ್ವಮಂಗಲಮಂಗಲಂ ।
ಜನ್ಮಮೃತ್ಯುಜರಾವ್ಯಾಧಿಶೋಕಭೀತಿಹರಂ ಪರಂ ॥ ೮೯ ॥

೮೫–೮೬. ಶುದ್ಧಸ್ಫಟಿಕದಂತೆ ಪರಿಶುದ್ಧನೂ, ನೂರುಕೋಟಿಸೂರ್ಯರ ಕಾಂತಿಯುತನೂ, ಆದ ಆ ಮಹಾದೇವನು ಕೈಗಳಲ್ಲಿ ತ್ರಿಶೂಲ ಪಟ್ಟಿಶ ಮುಂತಾದ ಆಯುಧಗಳನ್ನು ಧರಿಸಿ, ವ್ಯಾಘ್ರಚರ್ಮವನ್ನುಟ್ಟು, ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವಾದ ಜಟೆಗಳಿಂದ ಭೂಷಿತನಾಗಿ ಶರೀರಕ್ಕೆಲ್ಲ ಭಸ್ಮವನ್ನು ಲೇಪಿಸಿ ಕೊಂಡು ಚಂದ್ರಶೇಖರನೂ, ಸಸ್ಮಿತನೂ ಆಗಿದ್ದನು.

೮೭–೮೮. ದಿಗಂಬರನೂ, ನೀಲಕಂಠನೂ, ಸರ್ಪಭೂಷಣನೂ ಆದ ಆ ಶಿವನು ದಕ್ಷಿಣಹಸ್ತದಲ್ಲಿ ಸುಂದರವಾದ ರತ್ನಮಾಲೆಯೊಂದನ್ನು ಧರಿಸಿ, ತನ್ನ ಬಾಯಿಗಳಿಂದ ಜ್ಯೋತಿರ್ಮಯನೂ, ಸನಾತನನೂ, ಸತ್ಯಸ್ವರೂಪನೂ ಆದ ಶ್ರೀಕೃಷ್ಣಪರಮಾತ್ಮನ ದಿವ್ಯಮಂಗಳನಾಮವನ್ನು ಜಪಿಸುತ್ತಿದ್ದನು.

೮೯–೯೦. ಕಾರಣಗಳಿಗೆಲ್ಲಾ ಕಾರಣನೂ, ಮಂಗಳಕ್ಕೆಲ್ಲ ಮಂಗಳನೂ, ಜನ್ಮಮೃತ್ಯುಜರಾವ್ಯಾಧಿಶೋಕಭೀತಿನಾಶಕನೂ, ಮೃತ್ಯುವಿಗೂ ಮೃತ್ಯುಸ್ವರೂಪನೂ

ಸಂಸ್ತೂಯ ಮೃತ್ಯೋರ್ಮೃತ್ಯುಂ ತಂ ಜಾತೋ ಮೃತ್ಯುಂಜಯಾಭಿಧಃ।
ರತ್ನಸಿಂಹಾಸನೇ ರಮ್ಯೇ ಸಮುವಾಸ ಹರೇಃ ಪುರಃ ॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರಾಯಣನಾರದಸಂವಾದೇ ದೇವದೇವ್ಯುತ್ಪತ್ತಿರ್ನಾಮ
ದ್ವಿತೀಯೋಽಧ್ಯಾಯಃ

ಆದ ಆ ಪರಮಾತ್ಮನನ್ನು ಭಜಿಸಿ ಮೃತ್ಯುಂಜಯನೆನಿಸಿಕೊಂಡು ಆ ಪರಮಾತ್ಮನ ಮುಂದೆ ರಮ್ಯವಾದ ರತ್ನಸಿಂಹಾಸನದಲ್ಲಿ ಮಂಡಿಸಿದನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ನಾರದ ನಾರಾಯಣ ಸಂವಾದ
ರೂಪವಾದ ಪ್ರಕೃತಿಖಂಡದಲ್ಲಿ ದೇವದೇವಿಯರ ಉತ್ಪತ್ತಿ ಎಂಬ
ಎರಡನೆಯ ಅಧ್ಯಾಯವು ಮುಗಿದುದು.

ಎರಡನೆಯ ಅಧ್ಯಾಯದ ಸಾರಾಂಶವು

ಪ್ರಕೃತಿಯು ಪಂಚವಿಭಾಗವಾಗಲು ಕಾರಣವನ್ನೂ ಆಕೆಯ ಅಂಶ ಮತ್ತು ಕಲೆಯಿಂದ ಜನಿಸಿದ ದೇವಿಯರ ಉತ್ಪತ್ತ್ಯಾದಿ ಚರಿತ್ರೆಯನ್ನೂ, ಪೂಜಾಧ್ಯಾನಸ್ತೋತ್ರ ಮಂತ್ರಾದಿಗಳ ಕ್ರಮವನ್ನೂ ವಿವರಿಸಬೇಕೆಂದು ಕೇಳಿದ ನಾರದನಿಗೆ–ನಾರಾಯಣ ಮಹರ್ಷಿಗಳು ಇಂತೆಂದರು. ಆತ್ಮನೂ, ಆತ್ಮಾಭಿನ್ನವಾದ ಆಕಾಶ, ಕಾಲ, ದಿಕ್ಕುಗಳೂ, ಗೋಲೋಕವೂ ನಿತ್ಯವಾದುವು. ಅಗ್ನಿಯಲ್ಲಿ ದಾಹಕಶಕ್ತಿಯು ನಿತ್ಯವಾಗಿರುವಂತೆ ಪರಮಾತ್ಮನಲ್ಲಿ ಶಕ್ತಿಸ್ವರೂಪಿಣಿಯಾದ ಪ್ರಕೃತಿಯು ನಿತ್ಯವಾಗಿರುವುದು. ಆ ಪ್ರಕೃತಿಯಿಂದಲೇ ಪರಮಾತ್ಮನು ಸರ್ವಶಕ್ತನಾಗಿರುವನು. ಅವನು ನಿರಾಕಾರನಾದರೂ ಭಕ್ತಾನುಗ್ರಹಕ್ಕಾಗಿ ಸಾಕಾರನಗುವನು. ವೈಷ್ಣವರು ಆ ಪರಮಾತ್ಮನ ದಿವ್ಯಸುಂದರವಿಗ್ರಹವನ್ನು ಸೇವಿಸುವರು. ಶ್ರೀಕೃಷ್ಣನೆಂದರೆ ಸರ್ವ ಬೀಜಸ್ವರೂಪವಾದ ಪರಬ್ರಹ್ಮವೆಂದು ಅರ್ಥವಾಗುವುದು. ಆ ಪರಬ್ರಹ್ಮವು ಸೃಷ್ಟ್ಯುನ್ಮುಖವಾದಾಗ ಇಬ್ಭಾಗವಾಗಿ ಪ್ರಕೃತಿಪುರುಷವೆಂಬ ಭೇದವನ್ನು ಪಡೆಯಿತು. ಅನಂತರ ಆ ಪುರುಷನು ತನ್ನ ವಾಮಾರ್ಧಾಂಗಿಯ ಸುಂದರರೂಪಕ್ಕೆ ಮೋಹಿತನಾಗಿ ಆಕೆಯೊಡನೆ ರಾಸಕ್ರೀಡೆಯಾಡಿ ವೀರ್ಯಾಧಾನಮಾಡಿದನು. ಸುರತಖಿನ್ನಳಾದ ಆ ಸ್ತ್ರೀಯ ಶರೀರದಿಂದ ಶ್ರಮಜಲಕಣಗಳು ಉತ್ಪತ್ತಿಯಾಗಿ ಅದರಿಂದ ವಿಶ್ವಾಧಾರವಾದ ಜಲೋತ್ಪತ್ತಿಯಾಯಿತು. ಆಕೆಯ ನಿಶ್ವಾಸವಾಯುವೇ ಮಹಾಭೂತಾತ್ಮಕವಾದ ವಾಯುವೆನಿಸಿತು. ಅನಂತರ ಜಲಾಧಾರಸ್ವರೂಪನಾದ ವರುಣನೂ, ಅವನ ವಾಮಭಾಗದಿಂದ ವಾರುಣಿಯೂ, ವಾಯುವಿನ ವಾಮಭಾಗದಿಂದ ವಾಯುವಿಯೂ, ಜನಿಸಿದರು. ಇತ್ತ ಪುರುಷನಿಂದ ಗರ್ಭವತಿಯಾಗಿದ್ದ ಪ್ರಕೃತಿಯು ಶತಮನ್ವಂತರಗಳು ಕಳೆದನಂತರ ಒಂದು ಸುವರ್ಣಾಂಡವನ್ನು ಪ್ರಸುಪಿಸಿ, ಅದನ್ನು ಸಮುದ್ರದೊಳಗೆ ಎಸೆಯಲು ಕುಪಿತನಾದ ಪುರುಷನು ಆಕೆಗೂ ಆಕೆಯ ವಂಶಜರಿಗೂ ಮಕ್ಕಳೇ ಆಗದಂತೆ ಶಾಪವಿತ್ತನು. ಅನಂತರ ಆ ಸ್ತ್ರೀಯ ನಾಲಿಗೆಯ ತುದಿಯಿಂದ ಸರಸ್ವತಿಯ ಅವತಾರವಾಯಿತು. ಆ ಸ್ತ್ರೀಯೂ ಇಬ್ಭಾಗವಾಗಿ ಲಕ್ಷ್ಮಿ ಮತ್ತು ರಾಧೆ ಎನಿಸಿಕೊಂಡಳು.

ಅನಂತರ ಆ ಪುರುಷನೂ ಇಬ್ಭಾಗವಾಗಿ ದಕ್ಷಿಣಾರ್ಧದಲ್ಲಿ ದ್ವಿಭುಜನೂ, ವಾಮಾರ್ಧದಲ್ಲಿ ಚತುರ್ಭುಜನೂ ಆಗಿ ಕ್ರಮವಾಗಿ ಕೃಷ್ಣ ಮತ್ತು ನಾರಾಯಣ ನೆನಿಸಿಕೊಂಡನು. ನಾರಾಯಣನು ಶ್ರೀಕೃಷ್ಣನ ಪ್ರೇರಣೆಯಂತೆ ಲಕ್ಷ್ಮೀ ಮತ್ತು ಸರಸ್ವತಿಯರನ್ನು ಸ್ವೀಕರಿಸಿ ಅವರೊಡನೆ ವೈಕುಂಠಕ್ಕೆ ತೆರಳಿದನು. ಅಲ್ಲಿ ನಾರಾಯಣನ ಅಂಗದಿಂದ ಅನೇಕ ಪಾರ್ಷದರೂ, ಲಕ್ಷ್ಮಿಯ ಅಂಗದಿಂದ ಅನೇಕ ದಾಸಿಯರೂ ಅವತರಿಸಿದರು. ಇತ್ತ ಗೋಲೋಕದಲ್ಲಿದ್ದ ಶ್ರೀಕೃಷ್ಣನ ರೋಮ ಕೂಪಗಳಿಂದ ಅಸಂಖ್ಯ ಗೋಪರೂ, ರಾಧೆಯ ರೋಮಕೂಪಗಳಿಂದ ಅಗಣಿತ ದಾಸಿಯರೂ (ಗೋಪಿಕೆಯರೂ) ಅವತರಿಸಿದರು. ಅನಂತರ ವಿಷ್ಣುಮಾಯಾರೂಪಿಣಿ ಯಾದ ದುರ್ಗಾದೇವಿಯು ಶ್ರೀಕೃಷ್ಣನ ಶರೀರದಿಂದ ಅವತರಿಸಿ ಮೂಲಪ್ರಕೃತಿ ಎನಿಸಿದಳು. ಪರಮಾತ್ಮನ ದಿವ್ಯಶಕ್ತಿಸ್ವರೂಪಿಣಿಯಾದ ಆಕೆಯ ಪ್ರಭಾವದಿಂದಲೇ ನಿಖಿಲ ಜಗತ್ತೂ ಜೀವಿತವಾಗಿರುವುದು.

ಇತ್ತ ಪರಮಾತ್ಮನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಸಸ್ತ್ರೀಕ ನಾಗಿಯೇ ಅವತರಿಸಿದನು. ಅನಂತರ ಪರಮಾತ್ಮನು ಪುನಃ ಇಬ್ಭಾಗವಾಗಿ ವಾಮ ಭಾಗದಿಂದ ಮಹಾದೇವನೂ, ದಕ್ಷಿಣಭಾಗದಿಂದ ಗೋಪಿಕಾವಲ್ಲಭನೂ ಎನಿಸಿದನು. ಶುದ್ಧಸತ್ವಸ್ವರೂಪನಾದ ಆ ಮಹಾದೇವನು ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸಿ, ಅವನ ಮುಂದೆ ರತ್ನಸಿಂಹಾಸನದಲ್ಲಿ ಮಂಡಿಸಿದನು.

ಇಂತು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣರಾದ ತ್ರಿಮೂರ್ತಿಗಳೂ, ಅವರ ಪತ್ನಿಯರೂ ಪಂಚಮಹಾಭೂತಗಳಲ್ಲಿ ಮುಖ್ಯವಾದ ನೀರು ಮತ್ತು ಗಾಳಿಯೂ ಸೃಷ್ಟವಾದವು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

ತೃತೀಯೋಽಧ್ಯಾಯಃ

॥ ಶ್ರೀ ನಾರಾಯಣ ಉವಾಚ ॥

ಅಥಾಂಡಂ ತಜ್ಜಲೇಽತಿಷ್ಠದ್ಯಾವದ್ವೈ ಬ್ರಹ್ಮಣೋ ವಯಃ ।
ತತಃ ಸ್ವಕಾಲೇ ಸಹಸಾ ದ್ವಿಧಾ ರೂಪೋ ಬಭೂವ ಸಃ ॥ ೧ ॥

ತನ್ಮಧ್ಯೇ ಶಿಶುರೇಕಶ್ಚ ಶತಕೋಟಿರವಿಪ್ರಭಃ ।
ಕ್ಷಣಂ ರೋರೂಯಮಾಣಶ್ಚ ಸ ಶಿಶುಃ ಪೀಡಿತಃ ಕ್ಷುಧಾ ॥ ೨ ॥

ಪಿತೃಮಾತೃಪರಿತ್ಯಕ್ತೋ ಜಲಮಧ್ಯೇ ನಿರಾಶ್ರಯಃ ।
ನೈಕಬ್ರಹ್ಮಾಂಡನಾಥೋ ಯೋ ದದರ್ಶೋರ್ಧ್ವಮನಾಥವತ್ ॥ ೩ ॥

ಮೂರನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ಆ ಸ್ತ್ರೀಯಿಂದ ಪರಿತ್ಯಕ್ತನಾದ ಸುವರ್ಣಾಂಡವು ಬ್ರಹ್ಮನ ಆಯುಃಪರಿಮಿತಿಯಷ್ಟು ಕಾಲ ಆ ನೀರಿನಲ್ಲೇ ಇದ್ದು ಅನಂತರ ಇದ್ದಕ್ಕಿದ್ದಂತೆಯೇ ಇಬ್ಭಾಗವಾಯಿತು.

೨. ಅದರ ಮಧ್ಯದಲ್ಲಿ ಕೋಟಿಸೂರ್ಯಪ್ರಭವಾದ ಶಿಶುವೊಂದು ಹಸಿವಿನಿಂದ ಪೀಡಿತವಾಗಿ ಅಳುತ್ತಿತ್ತು.

೩. ಅನಂತರ ಬ್ರಹ್ಮಾಂಡಕ್ಕೂ ನಾಥನಾದ ಆ ಶಿಶುವು ಮಾತಾಪಿತೃಗಳಿಂದ ಪರಿತ್ಯಕ್ತನಾಗಿ ಅನಾಥನಂತೆ ಊರ್ಧ್ವಮುಖವಾಗಿ ನೋಡುತ್ತಿತ್ತು.

ಸ್ಥೂಲಾತ್ಸ್ಥೂಲತಮಃ ಸೋಽಪಿ ನಾಮ್ನಾ ದೇವೋ ಮಹಾವಿರಾಟ್ ।
ಪರಮಾಣುರ್ಯಥಾ ಸೂಕ್ಷ್ಮಾತ್ಪರಃಸ್ಥೂಲಾತ್ತಥಾಪ್ಯಸೌ ॥ ೪ ॥

ತೇಜಸಾಂ ಷೋಡಶಾಂಶೋಽಯಂ ಕೃಷ್ಣಸ್ಯ ಪರಮಾತ್ಮನಃ ।
ಆಧಾರೋಽಸಂಖ್ಯವಿಶ್ವಾನಾಂ ಮಹಾವಿಷ್ಣುಸ್ಸುರೇಶ್ವರಃ ॥ ೫ ॥

ಪ್ರತ್ಯೇಕಂ ರೋಮಕೂಪೇಷು ವಿಶ್ವಾನಿ ನಿಖಿಲಾನಿ ಚ ।
ಅದ್ಯಾಪಿ ತೇಷಾಂ ಸಂಖ್ಯಾಂ ಚ ಕೃಷ್ಣೋ ವಕ್ತುಂ ನ ಹಿ ಕ್ಷಮಃ ॥ ೬ ॥

ಯಥಾಸ್ತಿ ಸಂಖ್ಯಾ ರಜಸಾಂ ವಿಶ್ವಾನಾಂ ನ ಕದಾಚನ ।
ಬ್ರಹ್ಮವಿಷ್ಣುಶಿವಾದೀನಾಂ ತಥಾ ಸಂಖ್ಯಾ ನ ವಿದ್ಯತೇ ॥ ೭ ॥

ಪ್ರತಿವಿಶ್ವೇಷು ಸಂತ್ಯೇವಂ ಬ್ರಹ್ಮವಿಷ್ಣುಶಿವಾದಯಃ ।
ಪಾತಾಲಾದ್ಬ್ರಹ್ಮಲೋಕಾಂತಂ ಬ್ರಹ್ಮಾಂಡಂ ಪರಿಕೀರ್ತಿತಂ ॥ ೮ ॥

---

೪. ಸೂಕ್ಷ್ಮಕ್ಕೆಲ್ಲಾ ಸೂಕ್ಷ್ಮವಾದ ಪರಮಾಣುವಿನಂತಿರುವ ಆ ಶಿಶುವು ಸ್ಥೂಲಕ್ಕೆಲ್ಲ ಸ್ಥೂಲವಾಗಿ ಮಹಾವಿರಾಟ್ ಪುರುಷನೆಂದೆನಿಸಿತು.

೫. ಶ್ರೀಕೃಷ್ಣಪರಮಾತ್ಮನ ಹದಿನಾರನೆಯ ಒಂದಂಶದಿಂದ (ಹದಿನಾರನೆಯ ಒಂದು ತೇಜೋಂಶದಿಂದ) ಅವತರಿಸಿದ ಆ ವಿರಾಟ್ ಪುರುಷನು ಅಸಂಖ್ಯವಿಶ್ವಕ್ಕೆ ಆಧಾರನಾಗಿ ಮಹಾವಿಷ್ಣು ಎನಿಸಿಕೊಂಡನು.

೬. ಆ ಮಹಾವಿಷ್ಣುವಿನ ಪ್ರತಿರೋಮಕೂಪಗಳಲ್ಲಿಯೂ, ಶ್ರೀಕೃಷ್ಣ ಪರಮಾತ್ಮನಿಂದಲೂ ಗಣಿಸಲಸಾಧ್ಯವಾದ ನಿಖಿಲ ವಿಶ್ವವೂ ಅಡಗಿರುವುದು.

೭. ಪ್ರಪಂಚದಲ್ಲಿರುವ ಧೂಳಿನ ಕಣಗಳನ್ನು ಎಣಿಸಲೆಂತು ಅಸಾಧ್ಯವೋ, ಅಂತೆಯೇ ಆ ರೋಮಕೂಪಗಳಲ್ಲಿರುವ ಬ್ರಹ್ಮ ವಿಷ್ಣು ಶಿವಾದಿಗಳನ್ನು ಎಣಿಸಲಾಗುವುದಿಲ್ಲ.

೮. ಬ್ರಹ್ಮ ವಿಷ್ಣು ಶಿವಾದಿಗಳು ಪ್ರತಿವಿಶ್ವದಲ್ಲೂ ಇರುವರು. ಪಾತಾಳದಿಂದ ಬ್ರಹ್ಮಲೋಕದವರೆಗೆ ಬ್ರಹ್ಮಾಂಡವೆನಿಸುವುದು.

ತತ ಊರ್ಧ್ವೇ ಚ ವೈಕುಂಠೋ ಬ್ರಹ್ಮಾಂಡಾದ್ಬಹಿರೇವ ಸಃ ।
ಸ ಚ ಸತ್ಯಸ್ವರೂಪಶ್ಚ ಶಶ್ವನ್ನಾರಾಯಣೋ ಯಥಾ ॥ ೯ ॥

ತದೂರ್ಧ್ವೇ ಚೈವ ಗೋಲಕಃ ಪಂಚಾಶತ್ಕೋಟಿಯೋಜನಾತ್ ।
ನಿತ್ಯಃ ಸತ್ಯಸ್ವರೂಪಶ್ಚ ಯಥಾ ಕೃಷ್ಣಸ್ತಥಾಪ್ಯಯಂ ॥ ೧೦ ॥

ಸಪ್ತದ್ವೀಪಮಿತಾ ಪೃಥ್ವೀ ಸಪ್ತಸಾಗರಸಂಯುತಾ ।
ಏಕೋನಪಂಚಾಶದುಪದ್ವೀಪಾಸಂಖ್ಯವನಾನ್ವಿತಾ ॥ ೧೧ ॥

ಊರ್ಧ್ವಂ ಸಪ್ತಸುವರ್ಲೋಕಾ ಬ್ರಹ್ಮಲೋಕಸಮನ್ವಿತಾಃ ।
ಪಾತಾಲಾನಿ ಚ ಸಪ್ತಾಧಶ್ಚೈವಂ ಬ್ರಹ್ಮಾಂಡಮೇವ ಚ ॥ ೧೨ ॥

ಊರ್ಧ್ವಂ ಧರಾ ಯಾ ಭೂರ್ಲೋಕೋ ಭುವರ್ಲೋಕಸ್ತತಃ ಪರಃ ।
ಸ್ವರ್ಲೋಕಸ್ತು ತತಃ ಪಶ್ಚಾನ್ಮಹರ್ಲೋಕಸ್ತತೋ ಜನಃ ॥ ೧೩ ॥

---

೯. ಅದರ ಮೇಲೆ ಬ್ರಹ್ಮಾಂಡಕ್ಕೆ ಬಹಿರ್ಭೂತವೂ, ನಾರಾಯಣನಂತೆ ಸತ್ಯಸ್ವರೂಪವೂ ಆದ ವೈಕುಂಠಲೋಕವಿರುವುದು.

೧೦. ಅದಕ್ಕಿಂತಲೂ ಐವತ್ತು ಕೋಟಿಯೋಜನ ಮೇಲುಭಾಗದಲ್ಲಿ ಶ್ರೀಕೃಷ್ಣ ನಂತೆ ನಿತ್ಯವೂ, ಸತ್ಯಸ್ವರೂಪವೂ ಆದ ಗೋಲೋಕವಿರುವುದು.

೧೧. ಪೃಥ್ವಿಯಲ್ಲಿ ಸಪ್ತದ್ವೀಪಗಳೂ, ಸಪ್ತಸಾಗರಗಳೂ, ನಲವತ್ತೊಂಭತ್ತು ಉಪದ್ವೀಪಗಳೂ, ಅಗಣಿತ ವನಗಳೂ ತುಂಬಿವೆ.

೧೨. ಪೃಥ್ವಿ ಅಥವಾ ಭೂಲೋಕದಿಂದ ಮೇಲಕ್ಕೆ ಬ್ರಹ್ಮಲೋಕವೂ ಕೂಡಿ ಏಳು ಸ್ವರ್ಗಲೋಕಗಳಿವೆ. ಕೆಳಗೆ ಪಾತಾಳದವರೆಗೆ ಏಳು ಲೋಕಗಳಿವೆ. ಇವೆಲ್ಲವೂ ಸೇರಿ ಬ್ರಹ್ಮಾಂಡವೆನಿಸುವುದು.

೧೩–೧೪. ಧರೆಯ ಮೇಲುಭಾಗದಲ್ಲಿ ಭೂಲೋಕವೂ, ಅನಂತರ ಭುವ ರ್ಲೋಕ, ಸ್ವರ್ಗಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯ

ತತಃ ಪರಸ್ತಪ್ರೋಲೋಕಃ ಸತ್ಯಲೋಕಸ್ತತಃ ಪರಃ ।
ತತಃ ಪರೋ ಬ್ರಹ್ಮಲೋಕಸ್ತಪ್ತಕಾಂಚನನಿರ್ಮಿತಃ ॥ ೧೪ ॥

ಏವಂ ಸರ್ವಂ ಕೃತ್ರಿಮಂ ತದ್ಬಾಹ್ಯಾಭ್ಯಂತರ ಏವ ಚ ।
ತದ್ವಿನಾಶೇ ವಿನಾಶಶ್ಚ ಸರ್ವೇಷಾಮೇವ ನಾರದ ॥ ೧೫ ॥

ಜಲಬುದ್ಬುದವತ್ಸರ್ವಂ ವಿಶ್ವಸಂಘಮನಿತ್ಯಕಂ ।
ನಿತ್ಯೌ ಗೋಲೋಕವೈಕುಂಠೌ ಸತ್ಯೌ ಶಶ್ವದಕೃತ್ರಿಮೌ ॥ ೧೬ ॥

ಲೋಮ ಕೂಪೇ ಚ ವಿಧ್ಯಂಡಂ ಪ್ರತ್ಯೇಕಂ ತಸ್ಯ ನಿಶ್ಚಿತಂ ।
ಏಷಾಂ ಸಂಖ್ಯಾಂ ನ ಜಾನಾತಿ ಕೃಷ್ಣೋಽನ್ಯಸ್ಯಾಪಿ ಕಾ ಕಥಾ ॥ ೧೭ ॥

ಪ್ರತ್ಯೇಕಂ ಪ್ರತಿವಿಧ್ಯಂಡೆ ಬ್ರಹ್ಮವಿಷ್ಣುಶಿವಾದಯಃ ।
ತಿಸ್ರಃ ಕೋಟ್ಯಃ ಸುರಾಣಾಂ ಚ ಸಂಖ್ಯಾ ಸರ್ವತ್ರ ಪುತ್ರಕ ॥ ೧೮ ॥

ಲೋಕಗಳು ಮೇಲೆ ಮೇಲೆ ಕ್ರಮವಾಗಿವೆ. ಎಲ್ಲದಕ್ಕಿಂತಲೂ ಮೇಲೆ ತಪ್ತಕಾಂಚನ ನಿರ್ಮಿತವಾದ ಬ್ರಹ್ಮಲೋಕವಿದೆ.

೧೫. ಈ ಲೋಕಗಳೆಲ್ಲವೂ ಒಳಗೂ ಹೊರಗೂ ಕೃತ್ರಿಮವಾದವು. ಎಲೈ ನಾರದನೇ, ಬ್ರಹ್ಮಾಂಡವು:ನಾಶವಾದರೆ ಈ ಲೋಕಗಳೆಲ್ಲವೂ ನಾಶವಾಗುವುವು.

೧೬. ವಿಶ್ವಸಮೂಹವೆಲ್ಲವೂ ನೀರಿನ ಗುಳ್ಳೆಯಂತೆ ಚಂಚಲವೂ. ಅನಿತ್ಯವೂ ಆದುದು. ಗೋಲೋಕ ಮತ್ತು ವೈಕುಂಠಲೋಕಗಳು ಮಾತ್ರ ಅಕೃತ್ರಿಮವೂ, ಸತ್ಯಸ್ವರೂಪವೂ ಆದವು.

೧೭. ಪರಮಾತ್ಮನ ಪ್ರತಿರೋಮಕೂಪಗಳಲ್ಲಿಯೂ ಒಂದೊಂದು ಸುವರ್ಣಾಂಡವಿದೆ. ಇವುಗಳ ಪರಿಮಿತಿಯನ್ನು ಶ್ರೀಕೃಷ್ಣಪರಮಾತ್ಮನೇ ತಿಳಿಯದಿರುವಾಗ ಉಳಿದವರ ಪಾಡು ಏನು?

೧೮. ಪ್ರತಿಯೊಂದು ಬ್ರಹ್ಮಾಂಡದಲ್ಲೂ ಬ್ರಹ್ಮವಿಷ್ಣುಶಿವಾದಿಗಳೂ, ಮೂರು ಕೋಟಿದೇವತೆಗಳೂ, ಪ್ರತ್ಯೇಕ ಪ್ರತ್ಯೇಕವಾಗಿ ನೆಲಸಿರುವರು.

ದಿಗೀಶಾಶ್ಚೈವ ದಿಕ್ಪಾಲಾ ನಕ್ಷತ್ರಾಣಿ ಗ್ರಹಾದಯಃ ।
ಭುವಿ ವರ್ಣಾಶ್ಚ ಚತ್ವಾರೋಽಧೋ ನಾಗಾಶ್ಚ ಚರಾಚರಾಃ ॥ ೧೯ ॥

ಅಥ ಕಾಲೇನ ಸ ವಿರಾಡೂರ್ಧ್ವಂ ದೃಷ್ಟ್ವಾ ಪುನಃ ಪುನಃ ।
ಡಿಂಭಾಂತರಂ ಚ ಶೂನ್ಯಂ ಚ ನ ದ್ವಿತೀಯಂ ಕಥಂ ಚ ನ ॥ ೨೦ ॥

ಚಿಂತಾಮವಾಪ ಕ್ಷುದ್ಯುಕ್ತೋ ರುರೋದ ಚ ಪುನಃ ಪುನಃ ।
ಜ್ಞಾನಂ ಪ್ರಾಪ್ಯ ತದಾದಧ್ಯೌ ಕೃಷ್ಣಂ ಪರಮಪೂರುಷಂ ॥ ೨೧ ॥

ತತೋ ದದರ್ಶ ತತ್ರೈವ ಬ್ರಹ್ಮಜ್ಯೋತಿಃ ಸನಾತನಂ ।
ನವೀನನೀರದಶ್ಯಾಮಂ ದ್ವಿಭುಜಂ ಪೀತವಾಸಸಂ ॥ ೨೨ ॥

ಸಸ್ಮಿತಂ ಮುರಲೀಹಸ್ತಂ ಭಕ್ತಾನುಗ್ರಹಕಾರಕಂ ।
ಜಹಾಸ ಬಾಲಕಸ್ತುಷ್ಟೋ ದೃಷ್ಟ್ವಾ ಜನಕಮೀಶ್ವರಂ ॥ ೨೩ ॥

---

೧೯. ಅಷ್ಟದಿಕ್ಪಾಲಕರೂ, ನವಗ್ರಹಗಳೂ, ನಕ್ಷತ್ರಗಳೂ, ಬ್ರಾಹ್ಮಣಾದಿ ಚತುರ್ವರ್ಣದವರೂ, ಪಾತಾಳದಲ್ಲಿರುವ ನಾಗರೂ, ಚರಾಚರಾತ್ಮಕವಾದ ನಿಖಿಲ ಪ್ರಪಂಚವೂ, ಪ್ರತಿಬ್ರಹ್ಮಾಂಡದಲ್ಲೂ ಪ್ರತ್ಯೇಕವಾಗಿರುವರು.

೨೦. ಇತ್ತ ಶಿಶುರೂಪನಾದ ವಿರಾಟ್ಪುರುಷನು ಆ ಮೊಟ್ಟೆಯೊಳಗಡೆ ತಾನು ಅದ್ವಿತೀಯನಾಗಿರುವುದನ್ನು ನೋಡಿ, ಅಸಹಾಯಕನಾಗಿ ಮೇಲೆ ನೋಡಲಾರಂಭಿಸಿದನು.

೨೧. ಹಸಿವಿನಿಂದ ಬಳಲಿಬೇಸತ್ತು, ಅಳುತ್ತ ಹಾಗೆಯೇ ಶ್ರೀಕೃಷ್ಣ ಪರಮಾತ್ಮನು ಪರಮಪುರುಷನೆಂದು ಬಗೆದು ಧ್ಯಾನಮಾಡಲಾರಂಭಿಸಿದನು.

೨೨. ಅನಂತರ ನೀಲಮೇಘಶ್ಯಾಮನೂ, ದ್ವಿಭುಜನೂ, ಪೀತಾಂಬರಧಾರಿಯೂ ಆದ ಪರಮಾತ್ಮನ ಅನಾದಿ ಜ್ಯೋತಿಯನ್ನು ದರ್ಶನಮಾಡಿದನು.

೨೩. ಕೈಯಲ್ಲಿ ಕೊಳಲನ್ನು ಹಿಡಿದು ಮಂದಹಾಸದಿಂದ ಭಕ್ತಾನುಗ್ರಹ ಪರನಾಗಿ ನಿಂತಿರುವ ತನ್ನ ಜನಕನಾದ ಆ ಪರಮಾತ್ಮನನ್ನು ಬಾಲಕನಾದ ವಿರಾಟ್ಪುರುಷನು ನೋಡಿ ಆನಂದಪಟ್ಟನು.

ವರಂ ತಸ್ಮೈ ದದೌ ತುಷ್ಟೋ ವರೇಶಃ ಸಮಯೋಚಿತಂ ।
ಮತ್ಸಮೋ ಜ್ಞಾನಯುಕ್ತಶ್ಚ ಕ್ಷುತ್ಪಿಪಾಸಾವಿವರ್ಜಿತಃ ॥ ೨೪ ॥

ಬ್ರಹ್ಮಾಂಡಾಸಂಖ್ಯನಿಲಯೋ ಭವ ವತ್ಸ ಲಯಾವಧಿ ।
ನಿಷ್ಕಾಮೋ ನಿರ್ಭಯಶ್ಚೈವ ಸರ್ವೇಷಾಂ ವರದೋ ವರಃ ॥
ರೋಗಮೃತ್ಯುಜರಾಶೋಕಪೀಡಾದಿಪರಿವರ್ಜಿತಃ ॥ ೨೫ ॥

ಇತ್ಯುಕ್ತ್ವಾ ತದ್ದಕ್ಷಕರ್ಣೇ ಮಹಾಮಂತ್ರಂ ಷಡಕ್ಷರಂ ।
ತ್ರಿಃ ಕೃತ್ವಾ ಪ್ರಜಜಾಪಾದೌ ವೇದಾಂಗಮವರಂ ಪರಂ ॥ ೨೬ ॥

ಪ್ರಣವಾದಿ ಚತುರ್ಥ್ಯಂತಂ ಕೃಷ್ಣ ಇತ್ಯಕ್ಷರದ್ವಯಂ ।
ವಹ್ನಿಜ್ವಾಲಾಂತಮಿಷ್ಟಂ ಚ ಸರ್ವವಿಘ್ನಹರಂ ಪರಂ ॥ ೨೭ ॥

---

೨೪. ಆಗ ವರದಾತೃವಾದ ಶ್ರೀಕೃಷ್ಣನು ತೃಪ್ತಿಗೊಂಡು 'ಹಸಿವು ಬಾಯಾರಿಕೆಗಳಿಗೆ ಸಿಲುಕದೆ ನನ್ನಂತೆಯೇ ಜ್ಞಾನನಂದಮಯನಾಗು' ಎಂದು ಆತನಿಗೆ ವರವಿತ್ತನು.

೨೫. 'ಎಲೈ, ವತ್ಸನಾದ ಹಿರಣ್ಯಗರ್ಭನೇ, ನೀನು ಪ್ರಳಯದವರೆವಿಗೂ ಅಸಂಖ್ಯಬ್ರಹ್ಮಾಂಡವಲ್ಲೂ, ನಿಷ್ಕಾಮನೂ ಮತ್ತು ನಿರ್ಭಯನೂ ಆಗಿ ವಾಸಿಸುತ್ತಾ ಸರ್ವರಿಗೂ ವರಪ್ರದನಾಗು. ಮತ್ತು ರೋಗಶೋಕಜರಾಮರಣವರ್ಜಿತನಾಗು.'

೨೬. ಹೀಗೆ ಹೇಳಿ ಪರಮಾತ್ಮನು ಆ ಹಿರಣ್ಯಗರ್ಭನ ಬಲಗಿವಿಯಲ್ಲಿ 'ಓಂ ನಮೋ ಕೃಷ್ಣಾಯ' ಎಂಬ ಆರು ಅಕ್ಷರದ ಮಹಾಮಂತ್ರವನ್ನು ಮೂರು ಸಾರಿ ಉಪದೇಶಿಸಿ ಜಪಿಸಲು ಹೇಳಿದನು.

೨೭. 'ಓಂ'ಕಾರದಿಂದ ಪ್ರಾರಂಭವಾಗಿ 'ಕೃಷ್ಣಾಯ' ಎಂಬ ಚತುರ್ಥೀ ವಿಭಕ್ತಿಯೇ ಕೊನೆಯಾಗಿವುಳ್ಳ ಈ ಮಂತ್ರದಲ್ಲಿ 'ಕೃಷ್ಣ' ಎಂಬೆರಡು ಅಕ್ಷರಗಳು ಅಗ್ನಿಜ್ವಾಲೆಯಂತೆ ಪವಿತ್ರವೂ, ಸರ್ವವಿಘ್ನನಾಶಕವೂ ಆಗಿದೆ.

ಮಂತ್ರಂ ದತ್ವಾ ತದಾಹಾರಂ ಕಲ್ಪಯಾಮಾಸ ವೈ ಪ್ರಭುಃ ।
ಶ್ರೂಯತಾಂ ತದ್ಬ್ರಹ್ಮಪುತ್ರ ನಿಬೋಧ ಕಥಯಾಮಿ ತೇ ॥ ೨೮ ॥

ಪ್ರತಿವಿಶ್ವೇಷು ನೈವೇದ್ಯಂ ದದ್ಯಾದ್ವೈ ವೈಷ್ಣವೋ ಜನಃ ।
ಷೋಡಶಾಂಶವಿಷಯಿಣೋ ವಿಷ್ಣೋಃ ಪಂಚದಶಾಸ್ಯ ವೈ ॥ ೨೯ ॥

ನಿರ್ಗುಣಸ್ಯಾತ್ಮನಶ್ಚೈವ ಪರಿಪೂರ್ಣತಮಸ್ಯ ಚ ।
ನೈವೇದ್ಯೇನ ಚ ಕೃಷ್ಣಸ್ಯ ನ ಹಿ ಕಿಂಚಿತ್ಪ್ರಯೋಜನಂ ॥ ೩೦ ॥

ಯದ್ದದಾತಿ ಚ ನೈವೇದ್ಯಂ ಯಸ್ಮೈ ದೇವಾಯ ಯೋ ಜನಃ ।
ಸ ಚ ಖಾದತಿ ತತ್ಸರ್ವಂ ಲಕ್ಷ್ಮೀದೃಷ್ಟ್ಯಾ ಪುನರ್ಭವೇತ್ ॥ ೩೧ ॥

ತಂ ಚ ಮಂತ್ರಂ ವರಂ ದತ್ವಾ ತಮುವಾಚ ಪುನರ್ವಿಭುಃ ।
ವರ ಅನ್ಯಃ ಕ ಇಷ್ಟಸ್ತೇ ತಂ ಮೇ ಬ್ರೂಹಿ ದದಾಮಿ ತೇ ॥ ೩೨ ॥

---

೨೮. ಹೀಗೆ ಪರಮಾತ್ಮನು ಹಿರಣ್ಯಗರ್ಭನಿಗೆ ಮಂತ್ರೋಪದೇಶಮಾಡಿ, ಅವನ ಹಸಿವು ನಿವಾರಣೆಗಾಗಿ ಕಲ್ಪಿಸಿದ ಆಹಾರಕ್ರಮವನ್ನು ವಿವರಿಸುವೆನು. ಎಲೈ ನಾರದನೇ ಅವಧರಿಸು.

೨೯. ಪ್ರತಿವಿಶ್ವದಲ್ಲೂ ವಿಷ್ಣುಭಕ್ತರು ನಾರಾಯಣನಿಗೆ ಷೋಡಶೋಪಚಾರಗಳಿಂದಲೇ ತೃಪ್ತಿಗೊಳಿಸುವರು. ಆದರೆ ಹಿರಣ್ಯಗರ್ಭನಿಗೆ ಪಂಚದಶೋಪಚಾರಗಳಿಂದಲೇ ತೃಪ್ತಿಯಾಗುವುದು.

೩೦. ನಿರ್ಗುಣನೂ, ಪರಿಪೂರ್ಣತಮನೂ ಆದ ಕೃಷ್ಣಪರಮಾತ್ಮನಿಗೆ ನೈವೇದ್ಯವನ್ನರ್ಪಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.

೩೧. ಯಾವ ಮನುಷ್ಯನು ಯಾವ ದೇವರನ್ನುದ್ದೇಶಿಸಿ ಯಾವ ನೈವೇದ್ಯವನ್ನರ್ಪಿಸುವನೋ, ಅದೇ ನಿವೇದಿತ ವಸ್ತುವನ್ನೇ ಲಕ್ಷ್ಮೀಕಟಾಕ್ಷದಿಂದ ಅವನು ಮುಂದೆ ತಿನ್ನುವನು.

೩೨. ಪರಮಾತ್ಮನು ಷಡಕ್ಷರ ಮಂತ್ರಾತ್ಮಕವಾದ ಆ ವರವನ್ನು ಕೊಟ್ಟು 'ಇನ್ನು ಯಾವುದಾದರೂ ನಿನಗೆ ಇಷ್ಟವಾದ ವರವಿದ್ದರೆ ಬೇಡು, ಕೊಡುವೆನು' ಎಂದು ಹಿರಣ್ಯಗರ್ಭನಿಗೆ ಹೇಳಿದನು.

ಕೃಷ್ಣಸ್ಯ ವಚನಂ ಶ್ರುತ್ವಾ ತಮುವಾಚ ಮಹಾವಿರಾಟ್ ।
ಅದಂತೋ ಬಾಲಕಸ್ತತ್ರ ವಚನಂ ಸಮಯೋಚಿತಂ ॥ ೩೩ ॥

॥ ಮಹಾವಿರಾಡುವಾಚ ॥

ವರಂ ಮೇ ತ್ವತ್ಪದಾಂಭೋಜೇ ಭಕ್ತಿರ್ಭವತು ನಿಶ್ಚಲಾ ।
ಸಂತತಂ ಯಾವದಾಯುರ್ಮೇ ಕ್ಷಣಂ ವಾ ಸುಚಿರಂ ಚ ವಾ ॥ ೩೪ ॥

ತ್ವದ್ಭಕ್ತಿಯುಕ್ತೋ ಯೋ ಲೋಕೇ ಜೀವನ್ಮುಕ್ತಃ ಸ ಸಂತತಂ ।
ತ್ವದ್ಭಕ್ತಿಹೀನೋ ಮೂರ್ಖಶ್ಚ ಜೀವನ್ನಪಿ ಮೃತೋ ಹಿ ಸಃ ॥ ೩೫ ॥

ಕಿಂ ತಜ್ಜಪೇನ ತಪಸಾ ಯಜ್ಞೇನ ಯಜನೇನ ಚ ।
ವ್ರತೇನೈವೋಪವಾಸೇನ ಪುಣ್ಯತೀರ್ಥನಿಷೇವಯಾ ॥ ೩೬ ॥

---

೩೩. ಕೃಷ್ಣಪರಮಾತ್ಮನ ಮಾತನ್ನು ಕೇಳಿ, ಇನ್ನೂ ಹಲ್ಲೂ ಕೂಡ ಮೊಳೆಯದ ಶಿಶುರೂಪನಾದ ಆ ಮಹಾವಿರಾಟ್ಪುರುಷನು ಸಮಯೋಚಿತವಾದ ಕೆಲವು ನುಡಿಗಳನ್ನಾಡಿದನು.

೩೪. ಮಹಾವಿರಾಟ್ :—ಎಲೈ ಪರಮಾತ್ಮನೇ, ನಾನು ಜೀವಿಸಿರುವವರೆಗೂ ನಿನ್ನ ಪಾದಪದ್ಮಗಳಲ್ಲಿ ಅಚಲವಾದ ಭಕ್ತಿಯು ಕ್ಷಣಕಾಲವೂ ಎಡೆಬಿಡದೆ ಸಂತತವಾಗಿರುವಂತೆ ವರವನ್ನು ದಯಪಾಲಿಸು.

೩೫. ಪ್ರಪಂಚದಲ್ಲಿ ಪರಮಾತ್ಮನ ಭಕ್ತನು ಮಾತ್ರ ಜೀವನ್ಮುಕ್ತನಾಗುವನು. ಪರಮಾತ್ಮನಲ್ಲಿ ಭಕ್ತಿಯಿಲ್ಲದವನು ಜೀವಿಸಿದ್ದರೂ ಮೃತಪ್ರಾಯನಾಗುವನು.

೩೬. ಶ್ರೀಕೃಷ್ಣಪರಮಾತ್ಮನಲ್ಲಿ ಭಕ್ತಿಯಿಲ್ಲದ ಕೇವಲ ಜಪದಿಂದಾಗಲೀ, ತಪಸ್ಸಿನಿಂದಾಗಲೀ, ಯಜ್ಞಯಾಗಗಳಿಂದಾಗಲೀ, ವ್ರತೋಪವಾಸಗಳಿಂದಾಗಲೀ, ಪುಣ್ಯತೀರ್ಥಯಾತ್ರೆಗಳಿಂದಾಗಲೀ ಯಾವ ಪ್ರಯೋಜನವೂ ಇಲ್ಲ.

ಕೃಷ್ಣಭಕ್ತಿವಿಹೀನಸ್ಯ ಪುಂಸಸ್ಸ್ಯಾಜ್ಜೀವನಂ ವೃಥಾ ।
ಯೇನಾತ್ಮನಾ ಜೀವಿತಶ್ಚ ತೇನೈವ ನ ಹಿ ಮನ್ಯತೇ ॥ ೩೭ ॥

ಯಾವದಾತ್ಮಾ ಶರೀರೇಽಸ್ತಿ ತಾವತ್ಸ್ಯಾಚ್ಛಕ್ತಿಸಂಯುತಃ ।
ಪಶ್ಚಾದ್ಯಾಂತಿ ಗತೇ ತಸ್ಮಿನ್ನಸ್ವತಂತ್ರಾಶ್ಚ ಶಕ್ತಯಃ ॥ ೩೮ ॥

ಸ ಚ ತ್ವಂ ಚ ಮಹಾಭಾಗ ಸರ್ವಾತ್ಮಾ ಪ್ರಕೃತೇಃ ಪರಃ ।
ಸ್ವೇಚ್ಛಾಮಯಶ್ಚ ಸರ್ವಾದ್ಯೋ ಬ್ರಹ್ಮಜ್ಯೋತಿಃ ಸನಾತನಃ ॥ ೩೯ ॥

ಇತ್ಯುಕ್ತ್ವಾ ಬಾಲಕಸ್ತತ್ರ ವಿರರಾಮ ಚ ನಾರದ ।
ಉವಾಚ ಕೃಷ್ಣಃ ಪ್ರತ್ಯುಕ್ತಿಂ ಮಧುರಾಂ ಶ್ರುತಿಸುಂದರೀಂ ॥ ೪೦ ॥

॥ ಶ್ರೀಕೃಷ್ಣ ಉವಾಚ ॥

ಸುಚಿರಂ ಸುಸ್ಥಿರಂ ತಿಷ್ಠ ಯಥಾಹಂ ತ್ವಂ ತಥಾ ಭವ ।
ಅಸಂಖ್ಯ ಬ್ರಹ್ಮಣಾಂ ಪಾತೇ ಪಾತಸ್ತೇ ನ ಭವಿಷ್ಯತಿ ॥ ೪೧ ॥

---

೩೭. ಕೃಷ್ಣಪರಮಾತ್ಮನಲ್ಲಿ ಭಕ್ತಿಯಿಲ್ಲದ ಮನುಜನ ಜೀವನವು ವ್ಯರ್ಥವಾದುದು. ಯಾವ ಆತ್ಮನಿಂದ ಪ್ರಾಪಂಚಿಕವಾದ ಸಕಲ ವ್ಯಾಪಾರವೂ ನಡೆಯುವುದೋ ಆ ಆತ್ಮನ ಸ್ವರೂಪವನ್ನು ತಿಳಿಯಬೇಡವೇ?

೩೮. ಶರೀರದಲ್ಲಿ ಆತ್ಮನಿರುವವರೆಗೆ ಮನುಜನಿಗೆ ಸರ್ವಶಕ್ತಿಗಳೂ ಇರುವುವು. ಶಕ್ತಿ ಎಲ್ಲವೂ ಸ್ವತಂತ್ರವಲ್ಲದುದರಿಂದ ಆತ್ಮನ ಹಿಂದೆಯೇ ಎಲ್ಲವೂ ಹೊರಡುವುವು.

೩೯. ಎಲೈ, ಪರಮಾತ್ಮನೇ! ನೀನಾದರೋ ಪ್ರಕೃತಿಗಿಂತ ಶ್ರೇಷ್ಠನೂ, ಸ್ವೇಚ್ಛಾಮಯನೂ, ಅನಾದಿಯೂ ಆದ ಪರಬ್ರಹ್ಮಜ್ಯೋತಿಸ್ವರೂಪನಾಗಿರುವೆ.

೪೦. ಬಾಲಕನಾದ ಆ ವಿರಾಟ್ಪುರುಷನು ಇಂತು ನುಡಿದು ಸುಮ್ಮನಾಗಲು ಶ್ರೀಕೃಷ್ಣಪರಮಾತ್ಮನು ಶ್ರವಣಾನಂದಜನಕವೂ, ಮಧುರವೂ ಆದ ಕೆಲವು ನುಡಿಗಳನ್ನಾಡಿದನು.

೪೧. ಶ್ರೀಕೃಷ್ಣ:—ನೀನು ನನ್ನಂತೆಯೇ ಅನೇಕಕಾಲ ಶಾಶ್ವತವಾಗಿರು. ಅನೇಕ ಚತುರ್ಮುಖಬ್ರಹ್ಮರ ಪತನವಾದರೂ ನೀನು ಅವಿನಾಶಿಯಾಗಿರುವೆ.

ಅಂಶೇನ ಪ್ರತಿವಿಧ್ಯಂಡೇ ತ್ವಂ ಚ ಪುತ್ರ ವಿರಾಡ್ ಭವ ।
ತ್ವನ್ನಾಭಿಪದ್ಮೇ ಬ್ರಹ್ಮಾ ಚ ವಿಶ್ವಸ್ರಷ್ಟಾ ಭವಿಷ್ಯತಿ ॥ ೪೨ ॥

ಲಲಾಟೇ ಬ್ರಹ್ಮಣಶ್ಚೈವ ರುದ್ರಾಶ್ಚೈಕಾದಶೈವ ತು ।
ಶಿವಾಂಶೇನ ಭವಿಷ್ಯಂತಿ ಸೃಷ್ಟಿಸಂಚರಣಾಯ ವೈ ॥ ೪೩ ॥

ಕಾಲಾಗ್ನಿರುದ್ರಸ್ತೇಷ್ವೇಕೋ ವಿಶ್ವಸಂಹಾರಕಾರಕಃ ।
ಪಾತಾ ವಿಷ್ಣುಶ್ಚ ವಿಷಯೀ ಕ್ಷುದ್ರಾಂಶೇನ ಭವಿಷ್ಯತಿ ॥ ೪೪ ॥

ಮದ್ಭಕ್ತಿಯುಕ್ತಃ ಸತತಂ ಭವಿಷ್ಯಸಿ ವರೇಣ ಮೇ ।
ಧ್ಯಾನೇನ ಕಮನೀಯಂ ಮಾಂ ನಿತ್ಯಂ ದ್ರಕ್ಷ್ಯಸಿ ನಿಶ್ಚಿತಂ ॥ ೪೫ ॥

ಮಾತರಂ ಕಮನೀಯಾಂ ಚ ಮಮ ವಕ್ಷಃಸ್ಥಲಸ್ಥಿತಾಂ ।
ಯಾಮಿ ಲೋಕಂ ತಿಷ್ಠ ವತ್ಸೇತ್ಯುಕ್ತ್ವಾ ಸೋಽನ್ತರಧೀಯತ ॥ ೪೬ ॥

---

೪೨. 'ಎಲೈ ಪುತ್ರನಾದ ಮಹಾವಿರಾಟ್ಪುರುಷನೇ ! ನೀನು ಪ್ರತಿ ಬ್ರಹ್ಮಾಂಡದಲ್ಲೂ ಒಂದೊಂದಂಶದಿಂದ ವಿರಾಟ್ಪುರುಷನೆನಿಸಿಕೊಂಡಿರು. ವಿಶ್ವಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನು ನಿನ್ನ ನಾಭಿಕಮಲದಿಂದ ಅವತರಿಸುವನು.

೪೩. ಆ ಚತುರ್ಮುಖಬ್ರಹ್ಮನ ಲಲಾಟಪ್ರದೇಶದಿಂದ ಏಕಾದಶರುದ್ರರು ಶಿವಾಂಶದಿಂದ ಅವತರಿಸಿ ಸೃಷ್ಟಿಸಂಹಾರಣೆಯಲ್ಲಿ ತೊಡಗುವರು.

೪೪. ಅವರಲ್ಲಿ ಕಾಲಾಗ್ನಿರುದ್ರನೆಂಬೊಬ್ಬನು ಮಾತ್ರ ವಿಶ್ವಸಂಹಾರಕರ್ತನಾಗುವನು. ನಿನ್ನ ಕ್ಷುದ್ರಾಂಶದಿಂದ ವಿಷ್ಣುವು ಅವತರಿಸಿ ಜಗತ್ಪಾಲಕನಾಗುವನು.

೪೫. ನೀನು ನನ್ನ ವರದಿಂದ ನನ್ನಲ್ಲಿ ಅಚಲವಾದ ಭಕ್ತಿಯುಳ್ಳವನಾಗುವೆ. ನಿತ್ಯವೂ ಧ್ಯಾನಾಸಕ್ತನಾಗಿ ನನ್ನ ದಿವ್ಯಸುಂದರರೂಪವನ್ನು ಮನಗಾಣುವೆ.

೪೬. ಅಲ್ಲದೆ ನನ್ನ ವಕ್ಷಃಸ್ಥಲದಲ್ಲಿ ನಿತ್ಯವೂ ನೆಲೆಸಿರುವ ನಿನ್ನ ವತ್ಸಲೆಯಾದ ತಾಯಿಯನ್ನೂ ಕೂಡ ನೀನು ನೋಡುತ್ತಿರುವೆ. ನಾನು ಹೋಗುವೆನು. ನೀನು ಇಲ್ಲಿಯೇ ಇರು' ಎಂದು ಹೇಳಿ ಪರಮಾತ್ಮನು ಅಂತರ್ಧಾನಹೊಂದಿದನು.

ಗತ್ವಾ ಚ ನಾಕಂ ಬ್ರಹ್ಮಾಣಂ ಶಂಕರಂ ಸ ಉವಾಚ ಹ ।
ಸ್ರಷ್ಟಾರಂ ಸೃಷ್ಟಿವಿನಾಶಂ ಚ ಸಂಹರ್ತಾರಂ ಚ ತತ್‌ಕ್ಷಣಂ ॥ ೪೭ ॥

॥ ಶ್ರೀ ಕೃಷ್ಣ ಉವಾಚ ॥

ಸೃಷ್ಟಿಂ ಸ್ರಷ್ಟುಂ ಗಚ್ಛ ವತ್ಸ ನಾಭಿಪದ್ಮೋದ್ಭವೋದ್ಭವ ।
ಮಹಾವಿರಾಡ್ ಲೋಮಕೂಪೇ ಕ್ಷುದ್ರಸ್ಯ ಚ ವಿಧೇಃ ಶೃಣು ॥ ೪೮ ॥

ಗಚ್ಛ ವತ್ಸ ಮಹಾದೇವ ಬ್ರಹ್ಮಭಾಲೋದ್ಭವೋ ಭವ ।
ಅಂಶೇನ ಚ ಮಹಾಭಾಗ ಸ್ವಯಂ ಚ ಸುಚಿರಂ ತಪಃ ॥ ೪೯ ॥

ಇತ್ಯುಕ್ತ್ವಾ ಜಗತಾಂ ನಾಥೋ ವಿರರಾಮ ವಿಧೇಃ ಸುತಃ ।
ಜಗಾಮ ನತ್ವಾ ತಂ ಬ್ರಹ್ಮಾ ಶಿವಶ್ಚ ಶಿವದಾಯಕಃ ॥ ೫೦ ॥

ಮಹಾವಿರಾಡ್ ಲೋಮಕೂಪೇ ಬ್ರಹ್ಮಾಂಡೇ ಗೋಲಕೇ ಜಲೇ ।
ಸ ಬಭೂವ ವಿರಾಟ್ ಕ್ಷುದ್ರೋ ವಿರಾಡಂಶೇನ ಸಾಂಪ್ರತಂ ॥ ೫೧ ॥

---

೪೭. ಅನಂತರ ಪರಮಾತ್ಮನು ಸ್ವರ್ಗಲೋಕಕ್ಕೆ ಹೋಗಿ ಚತುರ್ಮುಖ ಬ್ರಹ್ಮನನ್ನೂ ಮತ್ತು ಶಂಕರನನ್ನೂ ಕುರಿತು ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ ಸಂಹಾರಕ್ಕಾಗಿ ಇಂತು ನುಡಿದನು.

೪೮. ಶ್ರೀಕೃಷ್ಣ :—ಎಲೈ, ವತ್ಸನಾದ ಬ್ರಹ್ಮನೇ, ಜಗತ್ಸೃಷ್ಟಿಗಾಗಿ ನೀನು ಹೋಗಿ ಮಹಾವಿರಾಟ್ಪುರುಷನ ನಾಭಿಪದ್ಮದಲ್ಲಿ ಅವತರಿಸು.

೪೯. ಎಲೈ ವತ್ಸ ಮಹಾದೇವನೆ! ಅನವರತ ತಪಸ್ವಿಯಾದ ನೀನು ನಿನ್ನ ಒಂದಂಶದಿಂದ ಬ್ರಹ್ಮನ ಹಣೆಯಿಂದ ಉದ್ಭವಿಸಿ ಚಿರಕಾಲ ತಪಸ್ವಿಯಾಗು.

೫೦. ಎಲೈ ನಾರದನೇ! ಜಗದೊಡೆಯನಾದ ಪರಮಾತ್ಮನು ಇಂತು ನುಡಿದು ಸುಮ್ಮನಾಗಲು ಬ್ರಹ್ಮನೂ ಮತ್ತು ಶಿವಂಕರನಾದ ಶಿವನೂ ಪರಮಾತ್ಮನಿಗೆ ನಮಿಸಿ ಮಹಾವಿರಾಟನಲ್ಲಿಗೆ ಹೋದರು.

೫೧. ಮಹಾವಿರಾಟನ ಲೋಮಕೂಪದಲ್ಲಿರುವ ಗೋಲಕಾಕಾರವೂ, ಜಲಮಯವೂ ಆದ ಬ್ರಹ್ಮಾಂಡದಲ್ಲಿ ಮಹಾವಿರಾಟನ ಅಂಶದಿಂದ ಕ್ಷುದ್ರವಿರಾಟನು ಅವತರಿಸಿದನು.

ಶ್ಯಾಮೋ ಯುವಾ ಪೀತವಾಸಾಃ ಶಯಾನೋ ಜಲತಲ್ಪಕೇ ।
ಈಷದ್ಧಾಸಃ ಪ್ರಸನ್ನಾಸ್ಯೋ ವಿಶ್ವರೂಪೀ ಜನಾರ್ದನಃ ॥ ೫೨ ॥

ತನ್ನಾಭಿಕಮಲೇ ಬ್ರಹ್ಮಾ ಬಭೂವ ಕಮಲೋದ್ಭವಃ ।
ಸಂಭೂಯ ಪದ್ಮದಂಡಂ ಚ ಬಭ್ರಾಮ ಯುಗಲಕ್ಷಕಂ ॥ ೫೩ ॥

ನಾಂತಂ ಜಗಾಮ ದಂಡಸ್ಯ ಪದ್ಮನಾಭಸ್ಯ ಪದ್ಮಜಃ ।
ನಾಭಿಜಸ್ಯ ಚ ಪದ್ಮಸ್ಯ ಚಿಂತಾಮಾಪ ಪಿತಾಮಹಃ ॥ ೫೪ ॥

ಸ್ವಸ್ಥಾನಂ ಪುನರಾಗತ್ಯ ದಧ್ಯೌ ಕೃಷ್ಣಪದಾಂಬುಜಂ ।
ತತೋ ದದರ್ಶ ಕ್ಷುದ್ರಂ ತಂ ಧ್ಯಾತ್ವಾ ತದ್ದಿವ್ಯಚಕ್ಷುಷಾ ॥ ೫೫ ॥

ಶಯಾನಂ ಜಲತಲ್ಪೇ ಚ ಬ್ರಹ್ಮಾಂಡಪಿಂಡಮಾವೃತೇ ।
ಯಲ್ಲೋಮಕೂಪೇ ಬ್ರಹ್ಮಾಂಡಂ ತಂ ಚ ತತ್ಪರಮೀಶ್ವರಂ ॥ ೫೬ ॥

---

೫೨. ಶ್ಯಾಮಸುಂದರನೂ, ಯುವಕನೂ ಆಗಿ ಪೀತಾಂಬರವನ್ನುಟ್ಟು, ಜಲಮಧ್ಯದಲ್ಲೇ ಪವಡಿಸಿದ್ದ ಆ ವಿಶ್ವರೂಪಿಯಾದ ಜನಾರ್ದನನು ನಗುಮುಖದಿಂದ ಪ್ರಸನ್ನನಾಗಿದ್ದನು,

೫೩. ಆ ಕ್ಷುದ್ರವಿರಾಟನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಅವತರಿಸಿ ಕಮಲೋದ್ಭವನೆನಿಸಿಕೊಂಡು, ಹಸ್ತದಲ್ಲಿ ಯುಗಲಕ್ಷಣವಾದ ತಾವರೆಯ ದಂಡವೊಂದನ್ನು ಹಿಡಿದು ತಿರುಗಿಸಿದನು.

೫೪. ಪದ್ಮನಾಭನ ನಾಭಿಪದ್ಮದಿಂದ ಹುಟ್ಟಿದ ಆ ಪದ್ಮದಂಡಕ್ಕೆ ಕೊನೆಮೊದಲಿರಲಿಲ್ಲ. ಆಗ ಆ ಪಿತಾಮಹನಿಗೆ ಬಹಳ ಚಿಂತೆಯಾಯಿತು.

೫೫. ಆಗ ಪಿತಾಮಹನು ಸ್ವಸ್ಥಾನಕ್ಕೆ ಬಂದು ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಮಾಡಿದನು. ಅನಂತರ ಆ ಕ್ಷುದ್ರವಿರಾಟನನ್ನು ದಿವ್ಯದೃಷ್ಟಿಯಿಂದ ನೋಡಿದನು.

೫೬. ಬ್ರಹ್ಮಾಂಡಪಿಂಡದೊಳಗೆ ಜಲಶಯನನಾಗಿರುವ ಆ ಕ್ಷುದ್ರವಿರಾಟನ ಲೋಮಕೂಪಗಳೊಳಗೆ ಬ್ರಹ್ಮಾಂಡವೆಲ್ಲ ಇರುವುದನ್ನೂ ಅವನು ಅದೆಲ್ಲವನ್ನೂ ಮೀರಿದ ಪರಮೇಶ್ವರನೆಂಬುದನ್ನೂ ಅರಿತನು.

ಶ್ರೀಕೃಷ್ಣಂ ಚಾಪಿ ಗೋಲೋಕಂ ಗೋಪಗೋಪೀಸಮನ್ವಿತಂ ।
ತಂ ಸಂಸ್ತೂಯ ವರಂ ಪ್ರಾಪ ತತಃ ಸೃಷ್ಟಿಂ ಚಕಾರ ಸಃ　　॥ ೫೭ ॥

ಬಭೂವುರ್ಬ್ರಹ್ಮಣಃ ಪುತ್ರಾ ಮಾನಸಾಃ ಸನಕಾದಯಃ ।
ತತೋ ರುದ್ರಾಃ ಕಪಾಲಾಚ್ಚ ಶಿವಸ್ಯೈಕಾದಶ ಸ್ಮೃತಾಃ　　॥ ೫೮ ॥

ಬಭೂವ ಪಾತಾ ವಿಷ್ಣುಶ್ಚ ವಾಮೇ ಕ್ಷುದ್ರಸ್ಯ ಪಾರ್ಶ್ವತಃ ।
ಚತುರ್ಭುಜಶ್ಚ ಭಗವಾನ್ ಶ್ವೇತದ್ವೀಪನಿವಾಸಕೃತ್　　॥ ೫೯ ॥

ಕ್ಷುದ್ರಸ್ಯ ನಾಭಿಪದ್ಮೇ ಚ ಬ್ರಹ್ಮಾ ವಿಶ್ವಂ ಸಸರ್ಜ ಸಃ ।
ಸ್ವರ್ಗಂ ಮರ್ತ್ಯಂ ಚ ಪಾತಾಲಂ ತ್ರಿಲೋಕಂ ಸಚರಾಚರಂ　　॥ ೬೦ ॥

---

೫೭. ಅಲ್ಲದೆ ಶ್ರೀಕೃಷ್ಣನನ್ನೂ ಗೋಪಗೋಪಿಯರೊಡಗೂಡಿದ ಗೋಲೋಕವನ್ನೂ ನೋಡಿ ಆ ಪರಮಾತ್ಮನನ್ನು ಸ್ತುತಿಸಿ ವರವನ್ನು ಪಡೆದು ಚತುರ್ಮುಖ ಬ್ರಹ್ಮನು ಸೃಷ್ಟಿಗಾರಂಭಿಸಿದನು.

೫೮. ಅನಂತರ ಬ್ರಹ್ಮನ ಮನಸ್ಸಿನಿಂದ ಸನಕಾದಿಗಳು ಅವತರಿಸಿ ಬ್ರಹ್ಮಮಾನಸಪುತ್ರರೆನಿಸಿಕೊಂಡರು. ಅಂತೆಯೇ ಲಲಾಟಪ್ರದೇಶದಿಂದ ಏಕಾದಶ ರುದ್ರರು ಅವತರಿಸಿದರು. (ಶಿವಾಂಶದಿಂದ).

೫೯. ಕ್ಷುದ್ರವಿರಾಟನ ವಾಮಭಾಗದಿಂದ ಜಗದ್ರಕ್ಷಕನಾದ ವಿಷ್ಣುವು ಅವತರಿಸಿದನು. ಚತುರ್ಭುಜನೂ, ಶಂಖ ಚಕ್ರ ಗದಾ ಪದ್ಮಧಾರಿಯೂ ಆದ ಆ ವಿಷ್ಣುವು ಶ್ವೇತದ್ವೀಪದಲ್ಲಿ ನೆಲೆಸಿದನು.

೬೦. ಆ ಕ್ಷುದ್ರವಿರಾಟನ ನಾಭಿಪದ್ಮದಿಂದಲೇ ಬ್ರಹ್ಮನು ಚರಾಚರಾತ್ಮಕವಾದ ಸ್ವರ್ಗ ಮರ್ತ್ಯ ಪಾತಾಳಗಳೆಂಬ ತ್ರಿಲೋಕಗಳನ್ನು ಸೃಜಿಸಿದನು.

ಏವಂ ಸರ್ವಂ ಲೋಮಕೂಪೇ ವಿಶ್ವಂ ಪ್ರತ್ಯೇಕಮೇವ ಚ ।
ಪ್ರತಿವಿಶ್ವಂ ಕ್ಷುದ್ರವಿರಾಡ್ಬ್ರಹ್ಮವಿಷ್ಣುಶಿವಾದಯಃ ॥ ೬೧ ॥

ಇತ್ಯೇವಂ ಕಥಿತಂ ವತ್ಸ ಕೃಷ್ಣಸಂಕೀರ್ತನಂ ಶುಭಂ ।
ಸುಖದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಪ್ರಕೃತಿಖಂಡೇ ನಾರದ
ನಾರಾಯಣಸಂವಾದೇ ವಿಶ್ವಬ್ರಹ್ಮಾಂಡವರ್ಣನಂ
ನಾಮ ತೃತೀಯೋಽಧ್ಯಾಯಃ

---

೬೧. ಈ ರೀತಿಯಾಗಿ ಮಹಾವಿರಾಟನ ಲೋಮಕೂಪದಲ್ಲಿ ಸಕಲವಿಶ್ವವೂ ಪ್ರತ್ಯೇಕವಾಗಿವೆ. ಪ್ರತಿಯೊಂದು ವಿಶ್ವದಲ್ಲೂ ಕ್ಷುದ್ರವಿರಾಟನೂ, ಬ್ರಹ್ಮ ವಿಷ್ಣು ಶಿವಾದಿಗಳೂ ಪ್ರತ್ಯೇಕವಾಗಿರುವರು.

೬೨. ಎಲೈ, ವತ್ಸ ನಾರದನೇ, ಸರ್ವಸಾರವೂ, ಸುಖಕರವೂ, ಮೋಕ್ಷದಾಯಕವೂ ಆದ ಶ್ರೀಕೃಷ್ಣಪರಮಾತ್ಮನ ಶುಭಸಂಕೀರ್ತನವನ್ನು ವಿವರಿಸಿದುದಾಯಿತು. ನಿನಗೆ ಇನ್ನೇನು ಕೇಳಬೇಕೆಂಬ ಆಸೆಯಿದೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ನಾರದ ನಾರಾಯಣ
ಸಂವಾದರೂಪವಾದ ಪ್ರಕೃತಿಖಂಡದಲ್ಲಿ ವಿಶ್ವ
ಬ್ರಹ್ಮಾಂಡವರ್ಣನೆ ಎಂಬ ಮೂರನೆಯ
ಅಧ್ಯಾಯವು ಮುಗಿದುದು.

ಮೂರನೆಯ ಅಧ್ಯಾಯದ ಸಾರಾಂಶವು

ಪ್ರಕೃತಿಯಿಂದ ಪರಿತ್ಯಕ್ತವಾದ ಸುವರ್ಣಾಂಡವು ಕೆಲವು ಕಾಲದ ಮೇಲೆ ಇಬ್ಭಾಗವಾಗಿ ಅದರಿಂದ ಮಹಾವಿರಾಟ್ಪುರುಷನ ಅವತಾರವಾಯಿತು. ಆ ಮಹಾ ವಿರಾಟ್ಪುರುಷನ ಪ್ರತಿರೋಮಕೂಪಗಳಲ್ಲಿಯೂ ಕ್ಷುದ್ರವಿರಾಟರೂ, ಬ್ರಹ್ಮಾದಿಸ್ತಂಭ ಪರ್ಯಂತವಾದ ನಿಖಿಲಬ್ರಹ್ಮಾಂಡವೂ ನೆಲೆಸಿರುವುದು. ಚರಾಚರಾತ್ಮಕವಾದ ಪ್ರಪಂಚ ವನ್ನು ಸೃಷ್ಟಿಮಾಡಿದ ಬ್ರಹ್ಮನು ಕ್ಷುದ್ರವಿರಾಟನ ನಾಭಿಕಮಲದಿಂದವತರಿಸಿದನು. ಆ ಬ್ರಹ್ಮನ ಲಲಾಟಪ್ರದೇಶದಿಂದ ಏಕಾದಶರುದ್ರರು ಅವತರಿಸಿದರು. ಕ್ಷುದ್ರ ವಿರಾಟನ ವಾಮಭಾಗದಿಂದ ಜಗದ್ರಕ್ಷಕನಾದ ವಿಷ್ಣುವು ಅವತರಿಸಿದನು. ಮಹಾ ವಿರಾಟ್ಪುರುಷನ ರೋಮಕೂಪಗಳಲ್ಲಿರುವ ಪ್ರತಿವಿಶ್ವದಲ್ಲಿಯೂ ಈ ಪ್ರಕಾರ ಬ್ರಹ್ಮ ವಿಷ್ಣು ಮಹೇಶ್ವರರೂ, ಸ್ವರ್ಗ, ಮರ್ತ್ಯ ಪಾತಾಳಗಳೂ ಇರುವುವು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಚತುರ್ಥೋಽಧ್ಯಾಯಃ ||

|| ನಾರದ ಉವಾಚ ||

ಶ್ರುತಂ ಸರ್ವಮಪೂರ್ವಂ ಚ ತ್ವತ್ಪ್ರಸಾದಾತ್ಸುಧೋಪಮಂ |
ಅಧುನಾ ಪ್ರಕೃತೀನಾಂ ಚ ವ್ಯಾಸಂ ವರ್ಣಯ ಭೋ ಪ್ರಭೋ || ೧ ||

ಕಸ್ಯಾಃ ಪೂಜಾ ಕೃತಾ ಕೇನ ಕಥಂ ಮರ್ತ್ಯೇ ಪ್ರಕಾಶಿತಾ |
ಕೇನ ವಾ ಪೂಜಿತಾ ಕಾ ವಾ ಕೇನ ಕಾ ವಾ ಸ್ತುತಾ ಮುನೇ || ೨ ||

ನಾಲ್ಕನೆಯ ಅಧ್ಯಾಯವು

೧. ನಾರದ:—ಎಲೈ, ಪ್ರಭುವಾದ ನಾರಾಯಣಮಹರ್ಷಿಯೇ, ನಿನ್ನ ಅನುಗ್ರಹದಿಂದ ಅಪೂರ್ವವೂ ಮತ್ತು ಅಮೃತೋಪಮವೂ ಆದ ವಿಶ್ವಬ್ರಹ್ಮಾಂಡ ವರ್ಣನೆಯನ್ನು ಕೇಳಿದೆನು. ಈಗ ಪ್ರಕೃತಿಯ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಸು.

೨. ಯಾರು ಯಾವ ದೇವಿಯನ್ನು ಪೂಜಿಸಿದರು. ಅದು ಮರ್ತ್ಯಲೋಕದಲ್ಲಿ ಪ್ರಸಿದ್ಧಿಪಡೆದುದೆಂತು ? ಯಾವ ದೇವಿಯು ಯಾರಿಂದ ಯಾವ ರೀತಿಯಲ್ಲಿ ಪೂಜಾ ಸ್ತುತಿಗಳನ್ನು ಪಡೆದಳು.

ಕವಚಂ ಸ್ತೋತ್ರಕಂ ಧ್ಯಾನಂ ಪ್ರಭಾವಂ ಚರಿತಂ ಶುಭಂ ।
ಕಾಭಿಃ ಕಾಭ್ಯೋ ವರೋ ದತ್ತಸ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೩ ॥

॥ ನಾರಾಯಣ ಉವಾಚ ॥

ಗಣೇಶಜನನೀ ದುರ್ಗಾ ರಾಧಾ ಲಕ್ಷ್ಮೀಃ ಸರಸ್ವತೀ ।
ಸಾವಿತ್ರೀ ವೈ ಸೃಷ್ಟಿವಿಧೌ ಪ್ರಕೃತಿಃ ಪಂಚಧಾ ಸ್ಮೃತಾ ॥ ೪ ॥

ಆಸೀತ್ಪೂಜ್ಯಾ ಪ್ರಸಿದ್ಧಾ ಚ ಪ್ರಭಾವಃ ಪರಮಾದ್ಭುತಃ ।
ಸುಧೋಪಮಂ ಚ ಚರಿತಂ ಸರ್ವಮಂಗಲಕಾರಣಂ ॥ ೫ ॥

ಪ್ರಕೃತ್ಯಂಶಾಃ ಕಲಾ ಯಾಶ್ಚ ತಾಸಾಂ ಚ ಚರಿತಂ ಶುಭಂ ।
ಸರ್ವಂ ವಕ್ಷ್ಯಾಮಿ ತೇ ಬ್ರಹ್ಮನ್ ಸಾವಧಾನಂ ನಿಶಾಮಯ ॥ ೬ ॥

---

೩. ಆಯಾ ದೇವಿಯರ ಕವಚಸ್ತೋತ್ರವಿಧಾನವನ್ನೂ, ಶುಭಕರವಾದ ಚರಿತ್ರೆಯನ್ನೂ, ಧ್ಯಾನಕ್ರಮವನ್ನೂ, ಯಾವ ದೇವಿಯರು ಯಾರಿಗೆ ವರವಿತ್ತರೆಂಬು ದನ್ನೂ ನನಗೆ ವಿವರಿಸು.

೪. ನಾರಾಯಣಮಹರ್ಷಿ :—ಪ್ರಕೃತಿಯು ಸೃಷ್ಟಿಗೆ ಮನಸ್ಸುಮಾಡಿದಾಗ (ಗಣೇಶಮಾತೆಯಾದ) ದುರ್ಗಿ, (ಶ್ರೀಕೃಷ್ಣನ ಪತ್ನಿಯಾದ) ರಾಧೆ, (ನಾರಾಯಣನ ಪತ್ನಿಯರಾದ) ಲಕ್ಷ್ಮಿ ಮತ್ತು ಸರಸ್ವತಿಯರೂ, (ಬ್ರಹ್ಮನ ಪತ್ನಿಯಾದ) ಸಾವಿತ್ರಿ ಎಂಬ ಹೆಸರಿನಿಂದ ಐದು ವಿಭಾಗವಾದಳು.

೫. ಪರಮಾತ್ಮನ ಅದ್ಭುತ ಶಕ್ತಿರೂಪಳಾದ ಆ ಪ್ರಕೃತಿಯು ಪ್ರಸಿದ್ಧಳೂ, ಪೂಜ್ಯಳೂ ಆದಳು. ಸರ್ವಮಂಗಳಕ್ಕೂ ಮೂಲಕಾರಣಳಾದ ಆ ಪ್ರಕೃತಿಯ ಚರಿತ್ರೆಯು ಅಮೃತೋಪಮವಾದುದು.

೬. ಎಲೈ ದ್ವಿಜನೇ, ಪ್ರಕೃತಿಯ ಅಂಶ ಮತ್ತು ಕಲೆಯಿಂದ ಅವತರಿಸಿದವ ರನ್ನೂ, ಅವರ ಶುಭಕರವಾದ ಚರಿತ್ರೆಯನ್ನೂ ಸಂಪೂರ್ಣವಾಗಿ ವಿವರಿಸುವೆನು. ಸಾವಧಾನದಿಂದ ಕೇಳು.

ವಾಣೀ ವಸುಂಧರಾ ಗಂಗಾ ಷಷ್ಠೀ ಮಂಗಲಚಂಡಿಕಾ ।
ತುಲಸೀ ಮಾನಸೀ ನಿದ್ರಾ ಸ್ವಧಾ ಸ್ವಾಹಾ ಚ ದಕ್ಷಿಣಾ ॥ ೭ ॥

ತೇಜಸಾ ಮತ್ಸಮಾಸ್ತಾಶ್ಚ ರೂಪೇಣ ಚ ಗುಣೇನ ಚ ॥ ೮ ॥

ಸಂಕ್ಷೇಪಮಾಸಾಂ ಚರಿತಂ ಪುಣ್ಯದಂ ಶ್ರುತಿಸುಂದರಂ ।
ಜೀವಕರ್ಮವಿಪಾಕಂ ಚ ತಚ್ಚ ವಕ್ಷ್ಯಾಮಿ ಸುಂದರಂ ॥ ೯ ॥

ದುರ್ಗಾಯೋಶ್ಚೈವ ರಾಧಾಯಾ ವಿಸ್ತೀರ್ಣಂ ಚರಿತಂ ಮಹತ್ ।
ತಚ್ಚ ಪಶ್ಚಾತ್ ಪ್ರವಕ್ಷ್ಯಾಮಿ ಸಂಕ್ಷೇಪಾತ್ ಕ್ರಮತಃ ಶ್ರುಣು ॥ ೧೦ ॥

ಆದೌ ಸರಸ್ವತೀ ಪೂಜಾ ಶ್ರೀಕೃಷ್ಣೇನ ವಿನಿರ್ಮಿತಾ ।
ಯತ್ಪ್ರಸಾದಾನ್ಮುನಿಶ್ರೇಷ್ಠ ಮೂರ್ಖೋ ಭವತಿ ಪಂಡಿತಃ ॥ ೧೧ ॥

೭–೮. ಕಾಳಿ, ವಸುಂಧರೆ, ಗಂಗೆ, ಷಷ್ಠೀ, ಮಂಗಳಚಂಡಿಕೆ, ತುಲಸಿ, ಮಾನಸಿ, ನಿದ್ರಾ, ಸ್ವಧಾ, ಸ್ವಾಹಾ ದಕ್ಷಿಣಾ, ಈ ದೇವೀಯರೆಲ್ಲರೂ ರೂಪಗುಣ ತೇಜಸ್ಸುಗಳಿಂದ ಪ್ರಕೃತಿಗೆ ಸಮರೆನಿಸುವರು.

೯. ಪುಣ್ಯಕರವೂ, ಶ್ರವಣಾನಂದಕರವೂ ಆದ ಈ ದೇವಿಯರ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳುವೆನು. ಅಲ್ಲದೆ ಜೀವಿಗಳ ಕರ್ಮವಿಪಾಕವನ್ನೂ ಹೇಳುವೆನು ಕೇಳು.

೧೦. ಅಂತೆಯೇ ದುರ್ಗಾ ಮತ್ತುರಾಧೆಯರ ಮಹಚ್ಚರಿತ್ರೆಯನ್ನು ಅನಂತರ ವಿಸ್ತರಿಸಿ ಹೇಳುವೆನು. ಈಗ ಮೊದಲಿನಿಂದ ಸಂಕ್ಷೇಪವಾಗಿ ಹೇಳುವುದನ್ನು ಸಾವಧಾನಿಸಿ ಕೇಳು.

೧೧. ಎಲೈ, ಮುನಿಶ್ರೇಷ್ಠನಾದ ನಾರದನೇ, ಯಾವದೇವಿಯ ದಿವ್ಯಾನುಗ್ರಹದಿಂದ ಮೂರ್ಖನೂ ಪಂಡಿತನಾಗುವನೋ ಅಂಥಾ ಸರಸ್ವತೀದೇವಿಯ ಪೂಜೆಯನ್ನು ಶ್ರೀಕೃಷ್ಣಪರಮಾತ್ಮನೇ ಮೊದಲು ಪ್ರಾರಂಭಿಸಿದನು.

ಆವಿರ್ಭೂತಾ ಯದಾ ದೇವೀ ವಕ್ತ್ರತಃ ಕೃಷ್ಣಯೋಷಿತಃ ।
ಇಯೇಷ ಕೃಷ್ಣಂ ಕಾಮೇನ ಕಾಮುಕೀ ಕಾಮರೂಪಿಣೀ ॥ ೧೨ ॥

ಸ ಚ ವಿಜ್ಞಾಯ ತದ್ಭಾವಂ ಸರ್ವಜ್ಞಃ ಸರ್ವಮಾತರಂ ।
ತಾಮುವಾಚ ಹಿತಂ ಸತ್ಯಂ ಪರಿಣಾಮಸುಖಾವಹಂ ॥ ೧೩ ॥

॥ ಶ್ರೀಕೃಷ್ಣ ಉವಾಚ ॥

ಭಜ ನಾರಾಯಣಂ ಸಾಧ್ವಿ ಮದಂಶಂಚ ಚತುರ್ಭುಜಂ ।
ಯುವಾನಂ ಸುಂದರಂ ಸರ್ವಗುಣಯುಕ್ತಂ ಚ ಮತ್ಸಮಂ ॥ ೧೪ ॥

ಕಾಮದಂ ಕಾಮಿನೀನಾಂ ಚ ತಾಸಾಂ ತಂ ಕಾಮಪೂರಕಂ ।
ಕೋಟಿಕಂದರ್ಪಲಾವಣ್ಯಂ ಲೀಲಾನ್ಯಕ್ಕೃತಮನ್ಮಥಂ ॥ ೧೫ ॥

ಕಾಂತೇ ಕಾಂತಂ ಚ ಮಾಂ ಕೃತ್ವಾ ಯದಿ ಸ್ಥಾತುಮಿಹೇಚ್ಛಸಿ ।
ತ್ವತ್ತೋ ಬಲವತೀ ರಾಧಾ ನ ತೇ ಭದ್ರಂ ಭವಿಷ್ಯತಿ ॥ ೧೬ ॥

---

೧೨. ಯಾವ ಸರಸ್ವತೀದೇವಿಯು ರಾಧೆಯಮುಖದಿಂದ ಅವತರಿಸಿದ ಕೂಡಲೇ ಕಾಮರೂಪಿಣಿಯಾದ ಅವಳು ಶ್ರೀಕೃಷ್ಣಪರಮಾತ್ಮನನ್ನು ಕಾಮಿಸಿದಳು.

೧೩. ಸರ್ವಜ್ಞನಾದ ಪರಮಾತ್ಮನು ಆಕೆಯ ಮನೋಭಿಪ್ರಾಯವನ್ನರಿತು, ಹಿತವೂ, ಸತ್ಯವೂ, ಪರಿಣಾಮಸುಖದಾಯಕವೂ ಆದ ಕೆಲವು ನುಡಿಗಳನ್ನು ಜಗನ್ಮಾತೆಯಾದ ಅವಳಿಗೆಹೇಳಿದನು.

೧೪. ಶ್ರೀಕೃಷ್ಣ:—ಎಲೌ ಸಾಧ್ವೀಶಿರೋಮಣಿಯೇ, ನನ್ನ ಅಂಶದಿಂದ ಅವತರಿಸಿ ನನಗೆ ಸದೃಶನೂ, ಸುಂದರಯುವಕನೂ, ಸರ್ವಗುಣಯುತನೂ, ಚತುರ್ಭುಜನೂ ಆದ ನಾರಾಯಣನನ್ನು ನನ್ನ ಮಾತಿನಂತೆ ವರಿಸು.

೧೫. ಕಾಮಿನಿಯರಿಗೆ ಕಾಮೋತ್ಪತ್ತಿಯಾಗುವಂತೆಯೂ, ಮತ್ತು ಇಷ್ಟಾರ್ಥವು ಪೂರ್ತಿಯಾಗುವಂತೆಯೂ ಮಾಡುವ ಕೋಟಿಮನ್ಮಥರ ಲಾವಣ್ಯದಿಂದ ಮದನ ಸೌಂದರ್ಯವನ್ನು ಧಿಕ್ಕರಿಸುವಂತಹ ನಾರಾಯಣನನ್ನು ವರಿಸು.

೧೬. ಎಲೌ, ಸರಸ್ವತೀದೇವಿಯೇ, ನೀನು ನನ್ನನ್ನೇ ವರಿಸಿ ನನ್ನೊಡನೆಯೇ ನಿಲ್ಲಲು ಬಯಸುವೆಯಾದರೆ ನಿನಗಿಂತಲೂ ಬಲಿಷ್ಠಳಾದ ರಾಧೆಯಿಂದ ನಿನಗೆ ಕ್ಷೇಮವಾಗುವದಿಲ್ಲ.

ಯೋ ಯಸ್ಮಾದ್ಬಲವಾನ್ಸೋಪಿ ತತೋಽನ್ಯಂ ರಕ್ಷಿತುಂ ಕ್ಷಮಃ ।
ಕಥಂ ಪರಾನ್ಸಾಧಯತಿ ಯದಿ ಸ್ವಯಮನೀಶ್ವರಃ ॥ ೧೭ ॥

ಸರ್ವೇಶಸ್ಸರ್ವಶಾಸ್ತಾಹಂ ರಾಧಾಂ ರಾಧಿತುಮಕ್ಷಮಃ ।
ತೇಜಸಾ ಮತ್ಸಮಾ ಸಾ ಚ ರೂಪೇಣ ಚ ಗುಣೇನ ಚ ॥ ೧೮ ॥

ಪ್ರಾಣಾಧಿಷ್ಠಾತೃದೇವೀ ಸಾ ಪ್ರಾಣಾಂಸ್ತ್ಯಕ್ತುಂ ಚ ಕಃ ಕ್ಷಮಃ ।
ಪ್ರಾಣತೋಽಪಿ ಪ್ರಿಯಃ ಕುತ್ರ ಕೇಷಾಂ ವಾಸ್ತಿ ಚ ಕಶ್ಚನ ॥ ೧೯ ॥

ತ್ವಂ ಭದ್ರೇ ಗಚ್ಛ ವೈಕುಂಠಂ ತವ ಭದ್ರಂ ಭವಿಷ್ಯತಿ ।
ಪತಿಂ ತಮೀಶ್ವರಂ ಕೃತ್ವಾ ಮೋದಸ್ವ ಸುಚಿರಂ ಸುಖಂ ॥ ೨೦ ॥

ವಿವರ್ಜಿತಾ ಲೋಭಮೋಹಕಾಮಕೋಪೇನ ಹಿಂಸಯಾ ।
ತೇಜಸಾ ತ್ವತ್ಸಮಾ ಲಕ್ಷ್ಮೀ ರೂಪೇಣ ಚ ಗುಣೇನ ಚ ॥ ೨೧ ॥

---

೧೭. ಎಲ್ಲರಿಗಿಂತಲೂ ಬಲಿಷ್ಠನಾದವನು ಒಬ್ಬರೊಡನೆ ಮತ್ತೊಬ್ಬರನ್ನೂ ರಕ್ಷಿಸಲು ಶಕ್ತನಾಗುವನು. ತಾನೇ ಪರಾಧೀನನಾಗಿರುವನು ಮತ್ತೊಬ್ಬರನ್ನು ರಕ್ಷಿಸುವದೆಂತು?

೧೮. ಸರ್ವೇಶ್ವರನೂ, ಸರ್ವಶಿಕ್ಷಕನೂ ಆದ ನಾನು ರೂಪಗುಣತೇಜಸ್ಸು ಗಳಲ್ಲಿ ನನಗೆ ಸಮಳಾದ ರಾಧೆಯನ್ನು ನಿವಾರಿಸಲು ಅಶಕ್ತನಾಗಿರುವೆನು.

೧೯. ನನ್ನ ಪ್ರಾಣಾಧಿದೇವತೆಯಾದ ರಾಧೆಯನ್ನು ತ್ಯಜಿಸಿದರೆ ನನ್ನ ಪ್ರಾಣಗಳನ್ನೇ ತ್ಯಜಿಸಿದಂತಾಗುವುದು. ಜೀವಿಗಳಿಗೆ ತಮ್ಮ ಪ್ರಾಣಕ್ಕಿಂತಲೂ ಪ್ರಿಯತಮವಾದುದು ಬೇರಾವುದು ಎಲ್ಲಿ ಇದೆ?

೨೦. ಆದ್ದರಿಂದ ಎಲೌ, ಮಂಗಳಕರಳೇ! ನನ್ನ ಮಾತಿನಂತೆ ನೀನು ವೈಕುಂಠಕ್ಕೆ ಹೋಗು. ನಿನಗೆ ಒಳಿತಾಗುವುದು. ಶ್ರೀಮನ್ನಾರಾಯಣನನ್ನು ಪತಿಯನ್ನಾಗಿ ವರಿಸಿ ಬಹುಕಾಲ ಸುಖಸಂತೋಷದಿಂದಿರು.

೨೧–೨೨. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಅರಿಷಡ್ವರ್ಗಗಳನ್ನು ತೊರೆದು ರೂಪಗುಣತೇಜಸ್ಸುಗಳಿಂದ ನಿನಗೆಣೆಯಾಗಿರುವ

ತಯಾ ಸಾರ್ಧಂ ಭವತ್ಪ್ರೀತ್ಯಾ ಸುಖಂ ಕಾಲಂ ಪ್ರಯಾಸ್ಯತಿ ।
ಗೌರವಂ ಚಾಪಿ ತತ್ತುಲ್ಯಂ ಕರಿಷ್ಯತಿ ಪತಿರ್ದ್ವಯೋಃ ॥ ೨೨ ॥

ಪ್ರತಿವಿಶ್ವೇಷು ತೇ ಪೂಜಾಂ ಮಹತೀಂ ತೇ ಮುದಾನ್ವಿತಾಃ ।
ಮಾಘಸ್ಯ ಶುಕ್ಲಪಂಚಮ್ಯಾಂ ವಿದ್ಯಾರಂಭೇಷು ಸುಂದರಿ ॥ ೨೩ ॥

ಮಾನವಾ ಮನವೋ ದೇವಾ ಮುನೀಂದ್ರಾಶ್ಚ ಮುಮುಕ್ಷವಃ ।
ಸಂತಶ್ಚ ಯೋಗಿನಃ ಸಿದ್ಧಾ ನಾಗಗಂಧರ್ವಕಿಂನರಾಃ ॥ ೨೪ ॥

ಮದ್ವರೇಣ ಕರಿಷ್ಯಂತಿ ಕಲ್ಪೇ ಕಲ್ಪೇ ಯಥಾವಿಧಿ ।
ಭಕ್ತಿಯುಕ್ತಾಶ್ಚ ದತ್ವಾ ವೈ ಚೋಪಚಾರಾಂಶ್ಚ ಷೋಡಶ ॥ ೨೫ ॥

ಕಾಣ್ವಶಾಖೋಕ್ತವಿಧಿನಾ ಧ್ಯಾನೇನ ಸ್ತವನೇನ ಚ ।
ಜಿತೇಂದ್ರಿಯಾಃ ಸಂಯತಾಶ್ಚ ಪುಸ್ತಕೇಷು ಘಟೇऽಪಿ ಚ ॥ ೨೬ ॥

ಲಕ್ಷ್ಮೀದೇವಿಯೊಡನೆ ಅನ್ಯೋನ್ಯಪ್ರೀತಿಯಿಂದ ಹೊಂದಿಕೊಳ್ಳುವ ನಿನಗೆ ಕಾಲವು ಸುಖಮಯವಾಗುವುದು. ನಿಮ್ಮ ಪತಿಯು ನಿಮ್ಮಿಬ್ಬರಲ್ಲೂ ಸಮಾನವಾದ ಗೌರವವನ್ನಿಡುವನು.

೨೩-೨೫. ಎಲೌ ಸುಂದರಾಂಗಿಯೇ, ಮನುಜರು, ಮನುಗಳು, ಮುನಿಶ್ರೇಷ್ಠರು, ದೇವತೆಗಳು ಮತ್ತು ಮೋಕ್ಷಕಾಮಿಗಳೂ ಕೂಡ ವಿದ್ಯಾರಂಭಕಾಲದಲ್ಲೂ, ಮಾಘಶುಕ್ಲಪಂಚಮಿಯ ದಿವಸದಲ್ಲೂ, ವಿಶ್ವದಲ್ಲೆಲ್ಲಾ ನಿನ್ನನ್ನು ಭಕ್ತಿಪೂರ್ವಕವಾಗಿ, ಪ್ರತಿಕಲ್ಪದಲ್ಲೂ, ವಿಧಿನಿಯಮದಂತೆ ಪೂಜಿಸುವರು. ಸತ್ಪುರುಷರು, ಯೋಗಿಗಳು, ಗಂಧರ್ವರು, ಕಿನ್ನರರೂ ಕೂಡ ಷೋಡಶೋಪಚಾರಗಳಿಂದ ಪೂಜಿಸುವರು.

೨೬. ಇಂದ್ರಿಯನಿಗ್ರಹಪರರಾಗಿ ಕಣ್ವಶಾಖೋಕ್ತವಾದ ವಿಧಿ, ಧ್ಯಾನ, ಸ್ತೋತ್ರಗಳಿಂದ ನಿನ್ನನ್ನು ಪುಸ್ತಕಮಂಡಲದಲ್ಲಾಗಲೀ, ಘಟ (ಕಲಶ) ದಲ್ಲಾಗಲೀ ಆವಾಹನೆ ಮಾಡಿ ಪೂಜಿಸುವರು.

ಕೃತ್ವಾ ಸುವರ್ಣಘುಟಿಕಾಂ ಗಂಧಚಂದನಚರ್ಚಿತಾಂ ।
ಕವಚಂ ತೇ ಗ್ರಹೀಷ್ಯಂತಿ ಕಂಠೇ ವಾ ದಕ್ಷಿಣೇ ಭುಜೇ ॥ ೨೭ ॥

ಪಠಿಷ್ಯಂತಿ ಚ ವಿದ್ವಾಂಸಃ ಪೂಜಾಕಾಲೇ ಚ ಪೂಜಿತೇ ।
ಇತ್ಯುಕ್ತ್ವಾ ಪೂಜಯಾಮಾಸ ತಾಂ ದೇವೀಂ ಸರ್ವಪೂಜಿತಃ ॥ ೨೮ ॥

ತತಸ್ತತ್ಪೂಜನಂ ಚಕ್ರುರ್ಬ್ರಹ್ಮವಿಷ್ಣುಮಹೇಶ್ವರಾಃ ।
ಅನಂತಶ್ಚಾಪಿ ಧರ್ಮಶ್ಚ ಮುನೀಂದ್ರಾಃ ಸನಕಾದಯಃ ॥ ೨೯ ॥

ಸರ್ವೇ ದೇವಾಶ್ಚ ಮನವೋ ನೃಪಾ ವಾ ಮಾನವಾದಯಃ ।
ಬಭೂವ ಪೂಜಿತಾ ನಿತ್ಯಾ ಸರ್ವಲೋಕೈಃ ಸರಸ್ವತೀ ॥ ೩೦ ॥

---

೨೭. ಚಿನ್ನದಗುಳಿಗೆಯಂತಿರುವ ಚಂದನಲಿಪ್ತವಾದ ದಿವ್ಯಗಂಧದಿಂದ ನಿನ್ನನ್ನು ಪೂಜಿಸಿ, ತಮ್ಮ ಕಂಠದಲ್ಲಾಗಲೀ, ದಕ್ಷಿಣಭುಜದಲ್ಲಾಗಲೀ, ನಿನ್ನ ಕವಚವನ್ನು ಧರಿಸುವರು.

೨೮. ಅಲ್ಲದೆ ವಿದ್ವಾಂಸರೆಲ್ಲರೂ ಪೂಜಾಕಾಲದಲ್ಲಿ ಸರ್ವಪೂಜಿತಳಾದ ನಿನ್ನ ದಿವ್ಯನಾಮವನ್ನು ಪಠಿಸುವರು. ನಿನಗೆ ಈ ವರವನ್ನು ನಾನು ದಯಪಾಲಿಸಿರುವೆನು. ಎಂದು ಹೇಳಿ ಜಗತ್ಪೂಜ್ಯನಾದ ಆ ಪರಮಾತ್ಮನು ಆ ಸರಸ್ವತೀದೇವಿಯನ್ನು ಪೂಜಿಸಿದನು.

೨೯. ಅನಂತರ ಬ್ರಹ್ಮ ವಿಷ್ಣು ಮಹೇಶ್ವರರೂ, ಅನಂತ ಮತ್ತು ಧರ್ಮಪುರುಷರೂ, ಸನಕಸನಂದನಾದಿ ಮುನಿಗಳೂ ಸರಸ್ವತಿಯನ್ನು ಪೂಜಿಸಿದರು.

೩೦. ಹೀಗೆಯೇ ಕ್ರಮವಾಗಿ ದೇವತೆಗಳು, ಮನುಗಳು, ರಾಜರು, ಮತ್ತು ಸಾಮಾನ್ಯಮನುಜರೂ ಕೂಡ ಸರಸ್ವತೀದೇವಿಯನ್ನು ಪೂಜಿಸಿದರು. ಇಂತು ಸರಸ್ವತಿಯು ಸಮಸ್ತಜನರಿಂದಲೂ ಪೂಜಿತಳಾದಳು.

|| ನಾರದ ಉವಾಚ ||

ಪೂಜಾವಿಧಾನಂ ಸ್ತವನಂ ಧ್ಯಾನಂ ಕವಚಮೀಪ್ಸಿತಂ |
ಪೂಜೋಪಯುಕ್ತಂ ನೈವೇದ್ಯಂ ಪುಷ್ಪಂ ವಾ ಚಂದನಾದಿಕಂ || ೩೧ ||

ವದ ವೇದವಿದಾಂ ಶ್ರೇಷ್ಠ ಶ್ರೋತುಂ ಕೌತೂಹಲಂ ಮಮ |
ವರ್ಧತೇ ಸಾಂಪ್ರತಂ ಶಶ್ವತ್ಕಿಮಿದಂ ಶ್ರುತಿಸುಂದರಂ || ೩೨ ||

|| ನಾರಾಯಣ ಉವಾಚ ||

ಶೃಣು ನಾರದ ವಕ್ಷ್ಯಾಮಿ ಕಾಣ್ವಶಾಖೋಕ್ತ ಪದ್ಧತಿಂ |
ಜಗನ್ಮಾತುಃ ಸರಸ್ವತ್ಯಾಃ ಪೂಜಾವಿಧಿಸಮನ್ವಿತಾಂ || ೩೩ ||

ಮಾಘಸ್ಯ ಶುಕ್ಲಪಂಚಮ್ಯಾಂ ವಿದ್ಯಾರಂಭದಿನೇಽಪಿ ಚ |
ಪೂರ್ವೇಽಹ್ನಿ ಸಂಯಮಂ ಕೃತ್ವಾ ತತ್ರ ಸ್ಯಾತ್ಸಂಯತಃ ಶುಚಿಃ || ೩೪ ||

ಸ್ನಾತ್ವಾ ನಿತ್ಯಕ್ರಿಯಾಂ ಕೃತ್ವಾ ಘಟಂ ಸಂಸ್ಥಾಪ್ಯ ಭಕ್ತಿತಃ |
ಸಂಪೂಜ್ಯ ದೇವಷಟ್ಕಂ ಚ ನೈವೇದ್ಯಾದಿಭಿರೇವ ಚ || ೩೫ ||

೩೧-೩೨. ನಾರದ:—ಎಲೈ, ವೇದಜ್ಞನಾದ ಮುನಿಯೇ! ಸರಸ್ವತಿಯ ಪೂಜಾವಿಧಾನ, ಸ್ತೋತ್ರ, ಧ್ಯಾನ, ಕವಚ ಮತ್ತು ಪೂಜೋಪಯುಕ್ತವಾದ ಪುಷ್ಪ ಚಂದನ ನೈವೇದ್ಯಾದಿಗಳ ಕ್ರಮವನ್ನು ದಯವಿಟ್ಟು ವಿವರಿಸಬೇಕು. ಕರ್ಣಾನಂದಕರವಾದ ಈ ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಬಹಳ ಕುತೂಹಲವಾಗಿದೆ.

೩೩. ನಾರಾಯಣಋಷಿ:—ಎಲೈ, ನಾರದನೇ! ಕಣ್ವಶಾಖೆಯ ಪದ್ಧತಿಯಂತೆ ಜಗನ್ಮಾತೆಯಾದ ಸರಸ್ವತಿಯ ಪೂಜಾವಿಧಾನಕ್ರಮವನ್ನು ಅರುಹುವೆನು. ಅವಧರಿಸು.

೩೪. ವಿದ್ಯಾರಂಭದಿವಸದಲ್ಲಾಗಲೀ, ಮಾಘಶುಕ್ಲ ಪಂಚಮಿಯ ದಿವಸದಲ್ಲಾಗಲೀ ಸರಸ್ವತಿಯನ್ನು ಪೂಜಿಸಬೇಕು. ಆದಿನ ಪೂರ್ವಾಹ್ಣದಲ್ಲಿ ಶುಚಿಯಾಗಿದ್ದುಕೊಂಡು ಯಾವ ಆಹಾರವನ್ನೂ ಸ್ವೀಕರಿಸದೆ ಸಂಯಮಿಯಾಗಿರಬೇಕು.

೩೫. ಸ್ನಾನ ಮತ್ತು ನಿತ್ಯಕರ್ಮಗಳನ್ನು ಮಾಡಿ ಭಕ್ತಿಯಿಂದ ಒಂದು ಕಲಶವನ್ನು ಸ್ಥಾಪಿಸಿ, ಅದರಲ್ಲಿ ಈ ಮುಂದೆ ಹೇಳುವ ಆರು ದೇವತೆಗಳನ್ನು ನೈವೇದ್ಯಾದಿಗಳಿಂದ ಪೂಜಿಸಬೇಕು.

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ ।
ಸಂಪೂಜ್ಯ ಸಂಯತೋಽಗ್ರೇ ಚ ತತೋಽಭೀಷ್ಟಾಂ ಪ್ರಪೂಜಯೇತ್ ॥ ೩೬ ॥

ಧ್ಯಾನೇನ ವಕ್ಷ್ಯಮಾಣೇನ ಧ್ಯಾತ್ವಾ ಬಾಹ್ಯಘಟೇ ಬುಧಃ ।
ಧ್ಯಾತ್ವಾ ಪುನಃ ಷೋಡಶೋಪಚಾರೈಸ್ತಾಂ ಪೂಜಯೇದ್ವ್ರತೀ ॥ ೩೭ ॥

ಪೂಜೋಪಯುಕ್ತಂ ನೈವೇದ್ಯಂ ಯದ್ಯದ್ವೇದೇ ನಿರೂಪಿತಂ ।
ವಕ್ಷ್ಯಾಮಿ ಸಾಂಪ್ರತಂ ಕಿಂಚಿದ್ಯಥಾಧೀತಂ ಯಥಾಗಮಂ ॥ ೩೮ ॥

ನವನೀತಂ ದಧಿ ಕ್ಷೀರಂ ಲಾಜಾಂಶ್ಚ ತಿಲಲಡ್ಡುಕಾನ್ ।
ಇಕ್ಷುಮಿಕ್ಷುರಸಂ ಶುಕ್ಲವರ್ಣಂ ಪಕ್ವಗುಡಂ ಮಧು ॥ ೩೯ ॥

ಸ್ವಸ್ತಿಕಂ ಶರ್ಕರಾಂ ಶುಕ್ಲಧಾನ್ಯಸ್ಯಾಕ್ಷತಮಕ್ಷತಂ ।
ಅಸ್ವಿನ್ನಶುಕ್ಲಧಾನ್ಯಸ್ಯ ಪೃಥುಕಂ ಶುಕ್ಲಮೋದಕಂ ॥ ೪೦ ॥

---

೩೬. ಮೊದಲು ಗಣೇಶ, ದಿನೇಶ (ಸೂರ್ಯ), ಅಗ್ನಿ, ವಿಷ್ಣು, ಶಿವ, ಶಿವಾ (ಪಾರ್ವತಿ) ಈ ಆರು ದೇವತೆಗಳನ್ನು ಕ್ರಮವಾಗಿ ಪೂಜಿಸಿ ಅನಂತರ ಅಭೀಷ್ಟವಾದ ದೇವತೆಯಾದ ಸರಸ್ವತಿಯನ್ನು ಪೂಜಿಸಬೇಕು.

೩೭. ಸರಸ್ವತೀದೇವಿಯನ್ನು ಕಲಶದಲ್ಲಿ ಆವಾಹನೆಮಾಡಿ ಮುಂದೆ ಹೇಳುವ ಧ್ಯಾನಕ್ರಮದಂತೆ ಧ್ಯಾನಿಸಿ ಶೋಡಷೋಪಚಾರಗಳಿಂದ ಆ ದೇವತೆಯನ್ನು ಪೂಜಿಸಬೇಕು.

೩೮. ವೇದೋಕ್ತವಾಗಿ ನನಗೆ ತಿಳಿದಿರುವ ಮಟ್ಟಿಗೆ ಪೂಜೋಪಯುಕ್ತವಾದ ವಸ್ತುಗಳನ್ನೂ ನೈವೇದ್ಯದ ವೈವಿಧ್ಯವನ್ನೂ ವಿವರಿಸುವೆನು ಅವಧರಿಸು.

೩೯-೪೦. ಹಾಲು ಮೊಸರು ಬೆಣ್ಣೆಗಳನ್ನೂ, ಅರಳು ಮತ್ತು ಎಳ್ಳುಂಡೆಗಳನ್ನೂ, ಕಬ್ಬು ಕಬ್ಬಿನಹಾಲು ಚೆನ್ನಾಗಿ ಪಾಕಬಂದು ಬಿಳುಪಾಗಿರುವ ಬೆಲ್ಲ ಮತ್ತು ಜೇನುತುಪ್ಪಗಳನ್ನೂ, ಹೋಳಿಗೆಯನ್ನೂ, ಸಕ್ಕರೆ ಮತ್ತು ಬಿಳಿಧಾನ್ಯದ ಅಕ್ಷತೆಯನ್ನೂ, ಬೇಯಿಸದಿರುವ ಬಿಳಿಧಾನ್ಯದ ಅವಲಕ್ಕಿಯನ್ನೂ, ಬಿಳಿ ಬಣ್ಣದ ಕಡುಬನ್ನೂ ಸರಸ್ವತಿಗೆ ನಿವೇದಿಸಬೇಕು.

ಘೃತಸೈಂಧವಸಂಸ್ಕಾರೈರ್ಹವಿಷ್ಯೈರ್ವ್ಯಂಜನೈಸ್ತಥಾ ।
ಯುವಗೋಧೂಮಚೂರ್ಣಾನಾಂ ಪಿಷ್ಟಕಂ ಘೃತಸಂಸ್ಕೃತಂ ॥ ೪೧ ॥

ಪಿಷ್ಟಕಂ ಸ್ವಸ್ತಿಕಸ್ಯಾಪಿ ಪಕ್ವರಂಭಾಫಲಸ್ಯ ಚ ।
ಪರಮಾನ್ನಂ ಚ ಸಘೃತಂ ಮಿಷ್ಟಾನ್ನಂ ಚ ಸುಧೋಪಮಂ ॥ ೪೨ ॥

ನಾರಿಕೇಲಂ ತದುದಕಂ ಕೇಶರಂ ಮೂಲಮಾರ್ದ್ರಕಂ ।
ಪಕ್ವರಂಭಾಫಲಂ ಚಾರು ಶ್ರೀಫಲಂ ಬದರೀಫಲಂ ॥
ಕಾಲದೇಶೋದ್ಭವಂ ಪಕ್ವಫಲಂ ಶುಕ್ಲಂ ಸುಸಂಸ್ಕೃತಂ ॥ ೪೩ ॥

ಸುಗಂಧಿ ಶುಕ್ಲಪುಷ್ಪಂ ಚ ಗಂಧಾಢ್ಯಂ ಶುಕ್ಲಚಂದನಂ ।
ನವೀನಂ ಶುಕ್ಲವಸ್ತ್ರಂ ಚ ಶಂಖಂ ಚ ಸುಮನೋಹರಂ ॥
ಮಾಲ್ಯಂ ಚ ಶುಕ್ಲಪುಷ್ಪಾಣಾಂ ಮುಕ್ತಾಹೀರಾದಿಭೂಷಣಂ ॥ ೪೪ ॥

೪೧–೪೨. ಅಂತೆಯೇ ತುಪ್ಪ, ಉಪ್ಪು ಮತ್ತು ವ್ಯಂಜನಪದಾರ್ಥಗಳಿಂದ ಸಂಸ್ಕೃತವಾದ ಹವಿಷ್ಯಾನ್ನವನ್ನೂ, ತುಪ್ಪದಿಂದ ಬೇಯಿಸಿರುವ ಅಕ್ಕಿ ಅಥವಾ ಗೋಧಿಯ ಹಿಟ್ಟಿನ ಉಂಡೆಗಳನ್ನೂ, ಹೋಳಿಗೆ ಪಿಷ್ಟವನ್ನೂ, ಚೆನ್ನಾಗಿ ಕಳಿತ ಬಾಳೆಹಣ್ಣುಗಳನ್ನೂ, ಘೃತಮಿಶ್ರಿತವಾದ ಪರಮಾನ್ನವನ್ನೂ. ಅಮೃತೋಪಮವಾದ ಮಿಷ್ಟಾನ್ನವನ್ನೂ ಸರಸ್ವತಿಗೆ ನಿವೇದಿಸಬೇಕು.

೪೩. ತೆಂಗಿನಕಾಯಿ ಮತ್ತು ಎಳನೀರನ್ನೂ, ಕೇಶರಮೂಲ ಮತ್ತು ಹಸಿ ಶುಂಠಿಯನ್ನೂ, ಕಳಿತ ಬಾಳೆಹಣ್ಣು, ಬಿಲ್ವಫಲ ಮತ್ತು ಯಗಚೀಫಲವನ್ನೂ ನಿವೇದಿಸಬಹುದು. ಅಂತೆಯೇ ಆಯಾ ಕಾಲದೇಶಾನುಗುಣವಾಗಿ ಅಲ್ಲಲ್ಲಿ ದೊರಕುವ ಬಿಳಿಬಣ್ಣದ ಹಣ್ಣುಗಳನ್ನೆಲ್ಲಾ ನಿವೇದಿಸಬಹುದು.

೪೪. ಸುವಾಸನೆಯೊದ ಬಿಳಿಯ ಹೂಗಳನ್ನೂ, ಘಮಘಮಿಸುವ ದಿವ್ಯ ಚಂದನಗಂಧವನ್ನೂ, ಹೊಸದಾದ ಶ್ವೇತವಸ್ತ್ರವನ್ನೂ, ಬಿಳುಪಾದ ಶಂಖವನ್ನೂ, ಬಿಳಿಹೂವಿನಮಾಲೆಯನ್ನೂ, ಮುತ್ತುವಜ್ರಗಳ ಹಾರವನ್ನೂ ಸರಸ್ವತೀದೇವಿಗೆ ಭಕ್ತಿಯಿಂದ ಅರ್ಪಿಸಬೇಕು.

ಯದ್ದೃಷ್ಟಂ ಚ ಶ್ರುತೌ ಧ್ಯಾನಂ ಪ್ರಶಸ್ತಂ ಶ್ರುತಿಸುಂದರಂ ।
ತನ್ನಿಬೋಧ ಮಹಾಭಾಗ ಭ್ರಮಭಂಜನಕಾರಣಂ ॥ ೪೫ ॥

ಸರಸ್ವತೀಂ ಶುಕ್ಲವರ್ಣಾಂ ಸಸ್ಮಿತಾಂ ಸುಮನೋಹರಾಂ ।
ಕೋಟಿಚಂದ್ರಪ್ರಭಾಜುಷ್ಟಪುಷ್ಟ ಶ್ರೀಯುಕ್ತವಿಗ್ರಹಾಂ ॥ ೪೬ ॥

ವಹ್ನಿಶುದ್ಧಾಂಶುಕಾಧಾನಾಂ ಸಸ್ಮಿತಾಂ ಸುಮನೋಹರಾಂ ।
ರತ್ನಸಾರೇಂದ್ರಖಚಿತವರಭೂಷಣಭೂಷಿತಾಂ ॥ ೪೭ ॥

ಸುಪೂಜಿತಾಂ ಸುರಗಣೈರ್ಬ್ರಹ್ಮವಿಷ್ಣುಶಿವಾದಿಭಿಃ ।
ವಂದೇ ಭಕ್ತ್ಯಾ ವಂದಿತಾಂ ತಾಂ ಮುನೀಂದ್ರಮನುಮಾನವೈಃ ॥ ೪೮ ॥

ಏವಂ ಧ್ಯಾತ್ವಾ ಚ ಮೂಲೇನ ಸರ್ವಂ ದತ್ವಾ ವಿಚಕ್ಷಣಃ ।
ಸಂಸ್ತೂಯ ಕವಚಂ ಧೃತ್ವಾ ಪ್ರಣಮೇದ್ದಂಡವದ್ಭುವಿ ॥ ೪೯ ॥

---

೪೫. ಎಲೈ, ನಾರದನೇ, ವೇದೋಕ್ತವಾಗಿಯೂ, ಶ್ರವಣಾನಂದಕರವಾಗಿಯೂ ಇರುವ ಸರಸ್ವತೀದೇವಿಯ ಧ್ಯಾನಕ್ರಮವನ್ನು ವಿವರಿಸುವೆನು. ಅದನ್ನು ಕೇಳಿ ನಿನ್ನ ಮನಸ್ಸಿನ ಸಂದೇಹವನ್ನು ಪರಿಹರಿಸಿಕೊ.

೪೬. ಶುಕ್ಲವರ್ಣಳೂ, ಸ್ಮಿತವದನಳೂ, ಕೋಟಿಚಂದ್ರಪ್ರಭಾಯುತವಾದ ದೇಹದಿಂದ ಮನೋಹರಳೂ ಆದ ಸರಸ್ವತೀದೇವಿಯನ್ನು ಸ್ತುತಿಸುವೆನು.

೪೭-೮. ಅಗ್ನಿಯಂತೆ ಪರಿಶುದ್ಧವಾದ ಅಂಬರವನ್ನುಟ್ಟು, ಉತ್ತಮರತ್ನ ಖಚಿತವಾದ ಭೂಷಣಗಳಿಂದ ಭೂಷಿತಳಾಗಿ, ಬ್ರಹ್ಮವಿಷ್ಣುಮಹೇಶ್ವರರಿಂದಲೂ, ದೇವಮುನಿಮಾನವರಿಂದಲೂ, ಸರ್ವದಾ ಪೂಜೆಗೊಂಡು ಸ್ಮಿತವದನೆಯಾದ ಸರಸ್ವತೀದೇವಿಯನ್ನು ಧ್ಯಾನಿಸುವೆನು.

೪೯. ಈ ರೀತಿಯಾಗಿ ಧ್ಯಾನಿಸಿ, ಆಸನಾದ್ಯುಪಚಾರಗಳನ್ನು ಭಕ್ತಿಯಿಂದ ಸಮರ್ಪಿಸಿ ಕವಚಧಾರಣೆಮಾಡಿ ದಂಡಪ್ರಣಾಮಮಾಡಬೇಕು.

ಯೇಷಾಂ ಸ್ಯಾದಿಷ್ಟದೇವೀಯಂ ತೇಷಾಂ ನಿತ್ಯಂ ಶುಭಂ ಮುನೇ ।
ವಿದ್ಯಾರಂಭೇ ಚ ಸರ್ವೇಷಾಂ ವರ್ಷಾಂತೇ ಪಂಚಮೀ ದಿನೇ ॥ ೫೦ ॥

ಸರ್ವೋಪಯುಕ್ತಮೂಲಂ ಚ ವೈದಿಕಾಷ್ಟಾಕ್ಷರಃ ಪರಃ ।
ಯೇಷಾಂ ಯದುಪದೇಶೋ ವಾ ತೇಷಾಂ ತನ್ಮೂಲನೇವ ಚ ॥
ಸರಸ್ವತೀ ಚತುರ್ಥ್ಯಂತೋ ವಹ್ನಿಜಾಯಾಂತ ಏವ ಚ ॥ ೫೧ ॥

ಶ್ರೀ ಹ್ರೀಂ ಸರಸ್ವತ್ಯೈ ಸ್ವಾಹಾ ।
ಲಕ್ಷ್ಮೀ ಮಯಾದಿಕಂ ಚೈವ ಮಂತ್ರೋಽಯಂ ಕಲ್ಪಪಾದಪಃ ॥ ೫೨ ॥

ಪುರಾ ನಾರಾಯಣಶ್ಚೇಮಂ ವಾಲ್ಮೀಕಾಯ ಕೃಪಾನಿಧಿಃ ।
ಪ್ರದದೌ ಜಾಹ್ನವೀ ತೀರೇ ಪುಣ್ಯಕ್ಷೇತ್ರೇ ಚ ಭಾರತೇ ॥ ೫೩ ॥

---

೫೦. ಯಾರು ಸರಸ್ವತಿಯನ್ನು ತಮ್ಮ ಇಷ್ಟದೇವತೆಯೆಂದು ತಿಳಿದು ವಿದ್ಯಾರಂಭಕಾಲದಲ್ಲೂ, ಮಾಘಶುಕ್ಲ ಪಂಚಮಿಯ ದಿವಸದಲ್ಲೂ ಪೂಜಿಸುವರೋ ಅವರಿಗೆ ನಿತ್ಯವೂ ಸನ್ಮಂಗಳವಾಗುವುದು.

೫೧-೫೨. ವೇದೋಕ್ತವಾದ ಅಷ್ಟಾಕ್ಷರಮಂತ್ರವೇ ಸರಸ್ವತಿಯ ಧ್ಯಾನಕ್ಕೆ ಉಪಯುಕ್ತವಾದ ಮೂಲಮಂತ್ರವು. ಅಥವಾ ಅವರವರಿಗೆ ಉಪದಿಷ್ಟವಾದುದೇ ಮೂಲಮಂತ್ರವೆನಿಸುವುದು. ಸರಸ್ವತೀಶಬ್ದದ ಚತುರ್ಥೀವಿಭಕ್ತ್ಯಂತವೂ, ವಹ್ನಿಪತ್ನಿಯಾದ ಸ್ವಾಹಾಂತವೂ. ಲಕ್ಷ್ಮೀ ಮತ್ತು ಮಾಯಾ ಎಂಬ ಅರ್ಥಬೋಧಕವಾದ "ಶ್ರೀಂ ಹ್ರೀಂ" ಎಂಬ ಅಕ್ಷರದ್ವಯವೇ ಆದಿಯಾಗಿಯೂ ಉಳ್ಳ "ಶ್ರೀಂ ಹ್ರೀಂ ಸರಸ್ವತ್ಯೈ ಸ್ವಾಹಾ" ಎಂಬ ಮಂತ್ರವು ಕಲ್ಪವೃಕ್ಷದಂತೆ ಬೇಡಿದ ಇಷ್ಟಾರ್ಥವನ್ನು ಕೊಡುವುದು.

೫೩. ಪೂರ್ವದಲ್ಲಿ ದಯಾಮಯನಾದ ಶ್ರೀಮನ್ನಾರಾಯಣನು ಈ ಮಂತ್ರಮನ್ನು ವಾಲ್ಮೀಕಿಮುಹರ್ಷಿಗೆ ಪುಣ್ಯಕ್ಷೇತ್ರವಾದ ಭರತಖಂಡದ ಗಂಗಾತೀರದಲ್ಲಿ ಉಪದೇಶಮಾಡಿದನು.

ಭೃಗುರ್ದದೌ ಚ ಶುಕ್ರಾಯ ಪುಷ್ಕರೇ ಸೂರ್ಯಪರ್ವಣಿ ।
ಚಂದ್ರಪರ್ವಣಿ ಮಾರೀಚೋ ದದೌ ವಾಕ್ಪತಯೇ ಮುದಾ ॥ ೫೪ ॥

ಭೃಗವೇ ಚ ದದೌ ತುಷ್ಟೋ ಬ್ರಹ್ಮಾ ಬದರಿಕಾಶ್ರಮೇ ।
ಆಸ್ತೀಕಾಯ ಜರತ್ಕಾರುರ್ದದೌ ಕ್ಷೀರೋದಸನ್ನಿಧೌ ।
ಬಿಭಾಂಡಕೋ ದದೌ ಮೇರೌ ಋಷ್ಯಶೃಂಗಾಯ ಧೀಮತೇ ॥ ೫೫ ॥

ಶಿವಃ ಕಣಾದಮುನಯೇ ಗೌತಮಾಯ ದದೌ ಮುನೇ ।
ಸೂರ್ಯಶ್ಚ ಯಾಜ್ಞವಲ್ಕ್ಯಾಯ ತಥಾ ಕಾತ್ಯಾಯನಾಯ ಚ ॥ ೫೬ ॥

ಶೇಷಃ ಪಾಣಿನಯೆ ಚೈವ ಭರದ್ವಾಜಾಯ ಧೀಮತೇ ।
ದದೌ ಶಾಕಟಾಯನಾಯ ಸುತಲೇ ಬಲಿಸಂಸದಿ ॥ ೫೭ ॥

---

೫೪. ಅಂತೆಯೇ ಭೃಗುಮಹರ್ಷಿಯು ಶುಕ್ರಾಚಾರ್ಯನಿಗೆ ಪುಷ್ಕರಕ್ಷೇತ್ರದಲ್ಲಿ ಸೂರ್ಯೋಪರಾಗದ ದಿವಸವೂ, ಮಾರೀಚನು ಬೃಹಸ್ಪತ್ಯಾಚಾರ್ಯನಿಗೆ ಚಂದ್ರೋಪರಾಗದ ದಿವಸವೂ, ಪ್ರೀತಿಯಿಂದ ಉಪದೇಶಿಸಿದರು.

೫೫. ಸಂತುಷ್ಟನಾದ ಬ್ರಹ್ಮದೇವನು ಭೃಗುಮಹರ್ಷಿಗೆ ಬದರಿಕಾಶ್ರಮದಲ್ಲೂ, ಜರತ್ಕಾರುವು ತನ್ನ ಪುತ್ರನಾದ ಆಸ್ತೀಕನಿಗೆ ಕ್ಷೀರಸಮುದ್ರದ ಸನ್ನಿಧಿಯಲ್ಲೂ ಬಿಭಾಂಡಕನು ಪ್ರಾಜ್ಞನಾದ ಋಷ್ಯಶೃಂಗನಿಗೆ ಮೇರುಪರ್ವತದಲ್ಲೂ ಉಪದೇಶವಿತ್ತರು.

೫೬. ಪರಮೇಶ್ವರನು ಕಣಾದನಾದ ಗೌತಮಮುನಿಗೂ, ಸೂರ್ಯನು ಯಾಜ್ಞವಲ್ಕ್ಯ ಮತ್ತು ಕಾತ್ಯಾಯನರಿಗೂ ಈ ಮಂತ್ರವನ್ನು ಉಪದೇಶಿಸಿದರು.

೫೭. ಆದಿಶೇಷನು ಪ್ರತಿಭಾಶಾಲಿಗಳಾದ ಪಾಣಿನಿ, ಭಾರದ್ವಾಜ ಮತ್ತು ಶಾಕಟಾಯನ ಮಹರ್ಷಿಗಳಿಗೆ ಬಲಿಚಕ್ರವರ್ತಿಯ ನಿವಾಸಸ್ಥಾನವಾದ ಸುತಲದಲ್ಲಿ ಉಪದೇಶಿಸಿದನು.

ಚತುರ್ಲಕ್ಷಜಪೇನೈವ ಮಂತ್ರಸಿದ್ಧಿರ್ಭವೇನ್ನೃಣಾಂ ।
ಯದಿ ಸ್ಯಾತ್ಸಿದ್ಧಮಂತ್ರೋ ಹಿ ಬೃಹಸ್ಪತಿಸಮೋ ಭವೇತ್ ॥ ೫೮ ॥

ಕವಚಂ ಶೃಣು ವಿಪ್ರೇಂದ್ರ ಯದ್ದತ್ತಂ ವಿಧಿನಾ ಪುರಾ ।
ವಿಶ್ವಶ್ರೇಷ್ಠಂ ವಿಶ್ವಜಯಂ ಭೃಗವೇ ಗಂಧಮಾದನೇ ॥ ೫೯ ॥

॥ ಭೃಗುರುವಾಚ ॥

ಬ್ರಹ್ಮನ್ಬ್ರಹ್ಮವಿದಾಂ ಶ್ರೇಷ್ಠ ಬ್ರಹ್ಮಜ್ಞಾನವಿಶಾರದ ।
ಸರ್ವಜ್ಞ ಸರ್ವಜನಕ ಸರ್ವಪೂಜಕ ಪೂಜಿತ ॥ ೬೦ ॥

ಸರಸ್ವತ್ಯಾಶ್ಚ ಕವಚಂ ಬ್ರೂಹಿ ವಿಶ್ವಜಯಂ ಪ್ರಭೋ ।
ಅಯಾತಯಾಮಮಂತ್ರಾಣಾಂ ಸಮೂಹೋ ಯತ್ರ ಸಂಯುತಃ ॥ ೬೧ ॥

---

೫೮. ನಾಲ್ಕುಲಕ್ಷ ಜಪಮಾಡಿದರೆ ಮನುಜರಿಗೆ ಈ ಮಂತ್ರಸಿದ್ಧಿಯಾಗುವುದು. ಮಂತ್ರಸಿದ್ಧಿಯನ್ನು ಪಡೆದವರು ಬೃಹಸ್ಪತ್ಯಾಚಾರ್ಯರಿಗೆ ಸಮನಾಗುವರು.

೫೯. ಎಲೈ, ವಿಪ್ರೋತ್ತಮನಾದ ನಾರದನೇ, ಪೂರ್ವದಲ್ಲಿ ವಿಧಿಯು ಭೃಗುಮಹರ್ಷಿಗೆ ಗಂಧಮಾದನ ಪರ್ವತದಲ್ಲಿ ಉಪದೇಶಿಸಿದ, ಪ್ರಪಂಚದಲ್ಲಿ ಅತ್ಯುತ್ತಮವೂ, ಸರ್ವಜಯಕಾರಣವೂ ಆದ ಸರಸ್ವತಿಯ ಕವಚವನ್ನೂ ಈಗ ತಿಳಿಸುವೆನು. ಅವಧರಿಸು.

೬೦–೬೧. ಭೃಗುಮಹರ್ಷಿ :—ಸರ್ವಜ್ಞನೂ, ಸರ್ವಜನಕನೂ, ಸರ್ವಪೂಜಿತನೂ, ಬ್ರಹ್ಮಜ್ಞಾನವಿಶಾರದನೂ ಆದ ಎಲೈ ಚತುರ್ಮುಖನೇ, ಅತ್ಯಂತ ಗೂಢಮಂತ್ರಗಳ ಸಮೂಹದಿಂದ ಕೂಡಿ ವಿಶ್ವಜಯಕ್ಕೆ ಕಾರಣವಾದ ಸರಸ್ವತಿಯ ಕವಚವನ್ನು ನನಗೆ ಉಪದೇಶಿಸು.

॥ ಬ್ರಹ್ಮೋವಾಚ ॥

ಶೃಣು ವತ್ಸ ಪ್ರವಕ್ಷ್ಯಾಮಿ ಕವಚಂ ಸರ್ವಕಾಮದಂ ।
ಶ್ರುತಿಸಾರಂ ಶ್ರುತಿಸುಖಂ ಶ್ರುತ್ಯುಕ್ತಂ ಶ್ರುತಿಪೂಜಿತಂ ॥ ೬೨ ॥

ಉಕ್ತಂ ಕೃಷ್ಣೇನ ಗೋಲೋಕೇ ಮಹ್ಯಂ ವೃಂದಾವನೇ ವನೇ ।
ರಾಸೇಶ್ವರೇಣ ವಿಭುನಾ ರಾಸೇ ವೈ ರಾಸಮಂಡಲೇ ॥ ೬೩ ॥

ಅತೀವ ಗೋಪನೀಯಂ ಚ ಕಲ್ಪವೃಕ್ಷಸಮಂ ಪರಂ ।
ಅಶ್ರುತಾದ್ಭುತಮಂತ್ರಾಣಾಂ ಸಮೂಹೈಶ್ಚ ಸಮನ್ವಿತಂ ॥ ೬೪ ॥

ಯದ್ಧೃತ್ವಾ ಪಠನಾದ್ಬ್ರಹ್ಮನ್ ಬುದ್ಧಿಮಾಂಶ್ಚ ಬೃಹಸ್ಪತಿಃ ।
ಯದ್ಧೃತ್ವಾ ಭಗವಾಂಶ್ಶುಕ್ರಃ ಸರ್ವದೈತ್ಯೇಷು ಪೂಜಿತಃ ॥ ೬೫ ॥

---

೬೨. ಚತುರ್ಮುಖಬ್ರಹ್ಮ:—ವೇದೋಕ್ತವೂ, ವೇದಸಾರವೂ, ಶ್ರವಣಾನಂದಜನಕವೂ ಆಗಿ, ಸಕಲೇಷ್ಟಾರ್ಥಸಿದ್ಧಿಯನ್ನು ಕೊಡುವ ಸರಸ್ವತಿಯ ಕವಚವನ್ನು ಉಪದೇಶಿಸುವೆನು. ಅವಧರಿಸು.

೬೩. ಈ ಸರಸ್ವತಿಯ ಕವಚವನ್ನು ರಾಸೇಶ್ವರನೂ, ಸರ್ವಶಕ್ತನೂ, ಆದ ಶ್ರೀಕೃಷ್ಣಪರಮಾತ್ಮನು ಗೋಲೋಕದ ವೃಂದಾವನದಲ್ಲಿರುವ ರಾಸಮಂಡಲದಲ್ಲಿ ನನಗೆ ಉಪದೇಶಿಸಿದನು.

೬೪. ಬಹಳ ಗೋಪ್ಯವಾದುದೂ, ಹಿಂದೆಂದೂ ಕೇಳದ ಅನೇಕ ಅದ್ಭುತ ಮಂತ್ರಗಳ ಸಮೂಹದಿಂದ ಯುಕ್ತವಾದುದೂ ಆದ ಈ ಕವಚವು ಕಲ್ಪವೃಕ್ಷಕ್ಕೆ ಸಮವಾದುದು.

೬೫. ಈ ಕವಚವನ್ನು ಧಾರಣೆಮಾಡಿ ಮಂತ್ರ ಪಾಠಮಾಡಿದುದರಿಂದಲೇ ಬೃಹಸ್ಪತಿಯು ಬಹಳ ಬುದ್ಧಿವಂತನೆಂದೂ, ಶುಕ್ರಾಚಾರ್ಯನು ದೈತ್ಯಗುರುವೆಂದೂ ಖ್ಯಾತಿಹೊಂದಿದರು.

ಪಠನಾದ್ಧಾರಣಾದ್ವಾಗ್ಮೀ ಕವೀಂದ್ರೋ ವಾಲ್ಮಿಕೀ ಮುನಿಃ ।
ಸ್ವಾಯಂಭುವೋ ಮನುಶ್ಚೈವ ಯದ್ಧೃತ್ವಾ ಸರ್ವಪೂಜಿತಃ ॥ ೬೬ ॥

ಕಣಾದೋ ಗೌತಮಃ ಕಣ್ವಃ ಪಾಣಿನಿಃ ಶಾಕಟಾಯನಃ ।
ಗ್ರಂಥಂ ಚಕಾರ ಯದ್ಧೃತ್ವಾ ದಕ್ಷಃ ಕಾತ್ಯಾಯನಃ ಸ್ವಯಂ ॥ ೬೭ ॥

ಧೃತ್ವಾ ವೇದವಿಭಾಗಂ ಚ ಪುರಾಣಾನ್ಯಖಿಲಾನಿ ಚ ।
ಚಕಾರ ಲೀಲಾಮಾತ್ರೇಣ ಕೃಷ್ಣದ್ವೈಪಾಯನಃ ಸ್ವಯಂ ॥ ೬೮ ॥

ಶಾತಾತಪಶ್ಚ ಸಂವರ್ತೋ ವಸಿಷ್ಠಶ್ಚ ಪರಾಶರಃ ।
ಯದ್ಧೃತ್ವಾ ಪಠನಾದ್ಗ್ರಂಥಂ ಯಾಜ್ಞವಲ್ಕ್ಯಶ್ಚಕಾರ ಸಃ ॥ ೬೯ ॥

---

೬೬. ಇದನ್ನು ಧರಿಸಿ ಮಂತ್ರಪಠನಮಾಡಿದುದರಿಂದಲೇ ವಾಲ್ಮೀಕಿ ಮುನಿಯು ಕವಿಶ್ರೇಷ್ಠನೂ, ಉತ್ತಮವಾದ ವಾಗ್ಮಿಯೂ ಎನಿಸಿಕೊಂಡನು. ಸ್ವಾಯಂಭುವಮನುವೂ ಇದನ್ನು ಧರಿಸಿ ಸರ್ವಪೂಜ್ಯನಾದನು.

೬೭. ಕಣಾದ, ಗೌತಮ, ಕಣ್ವ, ಪಾಣಿನಿ, ಶಾಕಟಾಯನ, ದಕ್ಷ ಮತ್ತು ಕಾತ್ಯಾಯನ ಇವರೆಲ್ಲರೂ ಈ ಕವಚಧಾರಣೆಮಾಡಿದುದರಿಂದಲೇ ಗ್ರಂಥರಚನೆಗೆ ಸಮರ್ಥರಾದರು.

೬೮. ಕೃಷ್ಣದ್ವೈಪಾಯನನೆಂಬ ನಾಮಾಂತರವುಳ್ಳ ವ್ಯಾಸಮಹರ್ಷಿಯೂ ಕೂಡ ಈ ಕವಚಧಾರಣ ಸಮಾರ್ಥ್ಯದಿಂದಲೇ ವೇದಗಳೆಲ್ಲವನ್ನೂ ವಿಸ್ತರಿಸಿ ಅಷ್ಟಾದಶಮಹಾಪುರಾಣಗಳನ್ನೂ ಲೀಲಾಮಾತ್ರದಿಂದಲೇ ರಚಿಸಿದನು.

೬೯. ಶಾತಾತಪ, ಸಂವರ್ತ, ವಸಿಷ್ಠ, ಪರಾಶರ, ಮತ್ತು ಯಾಜ್ಞವಲ್ಕ್ಯ ಇವರೆಲ್ಲರೂ ಸರಸ್ವತಿಯ ಕವಚನ್ನು ಧರಿಸಿ ಮಂತ್ರವನ್ನು ಪಠಿಸಿದುದರಿಂದಲೇ ಗ್ರಂಥರಚನೆಯಲ್ಲಿ ಶಕ್ತರಾದರು.

ಋಷ್ಯಶೃಂಗೋ ಭರದ್ವಾಜಶ್ಚಾಸ್ತೀಕೋ ದೇವಲಸ್ತಥಾ ।
ಜೈಗೀಷವ್ಯೋಽಥ ಜಾಬಾಲಿರ್ಯದ್ಧೃತ್ವಾ ಸರ್ವಪೂಜಿತಃ ॥ ೭೦ ॥

ಕವಚಸ್ಯಾಸ್ಯ ವಿಪ್ರೇಂದ್ರ ಋಷಿರೇಷ ಪ್ರಜಾಪತಿಃ ।
ಸ್ವಯಂ ಬೃಹಸ್ಪತಿಶ್ಛಂದೋ ದೇವೋ ರಾಸೇಶ್ವರಃ ಪ್ರಭುಃ ॥ ೭೧ ॥

ಸರ್ವತತ್ವಪರಿಜ್ಞಾನೇ ಸರ್ವಾರ್ಥೇಽಪಿ ಚ ಸಾಧನೇ ।
ಕವಿತಾಸು ಚ ಸರ್ವಾಸು ವಿನಿಯೋಗಃ ಪ್ರಕೀರ್ತಿತಃ ॥ ೭೨ ॥

ಓಂ ಹ್ರೀಂ ಸರಸ್ವತ್ಯೈ ಸ್ವಾಹಾ ಶಿರೋ ಮೇ ಪಾತು ಸರ್ವತಃ ।
ಶ್ರೀಂ ವಾಗ್ದೇವತಾಯೈ ಸ್ವಾಹಾ ಭಾಲಂ ಮೇ ಸರ್ವದಾಽವತು ॥ ೭೩ ॥

ಓಂ ಸರಸ್ವತ್ಯೈ ಸ್ವಾಹೇತಿ ಶ್ರೋತ್ರಂ ಪಾತು ನಿರಂತರಂ ।
ಓಂ ಹ್ರೀಂ ಭಾರತ್ಯೈ ಸ್ವಾಹಾ ನೇತ್ರಯುಗ್ಮಂ ಸದಾವತು ॥ ೭೪ ॥

---

೭೦. ಋಷ್ಯಶೃಂಗ, ಭರದ್ವಾಜ, ಆಸ್ತೀಕ, ದೇವಲ, ಜೈಗೀಷವ್ಯ ಮತ್ತು ಜಾಬಾಲಿ ಇವರೆಲ್ಲರೂ ಈ ಕವಚಧಾರಣೆಮಾಡಿ ಸರ್ವಪೂಜ್ಯರಾದರು.

೭೧. ಎಲೈ, ವಿಪ್ರೋತ್ತಮನಾದ ನಾರದನೇ! ಈ ಕವಚಕ್ಕೆ ಪ್ರಜಾಪತಿಯೇ ಋಷಿಯು. ಬೃಹಸ್ಪತಿಯೇ ಛಂದಸ್ಸು. ರಾಸೇಶ್ವರನಾದ ಪರಮಾತ್ಮನೇ ದೇವತೆಯು.

೭೨. ಸರ್ವತತ್ವಪರಿಜ್ಞಾನದಲ್ಲೂ, ಸರ್ವಾರ್ಥಸಾಧನದಲ್ಲೂ, ಮತ್ತು ಸಮಸ್ತ ಕವಿತೆಗಳಲ್ಲೂ ಈ ಕವಚದ ವಿನಿಯೋಗವಾಗುವುದು.

೭೩. 'ಓಂ ಹ್ರೀಂ ಸರಸ್ವತ್ಯೈ ಸ್ವಾಹಾ' ಎಂಬ ಮಂತ್ರವು ಯಾವಾಗಲೂ ನನ್ನ ಶಿರಸ್ಸನ್ನು ರಕ್ಷಿಸಲಿ, 'ಶ್ರೀಂ ವಾಗ್ದೇವತಾಯೈ ಸ್ವಾಹಾ' ಎಂಬುದು ನನ್ನ ಹಣೆಯನ್ನು ಸರ್ವದಾ ರಕ್ಷಿಸಲಿ.

೭೪. 'ಓಂ ಸರಸ್ವತ್ಯೈ ಸ್ವಾಹಾ' ಎಂಬುದು ನನ್ನ ಕಿವಿಗಳನ್ನು ಕಾಪಾಡಲಿ. 'ಓಂ ಶ್ರೀಂ ಹ್ರೀಂ ಭಾರತ್ಯೈ ಸ್ವಾಹಾ' ಎಂಬುದು ನನ್ನ ಎರಡು ಕಣ್ಣುಗಳನ್ನು ಸರ್ವದಾ ರಕ್ಷಿಸಲಿ.

ಓಂ ಹ್ರೀಂ ವಾಗ್ವಾದಿನ್ಯೈ ಸ್ವಾಹಾ ನಾಸಾಂ ಮೇ ಸರ್ವತೋಽವತು ।
ಹ್ರೀಂ ವಿದ್ಯಾಧಿಷ್ಠಾತೃದೇವ್ಯೈ ಸ್ವಾಹಾ ಶ್ರೋತ್ರಂ ಸದಾಽವತು ॥ ೭೫ ॥

ಓಂ ಶ್ರೀಂ ಹ್ರೀಂ ಬ್ರಾಹ್ಮ್ಯೈ ಸ್ವಾಹೇತಿ ದಂತಪಂಕ್ತೀಃ ಸದಾಽವತು ।
ಐಮಿತ್ಯೇಕಾಕ್ಷರೋ ಮಂತ್ರೋ ಮಮ ಕಂಠಂ ಸದಾಽವತು ॥ ೭೬ ॥

ಓಂ ಶ್ರೀಂ ಹ್ರೀಂ ಪಾತು ಮೇ ಗ್ರೀವಾಂ ಸ್ಕಂಧಂ ಮೇ ಶ್ರೀಂ ಸದಾಽವತು ।
ಶ್ರೀಂ ವಿದ್ಯಾಧಿಷ್ಠಾತೃದೇವ್ಯೈ ಸ್ವಾಹಾ ವಕ್ಷಃ ಸದಾಽವತು ॥ ೭೭ ॥

ಓಂ ಹ್ರೀಂ ವಿದ್ಯಾಸ್ವರೂಪಾಯೈ ಸ್ವಾಹಾ ಮೇ ಪಾತು ನಾಭಿಕಾಂ ।
ಓಂ ಹ್ರೀಂ ಹ್ರೀಂ ವಾಣ್ಯೈ ಸ್ವಾಹೇತಿ ಮಮ ಪೃಷ್ಠಂ ಸದಾಽವತು ॥ ೭೮ ॥

---

೭೫. 'ಓಂ ಹ್ರೀಂ ವಾಗ್ವಾದಿನ್ಯೈ ಸ್ವಾಹಾ' ಎಂಬುದು ನನ್ನ ಮೂಗನ್ನು ಸರ್ವದಾ ರಕ್ಷಿಸಲಿ. 'ಶ್ರೀಂ ವಿದ್ಯಾಧಿಷ್ಠಾತೃದೇವ್ಯೈ ಸ್ವಾಹಾ' ಎಂಬುದು ನನ್ನ ಕಿವಿಗಳನ್ನು ಕಾಪಾಡಲಿ.

೭೬. 'ಓಂ ಶ್ರೀಂ ಹ್ರೀಂ ಬ್ರಾಹ್ಮ್ಯೈ ಸ್ವಾಹಾ' ಎಂಬುದು ನನ್ನ ಹಲ್ಲಿನ ಸಾಲುಗಳನ್ನು ರಕ್ಷಿಸಲಿ. "ಐಂ" ಎಂಬ ಏಕಾಕ್ಷರ ಮಂತ್ರವು ನನ್ನ ಕಂಠವನ್ನು ಸರ್ವದಾ ರಕ್ಷಿಸಲಿ.

೭೭. 'ಓಂ ಶ್ರೀಂ ಹ್ರೀಂ' ಎಂಬುದು ನನ್ನ ಕುತ್ತಿಗೆಯನ್ನೂ 'ಶ್ರೀಂ' ಎಂಬುದು ನನ್ನ ಹೆಗಲನ್ನೂ 'ಶ್ರೀಂ ವಿದ್ಯಾಧಿಷ್ಠಾತೃದೇವ್ಯೈ ಸ್ವಾಹಾ' ಎಂಬುದು ನನ್ನ ವಕ್ಷಸ್ಥಲವನ್ನೂ ಸರ್ವದಾ ರಕ್ಷಿಸಲಿ.

೭೮. 'ಓಂ ಶ್ರೀಂ ವಿದ್ಯಾಸ್ವರೂಪಾಯೈ ಸ್ವಾಹಾ'! ಎಂಬುದು ನನ್ನ ನಾಭಿ ಪ್ರದೇಶವನ್ನೂ 'ಓಂ ಹ್ರೀಂ ಶ್ರೀಂ ವಾಣ್ಯೈ ಸ್ವಾಹಾ' ಎಂಬುದು ನನ್ನ ಪೃಷ್ಠ ಭಾಗವನ್ನೂ ಸರ್ವದಾ ಕಾಪಾಡಲಿ.

ಓಂ ಸರ್ವವರ್ಣಾತ್ಮಿಕಾಯೈ ಪಾದಯುಗ್ಮಂ ಸದಾವತು ।
ಓಂ ರಾಗಾಧಿಷ್ಠಾತೃದೇವ್ಯೈ ಸರ್ವಾಗಂ ಮೇ ಸದಾವತು ॥ ೭೯ ॥

ಓಂ ಸರ್ವಕಂಠವಾಸಿನ್ಯೈ ಸ್ವಾಹಾ ಪ್ರಾಚ್ಯಾಂ ಸದಾವತು ।
ಓಂ ಹ್ರೀಂ ಜಿಹ್ವಾಗ್ರವಾಸಿನ್ಯೈ ಸ್ವಾಹಾಗ್ನಿದಿಶಿ ರಕ್ಷತು ॥ ೮೦ ॥

ಓಂ ಐಂ ಹ್ರೀಂ ಶ್ರೀಂ ಸರಸ್ವತ್ಯೈ ಬುಧಜನನ್ಯೈ ಸ್ವಾಹಾ ।
ಸತತಂ ಮಂತ್ರರಾಜೋಽಯಂ ದಕ್ಷಿಣೇ ಮಾಂ ಸದಾವತು ॥ ೮೧ ॥

ಓಂ ಹ್ರೀಂ ಶ್ರೀಂ ತ್ರ್ಯಕ್ಷರೋ ಮಂತ್ರೋ ನೈಋತ್ಯಾಂ ಮೇ ಸದಾವತು ।
ಕವಿಜಿಹ್ವಾಗ್ರವಾಸಿನ್ಯೈ ಸ್ವಾಹಾ ಮಾಂ ವಾರುಣೇಽವತು ॥ ೮೨ ॥

ಓಂ ಸದಂಬಿಕಾಯೈ ಸ್ವಾಹಾ ವಾಯವ್ಯೇ ಮಾಂ ಸದಾವತು ।
ಓಂ ಗದ್ಯಪದ್ಯವಾಸಿನ್ಯೈ ಸ್ವಾಹಾ ಮಾಮುತ್ತರೇಽವತು ॥ ೮೩ ॥

---

೭೯. 'ಓಂ ಸರ್ವವರ್ಣಾತ್ಮಿಕಾಯೈ ಸ್ವಾಹಾ' ಎಂಬುದು ನನ್ನ ಎರಡು ಪಾದಗಳನ್ನೂ 'ಓಂ ರಾಗಾಧಿಷ್ಠಾತೃದೇವ್ಯೈ ಸ್ವಾಹಾ' ಎಂಬುದು ನನ್ನ ಸರ್ವಾಂಗವನ್ನೂ ಸರ್ವದಾ ರಕ್ಷಿಸಲಿ.

೮೦-೮೧. 'ಓಂ ಸರ್ವಕಂಠವಾಸಿನ್ಯೈ ಸ್ವಾಹಾ' ಎಂಬುದು ಪೂರ್ವದಿಕ್ಕಿನಲ್ಲೂ 'ಓಂ ಹ್ರೀಂ ಜಿಹ್ವಾಗ್ರವಾಸಿನ್ಯೈ ಸ್ವಾಹಾ' ಎಂಬುದು ಆಗ್ನೇಯದಿಕ್ಕಿನಲ್ಲೂ 'ಓಂ ಐಂ ಹ್ರೀಂ ಶ್ರೀಂ ಸರಸ್ವತ್ಯೈ ಬುಧಜನನ್ಯೈ ಸ್ವಾಹಾ' ಎಂಬುದು (ಶ್ರೇಷ್ಠಮಂತ್ರವು) ದಕ್ಷಿಣದಿಕ್ಕಿನಲ್ಲೂ ನನ್ನನ್ನು ಕಾಪಾಡಲಿ.

೮೨-೮೩. ಅಂತೆಯೇ 'ಓಂ ಹ್ರಿಂ ಶ್ರೀಂ' ಎಂಬ ಮೂರಕ್ಷರದ ಮಂತ್ರವು ನೈಋತ್ಯದಿಕ್ಕಿನಲ್ಲೂ 'ಕವಿಜಿಹ್ವಾಗ್ರವಾಸಿನ್ಯೈ ಸ್ವಾಹಾ' ಎಂಬುದು ಪಶ್ಚಿಮದಿಕ್ಕಿನಲ್ಲೂ, 'ಓಂ ಗದ್ಯಪದ್ಯವಾಸಿನ್ಯೈ ಸ್ವಾಹಾ' ಎಂಬುದು ಉತ್ತರದಿಕ್ಕಿನಲ್ಲೂ ನನ್ನನ್ನು ರಕ್ಷಿಸಲಿ.

ಓಂ ಸರ್ವಶಾಸ್ತ್ರವಾಸಿನ್ಯೈ ಸ್ವಾಹೇಶಾನ್ಯಾಂ ಸದಾವತು ।
ಓಂ ಹ್ರೀಂ ಸರ್ವಪೂಜಿತಾಯೈ ಸ್ವಾಹಾ ಚೋರ್ಧ್ವಂ ಸದಾವತು ॥ ೮೪ ॥

ಐಂ ಹ್ರೀಂ ಪುಸ್ತಕವಾಸಿನ್ಯೈ ಸ್ವಾಹಾಽಧೋ ಮಾಂ ಸದಾವತು ।
ಓಂ ಗ್ರಂಥಬೀಜರೂಪಾಯೈ ಸ್ವಾಹಾ ಮಾಂ ಸರ್ವತೋಽವತು ॥ ೮೫ ॥

ಇತಿ ತೇ ಕಥಿತಂ ವಿಪ್ರ ಸರ್ವಮಂತ್ರೌಘವಿಗ್ರಹಂ ।
ಇದಂ ವಿಶ್ವಜಯಂ ನಾಮ ಕವಚಂ ಬ್ರಹ್ಮರೂಪಕಂ ॥ ೮೬ ॥

ಪುರಾ ಶ್ರುತಂ ಧರ್ಮವಕ್ತ್ರಾತ್ಪರ್ವತೇ ಗಂಧಮಾದನೇ ।
ತವ ಸ್ನೇಹಾನ್ಮಯಾಖ್ಯಾತಂ ಪ್ರವಕ್ತವ್ಯಂ ನ ಕಸ್ಯಚಿತ್ ॥ ೮೭ ॥

ಗುರುಮಭ್ಯರ್ಚ್ಯ ವಿಧಿವದ್ವಸ್ತ್ರಾಲಂಕಾರಚಂದನೈಃ ।
ಪ್ರಣಮ್ಯ ದಂಡವದ್ಭೂಮೌ ಕವಚಂ ಧಾರಯೇತ್ಸುಧೀಃ ॥ ೮೮ ॥

೮೪–೮೫. 'ಓಂ ಸರ್ವಶಾಸ್ತ್ರವಾಸಿನ್ಯೈ ಸ್ವಾಹಾ' ಎಂಬುದು ಐಶಾನ್ಯದಿಕ್ಕಿನಲ್ಲೂ 'ಓಂ ಹ್ರೀಂ ಸರ್ವಪೂಜಿತಾಯೈ ಸ್ವಾಹಾ' ಎಂಬುದು ಮೇಲು ಭಾಗದಲ್ಲೂ 'ಐಂ ಹ್ರೀಂ ಪುಸ್ತಕವಾಸಿನ್ಯೈ ಸ್ವಾಹಾ' ಎಂಬುದು ಅಧೋಭಾಗದಲ್ಲೂ, 'ಓಂ ಗ್ರಂಥಬೀಜರೂಪಾಯೈ ಸ್ವಾಹಾ' ಎಂಬುದು ಸರ್ವಭಾಗದಲ್ಲೂ ಕೂಡ ನನ್ನನ್ನು ಕಾಪಾಡಲಿ ಎಂದು ಅಂಗನ್ಯಾಸವನ್ನು ಮಾಡಿಕೊಳ್ಳಬೇಕು.

೮೬. ಎಲೈ ವಿಪ್ರೋತ್ತಮನಾದ ನಾರದನೇ! ಎಲ್ಲ ಮಂತ್ರಗಳಿಗೂ ವಿಗ್ರಹರೂಪದಂತಿರುವ ವಿಶ್ವಜಯವೆಂಬ ಹೆಸರುಳ್ಳ ಬ್ರಹ್ಮರೂಪವಾದ ಈ ಕವಚವನ್ನು ನಿನಗೆ ಉಪದೇಶಿಸಿರುವೆನು.

೮೭. ಈ ಕವಚವನ್ನು ಪೂರ್ವದಲ್ಲಿ ಧರ್ಮಪುರುಷನ ಬಾಯಿನಿಂದ ಗಂಧಮಾದನಪರ್ವತದಲ್ಲಿ ನಾನು ಕೇಳಿದೆನು. ನಿನ್ನ ಮೇಲಿನ ವಿಶ್ವಾಸದಿಂದ ನಿನಗೆ ಉಪದೇಶಿಸಿರುತ್ತೇನೆ. ಇದನ್ನು ಯಾರಿಗೂ ಹೇಳದೆ ಗೋಪ್ಯವಾಗಿಟ್ಟುಕೊಂಡಿರು.

೮೮. ವಸ್ತ್ರಾಲಂಕಾರ ಗಂಧಗಳಿಂದ ವಿಧಿಪೂರ್ವಕವಾಗಿ ಗುರುದೇವನನ್ನು ಪೂಜಿಸಿ ದಂಡಪ್ರಣಾಮಮಾಡಿ ಅನಂತರ ಕವಚಧಾರಣೆ ಮಾಡಬೇಕು.

ಪಂಚಲಕ್ಷಜಪೇನೈವ ಸಿದ್ಧಂತು ಕವಚಂ ಭವೇತ್ ।
ಯದಿ ಸ್ಯಾತ್ಸಿದ್ಧಕವಚೋ ಬೃಹಸ್ಪತಿಸಮೋ ಭವೇತ್ ॥ ೮೯ ॥

ಮಹಾವಾಗ್ಮೀ ಕವೀಂದ್ರಶ್ಚ ತ್ರೈಲೋಕ್ಯ ವಿಜಯೀ ಭವೇತ್ ।
ಶಕ್ನೋತಿ ಸರ್ವಂ ಜೇತುಂ ಸ ಕವಚಸ್ಯ ಪ್ರಭಾವತಃ ॥ ೯೦ ॥

ಇದಂ ತೇ ಕಾಣ್ವಶಾಖೋಕ್ತಂ ಕಥಿತಂ ಕವಚಂ ಮುನೇ ।
ಸ್ತೋತ್ರಂ ಪೂಜಾವಿಧಾನಂ ಚ ಧ್ಯಾನಂ ವೈ ವಂದನಂ ತಥಾ ॥ ೯೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರಾಯಣನಾರದಸಂವಾದೇ ಸರಸ್ವತೀಕವಚಂನಾಮ
ಚತುರ್ಥೋಽಧ್ಯಾಯಃ

---

೮೯. ಐದು ಲಕ್ಷಜಪಮಾಡಿದರೆ ಈ ಕವಚವು ಸಿದ್ಧಿಸುವುದು. ಕವಚ ಸಿದ್ಧಿಪಡೆದವನು ಬೃಹಸ್ಪತಿಗೆ ಸಮನೆನಿಸುವನು.

೯೦. ಸರಸ್ವತಿಕವಚ ಮಹಿಮೆಯಿಂದ ಮನುಜನು ಒಳ್ಳೆಯವಾಗ್ಮಿಯೂ, ಸರಸಕವಿಯೂ ಆಗಿ ತ್ರಿಲೋಕವನ್ನೂ ಜಯಿಸಲು ಶಕ್ತನಾಗುವನು. ಖ್ಯಾತಿವಂತನಾಗುವನು. ಮತ್ತು ಎಲ್ಲರಿಗೂ ಅಗ್ರಗಣ್ಯನಾಗುವನು.

೯೧. ಎಲೈ ನಾರದಮುನಿಯೇ! ಕಾಣ್ವಶಾಖೋಕ್ತರೀತಿಯಾಗಿ ಸರಸ್ವತಿಯ ಕವಚ ಸ್ತೋತ್ರಗಳನ್ನೂ, ಪೂಜಾಧ್ಯಾನಗಳನ್ನೂ, ವಂದನಾಕ್ರಮವನ್ನೂ ನಿನಗೆ ವಿವರಿಸಿದೆನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದ
ನಾರಾಯಣ ಸಂವಾದಸಂದರ್ಭದಲ್ಲಿ ಸರಸ್ವತೀಕವಚ
ನಿರೂಪಣಾತ್ಮಕವಾದ ನಾಲ್ಕನೆಯ
ಅಧ್ಯಾಯವು ಮುಗಿದುದು.

ನಾಲ್ಕನೆಯ ಅಧ್ಯಾಯದ ಸಾರಾಂಶವು

ಬ್ರಹ್ಮಾಂಡಸೃಷ್ಟಿಯಾದ ನಂತರ ಪ್ರಕೃತಿಯು ದುರ್ಗಾ, ರಾಧೆ, ಲಕ್ಷ್ಮಿ, ಸರಸ್ವತಿ ಮತ್ತು ಸಾವಿತ್ರಿ ಎಂಬ ಹೆಸರಿನಿಂದ ಐದು ಬಗೆಯಾದಳು. ಅಲ್ಲದೆ ಪ್ರಕೃತಿಯ ಅಂಶ ಮತ್ತು ಕಲೆಯಿಂದ ಅನೇಕ ದೇವಿಯರ ಅವತಾರವಾಯಿತು. ಈ ಪಂಚವಿಧ ದೇವಿಯರಲ್ಲಿ ವಾಗಧಿದೇವತೆಯಾದ ಸರಸ್ವತಿಯೇ ಪ್ರಧಾನಳು. ಆ ದೇವಿಯು ಆವಿರ್ಭವಿಸಿದ ಕೂಡಲೇ ಶ್ರೀಕೃಷ್ಣನನ್ನು ಕಾಮಿಸಲು, ಕೃಷ್ಣನು 'ತನ್ನನ್ನು ರಾಧೆಯು ಒಲಿಸಿಕೊಂಡಿರುವುದರಿಂದ ಶ್ರೀಮನ್ನಾರಾಯಣನನ್ನು ವರಿಸು' ಎಂದು ಹೇಳಿ ಮೊಟ್ಟಮೊದಲು ತಾನೇ ಆಕೆಯನ್ನು ಪೂಜಿಸಿದನು. ಅನಂತರ ಬ್ರಹ್ಮಾದಿ ಸಕಲ ದೇವತೆಗಳೂ, ಮನು ಮುನಿ ಮಾನವರೂ, ಪೂಜಿಸಲಾರಂಭಿಸಿದರು. ವಿದ್ಯಾರಂಭಕಾಲದಲ್ಲಾಗಲೀ, ಮಾಘಶುದ್ಧ ಪಂಚಮಿಯದಿನದಲ್ಲಾಗಲೀ ಸರಸ್ವತೀದೇವಿಯನ್ನು ವೇದೋಕ್ತವಾದ ಕವಚಸ್ತೋತ್ರ ಮಂತ್ರಾದಿಗಳ ಪಠನ ಪೂರ್ವಕವಾಗಿ ಪೂಜಿಸಿದರೆ ಸಕಲೇಷ್ಟಾರ್ಥ ಸಿದ್ಧಿಯಾಗುವುದು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಪಂಚಮೋಽಧ್ಯಾಯಃ ||

|| ನಾರಾಯಣ ಉವಾಚ ||

ವಾಗ್ದೇವತಾಯೋಃ ಸ್ತವನಂ ಶ್ರೂಯತಾಂ ಸರ್ವಕಾಮದಂ |
ಮಹಾಮುನಿರ್ಯಾಜ್ಞವಲ್ಕ್ಯೋ ಯೇನ ತುಷ್ಟಾವ ತಾಂ ಪುರಾ || ೧ ||

ಗುರುಶಾಪಾಚ್ಚ ಸಮುನಿರ್ಹತವಿದ್ಯೋ ಬಭೂವ ಹ |
ತದಾ ಜಗಾಮ ದುಃಖಾರ್ತೋ ರವಿಸ್ಥಾನಂ ಚ ಪುಣ್ಯದಂ || ೨ ||

ಸಂಪ್ರಾಪ್ಯ ತಪಸಾ ಸೂರ್ಯಂ ಕೋಣಾರ್ಕೇ ದೃಷ್ಟಿಗೋಚರೇ |
ತುಷ್ಟಾವ ಸೂರ್ಯಂ ಶೋಕೇನ ರುರೋದ ಚ ಪುನಃ ಪುನಃ || ೩ ||

ಐದನೆಯ ಅಧ್ಯಾಯವು

೧. ಎಲೈ ನಾರದನೇ! ಯಾಜ್ಞವಲ್ಕ್ಯಮಹರ್ಷಿಯು ಪೂರ್ವದಲ್ಲಿ ಸರಸ್ವತಿಯನ್ನು ತುಷ್ಟಿಬಡಿಸಿದ, ಸರ್ವಕಾಮಫಲಪ್ರದವಾದ ಸರಸ್ವತಿಯ ಸ್ತೋತ್ರವಿಧಾನವನ್ನು ಹೇಳುವೆನು.

೨. ಆ ಮಹರ್ಷಿಯು ಗುರುಶಾಪದಿಂದ ಕಲಿತವಿದ್ಯೆಯೆಲ್ಲವನ್ನೂ ಮರೆತು ದುಃಖಪೀಡಿತನಾಗಿ ಪುಣ್ಯಕರವಾದ ಸೂರ್ಯನ ವಾಸಸ್ಥಾನಕ್ಕೆ ತೆರಳಿದನು.

೩. ತಪಸ್ಸಿನಿಂದ ಸೂರ್ಯದೇವನನ್ನು ಪ್ರಸನ್ನಗೊಳಿಸಿ ಅವನ ದರ್ಶನವನ್ನು ಹೊಂದಿ ಬಹಳ ದೈನ್ಯದಿಂದ ಸ್ತುತಿಸಿ, ಗೋಳಾಡಿದನು.

ಸೂರ್ಯಸ್ತಂ ಪಾಠಯಾಮಾಸ ವೇದವೇದಾಂಗವಿಶ್ವರಃ ।
ಉವಾಚ ತು ಹಿ ವಾಗ್ದೇವೀಂ ಭಕ್ತ್ಯಾ ಚ ಸ್ಮೃತಿಹೇತವೇ ॥ ೪ ॥

ತಮಿತ್ಯುಕ್ತ್ವಾ ದೀನನಾಥೋಽಹ್ಯಂತರ್ಧಾನಂ ಜಗಾಮ ಸಃ ।
ಮುನಿಃ ಸ್ನಾತ್ವಾ ಚ ತುಷ್ಟಾವ ಭಕ್ತಿನಮ್ರಾತ್ಮಕಂಧರಃ ॥ ೫ ॥

॥ ಯಾಜ್ಞವಲ್ಕ್ಯ ಉವಾಚ ॥

ಕೃಪಾಂ ಕುರು ಜಗನ್ಮಾತರ್ಮಾಮೇವಂ ಹತತೇಜಸಂ ।
ಗುರುಶಾಪಾತ್ಸ್ಮೃತಿಭ್ರಷ್ಟಂ ವಿದ್ಯಾಹೀನಂ ಚ ದುಃಖಿತಂ ॥ ೬ ॥

ಜ್ಞಾನಂ ದೇಹಿ ಸ್ಮೃತಿಂ ದೇಹಿ ವಿದ್ಯಾಂ ವಿದ್ಯಾಧಿದೇವತೇ ।
ಪ್ರತಿಷ್ಠಾಂ ಕವಿತಾಂ ದೇಹಿ ಶಕ್ತಿಂ ಶಿಷ್ಯಪ್ರಬೋಧಿಕಾಂ ॥ ೭ ॥

---

೪. ಸರ್ವೇಶನಾದ ಸೂರ್ಯದೇವನು, ವೇದವೇದಾಂಗ ತತ್ವವಾದ ವಾಗ್ದೇವಿಯ ಸ್ತವವನ್ನು ಅವನಿಗೆ ಉಪದೇಶಿಸಿ, ಸ್ಮರಣಶಕ್ತಿಯನ್ನು ಹೊಂದಲು ಭಕ್ತಿಯಿಂದ ವಾಗ್ದೇವಿಯನ್ನು ಸ್ತುತಿಸು, ಎಂದು ಹೇಳಿದನು.

೫. ದೀನನಾಥನಾದ ದಿವಾಕರನು ಅವನಿಗೆ ಇಂತು ಉಪದೇಶಿಸಿ ಅಂತರ್ಧಾನನಾಗಲು, ಯಾಜ್ಞವಲ್ಕ್ಯಮುನಿಯು ಸ್ನಾನಮಾಡಿ ಭಕ್ತಿಯಿಂದ ತಲೆತಗ್ಗಿಸಿಕೊಂಡು ಸರಸ್ವತೀದೇವಿಯನ್ನು ಸ್ತುತಿಸಿದನು.

೬. ಯಾಜ್ಞವಲ್ಕ್ಯ:—ಎಲೌ, ಜಗನ್ಮಾತೆಯಾದ ಶಾರದೆಯೇ! ಗುರು ಶಾಪದಿಂದ ಸ್ಮೃತಿಭ್ರಷ್ಟನೂ, ವಿದ್ಯಾಹೀನನೂ, ದುಃಖಿತನೂ. ನಿಸ್ತೇಜಸ್ಕನೂ ಆದ ನನ್ನಲ್ಲಿ ದಯೆ ತೋರು.

೭. ಎಲೌ, ವಿದ್ಯಾಧಿದೇವತೆಯೇ! ನನಗೆ ಸದ್ವಿದ್ಯೆಯನ್ನೂ, ದಿವ್ಯಜ್ಞಾನವನ್ನೂ, ಸ್ಮರಣಶಕ್ತಿಯನ್ನೂ, ಶಿಷ್ಯಪ್ರಬೋಧಾತ್ಮಕವಾದ ಕವಿತಾಶಕ್ತಿಯನ್ನೂ ಮತ್ತು ಸತ್ಕೀರ್ತಿಯನ್ನೂ ಕೊಟ್ಟು ಕಾಪಾಡು.

ಗ್ರಂಥನಿರ್ಮಿತಿಶಕ್ತಿಂ ಚ ಸಚ್ಛಿಷ್ಯಂ ಸುಪ್ರತಿಷ್ಠಿತಂ ।
ಪ್ರತಿಭಾಂ ಸತ್ಸಭಾಯಾಂ ಚ ವಿಚಾರಕ್ಷಮತಾಂ ಶುಭಾಂ ॥ ೮ ॥

ಲುಪ್ತಾಂ ಸರ್ವಾಂ ದೈವವಶಾನ್ನವಂ ಕುರು ಪುನಃ ಪುನಃ ।
ಯಥಾಂಕುರಂ ಜನಯತಿ ಭಗವಾನ್ಯೋಗಮಾಯಯಾ ॥ ೯ ॥

ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ ।
ಸರ್ವವಿದ್ಯಾಧಿದೇವೀ ಯಾ ತಸ್ಯೈ ವಾಣ್ಯೈ ನಮೋ ನಮಃ ॥ ೧೦ ॥

ಯಯಾ ವಿನಾ ಜಗತ್ಸರ್ವಂ ಶಶ್ವಜ್ಜೀವನ್ಮೃತಂ ಸದಾ ।
ಜ್ಞಾನಾಧಿದೇವೀ ಯಾ ತಸ್ಯೈ ಸರಸ್ವತ್ಯೈ ನಮೋ ನಮಃ ॥ ೧೧ ॥

ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ ।
ವಾಗಧಿಷ್ಠಾತೃದೇವೀ ಯಾ ತಸ್ಯೈ ವಾಣ್ಯೈ ನಮೋ ನಮಃ ॥ ೧೨ ॥

೮–೯. ಭಗವಂತನು ಯೋಗಮಾಯಾಶಕ್ತಿಯಿಂದ ತನ್ನಲ್ಲಿಯೇ ಐಕ್ಯವಾದ ಸೃಷ್ಟ್ಯಂಕುರಾದಿಗಳನ್ನು ಆವಿರ್ಭಾವಗೊಳಿಸುವಂತೆ ತನ್ನಲ್ಲಿ ಗುರುಶಾಪದಿಂದ ಲುಪ್ತವಾದ ಗ್ರಂಥನಿರ್ಮಾಣಶಕ್ತಿಯನ್ನೂ, ಪಂಡಿತರ ಸಭೆಯಲ್ಲಿ ಒಳ್ಳೆಯ ಪ್ರತಿಭಾಶಕ್ತಿಯನ್ನೂ, ವಿಚಾರಶೀಲತೆಯನ್ನೂ ದಯಪಾಲಿಸಿ ನನ್ನನ್ನು ಸಚ್ಛಿಷ್ಯನೆಂಬ ಕೀರ್ತಿಗೆ ಒಳಗು ಮಾಡು.

೧೦. ಬ್ರಹ್ಮಸ್ವರೂಪಳೂ, ಪರಂಜ್ಯೋತಿರ್ಮಯಳೂ, ಅನಾದಿಯೂ, ಸರ್ವವಿದ್ಯಾಧಿದೇವತೆಯೂ ಆದ ವಾಗ್ದೇವಿಗೆ ಭಕ್ತಿಯಿಂದ ವಂದಿಸುವೆನು.

೧೧. ಯಾವ ದೇವಿಯಿಲ್ಲದಿದ್ದರೆ ಜಗತ್ತೆಲ್ಲವೂ ಜೀವಿಸಿದ್ದರೂ ಮೃತಪ್ರಾಯವೆನಿಸುವುದೋ, ಅಂಥಾ ಜ್ಞಾನಾಧಿದೇವಿಯಾದ ಸರಸ್ವತಿಗೆ ನನ್ನ ಅನಂತ ನಮಸ್ಕಾರಗಳು.

೧೨. ಯಾವ ದೇವಿಯ ಅನುಗ್ರಹವಿಲ್ಲದ ಜಗತ್ತು ಮೂಕವೂ, ಉನ್ಮತ್ತವೂ ಆಗುವುದೋ, ಅಂಥಾ ವಾಗಧಿಷ್ಠಾತೃದೇವಿಯಾದ ಆ ವಾಗ್ದೇವಿಗೆ ಇದೋ ವಂದನೆಗಳು.

ಹಿಮಚಂದನಕುಂದೇಂದುಕುಮುದಾಂಭೋಜ ಸನ್ನಿಭಾ ।
ವರ್ಣಾಧಿದೇವೀ ಯಾ ತಸ್ಯೈ ಚಾಕ್ಷರಾಯೈ ನಮೋ ನಮಃ ॥ ೧೩ ॥

ವಿಸರ್ಗಬಿಂದುಮಾತ್ರಾಣಾಂ ಯದಧಿಷ್ಠಾನಮೇವ ಚ ।
ಇತ್ಥಂ ತ್ವಂ ಗೀಯಸೇ ಸದ್ಭಿರ್ಭಾರತ್ಯೈ ತೇ ನಮೋ ನಮಃ ॥ ೧೪ ॥

ಯಯಾ ವಿನಾತ್ರ ಸಂಖ್ಯಾಕೃತ್ಸಂಖ್ಯಾಂ ಕರ್ತುಂ ನ ಶಕ್ನುತೇ ।
ಕಾಲಸಂಖ್ಯಾಸ್ವರೂಪಾ ಯಾ ತಸ್ಯೈ ದೇವ್ಯೈ ನಮೋ ನಮಃ ॥ ೧೫ ॥

ವ್ಯಾಖ್ಯಾಸ್ವರೂಪಾ ಯಾ ದೇವೀ ವ್ಯಾಖ್ಯಾಧಿಷ್ಠಾತೃದೇವತಾ ।
ಭ್ರಮಸಿದ್ಧಾಂತರೂಪಾ ಯಾ ತಸ್ಯೈ ದೇವ್ಯೈ ನಮೋ ನಮಃ ॥ ೧೬ ॥

ಸ್ಮೃತಿಶಕ್ತಿರ್ಜ್ಞಾನಶಕ್ತಿರ್ಬುದ್ಧಿಶಕ್ತಿಸ್ವರೂಪಿಣೀ ।
ಪ್ರತಿಭಾಕಲ್ಪನಾಶಕ್ತಿರ್ಯಾ ಚ ತಸ್ಯೈ ನಮೋ ನಮಃ ॥ ೧೭ ॥

---

೧೩. ಹಿಮ, ಚಂದನ, ಮೊಲ್ಲೆ, ಚಂದ್ರ, ನೈದಿಲೆ, ತಾವರೆ ಇವುಗಳಿಗೆ ಸದೃಶಳೂ, ವರ್ಣಾಧಿದೇವಿಯೂ ಆದ ಆ ಅಕ್ಷರಸ್ವರೂಪಳಿಗೆ ಇದೋ ನನ್ನ ಭಕ್ತಿ ಪೂರ್ವಕ ವಂದನೆಗಳು.

೧೪. ಯಾವ ದೇವಿಯು ವಿಸರ್ಗ, ಬಿಂದು ಮತ್ತು ಮಾತ್ರೆಗಳಿಗೂ ಅಧಿಷ್ಠಾತೃದೇವಿಯೆಂದು ಬಲ್ಲವರಿಂದ ಬಣ್ಣಿಸಲ್ಪಡುವಳೋ ಅಂಥ ಭಾರತೀದೇವಿಗೆ ನನ್ನ ಅನಂತವಂದನೆಗಳು.

೧೫. ಯಾವ ದೇವಿಯನ್ನುಳಿದು ಗಣಕರು ಗಣನೆಮಾಡಲಾಗುವುದಿಲ್ಲವೋ, ಅಂಥ ಕಾಲಸಂಖ್ಯಾಸ್ವರೂಪಳಾದ ದೇವಿಗೆ ನನ್ನ ನಮಸ್ಕಾರಗಳು.

೧೬. ಸೂತ್ರಾತ್ಮಕವಾದ ಯಾವ ಪರಬ್ರಹ್ಮನಿಗೆ ವ್ಯಾಖ್ಯಾಸ್ವರೂಪಳೂ, ವ್ಯಾಖ್ಯಾಧಿಷ್ಠಾತೃದೇವತೆಯೂ, ಎಲ್ಲರ ಭ್ರಮೆಯನ್ನೂ ಹೋಗಲಾಡಿಸಿ ಸಿದ್ಧಾಂತ ಜ್ಞಾನವನ್ನು ಕೊಡುವವಳೂ ಆದ ದೇವಿಗೆ ಅನಂತ ವಂದನೆಗಳು.

೧೭. ಯಾವ ದೇವಿಯು ಸ್ಮೃತಿ, ಜ್ಞಾನ ಮತ್ತು ಬುದ್ಧಿಶಕ್ತಿರೂಪಿಣಿಯೂ ಪ್ರತಿಭಾ ಮತ್ತು ಕಲ್ಪನಾಶಕ್ತಿರೂಪಿಣಿಯೂ ಆಗಿರುವಳೋ ಆ ದೇವಿಗೆ ಅನಂತ ನಮಸ್ಕಾರಗಳು.

ಸನತ್ಕುಮಾರೋ ಬ್ರಹ್ಮಾಣಂ ಜ್ಞಾನಂ ಪಪ್ರಚ್ಛ ಯತ್ರ ವೈ ।
ಬಭೂವ ಜಡವತ್ಸೋಽಪಿ ಸಿದ್ಧಾಂತಂ ಕರ್ತುಮಕ್ಷಮಃ ॥ ೧೮ ॥

ತದಾ ಜಗಾಮ ಭಗವಾನಾತ್ಮಾ ಶ್ರೀಕೃಷ್ಣ ಈಶ್ವರಃ ।
ಉವಾಚ ಸತ್ತಮಂ ಸ್ತೋತ್ರಂ ವಾಣ್ಯಾ ಇತಿ ವಿಧಿಂ ತದಾ ॥ ೧೯ ॥

ಸ ಚ ತುಷ್ಟಾವ ತಾಂ ಬ್ರಹ್ಮಾ ಚಾಜ್ಞಯಾ ಪರಮಾತ್ಮನಃ ।
ಚಕಾರ ತತ್ಪ್ರಸಾದೇನ ತದಾ ಸಿದ್ಧಾಂತಮುತ್ತಮಂ ॥ ೨೦ ॥

ಯದಾಪ್ಯನಂತಂ ಪಪ್ರಚ್ಛ ಜ್ಞಾನಮೇಕಂ ವಸುಂಧರಾ ।
ಬಭೂವ ಮೂಕವತ್ಸೋಽಪಿ ಸಿದ್ಧಾಂತಂ ಕರ್ತುಮಕ್ಷಮಃ ॥ ೨೧ ॥

ತದಾ ತ್ವಾಂ ಚ ಸ ತುಷ್ಟಾವ ಸಂತ್ರಸ್ತಃ ಕಶ್ಯಪಾಜ್ಞಯಾ ।
ತತಶ್ಚಕಾರ ಸಿದ್ಧಾಂತಂ ನಿರ್ಮಲಂ ಭ್ರಮಭಂಜನಂ ॥ ೨೨ ॥

೧೮-೧೯. ಹಿಂದೆ ಸನತ್ಕುಮಾರನು ಪರಬ್ರಹ್ಮಸ್ವರೂಪದ ಸಿದ್ಧಾಂತವನ್ನು ಅರುಹಬೇಕೆಂದು ಬ್ರಹ್ಮನನ್ನು ಕೇಳಿದಾಗ ಅವನು ಸಿದ್ಧಾಂತವನ್ನು ಹೇಳಲಾಗದೆ ಜಡನಾಗಿ, ಶ್ರೀಕೃಷ್ಣಪರಮಾತ್ಮನ ಹತ್ತಿರಕ್ಕೆ ಹೋಗಲು, ಆ ಪರಮಾತ್ಮನು ವಾಣಿಯನ್ನು ಭಜಿಸಿ ಸಿದ್ಧಾಂತವನ್ನು ತಿಳಿಯುವಂತೆ ಹೇಳಿ ವಾಣಿಯ ದಿವ್ಯಸ್ತೋತ್ರವನ್ನುವನ್ನು ಬ್ರಹ್ಮನಿಗೆ ಉಪದೇಶಿಸಿದನು.

೨೦. ಪರಮಾತ್ಮನ ಅಪ್ಪಣೆಯಂತೆ ಅವನು ವಾಣಿಯಾದ ನಿನ್ನನ್ನು ಸ್ತುತಿಸಿ, ನಿನ್ನ ಅನುಗ್ರಹದಿಂದ ಆತ್ಮಸ್ವರೂಪವನ್ನು ಸನತ್ಕುಮಾರನಿಗೆ ಸಿದ್ಧಾಂತವಾಗಿ ಹೇಳಿದನು.

೨೧. ವಸುಂಧರೆಯು ಅನಂತನನ್ನು ಕುರಿತು ಅದ್ವೈತಜ್ಞಾನವನ್ನು ಕೇಳಿದಾಗಲೂ, ಅನಂತನು ನಿನ್ನ ಅನುಗ್ರಹವಿಲ್ಲದೆ ಅದ್ವಿತೀಯ ಜ್ಞಾನವನ್ನು ಬೋಧಿಸಲು ಅಶಕ್ತನಾದನು.

೨೨. ಅನಂತರ ಕಶ್ಯಪಮಹರ್ಷಿಯ ಆಜ್ಞೆಯಿಂದ ನಿನ್ನನ್ನು ಭಜಿಸಿ, ನಿರ್ಮಲವೂ, ಭ್ರಮನಾಶಕವೂ ಆದ ದಿವ್ಯಾತ್ಮಸ್ವರೂಪವನ್ನು ಸಿದ್ಧಾಂತಗೊಳಿಸಿದನು.

ವ್ಯಾಸಃ ಪುರಾಣಸೂತ್ರಂ ಚ ಸಮಪೃಚ್ಛತ ವಾಲ್ಮಿಕಿಂ ।
ಮೌನೀಭೂತಃ ಸ ಸಸ್ಮಾರ ತ್ವಾಮೇವ ಜಗದಂಬಿಕಾಂ ॥ ೨೩ ॥

ತದಾ ಚಕಾರ ಸಿದ್ಧಾಂತಂ ತ್ವದ್ವರೇಣ ಮುನೀಶ್ವರಃ ।
ಸ ಪ್ರಾಪ ನಿರ್ಮಲಂ ಜ್ಞಾನಂ ಪ್ರಮಾದಧ್ವಂಸಕಾರಣಂ ॥ ೨೪ ॥

ಪುರಾಣಸೂತ್ರಂ ಶ್ರುತ್ವಾ ಸ ವ್ಯಾಸಃ ಕೃಷ್ಣಕಲೋದ್ಭವಃ ।
ತ್ವಾಂ ಸಿಷೇವೇ ಚ ದಧ್ಯೌ ಚ ಶತವರ್ಷಂ ಚ ಪುಷ್ಕರೇ ।
ತದಾ ತ್ವತ್ತೋ ವರಂ ಪ್ರಾಪ್ಯ ಸ ಕವೀಂದ್ರೋ ಬಭೂವ ಹ । ॥ ೨೫ ॥

ತದಾ ವೇದವಿಭಾಗಂ ಚ ಪುರಾಣಾನಿ ಚಕಾರ ಹ ।
ಯದಾ ಮಹೇಂದ್ರೇ ಪಪ್ರಚ್ಛ ತತ್ವಜ್ಞಾನಂ ಶಿವಾ ಶಿವಂ ॥ ೨೬ ॥

ಕ್ಷಣಂ ತ್ವಾಮೇವ ಸಂಚಿಂತ್ಯ ತಸ್ಯೈ ಜ್ಞಾನಂ ದದೌ ವಿಭುಃ ।
ಪಪ್ರಚ್ಛ ಶಬ್ದಶಾಸ್ತ್ರಂ ಚ ಮಹೇಂದ್ರಶ್ಚ ಬೃಹಸ್ಪತಿಂ ॥ ೨೭ ॥

---

೨೩. ವ್ಯಾಸಮಹರ್ಷಿಯು ಪುರಾಣಕ್ಕೆ ಸೂತ್ರಾತ್ಮಕವಾದ ಪರಬ್ರಹ್ಮಸ್ವರೂಪವನ್ನು ವಿವರಿಸೆಂದು ವಾಲ್ಮೀಕಿಯನ್ನು ಕೇಳಿದಾಗಲೂ, ಅವನು ಮೌನವನ್ನು ಧರಿಸಿ ಜಗದಂಬಿಕೆಯಾದ ನಿನ್ನನ್ನು ಭಜಿಸಿ ವರವನ್ನು ಪಡೆದನು.

೨೪. ಅನಂತರ ಆ ಮುನಿಶ್ರೇಷ್ಠನು ಭ್ರಮನಾಶಕವಾದ ನಿರ್ಮಲಜ್ಞಾನವನ್ನು ಪಡೆದು ಪುರಾಣಸೂತ್ರಾತ್ಮಕವಾದ ಬ್ರಹ್ಮಸ್ವರೂಪವನ್ನು ಸಿದ್ಧಾಂತವಾಗಿ ವ್ಯಾಸನಿಗೆ ಉಪದೇಶಿಸಿದನು.

೨೫-೨೬. ಶ್ರೀಕೃಷ್ಣಪರಮಾತ್ಮನ ಕಲೆಯಿಂದ ಅವತರಿಸಿದ ವ್ಯಾಸನೂ ಕೂಡ ಪುರಾಣಸೂತ್ರಗಳನ್ನು ತಿಳಿದು ಪುಷ್ಕರಕ್ಷೇತ್ರದಲ್ಲಿ ನೂರು ವರ್ಷಕಾಲ ಸೇವಿಸಿ, ನುತಿಸಿ, ನಿನ್ನ ದಿವ್ಯವರದಿಂದ ಕವಿಶ್ರೇಷ್ಠನೆನಿಸಿಕೊಂಡು ವೇದಗಳನ್ನು ವಿಸ್ತರಿಸಿ ಪುರಾಣಗಳನ್ನು ರಚಿಸಿದನು.

೨೭-೨೮. ಅಂತೆಯೇ ಮಹೇಂದ್ರಪರ್ವತದಲ್ಲಿ ಪಾರ್ವತಿಯು ತತ್ವಜ್ಞಾನವನ್ನು ವಿವರಿಸಬೇಕೆಂದು ಶಿವನನ್ನು ಕೇಳಿದಾಗಲೂ, ಶಿವನು ಕ್ಷಣಕಾಲ ನಿನ್ನನ್ನೇ ಸ್ಮರಿಸಿ ಆಕೆಗೆ ತತ್ವಜ್ಞಾನವನ್ನು ಉಪದೇಶಿಸಿದನು. ಮಹೇಂದ್ರನು ಬೃಹಸ್ಪತಿ

ದಿವ್ಯಂ ವರ್ಷಸಹಸ್ರಂ ಚ ಸ ತ್ವಾಂ ದಧ್ಯೌ ಚ ಪುಷ್ಕರೇ ।
ತದಾ ತ್ವತ್ತೋ ವರಂ ಪ್ರಾಪ್ಯ ದಿವ್ಯಂ ವರ್ಷಸಹಸ್ರಕಂ ॥
ಉವಾಚ ಶಬ್ದಶಾಸ್ತ್ರಂ ಚ ತದರ್ಥಂ ಚ ಸುರೇಶ್ವರಂ ॥ ೨೮ ॥

ಅಧ್ಯಾಪಿತಾಶ್ಚ ಯೈಃ ಶಿಷ್ಯಾ ಯೈರಧೀತಂ ಮುನೀಶ್ವರೈಃ ।
ತೇ ಚ ತ್ವಾಂ ಪರಿಸಂಚಿಂತ್ಯ ಪ್ರವರ್ತಂತೇ ಸುರೇಶ್ವರಿ ॥ ೨೯ ॥

ತ್ವಂ ಸಂಸ್ತುತಾ ಪೂಜಿತಾ ಚ ಮುನೀಂದ್ರಮನುಮಾನವೈಃ ।
ದೈತ್ಯೇಂದ್ರೈಶ್ಚ ಸುರೈಶ್ಚಾಪಿ ಬ್ರಹ್ಮವಿಷ್ಣುಶಿವಾದಿಭಿಃ ॥ ೩೦ ॥

ಜಡೀಭೂತಃ ಸಹಸ್ರಾಸ್ಯಃ ಪಂಚವಕ್ತ್ರಶ್ಚತುರ್ಮುಖಃ ।
ಯಾಂ ಸ್ತೋತುಂ ಕಿಮಹಂ ಸ್ತೌಮಿ ತಾಮೇಕಾಸ್ಯೇನ ಮಾನವಃ ॥ ೩೧ ॥

ಯನ್ನು ಕುರಿತು ಶಬ್ದಶಾಸ್ತ್ರೋಪದೇಶವನ್ನು ಕೇಳಿದಾಗಲೂ, ಬೃಹಸ್ಪತಿಯು ಪುಷ್ಕರಕ್ಷೇತ್ರದಲ್ಲಿ ದಿವ್ಯಸಹಸ್ರವರ್ಷಗಳಕಾಲ ನಿನ್ನನ್ನು ಧ್ಯಾನಮಾಡಿ ಅನಂತರ ನಿನ್ನ ವರಪ್ರಸಾದವನ್ನು ಪಡೆದು ದೇವೇಂದ್ರನಿಗೆ ಶಬ್ದಶಾಸ್ತ್ರವನ್ನೂ ಅದರ ಅರ್ಥವನ್ನೂ ಉಪದೇಶಿಸಿದನು.

೨೯. ಎಲೌ ಸುರೇಶ್ವರಿಯಾದ ಸರಸ್ವತಿಯೇ, ಶಿಷ್ಯರಿಗೆ ಉಪದೇಶಮಾಡಿದ ಅನೇಕ ಗುರುಗಳೂ, ದಿವ್ಯೋಪದೇಶವನ್ನು ಹೊಂದಿದ ಮುನೀಶ್ವರರೂ ಕೂಡ ನಿನ್ನನ್ನು ಮೊದಲು ಧ್ಯಾನಮಾಡಿಯೇ ತಮ್ಮ ತಮ್ಮ ವಿದ್ಯೆಯಲ್ಲಿ ತೊಡಗಿರುವರು.

೩೦. ನೀನು ಮುನಿಶ್ರೇಷ್ಠರಿಂದಲೂ, ಮನುಮಾನವರಿಂದಲೂ, ದೇವದಾನವಶ್ರೇಷ್ಠರಿಂದಲೂ, ಅಷ್ಟೇಕೆ ಬ್ರಹ್ಮವಿಷ್ಣುಶಿವಾದಿಗಳಿಂದಲೂ ಕೂಡ ಸಂಸ್ತುತಳೂ, ಪೂಜಿತಳೂ ಆಗಿದ್ದೀಯೆ.

೩೧. ಯಾವ ನಿನ್ನನ್ನು ಆದಿಶೇಷನು ತನ್ನ ಸಹಸ್ರಮುಖದಿಂದಲೂ, ಶಿವನು ಪಂಚಮುಖಗಳಿಂದಲೂ, ಬ್ರಹ್ಮನು ಚತುರ್ಮುಖಗಳಿಂದಲೂ ಹೊಗಳಲು ಹೋಗಿ ಜಡರಾಗಿರುವಾಗ ಒಂದೇ ಮುಖವುಳ್ಳ ಮನುಷ್ಯಮಾತ್ರನಾದ ನಾನು ಹೇಗೆ ಹೊಗಳಲಿ.

ಇತ್ಯುಕ್ತ್ವಾ ಯಾಜ್ಞವಲ್ಕ್ಯಶ್ಚ ಭಕ್ತಿನಮ್ರಾತ್ಮಕಂಧರಃ ।
ಪ್ರಣನಾಮ ನಿರಾಹಾರೋ ರುರೋದ ಚ ಮುಹುರ್ಮುಹುಃ ॥ ೩೨ ॥

ತದಾ ಜ್ಯೋತಿಸ್ಸ್ವರೂಪಾ ಸಾ ತೇನಾದೃಷ್ಟಾಪ್ಯುವಾಚ ತಂ ।
ಸುಕವೀಂದ್ರೋ ಭವೇತ್ಯುಕ್ತ್ವಾ ವೈಕುಂಠಂ ಚ ಜಗಾಮ ಹ ॥ ೩೩ ॥

ಯಾಜ್ಞವಲ್ಕ್ಯಕೃತಂ ವಾಣೀಸ್ತೋತ್ರಂ ಯಃ ಸಂಯತಃ ಪಠೇತ್ ।
ಸ ಕವೀಂದ್ರೋ ಮಹಾವಾಗ್ಮೀ ಬೃಹಸ್ಪತಿಸಮೋ ಭವೇತ್ ॥ ೩೪ ॥

ಮಹಾಮೂರ್ಖಶ್ಚ ದುರ್ಮೇಧಾ ವರ್ಷಮೇಕಂ ಚ ಯಃ ಪಠೇತ್ ।
ಸ ಪಂಡಿತಶ್ಚ ಮೇಧಾವೀ ಸುಕವಿಶ್ಚ ಭವೇದ್ಧ್ರುವಂ ॥ ೩೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಪ್ರಕೃತಿಖಂಡೇ ನಾರದ ನಾರಾಯಣಸಂವಾದೇ ಯಾಜ್ಞವಲ್ಕ್ಯೋಕ್ತ ವಾಣೀಸ್ತವನಂ ನಾಮ ಪಂಚಮೋಽಧ್ಯಾಯಃ

---

೩೨. ಯಾಜ್ಞವಲ್ಕ್ಯನು ಸರಸ್ವತೀದೇವಿಯನ್ನು ಕುರಿತು ಇಂತು ನುಡಿದು ಭಕ್ತಿಯಿಂದ ತಲೆತಗ್ಗಿಸಿ ಸಾಷ್ಟಾಂಗವೆರಗಿ ಬಹುಕಾಲ ನಿರಾಹಾರನಾಗಿ ದೈನ್ಯದಿಂದ ಮೊರೆಯಿಟ್ಟನು

೩೩. ಆಗ ಜ್ಯೋತಿಃಸ್ವರೂಪಿಣಿಯಾದ ಸರಸ್ವತೀದೇವಿಯನ್ನು ಅವನು ಅರಿಯಲಾಗದಿದ್ದರೂ, 'ನೀನು ಸತ್ಕವಿಶ್ರೇಷ್ಠನಾಗು' ಎಂದು ಆಶೀರ್ವದಿಸಿ ಆಕೆಯು ವೈಕುಂಠಕ್ಕೆ ಹೊರಟುಹೋದಳು.

೩೪. ಯಾಜ್ಞವಲ್ಕ್ಯನಿಂದ ರಚಿತವಾದ ಸರಸ್ವತಿಯ ಸ್ತೋತ್ರವನ್ನು ನಿಯಮದಿಂದ ಪಠಿಸುವವನು ಒಳ್ಳೆಯ ಕವಿಯೂ, ಮಹಾವಾಗ್ಮಿಯೂ ಆಗಿ ಬೃಹಸ್ಪತ್ಯಾಚಾರ್ಯನಿಗೆ ಸಮನೆಂದೆನಿಸಿಕೊಳ್ಳುವನು.

೩೫. ಒಂದು ವರ್ಷಕಾಲ ಪಠಿಸಿದವನು ಅತ್ಯಂತ ಮೂರ್ಖನಾಗಿದ್ದರೂ ಬಹಳ ಮೇಧಾವಿಯಾಗುವನು. ಅಲ್ಲದೆ ಅವನು ಪಂಡಿತನೂ, ಒಳ್ಳೆಯ ಕವಿಯೂ ಆಗುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ನಾರದನಾರಾಯಣ ಸಂವಾದರೂಪವಾದ ಪ್ರಕೃತಿಖಂಡದಲ್ಲಿ ಯಾಜ್ಞವಲ್ಕ್ಯನಿಂದ ರಚಿತವಾದ ಸರಸ್ವತೀಸ್ತೋತ್ರ ರೂಪವಾದ ಐದನೆಯ ಅಧ್ಯಾಯವು ಮುಗಿದುದು.

ಐದನೆಯ ಅಧ್ಯಾಯದ ಸಾರಾಂಶವು

ಪ್ರಪಂಚವ್ಯವಹಾರವೆಲ್ಲವೂ ವಾಙ್ಮೂಲಕವಾಗಿರುವುದು ಮಾತನಾಡಲು ಬರದಿರುವ ಪ್ರಾಣಿಗಳೂ ಕೂಡ ಸಂಜ್ಞೆಸಂಕೇತಗಳಿಂದ ತಮ್ಮ ಮನೋಭಿಪ್ರಾಯ ಗಳನ್ನು ವ್ಯಕ್ತಗೊಳಿಸುವುವು. ಆದುದರಿಂದಲೇ ವ್ಯಾಸಮಹರ್ಷಿಯು ಈ ಭಾಷೆ ಗಳಿಗೆಲ್ಲ ಅಧಿದೇವತೆಯಾದ ವಾಗ್ದೇವಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟು, ಸೃಷ್ಟಿಗೊಳಗಾದ ಪ್ರತಿಯೊಂದು ಪ್ರಾಣಿಯೂ ಮೊದಲು ಆ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂಬ ಉದ್ದೇಶದಿಂದ, ಯಾಜ್ಞವಲ್ಕ್ಯಮುನಿಯು ಸರಸ್ವತೀದೇವಿ ಯನ್ನು ಸ್ತುತಿಸಿ, ವರವನ್ನು ಪಡೆದ ಸಮಾಚಾರವನ್ನು ವಿವರಿಸಿರುವನು. ವೈಶಂಪಾ ಯನ ಮಹರ್ಷಿಯ ಶಿಷ್ಯನಾದ ಯಾಜ್ಞವಲ್ಕ್ಯನು ತನ್ನ ಸಹಪಾಠಿಗಳನ್ನು ಧಿಕ್ಕರಿಸಿ, ಗುರುಶಾಪಗ್ರಸ್ತನಾಗಿ, ಅವನಿಂದ ಕಲಿತ ವೇದಗಳನ್ನು ವಮನಮಾಡಿ, ಸೂರ್ಯನ ಅನುಗ್ರಹದಿಂದ ವಾಣೀಸ್ತೋತ್ರವನ್ನು ಉಪದೇಶಹೊಂದಿ, ವಾಣಿಯನ್ನು ಮೆಚ್ಚಿಸಿ, ಆಕೆಯ ದಿವ್ಯಾನುಗ್ರಹಕ್ಕೆ ತಾನು ಪಾತ್ರನಾದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಷಷ್ಠೋऽಧ್ಯಾಯಃ ॥

॥ ನಾರಾಯಣ ಉವಾಚ ॥

ಸರಸ್ವತೀ ಸಾ ವೈಕುಂಠೇ ಸ್ವಯಂ ನಾರಾಯಣಾಂತಿಕೇ ।
ಗಂಗಾಶಾಪೇನ ಕಲಯಾ ಕಲಹಾದ್ಭಾರತೇ ಸರಿತ್ ॥ ೧ ॥

ಪುಣ್ಯದಾ ಪುಣ್ಯಜನನೀ ಪುಣ್ಯತೀರ್ಥಸ್ವರೂಪಿಣೀ ।
ಪುಣ್ಯವದ್ಭಿರ್ನಿಷೇವ್ಯಾ ಚ ಸ್ಥಿತಿಃ ಪುಣ್ಯವತಾಂ ಮುನೇ ॥ ೨ ॥

ಆರನೆಯ ಅಧ್ಯಾಯವು

೧. ಅನಂತರ ವೈಕುಂಠಲೋಕಕ್ಕೆ ತೆರಳಿದ ಸರಸ್ವತೀದೇವಿಯು ನಾರಾಯಣನೊಡನಿದ್ದಾಗ ಗಂಗೆಯೊಡನೆ ಕಲಹವಾಡಿ ಶಾಪ ಪಡೆದು ಭಾರತಭೂಮಿಯಲ್ಲಿ ನದಿಯಾಗಿ ಅವತರಿಸಿದಳು.

೨. ಪುಣ್ಯದಾತ್ರಿಯೂ, ಪುಣ್ಯಜನನಿಯೂ, ಪುಣ್ಯತೀರ್ಥಸ್ವರೂಪಿಣಿಯೂ ಆದ ಆ ಸರಸ್ವತೀ ನದಿಯು ಪುಣ್ಯವಂತರ ಸೇವೆಗೆ ಯೋಗ್ಯಳೂ, ಸ್ಥಿತಿಗೆ ಕಾರಣಳೂ ಆದಳು.

ತಪಸ್ವಿನಾಂ ತಪೋರೂಪಾ ತಪಸ್ಯಾಕಾರರೂಪಿಣೀ ।
ಕೃತಪಾಪೇಧ್ಮದಾಹಾಯಜ್ವಲದಗ್ನಿಸ್ವರೂಪಿಣೀ ॥ ೩ ॥

ಜ್ಞಾನೇನ ಸರಸ್ವತೀ ತೋಯೇ ಗತಂ ಯೈರ್ಮಾನವೈರ್ಭುವಿ ।
ತೇಷಾಂ ಸ್ಥಿತಿಶ್ಚ ವೈಕುಂಠೇ ಸುಚಿರಂ ಹರಿಸಂಸದಿ ॥ ೪ ॥

ಭಾರತೇ ಕೃತಪಾಪಶ್ಚ ಸ್ನಾತ್ವಾ ತತ್ರೈವ ಲೀಲಯಾ ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕೇ ವಸೇಚ್ಚಿರಂ ॥ ೫ ॥

ಚತುರ್ದಶ್ಯಾಂ ಪೌರ್ಣಮಾಸ್ಯಾಮಕ್ಷಯಾಯಾಂ ದಿನಕ್ಷಯೇ ।
ಗ್ರಹಣೇ ಚ ವ್ಯತೀಪಾತೇಽನ್ಯಸ್ಮಿನ್ಪುಣ್ಯದಿನೇಽಪಿ ಚ ॥ ೬ ॥

ಅನುಷಂಗೇಣ ಯಃ ಸ್ನಾತಿ ಹೇಲಯಾ ಶ್ರದ್ಧಯಾಪಿ ವಾ ।
ಸಾರೂಪ್ಯಂ ಲಭತೇ ನೂನಂ ವೈಕುಂಠೇ ಸ ಹರೇರಪಿ ॥ ೭ ॥

---

೩. ತಪಸ್ವಿಗಳಿಗೆಲ್ಲಾ ತಪೋರೂಪಳೂ, ತಪಸ್ಯಾಕಾರಳೂ ಆದ ಅವಳು ಮನುಜಕೃತವಾದ ಪಾಪವೆಂಬ ಕಟ್ಟಿಗೆಯನ್ನು ಸುಟ್ಟು ಭಸ್ಮಮಾಡುವ ಅಗ್ನಿಯಂತಾದಳು.

೪. ಭೂಲೋಕದಲ್ಲಿರುವ ಮಾನವರು ಸರಸ್ವತೀ ಜಲದಲ್ಲಿ ಮಿಂದು ಜ್ಞಾನ ಪಡೆದು, ಬಹಳ ಕಾಲ ವೈಕುಂಠದ ಹರಿಯ ಸಭೆಯಲ್ಲಿ ನೆಲೆಸಿರುವರು.

೫. ಭರತಖಂಡದಲ್ಲಿರುವ ಯಾವ ಪಾಪಿಯು ಆ ಸರಸ್ವತೀ ಜಲದಲ್ಲಿ ಮಿಂದು ಮಡಿಯುಟ್ಟರೂ ಕೂಡ ಅವನು ಸಕಲ ಪಾಪ ನಿರ್ಮುಕ್ತನಾಗಿ ವೈಕುಂಠಕ್ಕೆ ತೆರಳಿ ಚಿರಕಾಲ ಅಲ್ಲಿ ನೆಲಸಿರುವನು.

೬–೭. ಚತುರ್ದಶಿ ಮತ್ತು ಪೌರ್ಣಿಮಾದಿವಸಗಳಲ್ಲಾಗಲೀ, ಅಕ್ಷಯಾ ಮಾವಾಸ್ಯೆಯಲ್ಲಾಗಲೀ, ಸಾಯಂಕಾಲದ ಸಮಯದಲ್ಲಾಗಲೀ, ಗ್ರಹಣ ಮತ್ತು ವ್ಯತೀಪಾತಕಾಲಗಳಲ್ಲಾಗಲೀ, ಅಂತೆಯೇ ಮತ್ತೆ ಬೇರೆ ಪುಣ್ಯದಿವಸಗಳಲ್ಲಾಗಲೀ, ಸರಸ್ವತೀನದಿಯಲ್ಲಿ ಅನಿರೀಕ್ಷಿತವಾಗಿಯೋ ಉದ್ದೇಶಪೂರ್ವಕವಾಗಿಯೋ ಸ್ನಾನ ಮಾಡಿದರೂ ಅವನು ವೈಕುಂಠದಲ್ಲಿ ಹರಿಯ ಸಾರೂಪ್ಯವನ್ನು ಪಡೆಯುವನು.

ಸರಸ್ವತೀ ಮಂತ್ರಕಂ ಚ ಮಾಸಮೇಕಂ ತು ಯೋ ಜಪೇತ್ ।
ಮಹಾಮೂರ್ಖಃ ಕವೀಂದ್ರಶ್ಚ ಸ ಭವೇನ್ನಾತ್ರ ಸಂಶಯಃ ॥ ೮ ॥

ನಿತ್ಯಂ ಸರಸ್ವತೀತೋಯೇ ಯಃ ಸ್ನಾತ್ವಾ ಮುಂಡಯೇನ್ನರಃ ।
ನ ಗರ್ಭವಾಸಂ ಕುರುತೇ ಪುನರೇವ ಸ ಮಾನವಃ ॥ ೯ ॥

ಇತ್ಯೇವಂ ಕಥಿತಂ ಕಿಂಚಿದ್ಭಾರತೀಗುಣಕೀರ್ತನಂ ।
ಸುಖದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೦ ॥

॥ ಸೌತಿರುವಾಚ ॥

ನಾರಾಯಣವಚಃ ಶ್ರುತ್ವಾ ನಾರದೋ ಮುನಿಸತ್ತಮಃ ।
ಪುನಃ ಪಪ್ರಚ್ಛ ಸಂದೇಹಚ್ಛೇದಂ ಶೌನಕ ಸತ್ವರಂ ॥ ೧೧ ॥

॥ ನಾರದ ಉವಾಚ ॥

ಕಥಂ ಸರಸ್ವತೀ ದೇವೀ ಗಂಗಾಶಾಪೇನ ಭಾರತೇ ।
ಕಲಯಾ ಕಲಹೇನೈವ ಸಮಭೂತ್ಪುಣ್ಯದಾ ಸರಿತ್ ॥ ೧೨ ॥

---

೮. ಸರಸ್ವತೀ ಮಂತ್ರವನ್ನು ಒಂದು ತಿಂಗಳು ಮಾತ್ರ ಜಪಿಸುವುದರಿಂದ ಮಹಾಮೂರ್ಖನೂ, ಕವಿಶ್ರೇಷ್ಠನಾಗುವುದರಲ್ಲಿ ಸಂದೇಹವಿಲ್ಲ.

೯. ಯಾವ ಮನುಜನು ಪ್ರತಿದಿನವೂ ಸರಸ್ವತೀಜಲದಲ್ಲಿ ಸ್ನಾನಮಾಡಿ, ಮುಂಡನ ಮಾಡಿಸಿಕೊಳ್ಳುವನೋ, ಆ ಮನುಜನಿಗೆ ಮಾತೃಗರ್ಭವಾಸವಾಗಲೀ, ಪುನರ್ಜನನವಾಗಲೀ ಇರುವುದಿಲ್ಲ.

೧೦. ಸುಖಕರವೂ, ಮೋಕ್ಷದಾಯಕವೂ, ಸಾರಭೂತವೂ ಆದ ಭಾರತಿಯ ಗುಣಕೀರ್ತನೆಯನ್ನು ನಾನು ತಿಳಿದಷ್ಟು ವಿವರಿಸಿದುದಾಯಿತು. ನಿನಗೆ ಇನ್ನೇನು ಕೇಳಬೇಕೆಂಬ ಉದ್ದೇಶವಿದೆ.

೧೧. ಸೂತಪುತ್ರ :—ಎಲೈ ಶೌನಕಮಹರ್ಷಿಯೇ, ನಾರಾಯಣಮಹರ್ಷಿಯ ಈ ವಾಕ್ಯವನ್ನು ಕೇಳಿದ ಮುನಿಶ್ರೇಷ್ಠನಾದ ನಾರದನು ಕೂಡಲೇ ಈ ಮುಂದಿನ ಪ್ರಶ್ನೆಗಳನ್ನು ಕೇಳಿದನು.

೧೨. ನಾರದ :—ಸರಸ್ವತೀದೇವಿಯು ಗಂಗೆಯೊಡನೆ ಕಲಹವಾಡಿ, ಶಾಪ ಹೊಂದಿ ತನ್ನದೊಂದು ಕಲೆಯಿಂದ ಪುಣ್ಯಕರವಾದ ನದೀರೂಪಳಾದದ್ದು ಹೇಗೆ?

ಶ್ರವಣೇ ಶ್ರುತಿಸಾರಾಣಾಂ ವರ್ಧತೇ ಕೌತುಕಂ ಮಮ ।
ಕಥಾಮೃತಾನಾಂ ನೋ ತೃಪ್ತಿಃ ಕೇನ ಶ್ರೇಯಸಿ ತೃಪ್ಯತೇ ॥ ೧೩ ॥

ಕಥಂ ಶಶಾಪ ಸಾ ಗಂಗಾ ಪೂಜಿತಾಂ ತಾಂ ಸರಸ್ವತೀ ।
ಶಾಂತಸತ್ವಸ್ವರೂಪಾ ಚ ಪುಣ್ಯದಾ ಸರ್ವದಾ ನೃಣಾಂ ॥ ೧೪ ॥

ತೇಜಸ್ವಿನ್ಯೋರ್ದ್ವಯೋರ್ವಾದಕಾರಣಂ ಶ್ರುತಿಸುಂದರಂ ।
ಸುದುರ್ಲಭಂ ಪುರಾಣೇಷು ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೫ ॥

॥ ನಾರಾಯಣ ಉವಾಚ ॥

ಶೃಣು ನಾರದ ವಕ್ಷ್ಯಾಮಿ ಕಥಾಮೇತಾಂ ಪುರಾತನೀಂ ।
ಯಸ್ಯಾಃ ಸ್ಮರಣಮಾತ್ರೇಣ ಸರ್ವಪಾಪಾತ್ಪ್ರಮುಚ್ಯತೇ ॥ ೧೬ ॥

೧೩. ಶ್ರವಣಾನಂದ ಜನಕವೂ, ಅಮೃತೋಪಮವೂ ಆದ ಈ ಕಥೆಯನ್ನು ಕೇಳಲು ನನಗೆ ಬಹಳ ಕುತೂಹಲವಿದೆ. ಅಲ್ಲದೆ ಎಷ್ಟು ಕೇಳಿದರೂ ತೃಪ್ತಿ ಸಾಲದು. ಶ್ರೇಯಸ್ಕರವಾದ ವಿಷಯವನ್ನು ಕೇಳುವುದರಲ್ಲಿ ಯಾರಿಗೆತಾನೆ ತೃಪ್ತಿಯುಂಟಾಗುವುದು?

೧೪. ಶಾಂತ ಮತ್ತು ಸತ್ವಸ್ವರೂಪಳೂ, ಸರ್ವರಿಂದ ಪೂಜಿತಳೂ ಆದ ಗಂಗೆಯು ಸರ್ವಪೂಜಿತಳಾದ ಆ ಸರಸ್ವತಿಯನ್ನು ಶಪಿಸಲು ಕಾರಣವೇನು?

೧೫. ತೇಜಸ್ವಿನಿಯರಾದ ಅವರಿಬ್ಬರಿಗೆ ಉಂಟಾಗಿರುವ ವಾದವಿವಾದವು ಬಹಳ ಶ್ರವಣಾನಂದಕರವಾಗಬಹುದು. ಉಳಿದ ಯಾವ ಪುರಾಣಗಳಲ್ಲೂ ದುರ್ಲಭವಾದ ಆ ಗಂಗಾ ಸರಸ್ವತಿಯರ ವಾಗ್ವಾದವನ್ನು ನನಗೆ ದಯವಿಟ್ಟು ವಿವರಿಸಬೇಕು.

೧೬. ನಾರಾಯಣ:—ಎಲೈ ನಾರದನೇ! ಬಹಳ ಪುರಾತನವಾದ ಈ ಕಥೆಯನ್ನು ಸಾವಧಾನದಿಂದ ಕೇಳು. ಈ ಕಥೆಯನ್ನು ಸ್ಮರಿಸಿಕೊಂಡಮಾತ್ರದಿಂದಲೇ ಸಮಸ್ತ ಪಾಪವೂ ಪರಿಹಾರವಾಗುವುದು.

ಲಕ್ಷ್ಮೀಸ್ಸರಸ್ವತೀಗಂಗಾ ತಿಸ್ರೋ ಭಾರ್ಯಾ ಹರೇರಪಿ ।
ಪ್ರೇಮ್ಣಾ ಸಮಾಸ್ತಾಸ್ತಿಷ್ಠಂತಿ ಸತತಂ ಹರಿಸನ್ನಿಧೌ　　|| ೧೭ ||

ಚಕಾರ ಸೈಕದಾ ಗಂಗಾ ವಿಷ್ಣೋರ್ಮುಖನಿರೀಕ್ಷಣಂ ।
ಸಸ್ಮಿತಾ ಚ ಸಕಾಮಾ ಚ ಸಕಟಾಕ್ಷಂ ಪುನಃ ಪುನಃ　　|| ೧೮ ||

ವಿಭುರ್ಜಹಾಸ ತದ್ವಕ್ತ್ರಂ ನಿರೀಕ್ಷ್ಯ ಚ ಮುದಾ ಕ್ಷಣಂ ।
ಕ್ಷಮಾಂ ಚಕಾರ ತದ್ದೃಷ್ಟ್ವಾ ಲಕ್ಷ್ಮೀರ್ನೈವ ಸರಸ್ವತೀ　　|| ೧೯ ||

ಬೋಧಯಾಮಾಸ ತಾಂ ಪದ್ಮಾ ಸತ್ವರೂಪಾ ಚ ಸಸ್ಮಿತಾ ।
ಕ್ರೋಧಾವಿಷ್ಟಾ ಚ ಸಾ ವಾಣೀ ನ ಚ ಶಾಂತಾ ಬಭೂವ ಹ　　|| ೨೦ ||

ಉವಾಚ ಗಂಗಾ ಭರ್ತಾರಂ ರಕ್ತಾಸ್ಯಾ ರಕ್ತಲೋಚನಾ ।
ಕಂಪಿತಾ ಕೋಪವೇಗೇನ ಶಶ್ವತ್ಪ್ರಸ್ಫುರಿತಾಧರಾ　　|| ೨೧ ||

---

೧೭. ಶ್ರೀಮನ್ನಾರಾಯಣನಿಗೆ ಲಕ್ಷ್ಮಿ, ಸರಸ್ವತಿ ಮತ್ತು ಗಂಗೆ ಎಂದು ಮೂವರು ಪತ್ನಿಯರು. ಈ ಮೂವರೂ ಅನ್ಯೋನ್ಯಪ್ರೇಮದಿಂದ ಹೊಂದಿಕೊಂಡು ಸರ್ವಕಾಲದಲ್ಲೂ ನಾರಾಯಣ ಸನ್ನಿದಾನದಲ್ಲಿಯೇ ಇರುತ್ತಿದ್ದರು.

೧೮. ಹೀಗಿರುವಾಗ ಒಮ್ಮೆ ಆ ಗಂಗಾದೇವಿಯು, ಕಾಮಾಸಕ್ತಳಾಗಿ, ಮುಗುಳುನಗೆ ನಗುತ್ತಾ ತನ್ನ ಕಟಾಕ್ಷವನ್ನು ನಾರಾಯಣನ ಮುಖದಕಡೆಗೆ ಬೀರಿದಳು.

೧೯. ನಾರಾಯಣನೂ ಕೂಡ ಅವಳ ಮುಖವನ್ನು ನೋಡಿ ಸಂತೋಷದಿಂದ ಕ್ಷಣಕಾಲ ತಾನೂ ನಕ್ಕನು. ಅದನ್ನು ನೋಡಿ ಲಕ್ಷಿಯು ಸಹಿಸಿಕೊಂಡರೂ ಸರಸ್ವತಿಯು ಸಹಿಸಲಿಲ್ಲ.

೨೦. ಸತ್ವಸ್ವರೂಪಳಾದ ಆ ಲಕ್ಷ್ಮಿಯು ನಸುನಗುತ್ತಾ ಸರಸ್ವತಿಗೆ ಎಷ್ಟೋ ಉಪದೇಶಮಾಡಿದಳು. ಆದರೂ ಕೋಪಪೂರಿತಳಾದ ಆವಾಣಿಯು ಎಂದಿಗೂ ಶಾಂತಳಾಗಲೇ ಇಲ್ಲ.

೨೧. ಸರಸ್ವತಿಯು ಕೋಪಭರದಿಂದ ನಡುಗುತ್ತಾ, ಕೆಳತುಟಿಯೂ ಕೋಪದಿಂದ ನಡಗುತ್ತಿರಲು, ಕಣ್ಣುಗಳೂ ಮತ್ತು ಮುಖವೂ ಕೆಂಪಾಗಿರಲು, ಗಂಗೆಯನ್ನೂ ಮತ್ತು ತನ್ನ ಪತಿಯನ್ನೂ ಕುರಿತು ಇಂತೆಂದಳು.

|| ಸರಸ್ವತ್ಯುವಾಚ ||

ಸರ್ವತ್ರ ಸಮತಾಬುದ್ಧಿಃ ಸದ್ಭರ್ತುಃ ಕಾಮಿನೀಃ ಪ್ರತಿ |
ಧರ್ಮಿಷ್ಠಸ್ಯ ವರಿಷ್ಠಸ್ಯ ವಿಪರೀತಾಖಿಲಸ್ಯ ಚ || ೨೨ ||

ಜ್ಞಾತಂ ಸೌಭಾಗ್ಯಮಧಿಕಂ ಗಂಗಾಯಾಂ ತೇ ಗದಾಧರ |
ಕಮಲಾಯಾಂ ಚ ತತ್ತುಲ್ಯಂ ನ ಚ ಕಿಂಚಿನ್ಮಯಿ ಪ್ರಭೋ || ೨೩ ||

ಗಂಗಾಯಾಃ ಪದ್ಮಯಾ ಸಾರ್ಧಂ ಪ್ರೀತಿಶ್ಚಾಪಿ ಸುಸಮ್ಮತಾ |
ಕ್ಷಮಾಂ ಚಕಾರ ತೇನೇದಂ ವಿಪರೀತಂ ಹರಿಪ್ರಿಯಾ || ೨೪ ||

ಕಿಂ ಜೀವನೇನ ಮೇsತ್ರೈವ ದುರ್ಭಗಾಯಾಶ್ಚ ಸಾಂಪ್ರತಂ |
ನಿಷ್ಫಲಂ ಜೀವನಂ ತಸ್ಯಾ ಯಾ ಪತ್ಯುಃ ಪ್ರೇಮವಂಚಿತಾ || ೨೫ ||

---

೨೨. ಎಲೈ ನಾರಾಯಣನೇ, ಪತಿಯು, ಧರ್ಮಿಷ್ಠನೂ, ಶ್ರೇಷ್ಠನೂ, ಒಳ್ಳೆಯವನೂ ಆದರೇ ತನ್ನ ಪತ್ನಿಯರೆಲ್ಲರಲ್ಲಿಯೂ ಒಂದೇ ಸಮನಾದ ಪ್ರೀತಿಯನ್ನಿಟ್ಟಿರುವನು. ಪತಿಯು ದುಷ್ಟನಾದರೆ ಪತ್ನಿಯರಲ್ಲಿ ಪರಸ್ಪರ ವೈಷಮ್ಯವನ್ನು ತೋರಿಸುವನು.

೨೩. ಎಲೈ ಗದಾಪಾಣಿಯಾದ ನಾರಾಯಣನೇ! ನಿನ್ನ ಪ್ರೇಮವು ಗಂಗೆಯಲ್ಲಿ ಅಧಿಕವಾಗಿಯೂ, ಲಕ್ಷ್ಮಿಯಲ್ಲಿ ಅದಕ್ಕೆ ಸಮನಾಗಿಯೂ ಇದ್ದು, ನನ್ನಲ್ಲಿ ಸ್ವಲ್ಪವೂ ಇಲ್ಲವೆಂಬುದು ಈಗ ವ್ಯಕ್ತವಾಯಿತು.

೨೪. ಆದುದರಿಂದಲೇ ಗಂಗೆಗೂ ಮತ್ತು ಲಕ್ಷ್ಮಿಗೂ ಅನ್ಯೋನ್ಯಪ್ರೀತಿಯುಂಟಾಗಿ, ಗಂಗೆಯು ಮಾಡಿದ ವಿಪರೀತಕಾರ್ಯವನ್ನು ಲಕ್ಷ್ಮಿಯು ಸಹಿಸಿಕೊಂಡಳು.

೨೫, ದುರದೃಷ್ಟಶಾಲಿನಿಯಾದ ನಾನು ಇಲ್ಲಿ ಇನ್ನು ಜೀವಿಸಿಪ್ರಯೋಜನವೇನು? ಪತಿಯಪ್ರೇಮಕ್ಕೆ ಪಾತ್ರಳಾಗದೆ ಪ್ರೇಮವಂಚಿತಳಾದವಳ ಜೀವನವು ನಿಷ್ಫಲವಲ್ಲವೆ?

ತ್ವಾಂ ಸರ್ವೇಶಂ ಸತ್ವರೂಪಂ ಯೇ ವದಂತಿ ಮನೀಷಿಣಃ ।
ತೇ ಚ ಮೂರ್ಖಾ ನ ವೇದಜ್ಞಾ ನ ಜಾನಂತಿ ಮತಿಂ ತವ　　॥ ೨೬ ॥

ಸರಸ್ವತೀವಚಃಶ್ರುತ್ವಾ ದೃಷ್ಟ್ವಾ ತಾಂ ಕೋಪಸಂಯುತಾಂ ।
ಮನಸಾ ತು ಸಮಾಲೋಚ್ಯ ಸ ಜಗಾಮ ಬಹಿಃ ಸಭಾಂ　　॥ ೨೭ ॥

ಗತೇ ನಾರಾಯಣೇ ಗಂಗಾಮವೋಚನ್ನಿರ್ಭಯಂ ರುಷಾ ।
ರಾಗಾಧಿಷ್ಠಾತೃದೇವೀ ಸಾ ವಾಕ್ಯಂ ಶ್ರವಣದುಃಸಹಂ　　॥ ೨೮ ॥

ಹೇ ನಿರ್ಲಜ್ಜೇ ಸಕಾಮೇ ತ್ವಂ ಸ್ವಾಮಿಗರ್ವಂ ಕರೋಷಿ ಕಿಂ ।
ಅಧಿಕಂ ಸ್ವಾಮಿಸೌಭಾಗ್ಯಂ ವಿಜ್ಞಾಪಯಿತುಮಿಚ್ಛಸಿ　　॥ ೨೯ ॥

---

೨೬. ನಿನ್ನನ್ನು ಸರ್ವೇಶ್ವರನೆಂದೂ, ಸತ್ವಸ್ವರೂಪನೆಂದೂ ಹೇಳುವವರೆಲ್ಲರೂ, ವೇದಜ್ಞಾನವಿಲ್ಲದ ಮೂರ್ಖರೇ ಹೊರತು ಪಂಡಿತರಲ್ಲ. ಅವರಿಗೆ ನಿನ್ನ ವಕ್ರಬುದ್ಧಿಯು ಹೇಗೆ ಗೊತ್ತು?

೨೭. ಸರಸ್ವತಿಯ ಕಟುವಾಕ್ಯಗಳನ್ನು ಕೇಳಿ, ಕೋಪದಿಂದ ಕೆಂಪೇರಿದ ಅವಳ ಮುಖದ ಕಡೆಗೆ ನೋಡಿ ನಾರಾಯಣನು ಅಲ್ಲಿರುವುದು ಉಚಿತವಲ್ಲವೆಂದು ಮನಸ್ಸಿನಲ್ಲಿ ಯೋಚಿಸಿ ಸಭೆಯಿಂದ ಹೊರಕ್ಕೆ ಹೋದನು.

೨೮. ನಾರಾಯಣನು ಹೊರಟುಹೋಗಲು ವಾಗಧಿಷ್ಠಾತೃದೇವಿಯಾದ ಆ ಸರಸ್ವತಿಯು ಗಂಗೆಯನ್ನು ಕುರಿತು ಕರ್ಣಕಠೋರವಾದ ಕೆಲವು ನುಡಿಗಳನ್ನು ನಿರ್ಭಯಳಾಗಿ ಹೇಳಿದಳು.

೨೯. ಕಾಮಾತುರಳೂ, ನಿರ್ಲಜ್ಜಳೂ ಆದ ಎಲೌ ಗಂಗೆಯೇ! ಪತಿಪ್ರೇಮವು ನಿನ್ನಲ್ಲಿಯೇ ಹೆಚ್ಚಾಗಿರುವುದೆಂದು ಅಹಂಕಾರಪಡುವೆಯಲ್ಲವೆ? ನಿನಗೆ ಸ್ವಾಮಿಸೌಭಾಗ್ಯವು ಹೆಚ್ಚಾಗಿರುವುದೆಂಬುದನ್ನು ಪ್ರಕಟಿಸಲು ಬಯಸುತ್ತಿರುವೆ.

ಮಾನಹಾನಿಂ ಕರಿಷ್ಯಾಮಿ ತವಾದ್ಯ ಹರಿಸನ್ನಿಧೌ ।
ಕಿಂ ಕರಿಷ್ಯತಿ ತೇ ಕಾಂತೋ ಮಮ ವೈ ಕಾಂತವಲ್ಲಭೇ ॥ ೩೦ ॥

ಇತ್ಯೇವಮುಕ್ತ್ವಾ ಗಂಗಾಯಾಃ ಜಿಘೃಕ್ಷುಂ ಕೇಶಮುದ್ಯತಾಂ ।
ವಾರಯಾಮಾಸ ತಾಂ ಪದ್ಮಾ ಮಧ್ಯದೇಶಸ್ಥಿತಾ ಸತೀ ॥ ೩೧ ॥

ಶಶಾಪ ವಾಣೀ ತಾಂ ಪದ್ಮಾಂ ಮಹಾಕೋಪವತೀ ಸತೀ ।
ವೃಕ್ಷರೂಪಾ ಸರಿದ್ರೂಪಾ ಭವಿಷ್ಯಸಿ ನ ಸಂಶಯಃ ॥ ೩೨ ॥

ವಿಪರೀತಂ ಯತೋ ದೃಷ್ಟ್ವಾ ಕಿಂಚಿನ್ನೋ ವಕ್ತುಮರ್ಹಸಿ ।
ಸಂತಿಷ್ಠಸಿ ಸಭಾಮಧ್ಯೇ ಯಥಾ ವೃಕ್ಷೋ ಯಥಾ ಸರಿತ್ ॥ ೩೩ ॥

ಶಾಪಂ ಶ್ರುತ್ವಾ ಚ ಸಾ ದೇವೀ ನ ಶಶಾಪ ಚುಕೋಪ ನ ।
ತತ್ರೈವ ದುಃಖಿತಾ ತಸ್ಥೌ ವಾಣೀಂ ಧೃತ್ವಾ ಕರೇಣ ಚ ॥ ೩೪ ॥

---

೩೦. ಪತಿಗೆ ಅತ್ಯಂತ ಪ್ರೇಮಪಾತ್ರಳೆಂದು ಬಗೆದಿರುವ ನಿನ್ನ ಮಾನವನ್ನು ಹರಿಯ (ನಿನ್ನ ಪತಿಯ) ಎದುರಿನಲ್ಲಿಯೇ ಈ ದಿವಸ ಭಂಗಗೊಳಿಸುವೆನು. ನಿನಗೆ ಕಾಂತನಾದ ಆ ಹರಿಯು ನನ್ನನ್ನು ಏನು ಮಾಡಿಯಾನು?

೩೧. ಹೀಗೆ ಹೇಳುತ್ತಾ ಗಂಗೆಯ ಕೂದಲುಗಳನ್ನು ಹಿಡಿದೆಳೆಯಬೇಕೆಂದು ಮುಂದುವರಿದ ಆ ಸರಸ್ವತಿಯನ್ನು ಲಕ್ಷ್ಮಿಯು ಮಧ್ಯೆ ಅಡ್ಡಲಾಗಿ ಬಂದು ತಡೆದಳು.

೩೨–೩೩. ಆಗ ಕುಪಿತಳಾದ ಸರಸ್ವತಿಯು, ಲಕ್ಷ್ಮಿಯನ್ನು ಕುರಿತು 'ಸಭಾಮಧ್ಯದಲ್ಲಿ ಗಂಗೆಯು ಇಷ್ಟು ವಿಪರೀತವನ್ನಾಚರಿಸಿದರೂ, ನೀನು ಚೇತನ ರಹಿತವಾದ ಮರ ಮತ್ತು ಹೊಳೆಗಳಂತೆ ಅಚಲವಾಗಿದ್ದುದರಿಂದ ನೀನು ಮರವಾಗಿಯೂ ಮತ್ತು ಹೊಳೆಯಾಗಿಯೂ ಜನಿಸು' ಎಂದು ಲಕ್ಷ್ಮಿಗೆ ಶಾಪವಿತ್ತಳು.

೩೪. ಸರಸ್ವತಿಯ ಶಾಪವಾಣಿಯನ್ನು ಕೇಳಿದ ಲಕ್ಷ್ಮಿಯು ಪ್ರತಿಶಾಪ ಕೊಡಲಿಲ್ಲ. ಕುಪಿತಳಾಗಲೂ ಇಲ್ಲ. ಸರಸ್ವತಿಯನ್ನು ತಡೆದು ಹಿಡಿದಿರುವಂತೆಯೇ ದುಃಖಿಸುತ್ತ ನಿಂತುಕೊಂಡಳು.

ಅತ್ಯುದ್ಧತಾಂ ಚ ತಾಂ ದೃಷ್ಟ್ವಾ ಕೋಪಪ್ರಸ್ಫುರಿತಾನನಾ ।
ಉವಾಚ ಗಂಗಾ ತಾಂ ದೇವೀರ ಪದ್ಮಾಂ ಪದ್ಮವಿಲೋಚನಾ ॥ ೩೫ ॥

॥ ಗಂಗೋವಾಚ ॥

ತ್ವಮುತ್ಸೃಜ ಮಹೋಗ್ರಾಂ ತಾಂ ಪದ್ಮೇ ಕಿಂ ಮೇ ಕರಿಷ್ಯತಿ ।
ವಾಗ್ದುಷ್ಟಾ ವಾಗಧಿಷ್ಠಾತ್ರೀ ದೇವೀಯಂ ಕಲಹಪ್ರಿಯಾ ॥ ೩೬ ॥

ಯಾವತೀ ಯೋಗ್ಯತಾಸ್ಯಾಶ್ಚ ಯಾವತೀ ಶಕ್ತಿರೇವ ವಾ ।
ತಥಾ ಕರೋತು ವಾದಂ ಚ ಮಯಾ ಸಾರ್ಧಂ ಸುದುರ್ಮುಖಾ ॥ ೩೭ ॥

ಸ್ವಬಲಂ ಯನ್ಮಮ ಬಲಂ ವಿಜ್ಞಾಪಯಿತುಮರ್ಹತು ।
ಜಾನಂತು ಸರ್ವೇಹ್ಯುಭಯೋಃ ಪ್ರಭಾವಂ ವಿಕ್ರಮಂ ಸತಿ ॥ ೩೮ ॥

---

೩೫. ಸರಸ್ವತಿಯು ಅತ್ಯುದ್ಧತಳಾಗಿ ಲಕ್ಷ್ಮಿಗೆ ಶಾಪಕೊಟ್ಟದ್ದನ್ನು ನೋಡಿ ಕುಪಿತಳಾದ ಗಂಗೆಯು (ಪದ್ಮವಿಲೋಚನಳಾದ) ಲಕ್ಷ್ಮಿಯನ್ನು ಕುರಿತು ಇಂತು ಸಮಾಧಾನಗೊಳಿಸಿದಳು.

೩೬. ಎಲೌ ಲಕ್ಷ್ಮೀದೇವಿಯೇ! ತಾನು ವಾಗಧಿಷ್ಠಾತೃದೇವಿಯೆಂಬ ದುರಹಂಕಾರದಿಂದ ದುಷ್ಟವಚನಗಳನ್ನಾಡುತ್ತಿರುವ, ಕಲಹಪ್ರಿಯಳೂ, ಅತಿ ಕ್ರೂರಳೂ ಆದ ಆ ಸರಸ್ವತಿಯನ್ನು ಬಿಟ್ಟು ಬಿಡು. ಆಕೆಯು ನನಗೆ ಏನು ಮಾಡಿಯಾಳು.

೩೭. ದುಷ್ಟವಚನಗಳನ್ನಾಡುವ ಆ ಸರಸ್ವತಿಯು ತನ್ನ ಯೋಗ್ಯತಾ ಶಕ್ತಿಗಳಿಗನುಗುಣವಾಗಿ ನನ್ನೊಡನೆ ವಾದಮಾಡಿ ಸಾಧ್ಯವಾದರೆ ನನ್ನನ್ನು ಗೆಲ್ಲಲಿ. ನೋಡೋಣ.

೩೮. ಅವಳ ಬಲವನ್ನೂ, ನನ್ನ ಬಲವನ್ನೂ ಪರೀಕ್ಷಿಸಬೇಕೆಂಬ ಬಯಕೆ ಅವಳಿಗೆ ಇರಬಹುದು. ನಮ್ಮಿಬ್ಬರ ಪ್ರಭಾವವನ್ನೂ, ಪರಾಕ್ರಮವನ್ನೂ ಎಲ್ಲರೂ ನೋಡಿ ತೀರ್ಮಾನಿಸಲಿ.

ಇತ್ಯೇವಮುಕ್ತ್ವಾ ಸಾ ದೇವೀ ವಾಣ್ಯೈ ಶಾಪಂ ದದಾವಿತಿ ।
ಸರಿತ್ಸ್ವರೂಪಾ ಭವತು ಸಾ ಯಾ ತ್ವಾಮಶಪದ್ರುಷಾ ॥ ೩೯ ॥

ಅಧೋ ಮರ್ತ್ಯಂ ಸಾ ಪ್ರಯಾತು ಸಂತಿ ಯತ್ರೈವ ಪಾಪಿನಃ ।
ಕಲೌ ತೇಷಾಂ ಚ ಪಾಪಾಂಶಂ ಲಭಿಷ್ಯತಿ ನ ಸಂಶಯಃ ॥ ೪೦ ॥

ಇತ್ಯೇವಂ ವಚನಂ ಶ್ರುತ್ವಾ ತಾಂ ಶಶಾಪ ಸರಸ್ವತೀ ।
ತ್ವಮೇವ ಯಾಸ್ಯಸಿ ಮಹೀಂ ಪಾಪಿಪಾಪಂ ಲಭಿಷ್ಯಸಿ ॥ ೪೧ ॥

ಏತಸ್ಮಿನ್ನಂತರೇ ತತ್ರ ಭಗವಾನಾಜಗಾಮ ಹ ।
ಚತುರ್ಭುಜಶ್ಚತುರ್ಭಿಶ್ಚ ಪಾರ್ಷದೈಶ್ಚ ಚತುರ್ಭುಜೈಃ ॥ ೪೨ ॥

ಸರಸ್ವತೀಂ ಕರೇ ಧೃತ್ವಾ ವಾಸಯಾಮಾಸ ವಕ್ಷಸಿ ।
ಬೋಧಯಾಮಾಸ ಸರ್ವಜ್ಞಃ ಸರ್ವಜ್ಞಾನಂ ಪುರಾತನಂ ॥ ೪೩ ॥

೩೯–೪೦. ಗಂಗೆಯು ಲಕ್ಷ್ಮೀದೇವಿಗೆ ಇಂತು ನುಡಿದು ಸರಸ್ವತಿಯನ್ನು ಕುರಿತು, ಲಕ್ಷ್ಮಿಯನ್ನು ಜಡವಾದ ನದಿಯಾಗೆಂದು ಶಪಿಸಿದ ನೀನೇ ನದಿಯಾಗಿ ಮರ್ತ್ಯಲೋಕದ ಕೆಳಗೆ ಪಾಪಿಗಳು ವಾಸಿಸುವ ಸ್ಥಳದಲ್ಲಿ ನೆಲೆಸಿ, ಕಲಿಯುಗದಲ್ಲಿ ಅವರ ಪಾಪಗಳಿಗೂ ಭಾಗಿಯಾಗುವೆ, ಎಂದಳು.

೪೧. ಈ ಶಾಪವನ್ನು ಕೇಳಿದ ಸರಸ್ವತಿಯೂ ಕೂಡ, ' ನೀನೂ ಭೂಲೋಕಕ್ಕೆ ಹೋಗಿ ಪಾಪಿಗಳ ಪಾಪವನ್ನು ಹೊಂದುವೆ ' ಎಂದು ಗಂಗೆಗೆ ಪ್ರತಿಶಾಪವಿತ್ತಳು.

೪೨–೪೩. ಇಷ್ಟು ಹೊತ್ತಿಗೆ ಚತುರ್ಭುಜನಾದ ನಾರಾಯಣನು ಚತುರ್ಭುಜರಾದ ನಾಲ್ವರು ಪಾರ್ಷದರೊಡಗೂಡಿ ಅಲ್ಲಿಗೆ ಬಂದು ಸರಸ್ವತಿಯನ್ನು ತನ್ನ ಕೈಯಲ್ಲಿ ಹಿಡಿದು ವಕ್ಷಃಸ್ಥಲದಲ್ಲಿಟ್ಟುಕೊಂಡು ಸರ್ವಜ್ಞನಾದ ಅವನು ಅವಳಿಗೆ ಪುರಾತನವಾದ ದಿವ್ಯಜ್ಞಾನವನ್ನು ಬೋಧಿಸಿದನು.

ಶ್ರುತ್ವಾ ರಹಸ್ಯಂ ತಾಸಾಂ ಚ ಶಾಪಸ್ಯ ಕಲಹಸ್ಯ ಚ ।
ಉವಾಚ ದುಃಖಿತಾಸ್ತಾಶ್ಚ ವಾಕ್ಯಂ ಸಾಮಯಿಕಂ ವಿಭುಃ ॥ ೪೪ ॥

॥ ಶ್ರೀ ಭಗವಾನುವಾಚ ॥

ಲಕ್ಷ್ಮಿ ತ್ವಂ ಕಲಯಾ ಗಚ್ಛ ಧರ್ಮಧ್ವಜಗೃಹಂ ಶುಭೇ ।
ಅಯೋನಿಸಂಭವಾ ಭೂಮೌ ತಸ್ಯ ಕನ್ಯಾ ಭವಿಷ್ಯಸಿ ॥ ೪೫ ॥

ತತ್ರೈವ ದೈವದೋಷೇಣ ವೃಕ್ಷತ್ವಂ ಚ ಲಭಿಷ್ಯಸಿ ।
ಮದಂಶಸ್ಯಾಸುರಸ್ಯೈವ ಶಂಖಚೂಡಸ್ಯ ಕಾಮಿನೀ ॥ ೪೬ ॥

ಭೂತ್ವಾ ಪಶ್ಚಾಚ್ಚ ಮತ್ಪತ್ನೀ ಭವಿಷ್ಯಸಿ ನ ಸಂಶಯಃ ।
ತ್ರೈಲೋಕ್ಯಪಾವನೀ ನಾಮ್ನಾ ತುಲಸೀತಿ ಚ ಭಾರತೇ ॥ ೪೭ ॥

---

೪೪. ಆ ದೇವಿಯರ ಅನ್ಯೋನ್ಯ ಕಲಹಕ್ಕೂ ಮತ್ತು ಶಾಪಕ್ಕೂ ಮೂಲ ಕಾರಣವನ್ನು ತಿಳಿದು ದುಃಖದಿಂದ ಕೂಡಿರುವ ಅವರನ್ನು ಕುರಿತು ಸಮಯೋಚಿತವಾದ ಕೆಲವು ನುಡಿಗಳನ್ನು ನಾರಾಯಣನು ಹೇಳಿದನು.

೪೫. ಭಗವಾನ್ :—ನಿಮಗೆ ಒದಗಿರುವ ಶಾಪವನ್ನು ನೀವು ಅನುಭವಿಸಿಯೇ ತೀರಬೇಕಾಗಿರುವುದರಿಂದ, ಎಲೌ, ಲಕ್ಷ್ಮಿಯೇ ! ನೀನು ನಿನ್ನ ಒಂದಂಶದಿಂದ ಭೂಲೋಕದಲ್ಲಿ ಅಯೋನಿಜೆಯಾಗಿ ಧರ್ಮಧ್ವಜನೆಂಬುವನಿಗೆ ಮಗಳೆನಿಸಿ ಕೊಳ್ಳುವೆ.

೪೬–೪೭. ಆ ಸಂದರ್ಭದಲ್ಲಿ ನಿನ್ನ ದುರ್ದೈವದಿಂದ ಮರವಾಗಿ ಜನಿಸುವೆ. ಅಲ್ಲದೆ ನನ್ನ ಅಂಶದಿಂದ ಜನಿಸುವ ಶಂಖಚೂಡನೆಂಬ ರಾಕ್ಷಸನ ಪತ್ನಿಯಾಗಿದ್ದು ಅನಂತರ ಪುನಃ ನನ್ನ ಪತ್ನಿಯಾಗುವೆ. ಭಾರತದಲ್ಲಿರುವಾಗ ನಿನಗೆ ಮೂರು ಲೋಕವನ್ನೂ ಪಾವನಗೊಳಿಸುವ ತುಲಸೀ ಎಂಬ ದಿವ್ಯನಾಮವುಂಟಾಗುವುದು.

ಕಲಯಾ ಚ ಸರಿದ್ಭೂತ್ವಾ ಶೀಘ್ರಂ ಗಚ್ಛ ವರಾನನೇ ।
ಭಾರತಂ ಭಾರತೀಶಾಪಾನ್ನಾಮ್ನಾ ಪದ್ಮಾವತೀ ಭವ ॥ ೪೮ ॥

ಗಂಗೇ ಯಾಸ್ಯಸಿ ಚಾಂಶೇನ ಪಶ್ಚಾತ್ತ್ವಂ ವಿಶ್ವಪಾವನೀ ।
ಭಾರತಂ ಭಾರತೀಶಾಪಾತ್ಪಾಪದಾಹಾಯ ದೇಹಿನಾಂ ॥ ೪೯ ॥

ಭಗೀರಥಸ್ಯ ತಪಸಾ ತೇನ ನೀತಾ ಸುದುಷ್ಕರಾತ್ ।
ನಾಮ್ನಾ ಭಾಗೀರಥೀ ಪೂತಾ ಭವಿಷ್ಯಸಿ ಮಹೀತಲೇ ॥ ೫೦ ॥

ಮದಂಶಸ್ಯ ಸಮುದ್ರಸ್ಯ ಜಾಯಾ ಜಾಯೇ ಮಮಾಜ್ಞಯಾ ।
ಮತ್ಕಲಾಂಶಸ್ಯ ಭೂಪಸ್ಯ ಶಂತನೋಶ್ಚ ಸುರೇಶ್ವರಿ ॥ ೫೧ ॥

ಗಂಗಾಶಾಪೇನ ಕಲಯಾ ಭಾರತಂ ಗಚ್ಛ ಭಾರತೀ ।
ಕಲಹಸ್ಯ ಫಲಂ ಭುಂಕ್ಷ್ವ ಸಪತ್ನೀಭ್ಯಾಂ ಸಹಾಚ್ಯುತೇ ॥ ೫೨ ॥

---

೪೮. ಅಲ್ಲದೆ, ಸರಸ್ವತಿಯ ಶಾಪದಂತೆ ನಿನ್ನ ಒಂದು ಕಲೆಯಿಂದ ಪದ್ಮಾವತೀ ಎಂಬ ನದಿಯಾಗಿಯೂ ಭಾರತದಲ್ಲಿ ಪ್ರವಹಿಸು.

೪೯. ಎಲೌ ಗಂಗೆಯೇ! ನೀನೂ ಕೂಡ ಸರಸ್ವತಿಯ ಶಾಪದಂತೆ ನಿನ್ನ ಒಂದಂಶದಿಂದ ಭರತಖಂಡದಲ್ಲಿ ನದಿಯಾಗಿ ಜನಿಸಿ ದೇಹಿಗಳ ಪಾಪನಾಶಕಳಾಗಿ ಲೋಕಪಾವನಿಯಾಗುವೆ.

೫೦. ಭಗೀರಥನ ಮಹತ್ತರವಾದ ತಪಸ್ಸಿನಿಂದ ನೀನು ಭೂಮಿಗೆ ಇಳಿದವಳಾಗಿ. ಭಾಗೀರಥೀ ಎಂಬ ಹೆಸರಿನಿಂದ ಅತ್ಯಂತ ಪವಿತ್ರಳಾಗುವೆ.

೫೧. ನನ್ನ ಅಪ್ಪಣೆಯಂತೆ ನನ್ನ ಅಂಶಜನಾದ ಸಮುದ್ರರಾಜನಿಗೂ, ನನ್ನ ಕಲಾಂಶದಿಂದ ಜನಿಸಿದ ಶಂತನು ರಾಜನಿಗೂ ಪತ್ನಿಯಾಗುವೆ.

೫೨. ಎಲೌ ಸರಸ್ವತಿಯೇ! ನೀನೂ ಕೂಡ ಗಂಗೆಯ ಶಾಪದಂತೆ ಭಾರತದಲ್ಲಿ ನದಿಯಾಗಿ ಹುಟ್ಟಿ ಸಪತ್ನಿಯರೊಡನೆ ಕಲಹಮಾಡಿದುದರ ಫಲವನ್ನು ಅವರೊಡನೆಯೇ ಅನುಭವಿಸಿಕೊಂಡಿರು.

ಸ್ವಯಂ ಚ ಬ್ರಹ್ಮಸದನಂ ಬ್ರಹ್ಮಣಃ ಕಾಮಿನೀ ಭವ ।
ಗಂಗಾ ಯಾತು ಶಿವಸ್ಥಾನಮತ್ರ ಪದ್ಮೈವ ತಿಷ್ಠತು ॥ ೫೩ ॥

ಶಾಂತಾ ಚ ಕ್ರೋಧರಹಿತಾ ಮದ್ಭಕ್ತಾ ಮತ್ಸ್ವರೂಪಿಣೀ ।
ಮಹಾಸಾಧ್ವೀ ಮಹಾಭಾಗಾ ಸುಶೀಲಾ ಧರ್ಮಚಾರಿಣೀ ॥ ೫೪ ॥

ಯದಂಶಕಲಯಾ ಸರ್ವಾ ಧರ್ಮಿಷ್ಠಾಶ್ಚ ಪತಿವ್ರತಾಃ ।
ಶಾಂತರೂಪಾಃ ಸುಶೀಲಾಶ್ಚ ಪ್ರತಿವಿಶ್ವೇಷು ಯೋಷಿತಃ ॥ ೫೫ ॥

ತಿಸ್ರೋ ಭಾರ್ಯಾಸ್ತ್ರಯಃ ಶಲಾಸ್ತ್ರಯೋ ಭೃತ್ಯಾಶ್ಚ ಬಾಂಧವಾಃ ।
ಧ್ರುವಂ ವೇದವಿರುದ್ಧಾಶ್ಚ ನ ಹ್ಯೇತೇ ಮಂಗಲಪ್ರದಾಃ ॥ ೫೬ ॥

ಸ್ತ್ರೀಪುಂವಚ್ಚ ಗೃಹೇ ಯೇಷಾಂ ಗೃಹಿಣಾಂ ಸ್ತ್ರೀವಶಃ ಪುಮಾನ್ ।
ನಿಷ್ಫಲಂ ಜನ್ಮ ವೈ ತೇಷಾಮಶುಭಂ ಚ ಪದೇ ಪದೇ ॥ ೫೭ ॥

---

೫೩. ಅಲ್ಲದೆ ನೀನು ಪೂರ್ಣಸ್ವರೂಪದಿಂದ ಬ್ರಹ್ಮಲೋಕದಲ್ಲಿ ಬ್ರಹ್ಮನ ರಾಣಿಯಾಗಿರು. ಗಂಗೆಯು ಪೂರ್ಣಾಂಶದಿಂದ ಶಿವಲೋಕಕ್ಕೆ ಹೋಗಿ ಶಿವನೊಡನಿರಲಿ. ಲಕ್ಷ್ಮಿಯು ಮಾತ್ರ ಇಲ್ಲಿಯೇ ಪೂರ್ಣಾಂಶದಿಂದಿರಲಿ.

೫೪. ಲಕ್ಷ್ಮಿದೇವಿಯು ಶಾಂತಳೂ, ಕ್ರೋಧರಹಿತಳೂ, ನನ್ನ ಭಕ್ತಳೂ, ಆತ್ಮಸ್ವರೂಪಿಣಿಯೂ ಆಗಿ ಮಹಾಪತಿವ್ರತೆಯೂ, ಸುಶೀಲೆಯೂ, ಧರ್ಮಚಾರಿಣಿಯೂ ಕೂಡ ಆಗಿದ್ದಾಳೆ.

೫೫. ಆ ಲಕ್ಷ್ಮಿದೇವಿಯ ಅಂಶ ಮತ್ತು ಕಲೆಯಿಂದಲೇ ಧರ್ಮಿಷ್ಠೆಯರೂ, ಪತಿವ್ರತೆಯರೂ, ಶಾಂತರೂ, ಸುಶೀಲೆಯರೂ ಆದ ಸ್ತ್ರೀಯರು ಲೋಕದಲ್ಲಿ ಜನಿಸುವರು.

೫೬. ಮೂವರು ಪತ್ನಿಯರು, ಮೂವರು ಭಾವಮೈದಂದಿರು, ಮೂವರು ಸೇವಕರೂ ಮತ್ತು ಮೂವರು ನೆಂಟರು ಇರುವುದು ವೇದವಿರುದ್ಧವಾದುದರಿಂದ ಮನುಜನಿಗೆ ಇವರು ಮಂಗಳದಾಯಕರಾಗುವುದಿಲ್ಲ.

೫೭. ಯಾವ ಗೃಹಸ್ಥರ ಸಂಸಾರದಲ್ಲಿ ಹೆಂಗಸು ಗಂಡಸಿನಂತಾಚರಿಸುವಳೋ ಮತ್ತು ಯಾವ ಗಂಡಸು ಹೆಂಗಸಿನ ಅಧೀನನಾಗಿರುವನೋ ಅಂಥವರ ಜನ್ಮವು ನಿಷ್ಫಲವಾಗಿ ಅವರಿಗೆ ಆಗಾಗ್ಗೆ ಅಶುಭವು ಒದಗುತ್ತಿರುವುದು.

ಮುಖದುಷ್ಟಾ ಯೋನಿದುಷ್ಟಾ ಯಸ್ಯ ಸ್ತ್ರೀ ಕಲಹಪ್ರಿಯಾ ।
ಅರಣ್ಯಂ ತೇನ ಗಂತವ್ಯಂ ಮಹಾರಣ್ಯಂ ಗೃಹಾದ್ವರಂ ॥ ೫೮ ॥

ಜನಾನಾಂ ಚ ಸ್ಥಲಾನಾಂ ಚ ಪುರಾಣಾಂ ಪ್ರಾಪ್ತಿರೇವ ಚ ।
ಸತತಂ ಸುಲಭಾ ತತ್ರ ನ ತೇಷಾಂ ತದ್ಗೃಹೇಽಪಿ ಚ ॥ ೫೯ ॥

ವರಮಗ್ನೌ ಸ್ಥಿತಿರ್ಹಿಂಸ್ರಜಂತೂನಾಂ ಸನ್ನಿಧೌ ಸುಖಂ ।
ತತೋಽಪಿ ದುಃಖಂ ಪುಂಸಾಂ ಚ ದುಷ್ಟಸ್ತ್ರೀಸನ್ನಿಧೌ ಧ್ರುವಂ ॥ ೬೦ ॥

ವ್ಯಾಧಿಜ್ವಾಲಾ ವಿಷಜ್ವಾಲಾ ವರಂ ಪುಂಸಾಂ ವರಾನನೇ ।
ದುಷ್ಟಸ್ತ್ರೀಣಾಂ ಮುಖಜ್ವಾಲಾ ಮರಣಾದತಿರಿಚ್ಯತೇ ॥ ೬೧ ॥

ಪುಂಸಶ್ಚ ಸ್ತ್ರೀಜಿತಸ್ಯೇಹ ಜೀವಿತಂ ನಿಷ್ಫಲಂ ಧ್ರುವಂ ।
ಯದಹ್ನಾ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ ೬೨ ॥

---

೫೮. ಯಾವನ ಪತ್ನಿಯು ಕಟುಮಾತುಗಳನ್ನಾಡುವವಳೂ, ದುರಾಚಾರಿಣಿಯೂ, ಕಲಹಪ್ರಿಯಳೂ ಆಗಿರುವಳೋ ಅಂಥ ಮನುಷ್ಯನಿಗೆ ಗೃಹವಾಸಕ್ಕಿಂತ ಅರಣ್ಯವಾಸವೇ ಮೇಲಾದುದರಿಂದ ಅವನು ಅರಣ್ಯಕ್ಕೆ ಹೋಗುವುದೊಳಿತು.

೫೯. ಅವರಿಗೆ ಅವಶ್ಯವಾದಷ್ಟು ನೀರೂ, ಸ್ಥಲವೂ, ಫಲಮೂಲಗಳೂ ಅರಣ್ಯದಲ್ಲಿ ಸುಲಭವಾಗಿ ಸಿಕ್ಕುವಂತೆ ಮನೆಯಲ್ಲಿ ದೊರೆಯುವುದಿಲ್ಲ.

೬೦. ಮನುಜನು ದುಷ್ಟಸ್ತ್ರೀಯೊಡನಿರುವುದಕ್ಕಿಂತ, ಅಗ್ನಿಪ್ರವೇಶಮಾಡುವುದಾಗಲಿ, ದುಷ್ಟಜಂತುಗಳೊಡನಾಡುವುದಾಗಲೀ, ಎಷ್ಟೋ ಉತ್ತಮವಾದುದು. ಅದಕ್ಕಿಂತ ದುಷ್ಟಸ್ತ್ರೀ ಸಹವಾಸವು ಬಹಳ ಕೆಟ್ಟದು.

೬೧. ಮನುಷ್ಯನು ರೋಗದ ಪೀಡೆಯನ್ನೂ, ವಿಷದ ಉರಿಯನ್ನೂ ಸಹಿಸಿಯಾನು. ಆದರೆ ದುಷ್ಟಸ್ತ್ರೀಯರ ಕಟುಮಾತಿನ ಉರಿಯನ್ನು ಸಹಿಸಲಾರನು. ಅದಕ್ಕಿಂತ ಸಾವೇ ಲೇಸು.

೬೨. ಹೆಂಗಸಿಗೆ ಅಧೀನನಾಗಿರುವ ಪುರುಷನ ಜೀವಿತವು ವ್ಯರ್ಥವಾದುದು. ಅವನು ಆಯಾಯ ದಿವಸಗಳಲ್ಲಿ ಮಾಡಿದ ಸತ್ಕರ್ಮಗಳ ಫಲಭಾಗಿಯಾಗುವುದಿಲ್ಲ.

ಸ ನಿಂದಿತೋಽತ್ರ ಸರ್ವತ್ರ ಪರತ್ರ ನರಕಂ ವ್ರಜೇತ್ ।
ಯಶಃ ಕೀರ್ತಿವಿಹೀನೋ ಯೋ ಜೀವನ್ನಪಿ ಮೃತೋ ಹಿ ಸಃ ॥ ೬೩ ॥

ಬಹ್ವೀನಾಂ ಚ ಸ ಪತ್ನೀನಾಂ ನೈಕತ್ರ ಶ್ರೇಯಸೀ ಸ್ಥಿತಿಃ ।
ಏಕಭಾರ್ಯಃ ಸುಖೀ ನೈವ ಬಹುಭಾರ್ಯಃ ಕದಾಚನ ॥ ೬೪ ॥

ಗಚ್ಛ ಗಂಗೇ ಶಿವಸ್ಥಾನಂ ಬ್ರಹ್ಮಸ್ಥಾನಂ ಸರಸ್ವತಿ ।
ಅತ್ರ ತಿಷ್ಠತು ಮದ್ಗೇಹೇ ಸುಶೀಲಾ ಕಮಲಾಲಯಾ ॥ ೬೫ ॥

ಸುಸಾಧ್ವೀ ಯಸ್ಯ ಪತ್ನೀ ಚ ಸುಶೀಲಾ ಚ ಪತಿವ್ರತಾ ।
ಇಹ ಸ್ವರ್ಗಸುಖಂ ತಸ್ಯ ಧರ್ಮಮೋಕ್ಷೌ ಪರತ್ರ ಚ ॥ ೬೬ ॥

ಪತಿವ್ರತಾ ಯಸ್ಯ ಪತ್ನೀ ಸ ಚ ಮುಕ್ತಃ ಶುಚಿಃ ಸುಖೀ ।
ಜೀವನ್ಮೃತೋಽಶುಚಿರ್ದುಃಖೀ ದುಃಶೀಲಾಪತಿರೇವ ಯಃ ॥ ೬೭ ॥

---

೬೩. ಸ್ತ್ರೀಯರಿಗೆ ಅಧೀನನಾದವನು ಇಹಲೋಕದಲ್ಲೆಲ್ಲಾ ನಿಂದಿತನಾಗಿ ಪರಲೋಕದಲ್ಲಿ ನರಕಯಾತನೆಯನ್ನು ಅನುಭವಿಸುವನು. ಇಹಲೋಕದಲ್ಲಿ ಸತ್ಕರ್ಮ ಮಾಡಿ ಯಶಃಕಾಯನಾಗದಿದ್ದವನು ಜೀವಿಸಿದ್ದರೂ ಸತ್ತಂತೆಯೇ.

೬೪. ಅನೇಕ ಸ್ತ್ರೀಯರು ಪರಸ್ಪರ ಸವತಿಯರಾಗಿ ಬಾಳುವುದು ಅಷ್ಟು ಶ್ರೇಯಸ್ಕರವಲ್ಲ. ಪತಿವ್ರತೆಯಾದ ಒಬ್ಬಳೇ ಹೆಂಡತಿಯುಳ್ಳವನು ಸುಖವಾಗಿರುವನೇ ಹೊರತು ಬಹುಪತ್ನಿಯರುಳ್ಳವನು ಎಂದೆಂದಿಗೂ ಸುಖಿಯಾಗುವುದಿಲ್ಲ.

೬೫. ಎಲೌ, ಗಂಗೆಯೇ! ನೀನು ಶಿವನ ಸಮೀಪಕ್ಕೆ ಹೋಗು, ಸರಸ್ವತಿಯು ಬ್ರಹ್ಮನೆಡೆಗೆ ಹೋಗಲಿ. ಸುಶೀಲಳೂ, ಕಮಲಾಲಯಳೂ ಆದ ಲಕ್ಷ್ಮಿಯು ನನ್ನ ಜೊತೆಯಲ್ಲಿಯೇ ಇರಲಿ.

೬೬. ಯಾವನ ಹೆಂಡತಿಯು ಒಳ್ಳೆಯ ನಡತೆಯುಳ್ಳವಳೂ, ಪತಿವ್ರತೆಯೂ ಆಗಿ ಪತಿಯ ಚಿತ್ತಾನುವೃತ್ತಿನಿಯಾಗಿರುವಳೋ ಆ ಮನುಷ್ಯನಿಗೆ ಇಹಲೋಕದಲ್ಲಿ ಸ್ವರ್ಗಸುಖವೂ, ಪರಲೋಕದಲ್ಲಿ ಧರ್ಮಮೋಕ್ಷಗಳೂ ಲಭಿಸುವುವು.

೬೭. ಪತಿವ್ರತೆಯ ಪತಿಯು ಶುಚಿಯಾಗಿ ಯಥೇಚ್ಛಸುಖಗಳನ್ನನುಭವಿಸಿ ಮೋಕ್ಷಹೊಂದುವನು. ದುರಾಚಾರವುಳ್ಳ ಸ್ತ್ರೀಗೆ ಪತಿಯಾದವನು ಅಶುಚಿಯೂ, ದುಃಖಭಾಗಿಯೂ ಆಗಿ ಬದುಕಿದ್ದರೂ ಸತ್ತಂತಿರುವನು.

ಇತ್ಯುಕ್ತ್ವಾ ಜಗತಾಂ ನಾಥೋ ವಿರರಾಮ ಚ ನಾರದ ।
ಅತ್ಯುಚ್ಚೈ ರುರುದುರ್ದೇವ್ಯಃ ಸಮಾಲಿಂಗ್ಯ ಪರಸ್ಪರಂ ॥ ೬೮ ॥

ತಾಶ್ಚ ಸರ್ವಾಃ ಸಮಾಲೋಚ್ಯ ಕ್ರಮೇಣೋಚುಃ ಸದೀಶ್ವರಂ ।
ಕಂಪಿತಾಃ ಸಾಶ್ರುನೇತ್ರಾಶ್ಚ ಶೋಕೇನ ಚ ಭಯೇನ ಚ ॥ ೬೯ ॥

॥ ಸರಸ್ವತ್ಯುವಾಚ ॥

ಪ್ರಾಯಶ್ಚಿತ್ತಂ ದೇಹಿ ನಾಥ ದುಷ್ಟಾಯಾಂ ಜನ್ಮಶೋಧಕಂ ।
ಸತ್ಸ್ವಾಮಿನಾ ಪರಿತ್ಯಕ್ತಾಃ ಕುತ್ರ ಜೀವಂತಿ ಕಾಃ ಸ್ತ್ರಿಯಃ ॥ ೭೦ ॥

ದೇಹತ್ಯಾಗಂ ಕರಿಷ್ಯಾಮಿ ಧ್ರುವಂ ಯೋಗೇನ ಭಾರತೇ ।
ಅತ್ಯುಚ್ಚತೋ ನಿಪತನಂ ಪ್ರಾಪ್ತುಮರ್ಹತಿ ನಿಶ್ಚಿತಂ ॥ ೭೧ ॥

---

೬೮. ಎಲೈ, ನಾರದನೇ! ಜಗತ್ಪತಿಯಾದ ಶ್ರೀಮನ್ನಾರಾಯಣನು ಇಂತು ನುಡಿದು ಸುಮ್ಮನಾಗಲು ಆ ಮೂವರು ದೇವಿಯರೂ ತಮ್ಮ ತಮ್ಮ ಶಾಪದ ದುಷ್ಪರಿಣಾಮಗಳನ್ನು ನೆನೆಸಿಕೊಂಡು ಅನ್ಯೋನ್ಯಾಲಿಂಗಿತರಾಗಿ ಗೋಳಾಡಲಾರಂಭಿಸಿದರು.

೬೯. ಅನಂತರ ಆ ದೇವಿಯರೆಲ್ಲರೂ ಭಯಕಂಪಿತರಾಗಿ ಕಣ್ಣಿನಲ್ಲಿ ದುಃಖಾಶ್ರುಗಳನ್ನು ಸುರಿಸುತ್ತಾ, ತಮ್ಮ ಪತಿದೇವನನ್ನು ಕುರಿತು ಕ್ರಮವಾಗಿ ಇಂತು ನುಡಿದರು.

೭೦. ಸರಸ್ವತಿ:—ಎಲೈ, ಪತಿದೇವನೇ! ದುಷ್ಟಳಾದ ನನ್ನ ಜನ್ಮವನ್ನು ಪರಿಶುದ್ಧಗೊಳಿಸುವ ಯಾವುದಾದರೂ ಪ್ರಾಯಶ್ಚಿತ್ತವನ್ನು ಅನುಗ್ರಹಿಸು. ಸುಗುಣನಾದ ತನ್ನ ಪತಿಯನ್ನು ಬಿಟ್ಟು ಯಾವ ಸ್ತ್ರೀಯರು ತಾನೆ ಎಲ್ಲಿ ಬದುಕುವರು.

೭೧. ಭಾರತಭೂಮಿಯಲ್ಲಿ ಯೋಗಾಭ್ಯಾಸಮಾಡಿ ನಾನು ನಿಯತವಾಗಿಯೂ ದೇಹತ್ಯಾಗಮಾಡುವೆನು. 'ಅತ್ಯುನ್ನತಿಃ ಪತನಹೇತುಃ' ಎಂಬಂತೆ ಬಹಳ ಉನ್ನತ ಪದವಿಯೇರಿದ ನಾವು ಪತನಹೊಂದಬೇಕಾದುದು ನಿಶ್ಚಿತವಾದುದು.

|| ಗಂಗೋವಾಚ ||

ಅಹಂ ಕೇನಾಪರಾಧೇನ ತ್ವಯಾ ತ್ಯಕ್ತಾ ಜಗತ್ಪತೇ ।
ದೇಹತ್ಯಾಗಂ ಕರಿಷ್ಯಾಮಿ ನಿರ್ದೋಷಾಯಾ ವಧಂ ಲಭ || ೭೨ ||

ನಿರ್ದೋಷಕಾಮಿನೀತ್ಯಾಗಂ ಕುರುತೇ ಯೋ ಜನೋ ಭವೇ ।
ಸ ಯಾತಿ ನರಕಂ ಕಲ್ಪಂ ಕಿಂ ತೇ ಸರ್ವೇಶ್ವರಸ್ಯ ವಾ || ೭೩ ||

|| ಲಕ್ಷ್ಮೀರುವಾಚ ||

ನಾಥ ಸತ್ವಸ್ವರೂಪಸ್ತ್ವಂ ಕೋಪಃ ಕಥಮಹೋ ತವ ।
ಪ್ರಸಾದಂ ಕುರು ಚಾಸ್ಮಭ್ಯಂ ಮದೀಶಸ್ಯ ಕ್ಷಮಾ ವರಾ || ೭೪ ||

ಭಾರತಂ ಭಾರತೀಶಾಪಾದ್ಯಾಸ್ಯಾಮಿ ಕಲಯಾ ಯದಿ ।
ಕತಿಕಾಲಂ ಸ್ಥಿತಿಸ್ತತ್ರ ಕದಾ ದ್ರಕ್ಷ್ಯಾಮಿ ತೇ ಪದಂ || ೭೫ ||

---

೭೨. ಗಂಗಾದೇವಿ:—ಎಲೈ, ಜಗತ್ಪತಿಯಾದ ನಾರಾಯಣನೇ! ನಿರ್ದೋಷಳಾದ ನನ್ನನ್ನು ಅಕಾರಣವಾಗಿ ನೀನು ತ್ಯಜಿಸಿದುದರಿಂದ ನಾನು ದೇಹತ್ಯಾಗ ಮಾಡುವೆನು. ನಿರ್ದೋಷಳಾದ ಸ್ತ್ರೀಯನ್ನು ವಧೆಮಾಡಿದ ಪಾಪಕ್ಕೆ ನೀನು ಗುರಿಯಾಗುವೆ.

೭೩. ಪ್ರಪಂಚದಲ್ಲಿ ನಿರ್ದೋಷಳಾದ ಪತ್ನಿಯನ್ನು ತ್ಯಜಿಸುವನು ಸರ್ವೇಶ್ವರನಾದರೂ ಕಲ್ಪಕಾಲದವರೆಗೆ ಘೋರನರಕಕ್ಕೆ ಹೋಗಿ ನರಳುವನು.

೭೪. ಲಕ್ಷ್ಮೀದೇವಿ:—ಎಲೈ, ಪತಿದೇವನೇ! ಸತ್ವಸ್ವರೂಪನಾದ ನಿನಗೆ ಕೋಪಬರುವುದೆಂದರೇನು? ನಮ್ಮ ವಿಷಯದಲ್ಲಿ ಅನುಗ್ರಹಮಾಡಿ ಕ್ಷಮೆ ತೋರಿಸು. ನನ್ನ ಪತಿಯು ಕ್ಷಮಾಶೀಲನಾಗಿರಬೇಡವೇ?

೭೫. ಸರಸ್ವತಿಯ ಶಾಪದಂತೆ ನಾನು ಒಂದು ಕಲೆಯಿಂದ ಭರತಖಂಡದಲ್ಲಿ ಅವತರಿಸಬೇಕಾದರೆ ಅಲ್ಲಿ ಎಷ್ಟು ಕಾಲ ನಾನು ಜೀವಿಸಿಕೊಂಡಿದ್ದು ಯಾವಾಗ ನಿನ್ನ ಸಮೀಪವನ್ನು ಹೊಂದುವೆನು ಎಂಬುದನ್ನು ಹೇಳು.

ದಾಸ್ಯಂತಿ ಪಾಪಿನಃ ಪಾಪಂ ಮಹ್ಯಂ ಸ್ನಾನಾವಗಾಹನಾತ್ ।
ಕೇನ ತಸ್ಮಾದ್ವಿಮುಕ್ತಾಹಮಾಗಮಿಷ್ಯಾಮಿ ತೇ ಪದಂ ॥ ೭೬ ॥

ಕಲಯಾ ತುಲಸೀರೂಪಾ ಧರ್ಮಧ್ವಜಸುತಾ ಸತೀ ।
ಭೂತ್ವಾ ಕದಾ ಲಭಿಷ್ಯಾಮಿ ತ್ವತ್ಪಾದಾಂಬುಜಮಚ್ಯುತ ॥ ೭೭ ॥

ವೃಕ್ಷರೂಪಾ ಭವಿಷ್ಯಾಮಿ ತದಧಿಷ್ಠಾತೃದೇವತಾ ।
ಮಾಮುದ್ಧರಿಷ್ಯಸಿ ಕದಾ ತನ್ಮೇ ಬ್ರೂಹಿ ಕೃಪಾನಿಧೇ ॥ ೭೮ ॥

ಗಂಗಾ ಸರಸ್ವತೀಶಾಪಾದ್ಯದಿ ಯಾಸ್ಯತಿ ಭಾರತಂ ।
ಶಾಪೇನ ಮುಕ್ತಾ ಪಾಪಾಚ್ಚ ಕದಾ ತ್ವಾಂ ವಾ ಲಭಿಷ್ಯತಿ ॥ ೭೯ ॥

ಗಂಗಾಶಾಪೇನ ಸಾ ವಾಣೀ ಯದಿ ಯಾಸ್ಯತಿ ಭಾರತಂ ।
ಕದಾ ಶಾಪಾದ್ವಿನಿರ್ಮುಚ್ಯ ಲಭಿಷ್ಯಂತಿ ಪದಂ ತವ ॥ ೮೦ ॥

---

೭೬. ಪಾಪಿಗಳೆಲ್ಲರೂ ನನ್ನಲ್ಲಿ ಇಳಿದು ಸ್ನಾನಮಾಡಿ ತಮ್ಮ ಪಾಪವನ್ನು ನನಗೆ ಅಂಟಿಸಿಹೋಗುವರು. ಆ ಪಾಪಗಳೆಲ್ಲದರಿಂದ ನಾನು ಮುಕ್ತಳಾಗಿ ಪುನಃ ನಿನ್ನನ್ನು ನೋಡುವ ರೀತಿಯು ಯಾವುದು ?

೭೭ ಎಲೈ ಅಚ್ಯುತನೇ, ನನ್ನದೊಂದು ಕಲೆಯಿಂದ ಧರ್ಮಧ್ವಜನ ಮಗಳಾಗಿ ತುಳಸೀ ಎಂಬ ಹೆಸರಿನಿಂದಿದ್ದು ಪುನಃ ನಿನ್ನ ಚರಣಾರವಿಂದಗಳನ್ನು ಸೇರುವ ಬಗೆ ಹೇಗೆ ?

೭೮. ಅಲ್ಲದೆ ವೃಕ್ಷರೂಪಳೂ, ವೃಕ್ಷಾಧಿದೇವತೆಯೂ ಆದ ನನ್ನನ್ನು ದಯಾಳುವಾದ ನೀನು ಯಾವಾಗ ಉದ್ಧರಿಸುವೆಯೆಂಬುದನ್ನು ದಯವಿಟ್ಟು ನನಗೆ ತಿಳಿಸು.

೭೯. ಸರಸ್ವತಿಯ ಶಾಪದಿಂದ ಗಂಗೆಯು ಕೂಡ ಭರತಖಂಡದಲ್ಲಿ ಅವತರಿಸುವುದಾದರೆ ಶಾಪ ಮತ್ತು ಪಾಪಗಳಿಂದ ವಿಮುಕ್ತಳಾಗಿ ಅವಳು ನಿನ್ನನ್ನು ಸೇರುವುದು ಯಾವಾಗ ?

೮೦. ಅಂತೆಯೇ ಗಂಗೆಯ ಶಾಪದಿಂದ ಸರಸ್ವತಿಯೂ ಕೂಡ ಭರತಖಂಡದಲ್ಲಿ ಅವತರಿಸುವುದಾದರೆ ಎಂದು ಶಾಪವಿಮುಕ್ತಳಾಗಿ ನಿನ್ನ ಪಾದವನ್ನು ಸೇರುವಳು ?

ತಾಂ ವಾಣೀಂ ಬ್ರಹ್ಮಸದನಂ ಗಂಗಾಂ ವಾ ಶಿವಮಂದಿರಂ ।
ಗಂತುಂ ವದಸಿ ಹೇ ನಾಥ ತತ್ಕ್ಷಮಸ್ವ ಚ ತೇ ವಚಃ ॥ ೮೧ ॥

ಇತ್ಯುಕ್ತ್ವಾ ಕಮಲಾ ಕಾಂತಪದಂ ಧೃತ್ವಾ ನನಾಮ ಚ ।
ಸಕೇಶೈರ್ವೇಷ್ಟಯಿತ್ವಾ ಚ ರುರೋದ ಚ ಪುನಃ ಪುನಃ ॥ ೮೨ ॥

ಉವಾಚ ಪದ್ಮನಾಭಸ್ತಾಂ ಪ್ರಭಾಂ ಕೃತ್ವಾ ಸ್ವವಕ್ಷಸಿ ।
ಈಷದ್ಧಾಸಃ ಪ್ರಸನ್ನಾಸ್ಯೋ ಭಕ್ತಾನುಗ್ರಹಕಾರಕಃ ॥ ೮೩ ॥

॥ ನಾರಾಯಣ ಉವಾಚ ॥

ತ್ವದ್ವಾಕ್ಯಮಾಚರಿಷ್ಯಾಮಿ ಸ್ವವಾಕ್ಯಂ ಚ ಸುರೇಶ್ವರಿ ।
ಸಮತಾಂ ಚ ಕರಿಷ್ಯಾಮಿ ಶೃಣು ತತ್ಕ್ರಮಮೇವ ಚ ॥ ೮೪ ॥

---

೮೧. ಸರಸ್ವತಿಯನ್ನು ಬ್ರಹ್ಮನ ಮನೆಗೂ, ಗಂಗೆಯನ್ನು ಈಶ್ವರನ ಸಮೀಪಕ್ಕೂ ಹೋಗುವಂತೆ ಹೇಳಿದ ನೀನು ಅವರನ್ನು ಕ್ಷಮಿಸು.

೮೨. ಲಕ್ಷ್ಮಿಯು ಇಂತು ನುಡಿದು ತನ್ನ ಪತಿಯ ಪಾದಗಳನ್ನು ಹಿಡಿದು ನಮಸ್ಕರಿಸಿ ತನ್ನ ತಲೆಕೂದಲುಗಳನ್ನು ಅವನ ಪಾದಗಳಿಗೆ ಸುತ್ತಿ ಮತ್ತೆ ಮತ್ತೆ ಅಳಲಾರಂಭಿಸಿದಳು.

೮೩. ಭಕ್ತರಿಗೆ ಅನುಗ್ರಹದಾಯಕನಾದ ಪದ್ಮನಾಭನೂ ಕೂಡ ಆ ಪ್ರಭಾಸ್ವರೂಪಳಾದ ಲಕ್ಷ್ಮಿಯನ್ನು ತನ್ನೆದೆಗೆ ಅಪ್ಪಿಕೊಂಡು ಪ್ರಸನ್ನವದನನಾಗಿ ಇಂತು ನುಡಿದನು.

೮೪. ನಾರಾಯಣ :—ಎಲೌ ಸುರಶ್ರೇಷ್ಠಳಾದ ಲಕ್ಷ್ಮಿಯೇ, ನನ್ನ ಮಾತೂ, ನಿನ್ನ ಮಾತೂ ವ್ಯರ್ಥವಾಗದಂತೆ ಒಂದು ಸಾಮ್ಯತೆಯನ್ನು ಮಾಡುವೆನು ಅದರ ಕ್ರಮವನ್ನೀಗ ಹೇಳುವೆನು.

ಭಾರತೀ ಯಾತು ಕಲಯಾ ಸರಿದ್ರೂಪಾ ಚ ಭಾರತಂ ।
ಅರ್ಧಾಂಶಾ ಬ್ರಹ್ಮಸದನಂ ಸ್ವಯಂ ತಿಷ್ಠತು ಮದ್ಗೃಹೇ ॥ ೮೫ ॥

ಭಗೀರಥೇನ ನೀತಾ ಸಾ ಗಂಗಾ ಯಾಸ್ಯತಿ ಭಾರತಂ ।
ಪೂತಂ ಕರ್ತುಂ ತ್ರಿಭುವನಂ ಸ್ವಯಂ ತಿಷ್ಠತು ಮದ್ಗೃಹೇ ॥ ೮೬ ॥

ತತ್ರೈವ ಚಂದ್ರಮೌಲೇಶ್ಚ ಮೌಲಿಂ ಪ್ರಾಪ್ಸ್ಯತಿ ದುರ್ಲಭಂ ।
ತತಃ ಸ್ವಭಾವತಃ ಪೂತಾಪ್ಯತಿಪೂತಾ ಭವಿಷ್ಯತಿ ॥ ೮೭ ॥

ಕಲಾಂಶಾಂಶೇನ ಗಚ್ಛ ತ್ವಂ ಭಾರತೇ ಕಮಲೋದ್ಭವೇ ।
ಪದ್ಮಾವತೀ ಸರಿದ್ರೂಪಾ ತುಲಸೀ ವೃಕ್ಷರೂಪಿಣೀ ॥ ೮೮ ॥

ಕಲೇಃ ಪಂಚಸಹಸ್ರೇ ಚ ಗತೇ ವರ್ಷೇ ಚ ಮೋಕ್ಷಣಂ ।
ಯುಷ್ಮಾಕಂ ಸರಿತಾಂ ಭೂಯೋ ಮದ್ಗೃಹೇ ಚಾಗಮಿಷ್ಯಥ ॥ ೮೯ ॥

---

೮೫. ಸರಸ್ವತಿಯು ತನ್ನದೊಂದು ಕಲೆಯಿಂದ ಭಾರತದಲ್ಲಿ ನದೀರೂಪದಲ್ಲಿಯೂ, ಅರ್ಧಾಂಶದಿಂದ ಬ್ರಹ್ಮನ ಮಂದಿರದಲ್ಲಿಯೂ, ಇದ್ದು ನನ್ನೊಡನೆ ಯಾವಾಗಲೂ ಪರಿಪೂರ್ಣಸ್ವರೂಪಳಾಗಿಯೇ ಇರುವಳು.

೮೬. ಗಂಗೆಯೂ ಕೂಡ ಭಗೀರಥನ ಪ್ರಯತ್ನದಿಂದ ಭಾರತಕ್ಕೆ ಇಳಿದು ಹೋಗಿ ತ್ರಿಭುವನವನ್ನೂ ಪಾವನಗೊಳಿಸುವಳಾದರೂ, ತನ್ನ ಪೂರ್ಣಸ್ವರೂಪದಿಂದ ನನ್ನೊಡನೆಯೇ ಇರುವಳು.

೮೭. ಆ ಸಂದರ್ಭದಲ್ಲಿಯೇ ಚಂದ್ರಮೌಳಿಯಾದ ಪರಮೇಶ್ವರನ ಶಿರಸ್ಸಿನಲ್ಲಿ ತನಗೆ ಅವಕಾಶಪಡೆದು ಸ್ವಭಾವಪೂತಳಾದರೂ, ಅತ್ಯಂತ್ರ ಪವಿತ್ರಳೆನಿಸುವಳು.

೮೮. ಎಲೌ ಕಮಲದಿಂದುದ್ಭವಿಸದ ಲಕ್ಷ್ಮೀದೇವಿಯೇ, ನೀನೂ ಕೂಡ ನಿನ್ನದೊಂದು ಕಲೆಯಿಂದ ಪದ್ಮಾವತೀ ಎಂಬ ನದಿಯಾಗಿಯೂ, ಮತ್ತೊಂದಂಶದಿಂದ ತುಲಸೀ ಎಂಬ ವೃಕ್ಷರೂಪಳಾಗಿಯೂ ಅವತರಿಸು.

೮೯. ನದೀರೂಪವಾಗಿರುವ ನಿಮ್ಮೆಲ್ಲರಿಗೂ ಕಲಿಯುಗದಲ್ಲಿ ಐದು ಸಾವಿರ ವರ್ಷಗಳು ಕಳೆದ ನಂತರ ಶಾಪವಿಮೋಚನೆಯಾಗಿ ಪುನಃ ನೀವೆಲ್ಲರೂ ನನ್ನ ಮನೆಗೆ ಬರುವಿರಿ.

ಸಂಪದಾಂ ಹೇತುಭೂತಾ ಚ ವಿಪತ್ತಿಃ ಸರ್ವದೇಹಿನಾಂ ।
ವಿನಾ ವಿಪತ್ತೇರ್ಮಹಿಮಾ ಕೇಷಾಂ ಪದ್ಮೇ ಭವೇದ್ಧ್ರುವೇ ॥ ೯೦ ॥

ಮನ್ಮಂತ್ರೋಪಾಸಕಾನಾಂ ಚ ಸತಾಂ ಸ್ನಾನಾವಗಾಹನಾತ್ ।
ಯುಷ್ಮಾಕಂ ಮೋಕ್ಷಣಂ ಪಾಪಾತ್ಪಾಪಿಸ್ಪರ್ಶಸಹೇತುಕಾತ್ ॥ ೯೧ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಸಂತ್ಯಸಂಖ್ಯಾನಿ ಸುಂದರಿ ।
ಭವಿಷ್ಯಂತಿ ಚ ಪೂತಾನಿ ಮದ್ಭಕ್ತಸ್ಪರ್ಶದರ್ಶನಾತ್ ॥ ೯೨ ॥

ಮನ್ಮಂತ್ರೋಪಾಸಕಾ ಭಕ್ತಾ ಭ್ರಮಂತೇಭಾರತೇ ಸತಿ ।
ಪೂತಂ ಕರ್ತುಂ ಭಾರತಂ ಚ ಸುಪವಿತ್ರಾಂ ವಸುಂಧರಾಂ ॥ ೯೩ ॥

ಮದ್ಭಕ್ತಾ ಯತ್ರ ತಿಷ್ಠಂತಿ ಪಾದಂ ಪ್ರಕ್ಷಾಲಯಂತಿ ಚ ।
ತತ್ಸ್ಥಾನಂ ಚ ಮಹಾತೀರ್ಥಂ ಸುಪವಿತ್ರಂ ಭವೇದ್ಧ್ರುವಂ ॥ ೯೪ ॥

---

೯೦. ಸಂಸಾರದಲ್ಲಿರುವ ಯಾವಪ್ರಾಣಿಗಳೂ ವಿಪತ್ತನ್ನು ಹೊಂದದೆ ಮಹಿಮಾವಂತರಾಗಲಾರರು. ಸಮಸ್ತ ದೇಹಿಗಳಿಗೂ ಸಂಪತ್ತು ಒದಗಬೇಕಾದರೆ ವಿಪತ್ತೇ ಮೂಲಕಾರಣವು.

೯೧. ಪಾಪಿಗಳ ಸಂಪರ್ಕದಿಂದೊದಗಿದ ನಿಮ್ಮ ಪಾಪಗಳೆಲ್ಲವೂ ನದೀರೂಪ ರಾದ ನಿಮ್ಮಲ್ಲಿ ನಾರಾಯಣ ಮಂತ್ರೋಪಾಸಕರಾದ ಸತ್ಪುರುಷರ ಸ್ನಾನಾನುಷ್ಠಾನ ಗಳಿಂದ ಪರಿಹಾರವಾಗುವುದು.

೯೨. ಎಲೌ ಸುಂದರಾಂಗಿಯೇ, ಪ್ರಪಂಚದಲ್ಲಿರುವ ಅಸಂಖ್ಯತೀರ್ಥಗಳೆಲ್ಲವೂ ನನ್ನ ಭಕ್ತರ ದರ್ಶನಸ್ಪರ್ಶನಗಳಿಂದ ಪರಿಪೂತವಾಗುವುವು.

೯೩. ಎಲೌ, ಪತಿವ್ರತೆಯೇ, ನನ್ನ ಮಂತ್ರೋಪಾಸಕರಾದ ಭಕ್ತರು, ಭರತ ಖಂಡವನ್ನೂ ಅಷ್ಟೇಕೆ ಪವಿತ್ರವಾದ ಭೂಮಂಡಲವನ್ನೂ ಕೂಡ ಮತ್ತೊಮ್ಮೆ ಪವಿತ್ರಗೊಳಿಸಲು ಎಲ್ಲೆಲ್ಲೂ ತಿರುಗಾಡುತ್ತಿರುವರು.

೯೪. ನನ್ನ ಭಕ್ತರು ಕೂತು ನಿಂತ ಸ್ಥಳಗಳೂ ಮತ್ತು ಕಾಲುಗಳನ್ನು ತೊಳೆದುಕೊಂಡ ಸ್ಥಲವೂ ಕೂಡ ಮಹಾತೀರ್ಥವೆನಿಸಿಕೊಂಡು ಪವಿತ್ರತಮವಾಗು ವುದರಲ್ಲಿ ಸಂಶಯವಿಲ್ಲ.

ಸ್ತ್ರೀಘ್ನೋ ಗೋಘ್ನಃ ಕೃತಘ್ನಶ್ಚ ಬ್ರಹ್ಮಘ್ನೋ ಗುರುತಲ್ಪಗಃ ।
ಜೀವನ್ಮುಕ್ತೋ ಭವೇತ್ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೯೫ ॥

ಏಕಾದಶೀವಿಹೀನಾಶ್ಚ ಸಂಧ್ಯಾಹೀನೋಽಪಿ ನಾಸ್ತಿಕಃ ।
ನರಘಾತೀ ಭವೇತ್ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೯೬ ॥

ಅಸಿಜೀವೀ ಮಷೀಜೀವೀ ಧಾವಕಃ ಶೂದ್ರಯಾಜಕಃ ।
ವೃಷವಾಹೋ ಭವೇತ್ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೯೭ ॥

ವಿಶ್ವಾಸಘಾತೀ ಮಿತ್ರಘ್ನೋ ಮಿಥ್ಯಾಸಾಕ್ಷ್ಯಪ್ರದಾಯಕಃ ।
ನ್ಯಾಸಹಾರೀ ಭವೇತ್ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೯೮ ॥

ಋಣಗ್ರಸ್ತೋ ವಾರ್ಧುಷಿಕೋ ಜಾರಜಃ ಪುಂಶ್ಚಲೀಪತಿಃ ।
ಪೂತಶ್ಚ ಪುಂಶ್ಚಲೀಪುತ್ರೋ ಮದ್ಭಕ್ತಸ್ಪರ್ಶದರ್ಶನಾತ್ ॥ ೯೯ ॥

---

೯೫. ಸ್ತ್ರೀಹತ್ಯೆ ಮತ್ತು ಗೋಹತ್ಯೆಗಳನ್ನು ಮಾಡಿದವನೂ, ಉಪಕಾರ ಸ್ಮರಣೆಯಿಲ್ಲದವನೂ, ಬ್ರಹ್ಮಹತ್ಯೆ ಮತ್ತು ಗುರುದಾರಗಮನಮಾಡಿದವನೂ, ನನ್ನ ಭಕ್ತರದರ್ಶನ ಮತ್ತು ಸ್ಪರ್ಶನಗಳಿಂದ ಪೂತನಾಗಿ ಜೀವನ್ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

೯೬-೯೭. ಏಕಾದಶೀ ವ್ರತವನ್ನೂ, ಸಂಧ್ಯಾವಂದನಾದಿ ಕರ್ಮಗಳನ್ನೂ ಆಚರಿಸದವನೂ, ದೇವರಲ್ಲಿ ನಂಬಿಕೆಯಿಲ್ಲದವನೂ, ಮನುಷ್ಯರನ್ನು ಸಂಹರಿಸುವವನೂ, ಕತ್ತಿ ಮತ್ತು ಬರವಣಿಗೆಯಿಂದ ಜೀವಿಸುವವನೂ, ಅಗಸರವನೂ, ಶೂದ್ರನಿಂದ ಯಾಗಮಾಡಿಸುವವನೂ, ಎತ್ತಿನ ಮೇಲೆ ಸವಾರಿಮಾಡುವವನೂ, ನನ್ನ ಭಕ್ತರ ದರ್ಶನಸ್ಪರ್ಶನಗಳಿಂದ ಪಾಪವಿಮುಕ್ತನಾಗುವುದರಲ್ಲಿ ಸಂದೇಹವಿಲ್ಲ.

೯೮-೯೯. ನಂಬಿಸಿ ದ್ರೋಹಮಾಡುವವನೂ, ಮಿತ್ರಸಂಹಾರಕನೂ, ಸುಳ್ಳು ಸಾಕ್ಷ್ಯವನ್ನು ಹೇಳುವವನೂ, ಅಡವಿಟ್ಟಿದ್ದ ಪದಾರ್ಥವನ್ನು ಅಪಹರಿಸುವವನೂ, ಸಾಲಗಾರನೂ, ಹಣವನ್ನು ಸಾಲಕೊಟ್ಟು ಬಡ್ಡಿಯಿಂದ ಜೀವಿಸುವವನೂ, ಜಾರನಿಂದ ಹುಟ್ಟಿದವನೂ, ಪರಸ್ತ್ರೀಗಮನಮಾಡುವವನೂ, ಪರಪುರುಷನ ಸಹವಾಸ ಮಾಡುವವಳ ಪತಿಯೂ, ಅವಳ ಪುತ್ರನೂ ಕೂಡ ನನ್ನ ಭಕ್ತರ ದರ್ಶನಸ್ಪರ್ಶನಗಳಿಂದ ಪವಿತ್ರರಾಗುವರು.

ಶೂದ್ರಾಣಾಂ ಸೂಪಕಾರಶ್ಚ ದೇವಲೋ ಗ್ರಾಮಯಾಜಕಃ ।
ಅದೀಕ್ಷಿತೋ ಭವೇತ್ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೧೦೦ ॥

ಅಶ್ವತ್ಥಘಾತಕಶ್ಚೈವ ಮದ್ಭಕ್ತಾನಾಂ ಚ ನಿಂದಕಃ ।
ಅನಿವೇದಿತಭೋಜೀ ಚ ಪೂತೋ ಮದ್ಭಕ್ತದರ್ಶನಾತ್ ॥ ೧೦೧ ॥

ಮಾತರಂ ಪಿತರಂ ಭಾರ್ಯಾಂ ಭ್ರಾತರಂ ತನಯಂ ಸುತಾಂ ।
ಗುರೋಃ ಕುಲಂ ಚ ಭಗಿನೀಂ ವಂಶಹೀನಂ ಚ ಬಾಂಧವಂ ॥ ೧೦೨ ॥

ಶ್ವಶ್ರೂಂ ಚ ಶ್ವಶುರಂ ಚೈವ ಯೋ ನ ಪುಷ್ಣಾತಿ ನಾರದ ।
ಸ ಮಹಾಪಾತಕೀ ಪೂತೋ ಮದ್ಭಕ್ತಸ್ಪರ್ಶದರ್ಶನಾತ್ ॥ ೧೦೩ ॥

ದೇವದ್ರವ್ಯಾಪಹಾರೀ ಚ ವಿಪ್ರದ್ರವ್ಯಾಪಹಾರಕಃ ।
ಲಾಕ್ಷಾಲೋಹರಸಾನಾಂ ಚ ವಿಕ್ರೇತಾ ದುಹಿತುಸ್ತಥಾ ॥ ೧೦೪ ॥

---

೧೦೦. ಶೂದ್ರರ ಪರಿಚಾರಿಕೆ ಮಾಡುವವನೂ, ದೇವರ ಹಣದಿಂದ ಜೀವಿಸುವವನೂ, ಗ್ರಾಮಕ್ಕೆ ಪುರೋಹಿತನಾದವನೂ, ಮಂತ್ರಾದಿಗಳ ದೀಕ್ಷಾನಿಯಮವಿಲ್ಲದವನೂ, ನನ್ನ ಭಕ್ತರ ದರ್ಶನ ಸ್ಪರ್ಶನಗಳಿಂದ ಪವಿತ್ರನಾಗುವನು.

೧೦೧. ಅರಳೀಮರವನ್ನು ಕಡಿಯುವವನೂ, ನನ್ನ ಭಕ್ತರನ್ನು ನಿಂದಿಸುವವನೂ, ಪರಮಾತ್ಮನಿಗೆ ನಿವೇದಿಸದೆ ಆಹಾರವನ್ನು ಭುಜಿಸುವವನೂ ನನ್ನ ಭಕ್ತರ ದರ್ಶನಮಾತ್ರದಿಂದಲೇ ಪೂತನಾಗುವನು.

೧೦೨–೧೦೩. ಎಲೈ ನಾರದನೇ, ಯಾವ ಮನುಜನು ತನ್ನ ತಾಯಿತಂದೆಗಳನ್ನೂ, ಹೆಂಡತಿ ಮಕ್ಕಳನ್ನೂ, ಸಹೋದರಬಾಂಧವರನ್ನೂ ಗುರುಕುಲಸಂಭೂತರನ್ನೂ, ವಂಶಹೀನರಾದ ಸಹೋದರಿ ಮತ್ತು ಅತ್ತೆ ಮಾವಂದಿರನ್ನೂ ರಕ್ಷಣೆ ಮಾಡುವುದಿಲ್ಲವೋ ಆ ಮಹಾಪಾಪಿಯೂ ಕೂಡ ನನ್ನ ಭಕ್ತರ ಸ್ಪರ್ಶನದರ್ಶನಾದಿಗಳಿಂದ ಪವಿತ್ರನಾಗುವನು.

೧೦೪–೧೦೫. ದೇವಬ್ರಾಹ್ಮಣರ ದ್ರವ್ಯವನ್ನು ಅಪಹರಿಸುವವನೂ, ಅರಗು, ಲೋಹ, ಉಪ್ಪು, ಬೆಲ್ಲ ಮುಂತಾದ ರಸದ್ರವ್ಯಗಳನ್ನೂ, ಹೊಟ್ಟೆಯಲ್ಲಿ ಹುಟ್ಟಿದ

ಮಹಾಪಾತಕಿನಶ್ಚೈತೇ ಶೂದ್ರಾಣಾಂ ಶವದಾಹಕಾಃ ।
ಭವೇಯುರೇತೇ ಪೂತಾಶ್ಚ ಮದ್ಭಕ್ತಸ್ಪರ್ಶದರ್ಶನಾತ್ ॥ ೧೦೫ ॥

॥ ಲಕ್ಷ್ಮೀರುವಾಚ ॥

ಭಕ್ತಾನಾಂ ಲಕ್ಷಣಂ ಬ್ರೂಹಿ ಭಕ್ತಾನುಗ್ರಹಕಾರಕ ।
ಯೇಷಾಂ ಸಂದರ್ಶನಸ್ಪರ್ಶಾತ್ಸದ್ಯಃ ಪೂತಾ ನರಾಧಮಾಃ ॥ ೧೦೬ ॥

ಹರಿಭಕ್ತಿವಿಹೀನಾಶ್ಚ ಮಹಾಹಂಕಾರಸಂಯುತಾಃ ।
ಸ್ವಪ್ರಶಂಸಾರತಾ ಧೂರ್ತಾಃ ಶಠಾ ವೈ ಸಾಧುನಿಂದಕಾಃ ॥ ೧೦೭ ॥

ಪುನಂತಿ ಸರ್ವತೀರ್ಥಾನಿ ಯೇಷಾಂ ಸ್ನಾನಾವಗಾಹನಾತ್ ।
ಯೇಷಾಂ ಚ ಪಾದರಜಸಾ ಪೂತಾ ಪಾದೋದಕಾನ್ಮಹೀ ॥ ೧೦೮ ॥

ಮಗಳನ್ನೂ ಮಾರುವವನೂ, ಶೂದ್ರರಶವವನ್ನು ದಹನಮಾಡುವವನೂ ಮಹಾಪಾತಕಿಯೆನಿಸುವನು. ಇವರುಗಳೂ ಕೂಡ ನನ್ನ ಭಕ್ತರ ದರ್ಶನಸ್ಪರ್ಶನಗಳಿಂದ ಪೂತರಾಗುವರು.

೧೦೬. ಲಕ್ಷ್ಮೀದೇವಿ :—ಎಲೈ ಭಕ್ತಾನುಗ್ರಹದಾಕಯನಾದ ಶ್ರೀಮನ್ನಾರಾಯಣನೇ, ಯಾವ ನಿನ್ನ ಭಕ್ತರ ದರ್ಶನ ಮತ್ತು ಸ್ಪರ್ಶನಮಾತ್ರದಿಂದ ನೀಚ ಮನುಜರೆಲ್ಲರೂ ಪವಿತ್ರರಾಗುವರೋ, ಅಂಥ ಭಕ್ತರ ಲಕ್ಷಣವನ್ನು ನನಗೆ ವಿವರಿಸು.

೧೦೭. ಹರಿಭಕ್ತಿರಹಿತರಾಗಿ, ಮಹಾಹಂಕಾರಯುತರಾಗಿ ಆತ್ಮಪ್ರಶಂಸೆಯಲ್ಲೂ, ಸತ್ಪುರುಷರ ನಿಂದೆಯಲ್ಲೂ ರತರಾದವರೇ ಶಠರೆನಿಸಿಕೊಳ್ಳುವರು. ಇವರುಗಳೂ ಕೂಡ ಯಾವ ಭಕ್ತರ ದಿವ್ಯಸಂದರ್ಶನದಿಂದ ಪೂತರಾಗುವರು.

೧೦೮. ಯಾವ ವಿಷ್ಣುಭಕ್ತರ ಸ್ನಾನಮಾತ್ರದಿಂದ ಸಮಸ್ತ ತೀರ್ಥಗಳೂ ಪವಿತ್ರವಾಗುವುವೋ, ಯಾರ ಪಾದೋದಕದಿಂದಲೂ, ಪಾದಧೂಳಿಯಿಂದಲೂ ಭೂಮಂಡಲವು ಪವಿತ್ರವಾಗುವುದೋ ಅಂಥ ಭಕ್ತರ ಸ್ವರೂಪವನ್ನು ಹೇಳು.

ಯೇಷಾಂ ಸಂದರ್ಶನಂ ಸ್ಪರ್ಶಂ ದೇವಾ ವಾಂಛತಿ ಭಾರತೇ |
ಸರ್ವೇಷಾಂ ಪರಮೋ ಲಾಭೋ ವೈಷ್ಣವಾನಾಂ ಸಮಾಗಮಃ || ೧೦೯ ||

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯೋಃ |
ತೇ ಪುನಸ್ತ್ಯುರುಕಾಲೇನ ವಿಷ್ಣುಭಕ್ತಾಃ ಕ್ಷಣಾದಹೋ || ೧೧೦ ||

|| ಸೌತಿರುವಾಚ ||

ಮಹಾಲಕ್ಷ್ಮೀವಚಃ ಶ್ರುತ್ವಾ ಲಕ್ಷ್ಮೀಕಾಂತಶ್ಚ ಸಸ್ಮಿತಃ |
ನಿಗೂಢತತ್ವಂ ಕಥಿತುಮೃಷಿಶ್ರೇಷ್ಠೋಪಚಕ್ರಮೇ || ೧೧೧ ||

|| ಶ್ರೀ ನಾರಾಯಣ ಉವಾಚ ||

ಭಕ್ತಾನಾಂ ಲಕ್ಷಣಂ ಲಕ್ಷ್ಮಿ ಗೂಢಂ ಶ್ರುತಿಪುರಾಣಯೋಃ |
ಪುಣ್ಯಸ್ವರೂಪಂ ಪಾಪಘ್ನಂ ಸುಖದಂ ಭುಕ್ತಿಮುಕ್ತಿದಂ || ೧೧೨ ||

---

೧೦೯. ಯಾವ ಭಕ್ತರ ದರ್ಶನಸ್ಪರ್ಶನಗಳನ್ನು ದೇವತೆಗಳೂ ಬಯಸುವರೋ, ಭಾರತದಲ್ಲಿರುವ ಸಮಸ್ತರಿಗೂ ಯಾವ ವಿಷ್ಣುಭಕ್ತರ ಸಮಾಗಮವು ಅತ್ಯಂತ ಲಾಭದಾಯಕವಾದುದೋ ಅಂಥ ಭಕ್ತರ ಸ್ವರೂಪವನ್ನು ವಿವರಿಸು.

೧೧೦. ಜಲಮಯವಾದ ತೀರ್ಥಗಳೂ, ಮಣ್ಣು ಮತ್ತು ಕಲ್ಲಿನಿಂದ ಮಾಡಿದ ದೇವತಾಮೂರ್ತಿಗಳೂ, ಜನರನ್ನು ಬಹುಕಾಲದ ಮೇಲೆ ಪವಿತ್ರಗೊಳಿಸುವುದಾದರೆ ವಿಷ್ಣುಭಕ್ತರು ಕ್ಷಣಕಾಲದಲ್ಲಿಯೇ ಪವಿತ್ರಗೊಳಿಸುವರು.

೧೧೧. ಸೂತಪುತ್ರ:—ಮಹಾಲಕ್ಷ್ಮಿಯ ಮಾತುಗಳನ್ನು ಕೇಳಿದ ಶ್ರೀಮನ್ನಾರಾಯಣನು ಮಂದಹಾಸಯುತನಾಗಿ ಭಕ್ತರ ಲಕ್ಷಣಗಳನ್ನು ಹೇಳಲು ಉಪಕ್ರಮಿಸಿದನು.

೧೧೨-೧೧೩. ನಾರಾಯಣ:—ಎಲೌ ಲಕ್ಷ್ಮೀದೇವಿಯೇ, ವೇದಪುರಾಣಗಳಲ್ಲಿ ಗೂಢವಾಗಿ ಪಾಪಹಾರಕವೂ, ಪುಣ್ಯದಾಯಕವೂ, ಸುಖ, ಭುಕ್ತಿ ಮತ್ತು

ಸಾರಭೂತಂ ಗೋಪನೀಯಂ ನ ವಕ್ತವ್ಯಂ ಖಲೇಷು ಚ ।
ತ್ವಾಂ ಪವಿತ್ರಾಂ ಪ್ರಾಣತುಲ್ಯಾಂ ಕಥಯಾಮಿ ನಿಶಾಮಯ ॥ ೧೧೩ ॥

ಗುರುವಕ್ತ್ರಾದ್ವಿಷ್ಣುಮಂತ್ರೋ ಯಸ್ಯ ಕರ್ಣೇ ವಿಶೇದ್ನರಃ ।
ವದಂತಿ ವೇದವೇದಾಂಗಾಸ್ತಂ ಪವಿತ್ರಂ ನರೋತ್ತಮಂ ॥ ೧೧೪ ॥

ಪುರುಷಾಣಾಂ ಶತಂ ಪೂರ್ವಂ ಪೂತಂ ತಜ್ಜನ್ಮಮಾತ್ರತಃ ।
ಸ್ವರ್ಗಸ್ಥಂ ನರಕಸ್ಥಂ ವಾ ಮುಕ್ತಿಂ ಪ್ರಾಪ್ನೋತಿ ತತ್ಕ್ಷಣಾತ್ ॥ ೧೧೫ ॥

ಯೈಃ ಕೈಶ್ಚಿದ್ಯತ್ರ ವಾ ಜನ್ಮ ಲಬ್ಧಂ ಯೇಷು ಚ ಜಂತುಷು ।
ಜೀವನ್ಮುಕ್ತಾಸ್ತೇ ಚ ಪೂತಾ ಯಾಂತಿ ಕಾಲೇ ಹರೇಃ ಪದಂ ॥ ೧೧೬ ॥

ಮದ್ಭಕ್ತಿಯುಕ್ತೋ ಮತ್ಪೂಜಾನಿಯುಕ್ತೋ ಮದ್ಗುಣಾನ್ವಿತಃ ।
ಮದ್ಗುಣಶ್ಲಾಘನೀಯಶ್ಚ ಮನ್ನಿವಿಷ್ಟಶ್ಚ ಸಂತತಂ ॥ ೧೧೭ ॥

ಮುಕ್ತಿಪ್ರದವೂ ಎನಿಸಿ, ಅತ್ಯಂತ ಗೋಪ್ಯವೂ, ಸಾರಭೂತವೂ, ದುಷ್ಟರಿಗೆ ದುರ್ಲಭವೂ ಆದ, ಭಕ್ತರ ಲಕ್ಷಣವನ್ನು ಪವಿತ್ರಳೂ, ನನ್ನ ಪ್ರಾಣಸಮಳೂ ಆದ ನಿನಗೆ ವಿವರಿಸುವೆನು. ಕೇಳು.

೧೧೪. ಯಾರ ಕಿವಿಯಲ್ಲಿ ಗುರುಮುಖದಿಂದ ವಿಷ್ಣುಮಂತ್ರವು ಉಪದಿಷ್ಟವಾಗಿರುವುದೋ, ಆ ನರಶ್ರೇಷ್ಠನನ್ನು ಅತ್ಯಂತ ಪವಿತ್ರನೆಂದು ವೇದವೇದಾಂಗಗಳೆಲ್ಲವೂ ಉದ್ಘೋಷಿಸುವುವು.

೧೧೫. ಆ ಶ್ರೇಷ್ಠಪುರುಷನ ಜನ್ಮಮಾತ್ರದಿಂದಲೇ, ಅವನ ಹಿಂದಿನ ನೂರಾರು ಪುರುಷರು ಸ್ವರ್ಗದಲ್ಲಾಗಲೀ, ನರಕದಲ್ಲಾಗಲೀ ಎಲ್ಲಿದ್ದರೂ ಕೂಡಲೇ ಮುಕ್ತರಾಗುವರು.

೧೧೬. ಆ ನೂರಾರು ಜನರಲ್ಲಿ ಯಾರಾದರೂ ಯಾವ ನೀಚಜಂತುಗಳ ಜನ್ಮವನ್ನು ಹೊಂದಿದ್ದರೂ ಆ ಜನ್ಮದಲ್ಲೇ ಅವರು ಪವಿತ್ರರಾಗಿ ತನ್ನ ಅಂತ್ಯಕಾಲದಲ್ಲಿ ಹರಿಯ ಸ್ಥಾನವಾದ ವೈಕುಂಠಕ್ಕೆ ತೆರಳಿ ಜೀವನ್ಮುಕ್ತರಾಗುವರು.

೧೧೭. ಅವನು ನನ್ನಲ್ಲಿ ಭಕ್ತಿಯುಳ್ಳವನಾಗಿ ನನ್ನ ಪೂಜೆಯಲ್ಲಿ ಆಸಕ್ತನಾಗಿ ನನ್ನ ಗುಣಗಳನ್ನೇ ಹೊಂದಿದವನಾಗಿ ಸತತವೂ ನನ್ನಲ್ಲಿಯೇ ಆಸಕ್ತನಾಗಿರುವನು.

ಮದ್ಗುಣಶ್ರುತಿಮಾತ್ರೇಣ ಸಾನಂದಃ ಪುಲಕಾನ್ವಿತಃ ।
ಸಗದ್ಗದಃ ಸಾಶ್ರುನೇತ್ರಃ ಸ್ವಾತ್ಮವಿಸ್ಮೃತಿರೇವ ಚ　　॥ ೧೧೮ ॥

ನ ವಾಂಛಂತಿ ಸುಖಂ ಮುಕ್ತಿಂ ಸಾಲೋಕ್ಯಾದಿ ಚತುಷ್ಟಯಂ ।
ಬ್ರಹ್ಮತ್ವಮಮರತ್ವಂ ವಾ ತದ್ವಾಂಛಾ ಮಮ ಸೇವನೇ ।　　॥ ೧೧೯ ॥

ಇಂದ್ರತ್ವಂ ಚ ಮನುತ್ವಂ ಚ ದೇವತ್ವಂ ಚ ಸುದುರ್ಲಭಂ ।
ಸ್ವರ್ಗರಾಜ್ಯಾದಿಭೋಗಂ ಚ ಸ್ವಪ್ನೇಽಪಿ ನ ಹಿ ವಾಂಛತಿ　　॥ ೧೨೦ ॥

ಬ್ರಹ್ಮಾಂಡಾನಿ ವಿನಶ್ಯಂತಿ ದೇವಾ ಬ್ರಹ್ಮಾದಯಸ್ತಥಾ ।
ಕಲ್ಯಾಣಭಕ್ತಿಯುಕ್ತಶ್ಚ ಮದ್ಭಕ್ತೋ ನ ಪ್ರಣಶ್ಯತಿ　　॥ ೧೨೧ ॥

---

೧೧೮. ನನ್ನ ಗುಣಶ್ರವಣಮಾತ್ರದಿಂದ ಅವನಿಗೆ ಆನಂದೋದ್ರೇಕವಾಗಿ ರೋಮಾಂಚಿತಶರೀರನಾಗಿ ಗದ್ಗದಕಂಠದಿಂದ ಆನಂದಬಾಷ್ಪಗಳನ್ನು ಸುರಿಸುತ್ತ ತನ್ನನ್ನೇ ತಾನು ಮರೆತುಬಿಡುವನು.

೧೧೯. ನನ್ನ ಭಕ್ತರಿಗೆ ಸುಖದಲ್ಲಾಗಲೀ, ಮುಕ್ತಿಯಲ್ಲಾಗಲೀ, ಸಾಲೋಕ್ಯಾದಿಚತುಷ್ಟಯಗಳಲ್ಲಾಗಲೀ, ಬ್ರಹ್ಮತ್ವ ಮತ್ತು ದೇವತ್ವಗಳಲ್ಲಾಗಲೀ ಬಯಕೆ ಇರುವುದಿಲ್ಲ. ಯಾವಾಗಲೂ ನನ್ನ ಸೇವೆಯಲ್ಲಿಯೇ ಅವರು ಆಸಕ್ತರಾಗಿರುವರು.

೧೨೦. ಇಂದ್ರ ಮತ್ತು ಮನುಗಳ ಪದವಿಯನ್ನಾಗಲೀ, ದೇವತೆಗಳ ಪದವಿಯನ್ನಾಗಲೀ, ಸ್ವರ್ಗರಾಜ್ಯದ ಭೋಗಗಳನ್ನಾಗಲೀ ಸ್ವಪ್ನದಲ್ಲಿಯೂ ನನ್ನ ಭಕ್ತರು ಬಯಸುವುದಿಲ್ಲ.

೧೨೧. ಸಮಸ್ತ ಬ್ರಹ್ಮಾಂಡವೂ, ಬ್ರಹ್ಮಾದಿದೇವತೆಗಳೂ ಕೂಡ ಪ್ರಳಯದಲ್ಲಿ ನಾಶಹೊಂದುವರು. ಆದರೆ ನನ್ನಲ್ಲಿ ಅಚಲವಾದ ಭಕ್ತಿಯುಳ್ಳ ಭಕ್ತನು ಮಾತ್ರ ಎಂದೆಂದಿಗೂ ನಾಶವಾಗಲಾರನು.

ಭ್ರಮಂತಿ ಭಾರತೇ ಭಕ್ತಾ ಲಬ್ಧ್ವಾ ಜನ್ಮ ಸುದುರ್ಲಭಂ ।
ತೇಽಪಿ ಯಾಂತಿ ಮಹೀಂ ಪೂತಾಂ ಕೃತ್ವಾ ತೀರ್ಥಂ ಮಮಾಲಯಂ ॥೧೨೨॥

ಇತ್ಯೇತತ್ಕಥಿತಂ ಸರ್ವಂ ಕುರು ಪದ್ಮೇ ಯಥೋಚಿತಂ ।
ತದಾಜ್ಞಾಂ ತಾಶ್ಚ ತಾಶ್ಚಕ್ರುರ್ಹರಿಸ್ತಸ್ಥೌ ಸುಖಾಸನೇ ॥ ೧೨೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಪ್ರಕೃತಿಖಂಡೇ ದ್ವಿತೀಯೇ ನಾರದನಾರಾಯಣಸಂವಾದೇ ಸರಸ್ವತ್ಯುಪಾಖ್ಯಾನಂ ನಾಮ ಷಷ್ಠೋಽಧ್ಯಾಯಃ

---

೧೨೨. ಭರತಖಂಡದಲ್ಲಿ ದುರ್ಲಭವಾದ ಜನ್ಮವನ್ನು ಪಡೆದ ನನ್ನ ಭಕ್ತರೂ ಕೂಡ ಆ ಭೂಮಿಯನ್ನು ಪವಿತ್ರಗೊಳಿಸಿ ಪುಣ್ಯತೀರ್ಥವನ್ನು ಮಾಡಿ ನನ್ನ ಲೋಕಕ್ಕೆ ಹಿಂತಿರುಗಿ ಬರುವರು.

೧೨೩. ಎಲೌ ಲಕ್ಷ್ಮೀದೇವಿಯೇ, ನಿನ್ನ ಪ್ರಾರ್ಥನೆಯಂತೆ ಭಕ್ತರ ಲಕ್ಷಣವನ್ನೆಲ್ಲಾ ಹೇಳಿದುದಾಯಿತು. ಈಗ ನಿನಗಿಷ್ಟಬಂದಂತೆ ಮಾಡು' ಎಂದು ನಾರಾಯಣನು ಹೇಳಲು ಆ ಮೂವರೂ ಅವನ ಅಪ್ಪಣೆಯನ್ನು ಅನುಸರಿಸಿದರು. ನಾರಾಯಣನು ಮಾತ್ರ ಸುಖಾಸನದಲ್ಲಿ ಕುಳಿತಿದ್ದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದ ನಾರದನಾರಾಯಣ ಸಂವಾದದಲ್ಲಿ ಸರಸ್ವತ್ಯುಪಾಖ್ಯಾನರೂಪವಾದ ಆರನೆಯ ಅಧ್ಯಾಯವು ಮುಗಿದುದು.

ಆರನೆಯ ಅಧ್ಯಾಯದ ಸಾರಾಂಶವು

ಲಕ್ಷ್ಮಿ, ಸರಸ್ವತಿ ಮತ್ತು ಗಂಗೆಯರು ಶ್ರೀಮನ್ನಾರಾಯಣನ ಪತ್ನಿಯರಾಗಿ ಅನ್ಯೋನ್ಯ ಸೌಹಾರ್ದದಿಂದ ಕೆಲವು ಕಾಲವಿದ್ದರು. ಒಮ್ಮೆ ಗಂಗೆಯು ಲಕ್ಷ್ಮಿ ಮತ್ತು ಸರಸ್ವತಿಯರೆದುರಿನಲ್ಲಿಯೇ ನಾರಾಯಣನನ್ನು ಒಲಿಸಿಕೊಳ್ಳಲು ಕಟಾಕ್ಷವನ್ನು ಬೀರಿದಳು. ಆಗ ಸರಸ್ವತಿಯು ಕುಪಿತಳಾಗಿ, ಗಂಗೆಯು ಭೂಲೋಕದಲ್ಲಿ ನದಿಯಾಗಿ ಹುಟ್ಟುವಂತೆ ಶಪಿಸಿದಳು. ಗಂಗೆಯೂ ಕೂಡ ಸರಸ್ವತಿಯೂ ನದಿಯಾಗುವಂತೆ ಪ್ರತಿಶಾಪವಿತ್ತಳು. ಇವರಿಬ್ಬರ ಜಗಳವನ್ನೂ ಸಮಾಧಾನಗೊಳಿಸಲು ಬಂದ ಲಕ್ಷ್ಮಿಯೂ ಸರಸ್ವತಿಯ ಶಾಪಕ್ಕೆ ಗುರಿಯಾಗಿ ತುಳಸೀವೃಕ್ಷ ಮತ್ತು ಪದ್ಮಾವತೀ ನದಿಯಾಗಿ ಅವತರಿಸಬೇಕಾಯಿತು. ಅನ್ಯೋನ್ಯ ಕಲಹದಿಂದ ಮೂವರೂ ಶಾಪಗ್ರಸ್ತರಾಗಿ ನಾರಾಯಣನ ಸಮೀಪಕ್ಕೆ ಬಂದು ಶಾಪವಿಮೋಚನೆಗಾಗಿ ಕೇಳಿಕೊಳ್ಳಲು, ಅನುಭವಿಸಿದ ಹೊರತು ಆ ಶಾಪವಿಮೋಚನೆಯಾಗದೆಂದು ಶ್ರೀಮನ್ನಾರಾಯಣನು ಹೇಳಿ 'ನಿಮ್ಮ ನಿಮ್ಮ ಅಂಶದಿಂದ ನದೀರೂಪರಾಗಿ ನೀವು ಭಾರತದಲ್ಲಿದ್ದರೂ ಪೂರ್ಣಾಂಶದಿಂದ ನನ್ನೊಡನೆಯೇ ಇರುವಿರಿ. ಅಲ್ಲದೆ ಭರತ ಖಂಡದಲ್ಲಿಯೂ ಕಲಿಯುಗದಲ್ಲಿ ಐದುಸಾವಿರವರ್ಷಗಳು ಕಳೆಯುವವರೆಗಿದ್ದು ವಿಷ್ಣುಭಕ್ತರ ಸಂಪರ್ಕದಿಂದ ಪಾಪವಿಮುಕ್ತರಾಗಿ ಪುನಃ ನನ್ನನ್ನು ಬಂದು ಸೇರಿ ಸುಖವಾಗಿರುವಿರಿ' ಎಂದು ಹೇಳಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಸಪ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಪುಣ್ಯಕ್ಷೇತ್ರೇ ಹ್ಯಾಜಗಾಮ ಭಾರತೇ ಸಾ ಸರಸ್ವತೀ |
ಗಂಗಾಶಾಪೇನ ಕಲಯಾ ಸ್ವಯಂ ತಸ್ಥೌ ಹರೇಃ ಪದೇ || ೧ ||

ಭಾರತೀ ಭಾರತಂ ಗತ್ವಾ ಬ್ರಾಹ್ಮೀ ಚ ಬ್ರಹ್ಮಣಃ ಪ್ರಿಯಾ |
ವಾಗಧಿಷ್ಠಾತೃದೇವೀ ಸಾ ತೇನ ವಾಣೀ ಚ ಕೀರ್ತಿತಾ || ೨ ||

ಏಳನೆಯ ಅಧ್ಯಾಯವು

೧. ನಾರಾಯಣ ಋಷಿ :—ಸರಸ್ವತಿಯು ಗಂಗಾ ಶಾಪದಂತೆ ತನ್ನದೊಂದು ಕಲೆಯಿಂದ ಪುಣ್ಯಕ್ಷೇತ್ರವಾದ ಭಾರತದಲ್ಲಿ ನದೀರೂಪಳಾಗಿ ಅವತರಿಸಿದರೂ, ಪರಿಪೂರ್ಣತಮಳಾಗಿ ಶ್ರೀಮನ್ನಾರಾಯಣನ ಸಮೀಪದಲ್ಲಿಯೇ. ನೆಲೆಸಿದಳು.

೨. ಸರಸ್ವತಿಯು ಭರತಖಂಡದಲ್ಲಿ ನದೀರೂಪಳಾಗಿ ಅವತರಿಸಿದುದರಿಂದ ಭಾರತೀ ಎಂದೂ, ಬ್ರಹ್ಮನಿಗೆ ಪ್ರಿಯಳಾದುದರಿಂದ ಬ್ರಾಹ್ಮೀ ಎಂದೂ ಮಾತಿಗೆ ಆಶ್ರಯದೇವತೆಯಾದುದರಿಂದ ವಾಣಿ ಎಂದೂ ಪ್ರಸಿದ್ಧಳಾದಳು.

ಸರ್ವಂ ವಿಶ್ವಂ ಪರಿವ್ಯಾಪ್ಯ ಸ್ರೋತ್ರಸ್ಯೇವ ಹಿ ದೃಶ್ಯತೇ ।
ಹರಿಃ ಸರಸ್ಸು ತಸ್ಯೇಯಂ ತೇನ ನಾಮ್ನಾ ಸರಸ್ವತೀ ॥ ೩ ॥

ಸರಸ್ವತೀ ನದೀ ಸಾ ಚ ತೀರ್ಥರೂಪಾತಿಪಾವನೀ ।
ಪಾಪಿಪಾಪೇಧ್ಮದಾಹಾಯ ಜ್ವಲದಗ್ನಿಸ್ವರೂಪಿಣೀ ॥ ೪ ॥

ಪಶ್ಚಾದ್ಭಗೀರಥಾನೀತಾ ಮಹೀಂ ಭಾಗೀರಥೀ ಶುಭಾ ।
ಸಮಾಜಗಾಮ ಕಲಯಾ ವಾಣೀ ಶಾಪೇನ ನಾರದ ॥ ೫ ॥

ತತ್ರೈವ ಸಮಯೇ ತಾಂ ಚ ದಧಾರ ಶಿರಸಾ ಶಿವಃ ।
ವೇಗಂ ಸೋಢುಮಶಕ್ತಾಯಾ ಭುವಃ ಪ್ರಾರ್ಥನಯಾ ವಿಭುಃ ॥ ೬ ॥

---

೩. ಶ್ರೀಹರಿಯು ಸಕಲ ಸರೋವರಗಳಲ್ಲಿಯೂ ಪ್ರವಾಹರೂಪದಲ್ಲಿ ಸೇರಿಕೊಂಡು ನಿಖಿಲ ವಿಶ್ವವನ್ನೂ ವ್ಯಾಪಿಸಿಕೊಂಡಿರುವುದರಿಂದಲೂ, ಈಕೆಯು ಅವನ ಪತ್ನಿಯಾದುದರಿಂದಲೂ, ಈಕೆಯನ್ನು ಸರಸ್ವತೀ ಎನ್ನುವರು.

೪. ತೀರ್ಥರೂಪವೂ, ಪರಮಪವಿತ್ರವೂ ಆದ ಈ ಸರಸ್ವತೀನದಿಯು ಪಾಪಿಗಳ ಪಾಪವೆಂಬ ಕಟ್ಟಿಗೆಯನ್ನು ಸುಡಲು ಉರಿಯುತ್ತಿರುವ ಅಗ್ನಿಯಂತಿರುವಳು.

೫. ಎಲೈ ನಾರದನೇ, ಇತ್ತ ಗಂಗೆಯೂ ಕೂಡ ಸರಸ್ವತಿಯ ಶಾಪದಂತೆ ತನ್ನದೊಂದು ಕಲಾಂಶದಿಂದ ನದೀರೂಪಳಾಗಿ, ಭಗೀರಥನಿಂದ ಭೂಮಿಗೆ ಕರೆತರಲ್ಪಟ್ಟು, 'ಭಾಗೀರಥೀ' ಎಂಬ ದಿವ್ಯ ಮಂಗಳ ನಾಮವನ್ನು ಪಡೆದಳು.

೬. ಗಂಗೆಯು ದೇವಲೋಕದಿಂದ ಭೂಮಿಗೆ ಇಳಿಯುವಾಗ ಆಕೆಯ ವೇಗವನ್ನು ಸಹಿಸಲಾರದ ಭೂದೇವಿಯ ಪ್ರಾರ್ಥನೆಯಂತೆ, ಒಂದು ಕ್ಷಣಕಾಲ ಶಿವನು ಗಂಗೆಯನ್ನು ತನ್ನ ಜಟಾಭಾರದಲ್ಲಿ ತಡೆದನು.

ಪದ್ಮಾ ಜಗಾಮ ಕಲಯಾ ಸಾ ಚ ಪದ್ಮಾವತೀ ನದೀ ।
ಭಾರತಂ ಭಾರತೀ ಶಾಪಾತ್ಸ್ವಯಂ ತಸ್ಥೌ ಹರೇಃ ಪದಂ ॥ ೭ ॥

ತತೋಽನ್ಯಯಾ ಸಾ ಕಲಯಾ ಚಾಲಭಜ್ಜನ್ಮ ಭಾರತೇ ।
ಧರ್ಮಧ್ವಜಸುತಾ ಲಕ್ಷ್ಮೀರ್ವಿಖ್ಯಾತಾ ತುಲಸೀತಿ ಚ ॥ ೮ ॥

ಪುರಾ ಸರಸ್ವತೀ ಶಾಪಾತ್ತತ್ಪಶ್ಚಾದ್ಧರಿಶಾಪತಃ ।
ಬಭೂವ ವೃಕ್ಷರೂಪಾ ಸಾ ಕಲಯಾ ವಿಶ್ವಪಾವನೀ ॥ ೯ ॥

ಕಲೇಃ ಪಂಚಸಹಸ್ರಂ ಚ ವರ್ಷಂ ಸ್ಥಿತ್ವಾ ಚ ಭಾರತೇ ।
ಜಗ್ಮುಸ್ತಾಶ್ಚ ಸರಿದ್ರೂಪಂ ವಿಹಾಯ ಶ್ರೀಹರೇಃ ಪದಂ ॥ ೧೦ ॥

ಯಾನಿ ಸರ್ವಾಣಿ ತೀರ್ಥಾನಿ ಕಾಶೀವೃಂದಾವನಂ ವಿನಾ ।
ಯಾಸ್ಯಂತಿ ಸಾರ್ಧಂ ತಾಭಿಶ್ಚ ಹರೇರ್ವೈಕುಂಠಮಾಜ್ಞಯಾ ॥ ೧೧ ॥

---

೭. ಲಕ್ಷ್ಮಿಯೂ ಕೂಡ ಸರಸ್ವತಿಯ ಶಾಪದಂತೆ ಭರತಖಂಡದಲ್ಲಿ ಪದ್ಮಾವತೀ ನದಿಯಾಗಿ ತನ್ನ ಕಲೆಯಿಂದ ಅವತರಿಸಿದರೂ, ಪೂರ್ಣಾಂಶದಿಂದ ಶ್ರೀಮನ್ನಾರಾಯಣನೊಡನೆಯೇ ನೆಲೆಸಿದ್ದಳು.

೮. ಅಲ್ಲದೆ ತನ್ನ ಮತ್ತೊಂದು ಕಲೆಯಿಂದ ಧರ್ಮಧ್ವಜನ ಮಗಳಾಗಿ ಭಾರತದಲ್ಲಿ ಅವತರಿಸಿ, ಲಕ್ಷ್ಮಿಯು ತುಲಸಿ ಎಂಬ ನಾಮಾಂತರವನ್ನು ಪಡೆದಳು.

೯. ಮೊದಲು ಸರಸ್ವತೀ ಶಾಪದಿಂದಲೂ, ಅನಂತರ ಹರಿಯ ಶಾಪದಿಂದಲೂ, ಲಕ್ಷ್ಮಿಯು ಒಂದು ಕಲೆಯಿಂದ ವೃಕ್ಷರೂಪಳೂ ಆಗಿ ಸಮಸ್ತ ವಿಶ್ವವನ್ನೂ ಪಾವನಗೊಳಿಸಿದಳು.

೧೦. ಈ ದೇವಿಯರೆಲ್ಲರೂ ಕಲಿಯುಗದ ಐದು ಸಾವಿರ ವರ್ಷಗಳು ಕಳೆಯುವವರೆಗೆ ನದೀರೂಪರಾಗಿದ್ದು ಅನಂತರ ಶಾಪವಿಮುಕ್ತರಾಗಿ ಶ್ರೀಹರಿಯ ಸ್ಥಾನಕ್ಕೆ ಹಿಂತಿರುಗಿದರು.

೧೧. ಕಾಶೀ ಮತ್ತು ವೃಂದಾವನವನ್ನುಳಿದು, ಉಳಿದ ಪುಣ್ಯತೀರ್ಥಗಳೆಲ್ಲವೂ ಶ್ರೀಹರಿಯ ಆಜ್ಞೆಯಂತೆ ಆ ದೇವಿಯರೊಡನೆ ವೈಕುಂಠಕ್ಕೆ ತೆರಳಿದವು.

ಶಾಲಗ್ರಾಮೋ ಹರೇರ್ಮೂರ್ತಿರ್ಜಗನ್ನಾಥಶ್ಚ ಭಾರತಂ ।
ಕಲೇರ್ದಶಸಹಸ್ರಾಂತೇ ಯಯೌ ತ್ಯಕ್ತ್ವಾ ಹರೇಃ ಪದಂ   ॥ ೧೨ ॥

ವೈಷ್ಣವಾಶ್ಚ ಪುರಾಣಾನಿ ಶಂಖಾಶ್ಚ ಶ್ರಾದ್ಧತರ್ಪಣಂ ।
ವೇದೋಕ್ತಾನಿ ಚ ಕರ್ಮಾಣಿ ಯಯುಸ್ತೈಃ ಸಾರ್ಧಮೇವ ಚ   ॥ ೧೩ ॥

ಹರಿಪೂಜಾ ಹರೇರ್ನಾಮ ತತ್ಕೀರ್ತಿಗುಣಕೀರ್ತನಂ ।
ವೇದಾಂಗಾನಿ ಚ ಶಾಸ್ತ್ರಾಣಿ ಯಯುಸ್ತೈಃ ಸಾರ್ಧಮೇವ ಚ   ॥ ೧೪ ॥

ಸತ್ವಂ ಚ ಸತ್ಯಂ ಧರ್ಮಶ್ಚ ವೇದಾಶ್ಚ ಗ್ರಾಮ್ಯದೇವತಾಃ ।
ವ್ರತಂ ತಪಸ್ಯಾನಶನಂ ಯಯುಸ್ತೈಃ ಸಾರ್ಧಮೇವ ಚ   ॥ ೧೫ ॥

---

೧೨. ಕಲಿಯುಗದ ಹತ್ತು ಸಾವಿರ ವರ್ಷಗಳು ಕಳೆದನಂತರ ಜಗನ್ನಾಥನಾದ ಶ್ರೀಮನ್ನಾರಾಯಣನು ಭರತಖಂಡದಲ್ಲಿ ಸಾಲಿಗ್ರಾಮ ಶಿಲಾಶ್ರಯವನ್ನು ಬಿಟ್ಟು ವೈಕುಂಠಕ್ಕೆ ಹಿಂತಿರುಗುವನು.

೧೩. ಅದೇ ಕಾಲದಲ್ಲಿ ವಿಷ್ಣುಭಕ್ತರೂ, ಪುರಾಣಗಳೂ, ಪವಿತ್ರವಾದ ಶಂಖಗಳೂ, ಶ್ರಾದ್ಧಕಾಲದ ತರ್ಪಣಗಳೂ, ವೇದೋಕ್ತವಾದ ಸಮಸ್ತ ಕರ್ಮಗಳೂ ಭರತಖಂಡವನ್ನು ಬಿಟ್ಟು ವೈಕುಂಠಕ್ಕೆ ತೆರಳುವುವು.

೧೪. ಹರಿಪೂಜೆಯೂ, ಹರಿಯ ನಾಮಗುಣಸಂಕೀರ್ತನೆಯೂ, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪವೆಂಬ ವೇದಾಂಗಗಳೂ ಶಾಸ್ತ್ರಗಳೂ, ಆ ಕಾಲದಲ್ಲಿಯೇ ಅವುಗಳ ಜೊತೆಯಲ್ಲಿಯೇ ಹೊರಟುಹೋಗುವುವು.

೧೫. ಸತ್ವಗುಣವೂ, ಸತ್ಯ ಮತ್ತು ಧರ್ಮಗಳೂ, ಚತುರ್ವೇದಗಳೂ, ಗ್ರಾಮದೇವತೆಗಳೂ, ತಪಸ್ಸು ಮತ್ತು ವ್ರತೋಪವಾಸಗಳೂ ಅವುಗಳೊಡನೆಯೇ ಹೊರಟುಹೋಗುವುವು.

ವಾಮಾಚಾರರತಾಃ ಸರ್ವೇ ಮಿಥ್ಯಾಕಾಪಟ್ಯಸಂಯುತಾಃ ।
ತುಲಸೀವರ್ಜಿತಾ ಪೂಜಾ ಭವಿಷ್ಯತಿ ತತಃ ಪರಂ ॥ ೧೬ ॥

ಏಕಾದಶೀವಿಹೀನಾಶ್ಚ ಸರ್ವೇ ಧರ್ಮವಿವರ್ಜಿತಾಃ ।
ಹರಿಪ್ರಸಂಗವಿಮುಖಾ ಭವಿಷ್ಯಂತಿ ತತಃ ಪರಂ ॥ ೧೭ ॥

ಶಠಾಃ ಕ್ರೂರಾ ದಾಂಭಿಕಾಶ್ಚ ಮಹಾಹಂಕಾರಸಂಯುತಾಃ ।
ಚೌರಾಶ್ಚ ಹಿಂಸಕಾಃ ಸರ್ವೇ ಭವಿಷ್ಯಂತಿ ತತಃ ಪರಂ ॥ ೧೮ ॥

ಪುಂಸಾಂ ಭೇದಸ್ತಥಾ ಸ್ತ್ರೀಣಾಂ ವಿವಾಹೋ ವಾದನಿರ್ಣಯಃ ।
ಸ್ವಸ್ವಾಮಿಭೇದೋ ವಸ್ತೂನಾಂ ನ ಭವಿಷ್ಯತ್ಯತಃ ಪರಂ ॥ ೧೯ ॥

ಸರ್ವೇ ಜನಾಃ ಸ್ತ್ರೀವಶಾಶ್ಚ ಪುಂಶ್ಚಲ್ಯಶ್ಚ ಗೃಹೇ ಗೃಹೇ ।
ತರ್ಜನೈರ್ಭರ್ತ್ಸನೈಃ ಶಶ್ವತ್ಸ್ವಾಮಿನಂ ತಾಡಯಂತಿ ಚ ॥ ೨೦ ॥

---

೧೬. ಕಲಿಯುಗದಲ್ಲಿ ಹತ್ತುಸಾವಿರ ವರ್ಷಗಳು ಕಳೆದ ನಂತರ ಸಮಸ್ತ ಜನರೂ ದುರಾಚಾರಿಗಳಾಗಿ ಸುಳ್ಳು ಮೋಸಗಳಿಂದ ಕೂಡಿದವರಾಗಿ, ತುಳಸಿ ಇಲ್ಲದ ಪೂಜೆ ಮಾಡುವರಾಗುವರು.

೧೭. ಏಕಾದಶೀವ್ರತವನ್ನೂ, ತಮ್ಮ ವರ್ಣಾಶ್ರಮಧರ್ಮಗಳನ್ನೂ ಬಿಟ್ಟು, ಹರಿಸಂಬಂಧವಾದ ಕಥೆಯನ್ನೇ ದೂರಮಾಡಿ ಜನರು ದುರ್ಮಾರ್ಗಿಗಳಾಗುವರು.

೧೮. ಆ ಕಾಲದ ಜನರೆಲ್ಲರೂ, ಮೂರ್ಖರೂ, ಕ್ರೂರಿಗಳೂ, ದಂಭಾಚಾರವುಳ್ಳವರೂ, ದುರಹಂಕಾರಿಗಳೂ, ಕಳ್ಳರೂ, ಪರಹಿಂಸಕರೂ ಆಗಿರುವರು.

೧೯. ಅಲ್ಲಿಂದ ಮುಂದೆ ಸ್ತ್ರೀಪುರುಷರಿಗೆ ಇರುವ ಭೇದವೂ, ಪರಸ್ಪರ ವಿವಾಹವೂ, ಕಲಹತೀರ್ಮಾನವೂ, ಪದಾರ್ಥಗಳಿಗೆ ಹಕ್ಕುದಾರನೆಂಬ ಭೇದವೂ ದೂರವಾಗುವುದು.

೨೦. ಗಂಡಸರೆಲ್ಲರೂ ಹೆಂಗಸರಿಗೆ ಅಧೀನರಾಗುವರು. ಪ್ರತಿಮನೆಯಲ್ಲಿಯೂ ಜಾರೆಯರು ತುಂಬಿರುವರು. ಅವರೆಲ್ಲರೂ ತಮ್ಮ ತಮ್ಮ ಪತಿಯನ್ನು ಹೆದರಿಸಿ, ಬೆದರಿಸಿ ಹೊಡೆಯುತ್ತಿರುವರು.

ಗೃಹೇಶ್ವರೀ ಚ ಗೃಹಿಣೀ ಗೃಹೀ ಭೃತ್ಯಾಧಿಕೋಽಧಮಃ ।
ಚೇಟೀಭೃತ್ಯಾಸಮೌ ವಧ್ವಾಃ ಶ್ವಶ್ರೂಶ್ಚ ಶ್ವಶುರಸ್ತಥಾ ॥ ೨೧ ॥

ಕರ್ತಾರೋ ಬಲಿನೋ ಗೇಹೇ ಯೋನಿಸಂಬಂಧಿಬಾಂಧವಾಃ ।
ವಿದ್ಯಾಸಂಬಂಧಿಭಿಃ ಸಾರ್ಧಂ ಸಂಭಾಷಾಽಪಿ ನ ವಿದ್ಯತೇ ॥ ೨೨ ॥

ಯಥಾಪರಿಚಿತಾ ಲೋಕಾಸ್ತಥಾ ಪುಂಸಶ್ಚ ಬಾಂಧವಾಃ ।
ಸರ್ವಕರ್ಮಾಕ್ಷಮಾಃ ಪುಂಸೋ ಯೋಷಿತಾಮಾಜ್ಞಯಾ ವಿನಾ ॥ ೨೩ ॥

ಬ್ರಹ್ಮಕ್ಷತ್ರಿಯವಿಟ್‌ಶೂದ್ರಾ ಜಾತ್ಯಾಚ ರವಿನಿರ್ಣಯಃ ।
ಸಂಧ್ಯಾ ಚ ಯಜ್ಞಸೂತ್ರಂ ಚ ಭಾವಲುಪ್ತಂ ನ ಸಂಶಯಃ ॥ ೨೪ ॥

---

೨೧. ಗೃಹಿಣಿಯೇ ಮನೆಗೆ ಯಜಮಾನಿತಿಯಾಗಿಯೂ, ಗೃಹಸ್ಥನು ಸೇವಕನಿಗಿಂತ ಅಧಮನಾಗಿಯೂ, ಹೆಂಗಸಿನ ಅತ್ತೆ ಮಾವಂದಿರೂ ಕೂಡ ದಾಸಿ ದಾಸರಿಗೆ ಸಮಾನರಾಗಿಯೂ, ಆಗುವರು.

೨೨. ಮನೆಯಲ್ಲಿ ಬಲಿಷ್ಠರಾದವರೇ ಕರ್ತೃಗಳಾಗುವರು. ಯೋನಿಸಂಬಂಧಿಗಳುಮಾತ್ರ ಬಂಧುಗಳೆನಿಸುವರು. ವಿದ್ಯಾಸಂಬಂಧವುಳ್ಳವರೊಡನೆ ಮಾತುಕಥೆಯೂ ನಡೆಯುವುದಿಲ್ಲ.

೭೩. ಗಂಡಸಿನ ನೆಂಟರೆಲ್ಲರೂ ಅಪರಿಚಿತರಾದ ಮನುಜರಂತೆ ದೂರದಲ್ಲಿಯೇ ಇರುವರು. ಹೆಂಗಸಿನ ಅಪ್ಪಣೆಯಿಲ್ಲದೆ ಗಂಡಸರು ಯಾವ ಕೆಲಸಮಾಡಲೂ ಶಕ್ತರಾಗುವುದಿಲ್ಲ.

೩೪. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಜಾತ್ಯಾಚಾರನಿರ್ಣಯಗಳೂ, ಸಂಧ್ಯಾವಂದನಾದಿ ಕರ್ಮವೂ ಮತ್ತು ಯಜ್ಞೋಪವೀತಧಾರಣೆಯೂ ಲೋಪವಾಗಿ ಹೋಗುವುದು.

ಮ್ಲೇಚ್ಛಾಚಾರಾ ಭವಿಷ್ಯಂತಿ ವರ್ಣಾಶ್ಚತ್ವಾರ ಏವ ಚ ।
ಮ್ಲೇಚ್ಛಶಾಸ್ತ್ರಂ ಪಠಿಷ್ಯಂತಿ ಸ್ವಶಾಸ್ತ್ರಾಣಿ ವಿಹಾಯ ತೇ ।
ಬ್ರಹ್ಮಕ್ಷತ್ರವಿಶಾಂ ವಂಶಾಃ ಶೂದ್ರಾಣಾಂ ಸೇವಕಾಃ ಕಲೌ ॥ ೨೫ ॥

ಸೂಪಕಾರಾ ಭವಿಷ್ಯಂತಿ ಧಾವಕಾಃ ವೃಷವಾಹಕಾಃ ।
ಸತ್ಯಹೀನಾ ಜನಾಃ ಸರ್ವೇ ಸಸ್ಯಹೀನಾ ಚ ಮೇದಿನೀ ॥ ೨೬ ॥

ಫಲಹೀನಾಶ್ಚ ತರವೋಽಪತ್ಯಹೀನಾಶ್ಚ ಯೋಷಿತಃ ।
ಕ್ಷೀರಹೀನಾಸ್ತಥಾ ಗಾವಃ ಕ್ಷೀರಂ ಸರ್ಪಿರ್ವಿವರ್ಜಿತಂ ॥ ೨೭ ॥

ದಂಪತೀ ಪ್ರೀತಿಹೀನೌ ಚ ಗೃಹಿಣಃ ಸುಖವರ್ಜಿತಾಃ ।
ಪ್ರತಾಪಹೀನಾ ಭೂಜಾಶ್ಚ ಪ್ರಜಾಶ್ಚ ಕರಪೀಡಿತಾಃ ॥ ೨೮ ॥

ಜಲಹೀನಾ ನದಾ ನದ್ಯೋ ದೀರ್ಘಿಕಾಃ ಕಂದರಾದಯಃ ।
ಧರ್ಮಹೀನಾಃ ಪುಣ್ಯಹೀನಾ ವರ್ಣಾಶ್ಚತ್ವಾರ ಏವ ಚ ॥ ೨೯ ॥

---

೨೫. ಚಾತುರ್ವರ್ಣ್ಯದವರೂ ತಮ್ಮ ತಮ್ಮ ಶಾಸ್ತ್ರಾಭ್ಯಾಸಗಳನ್ನು ಬಿಟ್ಟು, ಮ್ಲೇಚ್ಛರಶಾಸ್ತ್ರಗಳನ್ನೋದಿ, ಅವರ ಆಚಾರವನ್ನೆಲ್ಲಾ ಅನುಸರಿಸುವರು.

೨೬. ಕಲಿಯುಗದಲ್ಲಿ ಹತ್ತುಸಾವಿರ ವರ್ಷಗಳು ಕಳೆದ ಮೇಲೆ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯಜಾತಿಯವರು, ಶೂದ್ರರ ಅಡಿಗೆಯವರೂ, ಬಟ್ಟೆಒಗೆಯುವವರೂ, ಮತ್ತು ಎತ್ತುಗಳನ್ನು ಕಟ್ಟಿ ಗಾಡಿ ಮತ್ತು ನೇಗಿಲುಗಳನ್ನು ನಡೆಸುವವರೂ ಆಗುವರು. ಎಲ್ಲ ಜನರೂ ಸತ್ಯಹೀನರಾಗುವರು. ಭೂಮಿಯು ಸಸ್ಯಹೀನವಾಗುವುದು.

೨೭. ಮರಗಳು ಹಣ್ಣಿಲ್ಲದಂತೆಯೂ, ಹೆಂಗಸರು ಮಕ್ಕಳಿಲ್ಲದಂತೆಯೂ, ಹಸುಗಳು ಹಾಲಿಲ್ಲದಂತೆಯೂ, ಹಾಲಿನಲ್ಲಿ (ತುಪ್ಪ) ಜಿಡ್ಡಿಲ್ಲದಂತೆಯೂ ಆಗುವುದು.

೨೮–೨೯. ಗಂಡಹೆಂಡಿರು ಪರಸ್ಪರಪ್ರೀತಿರಹಿತರೂ, ಗೃಹಸ್ಥರು ಸುಖರಹಿತರೂ, ರಾಜರು ಪ್ರತಾಪರಹಿತರೂ, ಪ್ರಜೆಗಳು ಕಂದಾಯಪೀಡಿತರೂ, ನದಿ, ಸರೋವರ ಮತ್ತು ಕಾಲುವೆಗಳು ಜಲರಹಿತವೂ, ಚಾತುರ್ವರ್ಣ್ಯದವರು ಧರ್ಮ ಮತ್ತು ಪುಣ್ಯರಹಿತರೂ ಆಗುವರು.

ಲಕ್ಷೇಷು ಪುಣ್ಯವಾನ್ಕೋಽಪಿ ನ ತಿಷ್ಠತಿ ತತಃ ಪರಂ |
ಕುತ್ಸಿತಾ ವಿಕೃತಾಕಾರಾ ನರನಾರ್ಯಶ್ಚ ಬಾಲಕಾಃ || ೩೦ ||

ಕುವಾರ್ತಾಃ ಕುತ್ಸಿತಪಥಾ ಭವಿಷ್ಯಂತಿ ತತಃ ಪರಂ |
ಕೇಚಿದ್ಗ್ರಾಮಾಶ್ಚ ನಗರಾ ನರಶೂನ್ಯಾ ಭಯಾನಕಾಃ || ೩೧ ||

ಕೇಚಿತ್ಸ್ವಲ್ಪಕುಟೀರೇಣ ನರೇಣ ಚ ಸಮನ್ವಿತಾಃ |
ಅರಣ್ಯಾನಿ ಭವಿಷ್ಯಂತಿ ಗ್ರಾಮೇಷು ನಗರೇಷು ಚ || ೩೨ ||

ಅರಣ್ಯವಾಸಿನಃ ಸರ್ವೇ ಜನಾಶ್ಚ ಕರಪೀಡಿತಾಃ |
ಸಸ್ಯಾನಿ ಚ ಭವಿಷ್ಯಂತಿ ತಡಾಗೇಷು ನದೀಷು ಚ || ೩೩ ||

ಕ್ಷೇತ್ರಾಣಿ ಸಸ್ಯಹೀನಾನಿ ಪ್ರಕೃಷ್ಟಾನ್ಯರ್ಥತಃ ಪರಂ |
ಹೀನಾಃ ಪ್ರಕೃಷ್ಟಾ ಧನಿನೋ ಬಲದರ್ಪಸಮನ್ವಿತಾಃ || ೩೪ ||

---

೩೦. ಅಲ್ಲಿಂದ ಮುಂದಕ್ಕೆ ಲಕ್ಷಕ್ಕೆ ಒಬ್ಬರಂತೆ ಪುಣ್ಯವಂತರೂ ಸಿಕ್ಕಲಾರರು. ಗಂಡಸರು, ಹೆಂಗಸರು, ಹುಡುಗಿಯರೂ ಮತ್ತು ಹುಡುಗರು ವಿಕಾರರೂಪವುಳ್ಳವರಾಗಿ ನೋಡಲಸಹ್ಯರಾಗುವರು.

೩೧. ಆ ಕಾಲದಲ್ಲಿ ಕೆಟ್ಟಸಮಾಚಾರಗಳೂ, ದುರಾಚಾರಗಳೂ, ವಿಶೇಷವಾಗಿ ಎಲ್ಲೆಲ್ಲೂ ತುಂಬಿರುವುದು. ಕೆಲವು ಗ್ರಾಮನಗರಗಳು ಮನುಷ್ಯಶೂನ್ಯವಾಗಿ ಭಯಂಕರವಾಗುವುವು.

೩೨. ಮತ್ತೆ ಕೆಲವು ಅಲ್ಪಸ್ವಲ್ಪ ಗುಡಿಸಲುಗಳಿಂದಲೂ, ಅಲ್ಪಮನುಷ್ಯರಿಂದಲೂ ಕೂಡಿಕೊಂಡಿರುವುವು. ಗ್ರಾಮನಗರಗಳೆಲ್ಲವೂ ಕಾಡಾಗುವುವು.

೩೩. ಅರಣ್ಯದಲ್ಲಿ ವಾಸಮಾಡುವ ಜನಗಳೆಲ್ಲರೂ ಹೆಚ್ಚು ಕಂದಾಯದಿಂದ ಪೀಡಿತರಾಗುವರು. ಕೆರೆ ಮತ್ತು ನದೀಪಾತ್ರಗಳಲ್ಲಿ ಸಸ್ಯವು ಬೆಳೆಯುವುದು.

೩೪. ಅರ್ಥಾತ್ ಉತ್ತಮಕ್ಷೇತ್ರಗಳೆಲ್ಲವೂ ಸಸ್ಯಹೀನವಾಗುವುವು. ಹೀನವಂಶಜರು ಬಹಳ ಹಣವಂತರಾಗಿ, ಬಲಾಹಂಕಾರಗಳಿಂದ ಕೂಡಿಕೊಳ್ಳುವರು.

ಪ್ರಕೃಷ್ಟವಂಶಜಾ ಹೀನಾ ಭವಿಷ್ಯಂತಿ ಕಲೌ ಯುಗೇ ।
ಅಲೀಕವಾದಿನೋ ಧೂರ್ತಾಃ ಶಠಾ ವೈ ಸತ್ಯವಾದಿನಃ ॥ ೩೫ ॥

ಪಾಪಿನಃ ಪುಣ್ಯವಂತಶ್ಚಾಪ್ಯಶಿಷ್ಟಾಃ ಶಿಷ್ಟ ಏವ ಚ ।
ಜಿತೇಂದ್ರಿಯಾ ಲಂಪಟಾಶ್ಚ ಪುಂಶ್ಚಲ್ಯಶ್ಚ ಪತಿವ್ರತಾಃ ॥ ೩೬ ॥

ತಪಸ್ವಿನಃ ಪಾತಕಿನೋ ವಿಷ್ಣುಭಕ್ತಾ ಅವೈಷ್ಣವಾಃ ।
ಹಿಂಸಕಾಶ್ಚ ದಯಾಯುಕ್ತಾಶ್ಚೌರಾಶ್ಚ ನರಘಾತಿನಃ ॥ ೩೭ ॥

ಭಿಕ್ಷುವೇಷಧರಾ ಧೂರ್ತಾ ನಿಂದಂತ್ಯುಪಹಸಂತಿ ಚ ।
ಭೂತಾದಿಸೇವಾನಿಪುಣಾ ಜನಾನಾಂ ಮೋದಕಾರಿಣಃ ॥ ೩೮ ॥

---

೩೫. ಕಲಿಯುಗದಲ್ಲಿ ಸದ್ವಂಶದಲ್ಲಿ ಜನಿಸಿದವರೆಲ್ಲರೂ ಹೀನರೆನಿಸಿಕೊಳ್ಳುವರು. ಸುಳ್ಳುಹೇಳುವವರು, ಮೋಸಗಾರರು ಮತ್ತು ವಂಚಕರೇ ಸತ್ಯವಾದಿಗಳೆನಿಸಿಕೊಳ್ಳುವರು.

೩೬. ಪಾಪಿಗಳು ಪುಣ್ಯವಂತರೆಂತಲೂ, ದುರಾಚಾರಿಯು ಸದಾಚಾರ ಸಂಪನ್ನನೆಂತಲೂ, ವಿಷಯಲಂಪಟರು ಜಿತೇಂದ್ರಿಯರೆಂತಲೂ, ಜಾರೆಯರು ಪತಿವ್ರತೆಯರೆಂತಲೂ ಕರೆಯಲ್ಪಡುವರು.

೩೭. ತಪಸ್ವಿಗಳೆಲ್ಲ ಮಹಾಪಾಪಿಗಳೆಂದೂ, ವಿಷ್ಣುಭಕ್ತರು ಅವೈಷ್ಣವರೆಂದೂ, ದಯಾವಂತರೆಲ್ಲ ಹಿಂಸಕರೆಂದೂ ಹೆಸರು ಪಡೆಯುವರು. ಕಳ್ಳರು ಮನುಷ್ಯಘಾತಿಗಳಾಗುವರು.

೩೮. ಧೂರ್ತರೆಲ್ಲರೂ, ಸನ್ಯಾಸಿಯ ವೇಷಧಾರಿಗಳಾಗಿ ಜನರ ನಿಂದಕರೂ ಮತ್ತು ಪರಿಹಾಸಕರೂ ಆಗುವರು. ಭೂತಪ್ರೇತಗಳ ಸೇವೆಯಲ್ಲಿ ನಿಪುಣರಾಗಿ ಜನರಿಗೆ ಸಂತೋಷಕಾರಣರಾಗುವರು.

ಪೂಜಿತಾಸ್ತೇ ಭವಿಷ್ಯಂತಿ ವಂಚಕಾ ಜ್ಞಾನದುರ್ಬಲಾಃ ।
ಸಾಮಯಾ ವ್ಯಾಧಿಯುಕ್ತಾಶ್ಚ ನರಾ ನಾರ್ಯಶ್ಚ ಸರ್ವತಃ ॥ ೩೯ ॥

ಅಲ್ಪಾಯುಷೋ ಜರಾಯುಕ್ತಾ ಯೌವನೇಷು ಕಲೌ ಯುಗೇ ।
ಪಲಿತಾಃ ಷೋಡಶೇ ವರ್ಷೇ ಮಹಾವೃದ್ಧಾಸ್ತು ವಿಂಶತೌ ॥ ೪೦ ॥

ಅಷ್ಟವರ್ಷಾ ಚ ಯುವತೀ ರಜೋಯುಕ್ತಾ ಚ ಗರ್ಭಿಣೀ ।
ವತ್ಸರಾಂತೇ ಪ್ರಸೂತಾಸ್ತ್ರೀ ಷೋಡಶೇನ ಜರಾನ್ವಿತಾ ॥ ೪೧ ॥

ಏತಾಃ ಕಾಶ್ಚಿತ್ಸಹಸ್ರೇಷು ವಂಧ್ಯಾಶ್ಚಾಪಿ ಕಲೌ ಯುಗೇ ।
ಕನ್ಯಾವಿಕ್ರಯಿಣಃ ಸರ್ವೇ ವರ್ಣಾಶ್ಚತ್ವಾರ ಏವ ಚ ॥ ೪೨ ॥

ಮಾತೃಜಾಯಾ ವಧೂನಾಂ ಚ ಜಾರೋಪಾರ್ಜನತತ್ಪರಾಃ ।
ಕನ್ಯಾನಾಂ ಭಗಿನೀನಾಂ ಚ ಜಾರೋಪಾರ್ಜನಜೀವಿನಃ ॥ ೪೩ ॥

---

೩೯. ವಂಚಕರೂ, ಜ್ಞಾನಹೀನರೂ ಆದ ಆ ಕಪಟಿಗಳು ಸರ್ವರಿಂದಲೂ ಪೂಜಿತರಾಗುವರು. ಗಂಡಸರು ಮತ್ತು ಹೆಂಗಸರೆಲ್ಲರೂ ಕುಳ್ಳರಾಗಿ ರೋಗ ಪೀಡಿತರಾಗುವರು.

೪೦. ಕಲಿಯುಗದಲ್ಲಿ ಜನರೆಲ್ಲರೂ ಅಲ್ಪಾಯುಗಳಾಗಿ ಹದಿನಾರನೆಯ ವರ್ಷ ದಲ್ಲಿಯೇ ಮುದುಕರಾಗುವರು. ಹದಿನಾರನೆಯ ವರ್ಷದಲ್ಲಿಯೇ ತಲೆನೆರೆಯುವುದು. ಇಪ್ಪತ್ತುವರ್ಷ ಬದುಕುವವರೇ ಅತಿಮುದುಕರೆನಿಸಿಕೊಳ್ಳುವರು.

೪೧. ಹೆಂಗಸು ಎಂಟು ವರ್ಷದಲ್ಲಿಯೇ ರಜಸ್ವಲೆಯಾಗಿ ಗರ್ಭಿಣಿಯಾಗು ವಳು. ಒಂದು ವರ್ಷದಮೇಲೆ ಪ್ರಸುವಿಸುವಳು. ಹದಿನಾರನೆಯ ವಯಸ್ಸಿಗೆ ಮುದುಕಿಯಾಗುವಳು.

೪೨. ಇಂಥವರು ಸಾವಿರಕ್ಕೊಬ್ಬರು ಮಾತ್ರ. ಉಳಿದವರೆಲ್ಲ ಕಲಿಯುಗದಲ್ಲಿ ಮಕ್ಕಳಿಲ್ಲದ ಬಂಜೆಯರಾಗುವರು. ಚಾತುರ್ವರ್ಣ್ಯದವರೂ ತಮ್ಮ ಹೆಣ್ಣು ಮಕ್ಕಳನ್ನು ಮಾರಿಕೊಂಡು ಜೀವಿಸುವರು.

೪೩. ಜನರೆಲ್ಲರೂ ತಮ್ಮ ತಾಯಿ, ಹೆಂಡತಿ, ಸೊಸೆ, ಮಗಳು ಮತ್ತು ಅಕ್ಕತಂಗಿಯರಿಗೆ ಜಾರರನ್ನು ಹೊಂದಿಸಿಕೊಟ್ಟು ಹಣಸಂಪಾದನೆ ಮಾಡಿ ಅದರಿಂದ ಜೀವಿಸುವರು.

ಹರೇರ್ನಾಮ್ನಾಂ ವಿಕ್ರಯಿಣೋ ಭವಿಷ್ಯಂತಿ ಕಲೌ ಯುಗೇ ।
ಸ್ವಯಮುತ್ಸೃಜ್ಯ ದಾನಂ ಚ ಕೀರ್ತಿವರ್ಧನಹೇತವೇ ॥ ೪೪ ॥

ತತ್ಪಶ್ಚಾನ್ಮನಸಾಲೋಚ್ಯ ಸ್ವಯಮುಲ್ಲಂಘಯಿಷ್ಯತಿ ।
ದೇವವೃತ್ತಿಂ ಬ್ರಹ್ಮವೃತ್ತಿಂ ವೃತ್ತಿಂ ಗುರುಕುಲಸ್ಯ ಚ ॥ ೪೫ ॥

ಸ್ವದತ್ತಾಂ ಪರದತ್ತಾಂ ವಾ ಸರ್ವಮುಲ್ಲಂಘಯಿಷ್ಯತಿ ।
ಕನ್ಯಕಾಗಾಮಿನಃ ಕೇಚಿತ್ಕೇಚಿಚ್ಛ್ವಶ್ರ್ವಭಿಗಾಮಿನಃ ॥ ೪೬ ॥

ಕೇಚಿದ್ವಧೂಗಾಮಿನಶ್ಚ ಕೇಚಿತ್ಸರ್ವತ್ರ ಗಾಮಿನಃ ।
ಭಗಿನೀಗಾಮಿನಃ ಕೇಚಿತ್ಸಪತ್ನೀಮಾತೃಗಾಮಿನಃ ॥ ೪೭ ॥

ಭ್ರಾತೃಜಾಯಾಗಾಮಿನಶ್ಚ ಭವಿಷ್ಯಂತಿ ಕಲೌ ಯುಗೇ ।
ಅಗಮ್ಯಾಗಮನಂ ಚೈವ ಕರಿಷ್ಯಂತಿ ಗೃಹೇ ಗೃಹೇ ॥ ೪೮ ॥

---

೪೪. ಕಲಿಯುಗದಲ್ಲಿ ಜನರೆಲ್ಲರೂ ಕೀರ್ತಿಗಳಿಸಲು ದಾನಪ್ರತಿಜ್ಞೆ ಮಾಡಿ, ಅನಂತರ ಇಲ್ಲವೆನ್ನುವರು. ಹರಿನಾಮದಿಂದ ಹಣಸಂಪಾದಿಸಲು ಪ್ರಾರಂಭಿಸುವರು.

೪೫-೪೬. ತಾವಾಗಿಯೇ ಅಥವಾ ಮತ್ತೊಬ್ಬರ ಪ್ರೇರಣೆಯಿಂದಲೋ, ದೇವಾರಾಧನೆಗೂ, ಬ್ರಾಹ್ಮಣ ಮತ್ತು ಗುರುಗಳ ಜೀವನಕ್ಕೂ ಕೊಟ್ಟಿರುವ ಧನ ಕ್ಷೇತ್ರಾದಿಗಳೆಲ್ಲವನ್ನೂ ಹಿಂವಕ್ಕೆ ಕಿತ್ತುಕೊಳ್ಳುವರು. ಕೆಲವರು ತಮ್ಮ ಹೆಣ್ಣು ಮಕ್ಕಳೊಡನೆಯೂ, ಮತ್ತೆ ಕೆಲವರು ಅತ್ತೆಯೊಡನೆಯೂ ಸಂಗಮಮಾಡುವರು.

೪೭. ಕೆಲವರು ಸೊಸೆಯೊಡನೆಯೂ. ಮತ್ತೆ ಕೆಲವರು ಎಲ್ಲ ಸ್ತ್ರೀಯರೊಡನೆಯೂ ಸಂಗಮ ಮಾಡುವರು. ಕೆಲವರು ಸಹೋದರಿಯರೊಡನೆಯೂ ಮತ್ತೆ ಕೆಲವರು ಸವತಿತಾಯಿಯರೊಡನೆಯೂ ಬೆರೆಯುವರು.

೪೮. ಸಹೋದರನ ಪತ್ನಿಯೊಡನೆ ಬೆರೆಯುವವರೂ ಕಲಿಯುಗದಲ್ಲಿ ಹೆಚ್ಚಿ ಪ್ರತಿ ಮನೆಯಲ್ಲಿಯೂ ಅಗಮ್ಯಸ್ತ್ರೀಯರೊಡನೆ ಗಮನಮಾಡುವವರೇ ತುಂಬಿರುವರು.

ಆತ್ಮಯೋನಿಂ ಪರಿತ್ಯಜ್ಯ ವಿಹರಿಷ್ಯಂತಿ ಸರ್ವತಃ ।
ಪತ್ನೀನಾಂ ನಿರ್ಣಯೋ ನಾಸ್ತಿ ಭರ್ತೄಣಾಂ ಚ ಕಲೌ ಯುಗೇ ॥ ೪೯ ॥

ಪ್ರಜಾನಾಂ ಚೈವ ವಸ್ತೂನಾಂ ಗ್ರಾಮಾಣಾಂ ಚ ವಿಶೇಷತಃ ।
ಅಲೀಕವಾದಿನಃ ಸರ್ವೇ ಸರ್ವೇ ಚೌರ್ಯಾರ್ಥಲಂಪಟಾಃ ॥ ೫೦ ॥

ಪರಸ್ಪರಂ ಹಿಂಸಕಾಶ್ಚ ಸರ್ವೇ ಚ ನರಘಾತಿನಃ ।
ಬ್ರಹ್ಮಕ್ಷತ್ರವಿಶಾಂ ವಂಶಾ ಭವಿಷ್ಯಂತಿ ಚ ಪಾಪಿನಃ ॥ ೫೧ ॥

ಲಾಕ್ಷಾಲೋಹರಸಾನಾಂ ಚ ವ್ಯಾಪಾರಂ ಲವಣಸ್ಯ ಚ ।
ವೃಷವಾಹಾ ವಿಪ್ರವಂಶಾಃ ಶೂದ್ರಾಣಾಂ ಶವದಾಹಿನಃ ॥ ೫೨ ॥

ಶೂದ್ರಾನ್ನಭೋಜಿನಃ ಸರ್ವೇ ಸರ್ವೇ ಚ ವೃಷಲೀರತಾಃ ।
ಪಂಚಪರ್ವಪರಿತ್ಯಕ್ತಾಃ ಕುಹೂರಾತ್ರಿಷು ಭೋಜಿನಃ ॥ ೫೩ ॥

---

೪೯. ಹೆತ್ತತಾಯಿಯೊಬ್ಬಳನ್ನು ಬಿಟ್ಟು ಉಳಿದೆಲ್ಲ ಸ್ತ್ರೀಯರೊಡನೆ ವಿಹರಿಸುವರು. ಕಲಿಯುಗದಲ್ಲಿ ಪತಿಪತ್ನಿಯರ ನಿರ್ಣಯವಿರುವುದಿಲ್ಲ.

೫೦. ಪ್ರಜೆಗಳೂ, ವಸ್ತುಗಳೂ ಮತ್ತು ಗ್ರಾಮಗಳೂ ಇಂಥವರದೇ ಎಂಬ ನಿರ್ಣಯವಿಲ್ಲ. ಎಲ್ಲರೂ ಸುಳ್ಳುಹೇಳುವವರಾಗಿ ಮತ್ತೊಬ್ಬರ ವಸ್ತುವನ್ನು ಅಪಹರಿಸುವುದರಲ್ಲಿಯೇ ಆಸಕ್ತರಾಗಿರುವರು.

೫೧. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವಂಶಜರೆಲ್ಲರೂ ಅನ್ಯೋನ್ಯ ಹಿಂಸಕರೂ, ನರಘಾತಿಗಳೂ, ಪಾಪಿಗಳೂ ಆಗುವರು.

೫೨. ಬ್ರಾಹ್ಮಣವಂಶಜರೆಲ್ಲರೂ ಅರಗು, ಲೋಹ, ಉಪ್ಪು ಮುಂತಾದ ರಸದ್ರವ್ಯಗಳನ್ನು ಮಾರುವವರಾಗಿ ಎತ್ತುಗಳನ್ನು ಕಟ್ಟಿ, ಬಂಡಿ ಮತ್ತು ನೇಗಿಲುಗಳನ್ನು ನಡೆಸುವವರೂ, ಶೂದ್ರರ ಶವದಾಹಕರೂ ಆಗುವರು.

೫೩. ಸರ್ವರೂ ಶೂದ್ರಾನ್ನವನ್ನು ತಿಂದು, ಶೂದ್ರಸ್ತ್ರೀಸಂಗಮ ಮಾಡುವರು. ಬ್ರಾಹ್ಮಣರು ಪಂಚಪರ್ವಕಾಲಗಳಲ್ಲಿ ಅತ್ಯವಶ್ಯಕವಾದ ಕರ್ಮಗಳನ್ನು ಬಿಟ್ಟು, ಅಮಾವಾಸ್ಯೆಯ ರಾತ್ರಿಯಲ್ಲಿ ಭುಜಿಸುವರು.

ಯಜ್ಞಸೂತ್ರವಿಹೀನಾಶ್ಚ ಸಂಧ್ಯಾಶೌಚವಿಹೀನಕಾಃ || ೫೪ ||

ಪುಂಶ್ಚಲೀ ವಾರ್ಧುಷಾಃವೀರಾ ಕುಟ್ಟಿನೀ ಚ ರಜಸ್ವಲಾ |
ವಿಪ್ರಾಣಾಂ ರಂಧನಾಗಾರೇ ಭವಿಷ್ಯಂತಿ ಚ ಪಾಚಿಕಾಃ || ೫೫ ||

ಅನ್ನಾನಾಂ ನಿರ್ಣಯೋ ನಾಸ್ತಿ ಯೋನೀನಾಂ ಚ ವಿಶೇಷತಃ |
ಆಶ್ರಮಾಣಾಂ ಜನಾನಾಂ ಚ ಸರ್ವೇ ಮ್ಲೇಚ್ಛಾಃ ಕಲೌ ಯುಗೇ || ೫೬ ||

ಏವಂ ಕಲೌ ಸಂಪ್ರವೃತ್ತೇ ಸರ್ವೇ ಮ್ಲೇಚ್ಛಮಯೇ ಭವೇ |
ಹಸ್ತಪ್ರಮಾಣೇ ವೃಕ್ಷೇ ಚಾಂಗುಷ್ಠಮಾನೇ ಚ ಮಾನವೇ || ೫೭ ||

ವಿಪ್ರಸ್ಯ ವಿಷ್ಣುಯಶಸಃ ಪುತ್ರಃ ಕಲ್ಕೀ ಭವಿಷ್ಯತಿ |
ನಾರಾಯಣಕಲಾಂಶಶ್ಚ ಭಗವಾನ್ಬಲಿನಾಂ ಬಲೀ || ೫೮ ||

---

೫೪. ಅಲ್ಲದೆ, ಯಜ್ಞೋಪವೀತಧಾರಣೆಯನ್ನೂ, ಸಂಧ್ಯಾವಂದನೆಯನ್ನೂ, ಸ್ನಾನಾದಿಶೌಚಕರ್ಮವನ್ನೂ ತ್ಯಜಿಸುವರು.

೫೫. ಬ್ರಾಹ್ಮಣರ ಅಡಿಗೆಯ ಮನೆಯಲ್ಲಿ ಕುಲಟೆಯರೂ, ಬಡ್ಡಿಯಿಂದ ಜೀವಿಸುವ ಸ್ತ್ರೀಯರೂ, ಗಂಡ ಮತ್ತು ಮಕ್ಕಳಿಲ್ಲದವರೂ, ವೇಶ್ಯೆಯರ ದಾಸಿಯರೂ (ಕುಟ್ಟಿನಿಯರೂ), ಮುಟ್ಟಾದವರೂ, ಅಡಿಗೆಮಾಡಿಕೊಂಡಿರುವರು.

೫೬ ಕಲಿಯುಗದಲ್ಲಿ ಆಹಾರನಿಯಮವಾಗಲೀ, ವರ್ಣಾಶ್ರಮಯೋನಿಗಳ ನಿಯಮವಾಗಲೀ, ಯಾರಿಗೂ ಇರುವುದಿಲ್ಲ. ಎಲ್ಲರೂ ಸ್ವೇಚ್ಛಾವೃತ್ತಿಗಳಾಗಿ ಮ್ಲೇಚ್ಛರಾಗುವರು.

೫೭. ಈ ರೀತಿಯಾಗಿ ಪ್ರಪಂಚವೆಲ್ಲವೂ ಮ್ಲೇಚ್ಛಪೂರಿತವಾಗುವ ಕಲಿಯುಗದಲ್ಲಿ ಮರಗಳು ಒಂದು ಮೊಳಪೆತ್ತರವೂ, ಮನುಷ್ಯನು ಒಂದು ಹೆಬ್ಬೆರಳಿನ ಎತ್ತರವೂ ಆಗುವನು.

೫೮. ಹೀಗಿರುವಾಗ ವಿಷ್ಣುಯಶಸ್ಸೆಂಬ ಬ್ರಾಹ್ಮಣನಿಗೆ ನಾರಾಯಣನ ಕಲಾಂಶದಿಂದ ಕಲ್ಕಿ ಎಂಬ ಮಹಾ ಪುರುಷನು ಜನಿಸಿ ಸರ್ವರಿಗೂ ಬಲಿಷ್ಠನಾಗುವನು.

ದೀರ್ಘೇಣ ಕರವಾಲೇನ ದೀರ್ಘಘೋಟಕವಾಹನಃ ।
ಮ್ಲೇಚ್ಛಶೂನ್ಯಾಂ ಚ ಪೃಥಿವೀಂ ತ್ರಿರಾತ್ರೇಣ ಕರಿಷ್ಯತಿ ॥ ೫೯ ॥

ನಿರ್ಮ್ಲೇಚ್ಛಾಂ ವಸುಧಾಂ ಕೃತ್ವಾ ಚಾಂತರ್ಧಾನಂ ಕರಿಷ್ಯತಿ ।
ಅರಾಜಕಾ ಚ ವಸುಧಾ ದಸ್ಯುಗ್ರಸ್ತಾ ಭವಿಷ್ಯತಿ ॥ ೬೦ ॥

ಸ್ಥೂಲಪ್ರಮಾಣಂ ಷಡ್ರಾತ್ರಂ ವರ್ಷಾಧಾರಾಪ್ಲುತಾ ಮಹೀ ।
ಲೋಕಶೂನ್ಯಾ ವೃಕ್ಷಶೂನ್ಯಾ ಗೃಹಶೂನ್ಯಾ ಭವಿಷ್ಯತಿ ॥ ೬೧ ॥

ತತಶ್ಚ ದ್ವಾದಶಾದಿತ್ಯಾಃ ಕರಿಷ್ಯಂತ್ಯುದಯಂ ಮುನೇ ।
ಪ್ರಾಪ್ನೋತಿ ಶುಷ್ಕತಾಂ ಪೃಥ್ವೀ ಸಮಾ ತೇಷಾಂ ಚ ತೇಜಸಾ ॥ ೬೨ ॥

ಕಲೌ ಗತೇ ಚ ದುರ್ಧರ್ಷೇ ಸಂಪ್ರವೃತ್ತೇ ಕೃತೇ ಯುಗೇ ।
ತಪಸ್ಸತ್ಯಸಮಾಯುಕ್ತೋ ಧರ್ಮಃ ಪೂರ್ಣೋ ಭವಿಷ್ಯತಿ ॥ ೬೩ ॥

---

೫೯. ಅವನು ಒಂದು ಎತ್ತರವಾದ ಕುದುರೆಯ ಮೇಲೆ ಕುಳಿತು ಕೈಯಲ್ಲಿ ತೀಕ್ಷ್ಣವಾದ ಕತ್ತಿಯೊಂದನ್ನು ಹಿಡಿದು ಮೂರು ರಾತ್ರಿಯೊಳಗೆ ಪ್ರಪಂಚ ದಲ್ಲೆಲ್ಲಿಯೂ ಮ್ಲೇಚ್ಛರಿಲ್ಲದಂತೆ ನಿರ್ಮೂಲಮಾಡುವನು.

೬೦. ಮ್ಲೇಚ್ಛರನ್ನೆಲ್ಲಾ ನಿರ್ಮೂಲಗೊಳಿಸಿ ಆ ಕಲ್ಕಿಯು ಕಣ್ಮರೆಯಾದ ಮೇಲೆ ಭೂಮಿಯು ಒಡೆಯರಿಲ್ಲದೆ ಕಳ್ಳಕಾಕರಿಂದ ತುಂಬಿಕೊಳ್ಳುವುದು.

೬೧. ಅನಂತರ ಆರುದಿನಗಳವರೆಗೆ ಧಾರಾಕಾರವಾಗಿ ಸುರಿಯುವ ಮಳೆಯ ದಪ್ಪಹನಿಗಳಿಂದ ಭೂಮಿಯು ತೊಯ್ದು ಜನಗಳು, ಮರಗಳು, ಮನೆಗಳು ಎಲ್ಲವೂ ಕೊಚ್ಚಿಹೋಗುವುವು.

೬೨. ಅನಂತರ ದ್ವಾದಶಾದಿತ್ಯರು ಏಕಕಾಲದಲ್ಲಿ ಉದಯಿಸಿ ತಮ್ಮ ಪ್ರಖರ ವಾದ ದಿವ್ಯತೇಜಸ್ಸನ್ನು ಹರಡುವರು. ಅವರೆಲ್ಲರ ತೇಜಸ್ಸಿನಿಂದ ಭೂಮಿಯು ಒಣಗಿ ನಿಸ್ಸಾರವಾಗುವುದು.

೬೩. ಈ ರೀತಿಯಾಗಿ ಅತಿಕಷ್ಟವಾದ ಕಲಿಯುಗವು ಕಳೆದು ಪುನಃ ಕೃತ ಯುಗವು ಪ್ರಾರಂಭವಾಗುವುದು. ಆಗ ಸತ್ಯ ಮತ್ತು ತಪಸ್ಸುಗಳಿಂದ ಪರಿಪೂರ್ಣ ವಾದ ಧರ್ಮವು ಪುನಃ ಪೂರ್ಣವಾಗುವುದು.

ತಪಸ್ವಿನಶ್ಚ ಧರ್ಮಿಷ್ಠಾ ವೇದಜ್ಞಾ ಬ್ರಾಹ್ಮಣಾ ಭುವಿ ।
ಪತಿವ್ರತಾಶ್ಚ ಧರ್ಮಿಷ್ಠಾ ಯೋಷಿತಶ್ಚ ಗೃಹೇ ಗೃಹೇ ॥ ೬೪ ॥

ರಾಜಾನಃ ಕ್ಷತ್ರಿಯಾಃ ಸರ್ವೇ ವಿಪ್ರಭಕ್ತಾಃ ಸ್ವಧರ್ಮಿಣಃ ।
ಪ್ರತಾಪವನ್ತೋ ಧರ್ಮಿಷ್ಠಾಃ ಪುಣ್ಯಕರ್ಮರತಾಃ ಸದಾ ॥ ೬೫ ॥

ವೈಶ್ಯಾ ವಾಣಿಜ್ಯನಿರತಾ ವಿಪ್ರಭಕ್ತಾಶ್ಚ ಧಾರ್ಮಿಕಾಃ ।
ಶೂದ್ರಾಶ್ಚ ಪುಣ್ಯಶೀಲಾಶ್ಚ ಧರ್ಮಿಷ್ಠಾ ವಿಪ್ರಸೇವಿನಃ ॥ ೬೬ ॥

ವಿಪ್ರಕ್ಷತ್ರವಿಶಾಂ ವಂಶಾಃ ವಿಷ್ಣು ಯಜ್ಞಪರಾಯಣಾಃ ।
ವಿಷ್ಣುಮಂತ್ರರತಾಃ ಸರ್ವೇ ವಿಷ್ಣುಭಕ್ತಾಶ್ಚ ವೈಷ್ಣವಾಃ ॥ ೬೭ ॥

ಶ್ರುತಿಸ್ಮೃತಿಪುರಾಣಜ್ಞಾ ಧರ್ಮಜ್ಞಾ ಋತುಗಾಮಿನಃ ।
ಲೇಶೋ ನಾಸ್ತಿ ಹ್ಯಧರ್ಮಾಣಾಂ ಧರ್ಮಪೂರ್ಣೇ ಕೃತೇ ಯುಗೇ ॥ ೬೮ ॥

---

೬೪. ಬ್ರಾಹ್ಮಣರೆಲ್ಲರೂ ತಪಸ್ವಿಗಳೂ, ವೇದವೇತ್ತೃಗಳೂ, ಧರ್ಮಿಷ್ಠರೂ ಆಗುವರು. ಹೆಂಗಸರು ಕೂಡ ಪ್ರತಿಮನೆಯಲ್ಲಿಯೂ ಪತಿವ್ರತೆಯರೂ, ಧರ್ಮಿಷ್ಠೆಯರೂ ಇರುವರು.

೬೫. ರಾಜರೂ ಮತ್ತು ಇತರ ಕ್ಷತ್ರಿಯರೂ ಯಾವಾಗಲೂ ಸ್ವಧರ್ಮಾಸಕ್ತರಾಗಿ. ಪ್ರತಾಪಶಾಲಿಗಳೂ, ಧರ್ಮಿಷ್ಠರೂ, ಪುಣ್ಯಕರ್ಮರತರೂ, ಬ್ರಾಹ್ಮಣ ಭಕ್ತರೂ ಆಗುವರು.

೬೬. ವೈಶ್ಯರು ಸ್ವಧರ್ಮವಾದ ವ್ಯಾಪಾರದಲ್ಲಿ ನಿರತರಾಗಿ ಧರ್ಮಿಷ್ಠರೂ, ಬ್ರಾಹ್ಮಣಭಕ್ತರೂ ಆಗುವರು. ಶೂದ್ರರೂ ಕೂಡ ಪುಣ್ಯಕರ್ಮರತರಾಗಿ, ಧರ್ಮಿಷ್ಠರಾಗಿ, ಬ್ರಾಹ್ಮಣರ ಸೇವೆಗೈಯುತ್ತಿರುವರು.

೬೭. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವಂಶಜರೆಲ್ಲರೂ, ವಿಷ್ಣುಪೂಜೆಯಲ್ಲಾಸಕ್ತರಾಗಿ, ಸರ್ವದಾ ವಿಷ್ಣುಮಂತ್ರವನ್ನು ಜಪಿಸುತ್ತ ವಿಷ್ಣುಭಕ್ತರೂ. ಪರಮ ವೈಷ್ಣವರೂ ಆಗುವರು.

೬೮. ವೇದಶಾಸ್ತ್ರ ಪುರಾಣಗಳನ್ನು ಚೆನ್ನಾಗಿ ತಿಳಿದು ಧರ್ಮವನ್ನರಿತು ಋತುಸ್ನಾತಳಾದ ಸ್ವಸ್ತ್ರೀಗಮನ ಮಾಡುವರು. ಧರ್ಮಪರಿಪೂರ್ಣವಾದ ಕೃತಯುಗದಲ್ಲಿ ಅಧರ್ಮವು ಲೇಶಮಾತ್ರವೂ ಇರುವುದಿಲ್ಲ.

ಧರ್ಮಸ್ತ್ರಿಪಾಚ್ಚ ತ್ರೇತಾಯಾಂ ದ್ವಿಪಾಚ್ಚ ದ್ವಾಪರೇ ಸ್ಮೃತಃ ।
ಕಲೌ ಪ್ರವೃತ್ತೇ ಪಾದಾತ್ಮಾ ಸರ್ವಲೋಪಸ್ತತಃ ಪರಂ　　॥ ೬೯ ॥

ವಾರಾಃ ಸಪ್ತ ಯಥಾ ವಿಪ್ರ ತಿಥಯಃ ಷೋಡಶ ಸ್ಮೃತಾಃ ।
ಯಥಾ ದ್ವಾದಶಮಾಸಾಶ್ಚ ಋತವಶ್ಚ ಷಡೇವ ಹಿ　　॥ ೭೦ ॥

ದ್ವೌ ಪಕ್ಷೌ ಚಾಯನೇ ದ್ವೇ ಚ ಚತುರ್ಭಿಃ ಪ್ರಹರೈರ್ದಿನಂ ।
ಚತುರ್ಭಿಃ ಪ್ರಹರೈ ರಾತ್ರಿರ್ಮಾಸಸ್ತ್ರಿಂಶದ್ದಿನೈಸ್ತಥಾ　　॥ ೭೧ ॥

ವರ್ಷಃ ಪಂಚವಿಧೋ ಜ್ಞೇಯಃ ಕಾಲಸಂಖ್ಯಾಂ ನಿಭೋಧ ಮೇ ।
ಯಥಾ ಚಾಯಾಂತಿ ಯಾಂತ್ಯೇವ ತಥಾ ಯುಗಚತುಷ್ಟಯಂ　　॥ ೭೨ ॥

ವರ್ಷೇ ಪೂರ್ಣೇ ನರಾಣಾಂ ಚ ದೇವಾನಾಂ ಚ ದಿವಾನಿಶಂ ।
ಶತತ್ರಯೇ ಷಷ್ಠ್ಯಧಿಕೇ ನರಾಣಾಂ ಚ ಯುಗೇ ಗತೇ ।
ದೇವಾನಾಂ ಚ ಯುಗೋ ಜ್ಞೇಯಃ ಕಾಲಸಂಖ್ಯಾವಿದಾಂ ಮತಃ　　॥ ೭೩ ॥

---

೬೯. ಕೃತಯುಗದಲ್ಲಿ ಚತುಷ್ಪಾದಗಳಿಂದಲೂ ಪೂರ್ಣವಾಗಿರುವ ಧರ್ಮವು ತ್ರೇತಾಯುಗದಲ್ಲಿ ಮೂರುಪಾದಗಳಿಂದಲೂ, ದ್ವಾಪರಯುಗದಲ್ಲಿ ಎರಡು ಪಾದಗಳಿಂದಲೂ, ಕಲಿಯುಗದ ಆದಿಯಲ್ಲಿ ಒಂದೇ ಪಾದದಿಂದಲೂ ಇದ್ದು ಕೊನೆಗೆ ಪೂರ್ಣವಾಗಿ ಲೋಪವಾಗುವುದು.

೭೦-೭೧. ಎಲೈ ನಾರದನೇ, 'ಒಂದು ವಾರಕ್ಕೆ ಏಳುದಿವಸಗಳು. ಒಂದು ಪಕ್ಷಕ್ಕೆ ತಿಥಿಗಳು ಹದಿನಾರು. ವರ್ಷಕ್ಕೆ ಹನ್ನೆರಡು ತಿಂಗಳು ಮತ್ತು ಆರು ಋತುಗಳು. ತಿಂಗಳಿಗೆ ಎರಡು ಪಕ್ಷಗಳು. ವರ್ಷಕ್ಕೆ ಎರಡು ಅಯನಗಳು. ಹಗಲು ಮತ್ತು ರಾತ್ರಿಗೆ ನಾಲ್ಕು ನಾಲ್ಕು ಜಾವಗಳು. ತಿಂಗಳಿಗೆ ಮೂವತ್ತು ದಿನಗಳು' ಎಂದು ನಿರ್ಣಯ ಮಾಡಿದ್ದಾರೆ.

೭೨. ವರ್ಷಗಳು ಐದು ಬಗೆಯಾಗಿರುವುವು. ಈ ರೀತಿ ಕಾಲಪರಿಮಾಣವುಳ್ಳ, ನಾಲ್ಕು ಯುಗಗಳೂ ಒಂದಾದ ನಂತರ ಮತ್ತೊಂದು ಬರುವುದು.

೭೩. ಈ ರೀತಿಯಾದ ಒಂದು ವರ್ಷವು ಮನುಷ್ಯರಿಗಾದರೆ, ದೇವತೆಗಳಿಗೆ ಒಂದು ಹಗಲು ಮತ್ತು ರಾತ್ರಿಯಾಗುವುದು. ಮನುಷ್ಯರಿಗೆ ೩೬೦ ಯುಗಗಳು ಕಳೆದರೆ ದೇವತೆಗಳಿಗೊಂದು ಯುಗವಾಗುವುದು.

ಮನ್ವಂತರಂ ತು ದಿವ್ಯಾನಾಂ ಯುಗಾನಾಮೇಕಸಪ್ತತಿಃ ।
ಮನ್ವಂತರಸಮಂ ಜ್ಞೇಯಂ ಚೇಂದ್ರಾಯುಃ ಪರಿಕೀರ್ತಿತಂ ॥ ೭೪ ॥

ಅಷ್ಟಾವಿಂಶತಿಮೇ ಚೇಂದ್ರೇ ಗತೇ ಬ್ರಾಹ್ಮಂ ದಿವಾನಿಶಂ ।
ಅಷ್ಟೋತ್ತರೇ ವರ್ಷಶತೇ ಗತೇ ಪಾತೋ ವಿಧೇರ್ಭವೇತ್ ॥ ೭೫ ॥

ಪ್ರಲಯಃ ಪ್ರಾಕೃತೋ ಜ್ಞೇಯಸ್ತತ್ರಾದೃಷ್ಟಾ ವಸುಂಧರಾ ।
ಜಲಪ್ಲುತಾನಿ ವಿಶ್ವಾನಿ ಬ್ರಹ್ಮವಿಷ್ಣುಶಿವಾದಯಃ ॥ ೭೬ ॥

ಋಷಯೋ ಜೀವಿನಃ ಸರ್ವೇ ಲೀನಾಃ ಕೃಷ್ಣೇ ಪರಾತ್ಪರೇ ।
ತತ್ರೈವ ಪ್ರಕೃತಿರ್ಲೀನಾ ತೇನ ಪ್ರಾಕೃತಿಕೋ ಲಯಃ ॥ ೭೭ ॥

ಲಯೇ ಪ್ರಾಕೃತಿಕೇಽತೀತೇ ಪಾತೇ ಚ ಬ್ರಹ್ಮಣೋ ಮುನೇ ।
ನಿಮೇಷಮಾತ್ರಃ ಕಾಲಶ್ಚ ಕೃಷ್ಣಸ್ಯ ಪರಮಾತ್ಮನಃ ॥ ೭೮ ॥

---

೭೪. ದೇವತೆಗಳ ಎಪ್ಪತ್ತೊಂದು ಯುಗಗಳು ಕಳೆದರೆ ಒಂದು ಮನ್ವಂತರ ವೆನಿಸಿಕೊಳ್ಳುವುದು. ಒಂದು ಮನ್ವಂತರಕಾಲ ದೇವೇಂದ್ರನ ಆಯುಃಪರಿಮಿತಿ ಎಂದು ನಿಯಮಿತವಾಗಿರುವುದು.

೭೫. ಈ ರೀತಿಯಾಗಿ ಇಪ್ಪತ್ತೆಂಟು ಇಂದ್ರರು ರಾಜ್ಯಭಾರಮಾಡಿ ಅಳಿದರೆ ಬ್ರಹ್ಮನಿಗೆ ಒಂದು ಹಗಲು ರಾತ್ರಿಯಾಗುವುದು. ಇಂತು ನೂರೆಂಟು ವರ್ಷಗಳು ಕಳೆದನಂತರ ಬ್ರಹ್ಮನ ಪತನವಾಗುವುದು.

೭೬–೭೭. ಅದಕ್ಕೆ ಪ್ರಾಕೃತಪ್ರಳಯವೆಂದು ಹೆಸರು. ಆಗ ವಸುಂಧರೆಯು ಕಣ್ಮರೆಯಾಗುವಳು. ನಿಖಿಲ ವಿಶ್ವವೂ ನೀರಿನಲ್ಲಿ ತೊಯ್ದುಹೋಗುವುದು. ಬ್ರಹ್ಮ, ವಿಷ್ಣು, ಶಿವಾದಿಗಳೂ, ಋಷಿಗಳೂ, ಸಮಸ್ತ ಜೀವಿಗಳೂ, ಪರಾತ್ಪರನಾದ ಶ್ರೀ ಕೃಷ್ಣನಲ್ಲಿ ಐಕ್ಯವಾಗುವರು. ಪ್ರಕೃತಿಯೂ ತನ್ನ ಅಧಿಷ್ಠಾನವಾದ ಬ್ರಹ್ಮತತ್ವದ ಲ್ಲಿಯೇ ಲೀನವಾಗುವುದರಿಂದ ಅದಕ್ಕೆ ಪ್ರಾಕೃತಿಕಲಯವೆನ್ನುವರು.

೭೮. ಬ್ರಹ್ಮನ ಪತನವೂ, ಪ್ರಾಕೃತಿಕ ಪ್ರಲಯವೂ ಶ್ರೀಕೃಷ್ಣಪರಮಾತ್ಮನಿಗೆ ಒಂದು ನಿಮಿಷಮಾತ್ರದಲ್ಲಿ ಕಳೆಯುವುದು.

ಏವಂ ನಶ್ಯಂತಿ ಸರ್ವಾಣಿ ಬ್ರಹ್ಮಾಂಡಾನ್ಯಖಿಲಾನಿ ಚ ।
ಸ್ಥಿತೌ ಗೋಲೋಕವೈಕುಂಠೌ ಶ್ರೀಕೃಷ್ಣಶ್ಚ ಸಪಾರ್ಷದಃ || ೭೯ ||

ನಿಮೇಷಮಾತ್ರಃ ಪ್ರಲಯೋ ಯತ್ರ ವಿಶ್ವಂ ಜಲಪ್ಲುತಂ ।
ನಿಮೇಷಾನಂತರೇ ಕಾಲೇ ಪುನಃ ಸೃಷ್ಟಿಃ ಕ್ರಮೇಣ ಚ || ೮೦ ||

ಏವಂ ಕತಿ ವಿಧಾ ಸೃಷ್ಟಿರ್ಲಯಃ ಕತಿ ವಿಧೋಽಪಿ ವಾ ।
ಕತಿ ಕೃತ್ವೋ ಗತಾಯಾತಃ ಸಂಖ್ಯಾಂ ಜಾನಾತಿ ಕಃ ಪುಮಾನ್ || ೮೧ ||

ಸೃಷ್ಟೀನಾಂ ಚ ಲಯಾನಾಂ ಚ ಬ್ರಹ್ಮಾಂಡಾನಾಂ ಚ ನಾರದ ।
ಬ್ರಹ್ಮಾದೀನಾಂ ಚ ವಿಧ್ಯಂಡೇ ಸಂಖ್ಯಾಂ ಜಾನಾತಿ ಕಃ ಪುಮಾನ್ || ೮೨ ||

ಬ್ರಹ್ಮಾಂಡಾನಾಂ ಚ ಸರ್ವೇಷಾಮೀಶ್ವರಶ್ಚೈಕ ಏವ ಸಃ ।
ಸರ್ವೇಷಾಂ ಪರಮಾತ್ಮಾ ಚ ಶ್ರೀಕೃಷ್ಣಃ ಪ್ರಕೃತೇಃ ಪರಃ || ೮೩ ||

---

೭೯. ಈ ರೀತಿಯಾಗಿ ಸಮಸ್ತಬ್ರಹ್ಮಾಂಡವೂ, ನಿಖಿಲಸೃಷ್ಟಿಯೂ, ನಾಶವಾದರೂ, ಗೋಲೋಕ ಮತ್ತು ವೈಕುಂಠಲೋಕಗಳೂ, ಪಾರ್ಷದರೊಡಗೂಡಿ ಶ್ರೀಕೃಷ್ಣನೂ ಅವಿನಾಶಿಯಾಗಿರುವನು.

೮೦. ವಿಶ್ವವೆಲ್ಲವೂ ನೀರಿನಲ್ಲಿ ಮುಳುಗಿಹೋಗುವ ಆ ಪ್ರಲಯವು ಪರಮಾತ್ಮನ ನಿಮಿಷಮಾತ್ರವಿರುವುದು. ನಿಮಿಷಕಾಲವು ಕಳೆದನಂತರ ಪುನಃ ಸೃಷ್ಟಿಯಾಗಲು ಪ್ರಾರಂಭವಾಗುವುದು.

೮೧. ಈ ರೀತಿಯಾಗಿ ಎಷ್ಟುವಿಧ ಸೃಷ್ಟಿಯೋ, ಎಷ್ಟುವಿಧ ಪ್ರಲಯವೋ, ಈ ಸೃಷ್ಟಿಪ್ರಲಯಗಳು ಎಷ್ಟು ಸಾರಿ ಬಂದು ಹೋಗುವುವೋ ಎಂಬುದನ್ನು ಲೆಖ್ಖಿಸಲು ಯಾರಿಂದಲೂ ಸಾಧ್ಯವಿಲ್ಲ.

೮೨. ಎಲೈ, ನಾರದನೇ, ಹೀಗೆ ಎಷ್ಟು ಸಾರಿ ಸೃಷ್ಟಿಲಯಗಳಾದವೋ : ಎಷ್ಟು ಬ್ರಹ್ಮಾಂಡಗಳು ಮತ್ತು ಬ್ರಹ್ಮಾದಿಗಳು ಹಿರಣ್ಯಗರ್ಭಾಂಡದಲ್ಲಿ ಅಡಗಿರುವರೋ ಗಣಿಸಲು ಯಾರು ತಾನೇ ಶಕ್ತರು ?

೮೩. ಪ್ರಕೃತಿಗೂ ಶ್ರೇಷ್ಠನಾದ ಶ್ರೀಕೃಷ್ಣಪರಮಾತ್ಮನೊಬ್ಬನೇ ಸಮಸ್ತ ಬ್ರಹ್ಮಾಂಡಕ್ಕೂ ಈಶ್ವರನೆನಿಸಿ ಸರ್ವಾಂತರ್ಯಾಮಿಯಾಗಿರುವನು.

ಬ್ರಹ್ಮಾದಯಶ್ಚ ತಸ್ಯಾಂಶಾಸ್ತಸ್ಯಾಂಶಶ್ಚ ಮಹಾವಿರಾಟ್ ।
ತಸ್ಯಾಂಶಶ್ಚ ವಿರಾಟ್ಕ್ಷುದ್ರಸ್ತಸ್ಯಾಂಶಾ ಪ್ರಕೃತಿಃ ಸ್ಮೃತಾ ॥ ೮೪ ॥

ಸ ಚ ಕೃಷ್ಣೋ ದ್ವಿಧಾ ಭೂತೋ ದ್ವಿಭುಜಶ್ಚ ಚತುರ್ಭುಜಃ ।
ಚತುರ್ಭುಜಶ್ಚ ವೈಕುಂಠೇ ಗೋಲೋಕೇ ದ್ವಿಭುಜಃ ಸ್ವಯಂ ॥ ೮೫ ॥

ಬ್ರಹ್ಮಾದಿ ತೃಣಪರ್ಯಂತಂ ಸರ್ವಂ ಪ್ರಾಕೃತಿಕಂ ಭವೇತ್ ।
ಯದ್ಯತ್ಪ್ರಾಕೃತಿಕಂ ಸೃಷ್ಟಂ ಸರ್ವಂ ನಶ್ವರಮೇವ ಚ ॥ ೮೬ ॥

ವಿದ್ಧ್ಯೇಕಂ ಸೃಷ್ಟಿಮೂಲಂ ತತ್ಸತ್ಯಂ ನಿತ್ಯಂ ಸನಾತನಂ ।
ಸ್ವೇಚ್ಛಾಮಯಂ ಪರಂ ಬ್ರಹ್ಮ ನಿರ್ಲಿಪ್ತಂ ನಿರ್ಗುಣಂ ಪರಂ ॥ ೮೭ ॥

ನಿರೂಪಾಧಿಂ ನಿರಾಕಾರಂ ಭಕ್ತಾನುಗ್ರಹವಿಗ್ರಹಂ ।
ಅತೀವ ಕಮನೀಯಂ ಚ ನವೀನಘನಸನ್ನಿಭಂ ॥ ೮೮ ॥

---

೮೪. ಬ್ರಹ್ಮ, ವಿಷ್ಣು, ಮಹೇಶ್ವರರೂ, ಮಹಾವಿರಾಟ್ ಮತ್ತು ಕ್ಷುದ್ರ ವಿರಾಟರೂ, ಪ್ರಕೃತಿಯೂ ಆ ಕೃಷ್ಣಪರಮಾತ್ಮನ ಅಂಶಜರು.

೮೫. ಆ ಕೃಷ್ಣಪರಮಾತ್ಮನು ದ್ವಿಭುಜ ಮತ್ತು ಚತುರ್ಭುಜಗಳಿಂದ ದ್ವಿರೂಪನಾದನು. ದ್ವಿಭುಜನು ಗೋಲೋಕದಲ್ಲಿಯೂ, ಚತುರ್ಭುಜನು ವೈಕುಂಠದಲ್ಲಿಯೂ ನೆಲೆಸಿದನು.

೮೬. ಬ್ರಹ್ಮನು ಆದಿಯಾಗಿ ಒಂದು ಹುಲ್ಲುಕಡ್ಡಿಯವರೆಗಿರುವ ಸಮಸ್ತ ಸೃಷ್ಟಿಯೂ ಪ್ರಕೃತಿಸಂಬಂಧವಾದುದು. ಪ್ರಕೃತಿಸಂಬಂಧವಾದ ಸೃಷ್ಟಿಯೆಲ್ಲವೂ ನಶ್ವರವಾದುದು.

೮೭. ಸಕಲ ಸೃಷ್ಟಿಗೂ ಮೂಲವಾದುದು–ಸತ್ಯವೂ, ನಿತ್ಯವೂ, ಅನಾದಿಯೂ, ಸ್ವೇಚ್ಛಾಮಯವೂ, ನಿರ್ಲಿಪ್ತವೂ, ನಿರ್ಗುಣವೂ ಆದ ಆ ಪರಬ್ರಹ್ಮವಸ್ತುವೊಂದೇ.

೮೮. ಉಪಾಧಿರಹಿತವೂ, ನಿರಾಕಾರವೂ ಆದ ಆ ಪರಬ್ರಹ್ಮವು ಭಕ್ತಾನುಗ್ರಹಕ್ಕಾಗಿ ನೀಲಮೇಘಶ್ಯಾಮವಾದ ಅತಿಸುಂದರಾಕಾರವುಳ್ಳದ್ದಾಗಿರುವುದು.

ದ್ವಿಭುಜಂ ಮುರಲೀಹಸ್ತಂ ಗೋಪವೇಷಂ ಕಿಶೋರಕಂ ।
ಸರ್ವಜ್ಞಂ ಸರ್ವಸೇವ್ಯಂ ಚ ಪರಮಾತ್ಮಾನಮೀಶ್ವರಂ ॥ ೮೯ ॥

ಕರೋತಿ ಧಾತಾ ಬ್ರಂಹ್ಮಾಡಂ ಜ್ಞಾನಾತ್ಮಾ ಕಮಲೋದ್ಭವಃ ।
ಶಿವೋ ಮೃತ್ಯುಂಜಯಶ್ಚೈವ ಸಂಹರ್ತಾ ಸರ್ವತತ್ವವಿತ್ ॥ ೯೦ ॥

ಯಸ್ಯ ಜ್ಞಾನಾದ್ಯತ್ತಪಸಾ ಸರ್ವೇಶಸ್ತತ್ಸಮೋ ಮಹಾನ್ ।
ಮಹಾವಿಭೂತಿಯುಕ್ತಶ್ಚ ಸರ್ವಜ್ಞಃ ಸರ್ವದಾ ಸ್ವಯಂ ॥ ೯೧ ॥

ಸರ್ವವ್ಯಾಪೀ ಸರ್ವಪಾತಾ ಸ ದಾತಾ ಸರ್ವಸಂಪದಾಂ ।
ವಿಷ್ಣುಃ ಸರ್ವೇಶ್ವರಃ ಶ್ರೀಮಾನ್ಯಸ್ಯ ಜ್ಞಾನಾಜ್ಜಗತ್ಪತಿಃ ॥ ೯೨ ॥

ಮಹಾಮಾಯಾ ಚ ಪ್ರಕೃತಿಃ ಸರ್ವಶಕ್ತಿಮತೀಶ್ವರೀ ।
ಯದ್ಜ್ಞಾನಾದ್ಯಸ್ಯ ತಪಸಾ ಯದ್ಭಕ್ತ್ಯಾ ಯಸ್ಯ ಸೇವಯಾ ॥ ೯೩ ॥

೮೯–೯೦. ದ್ವಿಭುಜನೂ, ಮುರಲೀಧರನೂ, ಗೋಪಕಿಶೋರವೇಷಧಾರಿಯೂ, ಸರ್ವಜ್ಞನೂ, ಸರ್ವಪೂಜ್ಯನೂ, ಈಶ್ವರನೂ ಆದ ಆ ಪರಮಾತ್ಮನ ಸಂಬಂಧವಾದ ದಿವ್ಯಜ್ಞಾನದಿಂದಲೇ ನಾಭಿಕಮಲೋದ್ಭವನಾದ ಬ್ರಹ್ಮನು ಬ್ರಹ್ಮಾಂಡ ಸೃಷ್ಟಿಯನ್ನೂ, ಸರ್ವತತ್ವಜ್ಞಾನಿಯೂ, ಮೃತ್ಯುಂಜಯನೂ ಆದ ಶಿವನು ಸಂಹಾರ ಕಾರ್ಯವನ್ನೂ ಮಾಡುವರು.

೯೧. ಆ ಪರಮಾತ್ಮನ ದಿವ್ಯಜ್ಞಾದಿಂದಲೂ, ದಿವ್ಯತಪಸ್ಸಿನಿಂದಲೂ, ಸರ್ವೇಶ್ವರನಾದ ಶಿವನು ಅವನಿಗೆ ಸಮನಾಗಿಯೂ, ಮಹಾವಿಭೂತಿಯುತನಾಗಿಯೂ ಸರ್ವಜ್ಞನೂ, ಸರ್ವದಾತೃವೂ ಎನಿಸಿ ಕೊಂಡಿರುವನು.

೯೨. ಆ ಪರಮಾತ್ಮನ ಜ್ಞಾನಶಕ್ತಿಯಿಂದ ಸರ್ವವ್ಯಾಪಿಯೂ, ಸರ್ವೇಶ್ವರನೂ, ಜಗತ್ಪತಿಯೂ ಆದ ವಿಷ್ಣುವು ಜಗತ್ಪಾಲಕನೂ, ಸರ್ವಸಂಪತ್ಪ್ರದಾತೃವೂ ಆಗಿರುವನು.

೯೩. ಮಹಾ ಮಾಯಾಸ್ವರೂಪಿಣಿಯಾದ ಪ್ರಕೃತಿಯೂ ಕೂಡ ಆ ಪರಮಾತ್ಮನ ದಿವ್ಯಜ್ಞಾನ, ತಪಸ್ಸು, ಭಕ್ತಿಮತ್ತು ಸೇವೆಯಿಂದ ಸರ್ವಶಕ್ತಿಯುತಳಾಗಿರುವಳು.

ಸಾವಿತ್ರೀ ವೇದಮಾತಾ ಚ ವೇದಾಧಿಷ್ಠಾತೃದೇವತಾ ।
ಪೂಜ್ಯಾ ದ್ವಿಜಾನಾಂ ವೇದಜ್ಞಾ ಯಜ್ಞಾದ್ಯಸ್ಯಾಶ್ಚ ಸೇವಯಾ ॥ ೯೪ ॥

ಸರ್ವವಿದ್ಯಾಧಿದೇವೀ ಸಾ ಪೂಜ್ಯಾ ಚ ವಿದುಷಾಂ ಪುರಾ ।
ಯತ್ಸೇವಯಾ ಯತ್ತಪಸಾ ಯಸ್ಯ ಜ್ಞಾನಾತ್ಸರಸ್ವತೀ ॥ ೯೫ ॥

ಯತ್ಸೇವಯಾ ಯತ್ತಪಸಾ ಪ್ರದಾತ್ರೀ ಸರ್ವಸಂಪದಾಂ ।
ಧನಸ್ಯಾಧಿದೇವೀ ಸಾ ಮಹಾಲಕ್ಷ್ಮೀಃ ಸನಾತನೀ ॥ ೯೬ ॥

ಯತ್ಸೇವಯಾ ಯತ್ತಪಸಾ ಸರ್ವವಿಶ್ವೇಷು ಪೂಜಿತಾ ।
ಸರ್ವಗ್ರಾಮಾಧಿದೇವೀ ಸಾ ಸರ್ವಸಂಪತ್ಪ್ರದಾಯಿನೀ ॥ ೯೭ ॥

ಸರ್ವೇಶ್ವರೀ ಸರ್ವವಂದ್ಯಾ ಸರ್ವೇಶಂ ಪ್ರಾಪ ಯಾ ಪತಿಂ ।
ಸರ್ವಸ್ತುತಾ ಚ ಸರ್ವಜ್ಞಾ ದುರ್ಗಾ ದುರ್ಗತಿನಾಶಿನೀ ॥ ೯೮ ॥

---

೯೪. ವೇದಮಾತೆಯೂ,ವೇದಕ್ಕೆ ಆಶ್ರಯದೇವತೆಯೂ ಆದ ಸಾವಿತ್ರಿಯೂ ಕೂಡ ಆ ಪರಮಾತ್ಮನ ದಿವ್ಯಜ್ಞಾನ ಮತ್ತು ಸೇವೆಯಿಂದ ದ್ವಿಜರಿಗೆಲ್ಲ ಪೂಜ್ಯಳಾಗಿರುವಳು.

೯೫. ಸರ್ವವಿದ್ಯಾಧಿ ದೇವಿಯಾದ ಸರಸ್ವತಿಯೂ ಕೂಡ ಆ ಪರಮಾತ್ಮನ ಸೇವೆ, ಜ್ಞಾನ ಮತ್ತು ತಪಸ್ಸುಗಳಿಂದ ವಿದ್ವಾಂಸರಿಗೆಲ್ಲ ಪೂಜ್ಯಳಾಗಿರುವಳು.

೯೬. ಅನಾದಿಯಾದ ಮಹಾಲಕ್ಷ್ಮಿಯೂ ಕೂಡ ಪರಮಾತ್ಮನ ಸೇವಾ ತಪಸ್ಸುಗಳಿಂದ ಸರ್ವಸಂಪತ್ಪ್ರದಾತ್ರಿಯೂ, ಧನ ಧಾನ್ಯಕ್ಕೆ ಅಧಿದೇವತೆಯೂ ಆಗಿರುವಳು.

೯೭–೯೮. ಆ ಪರಮಾತ್ಮನ ಸೇವಾ ಮತ್ತು ತಪಸ್ಸುಗಳಿಂದಲೇ ದುರ್ಗಾದೇವಿಯೂ ಕೂಡ ಸರ್ವೇಶ್ವರನಾದ ಶಿವನನ್ನೇ ಪತಿಯನ್ನಾಗಿ ಪಡೆದು, ನಿಖಿಲ ವಿಶ್ವದಲ್ಲೂ ಪೂಜಿತಳಾಗಿ ಸಮಸ್ತ ಗ್ರಾಮಾಧಿದೇವತೆಯೂ, ಸರ್ವಸಂಪತ್ಪ್ರದಾತ್ರಿಯೂ, ಸರ್ವೇಶ್ವರಿಯೂ, ಸರ್ವಪೂಜ್ಯಳೂ, ಸರ್ವಸ್ತುತಳೂ ಆಗಿರುವಳು.

ಕೃಷ್ಣವಾಮಾಂಶಸಂಭೂತಾ ಕೃಷ್ಣಪ್ರೇಮಾಧಿದೇವತಾ ।
ಕೃಷ್ಣಪ್ರಾಣಾಧಿಕಾ ಪ್ರೇಮ್ಣಾ ರಾಧಿಕಾ ಕೃಷ್ಣಸೇವಯಾ ॥ ೯೯ ॥

ಸರ್ವಾಧಿಕಂ ಚ ರೂಪಂ ಚ ಸೌಭಾಗ್ಯಂ ಮಾನಗೌರವಂ ।
ಕೃಷ್ಣವಕ್ಷಃಸ್ಥಲಸ್ಥಾನಂ ಪತ್ನೀತ್ವಂ ಪ್ರಾಪ ಸೇವಯಾ ॥ ೧೦೦ ॥

ತಪಶ್ಚಕಾರ ಸಾ ಪೂರ್ವಂ ಶತಶೃಂಗೇ ಚ ಪರ್ವತೇ ।
ದಿವ್ಯಂ ಯುಗಸಹಸ್ರಂ ಚ ನಿರಾಹಾರಾತಿಕರ್ಶಿತಾ ॥ ೧೦೧ ॥

ಕೃಶಾಂ ನಿಃಶ್ವಾಸರಹಿತಾಂ ದೃಷ್ಟ್ವಾ ಚಂದ್ರಕಲೋಪಮಾಂ ।
ಕೃಷ್ಣೋ ವಕ್ಷಃಸ್ಥಲೇ ಕೃತ್ವಾ ರುರೋದ ಕೃಪಯಾ ವಿಭುಃ ॥ ೧೦೨ ॥

ವರಂ ತಸ್ಯೈ ದದೌ ಸಾರಂ ಸರ್ವೇಷಾಮಪಿ ದುರ್ಲಭಂ ।
ಮಮ ವಕ್ಷಃಸ್ಥಲೇ ತಿಷ್ಠ ಮಯಿ ತೇ ಭಕ್ತಿರಸ್ತ್ವಿತಿ ॥ ೧೦೩ ॥

೯೯–೧೦೦. ಕೃಷ್ಣಪರಮಾತ್ಮನ ವಾಮಾರ್ಧಾಂಗದಿಂದ ಅವತರಿಸಿದವಳೂ, ಅವನ ಪ್ರಾಣಾಧಿದೇವತೆಯೂ, ಅವನ ಪ್ರಾಣಕ್ಕಿಂತ ಪ್ರಿಯಳೂ, ಆದ ರಾಧಾದೇವಿಯೂ ಕೂಡ ಕೃಷ್ಣಪರಮಾತ್ಮನ ಸೇವೆಮಾಡಿಯೇ, ಎಲ್ಲ ದೇವಿಯರಿಗಿಂತಲೂ ಅಧಿಕವಾದ ಸೌಂದರ್ಯ ಸೌಭಾಗ್ಯಗಳನ್ನೂ, ಮಾನಗೌರವಗಳನ್ನೂ ಪಡೆದು ಅವನ ವಕ್ಷಃಸ್ಥಲದಲ್ಲಿ ನೆಲೆಸಿದ್ದಾಳೆ.

೧೦೧. ಆ ರಾಧಾದೇವಿಯು ಪೂರ್ವದಲ್ಲಿ ಶತಶೃಂಗಪರ್ವತದಲ್ಲಿ ಆಹಾರವನ್ನು ಬಿಟ್ಟು ಅತಿಕೃಶಳಾಗಿ ಶ್ರೀಕೃಷ್ಣನನ್ನು ಕುರಿತು ದಿವ್ಯ ಸಹಸ್ರಯುಗಗಳಕಾಲ ತಪವೆಸಗಿದಳು.

೧೦೨. ಅತ್ಯಂತ ಕೃಶಳೂ, ನಿಶ್ವಾಸರಹಿತಳೂ ಆಗಿ ಪಾಡ್ಯಮಿ ಚಂದ್ರನ ಕಲೆಯಂತಿರುವ ಆ ರಾಧೆಯನ್ನು ನೋಡಿ ಕೃಷ್ಣಪರಮಾತ್ಮನು ಅವಳಿಗೆ ತನ್ನ ವಕ್ಷಃಸ್ಥಲದಲ್ಲಿ ಸ್ಥಳಕೊಟ್ಟು ಬಹಳ ಕರುಣೆದೋರಿದನು.

೧೦೩. ಆಗ ಶ್ರೀಕೃಷ್ಣನು "ನನ್ನ ವಕ್ಷಃಸ್ಥಲದಲ್ಲಿ ನೀನು ಯಾವಾಗಲೂ ನೆಲೆಸಿರು. ನನ್ನಲ್ಲಿ ನಿನಗೆ ಅಚಲವಾದ ಭಕ್ತಿಯುಂಟಾಗಲಿ" ಎಂದು ಇತರರಿಗೆ ದುರ್ಲಭವಾದ ವರವನ್ನು ಕೊಟ್ಟನು.

ಸೌಭಾಗ್ಯೇನ ಚ ಮಾನೇನ ಪ್ರೇಮ್ಣಾ ವೈ ಗೌರವೇಣ ಚ ।
ತ್ವಂ ಮೇ ಶ್ರೇಷ್ಠಾ ಪರಂ ಪ್ರೇಮ್ಣಾ ಜ್ಯೇಷ್ಠಾ ತ್ವಂ ಸರ್ವಯೋಷಿತಾಂ ॥

ವರಿಷ್ಠಾ ಚ ಗರಿಷ್ಠಾ ಚ ಸಂಸ್ತುತಾ ಪೂಜಿತಾ ಮಯಾ ।
ಸಂತತಂ ತವ ಸಾಧ್ಯೋಽಹಂ ಬಾಧ್ಯಶ್ಚ ಪ್ರಾಣವಲ್ಲಭೇ ॥ ೧೦೫ ॥

ಇತ್ಯುಕ್ತ್ವಾ ಜಗತಾಂ ನಾಥಶ್ಚಕ್ರೇ ತಚ್ಚೇತನಾಂ ತತಃ ।
ಸಪತ್ನೀರಹಿತಾಂ ತಾಂ ಚ ಚಕಾರ ಪ್ರಾಣವಲ್ಲಭಾಂ ॥ ೧೦೬ ॥

ಯೇಷಾಂ ಯಾ ಯಾಶ್ಚ ದೇವ್ಯೋ ವೈ ಪೂಜಿತಾಸ್ತಸ್ಯ ಸೇವಯಾ ।
ತಪಸ್ಯಾ ಯಾದೃಶೀ ಯಾಸಾಂ ತಾಸಾಂ ತಾದೃಕ್ಫಲಂ ಮುನೇ ॥ ೧೦೭ ॥

ದಿವ್ಯಂ ವರ್ಷಸಹಸ್ರಂ ಚ ತಪಸ್ತಪ್ತ್ವಾ ಹಿಮಾಲಯೇ ।
ದುರ್ಗಾ ಚ ತತ್ಪದಂ ಧ್ಯಾತ್ವಾ ಸರ್ವಪೂಜ್ಯಾ ಬಭೂವ ಹ ॥ ೧೦೮ ॥

---

೧೦೪. ಸೌಭಾಗ್ಯ. ಪ್ರೇಮ, ಮಾನ ಮತ್ತು ಗೌರವಗಳಲ್ಲಿಯೂ, ನೀನು ಎಲ್ಲ ದೇವಿಯರಗಿಂತಲೂ ಶ್ರೇಷ್ಠಳೂ, ಜ್ಯೇಷ್ಠಳೂ ಆಗಿರುವೆ.

೧೦೫. ನನಗಿಂತ ವರಿಷ್ಠಳೂ, ಗರಿಷ್ಠಳೂ ಆದ ನಿನ್ನನ್ನು ನಾನು ಯಾವಾಗಲೂ ಸ್ತುತಿಸಿ ಪೂಜಿಸುವೆನು. ಪ್ರಾಣವಲ್ಲಭೆಯಾದ ನಿನಗೆ ನಾನು ಯಾವಾಗಲೂ ಸಾಧ್ಯನೂ, ಮತ್ತು ಬಾಧ್ಯನೂ ಕೂಡ ಆಗುವೆನು.

೧೦೬. ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನು ಇಂತು ನುಡಿದು ತನ್ನ ಚೇತನಾಸ್ವರೂಪಳಾದ ಆ ರಾಧೆಯನ್ನು ಸಪತ್ನೀರಹಿತಳಾದ ತನ್ನ ಪ್ರಾಣ ಪ್ರಿಯಳನ್ನಾಗಿ ಮಾಡಿಕೊಂಡನು.

೧೦೭. ಉಳಿದ ದೇವಿಯರೂ ಕೂಡ ತಮ್ಮ ಸೇವಾನುಗುಣವಾದ ಗೌರವ ಪೂಜೆಗಳನ್ನು ಪಡೆವರು. ಎಲೈ ನಾರದನೇ, ಯಾರ ಯಾರ ತಪಸ್ಸು ಎಷ್ಟರ ಮಟ್ಟಿಗಿದೆಯೋ ಅದಕ್ಕನುಗುಣವಾದ ಫಲವು ಒದಗುವುದು ಖಂಡಿತ.

೧೦೮. ದುರ್ಗಾದೇವಿಯೂ ಕೂಡ ಹಿಮಾಲಯ ಪರ್ವತದಲ್ಲಿ ದಿವ್ಯ ಸಹಸ್ರವರ್ಷಗಳಕಾಲ ತಪಸ್ಸು ಮಾಡಿ ಪರಮಾತ್ಮನ ಪಾದಧ್ಯಾನದಿಂದ ಸರ್ವ ಪೂಜ್ಯಳಾದಳು.

ಸರಸ್ವತೀ ತಪಸ್ತಪ್ತ್ವಾ ಪರ್ವತೇ ಗಂಧಮಾದನೇ ।
ಲಕ್ಷವರ್ಷಂ ಚ ದಿವ್ಯಂ ಚ ಸರ್ವವಂದ್ಯಾ ಬಭೂವ ಸಾ ॥ ೧೦೯ ॥

ಲಕ್ಷ್ಮೀರ್ಯುಗಶತಂ ದಿವ್ಯಂ ತಪಸ್ತಪ್ತ್ವಾ ಚ ಪುಷ್ಕರೇ ।
ಸರ್ವಸಂಪತ್ಪ್ರದಾತ್ರೀ ಸಾ ಚಾಭವತ್ತಸ್ಯ ಸೇವಯಾ ॥ ೧೧೦ ॥

ಸಾವಿತ್ರೀ ಮಲಯೇ ತಪ್ತ್ವಾ ದ್ವಿಜಪೂಜ್ಯಾ ಬಭೂವ ಸಾ ।
ಷಷ್ಠಿವರ್ಷಸಹಸ್ರಂ ಚ ದಿವ್ಯಂ ಧ್ಯಾತ್ವಾ ಚ ತತ್ಪದಂ ॥ ೧೧೧ ॥

ಶತಮನ್ವಂತರಂ ತಪ್ತಂ ಶಂಕರೇಣ ಪುರಾ ವಿಭೋ ।
ಶತಮನ್ವಂತರಂ ಚೈವ ಬ್ರಹ್ಮಣಾ ತಸ್ಯ ಭಕ್ತಿತಃ ॥ ೧೧೨ ॥

ಶತಮನ್ವಂತರಂ ವಿಷ್ಣುಸ್ತಪ್ತ್ವಾ ಪಾತಾ ಬಭೂವ ಹ ।
ಶತಮನ್ವಂತರಂ ಧರ್ಮಸ್ತಪ್ತ್ವಾ ಪೂಜ್ಯೋ ಬಭೂವ ಹ ॥ ೧೧೩ ॥

---

೧೦೯. ಸರಸ್ವತಿದೇವಿಯು ಗಂಧಮಾದನ ಪರ್ವತದಲ್ಲಿ ದಿವ್ಯ ಲಕ್ಷವರ್ಷ ಕಾಲ ಪರಮಾತ್ಮನನ್ನು ಕುರಿತು ತಪಸ್ಸು ಮಾಡಿ ಸರ್ವಪೂಜ್ಯಳಾದಳು.

೧೧೦. ಲಕ್ಷ್ಮಿದೇವಿಯು ಪುಷ್ಕರಕ್ಷೇತ್ರದಲ್ಲಿ ನೂರು ದಿವ್ಯ ಯುಗಗಳಕಾಲ ಪರಮಾತ್ಮನನ್ನು ಕುರಿತು ತಪಸ್ಸು ಮಾಡಿ ಸಕಲಸಂಪತ್ತಿಗೂ ಅಧಿದೇವತೆಯಾದಳು.

೧೧೧. ಸಾವಿತ್ರಿದೇವಿಯು ಮಲಯಪರ್ವತದಲ್ಲಿ ಅರವತ್ತು ಸಾವಿರ ದಿವ್ಯ ವರ್ಷಗಳ ಕಾಲ ಕೃಷ್ಣಪರಮಾತ್ಮನ ಪಾದಧ್ಯಾನ ಮಾಡಿ ದ್ವಿಜರಿಗೆಲ್ಲ ಪೂಜ್ಯಳಾದಳು.

೧೧೨. ಅಂತೆಯೇ, ಶಂಕರನೂ, ಬ್ರಹ್ಮನೂ ಕೂಡ ತಮ್ಮ ತಮ್ಮ ಅಧಿಕಾರ ವನ್ನು ಹೊಂದಲು ನೂರು ಮನ್ವಂತರಗಳಕಾಲ ಪರಮಾತ್ಮನನ್ನು ಕುರಿತು ತಪಸ್ಸು ಮಾಡಿದರು.

೧೧೩. ವಿಷ್ಣುವೂ ಕೂಡ ಕೃಷ್ಣಪರಮಾತ್ಮನನ್ನು ಕುರಿತು ನೂರು ಮನ್ವಂತರಗಳ ಕಾಲ ತಪಸ್ಸನ್ನು ಮಾಡಿ ಸರ್ವರಕ್ಷಕನಾದನು. ಧರ್ಮದೇವನೂ ನೂರು ಮನ್ವಂತರಗಳ ಕಾಲ ತಪಿಸಿ ಪೂಜ್ಯನಾದನು.

ಮನ್ವಂತರಂ ತಪಸ್ತೇಪೇ ಶೇಷೋ ಭಕ್ತ್ಯಾ ಚ ನಾರದ ।
ಮನ್ವಂತರಂ ಚ ಸೂರ್ಯಶ್ಚ ಶಕ್ರಶ್ಚಂದ್ರಸ್ತಥಾ ಗುರುಃ ॥ ೧೧೪ ॥

ದಿವ್ಯಂ ಶತಯುಗಂ ಚೈವ ವಾಯುಸ್ತಪ್ತ್ವಾ ಚ ಭಕ್ತಿತಃ ।
ಸರ್ವಪ್ರಾಣಃ ಸರ್ವಪೂಜ್ಯಃ ಸರ್ವಾಧಾರೋ ಬಭೂವ ಸಃ ॥ ೧೧೫ ॥

ಏವಂ ಕೃಷ್ಣಸ್ಯ ತಪಸಾ ಸರ್ವೇ ದೇವಾಶ್ಚ ಪೂಜಿತಾಃ ।
ಮುನಯೋ ಮಾನವಾ ಭೂಪಾ ಬ್ರಾಹ್ಮಣಾಶ್ಚೈವ ಪೂಜಿತಾಃ ॥ ೧೧೬ ॥

ಏವಂ ತೇ ಕಥಿತಂ ಸರ್ವಂ ಪುರಾಣಂ ಚ ತಥಾಗಮಂ ।
ಗುರುವಕ್ತ್ರಾದ್ಯಥಾ ಜ್ಞಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೧೭ ॥

ಇತಿ ಶ್ರೀಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದ ನಾರಾಯಣಸಂವಾದೇ ಯುಗ-ತನ್ಮಹಾತ್ಮ್ಯ-ಮನ್ವಂತರಕಾಲೇಶ್ವರ-ಗುಣನಿರೂಪಣಂ ನಾಮ ಸಪ್ತಮೋಽಧ್ಯಾಯಃ

---

೧೧೪. ಎಲೈ ನಾರದನೇ, ಆದಿಶೇಷನೂ, ದೇವೇಂದ್ರನೂ, ಸೂರ್ಯಚಂದ್ರರೂ ಮತ್ತು ಬೃಹಸ್ಪತಿಯೂ ಕೂಡ ಮನ್ವಂತರಗಳಕಾಲ ತಪವೆಸಗಿ ವರಪಡೆದರು.

೧೧೫. ವಾಯುದೇವನು ದಿವ್ಯಶತಯುಗಗಳಕಾಲ ಭಕ್ತಿಯಿಂದ ತಪಸ್ಸನ್ನು ಮಾಡಿ ಸರ್ವರಿಗೂ ಪ್ರಾಣಸ್ವರೂಪನೂ, ಸರ್ವಾಧಾರನೂ, ಸರ್ವಪೂಜ್ಯನೂ ಆದನು.

೧೧೬. ಈ ರೀತಿಯಾಗಿ ಕೃಷ್ಣಪರಮಾತ್ಮನನ್ನು ಕುರಿತು ಭಕ್ತಿಯಿಂದ ತಪವೆಸಗಿರುದರಿಂದಲೇ ಸರ್ವದೇವತೆಗಳೂ, ಮುನಿಮಾನವರೂ, ಬ್ರಾಹ್ಮಣರೂ ರಾಜರೂ ಪೂಜ್ಯರಾದರು.

೧೧೭. ಎಲೈ ನಾರದನೇ, ಇಂತು ನಾನು ಗುರುಮುಖದಿಂದ ತಿಳಿದ ಪುರಾಣವನ್ನು ಶಾಸ್ತ್ರೋಕ್ತವಾಗಿ ವಿವರಿಸಿರುವೆನು ನಿನಗೆ ಮತ್ತೇನು ಕೇಳಲು ಆಶೆಯಿದೆ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ನಾರದನಾರಯಣಸಂವಾದರೂಪವಾದ ಪ್ರಕೃತಿಖಂಡದಲ್ಲಿ ಯುಗಮಾಹಾತ್ಮ್ಯ, ಮನ್ವಂತರಕಾಲ, ಈಶ್ವರಗುಣ ಮುಂತಾದುವುಗಳನ್ನು ನಿರೂಪಿಸುವ ಏಳನೆಯ ಅಧ್ಯಾಯವು ಮುಗಿದುದು.

ಏಳನೆಯ ಅಧ್ಯಾಯದ ಸಾರಾಂಶವು

ಸರಸ್ವತಿಯು ಗಂಗೆಯ ಶಾಪದಂತೆ ಭರತಖಂಡದಲ್ಲಿ ನದೀರೂಪದಿಂದ ಅವತರಿಸಿ ಪರಮಪವಿತ್ರಳೆನಿಸಿದಳು. ಗಂಗೆ ಮತ್ತು ಲಕ್ಷ್ಮಿಯೂ ಕೂಡ ಸರಸ್ವತಿಯ ಶಾಪಕ್ಕೊಳಗಾಗಿ ನದೀರೂಪದಿಂದ ಅವತರಿಸಿ ಪರಮಪಾವನೆಯರಾದರು. ಕಲಿಯುಗದ ಐದುಸಾವಿರವರ್ಷಗಳು ಕಳೆದನಂತರ ಇವರೆಲ್ಲರೂ ಶಾಪವಿಮುಕ್ತರಾಗಿ ತಮ್ಮ ಸ್ಥಾನಕ್ಕೆ ಹಿಂತಿರುಗುವರು. ಆಗ ಕಾಶಿ, ಬೃಂದಾವನ ಮುಂತಾದ ಪುಣ್ಯ ಕ್ಷೇತ್ರಗಳ ಮಹಿಮೆಯೂ ದೂರವಾಗುವುದು. ಕಲಿಯುಗದ ಹತ್ತುಸಾವಿರವರ್ಷಗಳು ಕಳೆದನಂತರ ವಿಷ್ಣುಭಕ್ತರೂ, ಪುಣ್ಯಕರ್ಮಗಳೂ ಕಣ್ಮರೆಯಾಗುವುದಲ್ಲದೆ ಚಾತುರ್ವರ್ಣ್ಯದವರೂ ತಮತಮಗೆ ವಿಹಿತವಾದ ಕರ್ಮಗಳನ್ನು ಬಿಟ್ಟು ಅದಕ್ಕೆ ವ್ಯತಿರಿಕ್ತವಾದ ಕರ್ಮಗಳನ್ನು ಆಚರಿಸುವರು. ಸ್ತ್ರೀಯರು ದುಷ್ಟರಾಗಿ ವರ್ಣ ಸಾಂಕರ್ಯಕ್ಕೆ ಕಾರಣರಾಗುವರು. ಸತ್ಯ, ಅಹಿಂಸೆ, ದಯೆ, ಧರ್ಮ ಮುಂತಾದ ಪವಿತ್ರಗುಣಗಳೆಲ್ಲ ಮಾಯವಾಗಿ ಎಲ್ಲೆಲ್ಲೂ ಅಸತ್ಯ, ಹಿಂಸೆ, ನಿರ್ದಯತೆ, ಅಧರ್ಮ ಮುಂತಾದ ದುಷ್ಟಗುಣಗಳು ತಾಂಡವಾಡುವುವು. ಮ್ಲೇಚ್ಛರ ಹಾವಳಿಯು ಬಹಳ ಜಾಸ್ತಿಯಾಗಿ ಪ್ರಪಂಚವು ಕ್ಷೋಭೆಗೊಳ್ಳುವುದು. ಭೂಭಾರವು ಜಾಸ್ತಿಯಾದುದನ್ನು ತಿಳಿದು ಆಗ ನಾರಾಯಣನ ಕಲಾಂಶದಿಂದ ಕಲ್ಕಿಯು ಅವತರಿಸಿ ಮ್ಲೇಚ್ಛರನ್ನೆಲ್ಲ ನಿರ್ಮೂಲಗೊಳಿಸುವನು. ಅನಂತರ ಪ್ರಳಯಮೇಘಗಳು ಮಳೆಗರೆದು ಪ್ರಪಂಚವನ್ನು ತೋಯಿಸಿದನಂತರ ದ್ವಾದಶಾದಿತ್ಯರು ಉದಯಿಸಿ ಪ್ರಪಂಚವನ್ನು ಶೋಷಿಸುವರು. ಮುಂದೆ ಪುನಃ ಕೃತಾದಿಯುಗಗಳು ಕ್ರಮವಾಗಿ ಮರಳುವುವು. ಸತ್ಯ, ಧರ್ಮಗಳೆಲ್ಲ ಪುನಃ ಪರಿಪೂರ್ಣವಾಗುವುವು. ಈರೀತಿ ಚತುರ್ಮುಖಬ್ರಹ್ಮನ ನೂರೆಂಟುವರ್ಷಗಳು ಕಳೆದನಂತರ ಪ್ರಾಕೃತಪ್ರಳಯವಾಗಿ ಪರಬ್ರಹ್ಮನಲ್ಲಿ ಎಲ್ಲವೂ ಐಕ್ಯವಾಗುವುದು. ಪುನಃ ಪರಬ್ರಹ್ಮನು ಸೃಷ್ಟ್ಯುನ್ಮುಖನಾದಾಗ ಕ್ರಮವಾಗಿ ಎಲ್ಲವೂ ವ್ಯಕ್ತವಾಗಿ ತಪೋಮಹಿಮೆಯಿಂದ ತಮ್ಮ ತಮ್ಮ ಸಂಸ್ಕಾರಾನುಗುಣವಾದ ಸ್ಥಿತಿಯನ್ನು ಪಡೆಯುವುವು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಅಷ್ಟಮೋಽಧ್ಯಾಯಃ ॥

॥ ನಾರದ ಉವಾಚ ॥

ಹರೇರ್ನಿಮೇಷಮಾತ್ರೇಣ ಬ್ರಹ್ಮಣಃ ಪಾತ ಏವ ಚ ।
ತಸ್ಯ ಪಾತೇ ಪ್ರಾಕೃತಿಕಃ ಪ್ರಲಯಃ ಪರಿಕೀರ್ತಿತಃ ॥ ೧ ॥

ಪ್ರಲಯೇ ಪ್ರಾಕೃತೇ ಚೋಕ್ತಂ ತತ್ರಾದೃಷ್ಟಾ ವಸುಂಧರಾ ।
ಜಲಪ್ಲುತಾನಿ ವಿಶ್ವಾನಿ ಸರ್ವೇ ಲೀನಾ ಹರಾವಿತಿ ॥ ೨ ॥

ವಸುಂಧರಾ ತಿರೋಭೂತಾ ಕುತ್ರ ವಾ ತತ್ರ ತಿಷ್ಠತಿ ।
ಸೃಷ್ಟೇರ್ವಿಧಾನಸಮಯೇ ಸಾವಿರ್ಭೂತಾ ಕಥಂ ಪುನಃ ॥ ೩ ॥

ಎಂಟನೆಯ ಅಧ್ಯಾಯವು

೧–೨. ನಾರದ :—ಎಲೈ ಮಹರ್ಷಿಯೇ, ಶ್ರೀಕೃಷ್ಣಪರಮಾತ್ಮನು ರೆಪ್ಪೆ ಹೊಡೆಯುವುದರೊಳಗೆ ಚತುರ್ಮುಖಬ್ರಹ್ಮನ ಪತನವಾಗುವುದೆಂದೂ, ಆ ಪತನವು ಪ್ರಕೃತಿಕೃತವಾದುದರಿಂದ ಪ್ರಾಕೃತಿಕಪ್ರಳಯವೆನಿಸಿಕೊಳ್ಳುವುದೆಂದೂ, ಪ್ರಾಕೃತಿಕ ಪ್ರಳಯದಲ್ಲಿ ವಿಶ್ವವೆಲ್ಲವೂ ನೀರಿನಲ್ಲಿ ತೋಯ್ದು ಶ್ರೀಕೃಷ್ಣಪರಮಾತ್ಮನಲ್ಲಿ ಲೀನವಾಗುವುದೆಂದೂ, ವಸುಂಧರೆಯು ಕಣ್ಮರೆಯಾಗುವಳೆಂದೂ ತಿಳಿಸಿದೆಯಲ್ಲವೆ ?

೩. ಕಣ್ಮರೆಯಾದ ಆ ವಸುಂಧರೆಯು ಪ್ರಳಯಕಾಲದಲ್ಲಿ ಎಲ್ಲಿರುವಳು? ಪುನಃ ಸೃಷ್ಟಿಕಾಲದಲ್ಲಿ ಅವಳು ಆವಿರ್ಭವಿಸುವುದು ಹೇಗೆ ?

ಕಥಂ ಬಭೂವ ಸಾ ಧನ್ಯಾ ಮಾನ್ಯಾ ಸರ್ವಾಶ್ರಯಾ ಜಯಾ ।
ತಸ್ಯಾಶ್ಚ ಜನ್ಮವಿಸ್ತಾರಂ ವದ ಮಂಗಲಕಾರಣಂ ॥ ೪ ॥

॥ ಶ್ರೀ ನಾರಾಯಣ ಉವಾಚ ॥

ಸರ್ವಾದಿಸೃಷ್ಟೌ ಸರ್ವೇಷಾಂ ಜನ್ಮ ಕೃಷ್ಣಾದಿತಿ ಶ್ರುತಿಃ ।
ಆವಿರ್ಭಾವಸ್ತಿರೋಭಾವಃ ಸರ್ವೇಷು ಪ್ರಲಯೇಷು ಚ ॥ ೫ ॥

ಶ್ರೂಯತಾಂ ವಸುಧಾಜನ್ಮ ಸರ್ವಮಂಗಲಮಂಗಲಂ ।
ವಿಘ್ನನಿಘ್ನಂ ಪರಂ ಪಾಪನಾಶನಂ ಪುಣ್ಯವರ್ಧನಂ ॥ ೬ ॥

ಅಹೋ ಕೇಚಿದ್ವದಂತೀತಿ ಮಧುಕೈಟಭಮೇದಸಾ ।
ಬಭೂವ ವಸುಧಾ ಧನ್ಯಾ ತದ್ವಿರುದ್ಧಮತಂ ಶೃಣು ॥ ೭ ॥

---

೪. ಧನ್ಯಳೂ, ಮಾನ್ಯಳೂ, ಸರ್ವರಿಗೂ ಆಶ್ರಯಳೂ, ಜಯಸ್ವರೂಪಳೂ, ಮಂಗಳಗ್ರಹೋತ್ಪತ್ತಿಗೆ ಕಾರಣಳೂ ಆದ ಆ ವಸುಂಧರೆಯ ಜನ್ಮವೃತ್ತಾಂತವನ್ನು ವಿಷದವಾಗಿ ತಿಳಿಸು.

೫. ನಾರಾಯಣ :—ಆದಿಸೃಷ್ಟಿಯಲ್ಲಿ ಸಮಸ್ತವೂ ಶ್ರೀಕೃಷ್ಣಪರಮಾತ್ಮನಿಂದ ಸೃಷ್ಟವಾಯಿತೆಂದು ವೇದೋಕ್ತವಾಗಿದೆ. ಸಮಸ್ತ ಪ್ರಳಯದಲ್ಲೂ ಉತ್ಪತ್ತಿ ವಿನಾಶಗಳು ಶ್ರೀಕೃಷ್ಣನಿಂದಲೇ ಆಗುವುವು.

೬. ಈಗ ಮಂಗಳಕ್ಕೆಲ್ಲ ಮಂಗಳವೂ, ವಿಘ್ನನಾಶಕವೂ, ಪಾಪಹಾರಕವೂ, ಪುಣ್ಯವರ್ಧಕವೂ ಆದ ವಸುಂಧರೆಯ ಜನ್ಮವೃತ್ತಾಂತವನ್ನು ವಿವರಿಸುವೆನು. ಸಾವಧಾನದಿಂದ ಕೇಳು.

೭. ಧನ್ಯಳಾದ ವಸುಂಧರೆಯು ಮಧುಕೈಟಭರ ಮೇದಸ್ಸಿನಿಂದ ಉತ್ಪತ್ತಿ ಪಡೆದಳೆಂದು ಕೆಲವರು ಹೇಳುವರು. ಮತ್ತೆ ಕೆಲವರು ಅದಕ್ಕೆ ವಿರುದ್ಧವಾಗಿ ಹೇಳುವರು.

ಊಚತುಸ್ತೌ ಪುರಾ ವಿಷ್ಣುಂ ತುಷ್ಟೌ ಯುದ್ಧೇನ ತೇಜಸಾ ।
ಆವಾಂ ಜಹಿ ನ ಯತ್ರೋರ್ವೀ ಪಯಸಾ ಸಂವೃತೇತಿ ಚ ॥ ೮ ॥

ತಯೋರ್ಜೀವನಕಾಲೇನ ಪ್ರತ್ಯಕ್ಷಾ ಚ ಭವೇತ್ಸ್ಫುಟಂ ।
ತತೋ ಬಭೂವ ಮೇದಶ್ಚ ಮರಣಾನಂತರಂ ತಯೋಃ ॥ ೯ ॥

ಮೇದಿನೀತಿ ಚ ವಿಖ್ಯಾತೇತ್ಯುಕ್ತಾ ಯೈಸ್ತನ್ಮತಂ ಶ್ರುಣು ।
ಜಲಧೌತಾ ಕೃಶಾ ಪೂರ್ವಂ ವರ್ಧಿತಾ ಮೇದಸಾ ಯತಃ ॥ ೧೦ ॥

ಕಥಯಾಮಿ ಚ ತಜ್ಜನ್ಮ ಸಾರ್ಥಕಂ ಸರ್ವಸಮ್ಮತಂ ।
ಪುರಾ ಶ್ರುತಂ ಚ ಶ್ರುತ್ಯುಕ್ತಂ ಧರ್ಮವಕ್ತ್ರಾಚ್ಚ ಪುಷ್ಕರೇ ॥ ೧೧ ॥

---

೮. ಪೂರ್ವದಲ್ಲಿ ಮಧುಕೈಟಭರು ಯುದ್ಧದಿಂದಲೂ, ತೇಜಸ್ಸಿನಿಂದಲೂ, ವಿಷ್ಣುವನ್ನು ತೃಪ್ತಿಗೊಳಿಸಿ, 'ಭೂಮಿಯು ನೀರಿನಿಂದ ಆವೃತವಾಗದಿರುವೆಡೆ ನಮ್ಮನ್ನು ಕೊಲ್ಲು' ಎಂಬುದಾಗಿ ಬೇಡಿಕೊಂಡರು.

೯. ಇದರಿಂದ ಅವರಿಬ್ಬರ ಜೀವನಕಾಲದಲ್ಲಿ ಭೂದೇವಿಯು ಇದ್ದಳೆಂಬುದು ಸ್ಪಷ್ಟವಾಗುವದು. ಅವರಿಬ್ಬರ ಮರಣಾನಂತರ ಅವರ ಶರೀರದಿಂದ ಮೇದಸ್ಸು ಉತ್ಪತ್ತಿಯಾಯಿತು.

೧೦. ಆ ಮೇದಸ್ಸಿನಿಂದ ಜನಿಸಿದಕಾರಣ ಭೂಮಿಗೆ 'ಮೇದಿನೀ' ಎಂಬ ಹೆಸರಾಯಿತೆಂದು ಮತ್ತೆ ಕೆಲವರು ಹೇಳುವರು. ಪ್ರಳಯದಲ್ಲಿ ನೀರಿನೊಳಗೆ ತೊಯ್ದುಹೋಗಿ ಕೃಶಳಾಗಿದ್ದ ಆ ಭೂಮಿಯು ಪುನಃ ಮಧುಕೈಟಭರ ಮೇದಸ್ಸಿನಿಂದ ವೃದ್ಧಿಗೊಂಡು ಮೇದಿನಿಯೆನಿಸಿಕೊಂಡಳು ಎಂಬುದು ಮತ್ತೊಂದು ಅಭಿಪ್ರಾಯ.

೧೧. ಈಗ ವೇದೋಕ್ತವೂ, ಪೂರ್ವದಲ್ಲಿ ಧರ್ಮಪುರುಷನ ಬಾಯಿನಿಂದ ಪುಷ್ಕರಕ್ಷೇತ್ರದಲ್ಲಿ ಶ್ರುತವೂ, ಸಾರ್ಥಕವೂ, ಆದ್ದರಿಂದಲೇ ಸರ್ವಸಮ್ಮತವೂ, ಆದ ಆ ಮೇದಿನಿಯ ಜನ್ಮವೃತ್ತಾಂತವನ್ನು ಹೇಳುವೆನು, ಕೇಳು.

ಮಹಾವಿರಾಟ್ಛರೀರಸ್ಯ ಜಲಸ್ಥಸ್ಯ ಚಿರಂ ಸ್ಫುಟಂ ।
ಮಲೋ ಬಭೂವ ಕಾಲೇನ ಸರ್ವಾಂಗವ್ಯಾಪಕೋ ಧ್ರುವಂ　　॥ ೧೨ ॥

ಸ ಚ ಪ್ರವಿಷ್ಟಃ ಸರ್ವೇಷಾಂ ತಲ್ಲೋಮ್ನಾಂ ವಿವರೇಷು ಚ ।
ಕಾಲೇನ ಮಹತಾ ತಸ್ಮಾದ್ಬಭೂವ ವಸುಧಾ ಮುನೇ　　॥ ೧೩ ॥

ಪ್ರತ್ಯೇಕಂ ಪ್ರತಿಲೋಮ್ನಾಂ ಚ ಸ್ಥಿತಾ ಕೂಪೇಷು ಸಾ ಸ್ಥಿರಾ ।
ಆವಿರ್ಭೂತಾ ತಿರೋಭೂತಾ ಸಾಚಲಾ ಚ ಪುನಃ ಪುನಃ　　॥ ೧೪ ॥

ಆವಿರ್ಭೂತಾ ಸೃಷ್ಟಿಕಾಲೇ ತಜ್ಜಲಾತ್ಸ್ವಯುರ್ಪಸ್ಥಿತಾ ।
ಪ್ರಲಯೇ ಚ ತಿರೋಭೂತಾ ಜಲಾಭ್ಯಂತರವಸ್ಥಿತಾ　　॥ ೧೫ ॥

ಪ್ರತಿವಿಶ್ವೇಷು ವಸುಧಾ ಶೈಲಕಾನನಸಂಯುತಾ ।
ಸಪ್ತಸಾಗರಸಂಯುಕ್ತಾ ಸಪ್ತದ್ವೀಪಮಿತಾ ಸತೀ　　॥ ೧೬ ॥

---

೧೨. ವಿಶ್ವಗೋಲಕದ ಜಲದಲ್ಲಿ ಬಹುಕಾಲದವರೆಗಿದ್ದ ಮಹಾವಿರಾಟ್ಪುರುಷನ ಅಂಗಾಂಗಗಳಿಗೆಲ್ಲಾ ಕೆಲವು ಕಾಲದಮೇಲೆ ಮಲವು (ಕೊಳೆಯು) ತುಂಬಿಕೊಂಡಿತು.

೧೩. ಅಲ್ಲದೆ ಆ ಮಲವು (ಕೊಳೆಯು) ಆ ಪುರುಷನ ರೋಮಕೂಪಗಳಲ್ಲೆಲ್ಲಾ ಹರಡಿಕೊಂಡಿತು. ಬಹಳ ಕಾಲದ ಮೇಲೆ ಆ ಮಲದಿಂದ ವಸುಧೆಯು ಉತ್ಪತ್ತಿ ಪಡೆದಳು.

೧೪. ಪ್ರತಿರೋಮಕೂಪಗಳಲ್ಲೂ ಬೇರೆ ಬೇರೆಯಾಗಿ ಅಡಗಿದ್ದು ಅಚಲಳೂ, ಸ್ಥಿರಳೂ, ಆದ ಆ ವಸುಧೆಯು ಆವಿರ್ಭಾವತಿರೋಭಾವಗಳನ್ನು ಪಡೆಯುತ್ತಿದ್ದಳು.

೧೫. ಸೃಷ್ಟಿಕಾಲದಲ್ಲಿ ಆ ನೀರಿನಿಂದ ಹೊರಕ್ಕೆ ಆವಿರ್ಭವಿಸುತ್ತಿದ್ದಳು. ಪ್ರಳಯದಲ್ಲಿ ಆ ನೀರಿನೊಳಗೇ ಕಣ್ಮರೆಯಾಗುತ್ತಿದ್ದಳು.

೧೬. ಪ್ರತಿವಿಶ್ವದಲ್ಲೂ ಇರುವ ಆ ವಸುಧೆಯು, ಪ್ರತ್ಯೇಕವಾಗಿ ಬೆಟ್ಟ ಮತ್ತು ಕಾಡುಗಳಿಂದಲೂ ಸಪ್ತಸಾಗರ ಮತ್ತು ಸಪ್ತದ್ವೀಪಗಳಿಂದಲೂ ಕೂಡಿರುವಳು.

ಹಿಮಾದ್ರಿಮೇರುಸಂಯುಕ್ತಾ ಗ್ರಹಚಂದ್ರಾರ್ಕಸಂಯುತಾ ।
ಬ್ರಹ್ಮವಿಷ್ಣುಶಿವಾದ್ಯೈಶ್ಚ ಸುರೈರ್ಲೋಕೈಸ್ತಥಾ ನುತಾ ॥ ೧೭ ॥

ಪುಣ್ಯತೀರ್ಥಸಮಾಯುಕ್ತಾ ಪುಣ್ಯಭಾರತಸಂಯುತಾ ।
ಕಾಂಚನೀಭೂಮಿಸಂಯುಕ್ತಾ ಸರ್ವದುರ್ಗಸಮನ್ವಿತಾ ॥ ೧೮ ॥

ಪಾತಾಲಾಃ ಸಪ್ತ ತದಧಸ್ತದೂರ್ಧ್ವೇ ಬ್ರಹ್ಮಲೋಕಕಃ ।
ಧ್ರುವಲೋಕಶ್ಚ ತತ್ರೈವ ಸರ್ವಂ ವಿಶ್ವಂ ಚ ತತ್ರ ವೈ ॥ ೧೯ ॥

ಏವಂ ಸರ್ವಾಣಿ ವಿಶ್ವಾನಿ ಪೃಥಿವ್ಯಾಂ ನಿರ್ಮಿತಾನಿ ವೈ ।
ಊರ್ಧ್ವಂ ಗೋಲೋಕವೈಕುಂಠೌ ನಿತ್ಯೌ ವಿಶ್ವಪರೌ ಚ ತೌ ॥ ೨೦ ॥

---

೧೭. ಹಿಮವತ್ಪರ್ವತ ಮತ್ತು ಮೇರುಪರ್ವತಗಳಿಂದಲೂ, ಸೂರ್ಯ ಚಂದ್ರಾದಿಗ್ರಹಗಳಿಂದಲೂ, ಬ್ರಹ್ಮವಿಷ್ಣುಮಹೇಶ್ವರರಿಂದಲೂ, ದೇವತೆಗಳಿಂದಲೂ ಪ್ರತ್ಯೇಕವಾಗಿ ತುಂಬಿರುವ ಆ ವಸುಧೆಯು ಸಕಲರಿಂದಲೂ ಸ್ತುತ್ಯಳಾದಳು.

೧೮. ಆ ವಸುಧೆಯು ಅನೇಕ ಪುಣ್ಯತೀರ್ಥಗಳಿಂದಲೂ, ಪುಣ್ಯಕರವಾದ ಭರತಖಂಡದಿಂದಲೂ, ಸುವರ್ಣಮಯವಾದ ಭೂಮಿಗಳಿಂದಲೂ ಕೂಡಿ ಅನೇಕ ಕೋಟೆಕೊತ್ತಲಗಳಿಂದ ಪರಿವೃತವಾಗಿದ್ದಾಳೆ.

೧೯. ಆ ವಸುಧೆಯಿಂದ ಕೆಳಕ್ಕೆ ಪಾತಾಳದವರೆಗೆ ಸಪ್ತಲೋಕಗಳೂ, ಅಲ್ಲಿಂದ ಮೇಲಕ್ಕೆ ಬ್ರಹ್ಮಲೋಕದವರೆಗೆ ಸಪ್ತಲೋಕಗಳೂ ಇವೆ. ಧ್ರುವಲೋಕವವರೆಗಿರುವ ಸಮಸ್ತವಿಶ್ವವೂ ಅಲ್ಲಿ ಅಡಗಿದೆ

೨೦. ಈ ರೀತಿಯಾಗಿ ನಿಖಿಲವಿಶ್ವವೂ ಪೃಥಿವಿಯಲ್ಲಿ ನಿರ್ಮಿತವಾಗಿದೆ. ಎಲ್ಲಕ್ಕಿಂತಲೂ ಮೇಲೆ ನಿತ್ಯವೂ, ವಿಶ್ವಶ್ರೇಷ್ಠವೂ ಆದ ಗೋಲೋಕ ವೈಕುಂಠ ಲೋಕಗಳು ಇವೆ.

ನಶ್ವರಾಣಿ ಚ ವಿಶ್ವಾನಿ ಕೃತ್ರಿಮಾಕೃತ್ರಿಮಾಣಿ ಚ ।
ಪ್ರಲಯೇ ಪ್ರಾಕೃತೇ ಬ್ರಹ್ಮನ್ ಬ್ರಹ್ಮಣಶ್ಚ ನಿಪಾತನೇ　　॥ ೨೦ ॥

ಮಹಾವಿರಾಡಾದಿಸೃಷ್ಟೌ ಸೃಷ್ಟಃ ಕೃಷ್ಣೇನ ಚಾತ್ಮನಾ ।
ನಿತ್ಯೇ ಸ್ಥಿತಃ ಸ ಪ್ರಲಯೇಕಾಷ್ಠಾಕಾಶೇಶ್ವರೈಃ ಸಹ　　॥ ೨೨ ॥

ಕ್ಷಿತ್ಯಧಿಷ್ಠಾತೃದೇವೀ ಸಾ ವಾರಾಹೇ ಪೂಜಿತಾ ಸುರೈಃ ।
ಮನುಭಿರ್ಮುನಿಭಿರ್ವಿಪ್ರೈರ್ಗಂಧರ್ವಾದಿಭಿರೇವ ಚ　　॥ ೨೩ ॥

ವಿಷ್ಣೋರ್ವರಾಹರೂಪಸ್ಯ ಪತ್ನೀ ಸಾ ಶ್ರುತಿಸಮ್ಮತಾ ।
ತತ್ಪುತ್ರೋ ಮಂಗಲೋ ಜ್ಞೇಯಃ ಸುಯಶಾ ಮಂಗಲಾತ್ಮಜಃ　　॥ ೨೪ ॥

---

೨೧. ಚತುರ್ಮುಖಬ್ರಹ್ಮನ ಪತನರೂಪವಾದ ಪ್ರಾಕೃತಪ್ರಲಯದಲ್ಲಿ ಸಮಸ್ತ ವಿಶ್ವವೂ ನಾಶವಾಗುವುದರಿಂದ (ನಶ್ವರವೆಂದೂ) ಕೃತ್ರಿಮವೆಂದೂ, ಪ್ರಲಯದಲ್ಲಿ ಮಹಾವಿರಾಟನ ರೋಮಕೂಪಗಳಲ್ಲಡಗಿದ್ದು, ಪುನಃ ತಾನೇ ಆವಿರ್ಭವಿಸುವುದರಿಂದ ಅಕೃತ್ರಿಮವೆಂದೂ, ಕರೆಯಲ್ಪಡುವುದು.

೨೨. ಸೃಷ್ಟಿಯ ಆದಿಯಲ್ಲಿ ಶ್ರೀಕೃಷ್ಣಪರಮಾತ್ಮನಿಂದ ಮಹಾವಿರಾಟ್ಪುರುಷನು ಸೃಷ್ಟನಾದುದರಿಂದ ಪ್ರಲಯದಲ್ಲಿ ಆ ವಿರಾಟ್ಪುರುಷನು ಆಕಾಶ, ದಿಕ್ಕು ಈಶ್ವರರೊಡನೆ ಪರಮಾತ್ಮನಲ್ಲಿಯೇ ನಿತ್ಯನಾಗಿರುವನು.

೨೩. ಈ ಪ್ರಕಾರವಾದ ಭೂಮಿಗೆ ಅಧಿಷ್ಠಾತೃದೇವಿಯಾದ ಆ ವಸುಧೆಯು ವರಾಹಕಲ್ಪದಲ್ಲಿ ಆದಿವರಾಹಮೂರುತಿಯ ಪತ್ನಿಯಾಗಿ ದೇವತೆಗಳಿಂದಲೂ, ಮನುಮುನಿಗಳಿಂದಲೂ, ಗಂಧರ್ವಬ್ರಾಹ್ಮಣಾದಿಗಳಿಂದಲೂ ಪೂಜೆಗೊಂಡಳು.

೨೪. ಆ ಭೂದೇವಿಯು ಆದಿವರಾಹಮೂರುತಿಯಾದ ವಿಷ್ಣುವಿನ ಪತ್ನಿಯೆಂದು ವೇದೋಕ್ತವಾಗಿದೆ. ಮಂಗಳಸ್ವರೂಪಳಾದ ಅವಳಿಗೆ ಮಂಗಳನೆಂಬುವನು ಜನಿಸಿ ಕೀರ್ತಿವಂತನಾದನು.

॥ ನಾರದ ಉವಾಚ ॥

ಪೂಜಿತಾ ಕೇನ ರೂಪೇಣ ವಾರಾಹೀ ಚ ಸುರೈರ್ಮಹೀ ।
ವರಾಹೇಣ ಚ ವಾರಾಹೀ ಸರ್ವೈಃ ಸರ್ವಾಶ್ರಯಾ ಸತೀ ॥ ೨೫ ॥

ತಸ್ಯಾಃ ಪೂಜಾವಿಧಾನಂ ಚಾಪ್ಯಧಶ್ಚೋದ್ಧರಣಕ್ರಮಂ ।
ಮಂಗಲಂ ಮಂಗಲಸ್ಯಾಪಿ ಜನ್ಮವ್ಯಾಸಂ ವದ ಪ್ರಭೋ ॥ ೨೬ ॥

॥ ನಾರಾಯಣ ಉವಾಚ ॥

ವಾರಾಹೇ ಚ ವರಾಹಶ್ಚ ಬ್ರಹ್ಮಣಾ ಸಂಸ್ತುತಃ ಪುರಾ ।
ಉದ್ದಧಾರ ಮಹೀಂ ಹತ್ವಾ ಹಿರಣ್ಯಾಕ್ಷಂ ರಸಾತಲಾತ್ ॥ ೨೭ ॥

ಜಲೇ ತಾಂ ಸ್ಥಾಪಯಾಮಾಸ ಪದ್ಮಪತ್ರಂ ಯಥಾರ್ಣವೇ ।
ತತ್ರೈವ ನಿರ್ಮಮೇ ಬ್ರಹ್ಮಾ ಸರ್ವಂ ವಿಶ್ವಂ ಮನೋಹರಂ ॥ ೨೮ ॥

---

೨೫. ನಾರದ :—ವರಾಹಕಲ್ಪದಲ್ಲಿ ಭೂದೇವಿಯು ದೇವತೆಗಳಿಂದ ಯಾವ ಕ್ರಮದಲ್ಲಿ ಪೂಜೆಗೊಂಡಳು? ಸರ್ವಾಶ್ರಯಳೂ, ಪತಿವ್ರತೆಯೂ ಆದ ಆಕೆಯು ವರಾಹಸ್ವಾಮಿಯಿಂದ ಪೂಜೆಗೊಂಡುದೆಂತು?

೨೬. ಆ ದೇವಿಯ ಪೂಜಾಕ್ರಮವನ್ನೂ, ಸಮುದ್ರದಲ್ಲಿ ಮುಳಗಿದ್ದ ಅವಳನ್ನು ಮೇಲಕ್ಕೆ ಎತ್ತಿದ ಕ್ರಮವನ್ನೂ, ಮಂಗಳನ ಮಂಗಳಕರವೂ, ವಿಸ್ತಾರವೂ ಆದ ಜನ್ಮಕಥೆಯನ್ನು ನನಗೆ ವಿವರಿಸು.

೨೭. ನಾರಾಯಣ :—ವರಾಹಕಲ್ಪದಲ್ಲಿ ಬ್ರಹ್ಮದೇವನಿಂದ ಸ್ತುತನಾದ ವರಾಹರೂಪಿಯಾದ ಪರಮಾತ್ಮನು ಹಿರಣ್ಯಾಕ್ಷನನ್ನು ಸಂಹರಿಸಿ ರಸಾತಲದಲ್ಲಿದ್ದ ವಸುಧೆಯನ್ನು ಮೇಲಕ್ಕೆತ್ತಿದನು.

೨೮. ಆಗ ವಿಶ್ವವೆಲ್ಲವೂ ಜಲದಿಂದ ಆವೃತವಾಗಿರಲು ವಿಷ್ಣುವು ನೀರಿನ ಮೇಲೆ ತೇಲುವ ತಾವರೆ ಎಲೆಯಂತೆ ಆ ಭೂಮಿಯನ್ನು ನೀರಿನ ಮೇಲೆಯೇ ತೇಲಿಬಿಟ್ಟನು. ಅನಂತರ ಚತುರ್ಮುಖ ಬ್ರಹ್ಮನು ಸಮಸ್ತ ವಿಶ್ವವನ್ನೂ ಆ ಭೂಮಂಡಲದಲ್ಲಿಯೇ ಸೃಜಿಸಿದನು.

ದೃಷ್ಟ್ವಾ ತದಧಿದೇವೀಂ ಚ ಸಕಾಮಾಂ ಕಾಮುಕೋ ಹರಿಃ ।
ವರಾಹರೂಪೀ ಭಗವಾನ್ ಕೋಟಿಸೂರ್ಯಸಮಪ್ರಭಃ ॥ ೨೯ ॥

ಕೃತ್ವಾ ರತಿಕರೀಂ ಶಯ್ಯಾಂ ಮೂರ್ತಿಂ ಚ ಸುಮನೋಹರಾಂ ।
ಕ್ರೀಡಾಂ ಚಕಾರ ರಹಸಿ ದಿವ್ಯವರ್ಷಮಹರ್ನಿಶಂ ॥ ೩೦ ॥

ಸುಖಸಂಭೋಗಸಂಸ್ಪರ್ಶಾನ್ಮೂರ್ಛಾಂ ಸಂಪ್ರಾಪ ಸುಂದರೀ ।
ವಿದಗ್ಧಾಯಾ ವಿದಗ್ಧೇನ ಸಂಗಮೋಽಪಿ ಸುಖಪ್ರದಃ ॥ ೩೧ ॥

ವಿಷ್ಣುಸ್ತದಂಗಸಂಶ್ಲೇಷಾದ್ಬುಬುಧೇ ನ ದಿವಾನಿಶಂ ।
ವರ್ಷಾಂತೇ ಚೇತನಾಂ ಪ್ರಾಪ್ಯ ಕಾಮೀ ತತ್ಯಾಜ ಕಾಮುಕೀಂ ॥ ೩೨ ॥

ದಧಾರ ಪೂರ್ವರೂಪಂ ಹಿ ವಾರಾಹಂ ಚೈವ ಲೀಲಯಾ ।
ಪೂಜಾಂ ಚಕಾರ ಭಕ್ತ್ಯಾ ಚ ಧ್ಯಾತ್ವಾ ಚ ಧರಣೀಂ ಸತೀಂ ॥ ೩೩ ॥

೨೯-೩೦. ಭೂಮಿಗೆ ಅಧಿದೇವತೆಯಾದ ಭೂದೇವಿಯು ತನ್ನಲ್ಲಿ ಕಾಮುಕಳಾಗಿರುವದನ್ನು ಅರಿತ, ಕಾಮಿಯಾದ ವರಾಹರೂಪಿ ಹರಿಯು ಕೋಟಿಸೂರ್ಯಸಮಪ್ರಭನಾಗಿ ಮನೋಹರವಾದ ರೂಪಧಾರಣೆ ಮಾಡಿ, ರತ್ಯುಪಯುಕ್ತವಾದ ಶಯನವನ್ನು ಕಲ್ಪಿಸಿ ಆ ಭೂದೇವಿಯೊಡನೆ ದೇವತೆಗಳ ಒಂದು ವರ್ಷಕಾಲ ಹಗಲುರಾತ್ರಿಯೆನ್ನದೆ ರಮಿಸಿದನು.

೩೧. ಪರಮಾತ್ಮನ ಸಂಸ್ಪರ್ಶದಿಂದಲೂ, ಸುಖಸಂಭೋಗದಿಂದಲೂ ಸುಂದರಿಯಾದ ವಸುಧೆಯು ಮೂರ್ಛೆಗೊಂಡಳು. ಪ್ರೌಢೆಯಾದ ಸ್ತ್ರೀಯು ಪ್ರೌಢನಾದ ಪುರುಷನೊಡನೆ ಸೇರುವುದೇ ಸುಖಕರವಲ್ಲವೇ ?

೩೨. ಆಕೆಯ ಕೋಮಲಾವಯವಸಂಗದಿಂದ ವಿಷ್ಣುವೂ ಕೂಡ ಆನಂದ ಪರವಶನಾಗಿ ಹಗಲುರಾತ್ರಿಯ ಅರಿವನ್ನೂ ಮರೆತನು. ದಿವ್ಯ ವರ್ಷದ ಕೊನೆಯಲ್ಲಿ ಅರಿವನ್ನು ಪಡೆದ ಕಾಮಿಯಾದ ಆ ವಿಷ್ಣುವು ಕಾಮುಕಳಾದ ಆ ದೇವಿಯನ್ನು ತ್ಯಾಗಮಾಡಿದನು.

೩೩-೩೪. ಅನಂತರ ಮೊದಲಿನಂತೆ ವರಾಹರೂಪವನ್ನೇ ಲೀಲೆಯಿಂದ ಧರಿಸಿ, ಪತಿವ್ರತೆಯಾದ ಆ ಧರಣೀದೇವಿಯನ್ನು ಧ್ಯಾನಿಸಿ ವಸ್ತ್ರಗಂಧಪುಷ್ಪ

ಧೂಪೈರ್ದೀಪೈಶ್ಚ ನೈವೇದ್ಯೈಃ ಸಿಂದೂರೈರನುಲೇಪನೈಃ।
ವಸ್ತ್ರೈಃ ಪುಷ್ಪೈಶ್ಚ ಬಲಿಭಿಃ ಸಂಪೂಜ್ಯೋವಾಚ ತಾಂ ಹರಿಃ ॥ ೩೪ ॥

॥ ಮಹಾವರಾಹ ಉವಾಚ ॥

ಸರ್ವಾಧಾರಾ ಭವ ಶುಭೇ ಸರ್ವೈಃ ಸಂಪೂಜಿತಾ ಶುಭಂ ।
ಮುನಿಭಿರ್ಮನುಭಿರ್ದೇವೈಃ ಸಿದ್ಧೈರ್ವಾ ಮಾನವಾದಿಭಿಃ ॥ ೩೫ ॥

ಜಲೋಚ್ಛ್ವಾಸಾಜ್ಞಲತ್ಯಾಗಗೃಹಾರಂಭಪ್ರವೇಶನೇ ।
ವಾಪೀತಡಾಗಾರಂಭೇ ಚ ಶುಭೇ ಚ ಕೃಷಿಕರ್ಮಣಿ ॥ ೩೬ ॥

ತವ ಪೂಜಾಂ ಕರಿಷ್ಯಂತಿ ಸಂಭ್ರಮೇಣ ಸುರಾದಯಃ ।
ಮೂಢಾ ಯೇ ನ ಕರಿಷ್ಯಂತಿ ಯಾಸ್ಯಂತಿ ನರಕಂ ಚ ತೇ ॥ ೩೭ ॥

॥ ವಸುಧೋವಾಚ ॥

ವಹಾಮಿ ಸರ್ವಂ ವಾರಾಹರೂಪೇಣಾಹಂ ತವಾಜ್ಞಯಾ ।
ಲೀಲಾಮಾತ್ರೇಣ ಭಗವನ್ ವಿಶ್ವಂ ಚ ಸಚರಾಚರಂ ॥ ೩೮ ॥

ಗಳಿಂದಲೂ, ಮಂಗಳದ್ರವ್ಯಗಳಿಂದಲೂ,ಧೂಪದೀಪನೈವೇದ್ಯಗಳಿಂದಲೂ ಪೂಜಿಸಿ ಬಲಿಪ್ರದಾನ ಮಾಡಿ, ಹರಿಯು ಆಕೆಯನ್ನು ಕುರಿತು ಇಂತೆಂದನು.

೩೫. ಮಹಾವರಾಹ:—ಎಲೌ ಶುಭಕರಳಾದ ಭೂದೇವಿಯೇ, ನೀನು ಸರ್ವಾಧಾರಳಾಗಿ ದೇವತೆಗಳಿಂದಲೂ, ಸಿದ್ಧರಿಂದಲೂ, ಮುನಿಮನುಮಾನವರಿಂದಲೂ ಪೂಜೆಗೊಂಡು ಎಲ್ಲರಿಗೂ ಶುಭಕರಳಾಗು.

೩೬–೩೭. ಕಾಲುವೆಗಳಿಂದ ನೀರು ಬಿಟ್ಟುಕೊಳ್ಳುವಾಗಲೂ, ಹೊಸಮನೆಗೆ ಮೊದಲು ಸಂಸಾರವನ್ನು ಹೂಡಲು ಬರುವಾಗಲೂ, ಭಾವಿ ಕೆರೆಗಳನ್ನು ತೋಡಿಸಲು ಪ್ರಾರಂಭಿಸುವಾಗಲೂ, ಕೃಷಿಕರ್ಮವನ್ನಾರಂಭಿಸುವಾಗಲೂ, ದೇವತೆಗಳಾದಿಯಾಗಿ ಸಮಸ್ತರೂ ಕೂಡ ನಿನ್ನನ್ನು ಪೂಜಿಸುವರು. ಯಾವ ಮೂಢರು ನಿನ್ನನ್ನು ಪೂಜಿಸುವುದಿಲ್ಲವೋ ಅವರೆಲ್ಲರೂ ನರಕಕ್ಕೆ ಹೋಗುವರು.

೩೮. ವಸುಧೆ:—ಎಲೈ ಪರಮಾತ್ಮನೇ, ನಿನ್ನ ಅಪ್ಪಣೆಯಂತೆ ನಾನು:ವರಾಹ ರೂಪಧಾರಿಣಿಯಾಗಿ ಚರಾಚರಾತ್ಮಕವಾದ ವಿಶ್ವವನ್ನು ಲೀಲೆಯಿಂದಲೇ ಹೊರುವೆನು.

ಮುಕ್ತಾಂ ಶುಕ್ತಿಂ ಹರೇರರ್ಚಾಂ ಶಿವಲಿಂಗಂ ಶಿಲಾಂ ತಥಾ ।
ಶಂಖಂ ಪ್ರದೀಪಂ ರತ್ನಂ ಚ ಮಾಣಿಕ್ಯಂ ಹೀರಕಂ ಮಣಿಂ ॥ ೩೯ ॥

ಯಜ್ಞಸೂತ್ರಂ ಚ ಪುಷ್ಪಂ ಚ ಪುಸ್ತಕಂ ತುಲಸೀದಲಂ ।
ಜಪಮಾಲಾಂ ಪುಷ್ಪಮಾಲಾಂ ಕರ್ಪೂರಂ ಚ ಸುವರ್ಣಕಂ ॥ ೪೦ ॥

ಗೋರೋಚನಾಂ ಚಂದನಂ ಚ ಶಾಲಗ್ರಾಮಜಲಂ ತಥಾ ।
ಏತಾನ್ ವೋಢುಮಶಕ್ತಾಹಂ ಕ್ಲಿಷ್ಟಾ ಚ ಭಗವನ್ಶೃಣು ॥ ೪೧ ॥

॥ ಶ್ರೀ ಭಗವಾನುವಾಚ ॥

ದ್ರವ್ಯಾಣ್ಯೇತಾನಿ ಯೇ ಮೂಢಾ ಅರ್ಪಯಿಷ್ಯಂತಿ ಸುಂದರಿ ।
ಯಾಸ್ಯಂತಿ ತೇ ಕಾಲಸೂತ್ರಂ ದಿವ್ಯಂ ವರ್ಷಶತಂ ತ್ವಯಿ ॥ ೪೨ ॥

ಇತ್ಯೇವಮುಕ್ತ್ವಾ ಭಗವಾನ್ ವಿರರಾಮ ಚ ನಾರದ ।
ಬಭೂವ ತೇನ ಗರ್ಭೇಣ ತೇಜಸ್ವೀ ಮಂಗಲಗ್ರಹಃ ॥ ೪೩ ॥

೩೯–೪೧. ಆದರೆ ಮುತ್ತು, ಮುತ್ತಿನಚಿಪ್ಪು, ದೇವಾರ್ಚನೆಯ ಸಾಮಗ್ರಿಗಳು, ಈಶ್ವರನ ಲಿಂಗರೂಪವಾದ ಕಲ್ಲು, ಶಂಖ, ನಂದಾದೀಪ, ರತ್ನ, ಮಾಣಿಕ್ಯ, ಪಚ್ಚೆ, ಪುಷ್ಯರಾಗ, ಯಜ್ಞೋಪವೀತ, ಅರ್ಚನೆಗೆ ಉಪಯುಕ್ತವಾಗುವ ಪುಷ್ಪಗಳು, ಪುಸ್ತಕ, ತುಲಸೀದಳ, ಜಪಮಾಲೆ, ಪುಷ್ಪಮಾಲೆ, ಕರ್ಪೂರ ಮತ್ತು ಚಿನ್ನ, ಗೋರೋಚನ, ಚಂದನಗಂಧ, ಸಾಲಿಗ್ರಾಮ ಮತ್ತು ನೀರು ಇವುಗಳನ್ನು ಮಾತ್ರ ನಾನು ಹೊರಲಾರೆ. (ಅಂದರೆ ಈ ಪದಾರ್ಥಗಳನ್ನು ಭೂಮಿಯ ಮೇಲಿಡಬಾರದೆಂದು ತಾತ್ಪರ್ಯ),

೪೨. ಭಗವಾನ್:—ಎಲೌ ಸುಂದರಾಂಗಿಯೇ, ನೀನು ಹೇಳಿದ ಈ ಪದಾರ್ಥಗಳನ್ನು ಯಾವ ಮೂಢರು ನಿನ್ನಲ್ಲಿಡುವರೋ, ಅವರು ನೂರು ದಿವ್ಯ ವರ್ಷಗಳವರೆಗೆ ಕಾಲಸೂತ್ರವೆಂಬ ನರಕದಲ್ಲಿ ಬಿದ್ದು ತೊಳಲುವರು.

೪೩. ಎಲೈ ನಾರದನೇ, ಭಗವಂತನು ಇಂತು ನುಡಿದು ಸುಮ್ಮನಾದನು. ಅನಂತರದಲ್ಲಿ ಆ ಭೂದೇವಿಯ ಮಂಗಳಕರವಾದ ಗರ್ಭದಿಂದ ಮಂಗಳನೆಂಬ ಗ್ರಹನು ಜನಿಸಿದನು.

ಪೂಜಾಂ ಚಕ್ರುಃ ಪೃಥಿವ್ಯಾಶ್ಚ ತೇ ಸರ್ವೇ ಚಾಜ್ಞಯಾ ಹರೇಃ ।
ದಧ್ಯುಃ ಕಾಣ್ವೋಕ್ತಮಾರ್ಗೇಣ ತುಷ್ಟುವುಃ ಸ್ತವನೇನ ಚ ॥ ೪೪ ॥

ದದ್ಯುರ್ಮೂಲೇನ ಮಂತ್ರೇಣ ನೈವೇದ್ಯಾದಿಕಮೇವ ಚ ।
ಸಂಸ್ತುತಾ ತ್ರಿಷು ಲೋಕೇಷು ಪೂಜಿತಾ ಸಾ ಬಭೂವ ಹ ॥ ೪೫ ॥

॥ ನಾರದ ಉವಾಚ ॥

ಕಿಂ ಧ್ಯಾನಂ ಸ್ತವನಂ ಕಿಂ ವಾ ತಸ್ಯ ಮೂಲಂ ಚ ಕಿಂ ವದ ।
ಗೂಢಂ ಸರ್ವಂ ಪುರಾಣೇಷು ಶ್ರೋತುಂ ಕೌತೂಹಲಂ ಮಮ ॥ ೪೬ ॥

॥ ನಾರಾಯಣ ಉವಾಚ ॥

ಆದೌ ಚ ಪೃಥಿವೀ ದೇವೀ ವರಾಹೇಣ ಸುಪೂಜಿತಾ ।
ತತೋ ಹಿ ಬ್ರಹ್ಮಣಾ ಪಶ್ಚಾತ್ತತಶ್ಚ ಪೃಥುನಾ ಪುರಾ ॥ ೪೭ ॥

---

೪೪. ಅನಂತರ ದೇವತೆಗಳೆಲ್ಲರೂ ಹರಿಯ ಅಪ್ಪಣೆಯಂತೆ ಪೃಥ್ವೀದೇವಿಯ ಪೂಜೆಯನ್ನು ಮಾಡಿ, ಕಣ್ವಮತೋಕ್ತರೀತ್ಯಾ ಧ್ಯಾನ ಸ್ತೋತ್ರಗಳನ್ನು ಹಾಡಿ ತೃಪ್ತಿಗೊಳಿಸಿದರು.

೪೫. ಮೂಲಮಂತ್ರೋಚ್ಚಾರಣಪೂರ್ವಕವಾಗಿ ನೈವೇದ್ಯಾದಿಗಳನ್ನು ಸಮರ್ಪಿಸಿದರು. ಈ ರೀತಿಯಾಗಿ ಸರ್ವರಿಂದಲೂ ಸ್ತುತಳಾದ ಆ ವಸುಧೆಯು ತ್ರಿಲೋಕಪೂಜಿತಳಾದಳು.

೪೬. ನಾರದ:—ಎಲೈ ನಾರಾಯಣ ಮಹರ್ಷಿಯೇ, ಸಮಸ್ತ ಪುರಾಣಗಳಲ್ಲಿಯೂ ಗೋಪ್ಯವಾಗಿರುವ ವಸುಧೆಯ ಧ್ಯಾನಸ್ತೋತ್ರಾದಿಗಳನ್ನೂ, ಮೂಲಮಂತ್ರವನ್ನೂ ಕೇಳಬೇಕೆಂದು ನನಗೆ ಬಹಳ ಕುತೂಹಲವಿರುವುದರಿಂದ ದಯವಿಟ್ಟು ಹೇಳು.

೪೭. ನಾರಾಯಣ:— ಪೃಥ್ವೀದೇವಿಯು ಮೊಟ್ಟಮೊದಲು ವರಾಹಾವತಾರಿಯಾದ ಪರಮಾತ್ಮನಿಂದಲೂ, ಅನಂತರ ಚತುರ್ಮುಖಬ್ರಹ್ಮನಿಂದಲೂ, ಅದಾದಮೇಲೆ ಪೃಥು ಚಕ್ರವರ್ತಿಯಿಂದಲೂ ಪೂಜೆಗೊಂಡಳು.

ತತಃ ಸರ್ವೈರ್ಮುನೀಂದ್ರೈಶ್ಚ ಮನುಭಿರ್ನಾರದಾದಿಭಿಃ ।
ಧ್ಯಾನಂ ಚ ಸ್ತವನಂ ಮಂತ್ರಂ ಶ್ರುಣು ವಕ್ಷ್ಯಾಮಿ ನಾರದ ॥ ೪೮ ॥

ಓಂ ಹ್ರೀಂ ಶ್ರೀಂ ವಾಂ ವಸುಧಾಯೈ ಸ್ವಾಹಾ ।
ಇತ್ಯನೇನ ತು ಮಂತ್ರೇಣ ಪೂಜಿತಾ ವಿಷ್ಣುನಾ ಪುರಾ ॥ ೪೯ ॥

ಶ್ವೇತಚಂಪಕವರ್ಣಾಭಾಂ ಶತಚಂದ್ರಸಮಪ್ರಭಾಂ ।
ಚಂದನೋಕ್ಷಿತಸರ್ವಾಂಗೀಂ ಸರ್ವಭೂಷಣಭೂಷಿತಾಂ ॥ ೫೦ ॥

ರತ್ನಾಧಾರಾಂ ರತ್ನಗರ್ಭಾಂ ರತ್ನಾಕರಸಮನ್ವಿತಾಂ ।
ವಹ್ನಿಶುದ್ಧಾಂಶುಕಾಧಾನಾಂ ಸಸ್ಮಿತಾಂ ವಂದಿತಾಂ ಭಜೇ ॥ ೫೧ ॥

ಧ್ಯಾನೇನಾನೇನ ಸಾ ದೇವೀ ಸರ್ವೈರ್ವೈ ಪೂಜಿತಾ ಭವೇತ್ ।
ಸ್ತವನಂ ಶ್ರುಣು ವಿಪ್ರೇಂದ್ರ ಕಾಣ್ವಶಾಖೋಕ್ತಮೇವ ಚ ॥ ೫೨ ॥

---

೪೮. ಅನಂತರ ಸಕಲ ಮುನಿಶ್ರೇಷ್ಠರೂ, ಮನುಗಳೂ, ನಾರದಾದಿ ಮುನಿಗಳೂ ಆಕೆಯನ್ನು ಪೂಜಿಸಿದರು. ಆ ದೇವಿಯ ಧ್ಯಾನ ಸ್ತೋತ್ರ ಮಂತ್ರಗಳನ್ನೂ, ಪೂಜಾಕ್ರಮವನ್ನೂ ಈಗ ವಿವರಿಸುವೆನು: ಕೇಳು.

೪೯. 'ಓಂ ಹ್ರೀಂ ಶ್ರೀಂ ವಾಂ ವಸುಧಾಯೈ ಸ್ವಾಹಾ' ಎಂಬ ಮಂತ್ರದಿಂದ ಪೂರ್ವದಲ್ಲಿ ವಿಷ್ಣುವು ಭೂದೇವಿಯನ್ನು ಪೂಜಿಸಿದನು.

೫೦–೫೧. ಬಿಳಿಯ ಸಂಪಿಗೆಯಂತೆ ಮನೋಹರಳೂ, ನೂರು ಚಂದ್ರರಂತೆ ಕಾಂತಿಯುತಳೂ, ರತ್ನಗಳಿಗೆ ಆಧಾರಳೂ, ರತ್ನಗರ್ಭಳೂ, ರತ್ನಾಕರ (ಸಮುದ್ರ) ಗಳಿಂದ ಪರಿವೃತಳೂ ಆಗಿ, ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು, ವಿವಿಧಾಭರಣಗಳನ್ನು ತೊಟ್ಟು, ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಯನ್ನುಟ್ಟು, ಸ್ಮಿತವದನಳೂ, ಸಕಲರಿಂದ ವಂದಿತಳೂ ಆದ ವಸುಧೆಯನ್ನು ಧ್ಯಾನಿಸುವೆನು.

೫೨. ಈ ಅರ್ಥವನ್ನು ಕೊಡುವ ಧ್ಯಾನಶ್ಲೋಕದಿಂದ ಆ ದೇವಿಯನ್ನು ಧ್ಯಾನಿಸಬೇಕು. ಎಲೈ ವಿಪ್ರಶ್ರೇಷ್ಠನಾದ ನಾರದನೇ, ಕಾಣ್ವಶಾಖೋಕ್ತವಾದ ವಸುಧೆಯ ಸ್ತೋತ್ರಕ್ರಮವನ್ನು ವಿವರಿಸುವೆನು ; ಕೇಳು.

|| ವಿಷ್ಣುರುವಾಚ ||

ಯಜ್ಞಸೂಕರಜಾಯಾ ತ್ವಂ ಜಯಂ ದೇಹಿ ಜಯಾವಹೇ ।
ಜಯೇಽಜಯೇ ಜಯಾಧಾರೇ ಜಯಶೀಲೇ ಜಯಪ್ರದೇ || ೫೩ ||

ಸರ್ವಾಧಾರೇ ಸರ್ವಬೀಜೇ ಸರ್ವಶಕ್ತಿಸಮನ್ವಿತೇ ।
ಸರ್ವಕಾಮಪ್ರದೇ ದೇವಿ ಸರ್ವೇಷ್ಟಂ ದೇಹಿ ಮೇ ಸ್ಥಿರೇ || ೫೪ ||

ಸರ್ವಸಸ್ಯಾಲಯೇ ಸರ್ವಸಸ್ಯಾಢ್ಯೇ ಸರ್ವಸಸ್ಯದೇ ।
ಸರ್ವಸಸ್ಯಹರೇ ಕಾಲೇ ಸರ್ವಸಸ್ಯಾತ್ಮಿಕೇ ಕ್ಷಿತೇ || ೫೫ ||

ಮಂಗಲೇ ಮಂಗಲಾಧಾರೇ ಮಾಂಗಲ್ಯೇ ಮಂಗಲಪ್ರದೇ ।
ಮಂಗಲಾರ್ಥೇ ಮಂಗಲಾಂಶೇ ಮಂಗಲಂ ದೇಹಿ ಮೇ ಪರಂ || ೫೬ ||

ಭೂಮೇ ಭೂಮಿಪಸರ್ವಸ್ವೇ ಭೂಮಿಪಾಲಪರಾಯಣೇ ।
ಭೂಮಿಪಾಹಂಕಾರರೂಪೇ ಭೂಮಿಂ ದೇಹಿ ವಸುಂಧರೇ || ೫೭ ||

---

೫೩. ವಿಷ್ಣು:—ಯಜ್ಞವರಾಹನ ಪತ್ನಿಯೂ, ಜಯಸ್ವರೂಪಳೂ, ಸಕಲರಿಗೂ ಜಯಪ್ರದಳೂ, ಇತರರಿಂದ ಅಜೇಯಳೂ, ಜಯಾಧಾರಳೂ ಆದ ಎಲೌ ವಸುಧೆಯೇ, ನಮಗೆ ಜಯವನ್ನು ಕೊಡು.

೫೪. ಸರ್ವಾಧಾರಳೂ, ಸರ್ವಕಾರಣಳೂ, ಸರ್ವಶಕ್ತಿಸಮನ್ವಿತಳೂ, ಸರ್ವಕಾಮಪ್ರದಳೂ ಆದ ಎಲೌ ಸ್ಥಿರೆಯೇ, ನಮಗೆ ಸಕಲೇಷ್ಟಪ್ರದಳಾಗು.

೫೫. ಸಮಸ್ತ ಸಸ್ಯಗಳಿಗೆ ಆಶ್ರಯಳೂ, ಸಕಲ ಸಸ್ಯಭರಿತಳೂ, ಸರ್ವಸಸ್ಯಪ್ರದಳೂ, ಕಾಲದಲ್ಲಿ ಸಕಲ ಸಸ್ಯವನ್ನೂ ನಾಶಗೊಳಿಸುವವಳೂ, ಸಕಲ ಸಸ್ಯಾತ್ಮಕಳೂ ಆದ ಎಲೌ ಕ್ಷಿತಿದೇವಿಯೇ, ನೀನು ಸಸ್ಯಪ್ರದಳಾಗು.

೫೬. ಮಂಗಲಸ್ವರೂಪಳೂ, ಮಂಗಳಾಧಾರಳೂ, ಮಂಗಳಪ್ರದಳೂ,ಮಂಗಳ ಪ್ರಯೋಜನವುಳ್ಳವಳೂ ಆದ ಎಲೌ ಮಂಗಳಾಂಗಿಯೇ, ನನಗೆ ಮಂಗಳಪ್ರದಳಾಗು.

೫೭. ಮಹಿಮಾವಂತಳೂ, ಮಹೀಪಾಲರಿಗೆ ಸರ್ವಸ್ವಳೂ, ಮಹೀಪಾಲರಲ್ಲಿ ಆಸಕ್ತಳೂ, ಮಹೀಪಾಲರ ಮಮಕಾರಕ್ಕೆ ಕಾರಣಳೂ ಆದ ಎಲೌ ಮೇದಿನಿಯೇ! ನಮಗೆ ಭೂಮಿ (ಮಹಿ) ಯನ್ನು ದಯಪಾಲಿಸು.

ಇದಂ ಸ್ತೋತ್ರಂ ಮಹಾಪುಣ್ಯಂ ತಾಂ ಸಂಪೂಜ್ಯ ಚ ಯಃ ಪಠೇತ್ ।
ಕೋಟ್ಯಂತರೇ ಜನ್ಮನಿ ಸ ಸಂಭವೇದ್ಭೂಮಿಪೇಶ್ವರಃ ॥ ೫೮ ॥

ಭೂಮಿದಾನಕೃತಂ ಪುಣ್ಯಂ ಲಭತೇ ಪಠನಾಜ್ಜನಃ ।
ದತ್ತಾಪಹಾರಜಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥ ೫೯ ॥

ಅಂಬುವೀಚೀ ಭೂಖನನಾತ್ಪಾಪಾನ್ಮುಚ್ಯೇತ ಸ ಧ್ರುವಂ ।
ಅನ್ಯಕೂಪೇ ಕುಪದಜಾತ್ಪಾಪಾನ್ಮುಚ್ಯೇತ ಸ ಧ್ರುವಂ ॥ ೬೦ ॥

ಪರಭೂಶ್ರಾದ್ಧಜಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ।
ಭೂಮೌ ವೀರ್ಯತ್ಯಾಗಪಾಪಾದ್ದೀಪಾದಿ ಸ್ಥಾಪನಾತ್ತಥಾ ॥ ೬೧ ॥

---

೫೮. ಭೂದೇವಿಯನ್ನು ಪೂಜಿಸಿ ಮಹಾ ಪುಣ್ಯಕರವಾದ ಈ ಸ್ತೋತ್ರವನ್ನು ಯಾರು ಪಠಿಸುವರೋ, ಅವರು ಕೋಟ್ಯಂತರ ಜನ್ಮದಲ್ಲಿ ಭೂಮಿಪಾಲರಾಗುವರು.

೫೯. ಇದನ್ನು ಪಠಿಸುವ ಮನುಷ್ಯನು ಭೂಮಿ ದಾನವನ್ನು ಮಾಡಿದ ಪುಣ್ಯವನ್ನು ಪಡೆಯುವನು. ಅಲ್ಲದೆ ದತ್ತಾಪಹಾರದಿಂದುಂಟಾದ ಪಾಪದಿಂದ ವಿನಿರ್ಮುಕ್ತನಾಗುವುದರಲ್ಲಿ ಸಂದೇಹವಿಲ್ಲ.

೬೦. ಭೂಮಿಯು ರಜಸ್ವಲೆಯಾದಾಗ (ಅಂದರೆ ಆಷಾಢಮಾಸದಲ್ಲಿ ಆರ್ದ್ರಾ ನಕ್ಷತ್ರದ ದಿನದಿಂದ ಮೂರು ದಿನಗಳು) ವ್ಯವಸಾಯ ಮಾಡಿದ ಪಾಪದಿಂದಲೂ, ಮತ್ತೊಬ್ಬರ ಬಾವಿಯಲ್ಲಿ ಅವರ ಅಪ್ಪಣೆಯಿಲ್ಲದೆ ನೀರು ತೆಗೆದುಕೊಂಡ ಪಾಪದಿಂದಲೂ ಬಿಡುಗಡೆ ಹೊಂದುವನು.

೬೧. ಭೂದೇವಿಯ ಸ್ತೋತ್ರಪಠನಮಾಡಿದ ಮನುಷ್ಯನು ಮತ್ತೊಬ್ಬರ ಮನೆಯಲ್ಲಿ ಶ್ರಾದ್ಧಮಾಡಿಗುದರಿಂದುಂಟಾದ ಪಾಪದಿಂದಲೂ, ಭೂಮಿಯಲ್ಲಿ ವೀರ್ಯತ್ಯಾಗಮಾಡಿದ ಮತ್ತು ದೀಪವನ್ನು ಸ್ಥಾಪನೆಮಾಡಿದ ಪಾಪದಿಂದಲೂ ವಿನಿರ್ಮುಕ್ತನಾಗುವನು.

ಪಾಪೇನ ಮುಚ್ಯತೇ ಪ್ರಾಜ್ಞಃ ಸ್ತೋತ್ರಸ್ಯ ಪಠನಾನ್ಮುನೇ ।
ಅಶ್ವಮೇಧಶತಂ ಪುಣ್ಯಂ ಲಭತೇ ನಾತ್ರ ಸಂಶಯಃ ॥ ೬೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಪೃಥಿವ್ಯುಪಾಖ್ಯಾನೇ ಪೃಥಿವೀಸ್ತೋತ್ರಂ ನಾಮಾಷ್ಟಮೋಽಧ್ಯಾಯಃ

---

೬೨. ಎಲೈ ಮುನಿಯಾದ ನಾರದನೇ! ಈ ಸ್ತೋತ್ರವನ್ನು ಪಠಿಸುವುದರಿಂದ ಪಾಪಗಳಿಂದ ಬಿಡುಗಡೆ ಹೊಂದುವುದಲ್ಲದೆ. ನೂರು ಅಶ್ವಮೇಧಯಾಗ ಮಾಡಿದ ಪುಣ್ಯವನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದನಾರಾಯಣ ಸಂವಾದರೂಪವಾದ ಪೃಥಿವೀಸ್ತೋತ್ರವೆಂಬ ಎಂಟನೆಯ ಅಧ್ಯಾಯವು ಮುಗಿದುದು.

ಎಂಟನೆ ಅಧ್ಯಾಯದ ಸಾರಾಂಶವು

ಪ್ರಾಕೃತಿಕ ಪ್ರಳಯದಲ್ಲಿ ವಸುಂಧರೆಯು ಎಲ್ಲಿರುವಳು? ಮತ್ತು ಪುನಃ ಸೃಷ್ಟಿಯಲ್ಲಿ ಹೇಗೆ ವ್ಯಕ್ತಳಾಗುವಳೆಂಬುದನ್ನು ವಿವರಿಸಬೇಕೆಂದು ಪ್ರಶ್ನಿಸಿದ ನಾರದರಿಗೆ ನಾರಾಯಣಮಹರ್ಷಿಗಳು ಇಂತೆಂದರು. 'ಪೂರ್ವದಲ್ಲಿ ಮಧುಕೈಟಭ ರೆಂಬ ರಾಕ್ಷಸರು ತಮ್ಮ ಬಲಪರಾಕ್ರಮಗಳಿಂದ ವಿಷ್ಣುವನ್ನು ತೃಪ್ತಿಗೊಳಿಸಿ ಚಿರಕಾಲ ಜೀವಿಸಿದ್ದರು. ಅವರ ಮರಣಾನಂತರ ಅವರ ಮೇದಸ್ಸಿನಿಂದ ಮೇದಿನಿ (ವಸುಂಧರೆ) ಯು ಸೃಷ್ಟಿಯಾಯಿತು' ಎಂಬುದು ಒಂದು ಮತ. 'ಪ್ರಳಯಕಾಲದಲ್ಲಿ ಜಲಮಯವಾಗಿದ್ದ ವಿಶ್ವಗೋಲಕದಲ್ಲಿ ಪವಡಿಸಿದ್ದ ಮಹಾವಿರಾಟ್ಪುರುಷನ ದೇಹ ಮಲದಿಂದ ವಸುಧೆಯ ಉತ್ಪತ್ತಿಯಾಯಿತು' ಎಂಬುದು ಮತ್ತೊಂದು ಮತ. ಸೃಷ್ಟಿಯಲ್ಲಿ ಈ ರೀತಿಯಾದ ಮೇದಿನಿಯು ಅಗಣಿತವಾಗಿದೆ. ವರಾಹಕಲ್ಪದಲ್ಲಿ ಆದಿ ವರಾಹಮೂರ್ತಿಯಿಂದ ಉದ್ಧೃತವಾದ ಕಾರಣ ಈ ವಸುಂಧರೆಯು ಆದಿವರಾಹನ ಪತ್ನಿ ಎನಿಸಿದಳು. ಆ ಆದಿವರಾಹಮೂರ್ತಿಯ ಸಂಸರ್ಗದಿಂದ ವಸುಧೆಯಲ್ಲಿ ಮಂಗಳಗ್ರಹೋತ್ಪತ್ತಿಯಾಯಿತು. ಮೊಟ್ಟಮೊದಲು ವಸುಂಧರೆಯು ಆದಿವರಾಹ ನಿಂದ ಪೂಜಿತಳಾಗಿ ಅನಂತರ ಬ್ರಹ್ಮಾದಿ ಸಕಲದೇವತೆಗಳಿಂದಲೂ, ಮನುಮುನಿ ಮಾನವರಿಂದಲೂ ಪೂಜಿತಳಾದಳು. ಭಕ್ತಿಯಿಂದ ವಸುಂಧರೆಯನ್ನು ಧ್ಯಾನಿಸಿ ಪೂಜಿಸುವವರ ಸಕಲ ಪಾಪಗಳೂ ಪರಿಹಾರವಾಗುವುವು

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ನವಮೋಽಧ್ಯಾಯಃ ||

|| ನಾರದಉವಾಚ ||

ಭೂಮಿದಾನಕೃತಂ ಪುಣ್ಯಂ ಪಾಪಂ ತದ್ಧರಣೇನ ಯತ್ ।
ಪರಭೂಮೌ ಶ್ರಾದ್ಧರೂಪಂ ಕೂಪೇ ಕುಪದಜಂ ತಥಾ || ೧ ||

ಅಂಬುವೀಚೀಭೂಖನನಬೀಜತ್ಯಾಗಜಮೇವ ಚ ।
ದೀಪಾದಿಸ್ಥಾಪನಾತ್ಪಾಪಂ ಶ್ರೋತುಮಿಚ್ಛಾಮಿ ಯತ್ನತಃ || ೨

ಒಂಭತ್ತನೆಯ ಅಧ್ಯಾಯವು

೧—೨. ನಾರದ :—ಎಲೈ ನಾರಾಯಣಮಹರ್ಷಿಯೇ, ಭೂಮಿದಾನದಿಂದುಂಟಾಗುವ ಪುಣ್ಯವನ್ನೂ, ದತ್ತಾಪಹಾರದಿಂದಲೂ, ಪರಕ್ಷೇತ್ರದಲ್ಲಿ ಶ್ರಾದ್ಧಮಾಡುವುದರಿಂದಲೂ, ಮತ್ತೊಬ್ಬರ ಭಾವಿಯಲ್ಲಿ ಅವರ ಅನುಮತಿಯಿಲ್ಲದೆ ನೀರು ತೆಗೆದುಕೊಳ್ಳುವುದರಿಂದಲೂ, ನೆಲದ ಮೇಲೆ ದೀಪಾದಿಗಳನ್ನಿಡುವುದರಿಂದಲೂ, ಆಷಾಢ ಕೃಷ್ಣ ದಶಮಿಯಿಂದ ತ್ರಯೋದಶಿಯವರೆಗೆ ಭೂಮಿಯನ್ನು ಉಳುವುದರಿಂದಲೂ, ಬೀಜ ಬಿತ್ತುವುದರಿಂದಲೂ ಉಂಟಾಗುವ ಪಾಪವನ್ನು, ವಿಸ್ತಾರವಾಗಿ ತಿಳಿಯಲಿಚ್ಛಿಸುತ್ತೇನೆ.

ಅನ್ಯದ್ವಾ ಪೃಥಿವೀಜನ್ಯಂ ಪಾಪಂ ಯತ್ಪ್ರಶ್ನತಃ ಪರಂ ।
ಯದಸ್ತಿ ತತ್ಪ್ರತೀಕಾರಂ ವದ ವೇದವಿದಾಂ ವರ ॥ ೩ ॥

॥ ನಾರಾಯಣ ಉವಾಚ ॥

ವಿತಸ್ತಿಮಾತ್ರಂ ಭೂಮಿಂ ಚ ಯೋ ದದಾತಿ ಚ ಭಾರತೇ ।
ಸಂಧ್ಯಾಪೂತಾಯ ವಿಪ್ರಾಯ ಸ ಯಾಯಾದ್ವಿಷ್ಣುಮಂದಿರಂ ॥ ೪ ॥

ಭೂಮಿಂ ಚ ಸರ್ವಸಸ್ಯಾಢ್ಯಾಂ ಬ್ರಾಹ್ಮಣಾಯ ದದಾತಿ ಯಃ ।
ಭೂಮಿರೇಣುಪ್ರಮಾಣೇ ಚ ವರ್ಷೇ ವಿಷ್ಣುಪದೇ ವಸೇತ್ ॥ ೫ ॥

ಗ್ರಾಮಂ ಭೂಮಿಂ ಚ ಧಾನ್ಯಂ ಚ ಯೋ ದದಾತ್ಯಾದದಾತಿ ಯಃ ।
ಸರ್ವಪಾಪಾದ್ವಿನಿರ್ಮುಕ್ತೌ ಚೋಭೌ ವೈಕುಂಠವಾಸಿನೌ ॥ ೬ ॥

ಭೂಮಿದಾನಂ ಚ ತತ್ಕಾಲೇ ಯಃ ಸಾಧುಶ್ಚಾನುಮೋದತೇ ।
ಸ ಪ್ರಯಾತಿ ಚ ವೈಕುಂಠಂ ಮಿತ್ರಗೋತ್ರಸಮನ್ವಿತಃ ॥ ೭ ॥

---

೩. ಅಲ್ಲದೆ, ನಾನು ಪ್ರಶ್ನಿಸದಿರುವ ಪೃಥಿವೀಜನ್ಯವಾದ ಬೇರಾವ ಪಾಪಗಳಿದ್ದರೂ, ಅದನ್ನೂ ಅದರ ನಿವಾರಣೋಪಾಯವನ್ನೂ ನನಗೆ ತಿಳಿಸು.

೪. ನಾರಾಯಣ:— ಭರತಖಂಡದಲ್ಲಿರುವ ಯಾವ ಮನುಜನಾದರೂ ಒಂದು ಅಡಿ ಭೂಮಿಯನ್ನು ಸಂಧ್ಯಾವಂದನೆಯಿಂದ ಪವಿತ್ರನಾದ ಬ್ರಾಹ್ಮಣನಿಗೆ ದಾನಮಾಡಿದರೆ ಅವನು ವೈಕುಂಠಕ್ಕೆ ತೆರಳುವನು.

೫. ಸಕಲ ಸಸ್ಯಸಂಪದ್ಭರಿತವಾದ ಭೂಮಿಯನ್ನು ಬ್ರಾಹ್ಮಣನಿಗೆ ದಾನ ಮಾಡಿದರೆ ಆ ಭೂಮಿಯಲ್ಲಿ ಧೂಳಿಕಣಗಳೆಷ್ಟಿವೆಯೋ ಅಷ್ಟು ವರ್ಷ ವೈಕುಂಠದಲ್ಲಿ ವಾಸಿಸುವನು.

೬. ಗ್ರಾಮ, ಭೂಮಿ ಮತ್ತು ಧಾನ್ಯಗಳನ್ನು ಕೊಡುವವರೂ ಮತ್ತು ತೆಗೆದುಕೊಳ್ಳುವವರೂ ಸಕಲ ಪಾಪದಿಂದ ನಿರ್ಮುಕ್ತರಾಗಿ ವೈಕುಂಠವಾಸಿಗಳಾಗುವರು.

೭. ಬೇಡಿದಾಗಲೇ ಭೂಮಿಯನ್ನು ದಾನಮಾಡುವೆನೆಂದು ಪ್ರತಿಜ್ಞೆ ಮಾಡುವ ಸಾಧುವು ತನ್ನ ಬಂಧುಮಿತ್ರರೊಡನೆ ವೈಕಂಠದಲ್ಲಿ ನೆಲೆಸುವನು.

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇತ್ತು
ಕಾಲಸೂತ್ರೇ ತಿಷ್ಠತಿ ಸ ಯಾವಚ್ಚಂದ್ರದಿವಾಕರೌ

ತತ್ಪುತ್ರಪೌತ್ರಪ್ರಭೃತಿರ್ಭೂಮಿಹೀನಃ ಶ್ರೀಯಾ ಹತಃ ।
ಸುಖಹೀನೋ ದರಿದ್ರಃ ಸ್ಯಾದಂತೇ ಯಾತಿ ಚ ರೌರವಂ ॥ ೯ ॥

ಗವಾಂ ಮಾರ್ಗಂ ವಿನಿಷ್ಕೃಷ್ಯ ಯಶ್ಚ ಸಸ್ಯಂ ದದಾತಿ ಸಃ ।
ದಿವ್ಯಂ ವರ್ಷಶತಂ ಚೈವ ಕುಂಭೀಪಾಕೇ ಚ ತಿಷ್ಠತಿ ॥ ೧೦ ॥

ಗೋಷ್ಠಂ ತಡಾಗಂ ನಿಷ್ಕೃಷ್ಯ ಮಾರ್ಗಂ ಸಸ್ಯಂ ದದಾತಿ ಯಃ ।
ಸ ಚ ತಿಷ್ಠತ್ಯಸೀಪತ್ರೇ ಯಾವದಿಂದ್ರಾಶ್ಚತುರ್ದಶ ॥ ೧೧ ॥

---

೮. ತಾನಾಗಲೀ, ಇತರರಾಗಲೀ, ದಾನಮಾಡಿದ ಬ್ರಾಹ್ಮಣಸ್ವತ್ತನ್ನು ಯಾರು ಅಪಹರಿಸುವರೋ ಅವರು ಸೂರ್ಯಚಂದ್ರರಿರುವವರೆಗೂ ಕಾಲಸೂತ್ರವೆಂಬ ನರಕದಲ್ಲಿ ನರಳುವರು.

೯. ಅಲ್ಲದೆ ಅವನ ಪುತ್ರಪೌತ್ರಾದಿಗಳೂ ಕೂಡ ಭೂಮಿ ಮತ್ತು ಸಂಪತ್ತುಗಳಿಲ್ಲದೆ ಸುಖರಹಿತರಾಗಿ ದಾರಿದ್ರ್ಯವನ್ನನುಭವಿಸುತ್ತಾ ಕೊನೆಯಲ್ಲಿ ರೌರವವೆಂಬ ನರಕಕ್ಕೆ ಹೋಗುವರು.

೧೦. ಹಸುಗಳು ಮೇಯುವ ಗೋಮಾಳವನ್ನುಳಿಸಿ ಪೈರನ್ನು ಬೆಳೆಯುವವನು, ನೂರು ದಿವ್ಯ ವರ್ಷಕಾಲ ಕುಂಭೀಪಾಕವೆಂಬ ನರಕದಲ್ಲಿ ತೊಳಲುವನು.

೧೧. ದನಗಳ ಕೊಟ್ಟಿಗೆ, ಕೆರೆಯಂಗಳ, ಮತ್ತು ತಿರುಗಾಡುವ ದಾರಿಗಳನ್ನುಳಿಸಿ ಪೈರನ್ನು ಬೆಳೆಯುವ ಮನುಜನು ಚತುರ್ದಶ ಇಂದ್ರರ ಜೀವಿತಕಾಲ ಪರ್ಯಂತ ಅಸಿಪತ್ರವೆಂಬ ನರಕದಲ್ಲಿರುವನು.

ನ ಪಂಚ ಪಿಂಡಮುದ್ಧೃತ್ಯ ಸ್ನಾತಿ ಕೂಪೇ ಪರಸ್ಯ ಯಃ ।
ಪ್ರಾಪ್ನೋತಿ ನರಕಂ ಚೈವ ನ ಸ್ನಾನಫಲಮೇವ ಚ ॥ ೧೨ ॥

ಕಾಮೀ ಭೂಮೌ ಚ ರಹಸಿ ಬೀಜತ್ಯಾಗಂ ಕರೋತಿ ಯಃ ।
ಸ್ನಿಗ್ಧರೇಣುಪ್ರಮಾಣಂ ಚ ವರ್ಷಂ ತಿಷ್ಠತಿ ರೌರವೇ ॥ ೧೩ ॥

ಅಂಬುವೀಚ್ಯಂಬುಖನನಂ ಯಃ ಕರೋತಿ ಚ ಮಾನವಃ ।
ಸ ಯಾತಿ ಕೃಮಿದಂಶಂ ಚ ಸ್ಥಿತಿಸ್ತತ್ರ ಚತುರ್ಯುಗಂ ॥ ೧೪ ॥

ಪರಕೀಯೇ ಲುಪ್ತಕೂಪೇ ಕೂಪಂ ಮೂಢಃ ಕರೋತಿ ಯಃ ।
ಪುಷ್ಕರಿಣ್ಯಾಂ ಚ ಲುಪ್ತಾಯಾಂ ತಾಂ ದದಾತಿ ಚ ಯೋ ನರಃ ॥ ೧೫ ॥

ಸರ್ವಂ ಫಲಂ ಪರಸ್ಯೈವ ತಪ್ತಸೂರ್ಮಿಂ ವ್ರಜೇತ್ತು ಸಃ ।
ತತ್ರ ತಿಷ್ಠತಿ ಸಂತಪ್ತೋ ಯಾವದಿಂದ್ರಾಶ್ಚತುರ್ದಶ ॥ ೧೬ ॥

---

೧೨. ಯಾರು ಮತ್ತೊಬ್ಬರ ಭಾವಿಯಲ್ಲಿ ಐದು ಹಿಡಿ ಮಣ್ಣನ್ನು ಹೊರಕ್ಕೆ ತೆಗೆದು ಹಾಕದೆ ಸ್ನಾನಮಾಡುವರೋ ಅವರು ನರಕವನ್ನು ಹೊಂದುವುದಲ್ಲದೆ ಸ್ನಾನಫಲವನ್ನೂ ಕಳೆದುಕೊಳ್ಳುವರು.

೧೩. ಕಾಮುಕನಾದ ಮನುಜನು ಭೂಮಿಯಲ್ಲಿ ಗೋಪ್ಯವಾಗಿ ರೇತಸ್ಸನ್ನು ಬಿಟ್ಟರೆ ಭೂಮಿಯಲ್ಲಿರುವ ಧೂಳೀಕಣಗಳಷ್ಟು ಕಾಲ ರೌರವ ನರಕದಲ್ಲಿರುವನು.

೧೪. ಆರಿದ್ರಾ ನಕ್ಷತ್ರದ ನಾಲ್ಕನೆಯ ಪಾದದಲ್ಲಿ ಸೂರ್ಯನಿರುವಾಗ ಭೂಮಿಯು ರಜಸ್ವಲೆಯಾಗುವಳು. ಆ ಕಾಲದಲ್ಲಿ ಭೂಮಿಯನ್ನು ಉಳುವವನು, ನಾಲ್ಕು ಯುಗಗಳಷ್ಟು ಕಾಲ ಕ್ರಿಮಿದಂಶವೆಂಬ ನರಕದಲ್ಲಿ ತೊಳಲುವನು.

೧೫–೧೬. ನೀರು ಒರದಿರುವ ಮತ್ತೊಬ್ಬರ ಭಾವಿಯಲ್ಲಿ ನೀರು ಬರುವಂತೆ ತೋಡಿಸುವ ಮೂಢನೂ, ನೀರು ಬತ್ತಿದ ಕೊಳವನ್ನು ದಾನಮಾಡುವವನೂ, ಫಲವನ್ನು ಮತ್ತೊಬ್ಬರಿಗೆ ಕೊಟ್ಟು, ತಾನು ಹದಿನಾಲ್ಕು ಇಂದ್ರರ ಜೀವಿತಕಾಲದ ವರೆಗೆ ತಪ್ತೋರ್ಮಿ ಎಂಬ ನರಕದಲ್ಲಿರುವನು.

ಪರಕೀಯತಡಾಗೇ ಚ ಪಂಕಮುದ್ಧೃತ್ಯ ಚೋತ್ಸೃಜೇತ್ ।
ರೇಣುಪ್ರಮಾಣವರ್ಷಂ ಚ ಬ್ರಹ್ಮಲೋಕೇ ವಸೇನ್ನರಃ ॥ ೧೭ ॥

ಪಿಂಡಂ ಪಿತ್ರೇ ಭೂಮಿಭರ್ತುರ್ನ ಪ್ರದಾಯ ಚ ಮಾನವಃ ।
ಶ್ರಾದ್ಧಂ ಕರೋತಿ ಯೋ ಮೂಢೋ ನರಕಂ ಯಾತಿ ನಿಶ್ಚಿತಂ ॥ ೧೮ ॥

ಭೂಮೌ ದೀಪಂ ಯೋಽರ್ಪಯತಿ ಸೋಽನ್ಧಃ ಸಪ್ತಸು ಜನ್ಮಸು ।
ಭೂಮೌ ಶಂಖಂ ಚ ಸಂಸ್ಥಾಪ್ಯ ಕುಷ್ಠಂ ಜನ್ಮಾಂತರೇ ಲಭೇತ್ ॥ ೧೯ ॥

ಮುಕ್ತಾಮಾಣಿಕ್ಯಹೀರಂ ಚ ಸುವರ್ಣಂ ಚ ಮಣಿಂ ತಥಾ ।
ಯಶ್ಚ ಸಂಸ್ಥಾಪಯೇದ್ಭೂಮೌ ದರಿದ್ರಃ ಸಪ್ತಜನ್ಮಸು ॥ ೨೦ ॥

ಶಿವಲಿಂಗಂ ಶಿಲಾಮರ್ಚ್ಯಾಂ ಯಶ್ಚಾರ್ಪಯತಿ ಭೂತಲೇ ।
ಶತಮನ್ವಂತರಂ ಯಾವತ್ಕೃಮಿಭಕ್ಷೇ ಸ ತಿಷ್ಠತಿ ॥ ೨೧ ॥

---

೧೭. ಮತ್ತೊಬ್ಬರು ತೋಡಿಸಿದ ಕೆರೆಯಲ್ಲಿ ಕೆಸರನ್ನು ಎತ್ತಿ ಎಸೆಯುವ ಮನುಜನು, ಆ ಕೆಸರಿನಲ್ಲಿರುವ ಧೂಳಿಕಣಗಳಷ್ಟು ಕಾಲ ಬ್ರಹ್ಮಲೋಕದಲ್ಲಿ ಸುಖವಾಗಿರುವನು

೧೮. ಶ್ರಾದ್ಧಮಾಡಲವಕಾಶಕೊಟ್ಟಿರುವ ಭೂಮಿಯ ಯಜಮಾನನ ಪಿತೃವಿಗೆ ಪಿಂಡವನ್ನು ಕೊಡದೆ ಶ್ರಾದ್ಧಮಾಡುವ ಮನುಷ್ಯನು ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ.

೧೯. ನೆಲದ ಮೇಲೆ ದೀಪವನ್ನು ಇರಿಸುವವರು ಏಳು ಜನ್ಮಗಳ ಕಾಲ ಕುರುಡರಾಗಿ ಜನಿಸುವರು. ಭೂಮಿಯ ಮೇಲೆ ಶಂಖವನ್ನಿಡುವವನು ಬೇರೆ ಜನ್ಮದಲ್ಲಿ ಕುಷ್ಠರೋಗಿಯಾಗುವನು.

೨೦. ಮುತ್ತು, ಮಾಣಿಕ್ಯ, ವಜ್ರ, ಕೆಂಪು, ಚಿನ್ನ ಮುಂತಾದುವುಗಳನ್ನು ನೆಲದ ಮೇಲಿಡುವವರು ಏಳು ಜನ್ಮಗಳು ದರಿದ್ರರಾಗಿರುವರು.

೨೧. ಪೂಜಾಯೋಗ್ಯವಾದ ಶಿವಲಿಂಗವನ್ನೂ, ಸಾಲಿಗ್ರಾಮಶಿಲೆಯನ್ನೂ ನೆಲದ ಮೇಲಿಡುವವನು, ನೂರು ಮನ್ವಂತರಗಳ ಕಾಲ ಕ್ರಿಮಿಭಕ್ಷವೆಂಬ ನರಕದಲ್ಲಿರುವನು.

ಸೂಕ್ತಂ ಮಂತ್ರಂ ಶಿಲಾತೋಯಂ ಪುಷ್ಪಂ ಚ ತುಲಸೀದಲಂ ।
ಯಶ್ಚಾರ್ಪಯತಿ ಭೂಮೌ ಚ ಸ ತಿಷ್ಠೇನ್ನರಕೇ ಯುಗಂ ॥ ೨೨ ॥

ಜಪಮಾಲಾಂ ಪುಷ್ಪಮಾಲಾಂ ಕರ್ಪೂರಂ ರೋಚನಾಂ ತಥಾ ।
ಯೋ ಮೂಢಶ್ಚಾರ್ಪಯೇದ್ಭೂಮೌ ಸ ಯಾತಿ ನರಕಂ ಧ್ರುವಂ ॥ ೨೩ ॥

ಮುನೇ ಚಂದನಕಾಷ್ಠಂ ಚ ರುದ್ರಾಕ್ಷಂ ಕುಶಮೂಲಕಂ ।
ಸಂಸ್ಥಾಪ್ಯ ಭೂಮೌ ನರಕೇ ವಸೇನ್ಮನ್ವಂತರಾವಧಿ ॥ ೨೪ ॥

ಪುಸ್ತಕಂ ಯಜ್ಞಸೂತ್ರಂ ಚ ಭೂಮೌ ಸಂಸ್ಥಾಪಯೇತ್ತು ಯಃ ।
ನ ಭವೇದ್ವಿಪ್ರಯೋನೌ ಚ ತಸ್ಯ ಜನ್ಮಾಂತರೇ ಜನಿಃ ॥ ೨೫ ॥

ಬ್ರಹ್ಮಹತ್ಯಾಸಮಂ ಪಾಪಮಿಹ ವೈ ಲಭತೇ ಧ್ರುವಂ ।
ಗ್ರಂಥಿಯುಕ್ತಂ ಯಜ್ಞಸೂತ್ರಂ ಪೂಜ್ಯಂ ಸ್ಯಾತ್ಸರ್ವವರ್ಣಕೈಃ ॥ ೨೬ ॥

---

೨೨. ಮಂತ್ರಸೂಕ್ತವನ್ನೂ, (ಸಾ) ಶಾಲಿಗ್ರಾಮತೀರ್ಥವನ್ನೂ, ಹೂ. ಮತ್ತು ತುಳಸೀದಳವನ್ನೂ ನೆಲದ ಮೇಲಿಡುವವನು ಒಂದು ಯುಗಪರ್ಯಂತ ನರಕವಾಸಿಯಾಗುವನು.

೨೩. ಜಪಸರ, ಪುಷ್ಪಮಾಲೆ, ಕರ್ಪೂರ, ಗೋರೋಚನ ಇವುಗಳನ್ನು ನೆಲದ ಮೇಲಿಡುವ ಮೂರ್ಖನು ನರಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ.

೨೪. ಎಲೈ ನಾರದಮುನಿಯೇ, ಗಂಧದಕೊರಡು, ರುದ್ರಾಕ್ಷಮಾಲೆ ದರ್ಭೆ ಇವುಗಳನ್ನು ನೆಲದ ಮೇಲೆ ಇಡುವ ಮನುಷ್ಯನು ಮನ್ವಂತರ ಕಾಲಾವಧಿ ನರಕವಾಸಿಯಾಗುವನು.

೨೫. ಪುಸ್ತಕ ಮತ್ತು ಯಜ್ಞೋಪವೀತಗಳನ್ನು ನೆಲದ ಮೇಲಿಡುವ ಮನುಷ್ಯನಿಗೆ ಪುನಃ ಜನ್ಮಾಂತರದಲ್ಲಿ ಬ್ರಾಹ್ಮಣಜನ್ಮವು ದುರ್ಲಭವಾಗುವುದು.

೨೬. ಬ್ರಹ್ಮಗಂಟಿನಿಂದ ಕೂಡಿರುವ ಯಜ್ಞೋಪವೀತವು ಸರ್ವರಿಗೂ ಪೂಜ್ಯವಾದುದು. ಅದನ್ನು ನೆಲದ ಮೇಲಿರಿಸಿದರೆ ಬ್ರಹ್ಮಹತ್ಯೆಗೆ ಸಮನಾದ ಪಾಪಕ್ಕೆ ಗುರಿಯಾಗುವನು.

ಯಜ್ಞಂ ಕೃತ್ವಾ ತು ಯೋ ಭೂಮಿಂ ಕ್ಷೀರೇಣ ನ ಹಿ ಸಿಂಚತಿ ।
ಸ ಯಾತಿ ತಪ್ತಸೂರ್ಮಿಂ ಚ ಸಂತಪ್ತಃ ಸರ್ವಜನ್ಮಸು ॥ ೨೭ ॥

ಭೂಕಂಪೇ ಗ್ರಹಣೇ ಯೋ ಹಿ ಕರೋತಿಖನನಂ ಭುವಃ
ಜನ್ಮಾಂತರೇ ಮಹಾಪಾಪೀ ಸೋಽಙ್ಗಹೀನೋ ಭವೇದ್ಧ್ರುವಂ ॥ ೨೮ ॥

ಭವನಂ ಯತ್ರ ಸರ್ವೇಷಾಂ ಭೂಮಿಸ್ತೇನ ಪ್ರಕೀರ್ತಿತಾ ।
ವಸುರತ್ನಂ ಯಾ ದಧಾತಿ ವಸುಧಾ ಚ ವಸುಂಧರಾ ॥ ೨೯ ॥

ಹರೇರೂರೌ ಚ ಯಾ ಜಾತಾ ಸಾ ಚೋರ್ವೀ ಪರಿಕೀರ್ತಿತಾ ।
ಧರಾ ಧರಿತ್ರೀ ಧರಣೀ ಸರ್ವೇಷಾಂ ಧರಣಾತ್ತು ಯಾ ॥ ೩೦ ॥

---

೨೭. ಯಾರು ಯಜ್ಞಮಾಡಿ ಆ ಸ್ಥಳವನ್ನು ಹಾಲಿನಿಂದ ತೊಳೆಯುವುದಿಲ್ಲವೋ ಅವರು ಅನೇಕ ಜನ್ಮಗಳಲ್ಲಿ ಕಷ್ಟಗಳನ್ನನುಭವಿಸಿ ತಪ್ತಸೂರ್ಮಿ ಎಂಬ ನರಕಕ್ಕೆ ಹೋಗುವರು.

೨೮. ಭೂಕಂಪ ಮತ್ತು ಗ್ರಹಣಕಾಲಗಳಲ್ಲಿ ಭೂಮಿಯನ್ನು ಅಗೆಯುವವನು ಮುಂದಿನ ಜನ್ಮದಲ್ಲಿ ಮಹಾಪಾಪಿಯಾಗಿಯೂ, ಅಂಗಹೀನನಾಗಿಯೂ ಜನಿಸುವುದರಲ್ಲಿ ಸಂದೇಹವಿಲ್ಲ.

೨೯. ಅನೇಕ ಜೀವಿಗಳ ಭವನಗಳಿಗೆ ನೆಲವು ಆಧಾರವಾಗಿರುವುದರಿಂದ ಭೂಮಿ ಎಂದೂ, ವಸು–ಎಂದರೆ ರತ್ನ–ಅದನ್ನು ಗರ್ಭದೊಳಗೆ ಧರಿಸಿರುವುದರಿಂದ ವಸುಧಾ, ವಸುಂಧರಾ ಎಂದೂ ಹೆಸರು ಬಂದಿದೆ.

೩೦. ವಿಷ್ಣುವಿನ ತೊಡೆ (ಊರು) ಯಿಂದ ಜನಿಸಿದುದರಿಂದ ಉರ್ವೀ ಎಂದೂ, ಸಮಸ್ತರನ್ನು ಧರಿಸಿರುವುದರಿಂದ ಧರಾ, ಧರಿತ್ರೀ, ಧರಣೀ ಎಂದೂ ಹೆಸರು ಬಂದಿದೆ.

ಇಜ್ಯಾ ಚ ಯೋಗಭರಣಾತ್ಕ್ಷೋಣೀ ಕ್ಷೀಣಾ ಲಯೇ ಚ ಯಾ ।
ಮಹಾಲಯೇ ಕ್ಷಯಂ ಯಾತಿ ಕ್ಷಿತಿಸ್ತೇನ ಪ್ರಕೀರ್ತಿತಾ ॥ ೩೧ ॥

ಕಾಶ್ಯಪೀ ಕಶ್ಯಪಸ್ಯೇಯಮಚಲಾ ಸ್ಥಿತಿರೂಪತಃ ।
ವಿಶ್ವಂಭರಾ ತದ್ಧರಣಾಚ್ಚಾನಂತಾನಂತರೂಪತಃ ॥ ೩೨ ॥

ಪೃಥ್ವೀ ಪೃಥುಕಕನ್ಯಾತ್ವಾದ್ವಿಸ್ತೃತತ್ವಾನ್ಮಹೀ ಮುನೇ ॥ ೩೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ಪೃಥಿವ್ಯುಪಾಖ್ಯಾನಂ
ನಾಮ ನವಮೋಽಧ್ಯಾಯಃ

೩೧–೩೨. ಯಾಗಗಳಿಗೆ ಆಶ್ರಯವಾಗಿರುವುದರಿಂದ ಇಜ್ಯಾ ಎಂದೂ, ಪ್ರಲಯದಲ್ಲಿ ಕ್ಷೀಣವಾಗುವುದರಿಂದ ಕ್ಷೋಣಿ ಎಂದೂ, ಕಶ್ಯಪಪುತ್ರಿ ಯಾದುದರಿಂದ ಕಾಶ್ಯಪೀ ಎಂದೂ, ಚಲಿಸದಿರುವುದರಿಂದ ಅಚಲಾ ಎಂದೂ, ಸಮಸ್ತ ವಿಶ್ವವನ್ನೂ ಧರಿಸಿರುವುದರಿಂದ ವಿಶ್ವಂಭರಾ ಎಂದೂ, ಅನಂತರೂಪವುಳ್ಳದ್ದರಿಂದ ಅನಂತಾ ಎಂದೂ ಹೆಸರು ಬಂದಿದೆ.

೩೩. ಪೃಥುರಾಜನ ಮಗಳಾದುದರಿಂದ ಪೃಥಿವೀ ಎಂದೂ, ವಿಸ್ತಾರವಾಗಿರುವುದರಿಂದ ಮಹೀ ಎಂದೂ ವಿಖ್ಯಾತವಾಗಿದೆ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದ ನಾರಾಯಣ
ಸಂವಾದರೂಪವಾದ ಪೃಥಿವ್ಯುಪಾಖ್ಯಾನವೆಂಬ ಒಂಭತ್ತನೆಯ
ಅಧ್ಯಾಯವು ಮುಗಿದುದು.

ಒಂಭತ್ತನೆಯ ಅಧ್ಯಾಯದ ಸಾರಾಂಶವು

ಭೂಮಿ ದಾನಮಾಡುವುದರಿಂದ ವಿಶೇಷ ಪುಣ್ಯವೂ, ದತ್ತಾಹಪಾರದಿಂದಲೂ, ಪರಕ್ಷೇತ್ರದಲ್ಲಿ ಶ್ರಾದ್ಧಮಾಡುವುದರಿಂದಲೂ, ನೆಲದ ಮೇಲೆ ದೀಪಾದಿಗಳನ್ನಿಡುವುದರಿಂದಲೂ ಮಹಾಪಾಪವೂ ಸಂಭವಿಸುವುದು. ಶಂಖ, ಸಾಲಿಗ್ರಾಮ, ತುಳಸಿ ಮುಂತಾದ ಪವಿತ್ರವಸ್ತುಗಳಾವುದನ್ನೂ ನೆಲದ ಮೇಲಿಡಬಾರದು. ಭೂದೇವಿಗೆ ಧರಾ, ಧರಿತ್ರೀ, ಧರಣಿ, ಉರ್ವೀ, ಪೃಥ್ವಿ ಮುಂತಾದ ಅನೇಕ ಹೆಸರುಗಳು ಅನ್ವರ್ಥವಾಗಿವೆ.

(ಈ ಅಧ್ಯಾಯದಲ್ಲಿ ವಸುಂಧರೆಯ ಮಹಿಮೆಯು ಉಕ್ತವಾಗಿದೆ.)

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ದಶಮೋಽಧ್ಯಾಯಃ ॥

॥ ನಾರದ ಉವಾಚ ॥

ಶ್ರುತಂ ಪೃಥಿವ್ಯುಪಾಖ್ಯಾನಮತೀವ ಸುಮನೋಹರಂ ।
ಗಂಗೋಪಾಖ್ಯಾನಮಧುನಾ ವದ ವೇದವಿದಾಂ ವರ ॥ ೧ ॥

ಭಾರತಂ ಭಾರತೀಶಾಪಾದಾಜಗಾಮ ಸುರೇಶ್ವರೀ ।
ವಿಷ್ಣುಸ್ವರೂಪಾ ಪರಮಾ ಸ್ವಯಂ ವಿಷ್ಣುಪದೀ ಸತೀ ॥ ೨ ॥

ಕಥಂ ಕುತ್ರ ಯುಗೇ ಕೇನ ಪ್ರಾರ್ಥಿತಾ ಪ್ರೇರಿತಾ ಪುರಾ ।
ತತ್ಕ್ರಮಂ ಶ್ರೋತುಮಿಚ್ಛಾಮಿ ಪಾಪಘ್ನಂ ಪುಣ್ಯದಂ ಶುಭಂ ॥ ೩ ॥

ಹತ್ತನೆಯ ಅಧ್ಯಾಯವು

೧. ಶ್ರುತಿಮಧುರವಾದ ಪೃಥಿವಿಯ ಉಪಾಖ್ಯಾನವನ್ನು ಕೇಳಿ ಆನಂದಿಸಿದೆನು. ಎಲೈ, ವೇದಜ್ಞರಲ್ಲಿ ಶ್ರೇಷ್ಠನಾದ ನಾರಾಯಣಮಹರ್ಷಿಯೇ ಈಗ ಗಂಗೋಪಾಖ್ಯಾನವನ್ನು ದಯವಿಟ್ಟು ಹೇಳು.

೨–೩. ವಿಷ್ಣುಪಾದೋದ್ಭವಳೂ, ವಿಷ್ಣುಸ್ವರೂಪಳೂ, ಸುರೇಶ್ವರಿಯೂ ಆದ ಗಂಗೆಯು ಸರಸ್ವತಿಯ ಶಾಪದಿಂದ ಹೇಗೆ, ಯಾವಯುಗದಲ್ಲಿ, ಯಾರ ಪ್ರೇರಣೆಯಂತೆ, ಯಾರ ಪ್ರಾರ್ಥನೆಯಂತೆ ಭರತಖಂಡಕ್ಕೆ ಬಂದಳು. ಪಾಪನಾಶಕವೂ, ಪುಣ್ಯದಾಯಕವೂ ಆದ ಗಂಗೆಯ ಅವತಾರ ಕ್ರಮವನ್ನು ಕೇಳಲು ಬಯಸುವೆನು.

|| ನಾರಾಯಣ ಉವಾಚ ||

ರಾಜರಾಜೇಶ್ವರಃ ಶ್ರೀಮಾನ್ ಸಗರಃ ಸೂರ್ಯವಂಶಜಃ ।
ತಸ್ಯ ಭಾರ್ಯೇ ಚ ವೈದರ್ಭೀ ಶೈಬ್ಯಾ ಚ ದ್ವೇ ಮನೋಹರೇ || ೪ ||

ಸತ್ಯಸ್ವರೂಪಃ ಸತ್ಯೇಷ್ಟಃ ಸತ್ಯವಾಕ್ಸತ್ಯಭಾವನಃ ।
ಸತ್ಯಧರ್ಮವಿಚಾರಜ್ಞಃ ಪರಂ ಸತ್ಯಯುಗೋದ್ಭವಃ || ೫ ||

ಏಕಾ ಕನ್ಯಾ ಚೈಕಪುತ್ರೋ ಬಭೂವ ಸುಮನೋಹರಃ ।
ಅಸಮಂಜ ಇತಿ ಖ್ಯಾತಃ ಶೈಬ್ಯಾಯಾಂ ಕುಲವರ್ಧನಃ || ೬ ||

ಅನ್ಯಾ ಚಾರಾಧಯಾಮಾಸ ಶಂಕರಂ ಪುತ್ರಕಾಮುಕೀ ।
ಬಭೂವ ಗರ್ಭಸ್ತಸ್ಯಾಶ್ಚ ಶಿವಸ್ಯ ತು ವರೇಣ ಚ || ೭ ||

ಗತೇ ಶತಾಬ್ದೇ ಪೂರ್ಣೇ ಚ ಮಾಂಸಪಿಂಡಂ ಸುಷಾವ ಸಾ ।
ತದ್ದೃಷ್ಟ್ವಾ ಚ ಶಿವಂ ಧ್ಯಾತ್ವಾ ರುರೋದೋಚ್ಚೈಃ ಪುನಃ ಪುನಃ || ೮ ||

---

೪. ನಾರಾಯಣಋಷಿ :—ಸೂರ್ಯವಂಶದಲ್ಲಿ, ರಾಜರಿಗೆಲ್ಲ ಶ್ರೇಷ್ಠನೂ, ಶ್ರೀಮಂತನೂ ಆದ ಸಗರನೆಂಬ ರಾಜನಿದ್ದನು. ಅವನಿಗೆ ವೈದರ್ಭೀ, ಶೈಬ್ಯೆ ಎಂಬಿಬ್ಬರು ಸುಂದರಪತ್ನಿಯರಿದ್ದರು.

೫. ಸತ್ಯಸ್ವರೂಪನೂ, ಸತ್ಯವಾದುದರಲ್ಲಿ ಇಚ್ಛೆಯುಳ್ಳವನೂ, ಸತ್ಯವಾಚಿಯೂ, ಸತ್ಯಾಭಿಪ್ರಾಯವುಳ್ಳವನೂ, ಸತ್ಯಧರ್ಮವಿಚಾರಗಳನ್ನರಿತವನೂ ಆದ ಆ ಸಗರನು ಸತ್ಯಯುಗದಲ್ಲಿ ಹುಟ್ಟಿದ್ದನು.

೬. ಅವನ ಪತ್ನಿಯಾದ ಶೈಬ್ಯೆಯಲ್ಲಿ ಕುಲವರ್ಧಕನೂ, ಮನೋಹರನೂ ಆದ ಒಬ್ಬ ಮಗನು ಜನಿಸಿ ಅಸಮಂಜನೆಂದು ಖ್ಯಾತಿಪಡೆದನು. ಅಲ್ಲದೆ ಶೈಬ್ಯೆಯು ಒಬ್ಬಳು ಕನ್ಯೆಯನ್ನೂ ಪಡೆದಳು.

೭. ವೈದರ್ಭಿಯೂ ಕೂಡ ಮಗನ ಬಯಕೆಯಿಂದ ಶಂಕರನನ್ನು ಆರಾಧಿಸಿ ಅವನ ವರದಿಂದ ಗರ್ಭವತಿಯೂ ಆದಳು.

೮. ನೂರುವರ್ಷಗಳು ಕಳೆದ ನಂತರ ಆಕೆಯು ಕೇವಲ ಮಾಂಸಪಿಂಡವೊಂದನ್ನು ಹಡೆದಳು. ಆ ಪಿಂಡವನ್ನು ನೋಡಿ ಆಕೆಯು ಗೋಳಾಡುತ್ತಾ ಮತ್ತೆ ಮತ್ತೆ ಶಿವನನ್ನು ಧ್ಯಾನಿಸಿದಳು.

ಶಂಭುರ್ಬ್ರಾಹ್ಮಣರೂಪೇಣ ತತ್ಸಮೀಪಂ ಜಗಾಮ ಹ।
ಚಕಾರ ಸಂವಿಭಜ್ಯೈತತ್ಪಿಂಡಂ ಷಷ್ಟಿಸಹಸ್ರಧಾ ॥ ೯ ॥

ಸರ್ವೇ ಬಭೂವುಃ ಪುತ್ರಾಶ್ಚ ಮಹಾಬಲಪರಾಕ್ರಮಾಃ ।
ಗ್ರೀಷ್ಮಮಧ್ಯಾಹ್ನಮಾರ್ತಾಂಡಪ್ರಭಾಜುಷ್ಟ ಕಲೇ ವರಾಃ ॥ ೧೦ ॥

ಕಪಿಲರ್ಷೇಃ ಕೋಪದೃಷ್ಟ್ಯಾ ಬಭೂವುರ್ಭಸ್ಮಸಾಚ್ಚ ತೇ ।
ರಾಜಾ ರುರೋದ ತಚ್ಛೃತ್ವಾ ಜಗಾಮ ಮರಣಂ ಶುಚಾ ॥ ೧೧ ॥

ತಪಶ್ಚಕಾರಾಸಮಂಜೋ ಗಂಗಾऽನಯನಕಾರಣಾತ್ ।
ತಪಃ ಕೃತ್ವಾ ಲಕ್ಷವರ್ಷಂ ಮೃತಶ್ಚ ಕಾಲಯೋಗತಃ ॥ ೧೨ ॥

ದಿಲೀಪಸ್ತಸ್ಯ ತನಯೋ ಗಂಗಾನಯನಕಾರಣಾತ್ ।
ತಪಃ ಕೃತ್ವಾ ಲಕ್ಷವರ್ಷಂ ಯಯೌ ಲೋಕಾಂತರಂ ನೃಪಃ ॥ ೧೩ ॥

---

೯. ಆಗ ಈಶ್ವರನು ಬ್ರಾಹ್ಮಣರೂಪದಿಂದ ಆಕೆಯ ಸಮೀಪಕ್ಕೆ ಬಂದು ಆ ಪಿಂಡವನ್ನು ಅರವತ್ತು ಸಾವಿರ ವಿಭಾಗ ಮಾಡಿ ಜೀವಕಳೆಯನ್ನು ತುಂಬಿ ಹೋದನು.

೧೦. ಆ ಅರವತ್ತು ಸಾವಿರಮಕ್ಕಳೂ, ಅತ್ಯಂತ ಬಲಪರಾಕ್ರಮಯುತರೂ, ಗ್ರೀಷ್ಮಮಧ್ಯಾಹ್ನದ ಸೂರ್ಯನಂತೆ ತೇಜಸ್ವಿಗಳೂ ಆದರು.

೧೧. ಅವರೆಲ್ಲರೂ ತಂದೆಯ ಯಜ್ಞಾಶ್ವವನ್ನು ತರಲು ಹೋಗಿ ಕಪಿಲ ಮಹರ್ಷಿಯ ಶಾಪದಿಂದ ಬೂದಿಯಾದರು. ಅದನ್ನು ಕೇಳಿ ರಾಜನಾದ ಸಗರನು ಗೋಳಾಡುತ್ತಾ ಮರಣಹೊಂದಿದನು.

೧೨. ಮೃತರಾದ ಸಹೋದರರನ್ನು ಪವಿತ್ರಗೊಳಿಸಲು ಗಂಗೆಯನ್ನು ತರುವುದಕ್ಕಾಗಿ ಅಸಮಂಜನು ತಪಸ್ಸುಮಾಡಿದನು. ಒಂದು ಲಕ್ಷವರ್ಷ ತಪಸ್ಸುಮಾಡಿ ಕಾಲಗತಿಯಿಂದ ಮರಣಹೊಂದಿದನು.

೧೩. ಆವನ ಮಗನಾದ ದಿಲಿಪನೂ ಕೂಡ ಗಂಗೆಯನ್ನು ತರಲು ಒಂದು ಲಕ್ಷವರ್ಷ ತಪಸ್ಸುಮಾಡಿ ತರಲಾಗದೆ ಲೋಕಾಂತರವನ್ನೈದಿದನು.

ಅಂಶುಮಾಂಸ್ತಸ್ಯ ಪುತ್ರಶ್ಚ ಗಂಗಾನಯನಕಾರಣಾತ್
ತಪಃ ಕೃತ್ವಾ ಲಕ್ಷವರ್ಷಂ ಮೃತಶ್ಚ ಕಾಲಯೋಗತಃ ॥ ೧೪ ॥

ಭಗೀರಥಸ್ತಸ್ಯ ಪುತ್ರೋ ಮಹಾಭಾಗವತಃ ಸುಧೀಃ ।
ವೈಷ್ಣವೋ ವಿಷ್ಣುಭಕ್ತಶ್ಚ ಗುಣವಾನಜರಾಮರಃ ॥ ೧೫ ॥

ತಪಃ ಕೃತ್ವಾ ಲಕ್ಷವರ್ಷಂ ಗಂಗಾನಯನಕಾರಣಾತ್ ।
ದದರ್ಶ ಕೃಷ್ಣಂ ಹೃಷ್ಟಾಸ್ಯಂ ಸೂರ್ಯಕೋಟಿಸಮಪ್ರಭಂ ॥ ೧೬ ॥

ದ್ವಿಭುಜಂ ಮುರಲೀಹಸ್ತಂ ಕಿಶೋರಂ ಗೋಪವೇಷಕಂ ।
ಪರಮಾತ್ಮಾನಮೀಶಂ ಚ ಭಕ್ತಾನುಗ್ರಹವಿಗ್ರಹಂ ॥ ೧೭ ॥

ಸ್ವೇಚ್ಛಾಮಯಂ ಪರಂ ಬ್ರಹ್ಮ ಪರಿಪೂರ್ಣತಮಂ ವಿಭುಂ ।
ಬ್ರಹ್ಮವಿಷ್ಣುಶಿವಾದ್ಯೈಶ್ಚ ಸ್ತುತಂ ಮುನಿಗಣೈರ್ಯುತಂ ॥ ೧೮ ॥

---

೧೪. ಅವನ ಪುತ್ರನಾದ ಅಂಶುಮಂತನೂ ಕೂಡ ಗಂಗೆಯನ್ನು ತರಲು ಲಕ್ಷವರ್ಷ ತಪಸ್ಸುಮಾಡಿ ಸಾಧ್ಯವಾಗದೆ ಮೃತಪಟ್ಟನು.

೧೫–೧೬. ಅಂಶುಮಂತನ ಪುತ್ರನೂ, ಪರಮಭಾಗವತನೂ, ಬುದ್ಧಿವಂತನೂ, ವಿಷ್ಣುಭಕ್ತನೂ, ಗುಣವಂತನೂ, ಜರಾಮರಣರಹಿತನೂ ಆದ ಭಗೀರಥನು ಗಂಗೆಯನ್ನು ತರಲು ಲಕ್ಷವರ್ಷಗಳ ಕಾಲ ತಪಸ್ಸುಮಾಡಿ ಕೋಟಿಸೂರ್ಯರಂತೆ ತೇಜಸ್ವಿಯೂ, ಸ್ಮಿತವದನನೂ ಆದ ಶ್ರೀಕೃಷ್ಣಪರಮಾತ್ಮನ ಸಾಕ್ಷಾತ್ಕಾರ ಹೊಂದಿದನು.

೧೭–೨೦. ಸರ್ವೇಶ್ವರನೂ, ಸ್ವೇಚ್ಛಾಮಯನೂ, ಪರಿಪೂರ್ಣಸ್ವರೂಪನೂ, ಬ್ರಹ್ಮವಿಷ್ಣುಶಿವಾದಿ ಸಕಲ ದೇವತೆಗಳಿಂದ ಸ್ತುತನೂ, ನಿರ್ಲಿಪ್ತನೂ, ಸಾಕ್ಷಿಸ್ವರೂಪನೂ, ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಕೃಷ್ಣಪರಮಾತ್ಮನು ಭಕ್ತಾನುಗ್ರಹಕ್ಕಾಗಿ ದಿವ್ಯಸುಂದರವಿಗ್ರಹಧಾರಿಯಾಗಿ ಅಲ್ಲಿಗೆ ಬಂದನು. ಕೈಯಲ್ಲಿ

ನಿರ್ಲಿಪ್ತಂ ಸಾಕ್ಷಿರೂಪಂ ಚ ನಿರ್ಗುಣಂ ಪ್ರಕೃತೇಃ ಪರಂ ।
ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ॥ ೧೯ ॥

ವಹ್ನಿಶುದ್ಧಾಂಶುಕಾಧಾನಂ ರತ್ನಭೂಷಣಭೂಷಿತಂ ।
ತುಷ್ಟಾವ ದೃಷ್ಟ್ವಾ ನೃಪತಿಃ ಪ್ರಣಮ್ಯ ಚ ಪುನಃ ಪುನಃ ॥ ೨೦ ॥

ಲೀಲಯಾ ಚ ವರಂ ಪ್ರಾಪ್ಯ ವಾಂಛಿತಂ ವಂಶತಾರಕಂ ।
ತತ್ರಾಜಗಾಮ ಗಂಗಾ ಸಾ ಸ್ಮರಣಾತ್ಪರಮಾತ್ಮನಃ ॥ ೨೧ ॥

ತಂ ಪ್ರಣಮ್ಯ ಪ್ರತಸ್ಥೌ ಚ ತತ್ಪುರಃ ಸಂಪುಟಾಂಜಲಿಃ ।
ಉವಾಚ ಭಗವಾಂಸ್ತತ್ರ ತಾಂ ದೃಷ್ಟ್ವಾ ಸುಮನೋಹರಾಂ ।
ಕುರ್ವತೀಂ ಸ್ತವನಂ ದಿವ್ಯಂ ಪುಲಕಾಂಚಿತವಿಗ್ರಹಾಂ ॥ ೨೨ ॥

॥ ಶ್ರೀ ಕೃಷ್ಣ ಉವಾಚ ॥

ಭಾರತಂ ಭಾರತೀಶಾಪಾದ್ಗಚ್ಛ ಶೀಘ್ರಂ ಸುರೇಶ್ವರಿ ॥ ೨೩ ॥

ಕೊಳಲನ್ನು ಧರಿಸಿ ಅಗ್ನಿಯಂತೆ ಪವಿತ್ರವಾದ ಪೀತಾಂಬರವನ್ನುಟ್ಟು, ರತ್ನಾಭರಣಗಳನ್ನು ತೊಟ್ಟು ಸ್ಮಿತವದನದಿಂದ ಭಕ್ತಾನುಗ್ರಹಕ್ಕಾಗಿ ಬಂದಿರುವ ಆ ಗೋಪಕಿಶೋರನನ್ನು ಕಂಡು ಭಗೀರಥನು ಸಾಷ್ಟಾಂಗವೆರಗಿ ಸ್ತುತಿಸಲಾರಂಭಿಸಿದನು.

೨೧. ಪರಮಾತ್ಮನ ಅನುಗ್ರಹದಿಂದ ತನಗೆ ಅಭೀಷ್ಟವೂ, ವಂಶೋದ್ಧಾರಕವೂ ಆದ ವರವನ್ನು ಪಡೆದನು. ಪರಮಾತ್ಮನು ಸ್ಮರಿಸಿದ ಕೂಡಲೇ ಗಂಗೆಯು ಅಲ್ಲಿಗೆ ಸಿದ್ಧಳಾಗಿ ಬಂದಳು.

೨೨. ಗಂಗೆಯು ಪರಮಾತ್ಮನಿಗೆ ನಮಸ್ಕರಿಸಿ ಅವನ ಮುಂದೆ ಕೈಮುಗಿದು ನಿಂತಳು. ಮನೋಹರಳಾದ ಆಕೆಯನ್ನು ನೋಡಿ ಭಗವಂತನು ಇಂತು ನುಡಿದನು ಆಕೆಯು ರೋಮಾಂಚಿತ ಶರೀರಳಾಗಿ ಪರಮಾತ್ಮನನ್ನು ಸ್ತುತಿಸುತ್ತಿದ್ದಳು.

೨೩. ಶ್ರೀಕೃಷ್ಣ :—ಎಲೌ, ಸುರೇಶ್ವರಿಯಾದ ಗಂಗೆಯೇ, ಸರಸ್ವತಿಯ ಶಾಪಕ್ಕೊಳಗಾದ ನೀನು ಭಾರತಕ್ಕೆ ಜಾಗ್ರತೆಯಾಗಿ ಹೋಗು.

ಸಗರಸ್ಯ ಸುತಾನ್ಸರ್ವಾನ್ಪೂತಾನ್ಕುರು ಮಮಾಜ್ಞಯಾ ।
ತ್ವತ್ಸ್ಪರ್ಶವಾಯುನಾ ಪೂತಾ ಯಾಸ್ಯಂತಿ ಮಮ ಮಂದಿರಂ ॥ ೨೪ ॥

ಬಿಭ್ರತೋ ದಿವ್ಯಮೂರ್ತಿಂ ತೇ ದಿವ್ಯಸ್ಯಂದನಗಾಮಿನಃ ।
ಮತ್ಪಾರ್ಷದಾ ಭವಿಷ್ಯಂತಿ ಸರ್ವಕಾಲಂ ನಿರಾಮಯಾಃ ॥ ೨೫ ॥

ಕರ್ಮಭೋಗಂ ಸಮುಚ್ಛಿದ್ಯ ಕೃತಂ ಜನ್ಮನಿ ಜನ್ಮನಿ ।
ನಾನಾವಿಧಂ ಮಹತ್ಸ್ವಲ್ಪಂ ಪಾಪಂ ಸ್ಯಾದ್ಭಾರತೇ ನೃಭಿಃ ॥ ೨೬ ॥

ಗಂಗಾಯಾಃ ಸ್ಪರ್ಶಪಾತೇನ ನಶ್ಯತೀತಿ ಶ್ರುತೌ ಶ್ರುತಂ ।
ಸ್ಪರ್ಶನಂ ದರ್ಶನಾದ್ದೇವ್ಯಾಃ ಪುಣ್ಯಂ ದಶಗುಣಂ ತತಃ ॥ ೨೭ ॥

ಮೌಸಲಸ್ನಾನಮಾತ್ರೇಣ ಸಾಮಾನ್ಯದಿವಸೇ ನೃಣಾಂ ।
ಕೋಟಿಜನ್ಮಾರ್ಜಿತಂ ಪಾಪಂ ನಶ್ಯತೀತಿ ಶ್ರುತೌ ಶ್ರುತಂ ॥ ೨೮ ॥

---

೨೪. ನನ್ನ ಅಪ್ಪಣೆಯಂತೆ ನೀನು ಭಾರತಕ್ಕೆ ಹೋಗಿ ಸಗರಪುತ್ರರನೆಲ್ಲ ಪವಿತ್ರಗೊಳಿಸು. ನಿನ್ನ ಸ್ಪರ್ಶದಿಂದ ಅವರೆಲ್ಲರೂ ಪವಿತ್ರರಾಗಿ ನನ್ನ ಲೋಕಕ್ಕೆ ಬಂದು ಸೇರುವರು.

೨೫. ಅವರೆಲ್ಲರೂ ದಿವ್ಯವಿಗ್ರಹಧಾರಿಗಳಾಗಿ, ದಿವ್ಯರಥದಲ್ಲಿ ಕುಳಿತು ಬಂದು ಯಾವಾಗಲೂ ನನ್ನ ಪಾರ್ಷದರಾಗಿ ಯಾವ ಬಾಧೆಯೂ ಇಲ್ಲದಿರುವರು. ಅವರ ಜನ್ಮಾಂತರ ಕರ್ಮಬಂಧನವೆಲ್ಲ ಬಯಲಾಗುವುದು.

೨೬–೨೭. ಭಾರತಭೂಮಿಯಲ್ಲಿರುವ ಜನರು ಮಾಡಿದ ಅಲ್ಪ ಪಾಪವಾಗಲೀ ಮಹಾಪಾಪವಾಗಲೀ, ಗಂಗೆಯ ಸ್ಪರ್ಶದಿಂದಲೂ, ಅದರ ವಾಯುಸೇವನೆಯಿಂದಲೂ, ನಾಶವಾಗುವುದೆಂದು ಶ್ರುತ್ಯುಕ್ತವಾಗಿದೆ. ಗಂಗೆಯ ದರ್ಶನಕ್ಕಿಂತಲೂ, ಸ್ಪರ್ಶನವು ಹತ್ತರಷ್ಟು ಪುಣ್ಯದಾಯಕವಾದುದು.

೨೮. ಸಂಕಲ್ಪಸ್ತೋತ್ರಾದಿಗಳಿಲ್ಲದೆ ನದಿಯಲ್ಲಿ ಮುಸಲದಂತೆ (ಒನಕೆಯಂತೆ) ಸುಮ್ಮನೆ ಮುಳುಗುವುದಕ್ಕೆ ಮೌಸಲಸ್ನಾನವೆಂದು ಹೆಸರು. ಮನುಜರು (ಪರ್ವದಿವಸಗಳಲ್ಲಲ್ಲದೆ) ಸಾಮಾನ್ಯ ದಿವಸಗಳಲ್ಲೂ ಮುಸಲದಂತೆ ಗಂಗೆಯಲ್ಲಿ ಮುಳುಗಿದರೂ ಕೂಡ ಅವರ ಕೋಟಿಜನ್ಮಾರ್ಜಿತ ಪಾಪವು ನಾಶವಾಗುವುದೆಂದು ಶ್ರುತಿಸಾರುತ್ತದೆ

ಯೋನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ನಾನಾಜನ್ಮಾರ್ಜಿತಾನ್ಯೇವ ಕಾಮತೋಽಪಿ ಕೃತಾನಿ ಚ ॥ ೨೯ ॥

ತಾನಿ ಸರ್ವಾಣಿ ನಶ್ಯಂತಿ ಮೌಸಲಸ್ನಾನತೋ ನೃಣಾಂ ।
ಪುಣ್ಯಾಹಸ್ನಾನಜಂ ಪುಣ್ಯಂ ವೇದಾ ನೈವ ವದಂತಿ ಚ ॥ ೩೦ ॥

ಕೇಚಿದ್ವದಂತಿ ತೇ ದೇವಿ ಫಲಮೇವ ಯಥಾಗಮಂ ।
ಬ್ರಹ್ಮವಿಷ್ಣುಶಿವಾದ್ಯಾಶ್ಚ ಸರ್ವೇ ನೈವ ವಿದಂತಿ ಚ ॥ ೩೧ ॥

ಸಾಮಾನ್ಯದಿವಸಸ್ನಾನಸಂಕಲ್ಪಂ ಶ್ರುಣು ಸುಂದರಿ ।
ಪುಣ್ಯಂ ದಶಗುಣಂ ಚೈವ ಮೌಸಲಸ್ನಾನತಃ ಪರಂ ॥ ೩೨ ॥

ತತಸ್ತ್ರಿಂಶದ್ಗುಣಂ ಪುಣ್ಯಂ ರವಿಸಂಕ್ರಮಣೇ ದಿನೇ ।
ಅಮಾಯಾಂ ಚಾಪಿ ತತ್ತುಲ್ಯಂ ದ್ವಿಗುಣಂ ದಕ್ಷಿಣಾಯನೇ ॥ ೩೩ ॥

೨೯-೩೦. ಇಚ್ಛಾಪೂರ್ವಕವಾಗಲೀ, ಅನಿಚ್ಛಾಪೂರ್ವಕವಾಗಲೀ, ಮಾಡಿದ ಬ್ರಹ್ಮಹತ್ಯಾದಿ ಸಕಲ ಮಹಾಪಾಪಗಳೂ ಕೂಡ ಗಂಗೆಯಲ್ಲಿ ಮೌಸಲಸ್ನಾನ ಮಾಡಿದ ಮಾತ್ರದಿಂದಲೇ ನಾಶವಾಗುವುದೆಂದ ಮೇಲೆ ಸಂಕಲ್ಪಸ್ತೋತ್ರಾದಿಗಳನ್ನು ಹೇಳಿಕೊಂಡು ಮಾಡುವ ಪುಣ್ಯಾಹ (ಪುಣ್ಯದಿವಸ) ಸ್ನಾನದ ಪುಣ್ಯವನ್ನು ಇಷ್ಟೇ ಎಂದು ವೇದವೂ ಕೂಡ ಹೇಳಲಾರದು.

೩೧. ಎಲೌ ಗಂಗಾದೇವಿಯೇ, ನಿನ್ನಲ್ಲಿ ಸ್ನಾನಮಾಡುವುದರಿಂದುಂಟಾಗುವ ಫಲವನ್ನು ಬ್ರಹ್ಮವಿಷ್ಣುಶಿವಾದಿಗಳೂ ವೇದೋಕ್ತವಾಗಿ ತಿಳಿದಿಲ್ಲವೆಂದು ಹೇಳುವರು.

೩೨. ಸಾಮಾನ್ಯದಿವಸದಲ್ಲಿ ಸಂಕಲ್ಪ ಪೂರ್ವಕವಾಗಿ ನಿನ್ನಲ್ಲಿ ಸ್ನಾನಮಾಡಿದರೆ ಮೌಸಲಸ್ನಾನಮಾಡಿದುದರ ಪುಣ್ಯಕ್ಕಿಂತ ಹತ್ತರಷ್ಟು ಪುಣ್ಯವು ಲಭಿಸುವುದು.

೩೩-೩೪. ಸೂರ್ಯಸಂಕ್ರಮಣ ಮತ್ತು ಅಮಾವಾಸ್ಯಾ ದಿನಗಳಲ್ಲಿ ಸಂಕಲ್ಪ ಸ್ನಾನಮಾಡುವುದರಿಂದ ಅದಕ್ಕೆ ಇಪ್ಪತ್ತರಷ್ಟು ಪುಣ್ಯವೂ,ದಕ್ಷಿಣಾಯನ ಪುಣ್ಯಕಾಲ ದಲ್ಲಿ ಸ್ನಾನಮಾಡುವುದರಿಂದ ಅದಕ್ಕೆರಡರಷ್ಟು ಪುಣ್ಯವೂ, ಉತ್ತರಾಯಣ ಪುಣ್ಯ

ತತೋ ದಶಗುಣಂ ಪುಣ್ಯಂ ನರಾಣಾಮುತ್ತರಾಯಣೇ ।
ಚಾತುರ್ಮಾಸ್ಯಾಂ ಪೌರ್ಣಮಾಸ್ಯಾಮನಂತಂ ಪುಣ್ಯಮೇವ ಚ ॥ ೩೪ ॥

ಅಕ್ಷಯಾಯಾಂ ಚ ತತ್ತುಲ್ಯಂ ನೈತದ್ವೇದೇ ನಿರೂಪಿತಂ ।
ಅಸಂಖ್ಯಪುಣ್ಯಫಲದಮೇತೇಷು ಸ್ನಾನದಾನಕಂ ॥ ೩೫ ॥

ಸಾಮಾನ್ಯದಿವಸೇ ಸ್ನಾನಂ ಧ್ಯಾನಾಚ್ಛತಗುಣಂ ಫಲಂ ।
ಮನ್ವಂತರೇಷು ದೇವೇಶಿ ಯುಗಾದಿಷು ತಥೈವ ಚ ॥ ೩೬ ॥

ಮಾಘಸ್ಯ ಸಿತಸಪ್ತಮ್ಯಾಂ ಭೀಷ್ಮಾಷ್ಟಮ್ಯಾಂ ತಥೈವ ಚ ।
ತಥಾಽಶೋಕಾಷ್ಟಮೀತಿಥ್ಯಾಂ ನವಮ್ಯಾಂ ಚ ತಥಾ ಹರೇಃ ॥ ೩೭ ॥

ತತೋಽಪಿ ದ್ವಿಗುಣಂ ಪುಣ್ಯಂ ನಂದಾಯಾಂ ತವ ದುರ್ಲಭಂ ।
ದಶಪಾಪಹರಾಯಾಂ ತು ದಶಮ್ಯಾಂ ಸುಮಹತ್ಫಲಂ ॥ ೩೮ ॥

ಕಾಲದಲ್ಲಿ ಸ್ನಾನಮಾಡಿದರೆ ಅದಕ್ಕೆ ಹತ್ತರಷ್ಟು ಪುಣ್ಯವೂ, ಚಾತುರ್ಮಾಸ್ಯ ಮತ್ತು ಪೌರ್ಣಿಮೆ ದಿವಸಗಳಲ್ಲಿ ಸಾನಮಾಡಿದರೆ ಅದಕ್ಕೆ ಅಗಣಿತಪುಣ್ಯವೂ ಲಭಿಸುವದು.

೩೫. ಅಕ್ಷಯನವಮಿ ದಿವಸ ಸ್ನಾನಮಾಡುವುದರಿಂದ ಅನಂತ ಫಲ ದೊರಕುವುದು. (ಆದರೆ ಇದನ್ನು ವೇದದಲ್ಲಿ ನಿರೂಪಣೆ ಮಾಡಿಲ್ಲ) ಮೇಲ್ಕಂಡ ದಿವಸಗಳಲ್ಲಿ ಗಂಗಾಸ್ನಾನಮಾಡಿ ದಾನಮಾಡುವುದರಿಂದ ಅಸಂಖ್ಯಪುಣ್ಯಫಲವು ಲಭಿಸುವುದು.

೩೬–೩೭. ಸಾಮಾನ್ಯದಿವಸಗಳಲ್ಲಿ ಗಂಗಾಸ್ನಾನಮಾಡುವುದರಿಂದ ಧ್ಯಾನ ಕ್ಕಿಂತಲೂ ನೂರರಷ್ಟು ಫಲಹೊಂದಬಹುದು. ಎಲೌ, ಶ್ರೇಷ್ಠಳಾದ ಗಂಗಾದೇವಿಯೇ ಮನ್ವಂತರಾದಿ, ಯುಗಾದಿ. ಮಾಘಶುಕ್ಲಸಪ್ತಮಿ, ಭೀಷ್ಮಾಷ್ಟಮಿ, ಅಶೋಕಾಷ್ಟಮಿ, ಶ್ರೀರಾಮನವಮಿ ಮುಂತಾದ ದಿವಸಗಳಲ್ಲಿ ಸ್ನಾನಮಾಡಿ ಅನಂತಪುಣ್ಯವನ್ನು ಹೊಂದಬಹುದು.

೩೮. ಪಾಡ್ಯ, ಷಷ್ಠಿ ಮತ್ತು ಏಕಾದಶೀದಿವಸದಲ್ಲಿ ಸ್ನಾನಮಾಡುವುದರಿಂದ ಅದಕ್ಕೆ ಎರಡರಷ್ಟು ಪುಣ್ಯವೂ, ದಶಪಾಪಹರದಶಮೀದಿನ (ಜ್ಯೇಷ್ಠ ಶುದ್ಧ ದಶಮಿ) ಸ್ನಾನಮಾಡುವುದರಿಂದ ಅನಂತ ಫಲವೂ ಲಭಿಸುವುದು.

ನಂದಾಸಮಂ ಚ ವಾರುಣ್ಯಾಂ ಮಹತ್ಪೂರ್ವಂ ಚತುರ್ಗುಣಂ ।
ತತಶ್ಚತುರ್ಗುಣಂ ಪುಣ್ಯಂ ದ್ವಿಮಹತ್ಪೂರ್ವಕೇ ಸತಿ　　　　॥ ೩೯ ॥

ಪುಣ್ಯಂ ಕೋಟಿಗುಣಂ ಚೈವ ಸಾಮಾನ್ಯಸ್ನಾನತೋ ಭವೇತ್ ।
ಚಂದ್ರಸೂರ್ಯೋಪರಾಗೇಷು ಸ್ಮೃತಂ ದಶಗುಣಂ ತತಃ　　　　॥ ೪೦ ॥

ಪುಣ್ಯೇಪ್ಯರ್ಧೋದಯೇ ಕಾಲೇ ತತಃ ಶತಗುಣಂ ಫಲಂ ।
ಸರ್ವೇಷಾಮೇವ ಸಂಕಲ್ಪೋ ವೈಷ್ಣವಾನಾಂ ವಿಪರ್ಯಯಃ　　　　॥ ೪೧ ॥

ಫಲಸಂಧಾನರಹಿತಾ ಜೀವನ್ಮುಕ್ತಾಶ್ಚ ವೈಷ್ಣವಾಃ ।
ಮತ್ಪ್ರೀತಿಭಕ್ತಿಕಾಮಾಸ್ತೇ ಸರ್ವದಾ ಸರ್ವಕರ್ಮಸು　　　　॥ ೪೨ ॥

ಗುರುವಕ್ತ್ರಾದ್ವಿಷ್ಣುಮಂತ್ರೋ ಯಸ್ಯ ಕರ್ಣೇ ವಿಶೇತ್ಪರಃ ।
ಜೀವನ್ಮುಕ್ತಂ ವೈಷ್ಣವಂ ತಂ ವೇದಾಃ ಸರ್ವೇ ವದಂತಿ ಚ　　　　॥ ೪೩ ॥

---

೩೯. ವಾರುಣಿಯ ದಿವಸ ಸ್ನಾನಮಾಡುವುದರಿಂದ ಪಾಡ್ಯಮುಂತಾದ ದಿವಸಗಳಿಗೆ ಸಮಾನವಾದ ಪುಣ್ಯವೂ, ಮಹಾವಾರುಣಿಯ ದಿವಸ ಅದಕ್ಕೆ ನಾಲ್ಕರಷ್ಟು ಪುಣ್ಯವೂ, ಮಹಾಮಹಾವಾರುಣಿಯ ದಿವಸ ಅದಕ್ಕಿಂತಲೂ ನಾಲ್ಕರಷ್ಟು ಪುಣ್ಯವೂ ಲಭಿಸುವುದು.

೪೦-೪೧ ಗಂಗೆಯಲ್ಲಿ ಸಾಮಾನ್ಯದಿವಸಗಳಲ್ಲಿ ಸ್ನಾನಮಾಡಿ ಕೋಟಿಗುಣ ಪುಣ್ಯವನ್ನು ಪಡೆಯಬಹುದು. ಸೂರ್ಯಚಂದ್ರರಗ್ರಹಣದ ಸ್ನಾನದಿಂದ ಅದಕ್ಕೆ ಹತ್ತರಷ್ಟು ಪುಣ್ಯವನ್ನೂ, ಪುಣ್ಯಕರವಾದ ಅರ್ಧೋದಯಕಾಲದಲ್ಲಿ ಸ್ನಾನಮಾಡಿ ಅದಕ್ಕೆ ನೂರರಷ್ಟು ಫಲವನ್ನೂ ಹೊಂದಬಹುದು. ವಿಷ್ಣುಭಕ್ತರ ಸಂಕಲ್ಪಕ್ಕಿಂತ ಇತರರ ಸಂಕಲ್ಪವು ಭಿನ್ನವಾದುದು.

೪೨. ವೈಷ್ಣವರು ಜೀವನ್ಮುಕ್ತರಾದುದರಿಂದ ಫಲಾಭಿಸಂಧಿಯಿಲ್ಲದೆ ಕರ್ಮ ಮಾಡುವರು. ಯಾವಾಗಲೂ ಯಾವಕರ್ಮ ಮಾಡಿದರೂ ಅವರು ನನ್ನಲ್ಲಿ ಭಕ್ತಿ ಮತ್ತು ಪ್ರೀತಿಗಳನ್ನು ಮಾತ್ರ ಬಯಸುವರು.

೪೩. ಯಾರ ಕಿವಿಯಲ್ಲಿ ಪರಮಶ್ರೇಷ್ಠವಾದ ವಿಷ್ಣುಮಂತ್ರವು ಗುರುಮುಖೇನ ಉಪದಿಷ್ಟವಾಗಿರುವುದೋ ಅವನನ್ನು ಜೀವನ್ಮುಕ್ತನಾದ ವೈಷ್ಣವನೆಂದು ವೇದಗಳೆಲ್ಲವೂ ಕೂಡ ಸಾರಿ ಹೇಳುವುವು.

ಪುರುಷಾಣಾಂ ಶತಂ ಪೂರ್ವಂ ಪೈತೃಕಂ ಚ ಪರಂ ಶತಂ ।
ಮಾತಾಮಹಸ್ಯ ಚ ಶತಂ ಮಾತೆರಂ ಮಾತೃಮಾತರಂ ॥ ೪೪ ॥

ಭಗಿನೀಂ ಭ್ರಾತರಂ ಚೈವ ಭಾಗಿನೇಯಂ ಚ ಮಾತುಲಂ ।
ಶ್ವಶ್ರೂಂ ಚ ಶ್ವಶುರಂ ಚೈವ ಗುರುಪತ್ನೀಂ ಗುರೋಃ ಸುತಂ ॥ ೪೫ ॥

ಗುರುಂ ಚ ಜ್ಞಾನದಾತಾರಂ ಮಿತ್ರಂ ಚ ಸಹಚಾರಿಣಂ ।
ಭೃತ್ಯಂ ಶಿಷ್ಯಂ ತಥಾ ಚೇಟೀಂ ಪ್ರಜಾಃ ಸ್ವಾಶ್ರಮಸನ್ನಿಧೌ ॥ ೪೬ ॥

ಉದ್ಧರೇದಾತ್ಮನಾ ಸಾರ್ಧಂ ಮಂತ್ರಗ್ರಹಣಮಾತ್ರತಃ ।
ಮಂತ್ರಗ್ರಹಣಮಾತ್ರೇಣ ಜೀವನ್ಮುಕ್ತೋ ಭವೇನ್ನರಃ ॥ ೪೭ ॥

ತಸ್ಯ ಸಂಸ್ಪರ್ಶನಾತ್ಪೂತಂ ತೀರ್ಥಂ ಚ ಭುವಿ ಭಾರತೇ ।
ತಸ್ಯೈವ ಪಾದರಜಸಾ ಸದ್ಯಃ ಪೂತಾ ವಸುಂಧರಾ ॥ ೪೮ ॥

೪೪–೪೭. ಮನುಷ್ಯನು ವಿಷ್ಣುಮಂತ್ರೋಪದೇಶವನ್ನು ಪಡೆದ ಮಾತ್ರದಿಂದಲೇ ತನ್ನ ಪೂರ್ವಾಪರಪುರುಷರಲ್ಲಿ ನೂರು ಜನಗಳನ್ನೂ, ಮಾತಾಮಹನವಂಶದಲ್ಲಿ ನೂರು ಜನಗಳನ್ನೂ, ತಾಯಿ ಮತ್ತು ತಾಯಿಯತಾಯಿಯನ್ನೂ, ಸಹೋದರ ಸಹೋದರಿಯರನ್ನೂ, ಸಹೋದರಿಯ ಪುತ್ರ, ಸೋದರಮಾವ, ಅತ್ತೆಮಾವಂದಿರು, ಗುರುಪತ್ನಿ, ಗುರುಪುತ್ರ, ಜ್ಞಾನದಾತೃವಾದ ಗುರು, ಸಹಚಾರಿಯಾದ ಸ್ನೇಹಿತ. ಶಿಷ್ಯ, ಸೇವಕ, ಸೇವಕಿಯರು, ತನ್ನ ಆಶ್ರಮದ ಹತ್ತಿರವಿರುವ ಪ್ರಜೆಗಳು ಇವರೆಲ್ಲರನ್ನೂ ತನ್ನೊಡನೆ ಉದ್ಧರಿಸಿ ತಾನೂ ಕೂಡ ಜೀವನ್ಮುಕ್ತನಾಗುವನು.

೪೮. ಆ ವಿಷ್ಣುಭಕ್ತನ ಸಂಸ್ಪರ್ಶದಿಂದ ಭಾರತಭೂಮಿಯಲ್ಲಿ ಪುಣ್ಯತೀರ್ಥಗಳೂ, ಪವಿತ್ರವಾಗುವುವು. ಅವನ ಪಾದಧೂಳಿಯ ಸಂಬಂಧದಿಂದ ವಸುಂಧರೆಯು ಪವಿತ್ರಳಾಗುವಳು.

ಪಾದೋದಕಸ್ಥಾನಮಿದಂ ತೀರ್ಥಮೇವ ಭವೇದ್ಧ್ರುವಂ ।
ಅನ್ನಂ ವಿಷ್ಠಾ ಜಲಂ ಮೂತ್ರಂ ಯದ್ವಿಷ್ಣೋರನಿವೇದಿತಂ ॥ ೪೯ ॥

ಖಾದಂತಿ ನೋ ವೈಷ್ಣವಾಶ್ಚ ಸದಾ ನೈವೇದ್ಯಭೋಜಿನಃ ।
ವಿಷ್ಣೋರ್ನಿವೇದಿತಾನ್ನಂ ಚ ನಿತ್ಯಂ ಯೇ ಭುಂಜತೇ ನರಾಃ ॥ ೫೦ ॥

ಪೂತಾನಿ ಸರ್ವತೀರ್ಥಾನಿ ತೇಷಾಂ ಚ ಸ್ಪರ್ಶನಾದಹೋ ।
ವಿಷ್ಣೋಃ ಪಾದೋದಕಂ ಪುಣ್ಯಂ ನಿತ್ಯಂ ಯೇ ಭುಂಜತೇ ನರಾಃ ॥ ೫೧ ॥

ತತ್ಪಾಪಾನಿ ಪಲಾಯಂತೇ ವೈನತೇಯಾದಿವೋರಗಾಃ ।
ತೇಷಾಂ ದರ್ಶನಮಾತ್ರೇಣ ಪೂತಂ ಚ ಭುವನತ್ರಯಂ ॥ ೫೨ ॥

ವಿಷ್ಣೋಃ ಸುದರ್ಶನಂ ಚಕ್ರಂ ಸಂತತಂ ತಾಂಶ್ಚ ರಕ್ಷತಿ ।
ಮದ್ಗುಣಶ್ರವಣಾದ್ಯೇ ಚ ಪುಲಕಾಂಕಿತವಿಗ್ರಹಾಃ ॥ ೫೩ ॥

---

೪೯. ವಿಷ್ಣುಭಕ್ತನ ಪಾದೋದಕವು ಬಿದ್ದ ಸ್ಥಳವೆಲ್ಲ ಪುಣ್ಯತೀರ್ಥವೆಂದೆನಿಸಿಕೊಳ್ಳುವುದು. ವಿಷ್ಣುವಿಗೆ ನಿವೇದಿಸದಿರುವ ಅನ್ನವು ಮಲಸದೃಶವೂ, ನೀರು ಮೂತ್ರಸದೃಶವೂ ಎನಿಸುವುದು.

೫೦–೫೨. ವಿಷ್ಣುವಿಗೆ ಅನಿವೇದಿತವಾದ ಅನ್ನವನ್ನು ಸರ್ವದಾ ನೈವೇದ್ಯಭೋಜಿಗಳಾದ ವೈಷ್ಣವರು ತಿನ್ನುವುದಿಲ್ಲ. ಪ್ರತಿದಿನವೂ ವಿಷ್ಣುವಿಗೆ ನಿವೇದಿಸಿದ ಅನ್ನವನ್ನು ತಿನ್ನುವ ಮನುಜರ ಸ್ಪರ್ಶಮಾತ್ರದಿಂದ ಸಕಲ ತೀರ್ಥಗಳೂ ಪವಿತ್ರವಾಗುವುವು. ಪ್ರತಿದಿನವೂ ಪುಣ್ಯಕರವಾದ ವಿಷ್ಣುವಿನ ಪಾದತೀರ್ಥವನ್ನು ಪಾನ ಮಾಡುವ ಮನುಜರ ಪಾಪಗಳು ಗರುಡನನ್ನು ನೋಡಿದ ಹಾವುಗಳು ಓಡುವಂತೆ ದೂರ ಓಡುವುವು. ಅವರ ದರ್ಶನಮಾತ್ರದಿಂದ ಮೂರು ಲೋಕವೂ ಪವಿತ್ರವಾಗುವುದು.

೫೩–೫೪. ವಿಷ್ಣುಭಕ್ತರನ್ನು ಯಾವಾಗಲೂ ವಿಷ್ಣುವಿನ ಸುದರ್ಶನ ಚಕ್ರವು ರಕ್ಷಣೆ ಮಾಡುವುದು. ನನ್ನ ಗುಣಶ್ರವಣಮಾತ್ರದಿಂದ ರೋಮಾಂಚಿತಶರೀರರಾಗಿ, ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ಸುರಿಸುತ್ತಾ, ಗದ್ಗದಕಂಠದಿಂದ ನನ್ನನ್ನು

ಗದ್ಗದಾಃ ಸಾಶ್ರುನೇತ್ರಾಶ್ಚ ನರಾಸ್ತೇ ವೈಷ್ಣವೋತ್ತಮಾಃ ।
ಪುತ್ರಾದಪಿ ಪರಃ ಸ್ನೇಹೋ ಮಯಿ ಯೇಷಾಂ ನಿರಂತರಂ ।
ಗೃಹಾದ್ಯಾಶ್ಚ ಮಯಿ ನ್ಯಸ್ತಾಸ್ತೇ ನರಾ ವೈಷ್ಣವೋತ್ತಮಾಃ ॥ ೫೪ ॥

ಆಬ್ರಹ್ಮಸ್ತಂಬಪರ್ಯಂತಂ ಮತ್ತಃ ಸರ್ವಂ ಚರಾಚರಂ ।
ಸರ್ವೇಷಾಮಹಮೇವೇಶ ಇತಿಜ್ಞಾ ವೈಷ್ಣವೋತ್ತಮಾಃ ॥ ೫೫ ॥

ಅಸಂಖ್ಯಕೋಟಿಬ್ರಹ್ಮಾಂಡಂ ಬ್ರಹ್ಮವಿಷ್ಣುಶಿವಾದಯಃ ।
ಪ್ರಲಯೇ ಮಯಿ ಲೀಯಂತೇ ಚೇತಿಜ್ಞಾ ವೈಷ್ಣವೋತ್ತಮಾಃ ॥ ೫೬ ॥

ತೇಜಃಸ್ವರೂಪಂ ಪರಮಂ ಭಕ್ತಾನುಗ್ರಹವಿಗ್ರಹಂ ।
ಸ್ವೇಚ್ಛಾಮಯಂ ನಿರ್ಗುಣಂ ಚ ನಿರೀಹಂ ಪ್ರಕೃತೇಃ ಪರಂ ॥ ೫೭ ॥

ಯಾರು ಸ್ತುತಿಸುವರೋ ಅವರು ವೈಷ್ಣವಶ್ರೇಷ್ಠರು. ಯಾರು ನನ್ನಲ್ಲಿ ಮಗನು ತಂದೆಯಲ್ಲಿಟ್ಟಿರುವುದಕ್ಕಿಂತಲೂ ಹೆಚ್ಚು ಪ್ರೀತಿಯನ್ನಿಡುವರೋ, ಯಾವಾಗಲೂ ಯಾರು ಗೃಹ, ಪತ್ನೀಪುತ್ರಾದಿಗಳನ್ನು ನನ್ನಲ್ಲಿಯೇ ಅರ್ಪಿಸುವರೋ ಅವರು ಉತ್ತಮ ವೈಷ್ಣವರು.

೫೫. ಬ್ರಹ್ಮನಿಂದ ಒಂದು ಹುಲ್ಲುಗರಿಯುವರೆಗಿರುವ ಪ್ರತಿಯೊಂದೂ ನನ್ನಿಂದಲೇ ಆವಿರ್ಭವಿಸಿತು, ಎಲ್ಲದಕ್ಕೂ ನಾನೇ ಈಶ್ವರನೆಂದು ಯಾರು ತಿಳಿಯುವರೋ ಅವರೇ ವೈಷ್ಣವೋತ್ತಮರು.

೫೬. ಅಗಣಿತವಾದ ಕೋಟಿಬ್ರಹ್ಮಾಂಡಗಳೂ, ಬ್ರಹ್ಮವಿಷ್ಣುಶಿವಾದಿಗಳೂ ಪ್ರಳಯದಲ್ಲಿ ನನ್ನಲ್ಲಿಯೇ ಐಕ್ಯವಾಗುವರೆಂದು ಯಾರು ತಿಳಿದಿರುವರೋ ಅವರೇ ಉತ್ತಮ ವೈಷ್ಣವರು.

೫೭-೫೮. ಸರ್ವಶ್ರೇಷ್ಠನೂ, ನಿರ್ಗುಣನೂ, ಇಚ್ಛಾರಹಿತನೂ, ಸ್ವೇಚ್ಛಾಮಯನೂ, ಪ್ರಕೃತಿಗಿಂತಪರನೂ, ತೇಜಃಸ್ವರೂಪನೂ, ಭಕ್ತಾನುಗ್ರಹವಿಗ್ರಹನೂ

ಸರ್ವೇ ಪ್ರಾಕೃತಿಕಾ ಯತ್ರ ಆವಿರ್ಭೂತಾಸ್ತಿರೋಹಿತಾಃ ।
ಇತಿ ಜಾನಂತಿ ಯೇ ದೇವಿ ತೇ ನರಾ ವೈಷ್ಣವೋತ್ತಮಾಃ ॥ ೫೮ ॥

ಇತ್ಯೇವಮುಕ್ತ್ವಾ ದೇವೇಶೋ ವಿರರಾಮ ತಯೋಃ ಪುರಃ ।
ಉವಾಚ ತಂ ತ್ರಿಪಥಗಾ ಭಕ್ತಿನಮ್ರಾತ್ಮಕಂಧರಾ ॥ ೫೯ ॥

॥ ಗಂಗೋವಾಚ ॥

ಯಾಮಿ ಚೇದ್ಭಾರತಂ ನಾಥ ಭಾರತೀ ಶಾಪತಃ ಪುರಾ ।
ತವಾಜ್ಞಯಾ ಚ ರಾಜೇಂದ್ರ ತಪಸಾ ಚೈವ ಸಾಂಪ್ರತಂ ॥ ೬೦ ॥

ಯಾನಿ ಕಾನಿ ಚ ಪಾಪಾನಿ ಮಹ್ಯಂ ದಾಸ್ಯಂತಿ ಪಾಪಿನಃ ।
ತಾನಿ ಮೇ ಕೇನ ನಶ್ಯಂತಿ ತದುಪಾಯಂ ವದ ಪ್ರಭೋ ॥ ೬೧ ॥

ಕತಿ ಕಾಲಂ ಪರಿಮಿತಂ ಸ್ಥಿತಿರ್ಮೇ ತತ್ರ ಭಾರತೇ ।
ಕದಾ ಯಾಸ್ಯಾಮಿ ಸರ್ವೇಶ ತ್ವದ್ವಿಷ್ಣೋಃ ಪರಮಂ ಪದಂ ॥ ೬೨ ॥

ಆದವನೇ ಪರಮಾತ್ಮನೆಂದೂ, ಪ್ರಾಕೃತಿಕವಾದ ಸಕಲ ಸೃಷ್ಟಿಯೂ ಕೂಡ ಪ್ರಕೃತಿಯೊಡಗೂಡಿದ ಪರಮಾತ್ಮನಿಂದಲೇ ಆವಿರ್ಭವಿಸಿ, ತಿರೋತವಾಗುವುದೆಂದೂ ಯಾವ ಮನುಜರು ತಿಳಿಯುವರೋ ಅವರೇ ವೈಷ್ಣವೋತ್ತಮರು.

೫೯. ದೇವಶ್ರೇಷ್ಠನಾದ ಶ್ರೀಕೃಷ್ಣನು ಇಂತು ನುಡಿದು ಸುಮ್ಮನಾಗಲು ಗಂಗೆಯು ಭಕ್ತಿಯಿಂದ ತಲೆತಗ್ಗಿಸಿಕೊಂಡು ವಿನಯದಿಂದ ಇಂತು ನುಡಿದಳು.

೬೦-೬೧ ಗಂಗೆ:—ಎಲೈ ಪತಿದೇವನೇ, ಸರಸ್ವತಿಯ ಶಾಪಗ್ರಸ್ತಳಾದ ನಾನು ನಿನ್ನ ಅಪ್ಪಣೆಯಂತೆ ಭಗೀರಥನ ತಪೋಮಹಿಮೆಗೆ ಮೆಚ್ಚಿ ಭಾರತಕ್ಕೆ ಹೋಗಬೇಕಾದರೆ, ಪಾಪಿಗಳು ನನ್ನಲ್ಲಿ ಮುಳುಗುವುದರಿಂದ ನನಗೆ ಸಂಘಟಿಸುವ ಪಾಪಗಳು ಎಂತು ಪರಿಹಾರವಾಗುವುದೆಂಬುದನ್ನು ಮೊದಲು ಬೋಧಿಸು.

೬೨. ನಾನು ಭಾರತದಲ್ಲಿ ಎಷ್ಟು ಕಾಲವಿರಬೇಕು? ಪುನಃ ನಾನು ವಿಷ್ಣುವಿನ ಪರಮಪದವನ್ನು ಸೇರುವುದು ಯಾವಾಗ? ಎಂಬುದನ್ನು ನನಗೆ ತಿಳಿಹು.

ಮಮಾನ್ಯದ್ವಾಂಛಿತಂ ಯದ್ಯತ್ಸರ್ವಂ ಜಾನಾಸಿ ಸರ್ವವಿತ್ ।
ಸರ್ವಾಂತರಾತ್ಮನ್ ಸರ್ವಜ್ಞ ತದುಪಾಯಂ ವದ ಪ್ರಭೋ ॥ ೬೩ ॥

॥ ಶ್ರೀ ಕೃಷ್ಣ ಉವಾಚ ॥

ಜಾನಾಮಿ ವಾಂಛಿತಂ ಗಂಗೇ ತವ ಸರ್ವಂ ಸುರೇಶ್ವರಿ ।
ಪತಿಸ್ತೇ ರುದ್ರರೂಪೋಽಯಂ ಲವಣೋದೋ ಭವಿಷ್ಯತಿ ॥ ೬೪ ॥

ಮಮೈವಾಂಶಃ ಸಮುದ್ರಶ್ಚ ತ್ವಂ ಚ ಲಕ್ಷ್ಮೀಸ್ವರೂಪಿಣೀ ।
ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ಭುವಿ ॥ ೬೫ ॥

ಯಾವತ್ಯಃ ಸಂತಿ ನದ್ಯಶ್ಚ ಭಾರತ್ಯಾದ್ಯಾಶ್ಚ ಭಾರತೇ ।
ಸೌಭಾಗ್ಯಂ ತವ ತಾಸ್ವೇವ ಲವಣೋದಸ್ಯ ಸೌರತೇ ॥ ೬೬ ॥

---

೬೩. ಸರ್ವಾಂತರ್ಯಾಮಿಯೂ, ಸರ್ವಜ್ಞನೂ ಆದ ನೀನು ನನ್ನ ಎಲ್ಲ ಅಭಿಲಾಷೆಗಳನ್ನೂ ತಿಳಿದಿರುವುದರಿಂದ ಅದು ಪೂರ್ತಿಯಾಗುವ ಬಗೆಯನ್ನು ಬೋಧಿಸು.

೬೪. ಶ್ರೀಕೃಷ್ಣ :—ಎಲೌ ಸುರೇಶ್ವರಿಯಾದ ಗಂಗೆಯೇ, ನಿನ್ನ ಸಕಲಾಭಿಲಾಷೆಗಳನ್ನೂ ನಾನು ಬಲ್ಲೆನು. ರುದ್ರಾವತಾರಿಯಾದ ಈ ಲವಣ ಸಮುದ್ರನು ನಿನಗೆ ಭಾರತದಲ್ಲಿ ಪತಿಯಾಗುವನು.

೬೫. ಸಮುದ್ರನು ನನ್ನ ಅಂಶದಿಂದಲೂ, ನೀನು ಲಕ್ಷ್ಮಿಯ ಅಂಶದಿಂದಲೂ ಅವತರಿಸಿರುವಿರಿ. ಆದುದರಿಂದ ಪ್ರೌಢೆಯಾದ ನಿನಗೆ ಪ್ರೌಢನಾದ ಸಮುದ್ರನ ಸಂಗಮವು ಗುಣಯುತವಾಗುವುದು.

೬೬. ಭರತಖಂಡದಲ್ಲಿ ಸರಸ್ವತಿ ಮುಂತಾದ ಅನೇಕ ನದಿಗಳು ಲವಣ ಸಮುದ್ರನೊಡನೆ ಸೇರುವುದಾದರೂ ಕೂಡ ಅವರೆಲ್ಲರಲ್ಲಿಯೂ ನೀನೇ ಶ್ರೇಷ್ಠಳಾಗಿ ಲವಣಸಮುದ್ರನ ಸೌಭಾಗ್ಯವನ್ನೂ ಸುರತಸುಖವನ್ನೂ ಹೆಚ್ಚಾಗಿ ಅನುಭವಿಸುವೆ.

ಅದ್ಯ ಪ್ರಭೃತಿ ದೇವೇಶಿ ಕಲೇಃ ಪಂಚಸಹಸ್ರಕಂ ।
ವರ್ಷಂ ಸ್ಥಿತಿಸ್ತೇ ಭಾರತ್ಯಾ ಭುವಿ ಶಾಪೇನ ಭಾರತೇ ॥ ೬೭ ॥

ನಿತ್ಯಂ ವಾರಿಧಿನಾ ಸಾರ್ಧಂ ಕರಿಷ್ಯಸಿ ರಹೋರತಿಂ ।
ತ್ವಮೇವ ರಸಿಕಾದೇವೀ ರಸಿಕೇಂದ್ರೇಣ ಸಂಯುತಾ ॥ ೬೮ ॥

ತ್ವಾಂ ತೋಷಯಂತಿ ಸ್ತೋತ್ರೇಣ ಭಗೀರಥಕೃತೇನ ಚ ।
ಭಾರತಸ್ಥಾ ಜನಾಃ ಸರ್ವೇ ಪೂಜಯಿಷ್ಯಂತಿ ಭಕ್ತಿತಃ ॥ ೬೯ ॥

ಧ್ಯಾನೇನ ಕೌಥುಮೋಕ್ತೇನ ಧ್ಯಾತ್ವಾ ತ್ವಾಂ ಪೂಜಯಿಷ್ಯತಿ ।
ಯಃ ಸ್ತೌತಿ ಪ್ರಣಮೇನ್ನಿತ್ಯಂ ಸೋಽಶ್ವಮೇಧಫಲಂ ಲಭೇತ್ ॥ ೭೦ ॥

ಗಂಗಾ ಗಂಗೇತಿ ಯೋ ಬ್ರೂಯಾದ್ಯೋಜನಾನಾಂ ಶತೈರಪಿ ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥ ೭೧ ॥

೬೭–೬೮. ಎಲೌ, ದೇವಿಶ್ರೇಷ್ಠಳೇ, ಇಂದು ಮೊದಲುಗೊಂಡು ಕಲಿಯುಗದಲ್ಲಿ ಐದುಸಾವಿರ ವರ್ಷಗಳವರೆಗೆ ನೀನು ಭರತಖಂಡದಲ್ಲಿ ಸರಸ್ವತಿಯ ಶಾಪದಂತೆ ನದಿಯಾಗಿದ್ದು ಪ್ರತಿದಿನವೂ ಲವಣಸಮುದ್ರನೊಡನೆ ರತಿಸುಖವನ್ನು ಗೋಪ್ಯವಾಗಿ ಅನುಭವಿಸುವೆ. ರಸಿಕಶ್ರೇಷ್ಠನೊಡನೆ ಸೇರುವ ನೀನೂ ರಸಿಕಳೆನಿಸುವೆ.

೬೯. ಭಾರತದಲ್ಲಿರುವ ಜನರೆಲ್ಲರೂ ಭಗೀರಥಕೃತವಾದ ಸ್ತೋತ್ರದಿಂದ ನಿನ್ನನ್ನು ತೃಪ್ತಿಗೊಳಿಸಿ ಸರ್ವದಾ ಭಕ್ತಿಯಿಂದ ಪೂಜಿಸುವರು.

೭೦. ಕೌಥುಮಮುನಿಪ್ರೋಕ್ತವಾದ ಧ್ಯಾನದಿಂದ ನಿನ್ನನ್ನು ಧ್ಯಾನಿಸಿ, ಯಾರು ನಿತ್ಯವೂ ನಮಿಸಿ, ಸ್ತುತಿಸುವರೋ ಅವರು ಅಶ್ವಮೇಧಯಾಗದ ಫಲವನ್ನು ಹೊಂದುವರು.

೭೧ ಗಂಗಾನದಿಗೆ ನೂರುಯೋಜನ ದೂರದಲ್ಲಿದ್ದರೂ 'ಗಂಗೆ' ಎಂಬ ಪವಿತ್ರ ನಾಮವನ್ನು ಉಚ್ಚರಿಸಿದ ಮಾತ್ರದಿಂದಲೇ ಸಕಲ ಪಾಪವಿನಿರ್ಮುಕ್ತರಾಗಿ ವಿಷ್ಣುಲೋಕವನ್ನು ಸೇರುವರು.

ಸಹಸ್ರಪಾಪಿನಾಂ ಸ್ನಾನಾದ್ಯತ್ಪಾಪಂ ತೇ ಭವಿಷ್ಯತಿ ।
ಮದ್ಭಕ್ತದರ್ಶನೇ ತಾವತ್ತದೈವ ಹಿ ವಿನಶ್ಯತಿ ॥ ೭೨ ॥

ಪಾಪಿನಾಂ ತು ಸಹಸ್ರಾಣಾಂ ಶವಸ್ಪರ್ಶೇನ ಯತ್ತವ ।
ಮನ್ಮಂತ್ರೋಪಾಸಕಸ್ನಾನಾತ್ತದಘಂ ಚ ವಿನಶ್ಯತಿ ॥ ೭೩ ॥

ಯತ್ರ ಯತ್ರ ಭವೇದ್ಗಂಗೇ ಮನ್ನಾಮಗುಣಕೀರ್ತನಂ ।
ತತ್ರೈವ ತ್ವಮಧಿಷ್ಠಾನಂ ಕರಿಷ್ಯಸ್ಯಘಮೋಚನಾತ್ ॥ ೭೪ ॥

ಸಾರ್ಧಂ ಸರಿದ್ಭಿಃ ಶ್ರೇಷ್ಠಾಭಿಃ ಸರಸ್ವತ್ಯಾದಿಭಿಃ ಶುಭೇ ।
ತತ್ತು ತೀರ್ಥಂ ಭವೇತ್ಸದ್ಯೋ ಯತ್ರ ಮದ್ಗುಣಕೀರ್ತನಂ ॥ ೭೫ ॥

ಯದ್ರೇಣುಸ್ಪರ್ಶಮಾತ್ರೇಣ ಪೂತೋ ಭವತಿ ಪಾತಕೀ ।
ರೇಣುಪ್ರಮಾಣಂ ವರ್ಷಂ ಚ ಸ ವೈಕುಂಠೇ ವಸೇದ್ಧ್ರುವಂ ॥ ೭೬ ॥

---

೭೨. ಸಾವಿರಾರು ಪಾಪಿಗಳು ನಿನ್ನಲ್ಲಿ ಸ್ನಾನಮಾಡುವುದರಿಂದ ನಿನಗೆ ಸಂಘಟಿಸುವ ಪಾಪಗಳು ನನ್ನ ಭಕ್ತರ ದರ್ಶನಮಾತ್ರದಿಂದ ಆ ಕ್ಷಣವೇ ಪರಿಹಾರವಾಗುವುದು.

೭೩. ಸಾವಿರಾರು ಪಾಪಿಗಳ ಶವಸ್ಪರ್ಶದಿಂದ ನಿನಗುಂಟಾಗುವ ಪಾಪವು, ವಿಷ್ಣುಮಂತ್ರೋಪಾಸಕನೊಬ್ಬನು ನಿನ್ನಲ್ಲಿ ಸ್ನಾನಮಾಡಿದ ಮಾತ್ರದಿಂದ ಪರಿಹಾರವಾಗುವುದು.

೭೪. ಎಲೌ, ಗಂಗೆಯೇ, ಎಲ್ಲೆಲ್ಲಿ ನನ್ನ ನಾಮಗುಣಕೀರ್ತನೆಗಳು ನಡೆಯುವುವೋ ಅಲ್ಲಲ್ಲಿ ನೀನು ನೆಲೆಸಿ ಪಾಪಹಾರಕಳಾಗುವೆ.

೭೫. ಸರಸ್ವತಿ ಮುಂತಾದ ಶ್ರೇಷ್ಠನದಿಗಳೊಡಗೂಡಿ ನೀನು ನನ್ನ ನಾಮಗುಣಕೀರ್ತನೆಯು ನಡೆಯುವ ಸ್ಥಳದಲ್ಲಿ ನೆಲೆಸಿ ಪವಿತ್ರತೀರ್ಥವನ್ನಾಗಿ ಮಾಡುವೆ.

೭೬. ಗಂಗಾನದಿಯ ಜಲಬಿಂದುವಿನ ಸ್ಪರ್ಶಮಾತ್ರದಿಂದ ಪಾಪಿಯು ಪೂತನಾಗುವನು. ಅಲ್ಲದೆ ಆ ನದಿಯಲ್ಲಿ ಎಷ್ಟು ಜಲಬಿಂದುಗಳಿವೆಯೋ ಅಷ್ಟು ವರ್ಷಕಾಲ ವೈಕುಂಠದಲ್ಲಿ ಅವನು ವಾಸಿಸುವನು.

ಜ್ಞಾನೇನ ತ್ವಯಿ ಯೇ ಭಕ್ತ್ಯಾ ಮನ್ನಾಮಸ್ಮೃತಿಪೂರ್ವಕಂ ।
ಸಮುತ್ಸೃಜಂತಿ ಪ್ರಾಣಾಂಶ್ಚ ತೇ ಗಚ್ಛಂತಿ ಹರೇಃ ಪದಂ ॥ ೭೭ ॥

ಪಾರ್ಷದಪ್ರವರಾಸ್ತೇ ಚ ಭವಿಷ್ಯಂತಿ ಹರೇಶ್ಚಿರಂ ।
ಅಸಂಖ್ಯಕಂ ಪ್ರಾಕೃತಿಕಂ ಲಯಂ ದ್ರಕ್ಷ್ಯಂತಿ ತೇ ನರಾಃ ॥ ೭೮ ॥

ಮೃತಸ್ಯ ಬಹುಪುಣ್ಯೇನ ತಚ್ಛವಂ ತ್ವಯಿ ವಿನ್ಯಸೇತ್ ।
ಪ್ರಯಾತಿ ಸ ಚ ವೈಕುಂಠಂ ಯಾವದಸ್ಥ್ನಾಂ ಸ್ಥಿತಿಸ್ತ್ವಯಿ ॥ ೭೯ ॥

ಕಾಯವ್ಯೂಹಂ ತತಃ ಕೃತ್ವಾ ಭೋಜಯಿತ್ವಾ ಸ್ವಕರ್ಮಕಂ ।
ತಸ್ಮೈ ದದಾಮಿ ಸಾರೂಪ್ಯಂ ತಂ ಕರೋಮಿ ಚ ಪಾರ್ಷದಂ ॥ ೮೦ ॥

ಅಜ್ಞಾನೀ ತ್ವಜ್ಜಲಸ್ಪರ್ಶಾದ್ಯದಿ ಪ್ರಾಣಾನ್ಸಮುತ್ಸೃಜೇತ್ ।
ತಸ್ಮೈ ದದಾಮಿ ಸಾರೂಪ್ಯಂ ತಂ ಕರೋಮಿ ಚ ಪಾರ್ಷದಂ ॥ ೮೧ ॥

---

೭೭. ಯಾರು ಜ್ಞಾನಭಕ್ತಿವೈರಾಗ್ಯಗಳಿಂದ ನನ್ನ ನಾಮವನ್ನು ಸ್ಮರಿಸುತ್ತಾ ನಿನ್ನಲ್ಲಿ ಪ್ರಾಣತ್ಯಾಗಮಾಡುವರೋ ಅವರೆಲ್ಲರೂ ವಿಷ್ಣುಪದವನ್ನು ಸೇರುವರು.

೭೮. ಅಲ್ಲಿ ವಿಷ್ಣುವಿಗೆ ಚಿರಕಾಲ ಪಾರ್ಷದರಾಗಿದ್ದುಕೊಂಡು ಅಗಣಿತ ಪ್ರಾಕೃತಪ್ರಲಯಗಳನ್ನು ತಮ್ಮ ಜೀವಿತಕಾಲದಲ್ಲಿಯೇ ನೋಡುವರು.

೭೯. ಬಹಳ ಪುಣ್ಯಮಾಡಿ ಮೃತನಾದವನ ಶವವನ್ನು ನಿನ್ನಲ್ಲಿ ಹಾಕಿದರೆ ಆ ಶವದ ಮೂಳೆಯು ನಿನ್ನಲ್ಲಿ ಎಷ್ಟು ಕಾಲದವರೆಗೆ ಇರುವುದೋ ಅಷ್ಟುಕಾಲ ಆ ಮನುಜನು ವೈಕುಂಠದಲ್ಲಿರುವನು.

೮೦. ಅನಂತರ ಅನೇಕ ಶರೀರಗಳನ್ನು ಪಡೆದು ಅನೇಕ ಕರ್ಮಗಳನ್ನನು ಭವಿಸುವಂತೆ ಮಾಡಿ, ಅವನಿಗೆ ಸಾರೂಪ್ಯ ಮುಕ್ತಿಯನ್ನು ಕೊಟ್ಟು ನನ್ನ ಸೇವಕ ನನ್ನಾಗಿ ಮಾಡಿಕೊಳ್ಳುವೆನು.

೮೧. ಅಜ್ಞಾನಿಯೂ ಕೂಡ ಪ್ರಾಣತ್ಯಾಗಮಾಡುವಾಗ ನಿನ್ನ ಜಲಸ್ಪರ್ಶ ಮಾಡಿದ ಮಾತ್ರದಿಂದಲೇ ಸಾರೂಪ್ಯವನ್ನು ಪಡೆದು ನನ್ನ ಸೇವಕನಾಗುವನು.

ಅನ್ಯತ್ರ ವಾ ತ್ಯಜೇತ್ಪ್ರಾಣಾಂಸ್ತ್ವನ್ನಾಮ ಸ್ಮೃತಿಪೂರ್ವಕಂ ।
ತಸ್ಮೈ ದದಾಮಿ ಸಾಲೋಕ್ಯಮಸಂಖ್ಯಪ್ರಲಯಾಲಯಂ ॥ ೮೨ ॥

ಅನ್ಯತ್ರ ವಾ ತ್ಯಜೇತ್ಪ್ರಾಣಾಂಸ್ತ್ವನ್ನಾಮ ಸ್ಮೃತಿಪೂರ್ವಕಂ ।
ತಸ್ಮೈ ದದಾಮಿ ಸಾಲೋಕ್ಯಂ ಯಾವದ್ವೈ ಬ್ರಹ್ಮಣೋ ವಯಃ ॥ ೮೩ ॥

ತೀರ್ಥೇಽಪ್ಯತೀರ್ಥೇ ಮರಣೇ ವಿಶೇಷೋ ನಾಸ್ತಿ ಕಶ್ಚನ ।
ಮನ್ಮಂತ್ರೋಪಾಸಕಾನಾಂ ಚ ನಿತ್ಯಂ ನೈವೇದ್ಯಭೋಜಿನಾಂ ॥ ೮೪ ॥

ಪೂತಂ ಕರ್ತುಂ ಸಶಕ್ತೋ ಹಿ ಲೀಲಯಾ ಭುವನತ್ರಯಂ ।
ರತ್ನೇಂದ್ರಸಾರಯಾನೇನ ಗೋಲೋಕಂ ಸ ಪ್ರಯಾತಿ ಚ ॥ ೮೫ ॥

ಮದ್ಭಕ್ತಬಾಂಧವಾ ಯೇ ಯೇ ತೇ ತೇ ಪುಣ್ಯಧಿಯಃ ಶುಭೇ ।
ತೇ ಯಾಂತಿ ರತ್ನಯಾನೇನ ಗೋಲೋಕಂ ಚ ಸುದುರ್ಲಭಂ ॥ ೮೬ ॥

---

೮೨. ನಿನ್ನ ದಿವ್ಯನಾಮಗಳನ್ನು ಸ್ಮರಿಸುತ್ತ ಬೇರೆಲ್ಲಾದರೂ ಪ್ರಾಣತ್ಯಾಗ ಮಾಡಿದರೂ ಕೂಡ ಅವನಿಗೆ ಅಗಣಿತಪ್ರಳಯಗಳನ್ನು ನೋಡಬಹುದಾದ ಶಾಶ್ವತ ಸಾಲೋಕ್ಯವನ್ನು ಕರುಣಿಸುವೆನು.

೮೩. ಅಂತೆಯೇ ನಿನ್ನ ದಿವ್ಯನಾಮಗಳನ್ನು ಸ್ಮರಿಸುತ್ತ ಎಲ್ಲಿ ಪ್ರಾಣ ಬಿಟ್ಟರೂ ಅವನಿಗೆ ಬ್ರಹ್ಮನ ಆಯುಃಕಾಲದವರೆಗೆ ಸಾಲೋಕ್ಯಮುಕ್ತಿಯನ್ನು ಕೊಡುವೆನು.

೮೪. ವಿಷ್ಣುಮಂತ್ರೋಪಾಸಕರಾಗಿ ನಿತ್ಯವೂ ನೈವೇದ್ಯವನ್ನು ಭುಜಿಸುವವರಿಗೆ ಪುಣ್ಯತೀರ್ಥದಲ್ಲಾಗಲೀ, ಬೇರಾವ ಸ್ಥಳದಲ್ಲಾಗಲೀ ಮರಣಸಂಭವಿಸಿದರೂ ಯಾವ ಕುಂದುಕೊರತೆಗಳೂ ಇಲ್ಲ.

೮೫. ವಿಷ್ಣುಮಂತ್ರೋಪಾಸಕನಾಗಿ, ನಿತ್ಯವೂ ನೈವೇದ್ಯಭೋಜಿಯಾದವನು ಭುವನತ್ರಯವನ್ನೂ ಲೀಲೆಯಿಂದ ಪವಿತ್ರಗೊಳಿಸಬಲ್ಲನು. ಅಲ್ಲದೆ ಶ್ರೇಷ್ಠ ರತ್ನಗಳಿಂದ ನಿರ್ಮಿತವಾದ ರಥದಲ್ಲಿ ಕುಳಿತು ಗೋಲೋಕಕ್ಕೆ ತೆರಳಬಲ್ಲನು.

೮೬. ಅಷ್ಟೇ ಅಲ್ಲ. ಎಲೌ ಮಂಗಳಾಂಗಿಯೇ, ನನ್ನ ಭಕ್ತರ ಬಾಂಧವರೂ ಕೂಡ ಅವರ ಪುಣ್ಯಕ್ಕೆ ಭಾಗಿಗಳಾಗಿ ದಿವ್ಯರಥದಲ್ಲಿ ಕುಳಿತು ದುರ್ಲಭವಾದ ಗೋಲೋಕಕ್ಕೆ ತೆರಳುವರು.

ಯತ್ರ ತತ್ರ ಮೃತಾ ಯೇ ಚ ಜ್ಞಾನಾಜ್ಞಾನೇನ ವಾ ಸತಿ ।
ಜೀವನ್ಮುಕ್ತಾಶ್ಚ ತೇ ಪೂತಾ ಭಕ್ತಸನ್ನಿಧಿಮಾತ್ರತಃ ॥ ೮೭ ॥

ಇತ್ಯುಕ್ತ್ವಾ ಶ್ರೀಹರಿಸ್ತಾಂ ಚ ತಮುವಾಚ ಭಗೀರಥಂ ।
ಸ್ತುಹಿ ಗಂಗಾಮಿಮಾಂ ಭಕ್ತ್ಯಾ ಪೂಜಾಂ ಕುರು ಚ ಸಾಂಪ್ರತಂ ॥ ೮೮ ॥

ಭಗೀರಥಸ್ತಾಂ ತುಷ್ಟಾವ ಪೂಜಯಾಮಾಸ ಭಕ್ತಿತಃ ।
ಧ್ಯಾನೇನ ಕೌಥುಮೋಕ್ತೇನ ಸ್ತೋತ್ರೇಣ ಚ ಪುನಃ ಪುನಃ ॥ ೮೯ ॥

ಶ್ರೀಕೃಷ್ಣಂ ಪ್ರಣನಾಮಾಥ ಪರಮಾತ್ಮಾನಮೀಶ್ವರಂ ।
ಭಗೀರಥಶ್ಚ ಗಂಗಾಂ ಚ ಸೋಽಂತರ್ಧಾಯ ಗತೋ ಹರಿಃ ॥ ೯೦ ॥

---

೮೭. ಎಲೌ, ಸತಿಯೇ! ಜ್ಞಾನದಿಂದಾಗಲೀ, ಅಜ್ಞಾನದಿಂದಾಗಲೀ, ಯಾರು ಎಲ್ಲಿ ಮೃತಪಟ್ಟರೂ, ನನ್ನ ಭಕ್ತರ ಸಾನ್ನಿಧ್ಯವೊಂದಿದ್ದರೆ ಅವರೆಲ್ಲರೂ ಜೀವನ್ಮುಕ್ತರಾಗುವರು.

೮೮. ಗಂಗಾದೇವಿಯನ್ನು ಕುರಿತು ಇಂತು ನುಡಿದು ಶ್ರೀಹರಿಯು 'ಈ ಗಂಗೆಯನ್ನು ಭಕ್ತಿಯಿಂದ ಸ್ತೋತ್ರಮಾಡಿ ಪೂಜೆಮಾಡು' ಎಂದು ಭಗೀರಥನಿಗೆ ಅಪ್ಪಣೆ ಮಾಡಿದನು.

೮೯. ಅನಂತರ ಭಗೀರಥನು ಕೌಥುಮಿಶಾಖೋಕ್ತವಾದ ಧ್ಯಾನದಿಂದಲೂ, ಸ್ತೋತ್ರದಿಂದಲೂ, ಆ ಗಂಗೆಯನ್ನು ಮತ್ತೆ ಮತ್ತೆ ಸ್ತುತಿಸಿ ಭಕ್ತಿಯಿಂದ ಪೂಜೆ ಮಾಡಿದನು.

೯೦. ಅಲ್ಲದೆ ಸರ್ವೇಶ್ವರನೂ, ಪರಮಾತ್ಮನೂ ಆದ ಶ್ರೀಕೃಷ್ಣನಿಗೆ ಭಗೀರಥನು ನಮಸ್ಕರಿಸಿದನು. ಆಗ ಶ್ರೀಕೃಷ್ಣನು ಗಂಗೆಯು ಅಂತರ್ಧಾನವಾಗುವಂತೆ ಮಾಡಿ ತಾನೂ ಕಣ್ಮರೆಯಾದನು.

|| ನಾರದ ಉವಾಚ ||

ಸ್ತೋತ್ರೇಣ ಕೇನ ಧ್ಯಾನೇನ ಕೇನ ಪೂಜಾಕ್ರಮೇಣ ಚ |
ಪೂಜಾಂ ಚಕಾರ ನೃಪತಿರ್ವದ ವೇದವಿದಾಂ ವರ || ೯೧ ||

|| ಶ್ರೀ ನಾರಾಯಣ ಉವಾಚ ||

ಸ್ನಾತ್ವಾ ನಿತ್ಯಕ್ರಿಯಾಂ ಕೃತ್ವಾ ಧೃತ್ವಾ ಧೌತೇ ಚ ವಾಸಸೀ |
ಪಾದೌ ಪ್ರಕ್ಷಾಲ್ಯ ಚಾಚಮ್ಯ ಸಂಯತೋ ಭಕ್ತಿಪೂರ್ವಕಂ || ೯೨ ||

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ |
ಸಂಪೂಜಯೇನ್ನರಶ್ಶುದ್ಧಃ ಸೋಽಧಿಕಾರೀ ಚ ಪೂಜನೇ || ೯೩ ||

ಗಣೇಶಂ ವಿಘ್ನನಾಶಾಯ ನಿಷ್ಪಾಪಾಯ ದಿವಾಕರಂ |
ವಹ್ನಿಂ ಸ್ವಶುದ್ಧಯೇ ವಿಷ್ಣುಂ ಮುಕ್ತಯೇ ಪೂಜಯೇನ್ನರಃ || ೯೪ ||

ಶಿವಂ ಜ್ಞಾನಾಯ ತದಿವಾಂ ಶಿವಾಂ ಬುದ್ಧಿವಿವೃದ್ಧಯೇ |
ಸಂಪೂಜ್ಯೈತಲ್ಲಭೇತ್ಪ್ರಾಜ್ಞೋ ವಿಪರೀತಮತೋಽನ್ಯಥಾ || ೯೫ ||

---

೯೧. ನಾರದ:—ಎಲೈ, ವೇದಬಲ್ಲವರಲ್ಲಿ ಶ್ರೇಷ್ಠನಾದ ನಾರಾಯಣನೇ, 'ಭಗೀರಥಮಹಾರಾಜನು ಯಾವ ಧ್ಯಾನಸ್ತೋತ್ರಗಳಿಂದ ಗಂಗೆಯನ್ನು ಸ್ತುತಿಸಿ ಪೂಜಿಸಿದನು.' ಎಂಬುದನ್ನು ದಯವಿಟ್ಟು ಹೇಳು.

೯೨-೯೩. ನಾರಾಯಣ:—ಎಲೈ, ನಾರದನೇ, ಸ್ನಾನ ಮುಂತಾದ ನಿತ್ಯ ಕ್ರಿಯೆಗಳನ್ನು ಮಾಡಿ ಶುಭ್ರವಾದ ಎರಡು ವಸ್ತ್ರಗಳನ್ನುಟ್ಟು, ಕಾಲುಗಳನ್ನು ತೊಳೆದು ಆಚಮನಮಾಡಿ, ಭಕ್ತಿಪೂರ್ವಕವಾಗಿ ಇಂದ್ರಿಯನಿಗ್ರಹಮಾಡಿಕೊಂಡು ಗಣೇಶ, ದಿನೇಶ, ವಹ್ನಿ, ವಿಷ್ಣು, ಶಿವ ಮತ್ತು ಶಿವಾ ಈ ಆರು ದೇವತೆಗಳನ್ನು ಪೂಜಿಸಿ ಶುದ್ಧನಾದವನೇ ನಿತ್ಯಪೂಜೆಗೆ (ಅಧಿಕಾರಿಯು) ಯೋಗ್ಯನು.

೯೪-೯೫. ವಿಘ್ನಪರಿಹಾರಕ್ಕಾಗಿ ಗಣೇಶನನ್ನೂ, ಪಾಪಪರಿಹಾರಕ್ಕಾಗಿ ಸೂರ್ಯದೇವನನ್ನೂ, ಆತ್ಮಶುದ್ಧಿಗಾಗಿ ಅಗ್ನಿದೇವನನ್ನೂ, ಮುಕ್ತಿಗಾಗಿ ವಿಷ್ಣುವನ್ನೂ, ಜ್ಞಾನವೃದ್ಧಿಗಾಗಿ ಶಿವನನ್ನೂ, ಬುದ್ಧಿವೃದ್ಧಿಗಾಗಿ ಶಿವೆಯನ್ನೂ ಪ್ರಾಜ್ಞನಾದವನು ಪೂಜಿಸಬೇಕು. ಹಾಗೆ ಮಾಡದಿದ್ದರೆ ವಿರುದ್ಧಫಲವುಂಟಾಗುವುದು.

ದಧ್ಯಾವನೇನ ತದ್ಧ್ಯಾನಂ ಶ್ರುಣು ನಾರದ ತತ್ಪರಃ ।
ಧ್ಯಾನಂ ಚ ಕೌಥುಮೋಕ್ತಂ ವೈ ಸರ್ವಪಾಪಪ್ರಣಾಶನಂ ॥ ೯೬ ॥

ಶ್ವೇತಚಂಪಕವರ್ಣಾಭಾಂ ಗಂಗಾಂ ಪಾಪಪ್ರಣಾಶಿನೀಂ ।
ಕೃಷ್ಣವಿಗ್ರಹಸಂಭೂತಾಂ ಕೃಷ್ಣತುಲ್ಯಾಂ ಪರಾಂ ಸತೀಂ ॥ ೯೭ ॥

ವಹ್ನಿಶುದ್ಧಾಂಶುಕಾಧಾನಾಂ ರತ್ನಭೂಷಣಭೂಷಿತಾಂ ।
ಶರತ್ಪೂರ್ಣೇಂದುಶತಕಪ್ರಭಾಜುಷ್ಟಕಲೇವರಾಂ ॥ ೯೮ ॥

ಈಷದ್ಧಾಸಪ್ರಸನ್ನಾಸ್ಯಾಂ ಶಶ್ವತ್ಸುಸ್ಥಿರಯೌವನಾಂ ।
ನಾರಾಯಣಪ್ರಿಯಾಂ ಶಾಂತಾಂ ಸತ್ಸೌಭಾಗ್ಯಸಮನ್ವಿತಾಂ ॥ ೯೯ ॥

ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಸಂಯುತಾಂ ।
ಸಿಂದೂರಬಿಂದುಲಲಿತಾಂ ಸಾರ್ಧಂ ಚಂದನಬಿಂದುಭಿಃ ॥ ೧೦೦ ॥

---

೯೬. ಎಲೈ ನಾರದನೇ, ಭಗೀರಥನು ಮಾಡಿದ ಗಂಗೆಯ ಧ್ಯಾನಸ್ತೋತ್ರವನ್ನು ಹೇಳುವೆನು ಕೇಳು. ಕೌಥುಮಶಾಖೋಕ್ತವಾದ ಧ್ಯಾನಕ್ರಮವು ಸರ್ವಪಾಪಹರವಾದುದು.

೯೭-೯೮. ಸಂಪಿಗೆಯಂತೆ ಬೈಬಣ್ಣವುಳ್ಳವಳೂ, ಪಾಪನಾಶಿನಿಯೂ, ಕೃಷ್ಣ ಪರಮಾತ್ಮನ ಶರೀರದಿಂದ ಆವಿರ್ಭವಿಸಿದವಳೂ, ಕೃಷ್ಣನಿಗೆ ಸಮಾನಳೂ, ಆಗಿ ಅಗ್ನಿ ದೇವನಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ. ರತ್ನಭೂಷಣಗಳಿಂದ ಭೂಷಿತಳಾಗಿ, ಶರತ್ಪೂರ್ಣಿಮೆಯ ನೂರಾರು ಚಂದ್ರರಕಾಂತಿಯಿಂದ ಕೂಡಿದ ಶರೀರವುಳ್ಳ ಗಂಗಾದೇವಿಯನ್ನು ಭಜಿಸುವೆನು.

೯೯-೧೦೦. ಮಂದಹಾಸದಿಂದ ಪ್ರಸನ್ನಮುಖಿಯೂ, ಸ್ಥಿರಯೌವನವತಿಯೂ, ನಾರಾಯಣನ ಪ್ರೀತಿಗೆ ಪಾತ್ರಳೂ, ಶಾಂತಳೂ, ಸಕಲ ಸೌಭಾಗ್ಯಯುತಳೂ, ಆಗಿ ಕೇಶಪಾಶದಲ್ಲಿ ಮಾಲತೀಮಾಲೆಯನ್ನು ಮುಡಿದು, ಹಣೆಯಲ್ಲಿ ಸುಂದರವಾದ ಚಂದ್ರ ಮತ್ತು ಚಂದನ ಬೊಟ್ಟುಗಳನ್ನಿಟ್ಟು ಶೋಭಿಸುತ್ತಿರುವ ಗಂಗಾದೇವಿಯನ್ನು ಭಕ್ತಿಯಿಂದ ಭಜಿಸುವೆನು.

ಕಸ್ತೂರೀಪತ್ರಕಂ ಗಂಡೇ ನಾನಾಚಿತ್ರಸಮನ್ವಿತಂ ।
ಪಕ್ವಬಿಂಬಸಮಾನೈಕಚಾರ್ವೋಷ್ಠಪುಟಮುತ್ತಮಂ ॥ ೧೧೧ ॥

ಮುಕ್ತಾಪಂಕ್ತಿಪ್ರಭಾಜುಷ್ಟದಂತಪಂಕ್ತಿಮನೋಹರಾಂ ।
ಸುಚಾರುವಕ್ತ್ರನಯನಾಂ ಸಕಟಾಕ್ಷಮನೋರಮಾಂ ॥ ೧೧೨ ॥

ಕಠಿನಂ ಶ್ರೀಫಲಾಕಾರಂ ಸ್ತನಯುಗ್ಮಂ ಚ ಬಿಭ್ರತೀಂ ।
ಬೃಹಚ್ಛ್ರೋಣೀಂ ಸುಕಠಿನಾಂ ರಂಭಾಸ್ತಂಭಪರಿಷ್ಕೃತಾಂ ॥ ೧೧೩ ॥

ಸ್ಥಲಪದ್ಮಪ್ರಭಾಜುಷ್ಟಪಾದಪದ್ಮಯುಗಂ ಧರಾಂ ।
ರತ್ನಾಭರಣಸಂಯುಕ್ತಂ ಕುಂಕುಮಾಕ್ತಂ ಸಯಾವಕಂ ॥ ೧೧೪ ॥

ದೇವೇಂದ್ರಮೌಲಿಮಂದಾರಮಕರಂದಕಣಾರುಣಂ ।
ಸುರಸಿದ್ಧಮುನೀಂದ್ರಾದಿದತ್ತಾರ್ಘ್ಯೈಸ್ಸಂಯುತಂ ಸದಾ ॥ ೧೧೫ ॥

೧೧೧–೧೧೨. ಕಪೋಲದಲ್ಲಿ ಕಸ್ತೂರೀ ಬೊಟ್ಟುಗಳಿಂದ ಮಕರಿಕಾದಿ ಪತ್ರಗಳನ್ನೂ, ನಾನಾ ಚಿತ್ರಗಳನ್ನೂ, ಚಿತ್ರಿಸಿಕೊಂಡು, ಪಕ್ವವಾದ ಬಿಂಬಫಲದಂತಿರುವ ಅಧರೋಷ್ಠದಿಂದ ಶೋಭಿತಳಾಗಿ, ಮುತ್ತಿನ ಪಂಕ್ತಿಯ ಕಾಂತಿಯನ್ನು ಹೋಲುವ ದಂತಪಂಕ್ತಿಗಳಿಂದ ಮನೋಹರಳಾಗಿ, ಶಾಂತವಾದ ಕಟಾಕ್ಷವನ್ನು ಬೀರುತ್ತಿರುವ ಸುಂದರಿಯಾದ ಗಂಗೆಯನ್ನು ಭಜಿಸುವೆನು.

೧೧೩–೧೧೪. ಬಿಲ್ವಫಲದಂತೆ ಕಠಿನವಾಗಿಯೂ, ದುಂಡಾಗಿಯೂ ಇರುವ ಸ್ತನಯುಗಗಳಿಂದಲೂ, ಕಠಿನವೂ, ವಿಶಾಲವೂ ಆಗಿರುವ ಶ್ರೋಣೀಬಿಂಬಗಳಿಂದಲೂ, ರಂಭಾಸ್ತಂಭಗಳನ್ನು ಹೋಲುವ ಊರುಯುಗ್ಮಗಳಿಂದಲೂ, ಶೋಭಿತಳಾಗಿ. ಸ್ಥಲಪದ್ಮಭ್ರಮೆಯನ್ನುಂಟುಮಾಡುವ ರತ್ನಾಭರಣಗಳಿಂದ ಭೂಷಿತವಾದ ಮನೋಹರಳಾದ ಗಂಗೆಯನ್ನು ಭಜಿಸುವೆನು.

೧೧೫–೧೧೬. ದೇವೇಂದ್ರನ ತಲೆಯಲ್ಲಿರುವ ಮಂದಾರ ಪುಷ್ಪದ ಮಕರಂದ ಬಿಂದುವಿನಿಂದ ಕೆಂಪಾಗಿರುವ ಪಾದಕಮಲಗಳಿಗೆ ಕುಂಕುಮ ಮತ್ತು ಅರುಗಿನ ರಸಗಳನ್ನು ಲೇಪಿಸಿಕೊಂಡು, ಸುರರು, ಸಿದ್ಧರು ಮತ್ತು ಮುನಿಶ್ರೇಷ್ಠರುಗಳಿಂದ

ತಪಸ್ವಿಮೌಲಿನಿಕರಭ್ರಮರಶ್ರೇಣಿಸಂಯುತಂ ।
ಮುಕ್ತಿಪ್ರದಂ ಮುಮುಕ್ಷೂಣಾಂ ಕಾಮಿನಾಂ ಸ್ವರ್ಗಭೋಗದಂ ॥ ೧೦೬ ॥

ವರಾಂ ವರೇಣ್ಯಾಂ ವರದಾಂ ಭಕ್ತಾನುಗ್ರಹಕಾತರಾಂ ।
ಶ್ರೀವಿಷ್ಣೋಃ ಪದದಾತ್ರೀಂ ಚ ಭಜೇ ವಿಷ್ಣುಪದೀಂ ಸತೀಂ ॥ ೧೦೭ ॥

ಇತಿ ಧ್ಯಾನೇನ ಚಾನೇನ ಧ್ಯಾತ್ವಾ ತ್ರಿಪಥಗಾಂ ಶುಭಾಂ ।
ದತ್ವಾ ಸಂಪೂಜಯೇದ್ಬ್ರಹ್ಮನ್ನುಪಹಾರಾಂಶ್ಚ ಷೋಡಶ ॥ ೧೦೮ ॥

ಆಸನಂ ಪಾದಮರ್ಘ್ಯಂ ಚ ಸ್ನಾನೀಯಂ ಚಾನುಲೇಪನಂ ।
ಧೂಪಂ ದೀಪಂ ಚ ನೈವೇದ್ಯಂ ತಾಂಬೂಲಂ ಶೀತಲಂ ಜಲಂ ॥ ೧೦೯ ॥

ವಸನಂ ಭೂಷಣಂ ಮಾಲ್ಯಂ ಗಂಧಮಾಚಮನೀಯಕಂ ।
ಮನೋಹರಂ ಸುತಲ್ಪಂ ಚ ದೇಯಾನ್ಯೇತಾನಿ ಷೋಡಶ ॥ ೧೧೦ ॥

ಸರ್ವದಾ ಪೂಜಿತಳಾಗಿ ತಪಸ್ವಿಗಳ ತಲೆಗಳ ಸಾಲೆಂಬ ಭ್ರಮರಗಳ ಪಂಕ್ತಿಯಿಂದ ನಮಿತವೂ, ಮೋಕ್ಷೇಚ್ಛುಗಳಿಗೆ ಮುಕ್ತಿದಾಯಕವೂ, ಕಾಮಿಗಳಿಗೆ ಸ್ವರ್ಗಭೋಗ ಪ್ರದಾತೃವೂ ಆದ ಪಾದಪದ್ಮಗಳಿಂದ ಶೋಭಿತಳಾಗಿರುವ ಗಂಗೆಯನ್ನು ಧ್ಯಾನಿಸುವೆನು.

೧೦೭. ಸರ್ವಶ್ರೇಷ್ಠಳೂ, ಭಕ್ತಾನುಗ್ರಹ ಕಾತರಳೂ. ವಿಷ್ಣುವಿನ ಸ್ಥಾನವನ್ನು ದೊರಕಿಸಿಕೊಡುವವಳೂ, ಆದ ವಿಷ್ಣುಪದಿ (ಗಂಗೆ) ಯನ್ನು ಭಜಿಸುವೆನು.

೧೦೮. ಈ ರೀತಿಯಾದ ಧ್ಯಾನಶ್ಲೋಕಗಳಿಂದ ತ್ರಿಪಥಗೆಯಾದ ಗಂಗೆಯನ್ನು ಧ್ಯಾನಿಸಿ ಷೋಡಶೋಪಚಾರಗಳಿಂದ ಚೆನ್ನಾಗಿ ಪೂಜಿಸಬೇಕು.

೧೦೯-೧೧೦. ಆಸನ, ಪಾದ್ಯ, ಸ್ನಾನ, ಗಂಧಾನುಲೇಪನ, ಧೂಪ, ದೀಪ, ಅರ್ಘ್ಯ, ನೈವೇದ್ಯ, ತಾಂಬೂಲ, ಶೀತಲೋದಕ, ವಸನ, ಭೂಷಣ, ಮಾಲ್ಯ, ಗಂಧ, ಶುದ್ಧಾಚಮನ, ಮನೋಹರವಾದ ಶಯ್ಯೆ ಈ ಹದಿನಾರು ಪೂಜಾಸಾಮಗ್ರಿಗಳನ್ನು ಕ್ರಮವರಿತು ಅರ್ಪಿಸಬೇಕು.

ದತ್ವಾ ಭಕ್ತ್ಯಾ ಸಂಪ್ರಣಮೇತ್ಸ್ತುತ್ವಾತಾಂ ಸಂಪುಟಾಂಜಲಿಃ ।
ಸಂಪೂಜ್ಯೈವಂ ಪ್ರಕಾರೇಣ ಸೋಽಶ್ವಮೇಧಫಲಂ ಲಭೇತ್ ॥ ೧೧೧ ॥

ಸ್ತೋತ್ರಂ ವೈ ಕೌಥುಮೋಕ್ತಂ ಚ ಸಂವಾದಂ ವಿಷ್ಣುವೇಧಸೋಃ ।
ಶ್ರುಣು ನಾರದ ವಕ್ಷ್ಯಾಮಿ ಪಾಪಘ್ನಂ ಚ ಸುಪುಣ್ಯದಂ ॥ ೧೧೨ ॥

॥ ಶ್ರೀ ಬ್ರಹ್ಮೋವಾಚ ॥

ಶ್ರೋತುಮಿಚ್ಛಾಮಿ ದೇವೇಶ ಲಕ್ಷ್ಮೀಕಾಂತ ನಮಃ ಪ್ರಭೋ ।
ವಿಷ್ಣೋ ವಿಷ್ಣುಪದೀಸ್ತೋತ್ರಂ ಪಾಪಘ್ನಂ ಪುಣ್ಯಕಾರಣಂ ॥ ೧೧೩ ॥

॥ ಶ್ರೀ ನಾರಾಯಣ ಉವಾಚ ॥

ಶಿವಸಂಗೀತಸಂಮುಗ್ಧ ಶ್ರೀಕೃಷ್ಣಾಂಗದ್ರವೋದ್ಭವಾಂ ।
ರಾಧಾಂಗದ್ರವಸಂಭೂತಾಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೪ ॥

---

೧೧೧. ಈ ಷೋಡಶೋಪಚಾರಗಳನ್ನು ಭಕ್ತಿಯಿಂದ ಸಮರ್ಪಿಸಿ, ನಮಸ್ಕರಿಸಿ, :ಕೈಮುಗಿದುಕೊಂಡು ಗಂಗೆಯನ್ನು ಸ್ತುತಿಸುತ್ತ ಈ ರೀತಿಯಾಗಿ ಪೂಜಿಸುವವನು ಅಶ್ವಮೇಧಯಾಗ ಮಾಡಿದ ಫಲವನ್ನು ಹೊಂದುವನು.

೧೧೨. ಎಲೈ ನಾರದನೇ, ಕೌಥುಮಿಾ ಶಾಖೋಕ್ತವಾದ ಸ್ತೋತ್ರವನ್ನೂ, ವಿಷ್ಣು ಮತ್ತು ಬ್ರಹ್ಮ ಇವರಿಗೆ ನಡೆದ ಪಾಪಹರವೂ, ಪುಣ್ಯಕರವೂ ಆದ ಸಂವಾದ ವನ್ನೂ ಹೇಳುವೆನು. ಕೇಳು.

೧೧೩. ಶ್ರೀ ಬ್ರಹ್ಮ :–ಎಲೈ ದೇವೇಶನೂ, ಲಕ್ಷ್ಮೀಕಾಂತನೂ ಆದ ವಿಷ್ಣುವೇ, ನಾನು ಪಾಪನಾಶಕವೂ, ಪುಣ್ಯದಾಯಕವೂ ಆದ ಗಂಗೆಯ ಸ್ತೋತ್ರವನ್ನು ಕೇಳಲು ಬಯಸುವೆನು.

೧೧೪. ಶ್ರೀನಾರಾಯಣ :—ಪರಮೇಶ್ವರನ ಸಂಗೀತಶ್ರವಣದಿಂದ ಮೋಹಿತ ನಾದ ಶ್ರೀಕೃಷ್ಣನ ಅಂಗದ್ರವದಿಂದಲೂ, ರಾಧಾದೇವಿಯ ಅಂಗದ್ರವದಿಂದಲೂ, ಉದ್ಭವಿಸಿದ ಗಂಗೆಯನ್ನು ನಮಸ್ಕರಿಸುವೆನು.

ಯಜ್ಜನ್ಮ ಸೃಷ್ಟೇರಾದೌ ಚ ಗೋಲೋಕೇ ರಾಸಮಂಡಲೇ ।
ಸನ್ನಿಧಾನೇ ಶಂಕರಸ್ಯ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೫ ॥

ಗೋಪೈರ್ಗೋಪೀಭಿರಾಕೀರ್ಣೆ ಶುಭೇ ರಾಧಾಮಹೋತ್ಸವೇ ।
ಕಾರ್ತಿಕೀಪೂರ್ಣಿಮಾಜಾತಾಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೬ ॥

ಕೋಟಿಯೋಜನವಿಸ್ತೀರ್ಣಾ ದೈರ್ಘ್ಯೇ ಲಕ್ಷಗುಣಾ ತತಃ ।
ಸಮಾವೃತಾ ಯಾ ಗೋಲೋಕಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೭ ॥

ಷಷ್ಟಿಲಕ್ಷೈರ್ಯೋಜನೈರ್ಯಾ ತತೋ ದೈರ್ಘ್ಯೇ ಚತುರ್ಗುಣಾ ।
ಸಮಾವೃತಾ ಯಾ ವೈಕುಂಠಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೮ ॥

ವಿಂಶಲ್ಲಕ್ಷೈರ್ಯೋಜನೈರ್ಯಾ ತತೋ ದೈರ್ಘ್ಯೇ ಚತುರ್ಗುಣಾ ।
ಆವೃತಾ ಬ್ರಹ್ಮಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೧೯ ॥

---

೧೧೫. ಯಾರು ಸೃಷ್ಟಿಗೆ ಆದಿಯಲ್ಲಿ ಗೋಲೋಕದ ರಾಸಮಂಡಲದಲ್ಲಿ ಶಂಕರನ ಸನ್ನಿಧಿಯಲ್ಲಿ ಆವಿರ್ಭವಿಸಿದಳೋ ಆ ಗಂಗೆಯನ್ನು ನಮಸ್ಕರಿಸುವೆನು.

೧೧೬. ಗೋಪಗೋಪಿಯರಿಂದ ಪರಿವೃತವಾಗಿ ಶುಭಕರವಾದ ರಾಧಾ ಮಹೋತ್ಸವದ ಸುಸಂದರ್ಭದಲ್ಲಿ ಕಾರ್ತೀಕಮಾಸದ ಪೂರ್ಣಿಮೆಯದಿನ ಜನಿಸಿದ ಆ ಗಂಗೆಯನ್ನು ನಮಸ್ಕರಿಸುವೆನು

೧೧೭. ಕೋಟಿಯೋಜನ ವಿಸ್ತೀರ್ಣಳಾಗಿಯೂ, ಅದಕ್ಕೆ ಲಕ್ಷದಷ್ಟು ದೀರ್ಘಳಾಗಿಯೂ ಗೋಲೋಕವನ್ನೆಲ್ಲಾ ಆವರಿಸಿಕೊಂಡಿರುವ ಆ ಗಂಗಾದೇವಿಯನ್ನು ವಂದಿಸುವೆನು.

೧೧೮. ಅರವತ್ತುಲಕ್ಷ ಯೋಜನ ವಿಸ್ತಾರದಿಂದಲೂ, ಅದಕ್ಕೆ ನಾಲ್ಕರಷ್ಟು ದೀರ್ಘತೆಯಿಂದಲೂ ವೈಕುಂಠಲೋಕವನ್ನು ಸುತ್ತಲೂ ಆವರಿಸಿಕೊಂಡಿರುವ ಆ ಗಂಗೆಗೆ ಅನಂತವಂದನೆಗಳು.

೧೧೯. ಇಪ್ಪತ್ತುಲಕ್ಷಯೋಜನ ವಿಸ್ತಾರದಿಂದಲೂ, ಅದಕ್ಕೆ ನಾಲ್ಕರಷ್ಟು ದೀರ್ಘತೆಯಿಂದಲೂ ಬ್ರಹ್ಮಲೋಕವನ್ನು ಸುತ್ತುವರಿದಿರುವ ಗಂಗೆಯನ್ನು ವಂದಿಸುವೆನು.

ತ್ರಿಂಶಲ್ಲಕ್ಷೈರ್ಯೋಜನೈರ್ಯಾ ದೈರ್ಘ್ಯೇ ಪಂಚಗುಣಾ ತತಃ ।
ಆವೃತಾ ಶಿವಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೦ ॥

ಷಡ್ಯೋಜನಸುವಿಸ್ತೀರ್ಣಾ ದೈರ್ಘ್ಯೇ ದಶಗುಣಾ ತತಃ ।
ಮಂದಾಕಿನೀ ಯೇಂದ್ರಲೋಕೇ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೧ ॥

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೇ ಸಪ್ತಗುಣಾ ತತಃ ।
ಆವೃತಾ ಧ್ರುವಲೋಕಂ ಯಾ ತಾಂ ಗಂಗಾಂಪ್ರಣಮಾಮ್ಯಹಂ ॥ ೧೨೨ ॥

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೇ ಷಡ್ಗುಣಿತಾ ತತಃ ।
ಆವೃತಾ ಚಂದ್ರಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೩ ॥

ಯೋಜನೈಷ್ಷಷ್ಟಿಸಾಹಸ್ರೈರ್ದೈರ್ಘ್ಯೇ ದಶಗುಣಾ ತತಃ ।
ಆವೃತಾ ಸೂರ್ಯಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೪ ॥

---

೧೨೦. ಮೂವತ್ತು ಲಕ್ಷಯೋಜನ ವಿಸ್ತಾರದಿಂದಲೂ, ಅದಕ್ಕೆ ಐದರಷ್ಟು ಉದ್ದದಿಂದಲೂ ಶಿವಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಅನಂತ ವಂದನೆಗಳು.

೧೨೧. ಆರುಯೋಜನ ವಿಸ್ತೀರ್ಣದಿಂದಲೂ, ಅದಕ್ಕೆ ಹತ್ತರಷ್ಟು ದೀರ್ಘತೆಯಿಂದಲೂ ಇದ್ದು ಇಂದ್ರಲೋಕದಲ್ಲಿ ಮಂದಾಕಿನೀ ಎಂಬ ಹೆಸರಾಂತಿರುವ ಗಂಗೆಗೆ ವಂದಿಸುವೆನು.

೧೨೨. ಲಕ್ಷ ಯೋಜನ ವಿಸ್ತೀರ್ಣದಿಂದಲೂ, ಅದಕ್ಕೆ ಏಳರಷ್ಟು ದೀರ್ಘತೆಯಿಂದಲೂ ಧ್ರುವಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ನಮಿಸುವೆನು.

೧೨೩. ಲಕ್ಷಯೋಜನ ವಿಸ್ತೀರ್ಣವಾಗಿಯೂ. ಅದರ ಆರರಷ್ಟು ಉದ್ದವಾಗಿಯೂ ಚಂದ್ರಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಇದೋ ವಂದನೆಗಳು.

೧೨೪. ಅರವತ್ತುಸಾವಿರಯೋಜನ ವಿಸ್ತೀರ್ಣವಾಗಿಯೂ, ಅದರ ಹತ್ತರಷ್ಟು ದೀರ್ಘವಾಗಿಯೂ ಸೂರ್ಯಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಇದೋ ನನ್ನ ದೀರ್ಘನಮಸ್ಕಾರಗಳು.

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೇ ಷಡ್ಗುಣಿತಾ ತತಃ ।
ಆವೃತಾ ಸತ್ಯಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೫ ॥

ದಶಲಕ್ಷೈರ್ಯೋಜನೈರ್ಯಾ ದೈರ್ಘ್ಯೇ ಪಂಚಗುಣಾ ತತಃ ।
ಆವೃತಾ ಯಾ ತಪೋಲೋಕಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೬ ॥

ಸಹಸ್ರಯೋಜನಾ ಯಾ ಚ ದೈರ್ಘ್ಯೇ ಸಪ್ತಗುಣಾ ತತಃ ।
ಆವೃತಾ ಜನಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೭ ॥

ಸಹಸ್ರಯೋಜನಾಯಾಮಾ ದೈರ್ಘ್ಯೇ ಸಪ್ತಗುಣಾ ತತಃ ।
ಆವೃತಾ ಯಾ ಚ ಕೈಲಾಸಂ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೮ ॥

---

೧೨೫. ಲಕ್ಷಯೋಜನ ವಿಸ್ತೀರ್ಣವಾಗಿಯೂ ಅದರ ಆರರಷ್ಟು ದೀರ್ಘವಾಗಿಯೂ ಸತ್ಯಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಇದೋ ನನ್ನ ಅನಂತ ವಂದನೆಗಳು.

೧೨೬. ಹತ್ತುಲಕ್ಷಯೋಜನ ವಿಸ್ತಾರವಾಗಿಯೂ, ಅದರ ಐದರಷ್ಟು ಉದ್ದವಾಗಿಯೂ ತಪೋಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಇದೋ ನನ್ನ ಅನಂತ ವಂದನೆಗಳು.

೧೨೭. ಸಾವಿರಯೋಜನ ವಿಸ್ತಾರದಿಂದಲೂ, ಅದರ ಏಳರಷ್ಟು ದೀರ್ಘತೆಯಿಂದಲೂ ಜನಲೋಕವನ್ನು ಆವರಿಸಿಕೊಂಡಿರುವ ಗಂಗೆಗೆ ಸಾಷ್ಟಾಂಗವೆರಗುವೆನು.

೧೨೮. ಸಾವಿರಯೋಜನ ವಿಸ್ತಾರವಾಗಿಯೂ, ಅದರ ಏಳರಷ್ಟು ದೀರ್ಘವಾಗಿಯೂ ಕೈಲಾಸವನ್ನು ಆವರಿಸಿಕೊಂಡಿರುವ ಗಂಗೆಗೆ ನಮಸ್ಕಾರಮಾಡುವೆನು.

ಪಾತಾಲೇ ಯಾ ಭೋಗವತೀ ವಿಸ್ತೀರ್ಣಾ ದಶಯೋಜನಾ ।
ತತೋ ದಶಗುಣಾ ದೈರ್ಘ್ಯೇ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೨೯ ॥

ಕ್ರೋಶೈಕಮಾತ್ರವಿಸ್ತೀರ್ಣಾ ತತಃ ಕ್ಷೀಣಾ ನ ಕುತ್ರಚಿತ್ ।
ಕ್ಷಿತೌ ಚಾಲಕನಂದಾ ಯಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೩೦ ॥

ಸತ್ಯೇ ಯಾ ಕ್ಷೀರವರ್ಣಾ ಚ ತ್ರೇತಾಯಾಮಿಂದುಸನ್ನಿಭಾ ।
ದ್ವಾಪರೇ ಚಂದನಾಭಾ ಚ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೩೧ ॥

ಜಲಪ್ರಭಾ ಕಲೌ ಯಾ ಚ ನಾನ್ಯತ್ರ ಪೃಥಿವೀತಲೇ ।
ಸ್ವರ್ಗೇ ಚ ನಿತ್ಯಂ ಕ್ಷೀರಾಭಾ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೩೨ ॥

ಯಸ್ಯಾಃ ಪ್ರಭಾವ ಅತುಲಃ ಪುರಾಣೇ ಚ ಶ್ರುತೌ ಶ್ರುತಃ ।
ಯಾ ಪುಣ್ಯದಾ ಪಾಪಹರ್ತ್ರೀ ತಾಂ ಗಂಗಾಂ ಪ್ರಣಮಾಮ್ಯಹಂ ॥ ೧೩೩ ॥

---

೧೨೯. ಪಾತಾಳಲೋಕದಲ್ಲಿ 'ಭೋಗವತೀ' ಎಂಬ ಹೆಸರಿನಿಂದ ಹತ್ತು ಯೋಜನ ವಿಸ್ತೀರ್ಣವಾಗಿಯೂ, ಅದರ ಹತ್ತರಷ್ಟು ದೀರ್ಘವಾಗಿಯೂ ಆವರಿಸಿ ಕೊಂಡಿರುವ ಗಂಗೆಗೆ ವಂದಿಸುವೆನು.

೧೩೦. ಭೂಮಂಡಲದಲ್ಲಿ ತಾನು ಹರಿಯುವ ಸ್ಥಳದಲ್ಲಿ ಎಲ್ಲಿ ನೋಡಿದರೂ ಒಂದು ಹರಿದಾರಿಗೆ ಕಮ್ಮಿಯಿಲ್ಲದಂತೆ ವಿಸ್ತೀರ್ಣವಾಗಿದ್ದುಕೊಂಡು 'ಅಲಕನಂದಾ' ಯೆಂದು ಪ್ರಸಿದ್ಧಿಪಡೆದಿರುವ ಗಂಗೆಗೆ ಸಾಷ್ಟಾಂಗವೆರಗುವೆನು.

೧೩೧. ಕೃತಯುಗದಲ್ಲಿ ಕ್ಷೀರವರ್ಣಳೂ, ತ್ರೇತಾಯುಗದಲ್ಲಿ ಚಂದ್ರ ಸದೃಶಳೂ, ದ್ವಾಪರದಲ್ಲಿ ಚಂದನಸಮಾನಳೂ ಆದ ಗಂಗೆಯನ್ನು ವಂದಿಸುವೆನು.

೧೩೨. ಕಲಿಯುಗದಲ್ಲಿ ಪಥ್ವಿಯ ಮೇಲೆ ನೀರಿನ ಆಕಾರದಿಂದಲೂ, ಸ್ವರ್ಗದಲ್ಲಿ ಹಾಲಿನ ಆಕಾರದಿಂದಲೂ, ಯಾವಾಗಲೂ ಹರಿಯುತ್ತಿರುವ ಆ ಗಂಗೆಗೆ ವಂದಿಸುವೆನು.

೧೩೩. ಯಾರ ಮಹಿಮೆಯು ಅಸದೃಶವಾದುದೆಂದು ಪುರಾಣದಲ್ಲೂ, ವೇದ ದಲ್ಲೂ ಹೇಳಿದೆಯೋ, ಯಾರು ಪಾಪನಾಶಕಳೂ, ಪುಣ್ಯದಾಯಕಳೂ ಆಗಿರುವಳೋ ಅಂಥ ಗಂಗೆಯನ್ನು ನಮಿಸುವೆನು.

ಯತ್ತೋಯೆಕಣಿಕಾಸ್ಪರ್ಶಃ ಪಾಪಿನಾಂ ಚ ಪಿತಾಮಹ ।
ಬ್ರಹ್ಮಹತ್ಯಾದಿಕಂ ಪಾಪಂ ಕೋಟಿಜನ್ಮಾರ್ಜಿತಂ ದಹೇತ್ ॥ ೧೩೪ ॥

ಇತ್ಯೇವಂ ಕಥಿತಂ ಬ್ರಹ್ಮನ್ ಗಂಗಾಪದ್ಯೈಕವಿಂಶತಿಂ ।
ಸ್ತೋತ್ರರೂಪಂ ಚ ಪರಮಂ ಪಾಪಘ್ನಂ ಪುಣ್ಯಬೀಜಕಂ ॥ ೧೩೫ ॥

ನಿತ್ಯಂ ಯೋ ಹಿ ಪಠೇದ್ಭಕ್ತ್ಯಾ ಸಂಪೂಜ್ಯ ಚ ಸುರೇಶ್ವರೀಂ ।
ಅಶ್ವಮೇಧಫಲಂ ನಿತ್ಯಂ ಲಭತೇ ನಾತ್ರ ಸಂಶಯಃ ॥ ೧೩೬ ॥

ಅಪುತ್ರೋ ಲಭತೇ ಪುತ್ರಂ ಭಾರ್ಯಾಹೀನೋ ಲಭೇತ್ಸ್ತ್ರಿಯಾಂ ।
ರೋಗಾನ್ಮುಚ್ಯತೇ ರೋಗೀ ಚ ಬದ್ಧೋ ಮುಚ್ಯೇತ ಬಂಧನಾತ್ ॥ ೧೩೭ ॥

ಅಸ್ಪಷ್ಟಕೀರ್ತಿಃ ಸುಯಶಾ ಮೂರ್ಖೋ ಭವತಿ ಪಂಡಿತಃ ।
ಯಃ ಪಠೇತ್ಪ್ರಾತರುತ್ಥಾಯ ಗಂಗಾಸ್ತೋತ್ರಮಿದಂ ಶುಭಂ ॥ ೧೩೮ ॥

---

೧೩೪. ಎಲೈ ಬ್ರಹ್ಮನೇ, ಗಂಗೆಯ ಒಂದು ಜಲಬಿಂದುವನ್ನು ಸ್ಪರ್ಶ ಮಾಡಿದ ಮಾತ್ರದಿಂದಲೇ ಪಾಪಿಗಳ ಕೋಟಿಜನ್ಮಾರ್ಜಿತವಾದ ಬ್ರಹ್ಮಹತ್ಯಾದಿ ಪಾಪಗಳು ಪರಿಹಾರವಾಗುವುವು.

೧೩೫–೧೩೬. ಎಲೈ ಬ್ರಹ್ಮನೇ, ಈ ರೀತಿಯಾಗಿ ಇಪ್ಪತ್ತೊಂದು ಪದ್ಯದಲ್ಲಿ ನಾನು ಹೇಳಿದ ಪಾಪನಾಶಕವೂ, ಪುಣ್ಯಕಾರಕವೂ ಆದ ಗಂಗೆಯ ಸ್ತೋತ್ರವನ್ನು ಪ್ರತಿನಿತ್ಯವೂ ಭಕ್ತಿಯಿಂದ ಪಠಿಸಿ ಸುರೇಶ್ವರಿಯಾದ ಗಂಗೆಯನ್ನು ಪೂಜಿಸುವವರಿಗೆ ಅಶ್ವಮೇಧಯಾಗ ಮಾಡಿದ ಫಲವುಂಟಾಗುವುದರಲ್ಲಿ ಸಂಶಯವಿಲ್ಲ.

೧೩೭. ಮಕ್ಕಳಿಲ್ಲದವರಿಗೆ ಮಕ್ಕಳೂ, ಕಳತ್ರಹೀನರಿಗೆ ಕಳತ್ರವೂ, ಲಭಿಸುವುದು. ರೋಗಿಯು ರೋಗದಿಂದ ಮುಕ್ತನಾಗುವನು. ಕಾರಾಗಾರದಲ್ಲಿರುವವನು ಬಿಡುಗಡೆಹೊಂದುವನು.

೧೩೮–೧೩೯. ಗೂಢಕೀರ್ತಿಯುಳ್ಳವನು ಪ್ರಸಿದ್ಧನೂ, ಮೂರ್ಖನು ಪಂಡಿತನೂ ಆಗುವನು. ಪ್ರಾತಃಕಾಲದಲ್ಲೆದ್ದು ಶುಭವಾದ ಈ ಗಂಗಾಸ್ತೋತ್ರವನ್ನು

ಶುಭಂ ಭವೇತ್ತು ದುಃಸ್ವಪ್ನಂ ಗಂಗಾಸ್ನಾನಫಲಂ ಲಭೇತ್ ॥ ೧೩೯ ॥

॥ ನಾರಾಯಣ ಉವಾಚ ॥

ಭಗೀರಥೋಽನಯಾ ಸ್ತುತ್ವಾ ಸ್ತುತ್ವಾ ಗಂಗಾಂ ಚ ನಾರದ ।
ಜಗಾಮ ತಾಂ ಗೃಹೀತ್ವಾ ಚ ಯತ್ರ ನಷ್ಟಾಶ್ಚ ಸಾಗರಾಃ ॥ ೧೪೦ ॥

ವೈಕುಂಠಂ ತೇ ಯಯುಸ್ತೂರ್ಣಂ ಗಂಗಾಯಾಃ ಸ್ಪರ್ಶವಾಯುನಾ ।
ಭಗೀರಥೇನ ಸಾ ನೀತಾ ತೇನ ಭಾಗೀರಥೀ ಸ್ಮೃತಾ ॥ ೧೪೧ ॥

ಇತ್ಯೇವಂ ಕಥಿತಂ ಸರ್ವಂ ಗಂಗೋಪಾಖ್ಯಾನಮುತ್ತಮಂ ।
ಪುಣ್ಯದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೪೨ ॥

॥ ನಾರದ ಉವಾಚ ॥

ಶಿವಸಂಗೀತಸಂಮುಗ್ಧೇ ಶ್ರೀಕೃಷ್ಣೇ ದ್ರವತಾಂ ಗತೇ ।
ದ್ರವತಾಂ ಚ ಗತಾಯಾಂ ಚ ರಾಧಾಯಾಂ ಕಿಂ ಬಭೂವ ಹ ॥ ೧೪೩ ॥

ಪಠಿಸುವವನ ದುಃಸ್ವಪ್ನಗಳೆಲ್ಲವೂ ಶುಭಕರವಾಗಿ ಅವನಿಗೆ ಗಂಗಾಸ್ನಾನಫಲವು ಲಭಿಸುವುದು.

೧೪೦. ನಾರಾಯಣ :—ಎಲೈ, ನಾರದನೇ, ಭಗೀರಥನು ಈ ಸ್ತೋತ್ರಗಳಿಂದ ಗಂಗೆಯನ್ನು ಭಜಿಸಿ ಆಕೆಯನ್ನು ಕರೆದುಕೊಂಡು ಸಗರಪುತ್ರರು ನಾಶವಾದ ಸ್ಥಳಕ್ಕೆ ಹೋದನು.

೧೪೧. ಆ ಸಗರ ಪುತ್ರರೆಲ್ಲರೂ ಗಂಗೆಯ ಮೇಲಿನ ವಾಯುಸ್ಪರ್ಶದಿಂದಲೇ ವೈಕುಂಠಕ್ಕೆ ತೆರಳಿದರು ಭಗೀರಥನು ಗಂಗೆಯನ್ನು ಭೂಲೋಕಕ್ಕೆ ತಂದುದರಿಂದ ಅದಕ್ಕೆ 'ಭಾಗೀರಥೀ' ಎಂದು ಹೆಸರಾಯಿತು.

೧೪೨. ಇಂತು ಪುಣ್ಯಕರವೂ, ಮೋಕ್ಷಕರವೂ ಆದ ಗಂಗೆಯ ಉಪಾಖ್ಯಾನವನ್ನು ವಿಸ್ತಾರವಾಗಿ ಹೇಳಿದುದಾಯಿತು. ನಿನಗೆ ಇನ್ನೇನನ್ನು ಕೇಳಲು ಬಯಕೆಯಿರುವುದು ?

೧೪೩. ನಾರದ :—ಶಿವನ ಸಂಗೀತದಿಂದ ಸಂಮುಗ್ಧನಾದ ಶ್ರೀಕೃಷ್ಣನೂ, ರಾಧಾದೇವಿಯೂ, ದ್ರವಸ್ವರೂಪವನ್ನು ಪಡೆದನಂತರ ಮುಂದೇನಾಯಿತು ?

ತತ್ರಸ್ಥಾಶ್ಚ ಜನಾ ಯೇ ಯೇ ತೇ ಚ ಕಿಂ ಚಕ್ರುರುದ್ಯಮಂ ।
ಏತತ್ಸರ್ವಂ ಸುವಿಸ್ತೀರ್ಣಂ ಪ್ರಭೋ ವಕ್ತುಮಿಹಾರ್ಹಸಿ ॥ ೧೪೪ ॥

॥ ನಾರಾಯಣ ಉವಾಚ ॥

ಕಾರ್ತಿಕೀಪೂರ್ಣಿಮಾಯಾಂ ಚ ರಾಧಾಯಾಃ ಸುಮಹೋತ್ಸವೇ ।
ಕೃಷ್ಣಃ ಸಂಪೂಜ್ಯ ತಾಂ ರಾಧಾಮುವಸದ್ರಾಸಮಂಡಲೇ ॥ ೧೪೫ ॥

ಕೃಷ್ಣೇನ ಪೂಜಿತಾಂ ತಾಂ ತು ಸಂಪೂಜ್ಯಾದೃತಮಾನಸಾಃ ।
ಊಚುರ್ಬ್ರಹ್ಮಾದಯಃ ಸರ್ವೇ ಋಷಯಃ ಸನಕಾದಯಃ ॥ ೧೪೬ ॥

ಏತಸ್ಮಿನ್ನಂತರೇ ಕೃಷ್ಣಸಂಗೀತಂ ಚ ಸರಸ್ವತೀ ।
ಜಗೌ ಸುಂದರತಾನೇನ ವೀಣಯಾ ಚ ಮನೋಹರಂ ॥ ೧೪೭ ॥

ತುಷ್ಟೋ ಬ್ರಹ್ಮಾ ದದೌ ತಸ್ಯೈ ಮಹಾರತ್ನಾಢ್ಯಮಾಲಿಕಾಂ ।
ಶಿರೋಮಣೀಂದ್ರಸಾರಂ ಚ ಸರ್ವಬ್ರಹ್ಮಾಂಡದುರ್ಲಭಂ ॥ ೧೪೮ ॥

---

೧೪೪. ಆಗ ಆ ಸಭೆಯಲ್ಲಿದ್ದವರೆಲ್ಲರೂ ಏನೇನು ಮಾಡಿದರು? ಇವೆಲ್ಲವನ್ನೂ ವಿಸ್ತಾರವಾಗಿ ಹೇಳಬೇಕೆಂದು ಬೇಡಿಕೊಳ್ಳುವೆನು.

೧೪೫. ನಾರಾಯಣ :—ಒಮ್ಮೆ ಕಾರ್ತಿಕಪೂರ್ಣಿಮೆಯಲ್ಲಿ ರಾಧಾ ಮಹೋತ್ಸವದ ದಿವಸ ಶ್ರೀಕೃಷ್ಣನು ರಾಧಾದೇವಿಯನ್ನು ಪೂಜಿಸಿ ರಾಸಮಂಡಲದಲ್ಲಿ ಕುಳಿತಿದ್ದನು.

೧೪೬. ಶ್ರೀಕೃಷ್ಣನಿಂದ ಪೂಜಿತಳಾದ ಆ ರಾಧೆಯನ್ನು ಬ್ರಹ್ಮಾದಿ ತ್ರಿಮೂರ್ತಿಗಳೂ ಸನಕಾದಿಬ್ರಹ್ಮಪುತ್ರರೂ ಆದರದಿಂದ ಪೂಜಿಸಿ ನುತಿಸುತ್ತಿದ್ದರು.

೧೪೭. ಈ ಸಂದರ್ಭದಲ್ಲಿ ಸರಸ್ವತಿಯು ತಾಲಲಯಬದ್ಧವಾಗಿ ವೀಣೆಯನ್ನು ನುಡಿಸುತ್ತ ಶ್ರೀಕೃಷ್ಣನನ್ನು ಕುರಿತು ಸಂಗೀತವನ್ನು ಹಾಡಿದಳು.

೧೪೮. ಆಗ ಸಂತುಷ್ಟನಾದ ಬ್ರಹ್ಮನು ಬಹಳ ಬೆಲೆಬಾಳುವ ಶ್ರೇಷ್ಠವಾದ ರತ್ನಮಾಲಿಕೆಯೊಂದನ್ನು ಸರಸ್ವತಿಗೆ ಕೊಟ್ಟನು. ಅಲ್ಲದೆ ಸಮಸ್ತಬ್ರಹ್ಮಾಂಡದಲ್ಲೂ ಸಿಕ್ಕದಿರುವ ಉತ್ತಮವಾದ ಶಿರೋರತ್ನವನ್ನೂ ದಯಪಾಲಿಸಿದನು.

ಕೃಷ್ಣಃ ಕೌಸ್ತುಭರತ್ನಂ ಚ ಸರ್ವರತ್ನಾತ್ಪರಂ ವರಂ ।
ಅಮೂಲ್ಯರತ್ನಖಚಿತಂ ಹಾರಸಾರಂ ಚ ರಾಧಿಕಾ ॥ ೧೪೯ ॥

ನಾರಾಯಣಶ್ಚ ಭಗವಾನ್ವನಮಾಲಾಂ ಮನೋಹರಾಂ ।
ಅಮೂಲ್ಯರತ್ನಕಲಿತಂ ಲಕ್ಷ್ಮೀರ್ಮಕರಕುಂಡಲಂ ॥ ೧೫೦ ॥

ವಿಷ್ಣುಮಾಯಾ ಭಗವತೀ ಮೂಲಪ್ರಕೃತಿರೀಶ್ವರೀ ।
ದುರ್ಗಾ ನಾರಾಯಣೀಶಾನೀ ವಿಷ್ಣುಭಕ್ತಿಂ ಸುದುರ್ಲಭಾಂ ॥ ೧೫೧ ॥

ಧರ್ಮಬುದ್ಧಿಂ ಚ ಧರ್ಮಸ್ತು ಯಶಶ್ಚ ವಿಪುಲಂ ಭವೇ ।
ವಹ್ನಿಶುದ್ಧಾಂಶುಕಂ ವಹ್ನಿರ್ವಾಯುಶ್ಚ ಮಣಿನೂಪುರಂ ॥ ೧೫೨ ॥

---

೧೪೯. ಶ್ರೀಕೃಷ್ಣನು ಸಕಲರತ್ನಗಳಿಗಿಂತಲೂ ಶ್ರೇಷ್ಠವಾದ ಕೌಸ್ತುಭರತ್ನವನ್ನೂ, ರಾಧೆಯು ಅಮೂಲ್ಯವೂ, ರತ್ನಖಚಿತವೂ ಆದ ಹಾರವೊಂದನ್ನೂ ಕೊಟ್ಟರು

೧೫೦. ಭಗವಂತನಾದ ನಾರಾಯಣನು ಮನೋಹರವಾದ ವನಮಾಲೆಯೊಂದನ್ನೂ, ಲಕ್ಷ್ಮೀದೇವಿಯು ಅಮೂಲ್ಯರತ್ನಗಳಿಂದ ಖಚಿತವಾದ ಕರ್ಣಕುಂಡಲಗಳನ್ನೂ ಕೊಟ್ಟರು.

೧೫೧. ವಿಷ್ಣುಮಾಯಾಸ್ವರೂಪಳೂ, ಮೂಲಪ್ರಕೃತಿಯೂ, ಈಶ್ವರಿಯೂ, ಆದ ದುರ್ಗಾದೇವಿಯೂ ಕೂಡ ದುರ್ಲಭವಾದ ವಿಷ್ಣುಭಕ್ತಿಯನ್ನೂ ಸರಸ್ವತಿಗೆ ಅನುಗ್ರಹಿಸಿದಳು.

೧೫೨. ಧರ್ಮದೇವನು ಧರ್ಮಬುದ್ಧಿಯನ್ನೂ, ವಿಪುಲವಾದ ಕೀರ್ತಿಯನ್ನೂ, ಅಗ್ನಿದೇವನು ಪರಿಶುದ್ಧವಾದ ವಸ್ತ್ರವನ್ನೂ, ವಾಯುದೇವನು ಮಣಿನಿರ್ಮಿತವಾದ ನೂಪುರವನ್ನೂ ದಯಪಾಲಿಸಿದರು.

ಏತಸ್ಮಿನ್ನಂತರೇ ಶಂಭುರ್ಬ್ರಹ್ಮಣಾ ಪ್ರೇರಿತೋ ಮುಹುಃ ।
ಜಗೌ ಶ್ರೀಕೃಷ್ಣ ಸಂಗೀತಂ ರಾಸೋಲ್ಲಾಸಸಮನ್ವಿತಂ ॥ ೧೫೩ ॥

ಮೂರ್ಛಾಂ ಪ್ರಾಪುಃ ಸುರಾಃ ಸರ್ವೇ ಚಿತ್ರಪುತ್ತಲಿಕಾ ಯಥಾ ।
ಕ್ಷಣೇನ ಚೇತನಂ ಪ್ರಾಪ್ಯ ದದೃಶೂ ರಾಸಮಂಡಲಂ ॥ ೧೫೪ ॥

ಸ್ಥಲಂ ಸರ್ವಂ ಜಲಾಕೀರ್ಣಂ ಹೀನರಾಧಾ ಹರಿಂ ತಥಾ ।
ಅತ್ಯುಚ್ಚೈ ರುರುದುಃ ಸರ್ವೇ ಗೋಪಾ ಗೋಪ್ಯಃ ಸುರದ್ವಿಜಾಃ ॥ ೧೫೫ ॥

ಧ್ಯಾನೇನ ಧಾತಾ ಬುಬುಧೇ ಸರ್ವಮೇತದಭೀಪ್ಸಿತಂ ।
ಗತಶ್ಚ ರಾಧಯಾ ಸಾರ್ಧಂ ಶ್ರೀಕೃಷ್ಣೋ ದ್ರವತಾಮಿತಿ ॥ ೧೫೬ ॥

---

೧೫೩. ಈ ಸಂದರ್ಭದಲ್ಲಿ ಬ್ರಹ್ಮನಿಂದ ಪ್ರೇರಿತನಾದ ಶಿವನು ಕೃಷ್ಣನ ರಾಸಕ್ರೀಡೆಗಳನ್ನು ವರ್ಣಿಸುತ್ತ ಸಂಗೀತವನ್ನು ಸುಮಧುರವಾಗಿ ಹಾಡಿದನು.

೧೫೪. ಕರ್ಣಾನಂದಕರವಾದ ಆ ಸಂಗೀತವನ್ನು ಕೇಳಿ ಅಲ್ಲಿದ್ದ ದೇವತೆಗಳೆಲ್ಲರೂ ಆನಂದಪರವಶರಾಗಿ ಮೂರ್ಛೆಗೊಂಡು ಚಿತ್ರದಲ್ಲಿರುವ ಬೊಂಬೆಯಂತೆ ಕ್ಷಣಕಾಲ ಚಲಿಸದಿದ್ದರು. ಅನಂತರ ಚೇತನವನ್ನು ಪಡೆದು ರಾಸಮಂಡಲವನ್ನು ನೋಡಿದರು.

೧೫೫. ಆಗ ರಾಸಮಂಡಲವು ರಾಧಾಕೃಷ್ಣರಹಿತವೂ, ಕೇವಲ ಜಲಮಯವೂ ಆಗಿದ್ದಿತು. ಆಗ ಅಲ್ಲಿದ್ದ ಗೋಪಗೋಪಿಯರೂ, ದೇವತೆಗಳೂ, ಮತ್ತು ಬ್ರಾಹ್ಮಣರೂ ಕೂಡ ಗಟ್ಟಿಯಾಗಿ ಗೋಳಾಡಲಾರಂಭಿಸಿದರು.

೧೫೬. ಬ್ರಹ್ಮನು ಧ್ಯಾನಯೋಗದಿಂದ ಇದೆಲ್ಲವೂ ಶ್ರೀಕೃಷ್ಣನ ಲೀಲೆಯೆಂದೂ, ರಾಧೆಯೊಡನೆ ದ್ರವರೂಪನಾಗಿರುವನೆಂದೂ, ತಿಳಿದುಕೊಂಡನು.

ತತೋ ಬ್ರಹ್ಮಾದಯಃ ಸರ್ವೇ ತುಷ್ಟುವುಃ ಪರಮೇಶ್ವರಂ ।
ಸ್ವಮೂರ್ತಿಂ ದರ್ಶಯ ವಿಭೋ ವಾಂಛಿತಂ ವರಮೇವ ನಃ ॥ ೧೫೭ ॥

ಏತಸ್ಮಿನ್ನಂತರೇ ತತ್ರ ವಾಗ್ಬಭೂವಾಶರೀರಿಣೀ ।
ತಾಮೇವ ಶುಶ್ರುವುಃ ಸರ್ವೇ ಸುವ್ಯಕ್ತಾಂ ಮಧುರಾಂ ಶುಭಾಂ ॥ ೧೫೮ ॥

ಸರ್ವಾತ್ಮಾಹಮಿಯಂ ಶಕ್ತಿರ್ಭಕ್ತಾನುಗ್ರಹವಿಗ್ರಹಾ ।
ಮಮಾಪ್ಯಸ್ಯಾಶ್ಚ ಹೇ ದೇವಾ ದೇಹೇನ ಚ ಕಿಮಾವಯೋಃ ॥ ೧೫೯ ॥

ಮನವೋ ಮಾನವಾಃ ಸರ್ವೇ ಮುನಯಶ್ಚೈವ ವೈಷ್ಣವಾಃ ।
ಮನ್ಮಂತ್ರಪೂತಾ ಮಾಂ ದ್ರಷ್ಟುಮಾಗಮಿಷ್ಯಂತಿ ಮತ್ಪದಂ ॥ ೧೬೦ ॥

ಮೂರ್ತಿಂ ದ್ರಷ್ಟುಂ ಚ ಸುವ್ಯಗ್ರಾ ಯೂಯಂ ಯದಿ ಸುರೇಶ್ವರಾಃ ।
ಕರೋತಿ ಶಂಭುಸ್ತತ್ರೈವ ಮದೀಯಂ ವಾಕ್ಯಪಾಲನಂ ॥ ೧೬೧ ॥

---

೧೫೭. ಅನಂತರ ಬ್ರಹ್ಮಾದಿಸಕಲದೇವತೆಗಳೂ ಕೂಡ ಪರಮಪುರುಷನಾದ ಶ್ರೀಕೃಷ್ಣನು ತನ್ನ ಮೂರ್ತಿಯನ್ನು ಸಾಕ್ಷಾತ್ಕಾರ ಮಾಡಿಕೊಡಬೇಕೆಂದೂ, ಅದೇ ಅಭೀಷ್ಟವಾದ ವರವೆಂದೂ ಹೊಗಳಿ ಬೇಡಿದರು.

೧೫೮. ಈ ಮಧ್ಯೆ ಸುವ್ಯಕ್ತವೂ, ಮಧುರವೂ, ಶುಭಕರವೂ ಆದ ಅಶರೀರವಾಣಿಯೊಂದು ಅಲ್ಲಿ ಇಂತು ನುಡಿದಿದ್ದನ್ನು ಎಲ್ಲರೂ ಕೇಳಿದರು.

೧೫೯. ಆತ್ಮಶಕ್ತಿಸ್ವರೂಪಳಾದ ರಾಧಾದೇವಿಯೂ, ನಾನೂ ಸರ್ವವ್ಯಾಪಕರಾದರೂ ಭಕ್ತಾನುಗ್ರಹಕ್ಕಾಗಿ ವಿಗ್ರಹಧಾರಣೆ ಮಾಡುವೆವು. ಅಷ್ಟೇ ಹೊರತು ನಾವಿಬ್ಬರೂ ಈ ದೇಹಬಂಧನಾದಿಗಳಿಗೆ ಸಿಲುಕುವುದಿಲ್ಲ.

೧೬೦. ಮನುಮಾನವರೂ, ಮುನಿವೈಷ್ಣವರೂ ಕೂಡ ನನ್ನ ಮಂತ್ರೋಚ್ಚಾರಣೆಯಿಂದ ಪೂತರಾಗಿ ನನ್ನನ್ನು ನೋಡಲು ನನ್ನ ಸ್ಥಾನಕ್ಕೆ ಬರುವರು.

೧೬೧. ಎಲೈ ಸುರಶ್ರೇಷ್ಠರೇ, ನೀವೆಲ್ಲರೂ ನನ್ನ ದಿವ್ಯಮೂರ್ತಿಯನ್ನು ನೋಡಲು ಬಯಕೆಯುಳ್ಳವರಾದರೆ ಶಿವನು ನನ್ನ ಅಪ್ಪಣೆಯನ್ನು ಮೊದಲು ಪರಿಪಾಲಿಸಲಿ.

ಸ್ವಯಂ ವಿಧಾತಾ ತ್ವಂ ಬ್ರಹ್ಮನ್ನಾಜ್ಞಾಂ ಕುರು ಜಗದ್ಗುರೋ ।
ಕರ್ತುಂ ಶಾಸ್ತ್ರವಿಶೇಷಂ ಚ ವೇದಾಂಗಂ ಸುಮನೋಹರಂ ॥ ೧೬೨ ॥

ಅಪೂರ್ವಮಂತ್ರನಿಕರೈಃ ಸರ್ವಾಭೀಷ್ಟಫಲಪ್ರದೈಃ ।
ಸ್ತೋತ್ರೈಶ್ಚ ಕವಚೈರ್ಧ್ಯಾನೈರ್ಯುತಂ ಪೂಜಾವಿಧಿಕ್ರಮೈಃ ॥ ೧೬೩ ॥

ಮನ್ಮಂತ್ರಂ ಕವಚಂ ಸ್ತೋತ್ರಂ ಕೃತ್ವಾ ಯತ್ನೇನ ಗೋಪಯ ।
ಭವಂತಿ ವಿಮುಖಾ ಯೇನ ಜನಾನಾಂ ಯತ್ಕರಿಷ್ಯತಿ ॥ ೧೬೪ ॥

ಸಹಸ್ರೇಷು ಶತೇಷ್ವೇಕೋ ಮನ್ಮಂತ್ರೋಪಾಸಕೋ ಭವೇತ್ ।
ತೇ ತೇ ಜನಾ ಮಂತ್ರಪೂತಾಶ್ಚಾಗಮಿಷ್ಯಂತಿ ಮತ್ಪದಂ ॥ ೧೬೫ ॥

---

೧೬೨. ಎಲೈ ಜಗದ್ಗುರುವೂ, ಸ್ವಯಂ ಸೃಷ್ಟಿಕರ್ತನೂ ಆದ ಬ್ರಹ್ಮದೇವನೇ! ಮನೋಹರವಾದ ವೇದಾಂಗಶಾಸ್ತ್ರವೊಂದನ್ನು ರಚಿಸುವಂತೆ ಶಿವನಿಗೆ ಆಜ್ಞೆಮಾಡು.

೧೬೩. ಆ ಶಾಸ್ತ್ರದಲ್ಲಿ ಸಕಲಾಭೀಷ್ಟಗಳನ್ನು ಕೊಡತಕ್ಕ ಅಪೂರ್ವವಾದ ಮಂತ್ರಗಳೂ, ಸ್ತೋತ್ರಗಳೂ, ಕವಚಧ್ಯಾನ ಪೂಜಾವಿಧಿಗಳೂ ಕ್ರಮವಾಗಿರಬೇಕು.

೧೬೪. ನನ್ನ ಮಂತ್ರ, ಕವಚ, ಸ್ತೋತ್ರಗಳನ್ನು ರಚಿಸಿ ಪ್ರಯತ್ನಪೂರ್ವಕವಾಗಿ ಗೋಪ್ಯವಾಗಿಡು. ಅದರಿಂದ ಪಾಪಿಗಳಾದ ಜನರು ನನ್ನಲ್ಲಿ ವಿಮುಖರಾಗುವರು.

೧೬೫. ಆಗ ಸಾವಿರಕ್ಕೋ ನೂರಕ್ಕೋ ಒಬ್ಬನು ಮಾತ್ರ ನನ್ನ ಮಂತ್ರೋಪಾಸನೆ ಮಾಡುವನು. ಮಂತ್ರಪೂತನಾದವನು ಮಾತ್ರ ನನ್ನ ಸ್ಥಾನಕ್ಕೆ ಬಂದು ಸೇರುವನು.

ಅನ್ಯಥಾ ಚ ಭವಿಷ್ಯಂತಿ ಸರ್ವೇ ಗೋಲೋಕವಾಸಿನಃ ।
ನಿಷ್ಫಲಂ ಭವಿತಾ ಸರ್ವಂ ಬ್ರಹ್ಮಾಂಡಂ ಚೈವ ವೇಧಸಃ ॥ ೧೬೬ ॥

ಜನಾಃ ಪಂಚಪ್ರಕಾರಾಶ್ಚ ಯುಕ್ತಾಃ ಸೃಷ್ಟೌರ್ಭವೇ ಭವೇ ।
ಪೃಥಿವೀವಾಸಿನಃ ಕೇಚಿತ್ಕೇಚಿತ್ಸ್ವರ್ಗನಿವಾಸಿನಃ ॥ ೧೬೭ ॥

ಅಧೋ ನಿವಾಸಿನಃ ಕೇಚಿದ್ಬ್ರಹ್ಮಲೋಕನಿವಾಸಿನಃ ।
ಕೇಚಿದ್ವಾ ವೈಷ್ಣವಾಃ ಕೇಚಿನ್ಮಮಲೋಕನಿವಾಸಿನಃ ॥ ೧೬೮ ॥

ಇದಂ ಕರ್ತುಂ ಮಹಾದೇವಃ ಕರೋತು ಸುರಸಂಸದಿ ।
ಪ್ರತಿಜ್ಞಾಂ ಸುದೃಢಾಂ ಸದ್ಯಸ್ತತೋ ಮೂರ್ತಿಂ ಚ ಪಶ್ಯಸಿ ॥ ೧೬೯ ॥

ಇತ್ಯೇವಮುಕ್ತ್ವಾ ಗಗನೇ ವಿರರಾಮ ಸನಾತನಃ ।
ತದ್ದೃಷ್ಟ್ವಾ ಚ ಜಗನ್ನಾಥಸ್ತಮುವಾಚ ಶಿವಂ ಮುದಾ ॥ ೧೭೦ ॥

---

೧೬೬. ಮಂತ್ರವನ್ನು ಗೋಪ್ಯವಾಗಿಡದೆ ಸಕಲರಿಗೂ ತಿಳಿಯುವಂತೆ ಬಹಿರಂಗಪಡಿಸಿದರೆ ಪ್ರಪಂಚದ ಜನರೆಲ್ಲರೂ ನಿತ್ಯವೂ ಗೋಲೋಕವಾಸಿಗಳಾಗಿ ಬ್ರಹ್ಮನಿರ್ಮಿತವಾದ ಬ್ರಹ್ಮಾಂಡವೆಲ್ಲವೂ ನಿಷ್ಫಲವಾಗುವುದು.

೧೬೭–೧೬೮. ಬ್ರಹ್ಮನ ಪ್ರತಿಸೃಷ್ಟಿಯಲ್ಲೂ ಐದು ಬಗೆಯ ಜನರಿರುವರು. ಕೆಲವರು ಭೂಮಿಯಲ್ಲಿ ವಾಸಿಸುವರು. ಸ್ವರ್ಗನಿವಾಸಿಗಳು ಕೆಲವರು. ಪಾತಾಳ ವಾಸಿಗಳು ಕೆಲವರು. ಮತ್ತೆ ಕೆಲವರು ಬ್ರಹ್ಮಲೋಕನಿವಾಸಿಗಳು. ಕೆಲವರು ಉತ್ತಮ ವೈಷ್ಣವರು ಮಾತ್ರ ಗೋಲೋಕದಲ್ಲಿ ವಾಸಿಸುವರು.

೧೬೯. ಈ 'ಸಾತ್ವತ ತಂತ್ರಶಾಸ್ತ್ರ' ವನ್ನು ರಚಿಸುವುದಾಗಿ ಶಿವನು ದೇವತೆಗಳ ಸಭೆಯಲ್ಲಿ ಈ ಕೂಡಲೇ ಪ್ರತಿಜ್ಞೆ ಮಾಡಿದರೆ, ಅನಂತರ ನನ್ನ ದಿವ್ಯ ಮೂರ್ತಿಯನ್ನು ನೀವೆಲ್ಲರೂ ನೋಡಬಹುದು.

೧೭೦. ಈ ರೀತಿಯಾಗಿ ನುಡಿದು ಅನಾದಿಯಾದ ಪರಮಾತ್ಮನು ಸುಮ್ಮ ನಾಗಲು, ಅದನ್ನು ಕೇಳಿದ ಜಗದೊಡೆಯನಾದ ಬ್ರಹ್ಮನು ಶಾಸ್ತ್ರವನ್ನು ರಚಿಸುವಂತೆ ಶಿವನಿಗೆ ಹೇಳಿದನು.

ಬ್ರಹ್ಮಣೋ ವಚನಂ ಶ್ರುತ್ವಾ ಜ್ಞಾನೇಶೋ ಜ್ಞಾನಿನಾಂ ವರಃ ।
ಗಂಗಾತೋಯಂ ಕರೇ ಧೃತ್ವಾ ಸ್ವೀಚಕಾರ ವಚಸ್ತು ಸಃ ॥ ೧೭೧ ॥

ಸಂಯುಕ್ತಂ ವಿಷ್ಣು ಮಾಯಾದ್ಯೈರ್ಮಂತ್ರಾದ್ಯೈಃ ಶಾಸ್ತ್ರಮುತ್ತಮಂ ।
ವೇದಸಾರಂ ಕರಿಷ್ಯಾಮಿ ಕೃಷ್ಣಾ ಜ್ಞಾಪಾಲನಾಯ ಚ ॥ ೧೭೨ ॥

ಗಂಗಾತೋಯಮುಪಸ್ಪೃಶ್ಯ ಮಿಥ್ಯಾ ಯದಿ ವದೇಜ್ಜನಃ ।
ಸ ಯಾತಿ ಕಾಲಸೂತ್ರಂ ಚ ಯಾವದ್ವೈ ಬ್ರಹ್ಮಣೋ ವಯಃ ॥ ೧೭೩ ॥

ಇತ್ಯುಕ್ತೇ ಶಂಕರೇ ಬ್ರಹ್ಮನ್ಗೋಲೋಕೇ ಸುರಸಂಸದಿ ।
ಆವಿರ್ಬಭೂವ ಶ್ರೀಕೃಷ್ಣೋ ರಾಧಯಾ ಸಹ ತತ್ಪರಃ ॥ ೧೭೪ ॥

ತೇ ತಂ ದೃಷ್ಟ್ವಾ ಚ ಸಂಹೃಷ್ಟಾಃ ಸಂಸ್ತೂಯ ಪುರುಷೋತ್ತಮಂ ।
ಪರಮಾನಂದಪೂರ್ಣಾಶ್ಚ ಚಕ್ರುಶ್ಚ ಪುನರುತ್ಸವಂ ॥ ೧೭೫ ॥

---

೧೭೧. ಬ್ರಹ್ಮನ ಮಾತನ್ನು ಕೇಳಿ ಜ್ಞಾನಿಗಳಲ್ಲಿ ಶ್ರೇಷ್ಠನೂ, ಜ್ಞಾನೇಶನೂ ಆದ ಶಿವನು ಗಂಗೆಯ ನೀರನ್ನು ಕೈಯಲ್ಲಿ ಧರಿಸಿ 'ಸಾತ್ವತ ತಂತ್ರ ಶಾಸ್ತ್ರ' ವನ್ನು ರಚಿಸುವುದಾಗಿ ಪ್ರತಿಜ್ಞೆ ಮಾಡಿದನು.

೧೭೨. ವಿಷ್ಣುವಿನ ಮಾಯಾಶಕ್ತಿ ಮತ್ತು ಮಂತ್ರಶಕ್ತಿಗಳಿಂದ ಸಂಯುಕ್ತವಾಗಿ ವೇದಸಾರವಾದಂಥ ಉತ್ತಮ ಶಾಸ್ತ್ರವನ್ನು ರಚಿಸಿ ಶ್ರೀಕೃಷ್ಣನ ಆಜ್ಞೆಯನ್ನು ಪರಿಪಾಲಿಸುವೆನು.

೧೭೩. ಗಂಗೆಯ ನೀರನ್ನು ಮುಟ್ಟಿ ಪ್ರತಿಜ್ಞೆಮಾಡಿ ಅಸತ್ಯವಾಡುವ ಜನರು ಬ್ರಹ್ಮನ ಜೀವಿತಕಾಲದವರೆಗೆ ಕಾಲಸೂತ್ರವೆಂಬ ನರಕದಲ್ಲಿ ಬೀಳುವರು.

೧೭೪. ಎಲೈ ನಾರದನೇ, ಗೋಲೋಕದ ದೇವಸಭೆಯಲ್ಲಿ ಶಂಕರನು ಇಂತು ನುಡಿದು ಸುಮ್ಮನಾಗಲು ಶ್ರೀಕೃಷ್ಣನು ರಾಧೆಯೊಡನೆ ಕೂಡಲೇ ಕಾಣಿಸಿಕೊಂಡನು.

೧೭೫. ದೇವತೆಗಳೆಲ್ಲರೂ ರಾಧೆಯೊಡಗೂಡಿದ ಪುರುಷೋತ್ತಮನನ್ನು ನೋಡಿ ಮನಬಂದಷ್ಟು ಹೊಗಳಿ ಪರಮಾನಂದ ಭರಿತರಾಗಿ ಪುನಃ ರಾಸೋತ್ಸವವನ್ನು ನೆರವೇರಿಸಿದರು.

ಕಾಲೇನ ಶಂಭುರ್ಭಗವಾಂಚ್ಛಾಸ್ತ್ರದೀಪಂ ಚಕಾರ ಸಃ ।
ಇತ್ಯೇವಂ ಕಥಿತಂ ಸರ್ವಂ ಸುಗೋಪ್ಯಂ ಚ ಸುದುರ್ಲಭಂ ॥ ೧೭೬ ॥

ಸಾ ಚೈವಂ ದ್ರವರೂಪಾ ಯಾ ಗಂಗಾ ಗೋಲೋಕಸಂಭವಾ ।
ರಾಧಾಕೃಷ್ಣಾಂಗಸಂಭೂತಾ ಭುಕ್ತಿಮುಕ್ತಿಫಲಪ್ರದಾ ॥ ೧೭೭ ॥

ಸ್ಥಾನೇ ಸ್ಥಾನೇ ಸ್ಥಾಪಿತಾ ಸಾ ಕೃಷ್ಣೇನ ಪರಮಾತ್ಮನಾ ।
ಕೃಷ್ಣಸ್ವರೂಪಾ ಪರಮಾ ಸರ್ವಬ್ರಹ್ಮಾಂಡಪೂಜಿತಾ ॥ ೧೭೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ನಾರದನಾರಾಯಣಸಂವಾದೇ ದ್ವಿತೀಯೇ ಪ್ರಕೃತಿಖಂಡೇ ಗಂಗೋಪಾಖ್ಯಾನಂ ನಾಮ ದಶಮೋಽಧ್ಯಾಯಃ

---

೧೭೬. ಕೆಲವು ಕಾಲದೊಳಗೆ ಷಡ್ಗುಣೈಶ್ವರ್ಯಭರಿತನಾದ ಶಿವನು ತನ್ನ ಪ್ರತಿಜ್ಞೆಯಂತೆ ಉತ್ತಮವಾದ ಶಾಸ್ತ್ರವೊಂದನ್ನು ರಚಿಸಿದನು. ಈ ರೀತಿಯಾಗಿ ಸಕಲರಿಗೂ. ದುರ್ಲಭವೂ, ಬಹಳ ಗೋಪ್ಯವೂ ಆದ ಅನೇಕ ವಿಷಯಗಳನ್ನು ನಿನಗೆ ತಿಳಿಸಿರುವೆನು.

೧೭೭. ಗೋಲೋಕದ ರಾಸಮಂಡಲದಲ್ಲಿ ರಾಧಾಕೃಷ್ಣರ ಅವಯವದಿಂದ ಜನಿಸಿದ ಗಂಗೆಯು ದ್ರವರೂಪಳಾಗಿ ಅವತರಿಸಿ, ಸಕಲರಿಗೂ, ಭಕ್ತಿಮುಕ್ತಿ ಫಲಗಳನ್ನು ಕೊಡುವವಳಾಗಿರುವಳು.

೧೭೮. ಕೃಷ್ಣಪರಮಾತ್ಮನಿಂದ ಯೋಗ್ಯವಾಸ ಸ್ಥಾನದಲ್ಲಿ ಸ್ಥಾಪಿಸಲ್ಪಟ್ಟು, ಕೃಷ್ಣಸ್ವರೂಪಳೂ, ಸರ್ವಶ್ರೇಷ್ಠಳೂ ಆಗಿ ಗಂಗೆಯು ಸಕಲ ಬ್ರಹ್ಮಾಡದಿಂದಲೂ ಕೂಡ ಪೂಜಿತಳಾದಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ನಾರದನಾರಾಯಣ ಸಂವಾದ ರೂಪವಾದ ಪ್ರಕೃತಿಖಂಡನಲ್ಲಿ ಗಂಗೋಪಾಖ್ಯಾನರೂಪವಾದ ಹತ್ತನೆಯ ಅಧ್ಯಾಯವು ಮುಗಿದುದು.

ಹತ್ತನೆಯ ಅಧ್ಯಾಯದ ಸಾರಾಂಶವು

ಕೃತಯುಗದಲ್ಲಿ ಸೂರ್ಯವಂಶದ ಸಗರ ಚಕ್ರವರ್ತಿಯು ವೈದರ್ಭಿ, ಶೈಬ್ಯೆ ಎಂಬಿಬ್ಬರನ್ನು ಮದುವೆಯಾಗಿ ಶಂಕರನ ಅನುಗ್ರಹದಿಂದ ಹಿರಿಯವಳಲ್ಲಿ ಅರವತ್ತು ಸಾವಿರ ಮಕ್ಕಳನ್ನೂ, ಕಿರಿಯವಳಲ್ಲಿ ಅಸಮಂಜನೆಂಬೊಬ್ಬ ಪುತ್ರನನ್ನೂ ಪಡೆದನು. ಕೆಲವು ಕಾಲದ ಮೇಲೆ ಸಗರನು ಅಶ್ವಮೇಧಯಾಗ ಮಾಡಲು ಯಜ್ಞಾಶ್ವವನ್ನು ಬಿಟ್ಟಾಗ ಇಂದ್ರನು ಅದನ್ನಪಹರಿಸಿ ಪಾತಾಳಲೋಕದಲ್ಲಿ ತಪಸ್ಸುಮಾಡುತ್ತಿದ್ದ ಕಪಿಲಮಹರ್ಷಿಯ ಹಿಂದೆ ಬಚ್ಚಿಟ್ಟನು. ಅದನ್ನು ತರಲು ಹೋದ ಸಗರನ ಅರವತ್ತು ಸಾವಿರ ಮಕ್ಕಳೂ ಕಪಿಲಮಹರ್ಷಿಯ ಕೋಪಾಗ್ನಿಗೆ ತುತ್ತಾಗಿ ಬೂದಿಯಾದರು. ಇದನ್ನು ಕೇಳಿ ಸಗರನು ಶೋಕದಿಂದ ಮೃತನಾದನು. ಇತ್ತ ಅಸಮಂಜನೂ, ಅವನ ಮಗನಾದ ದಿಲೀಪನೂ, ದಿಲೀಪನ ಮಗನಾದ ಅಂಶುಮಂತನೂ ಸತ್ತವರನ್ನು ಪವಿತ್ರಗೊಳಿಸಲು ಗಂಗಾವತರಣಕ್ಕಾಗಿ ತಪಸ್ಸು ಮಾಡಿ ಸಾಧ್ಯವಾಗದೆ ಮೃತರಾದರು. ಅಂಶುಮಂತನ ಪುತ್ರನಾದ ಭಗೀರಥನು ಲಕ್ಷವರ್ಷಗಳಕಾಲ ದೃಢಮನಸ್ಸಿನಿಂದ ತಪಸ್ಸು ಮಾಡಿ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿದನು. ಪರಮಾತ್ಮನು ಪ್ರಸನ್ನನಾಗಿ ಗಂಗಾದೇವಿಯನ್ನು ಕರೆದು 'ಸರಸ್ವತಿಯ ಶಾಪದಂತೆ ನೀನು ದ್ರವರೂಪಳಾಗಿ ಭಾರತಕ್ಕೆ ಹೋಗಿ ಸಗರಪುತ್ರರನ್ನು ಪವಿತ್ರಗೊಳಿಸು. ಪವಿತ್ರತಮಳಾದ ನಿನಗೆ ಪಾಪಿಗಳ ಸಂಪರ್ಕದಿಂದ ಸಂಘಟಿಸುವ ಪಾಪವು ವಿಷ್ಣುಭಕ್ತರ ಸಂಪರ್ಕದಿಂದ ಪರಿಹಾರವಾಗುವುದು. ಭರತಖಂಡದಲ್ಲಿ ನಿನ್ನನ್ನು ಎಲ್ಲರೂ ಭಕ್ತಿಯಿಂದ ಪೂಜಿಸಿ ನಿನ್ನ ತೀರ್ಥದಲ್ಲಿ ಸ್ನಾನಮಾಡುವರು. ನಿನ್ನ ನೀರಿನಲ್ಲಿ ಪ್ರಾಣತ್ಯಾಗಮಾಡಿದವರೆಲ್ಲರೂ ಮುಕ್ತರಾಗುವರು.' ಎಂದು ಹೇಳಿದನು. ಅನಂತರ ಭಗೀರಥನು ಗಂಗೆಯನ್ನು ಭಕ್ತಿಪೂರ್ವಕವಾಗಿ ಸ್ತುತಿಸಲು ಗಂಗೆಯು ಪ್ರಸನ್ನಳಾಗಿ ಅವನ ಹಿಂದೆ ಬಂದು ಸಗರನ ಪುತ್ರರನ್ನು ಪವಿತ್ರಗೊಳಿಸಿದಳು. ಭಗೀರಥನ ಪ್ರಯತ್ನದಿಂದ ಭೂಲೋಕಕ್ಕೆ ಬಂದ ಗಂಗೆಗೆ 'ಭಾಗೀರಥೀ' ಎಂಬುದಾಗಿ ಹೆಸರಾಯಿತು.

ಹಿಂದೊಮ್ಮೆ ಕಾರ್ತಿಕಮಾಸದ ಪೂರ್ಣಿಮಾದಿವಸ ಶ್ರೀಕೃಷ್ಣನು ಸಕಲ ದೇವತೆಗಳೊಡಗೂಡಿ ಗೋಲೋಕದಲ್ಲಿ ರಾಧಾಮಹೋತ್ಸವವನ್ನು ನೆರವೇರಿಸುತ್ತಿದ್ದಾಗ, ಸರಸ್ವತಿಯು ಸುಮಧುರವಾಗಿ ಗಾನಮಾಡಿ ಎಲ್ಲರನ್ನೂ ಆನಂದಗೊಳಿಸಿದಳು. ಅನಂತರ ಬ್ರಹ್ಮನ ಪ್ರೇರಣೆಯಂತೆ ಸರ್ವಜ್ಞನಾದ ಶಿವನು ಮಧುರಗಾನ ಮಾಡುತ್ತಿರಲು ದೇವತೆಗಳೆಲ್ಲರೂ ಆನಂದದಿಂದ ಕಣ್ಣುಮುಚ್ಚಿಕೊಂಡು ಚಿತ್ರಾರ್ಪಿತಪ್ರತಿಮೆಯಂತಾದರು. ಕ್ಷಣಕಾಲದ ಮೇಲೆ ಕಣ್ದೆರೆದು ನೋಡಿದಾಗ ಅಲ್ಲಿ ರಾಧಾಕೃಷ್ಣರಿರಲಿಲ್ಲ. ಎಲ್ಲೆಲ್ಲೂ ಜಲಪೂರಿತವಾಗಿತ್ತು. ಅದನ್ನು ನೋಡಿ ಸಕಲ ದೇವತೆಗಳೂ ದುಃಖಿತರಾಗಲು, ಬ್ರಹ್ಮನು ಧ್ಯಾನಯೋಗದಿಂದ ರಾಧಾಕೃಷ್ಣರು ದ್ರವರೂಪರಾಗಿರುವರೆಂದು ಅರಿತು ದೇವತೆಗಳೊಡನೆ ಭಕ್ತಿಯಿಂದ ಸ್ತುತಿಸಲಾರಂಭಿಸಿದನು. ಆಗ ಅಶರೀರವಾಣಿಯೊಂದು ಇಂತು ನುಡಿಯಿತು. 'ಅಚಿಂತ್ಯರೂ, ಅವ್ಯಯರೂ, ತ್ರಿಗುಣಾತೀತರೂ ಆದ ರಾಧಾಕೃಷ್ಣರಿಗೆ ದೇಹಬಂಧನಾದಿಗಳಿಲ್ಲ. ಕೇವಲ ಭಕ್ತಾನುಗ್ರಹಕ್ಕಾಗಿ ಅವರು ರೂಪಧಾರಣೆ ಮಾಡುವರು. ಈಗ ನೀವೆಲ್ಲರೂ ನಮ್ಮ ಸುಂದರ ರೂಪವನ್ನು ನೋಡಲು ಬಯಸುವುದಾದರೆ ಶಿವನು ಪರಮಾತ್ಮನ ಕವಚಸ್ತೋತ್ರಮಂತ್ರಗಳನ್ನು ತಿಳಿಸುವ 'ಸಾತ್ವತ ತಂತ್ರಶಾಸ್ತ್ರ' ವೆಂಬ ಗ್ರಂಥವನ್ನು ರಚಿಸಿ ಗೋಪ್ಯವಾಗಿಡಲಿ. ಆ ಕವಚ ಮತ್ತು ಮಂತ್ರಗಳ ಉಪದೇಶ ಹೊಂದಿ ಸಿದ್ಧರಾದವರು ಮಾತ್ರ ಗೋಲೋಕಕ್ಕೆ ಬರುವಂತಾಗಲಿ. ಉಳಿದವರು ಅವರವರ ಕರ್ಮಾನುಗುಣವಾಗಿ ಆಯಾಯ ಲೋಕದಲ್ಲಿರಲಿ. ಆಗ ಪರಮಾತ್ಮನ ದಿವ್ಯ ಮೂರ್ತಿಯನ್ನು ನೀವು ನೋಡುವಿರಿ.' ಹೀಗೆಂದು ನುಡಿದ ಅಶರೀರವಾಣಿಯನ್ನು ಕೇಳಿ ಶಿವನು ಕೂಡಲೇ ಗಂಗಾಜಲವನ್ನು ಕೈಯಲ್ಲಿ ಹಿಡಿದು ಆ ಶಾಸ್ತ್ರವನ್ನು ರಚಿಸುವುದಾಗಿ ಪ್ರತಿಜ್ಞೆಮಾಡಿದನು.

ಅನಂತರ ರಾಧಾಕೃಷ್ಣರ ದಿವ್ಯಮಂಗಳರೂಪವು ಎಲ್ಲರಿಗೂ ಕಾಣಿಸಿತು. ರಾಧಾಮಹೋತ್ಸವವು ಆನಂದದಿಂದ ಕೊನೆಗೊಂಡಿತು.

ರಾಧಾಕೃಷ್ಣರ ಅವಯವದಿಂದ ದ್ರವರೂಪಳಾಗಿ ಅವತರಿಸಿದವಳೇ ಗಂಗೆಯೆನಿಸಿ ಎಲ್ಲೆಲ್ಲೂ ಪೂಜ್ಯಳಾದಳು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕಾದಶೋಽಧ್ಯಾಯಃ ||

|| ನಾರದ ಉವಾಚ ||

ಕಲೇಃ ಪಂಚಸಹಸ್ರೇ ಸಾ ಸಮತೀತೇ ಸುರೇಶ್ವರೀ ।
ಕ್ವ ಗತಾ ಸಾ ಮಹಾಭಾಗಾ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ನಾರಾಯಣ ಉವಾಚ ||

ಭಾರತಂ ಭಾರತೀಶಾಪಾತ್ಸಮಾಗತ್ಯೇಶ್ವರೇಚ್ಛಯಾ ।
ಜಗಾಮ ತಂ ಚ ವೈಕುಂಠಂ ಶಾಪಾಂತೇ ಪುನರೇವ ಸಾ || ೨ ||

ಹನ್ನೊಂದನೆಯ ಅಧ್ಯಾಯವು

೧. ಎಲೈ ಮಹಾಭಾಗನಾದ ನಾರಾಯಣನೇ, ಕಲಿಯುಗದ ಐದುಸಾವಿರ ವರ್ಷಗಳು ಕಳೆದನಂತರ ಸುರೇಶ್ವರಿಯಾದ ಗಂಗೆಯು ಎಲ್ಲಿಗೆ ಹೋದಳು ಎಂಬುದನ್ನು ದಯವಿಟ್ಟು ಅರುಹಬೇಕು.

೨. ನಾರಾಯಣ:—ಈಶ್ವರನ ಅಪ್ಪಣೆಯಂತೆಯೂ, ಸರಸ್ವತಿಯ ಶಾಪದಂತೆಯೂ, ಗಂಗೆಯು ಭರತಖಂಡಕ್ಕೆ ಬಂದಿದ್ದು ಶಾಪಾವಸಾನದಲ್ಲಿ ಪುನಃ ವೈಕುಂಠಕ್ಕೇ ತೆರಳಿದಳು.

ಭಾರತಂ ಭಾರತೀ ತ್ಯಕ್ತ್ವಾ ಜಗಾಮ ಸದ್ಮ ಶ್ರೀಹರೇಃ ಪದಂ ।
ಪದ್ಮಾವತೀ ಚ ಶಾಪಾಂತೇ ಗಂಗಾಯೊಶ್ಚೈವ ನಾರದ ॥ ೩ ॥

ಗಂಗಾ ಸರಸ್ವತೀ ಲಕ್ಷ್ಮೀಶ್ಚೈತಾಸ್ತಿಸ್ರಃ ಪ್ರಿಯಾ ಹರೇಃ ।
ತುಲಸೀ ಸಹಿತಾ ಬ್ರಹ್ಮಂಶ್ಚತಸ್ರಃ ಕೀರ್ತಿತಾಃ ಶ್ರುತೌ ॥ ೪ ॥

॥ ನಾರದ ಉವಾಚ ॥

ಹೇತುನಾ ಕೇನ ದೇವೀ ಸಾ ವಿಷ್ಣುಪಾದಾಬ್ಜಸಂಭವಾ ।
ಧಾತುಃ ಕಮಂಡಲುಸ್ಥಾ ಚ ಶಂಕರಸ್ಯ ಶಿರೋಗತಾ ॥ ೫ ॥

ಬಭೂವ ಸಾ ಮುನಿಶ್ರೇಷ್ಠ ಗಂಗಾ ನಾರಾಯಣಪ್ರಿಯಾ ।
ಅಹೋ ಕೇನ ಪ್ರಕಾರೇಣ ತನ್ಮೇ ವ್ಯಾಖ್ಯಾತುಮರ್ಹಸಿ ॥ ೬ ॥

॥ ಶ್ರೀ ನಾರಾಯಣ ಉವಾಚ ॥

ಪುರಾ ಬಭೂವ ಗೋಲೋಕೇ ಸಾ ಗಂಗಾ ದ್ರವರೂಪಿಣೀ ।
ರಾಧಾ ಕೃಷ್ಣಾಂಗ ಸಂಭೂತಾ ತದಂಶಾ ತತ್ಸ್ವರೂಪಿಣೀ ॥ ೭ ॥

---

೩. ಸರಸ್ವತಿ ಲಕ್ಷ್ಮಿಯರು ಕೂಡ ಶಾಪಾವಸಾನದಲ್ಲಿ ಭಾರತವನ್ನು ಬಿಟ್ಟು ವೈಕುಂಠಲೋಕಕ್ಕೆ ಮರಳಿ ಹೋದರು.

೪. ಶ್ರೀಹರಿಗೆ ಗಂಗೆ, ಸರಸ್ವತಿ ಮತ್ತು ಲಕ್ಷ್ಮಿ ಈ ಮೂವರೂ ಪತ್ನಿಯರು ತುಲಸಿಯೂ ಸೇರಿದರೆ ಶ್ರೀಹರಿಗೆ ನಾಲ್ವರು ಪತ್ನಿಯರಾಗುವರು.

೫. ನಾರದ:—ಗಂಗಾದೇವಿಯು ಯಾವ ಕಾರಣದಿಂದ ವಿಷ್ಣುವಿನ ಪಾದ ಕಮಲವಲ್ಲಿ ಅವತರಿಸಿದಳು? ಬ್ರಹ್ಮನ ಕಮಂಡಲುವಿನಲ್ಲೂ, ಈಶ್ವರನ ಜಟಾಭಾರ ಗಳಲ್ಲೂ ಅವಳು ಸೇರಿಕೊಳ್ಳಲು ಕಾರಣವೇನು?

೬. ಎಲೈ ಮುನಿಶ್ರೇಷ್ಠನಾದ ನಾರಾಯಣನೇ! ಆ ಗಂಗೆಯು ನಾರಾಯಣ ನಿಗೆ ಪ್ರಿಯಳಾದುದು ಹೇಗೆ ಎಂಬುದನ್ನು ನನಗೆ ವಿಸ್ತರಿಸಿ ಹೇಳು.

೭. ನಾರಾಯಣ:—ಹಿಂದೆ ಗೋಲೋಕದ ರಾಸಮಂಡಲದಲ್ಲಿ ಗಂಗೆಯು ರಾಧಾಕೃಷ್ಣರ ಅವಯುವದಿಂದ ದ್ರವರೂಪಳಾಗಿ ಅವರ ಅಂಶದಿಂದ ಜನಿಸಿದಳು.

ದ್ರವಾಧಿಷ್ಠಾತೃರೂಪಾ ಯಾ ರೂಪೇಣಾಪ್ರತಿಮಾ ಭುವಿ ।
ನವಯೌವನಸಂಪನ್ನಾ ರತ್ನಾಭರಣಭೂಷಿತಾ ॥ ೮ ॥

ಶರನ್ಮಧ್ಯಾಹ್ನಪದ್ಮಾಸ್ಯಾ ಸಸ್ಮಿತಾ ಸುಮನೋಹರಾ ।
ತಪ್ತಕಾಂಚನವರ್ಣಾಭಾ ಶರಚ್ಚಂದ್ರಸಮಪ್ರಭಾ ॥ ೯ ॥

ಸ್ನಿಗ್ಧಪ್ರಭಾತಿಸುಸ್ನಿಗ್ಧಾ ಶುದ್ಧಸತ್ವಸ್ವರೂಪಿಣೀ ।
ಸುಪೀನಕಠಿನಶ್ರೋಣೀ ಸುನಿತಂಬಯುಗಂ ವರಂ ॥ ೧೦ ॥

ಪೀನೋನ್ನತಂ ಸುಕಠಿನಂ ಸ್ತನಯುಗ್ಮಂ ಸುವರ್ತುಲಂ ।
ಸುಚಾರುನೇತ್ರಯುಗಲಂ ಸುಕಟಾಕ್ಷಂ ಸುವಿಕ್ರಮಂ ॥ ೧೧ ॥

ವಕ್ರಿಮಂ ಕಬರೀಭಾರಂ ಮಾಲತೀಮಾಲ್ಯಸಂಯುತಂ ।
ಸಿಂದೂರಬಿಂದುಲಲಿತಂ ಸಾರ್ಧಂ ಚಂದನಬಿಂದುಭಿಃ ॥ ೧೨ ॥

ಕಸ್ತೂರೀಪತ್ರಿಕಾಯುಕ್ತಂ ಗಂಡಯುಗ್ಮಂ ಮನೋಹರಂ ।
ಬಂಧೂಕಕುಸುಮಾಕಾರಮಧರೋಷ್ಠಂ ಚ ಸುಂದರಂ ॥ ೧೩ ॥

೮–೯. ದ್ರವಾಧಿಷ್ಠಾತೃದೇವಿಯೂ, ರೂಪದಲ್ಲಿ ಅಸದೃಶಳೂ, ನವಯೌವನವತಿಯೂ, ರತ್ನಾಲಂಕಾರಾಲಂಕೃತಳೂ. ಆಗಿ ಶರದೃತುವಿನ ಪದ್ಮದಂತೆ ಇರುವ ಸ್ಮಿತವದನದಿಂದಲೂ, ಶರಚ್ಚಂದ್ರನಂತೆಯೂ, ಪುಟವಿಟ್ಟ ಚಿನ್ನದಂತೆಯೂ ಇರುವ ದೇಹಕಾಂತಿಯಿಂದಲೂ ಅವಳು ಮನೋಹರಳಾಗಿದ್ದಳು.

೧೦. ಶುದ್ಧಸತ್ವಸ್ವರೂಪಳೂ, ಅತಿಲಾವಣ್ಯವತಿಯೂ ಆದ ಆಕೆಗೆ ದಪ್ಪವಾಗಿಯೂ, ಕಠಿನವಾಗಿಯೂ ಇರುವ ನಿತಂಬದ್ವಯಗಳು ಶೋಭಾದಾಯಕವಾಗಿದ್ದುವು.

೧೧–೧೩. ಉನ್ನತವಾಗಿಯೂ, ಕಠಿನವಾಗಿಯೂ, ವರ್ತುಲಾಕಾರವಾಗಿಯೂ, ಇರುವ ಸ್ತನದ್ವಯಗಳಿಂದಲೂ, ಮನೋಹರವಾದ ಕಟಾಕ್ಷವುಳ್ಳ ನೇತ್ರಯುಗ್ಮಗಳಿಂದಲೂ, ಜಾಜಿಹೂವಿನ ಮಾಲೆಯಿಂದಲಂಕೃತವಾದ ಗುಂಗುರುಕೂದಲಿನ ಹೆರಳುಗಳಿಂದಲೂ, ಚಂದ್ರ ಮತ್ತು ಚಂದನದ ಬೊಟ್ಟುಗಳಿಂದಲಂಕೃತವಾದ ಹಣೆಯಿಂದಲೂ, ಕಸ್ತೂರೀಮಕರಿಕಾದಿಪತ್ರರಚಿತವಾದ ಕಪೋಲದ್ವಯದಿಂದಲೂ, ಬಂಧೂಕಪುಷ್ಪದಂತೆ (ಗುಲಾಬಿ) ಕೆಂಪಾಗಿರುವ ಕೆಳತುಟಿಯಿಂದಲೂ ಕೂಡಿ ಮನೋಹರಳಾಗಿದ್ದಳು.

ಪಕ್ವದಾಡಿಮಬೀಜಾಭದಂತಪಂಕ್ತಿಸಮುಜ್ವಲಾಂ ।
ವಾಸಸೀ ವಹ್ನಿಶುದ್ಧೇ ಚ ನೀವೀಯುಕ್ತೇ ಚ ಬಿಭ್ರತೀ ॥ ೧೪ ॥

ಸಾ ಸಕಾಮಾ ಕೃಷ್ಣಪಾರ್ಶ್ವೇ ಸಮುತ್ತಸ್ಥೇ ಸುಲಜ್ಜಿತಾ ।
ಪದ್ಮಪತ್ರಸಮಾನಾಭ್ಯಾಂ ಲೋಚನಾಭ್ಯಾಂ ವಿಭೋರ್ಮುಖಂ ॥ ೧೫ ॥

ನಿಮೇಷರಹಿತಾಭ್ಯಾಂ ಚ ಪಿಬಂತೀ ಸತತಂ ಮುದಾ ।
ಪ್ರಫುಲ್ಲವದನಾ ಹರ್ಷಾನ್ನವಸಂಗಮಲಾಲಸಾ ॥ ೧೬ ॥

ಮೂರ್ಛಿತಾ ಪ್ರಭುರೂಪೇಣ ಪುಲಕಾಂಕಿತವಿಗ್ರಹಾ ।
ಏತಸ್ಮಿನ್ನಂತರೇ ತತ್ರ ವಿದ್ಯಮಾನಾ ಚ ರಾಧಿಕಾ ॥ ೧೭ ॥

ಗೋಪೀ ತ್ರಿಂಶತ್ಕೋಟಿಯುಕ್ತಾ ಕೋಟಿಚಂದ್ರಸಮಪ್ರಭಾ ।
ಕೋಪೇನ ರಕ್ತಪದ್ಮಾಸ್ಯಾ ರಕ್ತಪಂಕಜಲೋಚನಾ ॥ ೧೮ ॥

೧೪–೧೬. ಚೆನ್ನಾಗಿ ಪಕ್ವವಾದ ದಾಳಿಂಬೆ ಬೀಜದಂತೆ ಬಿಳುಪಾದ ಹಲ್ಲುಗಳ ಸಾಲನ್ನು ಹೊಂದಿರುವ ದ್ರವಾಧಿಷ್ಠಾತೃದೇವಿಯಾದ ಆ ಗಂಗೆಯು ಅಗ್ನಿಯಂತೆ ಪರಿಶುದ್ಧವಾದ ಎರಡು ಬಟ್ಟೆಗಳನ್ನು ನೀವೀಯುತವಾಗಿ ಧರಿಸಿ, ಸಕಾಮಳಾಗಿ ಲಜ್ಜಾವನತಮುಖಳಾಗಿ ಕೃಷ್ಣನ ಪಕ್ಕದಲ್ಲಿ ನಿಂತು, ತಾವರೆಯ ಎಸಳಿಗೆ ಸಮನಾದ ಎರಡು ಕಣ್ಣುಗಳಿಂದ ಕೃಷ್ಣನ ಮುಖವನ್ನು ರೆಪ್ಪೆಬಡಿಯದೆ ನೋಡುತ್ತ, ವಿಕಸಿತ ವದನಳೂ ಶ್ರೀಕೃಷ್ಣನ ಸಂಗಮದಲ್ಲಾಸಕ್ತಳೂ ಆಗಿ, ಆ ಸುಖವನ್ನು ನೆನೆದು ರೋಮಾಂಚಿತಶರೀರಳಾಗಿ ಮೂರ್ಛೆಗೊಂಡಳು.

೧೭–೨೦. ಈ ಮಧ್ಯೆ ಕೃಷ್ಣನ ರಾಸಮಂಡಲದಲ್ಲೇ ಇದ್ದ ರಾಧೆಯೂ ಕೂಡ ಮೂವತ್ತುಕೋಟಿ ಗೋಪಿಯರೊಡಗೂಡಿ ಚಂದ್ರಕೋಟಿಸಮಾನಕಾಂತಿ ಯುಳ್ಳದ್ದಾದರೂ ಕೋಪದಿಂದ ಕೆಂಪಾಗಿರುವ ಮುಖದಾವರೆಯಿಂದಲೂ, ಕೆಂದಾವರೆಯಂತಿರುವ ಕಣ್ಣುಗಳಿಂದಲೂ, ಬಿಳಿಯ ಸಂಪಿಗೆಯಂತಿರುವ ಮೈಬಣ್ಣ

ಶ್ವೇತಚಂಪಕವರ್ಣಾಭಾ ಮತ್ತವಾರಣಗಾಮಿನೀ ।
ಅಮೂಲ್ಯರತ್ನಖಚಿತ ನಾನಾಭರಣಭೂಷಿತಾ ॥ ೧೯ ॥

ಮಾಣಿಕ್ಯಖಚಿತಂ ಹಾರಮಮೂಲ್ಯಂ ವಹ್ನಿಶೌಚಕಂ ।
ಪೀತಾಭವಸ್ತ್ರಯುಗಲಂ ನೀವೀಯುಕ್ತಂ ಚ ಬಿಭ್ರತೀ ॥ ೨೦ ॥

ಸ್ಥಲಪದ್ಮಪ್ರಭಾಜುಷ್ಟಂ ಕೋಮಲಂ ಚ ಸುರಂಜಿತಂ ।
ಕೃಷ್ಣದತ್ತಾರ್ಘ್ಯಸಂಯುಕ್ತಂ ವಿನ್ಯಸ್ಯಂತೀ ಪದಾಂಬುಜಂ ॥ ೨೧ ॥

ರತ್ನೇಂದ್ರರಾಜಖಚಿತವಿಮಾನಾದವರುಹ್ಯ ಚ ।
ಸೇವ್ಯಮಾನಾ ಚ ಸಖಿಭಿಃ ಶ್ವೇತಚಾಮರವಾಯುನಾ ॥ ೨೨ ॥

ಕಸ್ತೂರೀಬಿಂದುತಿಲಕಂ ಚಂದನೇಂದುಸಮನ್ವಿತಂ ।
ದೀಪ್ತದೀಪಪ್ರಭಾಕಾರಂ ಸಿಂದೂರಾರುಣಸುಂದರಂ ॥ ೨೩ ॥

ದಿಂದಲೂ ಮನೋಹರಳಾಗಿ ಮದಿಸಿದ ಆನೆಯಂತೆ ಮಂದಗಮನದಿಂದ ಕೂಡಿ, ಅಮೂಲ್ಯವೂ. ರತ್ನಖಚಿತವೂ ಆದ ಆಭರಣಗಳನ್ನೂ, ಮಾಣಿಕ್ಯಮಣಿಗಳಿಂದ ಖಚಿತವಾದ ಹಾರವನ್ನೂ, ಅಗ್ನಿಯಂತೆ ಪರಿಶುದ್ಧವೂ ಹೊಂಬಣ್ಣವೂ ಆಗಿ ನೀವಿಯುತವಾದ ವಸ್ತ್ರದ್ವಯವನ್ನೂ ಧರಿಸಿಕೊಂಡು ಅಲ್ಲಿಗೆ ಬಂದಳು.

೨೧–೨೨. ನೆಲದಾವರೆಯ ಕಾಂತಿಯನ್ನು ಅಲ್ಲಗಳೆಯುತ್ತಿರುವ, ಶ್ರೀಕೃಷ್ಣನಿಂದ ಪೂಜಿತವೂ, ಲಾಕ್ಷಾರಸರಂಜಿತವೂ, ಕೋಮಲವೂ ಆದ, ಪಾದಪದ್ಮಗಳನ್ನು ಮೆಲ್ಲಗೆ ಇಡುತ್ತ, ಶ್ರೇಷ್ಠರತ್ನನಿರ್ಮಿತವಾದ ವಿಮಾನದಿಂದಿಳಿದು ಉಭಯಪಾರ್ಶ್ವದಲ್ಲೂ ಶ್ವೇತಚಾಮರವನ್ನು ಬೀಸುತ್ತಿರುವ ಸಖಿಯರಿಂದ ಸೇವೆಹೊಂದುತ್ತ, ರಾಧೆಯು ಅಲ್ಲಿಗೆ ಬಂದಳು.

೨೩–೨೬. ಅರ್ಧಚಂದ್ರಾಕಾರವಾದ ಚಂದನದಿಂದಲೂ, ಅದರ ಮಧ್ಯದಲ್ಲಿರುವ ಕಸ್ತೂರೀತಿಲಕದಿಂದಲೂ ಪ್ರಕಾಶಮಾನವಾದ ದೀಪಪ್ರಭೆಯಂತೆ ಕೆಂಪಾದ

ದಧತೀ ಭಾಲಮಧ್ಯೇ ಚ ಸೀಮಂತಾಧಸ್ತದುಜ್ವಲಂ ।
ಪಾರಿಜಾತಪ್ರಸೂನಾದಿ ಮಾಲಾಯುಕ್ತಂ ಸುವಕ್ರಿಮಂ ॥ ೨೪ ॥

ಸುಚಾರುಕಬರೀಭಾರಂ ಕಂಪಯಂತೀ ಚ ಕಂಪಿತಾ ।
ಸುಚಾರುನಾಸಾಸಂಯುಕ್ತಮೋಷ್ಠಂ ಕಂಪಯತೀ ರುಷಾ ॥ ೨೫ ॥

ಗತ್ವಾ ತಸ್ಥೌ ಕೃಷ್ಣಪಾರ್ಶ್ವೇ ರತ್ನಸಿಂಹಾಸನೇ ವರೇ ।
ಸಖೀನಾಂ ಚ ಸಮೂಹೈಶ್ಚ ಪರಿಪೂರ್ಣಾ ವಿಭೋಃ ಸಭಾ ॥ ೨೬ ॥

ತಾಂ ಚ ದೃಷ್ಟ್ವಾ ಸಮುತ್ತಸ್ಥೌ ಕೃಷ್ಣಃ ಸಾದರಮುಚ್ಯುತಃ ।
ಸಂಭಾಷ್ಯ ಮಧುರಾಲಾಪೈಃ ಸಸ್ಮಿತಶ್ಚ ಸಸಂಭ್ರಮಃ ॥ ೨೭ ॥

ಪ್ರಣೇಮುರಭಿಸಂತ್ರಸ್ತಾ ಗೋಪಾ ನಮ್ರಾತ್ಮಕಂಧರಾಃ ।
ತುಷ್ಟುವುಸ್ತೇ ಚ ಭಕ್ತ್ಯಾ ತಂ ತುಷ್ಟಾವ ಪರಮೇಶ್ವರಂ ॥ ೨೮ ॥

ಚಂದ್ರದಿಂದಲೂ, ಹಣೆಯ ಮಧ್ಯಪ್ರದೇಶವನ್ನಲಂಕರಿಸಿಕೊಂಡು ಬೈತಲೆಯ ಹಿಂಭಾಗದಲ್ಲಿ ಪಾರಿಜಾತವೇ ಮುಂತಾದ ಕೋಮಲಕುಸುಮಮಾಲೆಯನ್ನು ಮುಡಿದುಕೊಂಡು ಸುಂದರವಾಗಿರುವ ಕೇಶಪಾಶಗಳನ್ನು ಅಲುಗಿಸುತ್ತಾ ಸಂಪಿಗೆ ಎಸಳಿನಂತಿರುವ ಮೂಗಿಗೆ ತಗಲುತ್ತಿರುವ ತುಟಿಗಳನ್ನು ನಡುಗಿಸುತ್ತ ಶ್ರೀಕೃಷ್ಣನ ಪಾರ್ಶ್ವಕ್ಕೆ ಹೋಗಿ ಶ್ರೇಷ್ಠವಾದ ರತ್ನಸಿಂಹಾಸನದಲ್ಲಿ ಆ ರಾಧೆಯು ಕುಳಿತಳು. ಸಖಿಯರ ಸಮೂಹದಿಂದಲೂ ಕೃಷ್ಣನ ರಾಸಮಂಡಲವು ಪರಿಪೂರ್ಣವಾಯಿತು.

೨೭. ನಾಶರಹಿತನಾದ ಶ್ರೀಕೃಷ್ಣನು ಕುಪಿತಳಾಗಿರುವ ರಾಧೆಯನ್ನು ನೋಡಿ ಮೇಲಕ್ಕೆದ್ದು ಸಂಭ್ರಮಾದರಗಳಿಂದ ಮೃದುಮಧುರ ಮಾತುಗಳನ್ನಾಡಿಸಿ ಸಸ್ಮಿತನಾಗಿ ಕುಳಿತನು.

೨೮. ಅಲ್ಲಿದ್ದ ಗೋಪರೆಲ್ಲರೂ ಮುಂದೇನು ಸಂಭವಿಸುವುದೋ ಎಂದು ಭಯಗೊಂಡವರಾಗಿ ತಲೆಯನ್ನು ತಗ್ಗಿಸಿಕೊಂಡು ಆ ರಾಧೆಗೆ ನಮಸ್ಕರಿಸಿದರು. ಮತ್ತು ಆಕೆಯನ್ನೂ, ಶ್ರೀಕೃಷ್ಣಪರಮಾತ್ಮನನ್ನೂ ಸ್ತೋತ್ರಮಾಡಿದರು.

ಉತ್ಥಾಯ ಗಂಗಾ ಸಹಸಾ ಸಂಭಾಷಾಂ ಚ ಚಕಾರ ಸಾ ।
ಕುಶಲಂ ಪರಿಪಪ್ರಚ್ಛ ಭೀತಾತಿವಿನಯೇನ ಚ ॥ ೨೯ ॥

ನಮ್ರಭಾವಸ್ಥಿತಾ ತ್ರಸ್ತಾ ಶುಷ್ಕಕಂಠೌಷ್ಠತಾಲುಕಾ ।
ಧ್ಯಾನೇನ ಶರಣಾಪನ್ನಾ ಶ್ರೀಕೃಷ್ಣಚರಣಾಂಬುಜೇ ॥ ೩೦ ॥

ತದ್ಧೃತ್ಪದ್ಮೇ ಸ್ಥಿತಃ ಕೃಷ್ಣೋ ಭೀತಾಯೈ ಚಾಭಯಂ ದದೌ ।
ಬಭೂವ ಸ್ಥಿರಚಿತ್ತಾ ಸಾ ಸರ್ವೇಶ್ವರವರೇಣ ಚ ॥ ೩೧ ॥

ಊರ್ಧ್ವಂ ಸಿಂಹಾಸನಸ್ಥಾಂ ಚ ರಾಧಾಂ ಗಂಗಾ ದದರ್ಶ ಸಾ ।
ಸುಸ್ನಿಗ್ಧಾಂ ಸುಖದೃಶ್ಯಾಂ ಚ ಜ್ವಲಂತೀಂ ಬ್ರಹ್ಮತೇಜಸಾ ॥ ೩೨ ॥

---

೨೯. ಆ ಕೂಡಲೇ ಗಂಗೆಯು ಎದ್ದು ಭಯದಿಂದಲೂ, ವಿನಯದಿಂದಲೂ ರಾಧೆಯನ್ನು ಕುರಿತು ಕುಶಲಪ್ರಶ್ನೆಯನ್ನು ಮಾಡಿದಳು.

೩೦. ತಲೆತಗ್ಗಿಸಿಕೊಂಡು ನಿಂತಿರುವ ಆ ಗಂಗೆಯ ತುಟಿದವಡೆಗಳು ಭಯದಿಂದ ಬತ್ತಿದುವು. ಆಕೆಯು ಶ್ರೀಕೃಷ್ಣಪರಮಾತ್ಮನ ತಾವರೆಯಂತಿರುವ ಚರಣಗಳಿಗೆ ಶರಣುಹೋದಳು.

೩೧. ರಾಧೆಯ ಹೃದಯದಾವರೆಯಲ್ಲಿ ಕುಳಿತಿದ್ದ ಕೃಷ್ಣನು ಭೀತಳಾದ ಗಂಗೆಗೆ ಅಭಯದಾನಮಾಡಿದನು. ಸರ್ವೇಶ್ವರನಾದ ಶ್ರೀಕೃಷ್ಣನ ವರದಿಂದ ಆ ಗಂಗೆಯು ಸ್ಥಿರಬುದ್ಧಿಯುಳ್ಳವಳಾದಳು.

೩೨. ಅನಂತರ ಎತ್ತರವಾದ ಸಿಂಹಾಸನದಲ್ಲಿ ಕುಳಿತಿರುವ ಬ್ರಹ್ಮತೇಜಸ್ಸಿನಿಂದ ಜಾಜ್ವಲ್ಯಮಾನಳೂ, ಅತ್ಯಂತ ಸುಂದರಳೂ, ಮನೋಹರಳೂ ಆದ ರಾಧಾದೇವಿಯನ್ನು ಗಂಗೆಯು ನೋಡಿದಳು.

ಅಸಂಖ್ಯಬ್ರಹ್ಮಣಾಮಾದ್ಯಾಂ ಚಾದಿಸೃಷ್ಟಿಂ ಸನಾತನೀಂ ।
ಯಥಾ ದ್ವಾದಶವರ್ಷೀಯಾಂ ಕನ್ಯಾಂ ಚ ನವಯೌವನಾಂ ॥ ೩೩ ॥

ವಿಶ್ವವೃಂದೇ ನಿರುಪಮಾಂ ರೂಪೇಣ ಚ ಗುಣೇನ ಚ ।
ಶಾಂತಾಂ ಕಾಂತಾಮನಂತಾಂ ತಾಮಾದ್ಯಂತರಹಿತಾಂ ಸತೀಂ ॥ ೩೪ ॥

ಶುಭಾಂ ಸುಭದ್ರಾಂ ಸುಭಗಾಂ ಸ್ವಾಮಿಸೌಭಾಗ್ಯಸಂಯುತಾಂ ।
ಸೌಂದರ್ಯಸುಂದರೀಂ ಶ್ರೇಷ್ಠಾಂ ಸುಂದರೀಷ್ವಖಿಲಾಸು ಚ ॥ ೩೫ ॥

ಕೃಷ್ಣಾರ್ಧಾಂಗೀಂ ಕೃಷ್ಣಸಮಾಂ ತೇಜಸಾ ವಯಸಾ ತ್ವಿಷಾ ।
ಪೂಜಿತಾಂ ಚ ಮಹಾಲಕ್ಷ್ಮೀಂ ಮಹಾಲಕ್ಷ್ಮೀಶ್ವರೇಣ ಚ ॥ ೩೬ ॥

ಪ್ರಚ್ಛಾದ್ಯಮಾನಾಂ ಪ್ರಭಯಾ ಸಭಾಮೀಶಸ್ಯ ಸುಪ್ರಭಾಂ ।
ಸಖೀದತ್ತಂ ಚ ತಾಂಬೂಲಂ ಗೃಹ್ಣತೀಮನ್ಯದುರ್ಲಭಾಂ ॥ ೩೭ ॥

ಅಜನ್ಯಾಂ ಸರ್ವಜನನೀಂ ಧನ್ಯಾಂ ಮಾನ್ಯಾಂ ಚ ಮಾನಿನೀಂ ।
ಕೃಷ್ಣಪ್ರಾಣಾಧಿದೇವೀಂ ಚ ಪ್ರಾಣಪ್ರಿಯತಮಾಂ ರಮಾಂ ॥ ೩೮ ॥

---

೩೩. ಆ ರಾಧಾದೇವಿಯು ಅಸಂಖ್ಯಚತುರ್ಮುಖಬ್ರಹ್ಮರಿಗಿಂತಲೂ ಆದಿಯಲ್ಲೇ ಸೃಷ್ಟಳಾಗಿ ಅನಾದಿ ಎನಿಸಿಕೊಂಡಿದ್ದರೂ ನವಯೌವನವತಿಯಾದ ಹನ್ನೆರಡು ವರ್ಷದ ಹುಡುಗಿಯಂತಿದ್ದಳು.

೩೪–೩೬. ಆದ್ಯಂತರಹಿತಳೂ, ಶಾಂತಳೂ, ಕಾಂತಳೂ, ಪತಿಸೌಭಾಗ್ಯಯುತಳೂ, ಶುಭಕರಳೂ, ಸೌಂದರ್ಯಸಲಿಲನದಿಯೂ, ಸುಂದರಿಯರಲ್ಲಿ ಶ್ರೇಷ್ಠಳೂ, ಶ್ರೀಕೃಷ್ಣನ ಅರ್ಧಾಂಗಿಯೂ, ಕಾಂತಿ, ತೇಜಸ್ಸು, ವಯಸ್ಸುಗಳಲ್ಲಿ ಶ್ರೀಕೃಷ್ಣನಿಗೆ ಸಮಾನಳೂ, ಮಹಾಲಕ್ಷ್ಮೀಪತಿಯಿಂದ ಪೂಜಿತಳೂ ಆದ ಆ ರಾಧೆಯನ್ನು ನೋಡಿ ವಿಶ್ವದಲ್ಲಿ ಇವಳ ರೂಪಕ್ಕೆ ಎಣೆಯಿಲ್ಲವೆಂದುಕೊಂಡಳು.

೩೭–೩೮. ಶ್ರೀಕೃಷ್ಣನ ಕಾಂತಿಲಿಪ್ತವಾದ ಸಭೆಯನ್ನು ತನ್ನ ದೇಹಕಾಂತಿಯಿಂದ ಮುಚ್ಚುತ್ತ ತನ್ನ ಸಖಿಯರಿಂದ ಇತರರಿಗೆ ದುರ್ಲಭವಾದ ತಾಂಬೂಲವನ್ನು ಸ್ವೀಕರಿಸುತ್ತ, ಜನ್ಮರಹಿತಳಾದ ತಾನು ಸಕಲರಿಗೂ ಜನನಿಯೆನಿಸಿಕೊಂಡು ಧನ್ಯಳೂ,

ದೃಷ್ಟ್ವಾ ರಾಸೇಶ್ವರೀಂ ತೃಪ್ತಿಂ ನ ಜಗಾಮ ಸುರೇಶ್ವರೀ ।
ನಿಮೇಷರಹಿತಾಭ್ಯಾಂ ಚ ಲೋಚನಾಭ್ಯಾಂ ಪಪೌ ಚ ತಾಂ ॥ ೩೯ ॥

ಏತಸ್ಮಿನ್ನಂತರೇ ರಾಧಾ ಜಗದೀಶಮುವಾಚ ಸಾ ।
ವಾಚಾ ಮಧುರಯಾ ಶಾಂತಾ ವಿನೀತಾ ಸಸ್ಮಿತಾ ಮುನೇ ॥ ೪೦ ॥

॥ ರಾಧಿಕೋವಾಚ ॥

ಕೇಯಂ ಪ್ರಾಣೇಶ ಕಲ್ಯಾಣೀ ಸಸ್ಮಿತಾ ತ್ವನ್ಮುಖಾಂಬುಜಂ ।
ಪಶ್ಯಂತೀ ಸತತಂ ಪಾರ್ಶ್ವೇ ಸಕಾಮಾ ರಕ್ತಲೋಚನಾ ॥ ೪೧ ॥

ಮೂರ್ಛಾಂ ಪ್ರಾಪ್ನೋತಿ ರೂಪೇಣ ಪುಲಕಾಂಕಿತವಿಗ್ರಹಾ ।
ವಸ್ತ್ರೇಣಮುಖಮಾಚ್ಛಾದ್ಯ ನಿರೀಕ್ಷಂತೀ ಪುನಃ ಪುನಃ ॥ ೪೨ ॥

ಮಾನ್ಯಳೂ ಆಗಿ ಶ್ರೀಕೃಷ್ಣನ ಪ್ರಾಣಕ್ಕಿಂತಲೂ ಪ್ರಿಯತಮಳಾಗಿದ್ದ ರಾಸೇಶ್ವರಿಯಾದ ಆ ರಾಧೆಯನ್ನು ಸುರೇಶ್ವರಿಯಾದ ಗಂಗೆಯು ನೋಡಿ ತೃಪ್ತಳಾಗಲಿಲ್ಲ. ರೆಪ್ಪೆಗಳನ್ನು ಹೊಡೆಯದೆ ದೃಷ್ಟಿಸಿ ಆಕೆಯ ಸೌಂದರ್ಯವನ್ನು ನೋಡುತ್ತಾ ಬೆರಗಾಗಿ ನಿಂತಳು.

೪೦. ಎಲೈ ನಾರದನೇ, ಈ ಸಮಯದಲ್ಲಿ ರಾಧೆಯು ಜಗದೊಡೆಯನಾದ ಶ್ರೀಕೃಷ್ಣನನ್ನು ಕುರಿತು ಅತಿವಿನಯದಿಂದಲೂ, ಮಂದಹಾಸದಿಂದಲೂ, ಕೆಲವು ಮಧುರನುಡಿಗಳನ್ನಾಡಿದಳು.

೪೧. ರಾಧಿಕೆ:—ಎಲೈ, ಪ್ರಾಣಕಾಂತನೇ, ನಿನ್ನ ಪಕ್ಕದಲ್ಲಿ ನಿಂತು ಅನುರಾಗಪೂರಿತನೇತ್ರಗಳಿಂದ ನಿನ್ನ ಮುಖಕಮಲವನ್ನು ನೋಡಿ ನಸುನಗುತ್ತಾ ತನ್ನ ಪ್ರೇಮವನ್ನು ಪ್ರಕಟಿಸುತ್ತಿರುವ ಈ ಕಲ್ಯಾಣ ರಮಣಿಯಾರು ?

೪೨. ಆಕೆಯು ರತಿಯ ಉಲ್ಬಣಾವಸ್ಥೆಯನ್ನು ಪಡೆದು ರೋಮಾಂಚಿತ ಶರೀರಳಾಗಿ ಸೆರಗಿನಿಂದ ತನ್ನ ಮುಖವನ್ನು ಮರೆಮಾಡಿಕೊಂಡು ಕಟಾಕ್ಷದಿಂದ ನಿನ್ನನ್ನು ನೋಡುತ್ತ ಮೂರ್ಛೆಗೊಳ್ಳುತ್ತಿದ್ದಾಳೆ.

ತ್ವಂ ಚಾಪಿ ಮಾಂ ಸನ್ನಿರೀಕ್ಷ್ಯ ಸಕಾಮಃ ಸಸ್ಮಿತಃ ಸದಾ ।
ಮಯಿ ಜೀವತಿ ಗೋಲೋಕೇ ಭೂತಾ ದುರ್ವೃತ್ತಿರೀದೃಶೀ ॥ ೪೩ ॥

ತ್ವಮೇವ ಚೈವಂ ದುರ್ವೃತ್ತಂ ವಾರಂ ವಾರಂ ಕರೋಷಿ ಚ ।
ಕ್ಷಮಾಂ ಕರೋಮಿ ತೇ ಪ್ರೇಮ್ಣಾ ಸ್ತ್ರೀಜಾತಿಃ ಸ್ನಿಗ್ಧಮಾನಸಾ ॥ ೪೪ ॥

ಸಂಗೃಹ್ಯೇಮಾಂ ಪ್ರಿಯಾಮಿಷ್ಟಾಂ ಗೋಲೋಕಾದ್ಗಚ್ಛ ಲಂಪಟ ।
ಅನ್ಯಥಾ ನ ಹಿ ತೇ ಭದ್ರಂ ಭವಿಷ್ಯತಿ ಸುರೇಶ್ವರ ॥ ೪೫ ॥

ದೃಷ್ಟಸ್ತ್ವಂ ವಿರಜಾಯುಕ್ತೋ ಮಯಾ ಚಂದನಕಾನನೇ ।
ಕ್ಷಮಾ ಕೃತಾ ಮಯಾ ಪೂರ್ವಂ ಸಖೀನಾಂ ವಚನಾದಹೋ ॥ ೪೬ ॥

ತ್ವಯಾ ಮಚ್ಛಬ್ದಮಾತ್ರೇಣ ತಿರೋಧಾನಂ ಕೃತಂ ಪುರಾ ।
ದೇಹಂ ಸಂತ್ಯಜ್ಯ ವಿರಜಾ ನದೀರೂಪಾ ಬಭೂವ ಸಾ ॥ ೪೭ ॥

---

೪೩. ನೀನೂ ಕೂಡ ಗೋಲೋಕದಲ್ಲಿ ನಾನು ಜೀವಿಸಿರುವಂತೆಯೇ ಆಕೆಯ ವಿಷಯದಲ್ಲಿ ಕಾಮಾತುರನೆಂಬುದನ್ನು ಪ್ರಕಟಪಡಿಸುತ್ತಿರುವೆ.

೪೪. ನೀನು ಈ ರೀತಿಯಾಗಿ ಅಸಂಬದ್ಧಾಚಾರಗಳನ್ನು ಆಗಾಗ್ಗೆ ನಡೆಸುತ್ತಿದ್ದರೂ ನಾನು ಕ್ಷಮಿಸುತ್ತಿದ್ದೇನೆ. ಸ್ತ್ರೀಜಾತಿಯು ಪ್ರೇಮಮಯವೂ, ದಯಾರ್ದ್ರವೂ ಆದುದು.

೪೫. ಎಲೈ, ಸ್ತ್ರೀಲಂಪಟನಾದ ಸ್ವಾಮಿಯೇ, ನಿನ್ನ ಪ್ರೀತಿಗೆ ಪಾತ್ರಳಾದ ಈ ಗಂಗೆಯನ್ನು ಪರಿಗ್ರಹಿಸಿ ಗೋಲೋಕದಿಂದ ಹೊರಟುಹೋಗು. ಇಲ್ಲವಾದರೆ ಸುರೇಶ್ವರನಾದ ನಿನಗೆ ಒಳಿತಾಗುವುದಿಲ್ಲ.

೪೬. ಹಿಂದೊಮ್ಮೆ ಚಂದನವನದಲ್ಲಿ ವಿರಜೆಯೊಡಗೂಡಿದ ನಿನ್ನನ್ನು ನೋಡಿದರೂ ಸಖಿಯರ ಮಾತಿನಂತೆ ನಾನು ಸಹಿಸಿಕೊಂಡು ಸುಮ್ಮನಾದೆನು.

೪೭. ಆಗ ನನ್ನ ಮಾತನ್ನು ಕೇಳಿದ ಮಾತ್ರದಿಂದಲೇ ನೀನು ಕಣ್ಮರೆಯಾದೆ. ವಿರಜೆಯೂ ಕೂಡ ದೇಹತ್ಯಾಗಮಾಡಿ ನದೀರೂಪಳಾದಳು.

ಕೋಟಿಯೋಜನವಿಸ್ತೀರ್ಣಾ ತತೋ ದೈರ್ಘ್ಯೇ ಚತುರ್ಗುಣಾ ।
ಅದ್ಯಾಪಿ ವಿದ್ಯಮಾನಾ ಸಾ ತವ ಸತ್ಕೀರ್ತಿರೂಪಿಣೀ ॥ ೪೮ ॥

ಗೃಹಂ ಮಯಿ ಗತಾಯಾಂ ಚ ಪುನರ್ಗತ್ವಾ ತದಂತಿಕಂ ।
ಉಚ್ಚೈರರೌಷೀರ್ವಿರಜೇ ವಿರಜೇಚೇತಿ ಸಂಸ್ಮರನ್ ॥ ೪೯ ॥

ತದಾ ತೋಯಾತ್ಸಮುತ್ಥಾಯ ಸಾ ಯೋಗಾತ್ಸಿದ್ಧಯೋಗಿನೀ ।
ಸಾಲಂಕಾರಾ ಮೂರ್ತಿಮತೀ ದದೌ ತುಭ್ಯಂ ಚ ದರ್ಶನಂ ॥ ೫೦ ॥

ತತಸ್ತಾಂ ಚ ಸಮಾಶ್ಲಿಷ್ಯ ವೀರ್ಯಾಧಾನಂ ಕೃತಂ ತ್ವಯಾ ।
ತತೋ ಬಭೂವುಸ್ತಸ್ಯಾಂ ಚ ಸಮುದ್ರಾಃ ಸಪ್ತ ಚೈವ ಹಿ ॥ ೫೧ ॥

ದೃಷ್ಟಸ್ತ್ವಂ ಶೋಭಯಾ ಗೋಪ್ಯಾ ಯುಕ್ತಶ್ಚಂಪಕಕಾನನೇ ।
ಸದ್ಯೋ ಮಚ್ಛಬ್ದಮಾತ್ರೇಣ ತಿರೋಧಾನಂ ಕೃತಂ ತ್ವಯಾ ॥ ೫೨ ॥

---

೪೮. ಕೋಟಿಯೋಜನವಿಸ್ತೃತಳಾಗಿಯೂ, ಅದಕ್ಕೆ ನಾಲ್ಕರಷ್ಟು ದೀರ್ಘಳಾಗಿಯೂ ಇರುವ ಆ ವಿರಜಾನದಿಯು ನಿನ್ನ ಸತ್ಕೀರ್ತಿಸ್ವರೂಪಳಾಗಿದ್ದಾಳೆ.

೪೯. ನಾನು ಮನೆಗೆ ಬಂದನಂತರವೂ ನೀನು ಆ ನದಿಯೆಡೆಗೆ ಹೋಗಿ, ‘ಅಯ್ಯೋ, ವಿರಜೆ! ವಿರಜೆ!’ ಎಂದು ಗಟ್ಟಿಯಾಗಿ ಅತ್ತು ಗೋಳಾಡಿವೆಯಲ್ಲವೆ!

೫೦. ಆಗ ಯೋಗಸಿದ್ಧಿಯನ್ನು ಪಡೆದಿದ್ದ ಆ ವಿರಜೆಯು ಯೋಗಶಕ್ತಿಯಿಂದ ನೀರಿನಿಂದ ಹೊರಬಂದು ಅಲಂಕೃತವಾದ ದಿವ್ಯಮೂರ್ತಿಯನ್ನು ಧರಿಸಿ ನಿನಗೆ ದರ್ಶನಕೊಟ್ಟಳು.

೫೧. ಆಗ ನೀನು ಅವಳನ್ನು ಆಲಂಗಿಸಿಕೊಂಡು ಅವಳ ಗರ್ಭದಲ್ಲಿ ನಿನ್ನ ವೀರ್ಯವನ್ನಿರಿಸಿದೆ. ಆಗ ಅವಳಿಂದ ಸಪ್ತಸಮುದ್ರಗಳ ಉತ್ಪತ್ತಿಯಾಯಿತು.

೫೨. ಇನ್ನೊಮ್ಮೆ ಚಂಪಕಾರಣ್ಯದಲ್ಲಿ–“ಶೋಭಾ” ಎಂಬ ಗೋಪಿಯೊಡನಿದ್ದು ನನ್ನ ಶಬ್ದಗ್ರಹಣಮಾತ್ರದಿಂದ ನೀನು ಅಂತರ್ಧಾನನಾದೆ.

ಶೋಭಾ ದೇಹಂ ಪರಿತ್ಯಜ್ಯ ಪ್ರಾವಿಶಚ್ಚಂದ್ರಮಂಡಲಂ ।
ತತಸ್ತಸ್ಯಾಃ ಶರೀರಂ ಚ ಸ್ನಿಗ್ಧಂ ತೇಜೋ ಬಭೂವ ಹ ॥ ೫೩ ॥

ಸಂವಿಭಜ್ಯ ತ್ವಯಾ ದತ್ತಂ ಹೃದಯೇನ ವಿದೂಯತಾ ।
ರತ್ನಾಯ ಕಿಂಚಿತ್ಸ್ವರ್ಣಾಯ ಕಿಂಚಿನ್ಮಣಿವರಾಯ ಚ ॥ ೫೪ ॥

ಕಿಂಚಿತ್ಸ್ತ್ರೀಣಾಂ ಮುಖಾಬ್ಜೇಭ್ಯಃ ಕಿಂಚಿದ್ರಾಜ್ಞೇ ಚ ಕಿಂಚನ ।
ಕಿಂಚಿತ್ಪ್ರಕೃಷ್ಟವಸ್ತ್ರೇಭ್ಯೋ ರೌಪ್ಯೇಭ್ಯಶ್ಚಾಪಿ ಕಿಂಚನ ॥ ೫೫ ॥

ಕಿಂಚಿಚ್ಚಂದನಪಂಕೇಭ್ಯಸ್ತೋಯೇಭ್ಯಶ್ಚಾಪಿ ಕಿಂಚನ ।
ಕಿಂಚಿತ್ಕಿಸಲಯೇಭ್ಯಶ್ಚ ಪುಷ್ಪೇಭ್ಯಶ್ಚಾಪಿ ಕಿಂಚನ ॥ ೫೬ ॥

ಕಿಂಚಿತ್ಫಲೇಭ್ಯಃ ಸಸ್ಯೇಭ್ಯಃ ಸುಪಕ್ವೇಭ್ಯಶ್ಚ ಕಿಂಚನ ।
ನೃಪದೇವಗೃಹೇಭ್ಯಶ್ಚ ಸಂಸ್ಕೃತೇಭ್ಯಶ್ಚ ಕಿಂಚನ ॥ ೫೭ ॥

ದೃಷ್ಟಸ್ತ್ವಂ ಪ್ರಭಯಾ ಗೋಪ್ಯಾ ಯುಕ್ತೋ ವೃಂದಾವನೇ ವನೇ ।
ಸದ್ಯೋ ಮಚ್ಛಬ್ದಮಾತ್ರೇಣ ತಿರೋಧಾನಂ ಕೃತಂ ತ್ವಯಾ ॥ ೫೮ ॥

---

೫೩. ಆಗ ಶೋಭಾದೇವಿಯು ದೇಹತ್ಯಾಗಮಾಡಿ ಚಂದ್ರಮಂಡಲವನ್ನು ಪ್ರವೇಶಿಸಿದಳು. ಅನಂತರ ಅವಳ ಶರೀರವೂ ಕೂಡ ಸುಂದರವಾದ ತೇಜೋರೂಪ ವಾಯಿತು.

೫೪–೫೭. ಆಗ ದುಃಖಿತನಾದ ನೀನು ಕಾಂತಿಮಯವಾದ ಅವಳ ಶರೀರ ವನ್ನು ವಿಭಾಗಿಸಿ ರತ್ನಕ್ಕೆ, ಚಿನ್ನಕ್ಕೂ, ಬುದ್ಧಿವಂತರಿಗೂ, ಸ್ತ್ರೀಯರ ಮುಖ ಕಮಲಕ್ಕೂ, ರಾಜನಿಗೂ, ಉತ್ತಮವಾದ ವಸ್ತ್ರಕ್ಕೂ, ಬೆಳ್ಳಿಗೂ, ಚಂದನಗಂಧಕ್ಕೂ, ತಿಳಿನೀರಿಗೂ, ಚಿಗುರುಗಳಿಗೂ, ಹೂವುಗಳಿಗೂ, ಸಸ್ಯಗಳಿಗೂ, ಪಕ್ವವಾದ ಫಲ ಗಳಿಗೂ, ರಾಜಗೃಹ ಮತ್ತು ದೇವಗೃಹಗಳಿಗೂ, ಸಂಸ್ಕಾರವಂತರಿಗೂ ಸ್ವಲ್ಪಸ್ವಲ್ಪ ಕಾಂತಿಯನ್ನು ಹಂಚಿಕೊಟ್ಟೆ

೫೮. ಮತ್ತೊಮ್ಮೆ ನೀನು ವೃಂದಾವನದಲ್ಲಿ ಪ್ರಭಾ ಎಂಬ ಗೋಪಿಯೊಡ ನಿದ್ದು ನಾನು ಬಂದದ್ದನ್ನು ತಿಳಿದ ಕ್ಷಣವೇ ಅಂತರ್ಧಾನನಾದೆ.

ಪ್ರಭಾ ದೇಹಂ ಪರಿತ್ಯಜ್ಯ ಪ್ರಾವಿಶತ್ಸೂರ್ಯಮಂಡಲಂ ।
ತತಸ್ತಸ್ಯಾಃ ಶರೀರಂ ಚ ತೀಕ್ಷ್ಣಂ ತೇಜೋ ಬಭೂವ ಹ ॥ ೫೯ ॥

ಸಂವಿಭಜ್ಯ ತ್ವಯಾ ದತ್ತಂ ಪ್ರೇಮ್ಣಾ ಚ ರುದತಾ ಪುರಾ ।
ವಿಭಜ್ಯ ಚಕ್ಷುಷೋರ್ದತ್ತಂ ಲಜ್ಜಯಾ ತದ್ಭಯೇನ ಚ ॥ ೬೦ ॥

ಹುತಾಶನಾಯ ಕಿಂಚಿಚ್ಚ ನೃಪೇಭ್ಯಶ್ಚಾಪಿ ಕಿಂಚನ ।
ಕಿಂಚಿತ್ಪುರುಷಸಂಘೇಭ್ಯೋ ದೇವೇಭ್ಯಶ್ಚಾಪಿ ಕಿಂಚನ ॥ ೬೧ ॥

ಕಿಂಚಿದ್ದಸ್ಯುಗಣೇಭ್ಯಶ್ಚ ನಾಗೇಭ್ಯಶ್ಚಾಪಿ ಕಿಂಚನ ।
ಬ್ರಾಹ್ಮಣೇಭ್ಯೋ ಮುನಿಭ್ಯಶ್ಚ ತಪಸ್ವಿಭ್ಯಶ್ಚ ಕಿಂಚನ ॥ ೬೨ ॥

ಸ್ತ್ರೀಭ್ಯಃ ಸೌಭಾಗ್ಯಯುಕ್ತಾಭ್ಯೋ ಯಶಸ್ವಿಭ್ಯಶ್ಚ ಕಿಂಚನ ।
ತೆಚ್ಚ ದತ್ವಾ ಚ ಸರ್ವೇಭ್ಯಃ ಪೂರ್ವಂ ರೋದಿತುಮುದ್ಯತಃ ॥ ೬೩ ॥

ಶಾಂತ್ಯಾ ಗೋಪ್ಯಾ ಯುತಸ್ತ್ವಂ ಚ ದೃಷ್ಟೋ ವೈ ರಾಸಮಂಡಲೇ ।
ವಸಂತೀ ಪುಷ್ಪಶಯ್ಯಾಯಾಂ ಮಾಲ್ಯವಾಂಶ್ಚಂದನೋಕ್ಷಿತಃ ॥ ೬೪ ॥

---

೫೯. ಆಗ ಪ್ರಭೆಯು ದೇಹತ್ಯಾಗಮಾಡಿ ಸೂರ್ಯಮಂಡಲವನ್ನು ಪ್ರವೇಶಿಸಿದಳು. ಅನಂತರ ಅವಳ ಶರೀರವೂ ತೀಕ್ಷ್ಣವಾದ ತೇಜೋಮಯವಾಯಿತು.

೬೦–೬೩. ಆಗ ನೀನು ಅವಳ ಪ್ರೇಮದಿಂದ ದಯಾರ್ದ್ರಚಿತ್ತನಾಗಿ ಆ ತೇಜಸ್ಸನ್ನು ವಿಭಾಗಮಾಡಿ, ನಾಚಿಕೆಯಿಂದಲೂ ಅವಳ ಭಯದಿಂದಲೂ ಎಲ್ಲರ ಕಣ್ಣುಗಳಿಗೂ, ಅಗ್ನಿ, ರಾಜ, ಶ್ರೇಷ್ಠ ಪುರುಷರು, ದೇವತೆಗಳು, ಕಳ್ಳಕಾಕರು, ಸರ್ಪ, ಆನೆ, ಬ್ರಾಹ್ಮಣರು, ಮುನಿಗಳು, ತಪಸ್ವಿಗಳು, ಸೌಭಾಗ್ಯವತಿಯರಾದ ಸ್ತ್ರೀಯರು, ಕೀರ್ತಿವಂತರು ಇವರೆಲ್ಲರಿಗೂ ಸ್ವಲ್ಪಸ್ವಲ್ಪ ಹಂಚಿಕೊಟ್ಟು ನೀನು ಮೊದಲಿನಂತೆಯೇ ಅಳಲಾರಂಭಿಸಿದೆ.

೬೪–೬೬. ಇನ್ನೊಮ್ಮೆ ರಾಸಮಂಡಲದಲ್ಲಿ ನೀನು ಶಾಂತಿ ಎಂಬ ಗೋಪಿಯೊಡನಿದ್ದು ವಸಂತಋತುವಿನಲ್ಲಿ ಚಂದನಲಿಪ್ತನಾಗಿ, ಪುಷ್ಪಮಾಲೆಯನ್ನು ಧರಿಸಿ,

ರತ್ನಪ್ರದೀಪ್ತೈರ್ಯುಕ್ತಶ್ಚ ರತ್ನನಿರ್ಮಿತಮಂದಿರೇ ।
ರತ್ನಭೂಷಣಭೂಷಾಢ್ಯೋ ರತ್ನಭೂಷಿತಯಾ ಸಹ ॥ ೬೫ ॥

ತ್ವಯಾ ದತ್ತಂ ಚ ತಾಂಬೂಲಂ ಭುಕ್ತವತ್ಯೈ ಸುವಾಸಿತಂ ।
ತಯಾ ದತ್ತಂ ಚ ತಾಂಬೂಲಂ ಭುಕ್ತವಾಂಸ್ತ್ವಂ ಪುರಾ ವಿಭೋ ॥ ೬೬ ॥

ಸದ್ಯೋ ಮಚ್ಛಬ್ದಮಾತ್ರೇಣ ತಿರೋಧಾನಂ ಕೃತಂ ತ್ವಯಾ ।
ಶಾಂತಿರ್ದೇಹಂ ಪರಿತ್ಯಜ್ಯ ಭಿಯಾ ಲೀನಾ ತ್ವಯಿ ಪ್ರಭೋ ॥ ೬೭ ॥

ತತಸ್ತಸ್ಯಾಃ ಶರೀರಂ ಚ ಗುಣಶ್ರೇಷ್ಠಂ ಬಭೂವ ಹ ।
ಸಂವಿಭಜ್ಯ ತ್ವಯಾ ದತ್ತಂ ಪ್ರೇಮ್ಣಾ ಚ ರುದತಾ ಪುರಾ ॥ ೬೮ ॥

ವಿಶ್ವೇ ವಿಷಯಿಣೇ ಕಿಂಚಿತ್ಸತ್ವರೂಪಾಯ ವಿಷ್ಣವೇ ।
ಶುದ್ಧಸತ್ವಸ್ವರೂಪಾಯೈ ಕಿಂಚಿಲ್ಲಕ್ಷ್ಮ್ಯೈ ಪುರಾ ವಿಭೋ ॥ ೬೯ ॥

ತ್ವನ್ಮಂತ್ರೋಪಾಸಕೇಭ್ಯಶ್ಚ ವೈಷ್ಣವೇಭ್ಯಶ್ಚ ಕಿಂಚನ ।
ತಪಸ್ವಿಭ್ಯಶ್ಚ ಧರ್ಮಾಯ ಧರ್ಮಿಷ್ಠೇಭ್ಯಶ್ಚ ಕಿಂಚನ ॥ ೭೦ ॥

ಪುಷ್ಪಶಯನದಲ್ಲಿ ಪವಡಿಸಿ. ರತ್ನದೀಪಗಳಿಂದ ದೀಪ್ತವಾದ ರತ್ನಮಂದಿರದಲ್ಲಿ, ರತ್ನಾಭರಣಭೂಷಿತಳಾದ ಆ ಶಾಂತಿಯೊಡನೆ ಕೂಡಿ ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ತಾಂಬೂಲವನ್ನು ಪರಸ್ಪರ ವಿನಿಮಯ ಮಾಡಿಕೊಂಡು ಸೇವಿಸುತ್ತಿದ್ದೆ.

೬೭. ಅಷ್ಟು ಹೊತ್ತಿಗೆ ನಾನು ಬಂದದ್ದನ್ನು ತಿಳಿದು ನೀನು ಕಣ್ಮರೆಯಾದೆ. ಶಾಂತಿಯೂ ಶರೀರತ್ಯಾಗಮಾಡಿ ನಿನ್ನ ಶರೀರದಲ್ಲಿಯೇ ಐಕ್ಯವಾದಳು.

೬೮-೭೦. ಅನಂತರ ಅವಳ ಶರೀರವು ಶ್ರೇಷ್ಠಗುಣಗಳ ಸಮೂಹವಾಯಿತು. ಆಗ ನೀನದನ್ನು ವ್ಯಸನದಿಂದಲೇ ವಿಭಾಗಿಸಿ, ವಿಶ್ವದಲ್ಲಿ ವಿಷಯಾಭಿಲಾಷಿಗೂ, ಸತ್ವಸ್ವರೂಪನಾದ ವಿಷ್ಣುವಿಗೂ, ಶುದ್ಧಸತ್ವಸ್ವರೂಪಳಾದ ಲಕ್ಷ್ಮಿಗೂ, ನಿನ್ನ ಮಂತ್ರೋಪಾಸಕರಾದ ವೈಷ್ಣವರಿಗೂ, ತಪಸ್ವಿಗಳಿಗೂ ಮತ್ತು ಧರ್ಮಿಷ್ಠರಿಗೂ ಕೂಡ ಸ್ವಲ್ಪ ಸ್ವಲ್ಪವಾಗಿ ಹಂಚಿಕೊಟ್ಟೆ.

ಮಯಾ ಪೂರ್ವಂ ಹಿ ದೃಷ್ಟಸ್ತ್ವಂ ಗೋಪ್ಯಾ ಚ ಕ್ಷಮಯಾ ಸಹ |
ಸುವೇಷವಾನ್ಮಾಲ್ಯವಾಂಶ್ಚ ಗಂಧಚಂದನಸಂಯುತಃ || ೭೧ ||

ರತ್ನಭೂಷಿತಯಾ ಚಾರು ಚಂದನೋಕ್ಷಿತಯಾ ತಯಾ |
ಸುಖೇನ ಮೂರ್ಛಿತಸ್ತಲ್ಪೇ ಪುಷ್ಪಚಂದನಸಂಯುತೇ || ೭೨ ||

ಶ್ಲಿಷ್ಟೋಽಭೂನ್ನಿದ್ರಯಾ ಸದ್ಯಃ ಸುಖೇನ ನವಸಂಗಮಾತ್ |
ಮಯಾ ಪ್ರಬೋಧಿತೌ ಸಾ ಚ ಭವಾಂಶ್ಚ ಸ್ಮರಣಂ ಕುರು || ೭೩ ||

ಗೃಹೀತಂ ಪೀತವಸ್ತ್ರಂ ತೇ ಮುರಲೀ ಚ ಮನೋಹರಾ |
ವನಮಾಲಾ ಕೌಸ್ತುಭಶ್ಚಾಪ್ಯಮೂಲ್ಯಂ ರತ್ನಕುಂಡಲಂ || ೭೪ ||

ಪಶ್ಚಾತ್ಪ್ರದತ್ತಂ ಪ್ರೇಮ್ಣಾ ಚ ಸಖೀನಾಂ ವಚನಾದಹೋ |
ಲಜ್ಜಯಾ ಕೃಷ್ಣವರ್ಣೋಽಭೂದದ್ಯಾಪಿ ಚ ಭವಾನ್ಪ್ರಭೋ || ೭೫ ||

೭೧–೭೨. ರತ್ನಾಭರಣಾಲಂಕೃತಳೂ, ಚಂದನಲಿಪ್ತಳೂ ಆದ ಕ್ಷಮೆಯೆಂಬ ಗೋಪಿಯೊಡನೊಮ್ಮೆ ನೀನು ಸುಂದರವೇಷವನ್ನು ಧರಿಸಿ ಗಂಧಮಾಲ್ಯಗಳಿಂದಲೂ, ರತ್ನಾಭರಣಗಳಿಂದಲೂ ಭೂಷಿತನಾಗಿ ಬೆರೆತು, ಪುಷ್ಪಶಯನದಲ್ಲಿ ಸುಖದಿಂದ ಮೂರ್ಛೆಗೊಂಡಿದ್ದೆ.

೭೩. ಅವಳ ಆಲಿಂಗನೆಗೊಳಗಾಗಿ ನವಸಂಗಮದಿಂದ ಮೈಮರೆತು ನಿದ್ರೆ ಹೋಗುತ್ತಿದ್ದಾಗ ನಾನು ಬಂದು ನಿಮ್ಮಿಬ್ಬರನ್ನೂ ಎಚ್ಚರಗೊಳಿಸಿದುದು ಜ್ಞಾಪಕ ವಿಲ್ಲವೇ ?

೭೪–೭೫. ಅಲ್ಲದೆ ನಾನು ನಿನ್ನ ಪೀತಾಂಬರವನ್ನೂ, ಮನೋಹರವಾದ ಕೊಳಲನ್ನೂ, ವನಮಾಲೆಯನ್ನೂ, ಕೌಸ್ತುಭರತ್ನವನ್ನೂ, ಅಮೂಲ್ಯವಾದ ರತ್ನ ಕುಂಡಲಗಳನ್ನೂ ತೆಗೆದುಕೊಂಡಿದ್ದು ಅನಂತರ ನಿನ್ನ ಮೇಲಿನ ಪ್ರೇಮದಿಂದಲೂ, ಸಖಿಯರ ಮಾತಿನಿಂದಲೂ ನಿನಗೆ ಹಿಂದಕ್ಕೆ ಕೊಟ್ಟಾಗ ನೀನು ಲಜ್ಜೆಯಿಂದ ವಿವರ್ಣನಾದೆ. ಆದುದರಿಂದಲೇ ಈಗಲೂ ಕೂಡ ನೀನು ಕೃಷ್ಣವರ್ಣನಾಗಿರುವೆ.

ಕ್ಷಮಾ ದೇಹಂ ಪರಿತ್ಯಜ್ಯ ಲಜ್ಜಯಾ ಪೃಥಿವೀಂ ಗತಾ ।
ತತಸ್ತಸ್ಯಾಃ ಶರೀರಂ ಚ ಗುಣಶ್ರೇಷ್ಠಂ ಬಭೂವ ಹ ॥ ೭೬ ॥

ಸಂವಿಭಜ್ಯ ತ್ವಯಾ ದತ್ತಂ ಪ್ರೇಮ್ಣಾ ಚ ರುದತಾ ಪುರಾ ।
ಕಿಂಚಿದ್ದತ್ತಂ ವಿಷ್ಣವೇ ಚ ವೈಷ್ಣವೇಭ್ಯಶ್ಚ ಕಿಂಚನ ॥ ೭೭ ॥

ಧರ್ಮಿಷ್ಠೇಭ್ಯಶ್ಚ ಧರ್ಮಾಯ ದುರ್ಬಲೇಭ್ಯಶ್ಚ ಕಿಂಚನ ।
ತಪಸ್ವಿಭ್ಯೋಽಪಿ ದೇವೇಭ್ಯಃ ಪಂಡಿತೇಭ್ಯಶ್ಚ ಕಿಂಚನ ॥ ೭೮ ॥

ಏತತ್ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ।
ತ್ವದ್ಗುಣಂ ಬಹುವಿಸ್ತಾರಂ ಜಾನಾಮಿ ಚ ಪರಂ ಪ್ರಭೋ ॥ ೭೯ ॥

ಇತ್ಯೇವಮುಕ್ತ್ವಾ ಸಾ ರಾಧಾ ರಕ್ತಪಂಕಜಲೋಚನಾ ।
ಗಂಗಾಂ ವಕ್ತುಂ ಸಮಾರೇಭೇ ನಮ್ರಾಸ್ಯಾಂ ಲಜ್ಜಿತಾಂ ಸತೀಂ ॥ ೮೦ ॥

---

೭೬. ಕ್ಷಮೆಯು ಕೂಡ ನಾಚಿಕೆಯಿಂದ ದೇಹತ್ಯಾಗಮಾಡಿ ಪೃಥಿವಿಯೊಳಗೆ ಐಕ್ಯವಾದಳು. ಅನಂತರ ಅವಳ ಶರೀರವೇ ಶ್ರೇಷ್ಠವಾದ ಕ್ಷಮಾಗುಣವಾಯಿತು.

೭೭–೭೮. ಆಗ ಪ್ರೇಮದಿಂದ ನೀನು ಗೋಳಾಡುತ್ತ ಆ ಶರೀರವನ್ನು ವಿಭಾಗಿಸಿ ವಿಷ್ಣುವಿಗೂ, ವೈಷ್ಣವರಿಗೂ, ಧರ್ಮಿಷ್ಠರಿಗೂ, ಧರ್ಮನಿಗೂ, ದುರ್ಬಲರಿಗೂ, ತಪಸ್ವಿಗಳಿಗೂ, ದೇವತೆಗಳಿಗೂ, ಪಂಡಿತರಿಗೂ ಸ್ವಲ್ಪಸ್ವಲ್ಪವಾಗಿ ಕೊಟ್ಟಿಯಲ್ಲವೇ ?

೭೯. ಈ ರೀತಿಯಾದ ನಿನ್ನ ಅನೇಕ ನಡತೆಗಳನ್ನು ವಿವರಿಸಿದೆನು. ಇನ್ನೇನನ್ನು ಹೇಳಬೇಕು. ಬಹಳ ವಿಸ್ತಾರವಾದ ನಿನ್ನ ಗುಣನಡತೆಗಳನ್ನೆಲ್ಲಾ ಚೆನ್ನಾಗಿಬಲ್ಲೆ.

೮೦. ರಾಧೆಯು ಶ್ರೀಕೃಷ್ಣನನ್ನು ಕುರಿತು ಹೀಗೆ ಹೇಳಿ ಲಜ್ಜಾವನತಮುಖಿಯಾದ ಗಂಗೆಯನ್ನು ಕೆಂದಾವರೆಯಂತಿರುವ ತನ್ನ ಕಣ್ಣುಗಳಿಂದ ದೃಷ್ಟಿಸಿ ನೋಡುತ್ತ ಇಂತು ನುಡಿಯಲಾರಂಭಿಸಿದಳು.

ಗಂಗಾ ರಹಸ್ಯಂ ಯೋಗೇನ ಜ್ಞಾತ್ವಾ ವೈ ಸಿದ್ಧಯೋಗಿನೀ ।
ತಿರೋಭೂಯ ಸಭಾಮಧ್ಯಾತ್ಸ್ವಜಲಂ ಪ್ರವಿವೇಶ ಸಾ ॥ ೮೧ ॥

ರಾಧಾ ಯೋಗೇನ ವಿಜ್ಞಾಯ ಸರ್ವತ್ರಾವಸ್ಥಿತಾಂ ಚ ತಾಂ ।
ಪಾನಂ ಕರ್ತುಂ ಸಮಾರೇಭೇ ಗಂಡೂಷಾತ್ಸಿದ್ಧಯೋಗಿನೀ ॥ ೮೨ ॥

ಗಂಗಾ ರಹಸ್ಯಂ ಯೋಗೇನ ಜ್ಞಾತ್ವಾ ವೈ ಸಿದ್ಧಯೋಗಿನೀ ।
ಶ್ರೀಕೃಷ್ಣಚರಣಾಂಭೋಜಂ ಪರಮಂ ಶರಣಂ ಯಯೌ ॥ ೮೩ ॥

ಗೋಲೋಕಂ ಚ ವೈಕುಂಠಂ ಬ್ರಹ್ಮಲೋಕಾದಿಕಂ ತಥಾ ।
ದದರ್ಶ ರಾಧಾ ಸರ್ವತ್ರ ನೈವ ಗಂಗಾಂ ದದರ್ಶ ಸಾ ॥ ೮೪ ॥

ಸರ್ವತೋ ಜಲಶೂನ್ಯಂ ಚ ಶುಷ್ಕಪಂಕಜಗೋಲಕಂ ।
ಜಲಜಂತುಸಮೂಹೈಶ್ಚ ಮೃತದೇಹೈಃ ಸಮನ್ವಿತಂ ॥ ೮೫ ॥

---

೮೧. ಸಿದ್ಧಯೋಗಿನಿಯಾದ ಆ ಗಂಗೆಯು ಈ ರಹಸ್ಯವನ್ನು ತಿಳಿದು ಯೋಗ ಶಕ್ತಿಯಿಂದ ಅಂತರ್ಧಾನಳಾಗಿ ದ್ರವರೂಪಳಾದಳು.

೮೨. ಸಿದ್ಧಯೋಗಿನಿಯಾದ ರಾಧೆಯೂ ಕೂಡ ಅವಳು ಜಲಮಯಳಾದುದನ್ನು ತಿಳಿದು ಯೋಗಶಕ್ತಿಯಿಂದ ಅವಳನ್ನು ಕುಡಿಯಲಾರಂಭಿಸಿದಳು.

೮೩. ಈ ರಹಸ್ಯವನ್ನು ಯೋಗಬಲದಿಂದ ತಿಳಿದ ಗಂಗೆಯು ಆತ್ಮರಕ್ಷಣೆಗಾಗಿ ಶ್ರೀಕೃಷ್ಣನ ಅಡಿದಾವರೆಗಳನ್ನು ಶರಣುಹೊಕ್ಕಳು.

೮೪. ಇತ್ತ ರಾಧೆಯು ಗೋಲೋಕ, ವೈಕುಂಠ ಮತ್ತು ಬ್ರಹ್ಮಲೋಕಾದಿಗಳಲ್ಲೆಲ್ಲಾ ತಡಕಿ ಗಂಗೆಯನ್ನು ಕಾಣದೆ ಹೋದಳು.

೮೫. ಆಗ ಎಲ್ಲೆಲ್ಲೂ ನೀರಿಲ್ಲದಂತಾಗಿ ವಿಶ್ವವೆಲ್ಲವೂ ಒಣಗಿದ ತಾವರೆಯಂತಾಯಿತು. ಜಲಜಂತುಗಳೆಲ್ಲವೂ ಮೃತಶರೀರಗಳಾದುವು.

ಬ್ರಹ್ಮವಿಷ್ಣುಶಿವಾನಂತಧರ್ಮೇಂದ್ರೇಂದುದಿವಾಕರಾಃ ।
ಮುನಯೋ ಮಾನವಾಃ ಸರ್ವೇ ದೇವಾಃ ಸಿದ್ಧಾಸ್ತಪಸ್ವಿನಃ ॥ ೮೬ ॥

ಗೋಲೋಕಂ ಚ ಸಮಾಜಗ್ಮುಃ ಶುಷ್ಕಕಂಠೌಷ್ಠತಾಲುಕಾಃ ।
ಸರ್ವೇ ಪ್ರಣೇಮುರ್ಗೋವಿಂದಂ ಸರ್ವೇಶಂ ಪ್ರಕೃತೇಃ ಪರಂ ॥ ೮೭ ॥

ವರಂ ವರೇಣ್ಯಂ ವರದಂ ವರಿಷ್ಠಂ ವರಕಾರಣಂ ।
ವರೇಶಂ ಚ ವರಾರ್ಹಂ ಚ ಸರ್ವೇಷಾಂ ಪ್ರವರಂ ಪ್ರಭುಂ ॥ ೮೮ ॥

ನಿರೀಹಂ ಚ ನಿರಾಕಾರಂ ನಿರ್ಲಿಪ್ತಂ ಚ ನಿರಾಶ್ರಯಂ ।
ನಿರ್ಗುಣಂ ಚ ನಿರುತ್ಸಾಹಂ ನಿರ್ವ್ಯೂಹಂ ಚ ನಿರಂಜನಂ ॥ ೮೯ ॥

ಸ್ವೇಚ್ಛಾಮಯಂ ಚ ಸಾಕಾರಂ ಭಕ್ತಾನುಗ್ರಹವಿಗ್ರಹಂ ।
ಸತ್ಯಸ್ವರೂಪಂ ಸತ್ಯೇಶಂ ಸಾಕ್ಷಿರೂಪಂ ಸನಾತನಂ ॥ ೯೦ ॥

ಪರಂ ಪರೇಶಂ ಪರಮಂ ಪರಮಾತ್ಮಾನಮೀಶ್ವರಂ ।
ಪ್ರಣಮ್ಯ ತುಷ್ಟುವುಃ ಸರ್ವೇ ಭಕ್ತಿನಮ್ರಾತ್ಮಕಂಧರಾಃ ॥ ೯೧ ॥

೮೬–೮೭. ಬ್ರಹ್ಮಾದಿ ತ್ರಿಮೂರ್ತಿಗಳೂ, ಅನಂತ, ಧರ್ಮ, ಇಂದ್ರ, ಸೂರ್ಯ, ಚಂದ್ರ ಮುಂತಾದ ಸಕಲ ದೇವತೆಗಳೂ, ಮನುಮಾನವರೂ, ತಪಸ್ವಿಗಳೂ ನೀರಿಲ್ಲದೆ ಬಳಲಿ ಬೆಂಡಾಗಿ ಒಣಗಿಹೋದ ತುಟಿದವಡೆಗಳುಳ್ಳವರಾಗಿ ಗೋಲೋಕಕ್ಕೆ ಒಂದು, ಸರ್ವೇಶ್ವರನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಗೋವಿಂದನಿಗೆ ಸಾಷ್ಟಾಂಗವೆರಗಿದರು.

೮೮–೯೧. ವರಸ್ವರೂಪನೂ, ವರದನೂ, ವರೇಣ್ಯನೂ, ವರಿಷ್ಠನೂ, ವರಕಾರಣನೂ, ಸಕಲರಿಗೂ ವರಪ್ರದನೂ, ನಿರೀಹನೂ, ನಿರಾಕಾರನೂ, ನಿರ್ಲಿಪ್ತನೂ, ನಿರಾಶ್ರಯನೂ, ನಿರ್ಗುಣನೂ, ನಿರುತ್ಸಾಹನೂ, ನಿರಂಜನನೂ, ಸ್ವೇಚ್ಛಾಮಯನೂ, ಭಕ್ತಾನುಗ್ರಹವಿಗ್ರಹನೂ, ಸತ್ಯಸ್ವರೂಪನೂ. ಸತ್ಯೇಶನೂ, ಸಾಕ್ಷಿರೂಪನೂ, ಸನಾತನನೂ, ಪರಮೇಶನೂ ಆದ ಆ ಪರಮಾತ್ಮನಿಗೆ ಶಿರಸಾ ವಂದಿಸಿ, ಎಲ್ಲರೂ ಅವನನ್ನು ಹೊಗಳಲಾರಂಭಿಸಿದರು.

ಸಗದ್ಗದಾಃ ಸಾಶ್ರುನೇತ್ರಾಃ ಪುಲಕಾಂಕಿತವಿಗ್ರಹಾಃ ।
ಸರ್ವೇ ಸಂಸ್ತೂಯ ಸರ್ವೇಶಂ ಭಗವಂತಂ ಪರಂ ಹರಿಂ ॥ ೯೨ ॥

ಜ್ಯೋತಿರ್ಮಯಂ ಪರಂ ಬ್ರಹ್ಮ ಸರ್ವಕಾರಣಕಾರಣಂ ।
ಅಮೂಲ್ಯರತ್ನಖಚಿತಚಿತ್ರಸಿಂಹಾಸನಸ್ಥಿತಂ ॥ ೯೩ ॥

ಸೇವ್ಯಮಾನಂ ಚ ಗೋಪಾಲೈಃ ಶ್ವೇತಚಾಮರವಾಯುನಾ ।
ಗೋಪಾಲಿಕಾ ನೃತ್ಯಗೀತಂ ಪಶ್ಯಂತಂ ಸಸ್ಮಿತಂ ಮುದಾ ॥ ೯೪ ॥

ವಲ್ಗುವೇಷೈಃ ಪರಿವೃತಂ ಗೋಪೈಶ್ಚ ಶತಕೋಟಿಭಿಃ ।
ಚಂದನೋಕ್ಷಿತಸರ್ವಾಂಗಂ ರತ್ನಭೂಷಣಭೂಷಿತಂ ॥ ೯೫ ॥

ನವೀನನೀರದಶ್ಯಾಮಂ ಕಿಶೋರಂ ಪೀತವಾಸಸಂ ।
ಯಥಾ ದ್ವಾದಶವರ್ಷೀಯಂ ಬಾಲಂ ಗೋಪಾಲರೂಪಿಣಂ ॥ ೯೬ ॥

೯೨–೯೪. ರೋಮಾಂಚಿತಶರೀರರೂ, ಅಶ್ರುಪೂರಿತನೇತ್ರರೂ, ಆಗಿ ಅಮೂಲ್ಯರತ್ನಖಚಿತವೂ, ಚಿತ್ರವಿಚಿತ್ರವೂ ಆದ ಸಿಂಹಾಸನದಲ್ಲಿ ಕುಳಿತಿರುವ ಸರ್ವೇಶನೂ, ಭಗವಂತನೂ, ಆದಿಕಾರಣನೂ, ಜ್ಯೋತಿರ್ಮಯನೂ ಆದ ಶ್ರೀಹರಿಯನ್ನು ಗದ್ಗದಕಂಠದಿಂದ ಸ್ತುತಿಸಲಾರಂಭಿಸಿದರು. ಪರಮಾತ್ಮನ ಇಕ್ಕಡೆಗಳಲ್ಲಿಯೂ ಗೋಪಾಲರು ಶ್ವೇತಚಾಮರಗಳನ್ನು ಬೀಸುತ್ತಿದ್ದರು. ಎದುರಿನಲ್ಲಿ ನರ್ತನಮಾಡಿ ಹಾಡುತ್ತಿದ್ದ ಗೋಪಾಲಿಕೆಯರನ್ನು ಮಂದಹಾಸದಿಂದ ಪರಮಾತ್ಮನು ನೋಡುತ್ತ ಕುಳಿತಿದ್ದನು.

೯೫–೯೬. ಮನೋಹರವೇಷದಿಂದಲಂಕೃತರಾದ ನೂರುಕೋಟಿ ಗೋಪರಿಂದ ಪರಿವೃತನಾಗಿ ಸಕಲಾವಯಗಳಿಗೂ ಚಂದನವನ್ನು ಲೇಪಿಸಿಕೊಂಡು ರತ್ನಾಭರಣಗಳನ್ನು ತೊಟ್ಟು ನವಮೇಘಶ್ಯಾಮನೂ ಪೀತಾಂಬರಧಾರಿಯೂ, ಗೋಪಕಿಶೋರರೂಪನೂ ಆದ ಆ ಕೃಷ್ಣನು ಕೋಟಿಚಂದ್ರರ ಕಾಂತಿಯನ್ನು ಅಲ್ಲಗಳೆಯುವ

ಕೋಟಿಚಂದ್ರಪ್ರಭಾಜುಷ್ಟಪುಷ್ಟಶ್ರೀಯುಕ್ತವಿಗ್ರಹಂ ।
ಸ್ವತೇಜಸಾ ಪರಿವೃತಂ ಸುಸಾದೃಶ್ಯಂ ಮನೋಹರಂ ॥ ೯೭ ॥

ಕೋಟಿಕಂದರ್ಪಸೌಂದರ್ಯಲೀಲಾಲಾವಣ್ಯವಿಗ್ರಹಂ ।
ದೃಶ್ಯಮಾನಂ ಚ ಗೋಪೀಭಿಃ ಸಸ್ಮಿತಾಭಿಶ್ಚ ಸಂತತಂ ॥ ೯೮ ॥

ಭೂಷಣೈರ್ಭೂಷಿತಾಭಿಶ್ಚ ಮಹಾರತ್ನವಿನಿರ್ಮಿತೈಃ ।
ಪಿಬಂತೀಭಿರ್ಲೋಚನಾಭ್ಯಾಂ ಮುಖಚಂದ್ರಂ ಪ್ರಭೋರ್ಮುದಾ ॥ ೯೯ ॥

ಪ್ರಾಣಾಧಿಕಪ್ರಿಯತಮಾರಾಧಾವಕ್ಷಃಸ್ಥಲಸ್ಥಿತಂ ।
ತಯಾ ಪ್ರದತ್ತಂ ತಾಂಬೂಲಂ ಭುಕ್ತವಂತಂ ಸುವಾಸಿತಂ ।
ಪರಿಪೂರ್ಣತಮಂ ರಾಸೇ ದದೃಶುಃ ಸರ್ವತಃ ಸುರಾಃ ॥ ೧೦೦ ॥

ಮುನಯೋ ಮಾನವಾಃ ಸಿದ್ಧಾಸ್ತಪಸಾ ಚ ತಪಸ್ವಿನಃ ।
ಪ್ರಹೃಷ್ಟಮಾನಸಾಃ ಸರ್ವೇ ಜಗ್ಮುಃ ಪರಮವಿಸ್ಮಯಂ ॥ ೧೦೧ ॥

ದೇಹಕಾಂತಿಯಿಂದಲೂ, ಸಭಾಮಂಟಪವನ್ನೆಲ್ಲಾ ಬೆಳಗುತ್ತಿರುವ ದಿವ್ಯತೇಜಸ್ಸಿನಿಂದಲೂ, ಕೋಟಿಮನ್ಮಥರ ಸೌಂದರ್ಯದಿಂದಲೂ, ಲೀಲಾಲಾವಣ್ಯಮೂರ್ತಿಯಾಗಿ, ರತ್ನಾಭರಣಾಲಂಕೃತರೂ, ಮಂದಸ್ಮಿತವದನೆಯರೂ ಆದ ಗೋಪಿಯರ ಕಟಾಕ್ಷವೀಕ್ಷಣಕ್ಕೆ ಪಾತ್ರನಾಗಿ ತಮ್ಮ ಲೋಚನಚಕೋರಗಳಿಂದ ತನ್ನ ಮುಖಚಂದ್ರನ ಚಂದ್ರಿಕಾಪಾನಮಾಡುತ್ತಿದ್ದ ಗೋಪಿಯರ ಪ್ರೀತಿಗೊಳಗಾಗಿದ್ದನು.

೧೦೦. ತನ್ನ ಪ್ರಾಣಗಳಿಗಿಂತಲೂ ಪ್ರೀತಿಪಾತ್ರಳಾದ ರಾಧೆಯ ವಕ್ಷಃಸ್ಥಲದಲ್ಲಿ ನೆಲೆಸಿ, ಆ ರಾಧೆಯು ಕೊಡುತ್ತಿರುವ ಸುವಾಸಿತ ತಾಂಬೂಲವನ್ನು ಸವಿಯುತ್ತ ರಾಸಮಂಡಲದಲ್ಲೆಲ್ಲಾ ಪರಿಪೂರ್ಣನಾದ ಆ ಪರಮಾತ್ಮನನ್ನು ದೇವತೆಗಳೆಲ್ಲ ನೋಡಿದರು.

೧೦೧. ಮುನಿಮಾನವರೂ, ಸಿದ್ಧರೂ, ತಪಸ್ವಿಗಳೂ ಕೂಡ ಸಂತುಷ್ಟಮನಸ್ಕರಾಗಿ ಬಹಳ ಆಶ್ಚರ್ಯಸಮನ್ವಿತರಾದರು.

ಪರಸ್ಪರಂ ಸಮಾಲೋಚ್ಯ ತೇ ತಮೂಚುಶ್ಚತುರ್ಮುಖಂ ।
ನಿವೇದಿತುಂ ಜಗನ್ನಾಥಂ ಸ್ವಾಭಿಪ್ರಾಯಮಭೀಪ್ಸಿತಂ ॥ ೧೦೨ ॥

ಬ್ರಹ್ಮಾ ತದ್ವಚನಂ ಶ್ರುತ್ವಾ ಸ್ಥಿತಂ ವಿಷ್ಣೋಸ್ತು ದಕ್ಷಿಣೇ ।
ವಾಮತೋ ವಾಮದೇವಸ್ಯ ಚಾಗಮತ್ಕೃಷ್ಣಮುತ್ತಮಂ ॥ ೧೦೩ ॥

ಪರಮಾನಂದಯುಕ್ತಂ ಚ ಪರಮಾನಂದರೂಪಕಂ ।
ಸರ್ವಂ ಕೃಷ್ಣಮಯಂ ಧಾತಾ ಚಾಪಶ್ಯದ್ರಾಸಮಂಡಲೇ ॥ ೧೦೪ ॥

ಸರ್ವಂ ಸಮಾನವೇಷಂ ಚ ಸಮಾನಾಸನಸಂಸ್ಥಿತಂ ॥ ೧೦೫ ॥

ದ್ವಿಭುಜಂ ಮುರಲೀಹಸ್ತಂ ವನಮಾಲಾವಿಭೂಷಿತಂ ।
ಮಯೂರಪುಚ್ಛಚೂಡಂ ಚ ಕೌಸ್ತುಭೇನ ವಿರಾಜಿತಂ ॥ ೧೦೬ ॥

---

೧೦೨. ಆ ದೇವತೆಗಳೆಲ್ಲರೂ ಅನ್ಯೋನ್ಯವಾಗಿ ಆಲೋಚಿಸಿ ತಮ್ಮ ಅಭೀಷ್ಟವನ್ನು ಜಗದೊಡೆಯನಿಗೆ ನಿವೇದಿಸಲು ತಮ್ಮ ಮುಂದಾಳಾದ ಚತುರ್ಮುಖನಿಗೆ ವಿಜ್ಞಾಪಿಸಿಕೊಂಡರು.

೧೦೩. ಅವರ ಮಾತನ್ನು ಕೇಳಿದ ಬ್ರಹ್ಮನು ವಿಷ್ಣುವಿಗೆ ಬಲಭಾಗದಲ್ಲಿಯೂ, ವಾಮದೇವನಿಗೆ ವಾಮಭಾಗದಲ್ಲಿಯೂ ಇರುವ ಪರಮಾತ್ಮನೆಡೆಗೆ ಬಂದನು.

೧೦೪. ರಾಸಮಂಡಲವೆಲ್ಲವೂ ಪರಮಾನಂದಮಯನೂ, ಪರಮಾನಂದ ಸ್ವರೂಪನೂ ಆದ ಶ್ರೀಕೃಷ್ಣನಿಂದಲೇ ಪರಿಪೂರ್ಣವಾಗಿರುವುದನ್ನು ಬ್ರಹ್ಮನು ನೋಡಿದನು.

೧೦೫. ಅಲ್ಲಿದ್ದವರೆಲ್ಲರೂ ಸಮಾನವೇಷಭೂಷಿತರಾಗಿ ಒಂದೇ ರೀತಿಯ ಪೀಠದಲ್ಲಿ ಕುಳಿತಿದ್ದರು.

೧೦೬. ಎರಡು ಕೈಗಳಲ್ಲೂ ಕೊಳಲನ್ನು ಹಿಡಿದು ಕಂಠದಲ್ಲಿ ವನಮಾಲೆಯನ್ನೂ, ತಲೆಯಲ್ಲಿ ನವಿಲುಗರಿಯನ್ನೂ, ಎದೆಯಲ್ಲಿ ಕೌಸ್ತುಭರತ್ನವನ್ನೂ ಧರಿಸಿ ಮನೋಹರರಾಗಿದ್ದರು.

ಅತೀವ ಕಮನೀಯಂ ಚ ಸುಂದರಂ ಶಾಂತವಿಗ್ರಹಂ ।
ಗುಣಭೂಷಣರೂಪೇಣ ತೇಜಸಾ ವಯಸಾ ತ್ವಿಷಾ ॥ ೧೦೭ ॥

ವಾಸಸಾ ಯಶಸಾ ಕೃತ್ಯಾ ಮೂರ್ತ್ಯಾ ಸುಂದರಯಾ ಸಮಂ ।
ಪರಿಪೂರ್ಣತಮಂ ಸರ್ವಂ ಸರ್ವೈಶ್ವರ್ಯಸಮನ್ವಿತಂ ॥ ೧೦೮ ॥

ಕಸ್ಸೇವ್ಯಸ್ಸೇವಕೋ ವೇತಿ ದೃಷ್ಟ್ವಾ ನಿರ್ವಕ್ತುಮಕ್ಷಮಃ ।
ಕ್ಷಣಂ ತೇಜಃಸ್ವರೂಪಂ ಚ ರೂಪರಾಶಿಯುತಂ ಕ್ಷಣಂ ॥ ೧೦೯ ॥

ಏಕಮೇವ ಕ್ಷಣಂ ಕೃಷ್ಣಂ ರಾಧಯಾ ಸಹಿತಂ ಪರಂ ।
ಪ್ರತ್ಯೇಕಾಸನಸಂಸ್ಥಂ ಚ ತಯಾ ಚ ಸಹಿತಂ ಕ್ಷಣಂ ॥ ೧೧೦ ॥

ರಾಧಾರೂಪಧರಂ ಕೃಷ್ಣಂ ಕೃಷ್ಣರೂಪಕಲತ್ರಕಂ ।
ಕಿಂ ಸ್ತ್ರೀರೂಪಂ ಚ ಪುಂರೂಪಂ ವಿಧಾತಾ ಧ್ಯಾತುಮಕ್ಷಮಂ ॥ ೧೧೧ ॥

---

೧೦೭. ಗುಣ ಮತ್ತು ವೇಷಭೂಷಗಳಿಂದಲೂ, ತೇಜಸ್ಸು, ವಯಸ್ಸು ಮತ್ತು ಕಾಂತಿಗಳಿಂದಲೂ, ಎಲ್ಲರೂ ಸುಂದರರೂ ಮತ್ತು ಶಾಂತಾಕಾರರೂ ಆಗಿದ್ದರು.

೧೦೮-೧೦೯. ಒಂದೇ ರೀತಿಯಾದ ಬಟ್ಟೆಯನ್ನುಟ್ಟು ಸಮಾನವಾದ ಸುಂದರ ಮೂರ್ತಿಯಿಂದ ಪರಿಪೂರ್ಣರಾಗಿ, ಸಕಲೈಶ್ವರ್ಯದಿಂದಲೂ, ಸತ್ಕೀರ್ತಿಯಿಂದಲೂ ಮೆರೆಯುತ್ತಿದ್ದ ಅವರನ್ನು ನೋಡಿ ಸೇವ್ಯರಾರು? ಸೇವಕರಾರು? ಎಂಬುದನ್ನು ನಿರ್ಣಯಿಸಲಾಗಲಿಲ್ಲ. ಕ್ಷಣಕಾಲ ತೇಜೋರಾಶಿಯನ್ನೂ, ಉತ್ತರಕ್ಷಣದಲ್ಲಿಯೇ ರೂಪರಾಶಿಯನ್ನೂ ಬ್ರಹ್ಮನು ನೋಡಿ ವಿಸ್ಮಯಗೊಂಡನು.

೧೧೦. ಒಂದು ಕ್ಷಣದಲ್ಲಿ ಶ್ರೀಕೃಷ್ಣನೊಬ್ಬನೇ ಪ್ರತ್ಯೇಕವಾದ ಪೀಠದಲ್ಲಿ ಕುಳಿತಿರುವುದನ್ನೂ, ಮತ್ತೊಂದು ಕ್ಷಣದಲ್ಲಿ ರಾಧೆಯೊಡನೆ ಒಂದೇ ಪೀಠದಲ್ಲಿ ಕುಳಿತಿರುವುದನ್ನೂ ಕಂಡನು.

೧೧೧. ಶ್ರೀಕೃಷ್ಣನೇ ರಾಧಾರೂಪನಾಗಿದ್ದುದರಿಂದಲೂ ರಾಧೆಯು ಕೃಷ್ಣರೂಪಿಣಿಯಾಗಿದ್ದುದರಿಂದಲೂ ರಾಧಾಕೃಷ್ಣರಿಗೆ ರೂಪಭೇದವಿರಲಿಲ್ಲ. ಅದನ್ನು ನೋಡಿ ಯಾವ ರೂಪವನ್ನು ಧ್ಯಾನಿಸಬೇಕೆಂದು ತಿಳಿಯದೆ ಬ್ರಹ್ಮನು ವಿಸ್ಮಿತನಾಗಿ ನಿಂತನು.

ಹೃತ್ಪದ್ಮಸ್ಥಂ ಚ ಶ್ರೀಕೃಷ್ಣಂ ಧಾತಾ ಧ್ಯಾನೇನ ಚೇತಸಾ ।
ಚಕಾರ ಸ್ತವನಂ ಭಕ್ತ್ಯಾ ಪ್ರಣಮ್ಯಾಥ ತ್ವನೇಕಧಾ ॥ ೧೧೨ ॥

ತತಃ ಸ ಚಕ್ಷುರುನ್ಮೀಲ್ಯ ಪುನಶ್ಚ ತದನುಜ್ಞಯಾ ।
ಅಪಶ್ಯತ್ಕೃಷ್ಣಮೇಕಂ ಚ ರಾಧಾ ವಕ್ಷಃಸ್ಥಲಸ್ಥಿತಂ ॥ ೧೧೩ ॥

ಸ್ವಪಾರ್ಷದೈಃ ಪರಿವೃತಂ ಗೋಪೀಮಂಡಲಮಂಡಿತಂ ।
ಪುನಃ ಪ್ರಣೇಮುಸ್ತಂ ದೃಷ್ಟ್ವಾ ತುಷ್ಟುವುಶ್ಚ ಪುನಶ್ಚ ತೇ ॥ ೧೧೪ ॥

ವಿಜ್ಞಾಯ ತದಭಿಪ್ರಾಯಂ ತಾನುವಾಚ ಸುರೇಶ್ವರಃ ।
ಸರ್ವಾತ್ಮಾ ಸರ್ವಯಜ್ಞೇಶಃ ಸರ್ವೇಶಃ ಸರ್ವಭಾವನಃ ॥ ೧೧೫ ॥

॥ ಶ್ರೀ ಭಗವಾನುವಾಚ ॥

ಆಗಚ್ಛ ಕುಶಲಂ ಬ್ರಹ್ಮನ್ ಆಗಚ್ಛ ಕಮಲಾಪತೇ ।
ಇಹಾಗಚ್ಛ ಮಹಾದೇವ ಶಶ್ವತ್ಕುಶಲಮಸ್ತು ವಃ ॥ ೧೧೬ ॥

---

೧೧೨. ಬ್ರಹ್ಮನು ಕಣ್ಣುಮುಚ್ಚಿ ಧ್ಯಾನಾಸಕ್ತಮನಸ್ಕನಾಗಿ ಹೃತ್ಪದ್ಮದಲ್ಲಿರುವ ಶ್ರೀಕೃಷ್ಣನನ್ನು ಕಂಡು ಅನೇಕ ರೀತಿ ಸ್ತೋತ್ರಮಾಡುತ್ತಾ ಭಕ್ತಿಯಿಂದ ಅವನಿಗೆ ಸಾಷ್ಟಾಂಗವೆರಗಿದನು.

೧೧೩. ಅನಂತರ ಕಣ್ದೆರೆದು ಪರಮಾತ್ಮನ ಅನುಗ್ರಹದಿಂದ ರಾಧೆಯ ವಕ್ಷಃಸ್ಥಲದಲ್ಲಿ ಕುಳಿತಿರುವ ಶ್ರೀಕೃಷ್ಣನೊಬ್ಬನನ್ನೇ ಬ್ರಹ್ಮನು ನೋಡಿದನು.

೧೧೪. ಗೋಪಿಯರ ಸಮೂಹದಿಂದ ಪರಿವೃತನಾಗಿ, ಪಾರ್ಷದರಿಂದ ಸೇವೆ ಹೊಂದುತ್ತಲಿರುವ ಆ ಪರಮಾತ್ಮನನ್ನು ನೋಡಿ ಆ ದೇವತೆಗಳೂ ಕೂಡ ಸ್ತುತಿಸಲಾರಂಭಿಸಿದರು

೧೧೫. ಸರ್ವಜ್ಞನೂ, ಸರ್ವೇಶನೂ, ಸರ್ವಾತ್ಮನೂ, ಸರ್ವಾಂತರ್ಯಾಮಿಯೂ ಆದ ಪರಮಾತ್ಮನು ಅವರ ಅಭಿಪ್ರಾಯವನ್ನು ತಿಳಿದು ಅವರನ್ನು ಕುರಿತು ಇಂತೆಂದನು.

೧೧೬. ಶ್ರೀ ಭಗವಾನ್ :—ಎಲೈ, ಬ್ರಹ್ಮನೇ, ಕಮಲಾಪತಿಯಾದ ವಿಷ್ಣುವೇ, ಮಹಾದೇವನೇ, ನೀವೆಲ್ಲರೂ ಕ್ಷೇಮವೇ ? ಇತ್ತ ಬನ್ನಿರಿ ನಿಮಗೆ ಕುಶಲವಾಗಲಿ.

ಆಗತಾಃ ಸ್ಥ ಮಹಾಭಾಗಾ ಗಂಗಾನಯನಕಾರಣಾತ್ ।
ಗಂಗಾ ಮಚ್ಚರಣಾಂಭೋಜೇ ಭಯೇನ ಶರಣಂ ಗತಾ ॥ ೧೧೭ ॥

ರಾಧೇಮಾಂ ಪಾತುಮಿಚ್ಛಂತೀ ದೃಷ್ಟ್ವಾ ಮತ್ಸನ್ನಿಧಾನತಃ ।
ದಾಸ್ಯಾಮೀಮಾಂ ಬಹಿಃ ಕೃತ್ವಾ ಯೂಯಂ ಕುರುತ ನಿರ್ಭಯಾಂ ॥ ೧೧೮ ॥

ಶ್ರೀಕೃಷ್ಣಸ್ಯ ವಚಃ ಶ್ರುತ್ವಾ ಸಸ್ಮಿತಃ ಕಮಲೋದ್ಭವಃ ।
ತುಷ್ಟಾವ ಸರ್ವಾರಾಧ್ಯಾಂ ತಾಂ ರಾಧಾಂ ಶ್ರೀಕೃಷ್ಣಪೂಜಿತಾಂ ॥ ೧೧೯ ॥

ವಕ್ತ್ರೈಶ್ಚತುರ್ಭಿಃ ಸಂಸ್ತೂಯ ಭಕ್ತಿನಮ್ರಾತ್ಮಕಂಧರಃ ।
ಧಾತಾ ಚತುರ್ಣಾಂ ವೇದಾನಾಮುವಾಚ ಚತುರಾನನಃ ॥ ೧೨೦ ॥

---

೧೧೭. ಮಹಾಭಾಗರೇ, ನೀವೆಲ್ಲರೂ ಗಂಗೆಯನ್ನು ಕರೆದೊಯ್ಯಲೋಸುಗ ಇಲ್ಲಿಗೆ ಬಂದಿರುವಿರಿ. ಆದರೆ ಗಂಗೆಯು ರಾಧೆಯ ಭಯದಿಂದ ನನ್ನ ಪಾದಗಳಲ್ಲಿ ಐಕ್ಯವಾಗಿರುವಳು.

೧೧೮. ಗಂಗೆಯು ನನ್ನ ಹತ್ತಿರವಿರುವುದನ್ನು ತಿಳಿದು ರಾಧೆಯು ಅದನ್ನು ಪಾನಮಾಡಲು ಕಾದಿದ್ದಾಳೆ. ಆದ್ದರಿಂದ ಈ ಗಂಗೆಯನ್ನು ನಾನು ಹೊರಕ್ಕೆ ಕಳುಹಿಸಿದರೆ ನೀವು ಅವಳ ಭಯವನ್ನು ಪರಿಹರಿಸಬೇಕು.

೧೧೯. ಶ್ರೀಕೃಷ್ಣನ ಮಾತನ್ನು ಕೇಳಿದ ಬ್ರಹ್ಮನು ಸ್ಮಿತವದನನಾಗಿ ರಾಧೆಯ ಅನುಗ್ರಹವನ್ನು ಬಯಸಿ ಶ್ರೀಕೃಷ್ಣನಾದಿಯಾಗಿ ಎಲ್ಲರಿಂದಲೂ ಪೂಜಿತಳಾದ ರಾಧಾದೇವಿಯನ್ನು ಹೊಗಳಲಾರಂಭಿಸಿದನು.

೧೨೦. ಚತುರ್ವೇದಗಳ ಸ್ರಷ್ಟೃವಾದ ಬ್ರಹ್ಮನು ವಿನಯದಿಂದ ತಲೆಬಾಗಿ ತನ್ನ ಚತುರ್ಮುಖಗಳಿಂದ ರಾಧಾದೇವಿಯನ್ನು ಸ್ತುತಿಸಿದನು.

|| ಬ್ರಹ್ಮೋವಾಚ ||

ಗಂಗಾ ತ್ವದಂಗಸಂಭೂತಾ ಪ್ರಭೋರ್ವೈ ರಾಸಮಂಡಲೇ |
ದ್ರವರೂಪಾ ಚ ಸಾ ಜಾತಾ ಮುಗ್ಧಯಾ ಶಂಕರಸ್ವರಾತ್ || ೧೨೧ ||

ಕೃಷ್ಣಾಂಶಾ ಚ ತ್ವದಂಶಾ ಚ ತ್ವತ್ಕನ್ಯಾ ಸದೃಶೀ ಪ್ರಿಯಾ |
ತನ್ಮಂತ್ರಗ್ರಹಣಂ ಕೃತ್ವಾ ಕರೋತು ತವ ಪೂಜನಂ || ೧೨೨ ||

ಭವಿಷ್ಯತಿ ಪತಿಸ್ತಸ್ಯಾ ವೈಕುಂಠೇ ಚ ಚತುರ್ಭುಜಃ |
ಭೂಗತಾಯಾಃ ಕಲಾಯಾಶ್ಚ ಲವಣೋದಶ್ಚ ವಾರಿಧಿಃ || ೧೨೩ ||

ಗೋಲೋಕಸ್ಥಾ ಚ ಯಾ ರಾಧಾ ಸರ್ವತ್ರಸ್ಥಾ ತಥಾತ್ಮಿಕಾ |
ತದಾತ್ಮಿಕಾ ತ್ವಂ ದೇವೇಶಿ ಸರ್ವದಾ ಚ ತದಾತ್ಮಜಾ || ೧೨೪ ||

---

೧೨೧. ಬ್ರಹ್ಮ :—ಎಲೌ ರಾಧಾದೇವೀಯೇ, ರಾಸಮಂಡಲದಲ್ಲಿ ಪ್ರಭುವಿನೊಡನಿದ್ದು ಶಂಕರನ ಸಂಗೀತದಿಂದ ಮುಗ್ಧಳಾದ ನಿನ್ನ ಅವಯವದಿಂದ ಗಂಗೆಯು ದ್ರವರೂಪಳಾಗಿ ಜನಿಸಿದಳು.

೧೨೨. ಆಕೆಯು ಶ್ರೀಕೃಷ್ಣನ ಅಂಶದಿಂದಲೂ ನಿನ್ನ ಅಂಶದಿಂದೂ ಜನಿಸಿರುವುದರಿಂದ ನಿಮ್ಮಿಬರಿಗೂ ಪುತ್ರಿಯಂತೆ ಪ್ರೀತಿಪಾತ್ರಳಾಗಿರುವರು. ಆದ್ದರಿಂದ ಅವಳು ನಿನ್ನ ಮಂತ್ರೋಪದೇಶವನ್ನು ಸ್ವೀಕರಿಸಿ ನಿನ್ನನ್ನು ಪೂಜಿಸುವಳು.

೧೨೩. ಆ ಗಂಗೆಗೆ ವೈಕುಂಠದಲ್ಲಿ ಚತುರ್ಭುಜನಾದ ನಾರಾಯಣನು ಪತಿಯಾಗುವನು. ಕಲಾಂಶದಿಂದ ಭೂಮಿಗೆ ಹೋಗಿರುವ ಆ ಗಂಗೆಗೆ ಲವಣಸಮುದ್ರನು ಪತಿಯಾಗುವನು.

೧೨೪. ಗೋಲೋಕದಲ್ಲಿರುವ ನೀನು ಹೇಗೆ ಸರ್ವವ್ಯಾಪಕಳೋ ಅಂತೆಯೇ ಗಂಗೆಯೂ ಸರ್ವವ್ಯಾಪಕಳಾಗುವಳು. ನೀನೂ, ಗಂಗೆಯೂ ಅಭಿನ್ನರು. ಯಾವಾಗಲೂ ನಿನಗೆ ಅವಳು ಮಗಳೆನಿಸಿಕೊಳ್ಳುವಳು.

ಬ್ರಹ್ಮಣೋ ವಚನಂ ಶ್ರುತ್ವಾ ಸ್ವೀಚಕಾರ ಚ ಸಸ್ಮಿತಾ ।
ಬಹಿರ್ಬಭೂವ ಸಾ ಕೃಷ್ಣಪಾದಾಂಗುಷ್ಠನಖಾಗ್ರತಃ ॥ ೧೨೫ ॥

ತತ್ರೈವ ಸಂವೃತಾ ಶಾಂತಾ ತಸ್ಥೌ ತೇಷಾಂ ಚ ಮಧ್ಯತಃ ।
ಉವಾಸ ತೋಯಾದುತ್ಥಾಯ ತದಧಿಷ್ಠಾತೃದೇವತಾ ॥ ೧೨೬ ॥

ತತ್ತೋಯಂ ಬ್ರಹ್ಮಣಾ ಕಿಂಚಿತ್ಸ್ಥಾಪಿತಂ ಚ ಕಮಂಡಲೌ ।
ಕಂಚಿದ್ದಧಾರ ಶಿರಸಿ ಚಂದ್ರಾರ್ಧೇ ಚಂದ್ರಶೇಖರಃ ॥ ೧೨೭ ॥

ಗಂಗಾಯೈ ರಾಧಿಕಾಮಂತ್ರಂ ಪ್ರದದೌ ಕಮಲೋದ್ಭವಃ ।
ತತ್ಸ್ತೋತ್ರಂ ಕವಚಂ ಪೂಜಾವಿಧಾನಂ ಧ್ಯಾನಮೇವ ಚ ॥ ೧೨೮ ॥

ಸರ್ವಂ ತತ್ಸಾಮವೇದೋಕ್ತಂ ಪುರಶ್ಚರ್ಯಾಕ್ರಮಂ ತಥಾ ।
ಗಂಗಾ ತಾಮೇವ ಸಂಪೂಜ್ಯ ವೈಕುಂಠಂ ಪ್ರಯಯೌ ಸತೀ ॥ ೧೨೯ ॥

---

೧೨೫. ಬ್ರಹ್ಮನ ವಚನವನ್ನು ಕೇಳಿದ ರಾಧೆಯು ಶಾಂತಳಾಗಲು ಆ ಗಂಗೆಯು ಶ್ರೀಕೃಷ್ಣನ ಪಾದನಖಾಗ್ರದಿಂದ ಹೊರಕ್ಕೆ ಬಂದಳು.

೧೨೬. ಅಲ್ಲದೆ ಆ ದೇವತೆಗಳ ಮಧ್ಯದಲ್ಲಿಯೇ ಶಾಂತಳೂ, ಸಂಕುಚಿತಳೂ ಆಗಿ ನಿಂತುಕೊಂಡಳು. ಆಗ ಆ ನೀರಿನಿಂದ ಅದರ ಅಧಿಷ್ಠಾತೃ ದೇವಿಯೊಬ್ಬಳು ಉದಯಿಸಿ ಪ್ರತ್ಯಕ್ಷಳಾದಳು.

೧೨೭. ಆ ನೀರಿನಲ್ಲಿ ಸ್ವಲ್ಪ ಭಾಗವನ್ನು ಬ್ರಹ್ಮನು ತನ್ನ ಕಮಂಡಲುವಿನಲ್ಲಿ ತುಂಬಿಕೊಂಡನು. ಈಶ್ವರನು ತನ್ನ ತಲೆಯಲ್ಲಿರುವ ಚಂದ್ರನೊಡನೆ ಸ್ವಲ್ಪ ಭಾಗವನ್ನು ಧರಿಸಿದನು.

೧೨೮-೧೨೯. ಅನಂತರ ಬ್ರಹ್ಮನು ಗಂಗೆಗೆ ರಾಧಾಮಂತ್ರವನ್ನು ಉಪದೇಶ ಮಾಡಿದನು. ರಾಧೆಯ ಸ್ತೋತ್ರ, ಕವಚ, ಧ್ಯಾನ ಮತ್ತು ಪೂಜಾವಿಧಿಗಳನ್ನೂ, ಸಾಮವೇದೋಕ್ತವಾದ ಅವುಗಳ ಪುರಶ್ಚರಣೆಯ ಕ್ರಮವನ್ನೂ ಉಪದೇಶಿಸಿದನು. ಅನಂತರ ಗಂಗೆಯು ರಾಧೆಯನ್ನು ಪೂಜಿಸಿ ವೈಕುಂಠಕ್ಕೆ ತೆರಳಿದಳು.

ಲಕ್ಷ್ಮೀಃ ಸರಸ್ವತೀ ಗಂಗಾ ತುಳಸೀ ವಿಶ್ವಪಾವನೀ ।
ಏತಾ ನಾರಾಯಣಸ್ಯೈವ ಚತಸ್ರೋ ಯೋಷಿತೋ ಮುನೇ ॥ ೧೩೦ ॥

ಅಥ ತಂ ಸಸ್ಮಿತಃ ಕೃಷ್ಣೋ ಬ್ರಹ್ಮಾಣಂ ಸಮುವಾಚ ಹ ।
ಸರ್ವಂ ಕಾಲಸ್ಯ ವೃತ್ತಾಂತಂ ದುರ್ಬೋಧ್ಯಮವಿಪಶ್ಚಿತಾಂ ॥ ೧೩೧ ॥

॥ ಶ್ರೀ ಕೃಷ್ಣ ಉವಾಚ ॥

ಗೃಹಾಣ ಗಂಗಾಂ ಹೇ ಬ್ರಹ್ಮನ್ ಹೇ ವಿಷ್ಣೋ ಹೇ ಮಹೇಶ್ವರ ।
ಶೃಣು ಕಾಲಸ್ಯ ವೃತ್ತಾಂತಂ ಯದತೀತಂ ನಿಶಾಮಯ ॥ ೧೩೨ ॥

ಯೂಯಂ ಚ ಯೇಽನ್ಯದೇವಾಶ್ಚ ಮುನಯೋ ಮನವಸ್ತಥಾ ।
ಸಿದ್ಧಾಸ್ತಪಸ್ವಿನಶ್ಚೈವ ಯೇ ಯೇಽತ್ರೈವ ಸಮಾಗತಾಃ ॥ ೧೩೩ ॥

ತೇ ತೇ ಜೀವಂತಿ ಗೋಲೋಕೇ ಕಾಲಚಕ್ರವಿವರ್ಜಿತೇ ।
ಜಲಪ್ಲುತಂ ಸರ್ವವಿಶ್ವಮಾಗತಂ ಪ್ರಾಕೃತೇ ಲಯೇ ॥ ೧೩೪ ॥

---

೧೩೦. ಎಲೈ, ನಾರದಮುನಿಯೇ, ಈ ರೀತಿಯಾಗಿ ಲಕ್ಷ್ಮಿ, ಸರಸ್ವತಿ, ಗಂಗೆ ಮತ್ತು ವಿಶ್ವಪಾವನಿಯಾದ ತುಳಸಿ ಈ ನಾಲ್ವರೂ ನಾರಾಯಣನ ಪತ್ನಿಯರಾದರು.

೧೩೧. ಆಗ ಶ್ರೀಕೃಷ್ಣನು ಮಂದಹಾಸದಿಂದ ಬುದ್ಧಿಹೀನರು ತಿಳಿಯಲಾಗದ ಕಾಲವೃತ್ತಾಂತವನ್ನೆಲ್ಲ ಬ್ರಹ್ಮನಿಗೆ ಹೇಳಿದನು.

೧೩೨. ಶ್ರೀಕೃಷ್ಣ:— ಎಲೈ ಬ್ರಹ್ಮ ವಿಷ್ಣು ಮಹೇಶ್ವರರೇ, ಈಗ ಗಂಗೆಯನ್ನು ಸ್ವೀಕರಿಸಿ, ನೀವಿಲ್ಲಿಗೆ ಬಂದ ಮೇಲೆ ಪ್ರಪಂಚದ ಸ್ಥಿತಿ ಏನಾಗಿದೆ ಎಂಬುದನ್ನು ಹೇಳುವೆನು ಕೇಳಿ.

೧೩೩–೧೩೪. ಇಲ್ಲಿಗೆ ಬಂದಿರುವ ದೇವತೆಗಳು, ಮುನಿಮಾನವರು, ಸಿದ್ಧರು ಮತ್ತು ತಪಸ್ವಿಗಳೂ ಕೂಡ ಕಾಲಚಕ್ರಕ್ಕೆ ಸಿಲುಕದ ಗೋಲೋಕಕ್ಕೆ ಬಂದಿರುವುದರಿಂದ ಜೀವಿಸಿರುವರು. ಈಗ ನಿಖಿಲ ವಿಶ್ವವೂ ನೀರಿನಲ್ಲಿ ಮುಳುಗಿ ಪ್ರಾಕೃತ ಪ್ರಲಯಕ್ಕೊಳಗಾಗಿದೆ.

ಬ್ರಹ್ಮಾದ್ಯಾ ಯೇಽನ್ಯವಿಶ್ವಸ್ಥಾಸ್ತೇ ಲೀನಾ ಅಧುನಾ ಮಯಿ ।
ವೈಕುಂಠಂ ಚ ವಿನಾ ಸರ್ವಂ ಸಜಲಂ ಪಶ್ಯ ಪದ್ಮಜ ॥ ೧೩೫ ॥

ಗತ್ವಾ ಸೃಷ್ಟಿಂ ಕುರು ಪುನರ್ಬ್ರಹ್ಮಲೋಕಾದಿಕಂ ಪರಂ ।
ಸಬ್ರಹ್ಮಾಂಡಂ ವಿರಚಯ ಪಶ್ಚಾದ್ಗಂಗಾ ಚ ಯಾಸ್ಯತಿ ॥ ೧೩೬ ॥

ಏವಮನ್ಯೇಷು ವಿಶ್ವೇಷು ಸೃಷ್ಟ್ವಾ ಬ್ರಹ್ಮಾದಿಕಂ ಪುನಃ ।
ಕರೋಮ್ಯಹಂ ಪುನಃ ಸೃಷ್ಟಿಂ ಗಚ್ಛ ಶೀಘ್ರಂ ಸುರೈಃ ಸಹ ॥ ೧೩೭ ॥

ಮಚ್ಚಕ್ಷುಷೋರ್ನಿಮೇಷೇಣ ಬ್ರಹ್ಮಣಃ ಪತನಂ ಭವೇತ್ ।
ಗತಾಃ ಕತಿವಿಧಾಸ್ತೇ ಚ ಭವಿಷ್ಯಂತಿ ಚ ವೇಧಸಃ ॥ ೧೩೮ ॥

ಇತ್ಯುಕ್ತ್ವಾ ರಾಧಿಕಾನಾಥೋ ಜಗಾಮಾಂತಃಪುರಂ ಮುನೇ ।
ದೇವಾ ಗತ್ವಾ ಪುನಃ ಸೃಷ್ಟಿಂ ಚಕ್ರುರೇವಪ್ರಯತ್ನತಃ ॥ ೧೩೯ ॥

---

೧೩೫. ಸಕಲವಿಶ್ವಗಳಲ್ಲಿದ್ದ ಬ್ರಹ್ಮಾದಿದೇವತೆಗಳೂ, ವೈಕುಂಠವನ್ನು ಬಿಟ್ಟು ಉಳಿದ ಸಮಸ್ತ ಲೋಕಗಳೂ ಈಗ ನನ್ನಲ್ಲಿ ಅಡಗಿಹೋಗಿವೆ.

೧೩೬. ಆದ್ದರಿಂದ, ಎಲೈ ಬ್ರಹ್ಮನೇ, ನೀನು ಹೋಗಿ ಬ್ರಹ್ಮಲೋಕವೇ ಮುಂತಾದ ಸಮಸ್ತ ಲೋಕಗಳನ್ನೂ ಪುನಃ ಸೃಷ್ಟಿಮಾಡು. ಸಮಸ್ತ ಬ್ರಹ್ಮಾಂಡ ಸೃಷ್ಟಿಯೂ ಆದಮೇಲೆ ಗಂಗೆಯು ಎಲ್ಲ ಕಡೆಗೂ ಬರುವಳು.

೧೩೭. ಇದೇ ರೀತಿಯಾಗಿ ಇತರ ವಿಶ್ವಗಳಲ್ಲೂ ಬ್ರಹ್ಮಾದಿ ದೇವತೆಗಳನ್ನು ನಾನು ಸೃಷ್ಟಿಮಾಡುವೆನು. ನೀನು ದೇವತೆಗಳೊಡನೆ ಜಾಗ್ರತೆಯಾಗಿ ಹೋಗು.

೧೩೮. ನನ್ನ ರೆಪ್ಪೆಹೊಡೆಯುವ ಕಾಲದೊಳಗೆ ಬ್ರಹ್ಮನ ಪತನವಾಗುವುದರಿಂದ ಇದುವರೆಗೆ ಎಷ್ಟು ಬ್ರಹ್ಮರು ಕಳೆದುಹೋದರೋ, ಮುಂದೆ ಎಷ್ಟುಜನ ಅವತರಿಸುವರೋ ಹೇಳುವವರಾರು?

೧೩೯. ರಾಧಾಪತಿಯಾದ ಶ್ರೀ ಕೃಷ್ಣನು ಇಂತು ನುಡಿದು ಅಂತಃಪುರಕ್ಕೆ ತೆರಳಿದನು. ದೇವತೆಗಳೆಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ ಪುನಃ ಪ್ರಯತ್ನಪೂರ್ವಕವಾಗಿ ಸೃಷ್ಟಿಮಾಡಿದರು.

ಗೋಲೋಕೇ ಚ ಸ್ಥಿತಾ ಗಂಗಾ ವೈಕುಂಠೇ ಶಿವಲೋಕಕೇ ।
ಬ್ರಹ್ಮಲೋಕೇ ತಥಾಽನ್ಯತ್ರ ಯತ್ರ ತತ್ರ ಪುರಾ ಸ್ಥಿತಾ　　॥ ೧೪೦ ॥

ತತ್ರೈವ ಸಾ ಗತಾ ಗಂಗಾ ಚಾಜ್ಞಯಾ ಪರಮಾತ್ಮನಃ ।
ನಿರ್ಗತಾ ವಿಷ್ಣುಪಾದಾಬ್ಜಾತ್ತೇನ ವಿಷ್ಣುಪದೀ ಸ್ಮೃತಾ　　॥ ೧೪೧ ॥

ಇತ್ಯೇವಂ ಕಥಿತಂ ಸರ್ವಂ ಗಂಗೋಪಾಖ್ಯಾನಮುತ್ತಮಂ ।
ಸುಖದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೧೪೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಗಂಗೋಪಾಖ್ಯಾನಂ ನಾಮ
ಏಕಾದಶೋಽಧ್ಯಾಯಃ

---

೧೪೦. ಅನಂತರ ಗಂಗೆಯು ಪೂರ್ವದಲ್ಲಿ ತಾನಿದ್ದ ಗೋಲೋಕ, ವೈಕುಂಠ ಲೋಕ, ಶಿವಲೋಕ, ಬ್ರಹ್ಮಲೋಕ ಮುಂತಾದ ಸಕಲ ಲೋಕಗಳಲ್ಲಿಯೂ, ಅವತರಿಸಿಕೊಂಡಳು.

೧೪೧. ಪರಮಾತ್ಮನ ಆಜ್ಞೆಯಿಂದ ಎಲ್ಲಕಡೆಗೂ ವ್ಯಾಪಿಸಿಕೊಂಡು ಆ ಗಂಗೆಯು ವಿಷ್ಣುವಿನ ಪಾದಾಬ್ಜದಿಂದ ಹುಟ್ಟಿಬಂದುದರಿಂದ 'ವಿಷ್ಣುಪದೀ' ಎನಿಸಿಕೊಂಡಳು.

೧೪೨. ಸುಖಕರವೂ, ಮೋಕ್ಷಕರವೂ, ಸರ್ವಸಾರವೂ, ಅತ್ಯುತ್ತಮವೂ ಆದ ಗಂಗೆಯ ಕಥೆಯನ್ನು ಹೇಳಿದುದಾಯಿತು. ಎಲೈ ನಾರದನೇ, ಇನ್ನೇನನ್ನು ಕೇಳಬೇಕೆಂದು ನಿನಗೆ ಅಭಿಲಾಷೆಯಿದೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ನಾರದನಾರಾಯಣ ಸಂವಾದ
ರೂಪವಾದ ಪ್ರಕೃತಿಖಂಡದಲ್ಲಿ ಗಂಗೋಪಾಖ್ಯಾನರೂಪವಾದ
ಹನ್ನೊಂದನೆಯ ಅಧ್ಯಾಯವು ಮುಗಿದುದು.

ಹನ್ನೊಂದನೆಯ ಅಧ್ಯಾಯದ ಸಾರಾಂಶವು

'ಕಲಿಯುಗದ ಐದುಸಾವಿರವರ್ಷಗಳು ಕಳೆದನಂತರ ಗಂಗೆಯು ಎಲ್ಲಿಗೆ ಹೋದಳು' ಎಂದು ನಾರದರು ಕೇಳಲು 'ಸರಸ್ವತಿಯ ಶಾಪವಿಮುಕ್ತಳಾದ ಗಂಗೆಯು ಪುನಃ ವೈಕುಂಠಕ್ಕೆ ಹೋಗಿ ಶ್ರೀಹರಿಯ ಪತ್ನಿಯಾದಳು' ಎಂದು ನಾರಾಯಣಋಷಿಗಳು ಹೇಳಿದರು. ಆಗ 'ಗಂಗಾದೇವಿಯು ವಿಷ್ಣುವಿನ ಪಾದ ಕಮಲಗಳಲ್ಲಿ ಉದ್ಭವಿಸುವುದಕ್ಕೂ, ಬ್ರಹ್ಮನ ಕಮಂಡಲುವಿನಲ್ಲೂ, ಈಶ್ವರನ ಜಟಾಭಾರದಲ್ಲೂ ಸೇರುವುದಕ್ಕೂ, ಶ್ರೀಮನ್ನಾರಾಯಣನಿಗೆ ಪ್ರಿಯಳಾಗುವುದಕ್ಕೂ ಕಾರಣವನ್ನು ವಿವರಿಸಬೇಕೆಂದು' ನಾರದರು ಕೇಳಿದರು. ನಾರದರ ಪ್ರಶ್ನೆಗೆ ನಾರಾಯಣಮಹರ್ಷಿಗಳು ಈ ರೀತಿ ಉತ್ತರವಿತ್ತರು. 'ಹಿಂದೆ ರಾಧಾಕೃಷ್ಣರ ಅವಯವಗಳಿಂದ ಗಂಗೆಯು ಗೋಲೋಕದಲ್ಲಿ ವ್ಯಕ್ತಳಾದಳು. ಅವಳ ರೂಪಲಾವಣ್ಯ ಗಳನ್ನು ನೋಡಿ ಶ್ರೀಕೃಷ್ಣನು ಮೆಚ್ಚಿದನು. ಗಂಗೆಯು ಶ್ರೀಕೃಷ್ಣನಲ್ಲಿ ಅನುರಕ್ತ ಳಾದಳು. ಆ ಸಮಯಕ್ಕೆ ಸರಿಯಾಗಿ ರಾಧೆಯು ಶ್ರೀಕೃಷ್ಣನ ಹಿಂದಿನ ಚರ್ಯೆ ಗಳನ್ನೆಲ್ಲಾ ವ್ಯಕ್ತಗೊಳಿಸಿ, ವಿರಜಾ, ಶೋಭಾ, ಪ್ರಭಾ, ಶಾಂತಿ, ಕ್ಷಮೆ, ಮುಂತಾದ ದೇವಿಯರ ಸಂಗಮದ ಫಲವನ್ನು ಪ್ರಕಟಗೊಳಿಸಿ, ನೀನು ಗಂಗೆಯೊಡನೆ ಭೂಲೋಕಕ್ಕೆ ಹೋಗು ಎಂದಳು. ರಾಧಾದೇವಿಯು ಕುಪಿತಳಾಗಿರುವುದನ್ನು ತಿಳಿದು ಗಂಗೆಯು ದ್ರವರೂಪಳಾಗಿ ಶ್ರೀಕೃಷ್ಣನ ಪಾದಕಮಲಗಳಲ್ಲಿ ಐಕ್ಯಳಾದಳು. ಆಗ ಜಗತ್ತೆಲ್ಲವೂ ಶುಷ್ಕವಾಗಲು ಬ್ರಹ್ಮಾದಿ ಸಕಲ ದೇವತೆಗಳೂ ಶ್ರೀಕೃಷ್ಣನನ್ನು ಸ್ತೋತ್ರಮಾಡಿದರು. ಶ್ರೀಕೃಷ್ಣನು ಪ್ರಸನ್ನನಾಗಿ ಗಂಗೆಯು ರಾಧೆಯ ಭಯದಿಂದ ತನ್ನ ಪಾದಗಳಲ್ಲಿ ಐಕ್ಯವಾಗಿರುವಳೆಂದು ತಿಳಿಸಲು, ಬ್ರಹ್ಮನು ರಾಧಾದೇವಿಯನ್ನು ಸ್ತುತಿಸಿ, ಗಂಗೆಯ ವಿಷಯದಲ್ಲಿ ಪ್ರಸನ್ನಳಾಗಬೇಕೆಂದು ಬೇಡಿಕೊಂಡನು. ಅಂತೆಯೇ ರಾಧಾದೇವಿಯು ಶಾಂತಳಾಗಲು ಗಂಗೆಯು ಶ್ರೀಕೃಷ್ಣನ ಪಾದನಖ ಗಳಿಂದ ಹೊರಕ್ಕೆ ಬಂದಳು. ಆಗ ದ್ರವರೂಪಳಾದ ಗಂಗೆಯ ಸ್ವಲ್ಪಭಾಗವನ್ನು ಬ್ರಹ್ಮನು ತನ್ನ ಕಮಂಡಲುವಿನಲ್ಲಿ ಧರಿಸಿದನು. ಈಶ್ವರನು ತನ್ನ ಜಟಾಭಾರದಲ್ಲಿ ಸ್ವಲ್ಪಭಾಗವನ್ನು ಧರಿಸಿದನು. ಅನಂತರ ಗಂಗೆಯು ಬ್ರಹ್ಮನಿಂದ ರಾಧಾಮಂತ್ರೋಪ ದೇಶವನ್ನು ಪಡೆದು, ರಾಧಾದೇವಿಯನ್ನು ಪೂಜಿಸಿ ವೈಕುಂಠಕ್ಕೆ ತೆರಳಿದಳು. ಅಲ್ಲಿ ಲಕ್ಷ್ಮಿ, ತುಳಸಿ ಮತ್ತು ಸರಸ್ವತಿಯರಂತೆ ತಾನೂ ನಾರಾಯಣನಿಗೆ ಪ್ರಿಯಳಾಗಿ ದ್ದಳು. ಇತ್ತ ಪ್ರಪಂಚವೆಲ್ಲವೂ ಪ್ರಾಕೃತಿಕ ಪ್ರಳಯಕ್ಕೆ ಒಳಗಾಗಿರಲು, ಶ್ರೀಕೃಷ್ಣನು ಚತುರ್ಮುಖನಿಗೆ ಪುನಃ ಸೃಷ್ಟಿಮಾಡುವಂತೆ ಹೇಳಿ ಕಳುಹಿಸಿದನು. ಅದರಂತೆ ಬ್ರಹ್ಮನು ಜಗತ್ತನ್ನು ಸೃಜಿಸಿದನಂತರ ಗಂಗೆಯು ಮೊದಲಿನಂತೆ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡು ವಿಷ್ಣುವಿನ ಪಾದಗಳಿಂದ ವ್ಯಕ್ತಳಾಗಿ 'ವಿಷ್ಣುಪದೀ' ಎಂದು ಪ್ರಖ್ಯಾತಳಾದಳು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ದ್ವಾದಶೋಽಧ್ಯಾಯಃ ||

|| ನಾರದ ಉವಾಚ ||

ಲಕ್ಷ್ಮೀಃ ಸರಸ್ವತೀ ಗಂಗಾ ತುಲಸೀ ಲೋಕಪಾವನೀ ।
ಏತಾ ನಾರಾಯಣಸ್ಯೈವ ಚತಸ್ರಶ್ಚ ಪ್ರಿಯಾ ಇತಿ || ೧ ||

ಗಂಗಾ ಜಗಾಮ ವೈಕುಂಠಮಿದಮೇವ ಶ್ರುತಂ ಮಯಾ ।
ಕಥಂ ಸಾ ತಸ್ಯ ಪತ್ನೀ ಚ ಬಭೂವ ಬ್ರೂಹಿ ಕೇಶವ || ೨ ||

|| ನಾರಾಯಣ ಉವಾಚ ||

ಗಂಗಾ ಜಗಾಮ ವೈಕುಂಠಂ ತತ್ಪಶ್ಚಾಚ್ಚ ಗತೋ ವಿಧಿಃ ।
ಗತ್ವೋವಾಚ ತಯಾ ಸಾರ್ಧಂ ಪ್ರಣಮ್ಯ ಜಗದೀಶ್ವರಂ || ೩ ||

ಹನ್ನೆರಡನೆಯ ಅಧ್ಯಾಯವು

೧. ನಾರದ :—ಲಕ್ಷ್ಮಿ, ಸರಸ್ವತಿ, ಗಂಗೆ, ಲೋಕಪಾವನಿಯಾದ ತುಲಸಿ ಈ ನಾಲ್ವರೂ ನಾರಾಯಣನ ಪತ್ನಿಯರೆಂಬುದನ್ನು ಕೇಳಿದೆನು.

೨. ಗಂಗೆಯು ವೈಕುಂಠಲೋಕಕ್ಕೆ ತೆರಳಿದಳೆಂಬುದನ್ನು ಕೇಳಿದೆನು. ಅವಳು ನಾರಾಯಣನ ಪತ್ನಿಯಾದುದು ಹೇಗೆಂಬುದನ್ನು ನನಗೆ ಈಗ ವಿವರಿಸು.

೩. ನಾರಾಯಣಋಷಿ :—ಗಂಗೆಯೂ, ಅವಳ ಹಿಂದೆ ಬ್ರಹ್ಮನೂ ವೈಕುಂಠ ಲೋಕಕ್ಕೆ ಹೋಗಿ ನಾರಾಯಣನಿಗೆ ವಂದಿಸಿ ಇಂತು ನುಡಿದರು.

|| ಬ್ರಹ್ಮೋವಾಚ ||

ರಾಧಾ ಕೃಷ್ಣಾಂಗಸಂಭೂತಾ ಯಾ ದೇವೀ ದ್ರವರೂಪಿಣೀ ।
ತದಧಿಷ್ಠಾತೃದೇವೀಯಂ ರೂಪೇಣಾಪ್ರತಿಮಾ ಭುವಿ || ೪ ||

ನವಯೌವನಸಂಪನ್ನಾ ಸುಶೀಲಾ ಸುಂದರೀ ವರಾ ।
ಶುದ್ಧಸತ್ವಸ್ವರೂಪಾ ಚ ಕ್ರೋಧಾಹಂಕಾರವರ್ಜಿತಾ || ೫ ||

ಯದಂಗಸಂಭವಾ ನಾನ್ಯಂ ವೃಣೋತೀಯಂ ಚ ತಂ ವಿನಾ ।
ತತ್ರಾಪಿ ಮಾನಿನೀ ರಾಧಾ ಮಹಾತೇಜಸ್ವಿನೀ ವರಾ || ೬ ||

ಸಮುದ್ಯತಾ ಪಾತುಮಿಮಾಂ ಭೀತೇಯಂ ಬುದ್ಧಿಪೂರ್ವಕಂ ।
ವಿವೇಶ ಚರಣಾಂಭೋಜೇ ಕೃಷ್ಣಸ್ಯ ಪರಮಾತ್ಮನಃ || ೭ ||

ಸರ್ವಂ ವಿಶುಷ್ಕಂ ಗೋಲೋಕಂ ದೃಷ್ಟ್ವಾಹಮಗಮಂ ತದಾ ।
ಗೋಲೋಕಂ ಯತ್ರ ಕೃಷ್ಣಶ್ಚ ಸರ್ವವೃತ್ತಾಂತಲಬ್ಧಯೇ || ೮ ||

೪–೫. ಬ್ರಹ್ಮ:— ರಾಧಾಕೃಷ್ಣರ ಅವಯವದಿಂದ ಉತ್ಪನ್ನಳಾದವಳೂ, ದ್ರವರೂಪಳೂ, ದ್ರವಾಧಿಷ್ಠಾತೃದೇವತೆಯೂ ಆದ ಈ ಗಂಗೆಯು ಅಪ್ರತಿಮರೂಪವತಿಯೂ, ನವಯೌವನಸಂಪನ್ನಳೂ, ಸುಶೀಲೆಯೂ ಮತ್ತು ಸುಂದರಿಯೂ, ಕ್ರೋಧಾಹಂಕಾರ ವಿವರ್ಜಿತಳೂ, ಶುದ್ಧಸತ್ವಗುಣಸಂಪನ್ನಳೂ ಆಗಿರುವಳು.

೬–೭. ಕೃಷ್ಣನ ಅವಯವದಿಂದ ಉತ್ಪನ್ನಳಾದ ಇವಳು, ಕೃಷ್ಣನನ್ನು ಬಿಟ್ಟು ಬೇರಾರನ್ನೂ ವರಿಸಲೊಲ್ಲಳು. ಆದರೆ ಮಾನವತಿಯೂ, ಮಹಾತೇಜಸ್ವಿನಿಯೂ, ಆದ ರಾಧೆಯು ದ್ರವರೂಪಳಾದ ಈ ಗಂಗೆಯನ್ನು ಪಾನಮಾಡಲು ಯೋಚಿಸಿದಾಗ ಇವಳು ಭೀತಳಾಗಿ ಶ್ರೀಕೃಷ್ಣನ ಪಾದಕಮಲದಲ್ಲಿ ಅಡಗಿಕೊಂಡಳು.

೮. ಆಗ ಗೋಲೋಕವೆಲ್ಲಾ ಒಣಗಿಹೋದುದನ್ನು ನೋಡಿ, ಕೃಷ್ಣನೆಲ್ಲಿ? ಗೋಲೋಕವೆಲ್ಲಿ? ಎಂಬ ವೃತ್ತಾಂತವನ್ನು ತಿಳಿಯುವುದಕ್ಕಾಗಿ ನಾನು ಹೋದೆನು.

ಸರ್ವಾಂತರಾತ್ಮಾ ಸರ್ವಂ ನೋ ಜ್ಞಾತ್ವಾಭಿಪ್ರಾಯಮೇವ ಚ ।
ಬಹಿಶ್ಚಕಾರ ಗಂಗಾ ಚ ಪಾದಾಂಗುಷ್ಠ ನಖಾಗ್ರತಃ ॥ ೯ ॥

ದತ್ವಾಸ್ಯೈ ರಾಧಿಕಾಮಂತ್ರಂ ಪೂರಯಿತ್ವಾ ಚ ಗೋಲಕಂ ।
ಸಂಪ್ರಣಮ್ಯ ಚ ರಾಧೇಶಂ ಗೃಹೀತ್ವಾತ್ರಾಗಮಂ ವಿಭೋ ॥ ೧೦ ॥

ಗಾಂಧರ್ವೇಣ ವಿವಾಹೇನ ಗೃಹಾಣೇಮಾಂ ಸುರೇಶ್ವರೀಂ ।
ಸುರೇಶ್ವರಸ್ತ್ವಂ ರಸಿಕೋ ರಸಿಕಾಂ ರಸಭಾವನಃ ॥ ೧೧ ॥

ಪುಂರತ್ನಂ ಪುಂಸು ದೇವೇಷು ಸ್ತ್ರೀರತ್ನಂ ಸ್ತ್ರೀಷ್ವಿಯಂ ಸತೀ ।
ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ ಭವೇತ್ ॥ ೧೨ ॥

ಉಪಸ್ಥಿತಾಂ ಚ ಯಃ ಕನ್ಯಾಂ ನ ಗೃಹ್ಣಾತಿ ಮದೇನ ಚ ।
ತಂ ವಿಹಾಯ ಮಹಾಲಕ್ಷ್ಮೀ ರುಷ್ಟಾ ಯಾತಿ ನ ಸಂಶಯಃ ॥ ೧೩ ॥

---

೯. ಸರ್ವಾಂತರ್ಯಾಮಿಯಾದ ಶ್ರೀಕೃಷ್ಣಪರಮಾತ್ಮನು ನನ್ನ ಮನೋಭಿಪ್ರಾಯವನ್ನು ತಿಳಿದು ತನ್ನ ಪಾದದ ಹೆಬ್ಬೆರಳಿನ ಉಗುರುಸಂದಿನಿಂದ ಗಂಗೆಯನ್ನು ಹೊರಗೆ ಕಳುಹಿಸಿದನು.

೧೦. ಅನಂತರ ಗಂಗೆಗೆ ರಾಧಾಮಂತ್ರೋಪದೇಶವನ್ನು ಕೊಟ್ಟು, ವಿಶ್ವಗೋಳಕವನ್ನೆಲ್ಲ ನೀರಿನಿಂದ ತುಂಬಿಸಿ ರಾಧಾಪತಿಗೆ ವಂದಿಸಿ ಗಂಗೆಯೊಡನೆ ಇಲ್ಲಿಗೆ ನಾನು ಬಂದೆನು.

೧೧. ಸುರೇಶ್ವರನೂ, ರಸಿಕರಿಗೆಲ್ಲ ಶ್ರೇಷ್ಠನೂ, ಆದನೀನು ಸುರೇಶ್ವರಿಯಾದ ಈ ಗಂಗೆಯನ್ನು ಗಾಂಧರ್ವವಿವಾಹದಿಂದ ಸ್ವೀಕರಿಸು.

೧೨. ಪುರುಷದೇವತೆಗಳಲ್ಲೆಲ್ಲ ನೀನು ಶ್ರೇಷ್ಠನಾಗಿರುವಂತೆ ಈ ಗಂಗೆಯು ಸ್ತ್ರೀಯರಲ್ಲೆಲ್ಲ ಶ್ರೇಷ್ಠಳು. ವಿದಗ್ಧೆಯಾದ ಸ್ತ್ರೀಯು ವಿದಗ್ಧನಾದ ಪುರುಷನೊಡನೆ ಸಂಗಮಿಸುವುದು ನ್ಯಾಯವಲ್ಲವೇ?

೧೩. ಯಾವ ಪುರುಷನು ಅಹಂಕಾರದಿಂದ ತನ್ನ ಸಮೀಪಕ್ಕೆ ಬಂದ ಕನ್ಯೆಯನ್ನು ಸ್ವೀಕರಿಸುವುದಿಲ್ಲವೋ ಅವನ ವಿಷಯದಲ್ಲಿ ಕುಪಿತಳಾದ ಮಹಾಲಕ್ಷ್ಮಿಯು ಅವನನ್ನು ಬಿಟ್ಟು ದೂರ ಹೋಗುವಳು.

ಯೋ ಭವೇತ್ ಪಂಡಿತಃ ಸೋಽಪಿ ಪ್ರಕೃತಿಂ ನಾವಮನ್ಯತೇ ।
ಸರ್ವೇ ಪ್ರಾಕೃತಿಕಾಃ ಪುಂಸಃ ಕಾಮಿನ್ಯಃ ಪ್ರಕೃತೇಃ ಕಲಾಃ ॥ ೧೪ ॥

ತ್ವಮೇವ ಭಗವಾನಾದ್ಯೋ ನಿರ್ಗುಣಃ ಪ್ರಕೃತೇಃ ಪರಃ ।
ಅರ್ಧಾಂಗೋ ದ್ವಿಭುಜಃ ಕೃಷ್ಣೋಽಪ್ಯರ್ಧಾಂಗೇನ ಚತುರ್ಭುಜಃ ॥ ೧೫ ॥

ಕೃಷ್ಣವಾಮಾಂಗಸಂಭೂತಾ ಪರಮಾ ರಾಧಿಕಾ ಪುರಾ ।
ದಕ್ಷಿಣಾಂಗಾತ್ಸ್ವಯಂ ಸಾ ಚ ವಾಮಾಂಗಾತ್ಕಮಲಾ ಯಥಾ ॥ ೧೬ ॥

ತೇನ ತ್ವಾಂ ಸಾ ವೃಣೋತ್ಯೇವ ಯತಸ್ತ್ವದ್ದೇಹಸಂಭವಾ ।
ಸ್ತ್ರೀಪುಂಸೌ ವೈ ತಥೈಕಾಂಗೌ ಯಥಾಪ್ರಕೃತಿಪೂರುಷೌ ॥ ೧೭ ॥

---

೧೪. ಎಲ್ಲ ಪುರುಷರೂ ಪ್ರಾಕೃತಸೃಷ್ಟಿಗೆ ಒಳಗಾಗಿರುವುದರಿಂದಲೂ, ಸ್ತ್ರೀಯರೆಲ್ಲರೂ ಪ್ರಕೃತಿಯ ಕಲೆಯಿಂದ ಹುಟ್ಟಿರುವುದರಿಂದಲೂ, ಪಂಡಿತನಾದವನು ಪ್ರಕೃತಿರೂಪಳಾದ ಸ್ತ್ರೀಯನ್ನು ಅವಮಾನಗೊಳಿಸುವುದಿಲ್ಲ.

೧೫. ಪರಮಪುರುಷನ ಅರ್ಧಾಂಗದಿಂದ ದ್ವಿಭುಜನಾದ ಶ್ರೀಕೃಷ್ಣನೂ, ಉಳಿದ ಅರ್ಧಾಂಗದಿಂದ ಚತುರ್ಭುಜನಾದ ನೀನೂ ವ್ಯಕ್ತವಾದುದರಿಂದ ನಿರ್ಗುಣನೂ, ಪ್ರಕೃತಿಗಿಂತ ಪರನೂ ಆದ ಭಗವಂತನೂ ನೀನೇ ಆಗಿರುವೆ.

೧೬. ಶ್ರೀಕೃಷ್ಣನ ವಾಮಾರ್ಧಾಂಗದಿಂದ ರಾಧೆಯು ವ್ಯಕ್ತವಾದಂತೆ, ಅವನ ದಕ್ಷಿಣಾರ್ಧಸ್ವರೂಪನಾದ ನಿನ್ನ ವಾಮಾರ್ಧಾಂಗದಿಂದ ಲಕ್ಷ್ಮಿಯೂ, ಗಂಗೆಯೂ ವ್ಯಕ್ತವಾದರು.

೧೭. ಪ್ರಕೃತಿಪುರುಷರಂತೆ ಸ್ತ್ರೀಪುರುಷರೂ ಏಕಾಂಗಿಗಳಾದುದರಿಂದಲೂ, ಗಂಗೆಯು ನಿನ್ನ ದೇಹಾರ್ಧದಿಂದ ವ್ಯಕ್ತಳಾದುದರಿಂದಲೂ, ಆಕೆಯು ನಿನ್ನನ್ನೇ ವರಿಸಿರುವಳು.

ಇತ್ಯೇವಮುಕ್ತ್ವಾ ಧಾತಾ ಚ ತಾಂ ಸಮರ್ಪ್ಯ ಜಗಾಮ ಸಃ |
ಗಾಂಧರ್ವೇಣ ವಿವಾಹೇನ ತಾಂ ಜಗ್ರಾಹ ಹರಿಃ ಸ್ವಯಂ || ೧೮ ||

ಶಯ್ಯಾಂ ರತಿಕರೀಂ ಕೃತ್ವಾ ಪುಷ್ಪಚಂದನಚರ್ಚಿತಾಂ |
ರೇಮೇ ರಮಾಪತಿಸ್ತತ್ರ ಗಂಗಯಾ ಸಹಿತೋ ಮುದಾ || ೧೯ ||

ಗಾಂ ಪೃಥ್ವೀಂ ಚ ಗತಾ ಯಸ್ಮಾತ್ಸ್ವಸ್ಥಾನಂ ಪುನರಾಗತಾ |
ನಿರ್ಗತಾ ವಿಷ್ಣುಪಾದಾಚ್ಚ ಗಂಗಾ ವಿಷ್ಣುಪದೀ ಸ್ಮೃತಾ || ೨೦ ||

ಮೂರ್ಛಾಂ ಸಂಪ್ರಾಪ ಸಾ ದೇವೀ ನವಸಂಗಮಮಾತ್ರತಃ |
ರಸಿಕಾ ಸುಖಸಂಭೋಗಾದ್ರಸಿಕೇಶ್ವರಸಂಯುತಃ || ೨೧ ||

---

೧೮. ಇಂತು ನುಡಿದು ಗಂಗೆಯನ್ನು ನಾರಾಯಣನಿಗೆ ಸಮರ್ಪಿಸಿ, ಬ್ರಹ್ಮನು ಹಿಂದಿರುಗಿದನು. ಶ್ರೀಮನ್ನಾರಾಯಣನೂ ಕೂಡ ಆಕೆಯನ್ನು ಗಾಂಧರ್ವವಿವಾಹ ಕ್ರಮದಿಂದ ಸ್ವೀಕರಿಸಿದನು.

೧೯. ದಿವ್ಯಪುಷ್ಪಗಳಿಂದಲೂ, ದಿವ್ಯಗಂಧಗಳಿಂದಲೂ ಅಲಂಕೃತವಾಗಿ ರತಿಯೋಗ್ಯವಾದ, ಶಯ್ಯೆಯನ್ನು ಕಲ್ಪಿಸಿ, ಗಂಗೆಯೊಡನೆ ಶ್ರೀಮನ್ನಾರಾಯಣನು ಸಂತೋಷದಿಂದ ರಮಿಸಿದನು.

೨೦. ' ಗಾಂ ' ಎಂದರೆ ಭೂಮಿಗೆ ' ಗ ' ಎಂದರೆ ಇಳಿದುಬಂದು, ಪುನಃ ಸ್ವಸ್ಥಾನಕ್ಕೆ ಹಿಂತಿರುಗಿದುದರಿಂದ ಆಕೆಗೆ ' ಗಂಗಾ ' ಎಂದೂ, ವಿಷ್ಣುವಿನ ಪಾದ ಕಮಲದಿಂದ ಅವತರಿಸಿದುದರಿಂದ ' ವಿಷ್ಣುಪದೀ ' ಎಂದೂ ಹೆಸರಾಯಿತು.

೨೧. ರಸಿಕಳಾದ ಆ ಗಂಗೆಯು ರಸಿಕರಾಜನಾದ ನಾರಾಯಣನೊಡನೆ ನವಸಂಗಮದ ಸುಖಸಂಭೋಗದಿಂದ ಮೂರ್ಛೆಹೊಂದಿದಳು.

ತದ್ದೃಷ್ಟ್ವಾ ದುಃಖಿತಾ ವಾಣೀ ಸಾಪತ್ನ್ಯೇಽಷ್ಯಾರ್ ವಿವರ್ಜಿತಾ ।
ನಿತ್ಯಮಿಾಷ್ಯ್ಕರ್ತಿ ತಾಂ ವಾಣೀ ನ ಚ ಗಂಗಾ ಸರಸ್ವತೀಂ ॥ ೨೨ ॥

ಗಂಗಯಾ ಸಹಿತಸ್ಯೈವ ತಿಸ್ರೋ ಭಾರ್ಯಾ ರಮಾಪತೇಃ ।
ಸಾರ್ಧಂ ತುಲಸ್ಯಾ ಪಶ್ಚಾಚ್ಚ ಚತಸ್ರೋ ಹ್ಯಭವನ್ಮುನೇ ॥ ೨೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಗಂಗೋಪಾಖ್ಯಾನಂ ನಾಮ
ದ್ವಾದಶೋಽಧ್ಯಾಯಃ

---

೨೨. ಸಪತ್ನಿಯರಲ್ಲಿ ಅಸೂಯಾಪರಳಾದ ಸರಸ್ವತಿಯು ನಾರಾಯಣನು ಪುನಃ ಗಂಗೆಯನ್ನು ಸ್ವೀಕರಿಸಿದನೆಂದು ತಿಳಿದು ಹೊಟ್ಟೆಕಿಚ್ಚು ಪಟ್ಟಳು. ಆದರೆ ಗಂಗೆಯು ಮಾತ್ರ ಅವಳನ್ನು ಕಂಡು ಅಸೂಯೆಪಡಲಿಲ್ಲ.

೨೩. ಶ್ರೀಮನ್ನಾರಾಯಣನಿಗೆ ಸರಸ್ವತಿ ಮತ್ತು ಲಕ್ಷ್ಮಿಯರ ಜೊತೆಗೆ ಗಂಗೆಯೂ ಸೇರಿ ಮೂವರು ಪತ್ನಿಯರಾದರು. ಮುಂದೆ ತುಲಸೀದೇವಿಯನ್ನೂ ಮದುವೆಯಾದುದರಿಂದ ನಾರಾಯಣನಿಗೆ ಒಟ್ಟು ನಾಲ್ವರು ಪತ್ನಿಯರಾದರು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ನಾರಾಯಣನಾರದ ಸಂವಾದರೂಪವಾದ
ಪ್ರಕೃತಿಖಂಡದಲ್ಲಿ ಗಂಗೋಪಾಖ್ಯಾನರೂಪವಾದ ಹನ್ನೆರಡನೆಯ
ಅಧ್ಯಾಯವು ಮುಗಿದುದು.

ಹನ್ನೆರಡನೆಯ ಅಧ್ಯಾಯದ ಸಾರಾಂಶವು

ಗಂಗೆಯೊಡನೆ ಬ್ರಹ್ಮನು ವೈಕುಂಠಕ್ಕೆ ಹೋಗಿ 'ಸರಸ್ವತಿಯ ಶಾಪವನ್ನು ಅನುಭವಿಸಿ ಈಗ ಪವಿತ್ರತಮಳಾಗಿರುವ ಗಂಗೆಯನ್ನು ಪತ್ನಿಯಾಗಿ ಸ್ವೀಕರಿಸಬೇಕು' ಎಂಬುದಾಗಿ ನಾರಾಯಣನಿಗೆ ಹೇಳಿದನು. ಅದರಂತೆಯೇ ನಾರಾಯಣನು ಗಂಗೆಯನ್ನು ಸ್ವೀಕರಿಸಿ ಆಕೆಯೊಡನೆ ಸುಖಸಂತೋಷದಿಂದಿದ್ದನು.

ಸರಸ್ವತಿಗೆ ಮಾತ್ರ ಆಗಲೂ ಅವರಿಬ್ಬರ ಪ್ರೇಮವನ್ನು ಸಹಿಸಲಾಗುತ್ತಿರಲಿಲ್ಲ. ಶ್ರೀಮನ್ನಾರಾಯಣನು ಸರಸ್ವತಿ, ಲಕ್ಷ್ಮಿ, ಮತ್ತು ಗಂಗೆ ಈ ಮೂವರ ಜೊತೆಗೆ ತುಲಸೀದೇವಿಯನ್ನೂ ಸ್ವೀಕರಿಸಿ ಎಲ್ಲರಲ್ಲಿಯೂ ಸಮನಾದ ಪ್ರೇಮವನ್ನಿಟ್ಟಿದ್ದನು.

—|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ತ್ರಯೋದಶೋಽಧ್ಯಾಯಃ ||

|| ನಾರದ ಉವಾಚ ||

ನಾರಾಯಣಪ್ರಿಯಾ ಸಾಧ್ವೀ ಕಥಂ ಸಾ ಚ ಬಭೂವ ಹ |
ತುಲಸೀ ಕುತ್ರ ಸಂಭೂತಾ ಕಾ ವಾ ಸಾ ಪೂರ್ವಜನ್ಮನಿ || ೧ ||

ಕಸ್ಯ ವಾ ಸಾ ಕುಲೇ ಜಾತಾ ಕಸ್ಯ ಕನ್ಯಾ ತಪಸ್ವಿನೀ |
ಕೇನ ವಾ ತಪಸಾ ಸಾ ಚ ಸಂಪ್ರಾಪ ಪ್ರಕೃತೇಃ ಪರಂ || ೨ ||

ನಿರ್ವಿಕಲ್ಪಂ ನಿರೀಹಂ ಚ ಸರ್ವಸಾಕ್ಷಿಸ್ವರೂಪಕಂ |
ನಾರಾಯಣಂ ಪರಬ್ರಹ್ಮ ಪರಮಾತ್ಮಾನಮೀಶ್ವರಂ || ೩ ||

ಹದಿಮೂರನೆಯ ಅಧ್ಯಾಯವು

೧. ನಾರದ :— ಸಾಧ್ವೀಮಣಿಯಾದ ತುಲಸಿಯು ನಾರಾಯಣನ ಪತ್ನಿಯಾದುದು ಹೇಗೆ? ಅವಳು ಎಲ್ಲಿ ಅವತರಿಸಿದಳು ? ಪೂರ್ವಜನ್ಮದಲ್ಲಿ ಅವಳು ಯಾರಾಗಿದ್ದಳು ?

೨. ಆಕೆಯು ಯಾರ ಕುಲದಲ್ಲಿ, ಯಾರ ಕನ್ಯೆಯಾಗಿ ಅವತರಿಸಿ, ತಪಸ್ವಿನಿಯಾಗಿ, ತನ್ನ ತಪೋಮಹಿಮೆಯಿಂದ ಪ್ರಕೃತಿಗಿಂತಲೂ ಶ್ರೇಷ್ಠನಾದ ಶ್ರೀಮನ್ನಾರಾಯಣನನ್ನು ಹೇಗೆ ಪಡೆದಳು ?

೩–೪. ನಿರ್ವಿಕಲ್ಪನೂ, ಇಚ್ಛಾರಹಿತನೂ, ಸಕಲಕ್ಕೂ ಸಾಕ್ಷಿಸ್ವರೂಪನೂ, ಪರಮಾತ್ಮನೂ, ಸರ್ವಪೂಜಿತನೂ, ಸರ್ವೇಶನೂ, ಸರ್ವಕಾರಣನೂ, ಸರ್ವಜ್ಞನೂ,

ಸರ್ವಾರಾಧ್ಯಂ ಚ ಸರ್ವೇಶಂ ಸರ್ವಜ್ಞಂ ಸರ್ವಕಾರಣಂ ।
ಸರ್ವಾಧಾರಂ ಸರ್ವರೂಪಂ ಸರ್ವೇಷಾಂ ಪರಿಪಾಲಕಂ ॥ ೪ ॥

ಕಥಮೇತಾದೃಶೀ ದೇವೀ ವೃಕ್ಷತ್ವಂ ಸಮವಾಪ ಹ ।
ಕಥಂ ಸಾಪ್ಯಸುರಗ್ರಸ್ತಾ ಸಂಬಭೂವ ತಪಸ್ವಿನೀ ॥ ೫ ॥

ಸಂದಿಗ್ಧಂ ಮೇ ಮನೋಲೋಲಂ ಪ್ರೇರಯೇನ್ಮಾಂ ಮುಹುರ್ಮುಹುಃ ।
ಛೇತ್ತುಮರ್ಹಸಿ ಸಂದೇಹಂ ಸರ್ವಸಂದೇಹಭಂಜನ ॥ ೬ ॥

॥ ನಾರಾಯಣ ಉವಾಚ ॥

ಮನುಶ್ಚ ದಕ್ಷಸಾವರ್ಣೇಃ ಪುಣ್ಯವಾನ್ವೈಷ್ಣವಃ ಶುಚಿಃ ।
ಯಶಸ್ವೀ ಕೀರ್ತಿಮಾಂಶ್ಚೈವ ವಿಷ್ಣೋರಂಶಸಮುದ್ಭವಃ ॥ ೭ ॥

ತತ್ಪುತ್ರೋ ಧರ್ಮಸಾವರ್ಣಿರ್ಧರ್ಮಿಷ್ಠೋ ವೈಷ್ಣವಃ ಶುಚಿಃ ।
ತತ್ಪುತ್ರೋ ವಿಷ್ಣುಸಾವರ್ಣಿರ್ವೈಷ್ಣವಶ್ಚ ಜಿತೇಂದ್ರಿಯಃ ॥ ೮ ॥

ಸರ್ವಾಧಾರನೂ, ಸರ್ವರೂಪನೂ, ಸರ್ವಪರಿಪಾಲಕನೂ ಆದ ಶ್ರೀಮನ್ನಾರಾಯಣನನ್ನು ತುಲಸಿಯು ಪಡೆದುದೆಂತು ?

೫. ಇಂಥ ಪುಣ್ಯವತಿಯಾದ ದೇವಿಯು ವೃಕ್ಷರೂಪವನ್ನು ಪಡೆದುದು ಹೇಗೆ? ತಪಸ್ವಿನಿಯಾದ ಆಕೆಯು ರಾಕ್ಷಸಗ್ರಸ್ತಳಾಗಲು ಕಾರಣವೇನು?

೬. ಸಂಶಯಗ್ರಸ್ತವಾಗಿ ಚಂಚಲವಾದ ನನ್ನ ಮನಸ್ಸು ಬಾರಿಬಾರಿಗೂ ನನ್ನನ್ನು ಪ್ರಶ್ನೆಮಾಡುವಂತೆ ಪ್ರೇರಿಸುತ್ತಿದೆ. ಎಲ್ಲರ ಸಂದೇಹವನ್ನು ಪರಿಹರಿಸಬಲ್ಲ ನೀನು ನನ್ನ ಸಂಶಯವನ್ನು ಪರಿಹರಿಸು.

೭-೮. ನಾರಾಯಣ ಋಷಿ :—ಪೂರ್ವದಲ್ಲಿ ವಿಷ್ಣುವಿನ ಅಂಶೋದ್ಭವನೂ, ಪರಮವೈಷ್ಣವನೂ, ಪುಣ್ಯವಂತನೂ, ಕೀರ್ತಿವಂತನೂ ಆದ ದಕ್ಷಸಾವರ್ಣಿ ಎಂಬವನು ಇದ್ದನು. ಅವನಿಗೆ ಧರ್ಮಿಷ್ಠನೂ, ಪರಮ ವೈಷ್ಣವನೂ, ಆದ ಧರ್ಮಸಾವರ್ಣಿ ಎಂಬುವನೂ, ಅವನಿಗೆ ಜಿತೇಂದ್ರಿಯನೂ, ವೈಷ್ಣವನೂ ಆದ ವಿಷ್ಣುಸಾವರ್ಣಿ ಎಂಬುವನೂ ಕ್ರಮವಾಗಿ ಮಕ್ಕಳಾದರು.

ತತ್ಪುತ್ರೋ ದೇವಸಾವರ್ಣಿರ್ವಿಷ್ಣುವ್ರತಪರಾಯಣಃ ।
ತತ್ಪುತ್ರೋ ರಾಜಸಾವರ್ಣಿರ್ಮಹಾವಿಷ್ಣುಪರಾಯಣಃ ॥ ೯ ॥

ವೃಷಧ್ವಜಶ್ಚ ತತ್ಪುತ್ರೋ ವೃಷಧ್ವಜಪರಾಯಣಃ ।
ಯಸ್ಯಾಶ್ರಮೇ ಸ್ವಯಂ ಶಂಭುರಾಸೀದ್ದೈವಯುಗತ್ರಯಂ ॥ ೧೦ ॥

ಪುತ್ರಾದಪಿ ಪರಃ ಸ್ನೇಹೋ ನೃಪೇ ತಸ್ಮಿಂಚ್ಛಿವಸ್ಯ ಚ ।
ನ ಚ ನಾರಾಯಣಂ ಮೇನೇ ನ ಚ ಲಕ್ಷ್ಮೀಂ ಸರಸ್ವತೀಂ ॥ ೧೧ ॥

ಪೂಜಾಂ ಚ ಸರ್ವದೇವಾನಾಂ ದೂರೀಭೂತಾಂ ಚಕಾರ ಸಃ ।
ಭಾದ್ರೇ ಮಾಸಿ ಮಹಾಲಕ್ಷ್ಮೀಪೂಜಾಂ ಮತ್ತೋತ್ಯಜನ್ನೃಪಃ ॥ ೧೨ ॥

---

೯. ಹಾಗೆಯೇ ವಿಷ್ಣುವ್ರತಪರಾಯಣನಾದ ದೇವಸಾವರ್ಣಿ ಎಂಬುವನು ವಿಷ್ಣುಸಾವರ್ಣಿಗೂ, ವಿಷ್ಣುಭಕ್ತನಾದ ರಾಜಸಾವರ್ಣಿಯು ದೇವಸಾವರ್ಣಿಗೂ ಮಕ್ಕಳಾಗಿ ಜನಿಸಿದರು.

೧೦. ಆ ರಾಜಸಾವರ್ಣಿಗೆ ವೃಷಧ್ವಜನೆಂಬುವನು ಮಗನಾಗಿ ಹುಟ್ಟಿ ವೃಷಭಧ್ವಜನ (ಈಶ್ವರನ) ಪರಮಭಕ್ತನಾಗಿದ್ದನು. ಅವನ ಆಶ್ರಮದಲ್ಲಿ ಸ್ವತಃ ಈಶ್ವರನೇ ಮೂರು ದೇವಯುಗಗಳ ಕಾಲ ವಾಸವಾಗಿದ್ದನು.

೧೧. ಶಿವನಿಗೆ ಆ ವೃಷಧ್ವಜನಲ್ಲಿ ತನ್ನ ಮಗನಿಗಿಂತಲೂ ಹೆಚ್ಚು ಪ್ರೇಮವಿದ್ದಿತು. ಆದ್ದರಿಂದ ಆ ರಾಜನು ನಾರಾಯಣನನ್ನಾಗಲೀ ಲಕ್ಷ್ಮಿ ಸರಸ್ವತಿಯರನ್ನಾಗಲೀ ಪೂಜಿಸುವುದನ್ನೇ ಬಿಟ್ಟನು.

೧೨. ಈಶ್ವರನ ಭಕ್ತನೆಂದು ತಿಳಿದು ಮದಿಸಿಹೋದ ಆ ರಾಜನು ಎಲ್ಲ ದೇವರನ್ನೂ ದೂರಮಾಡಿ ಭಾದ್ರಪದ ಮಾಸದಲ್ಲಿ ಮಾಡಬೇಕಾದ ಮಹಾಲಕ್ಷ್ಮಿಯ ಪೂಜೆಯನ್ನೂ ತ್ಯಜಿಸಿದನು.

ಮಾಘೇ ಸರಸ್ವತೀಪೂಜಾಂ ದೂರೀಭೂತಾಂ ಚಕಾರ ಸಃ ।
ಯಜ್ಞಂ ಚ ವಿಷ್ಣುಪೂಜಾಂ ಚ ನಿನಿಂದೇ ನ ಚಕಾರ ಸಃ ॥ ೧೩ ॥

ನ ಕೋಽಪಿ ದೇವೋ ಭೂಪೇಂದ್ರಂ ಶಶಾಪ ಶಿವಕಾರಣಾತ್ ।
ಭ್ರಷ್ಟಶ್ರೀರ್ಭವ ಭೂಪೇತಿ ಚಾಶಪತ್ತಂ ದಿವಾಕರಃ ॥ ೧೪ ॥

ಶೂಲಂ ಗೃಹೀತ್ವಾ ತಂ ಸೂರ್ಯಂ ಧೃತವಾಂಚ್ಛಂಕರಃ ಸ್ವಯಂ ।
ಪಿತ್ರಾ ಸಾರ್ಧಂ ದಿನೇಶಶ್ಚ ಬ್ರಹ್ಮಾಣಂ ಶರಣಂ ಯಯೌ ॥ ೧೫ ॥

ಶಿವಸ್ತ್ರಿಶೂಲಹಸ್ತಶ್ಚ ಬ್ರಹ್ಮಲೋಕಂ ಯಯೌ ಕ್ರುಧಾ ।
ಬ್ರಹ್ಮಾ ಸೂರ್ಯಂ ಪುರಸ್ಕೃತ್ಯ ವೈಕುಂಠಂ ಚ ಯಯೌ ಭಿಯಾ ॥ ೧೬ ॥

---

೧೩. ಅಂತೆಯೇ ಮಾಘಮಾಸದಲ್ಲಿ ಮಾಡಬೇಕಾದ ಸರಸ್ವತಿಯ ಪೂಜೆಯನ್ನೂ, ನಿತ್ಯಕರ್ಮವಾದ ಪಂಚಯಜ್ಞವನ್ನೂ, ವಿಷ್ಣುಪೂಜೆಯನ್ನೂ ಕೂಡ ದೂರಮಾಡಿ ಅವುಗಳನ್ನು ನಿಂದಿಸಲಾರಂಭಿಸಿದನು.

೧೪. ಆದರೆ ಪರಮೇಶ್ವರನ ಅನುಗ್ರಹವಿದ್ದುದರಿಂದ ಯಾವ ದೇವರೂ ಅವನಿಗೆ ಶಾಪಕೊಡಲಾಗಲಿಲ್ಲ. ಆಗ ಸರ್ವಾತ್ಮಕನಾದ ಸೂರ್ಯನು ಕೋಪಗೊಂಡು,–'ಎಲೈ ರಾಜನೆ, ನಿನ್ನ ಸಕಲೈಶ್ವರ್ಯವೂ ನಾಶವಾಗಲಿ' ಎಂದು ಶಾಪವಿತ್ತನು.

೧೫. ಆಗ ಶಂಕರನು ಶೂಲಾಯುಧವನ್ನು ಧರಿಸಿ ತನ್ನ ಭಕ್ತನಿಗೆ ಶಾಪ ಕೊಟ್ಟ ತಪ್ಪಿಗಾಗಿ ಸೂರ್ಯನನ್ನು ನಿಗ್ರಹಿಸಲು ಹೊರಟನು. ಆಗ ಸೂರ್ಯನು ತನ್ನ ತಂದೆಯಾದ ಕಶ್ಯಪನೊಡನೆ ಹೋಗಿ ಬ್ರಹ್ಮನನ್ನು ಮರೆಹೊಕ್ಕನು.

೧೬. ತ್ರಿಶೂಲಧಾರಿಯಾದ ಶಿವನು ಕುಪಿತನಾಗಿ ಬ್ರಹ್ಮಲೋಕಕ್ಕೆ ಹೋದನು. ಬ್ರಹ್ಮನೂ ಶಿವನಿಗೆ ಹೆದರಿ ಸೂರ್ಯನನ್ನು ಕರೆದುಕೊಂಡು ವೈಕುಂಠಕ್ಕೆ ತೆರಳಿದನು.

ಶೂಲಂ ಗೃಹೀತ್ವಾ ತತ್ರಾಪಿ ಧೃತವಾಂಚ್ಛಂಕರೋ ರವಿಂ ।
ಬ್ರಹ್ಮಕಶ್ಯಪಮಾರ್ತಂಡಾಃ ಸಂತ್ರಸ್ತಾಃ ಶುಷ್ಕತಾಲುಕಾಃ ॥ ೧೭ ॥

ನಾರಾಯಣಂ ಚ ಸರ್ವೇಶಂ ತೇ ಯಯುಃ ಶರಣಂ ಭಿಯಾ ।
ಮೂರ್ಧ್ನಾ ಪ್ರಣೇಮುಸ್ತೇ ಗತ್ವಾ ತುಷ್ಟುವುಶ್ಚ ಪುನಃ ಪುನಃ ॥ ೧೮ ॥

ಸರ್ವೇ ನಿವೇದನಂ ಚಕ್ರುರ್ಭಿಯಸ್ತೇ ಕಾರಣಂ ಹರೌ ॥ ೧೯ ॥

ನಾರಾಯಣಶ್ಚ ಕೃಪಯಾಭಯಂ ತೇಭ್ಯೋ ದದೌ ಮುನೇ ।
ಸ್ಥಿರಾ ಭವತ ಹೇ ಭೀತಾ ಭಯಂ ಕಿಂ ವೋ ಮಯಿ ಸ್ಥಿತೇ ॥ ೨೦ ॥

ಸ್ಮರಂತಿ ಯೇ ಯತ್ರ ತತ್ರ ಮಾಂ ವಿಪತ್ತೌ ಭಯಾನ್ವಿತಾಃ ।
ತಾಂಸ್ತತ್ರಗತ್ವಾ ರಕ್ಷಾಮಿ ಚಕ್ರಹಸ್ತಸ್ತ್ವರಾನ್ವಿತಃ ॥ ೨೧ ॥

೧೭–೧೮. ಅಲ್ಲೂ ಕೂಡ ತ್ರಿಶೂಲಧಾರಿಯಾದ ಶಂಕರನು ಸೂರ್ಯನನ್ನು ಅನುಸರಿಸಿ ಬಂದನು. ಆಗ ಭಯಗೊಂಡ ಬ್ರಹ್ಮ, ಕಶ್ಯಪ, ಮತ್ತು ಸೂರ್ಯ ಈ ಮೂವರೂ ಒಣಗಿಹೋದ ಗಂಟಲಿನಿಂದ ಸರ್ವೇಶ್ವರನಾದ ನಾರಾಯಣನನ್ನು ಹೊಗಳಲಾರದೆ ಶರಣುಹೋದರು. ತಲೆತಗ್ಗಿಸಿ ನಮಸ್ಕರಿಸಿ, ಸ್ವಲ್ಪ ಹೊತ್ತಿನ ಮೇಲೆ ನಾರಾಯಣನನ್ನು ಸ್ತುತಿಸಲಾರಂಭಿಸಿದರು.

೧೯. ಇವರ ಸ್ತೋತ್ರಕ್ಕೆ ಮೆಚ್ಚಿ ಪ್ರಸನ್ನನಾದ ನಾರಾಯಣನಿಗೆ ಎಲ್ಲರೂ ತಮ್ಮ ಭಯದ ಕಾರಣವನ್ನು ತಿಳಿಸಿದರು.

೨೦. ಎಲೈ, ನಾರದಮುನಿಯೇ, ಸರ್ವೇಶ್ವರನೂ, ದಯಾಮಯನೂ ಆದ ನಾರಾಯಣನೂ ಕೂಡ 'ನಾನಿರುವಾಗ ನಿಮಗೇತರ ಭಯ? ನೀವು ಸ್ಥಿರವಾಗಿರಿ' ಎಂದು ಅಭಯದಾನಮಾಡಿದನು.

೨೧. ವಿಪತ್ಕಾಲದಲ್ಲಿ ಭಯಗ್ರಸ್ತರಾಗಿ ಯಾರು ಎಲ್ಲಿದ್ದುಕೊಂಡು ನನ್ನನ್ನು ಸ್ಮರಿಸಿದರೂ ಕೂಡ ನಾನು ಚಕ್ರಹಸ್ತನಾಗಿ ಆತುರದಿಂದ ಅವರಿದ್ದಲ್ಲಿಗೇ ಹೋಗಿ ರಕ್ಷಣೆಮಾಡುವೆನು.

ಪಾತಾಹಂ ಜಗತಾಂ ದೇವಃ ಕರ್ತಾಹಂ ಸತತಂ ಸದಾ ।
ಸ್ರಷ್ಟಾ ಚ ಬ್ರಹ್ಮರೂಪೇಣ ಸಂಹರ್ತಾ ಶಿವರೂಪತಃ || ೨೨ ||

ಶಿವೋಽಹಂ ತ್ವಮಹಂ ಚಾಪಿ ಸೂರ್ಯೋಽಹಂ ತ್ರಿಗುಣಾತ್ಮಕಃ ।
ವಿಧಾಯ ನಾನಾರೂಪಂ ಚ ಕುರ್ಯಾಂ ಸೃಷ್ಟ್ಯಾದಿಕಾಃ ಕ್ರಿಯಾಃ || ೨೩ ||

ಯೂಯಂ ಗಚ್ಛತ ಭದ್ರಂ ವೋ ಭವಿಷ್ಯತಿ ಭಯಂ ಕುತಃ ।
ಅದ್ಯ ಪ್ರಭೃತಿ ವೋ ನಾಸ್ತಿ ಮದ್ವರಾಚ್ಛಂಕರಾದ್ಭಯಂ || ೨೪ ||

ಆಶುತೋಷಃ ಸ ಭಗವಾಂಚ್ಛಂಕರಶ್ಚ ಸತಾಂ ಗತಿಃ ।
ಭಕ್ತಾಧೀನಶ್ಚ ಭಕ್ತೇಶೋ ಭಕ್ತಾತ್ಮಾ ಭಕ್ತವತ್ಸಲಃ || ೨೫ ||

ಸುದರ್ಶನಂ ಶಿವಶ್ಚೈವ ಮಮ ಪ್ರಾಣಾಧಿಕಪ್ರಿಯೌ ।
ಬ್ರಹ್ಮಾಂಡೇಷು ನ ತೇಜಸ್ವೀ ಹೇ ಬ್ರಹ್ಮನ್ನನಯೋಃ ಪರಃ || ೨೬ ||

---

೨೨. ಜಗದೊಡೆಯನಾದ ನಾನು ಯಾವಾಗಲೂ ರಕ್ಷಣಾಕಾರ್ಯವನ್ನು ಮಾಡುವವನಾಗಿಯೂ, ಬ್ರಹ್ಮರೂಪದಿಂದ ಸೃಷ್ಟಿಮಾಡುವವನಾಗಿಯೂ, ಶಿವರೂಪದಿಂದ ಸಂಹಾರಮಾಡುವವನಾಗಿಯೂ ಇದ್ದೇನೆ.

೨೩. ನಾನೇ ಶಿವನು ಮತ್ತು ಬ್ರಹ್ಮನು. ತ್ರಿಗುಣಾತ್ಮಕನಾದ ಸೂರ್ಯನೂ ನಾನೇ. ನಾನೊಬ್ಬನೇ ನಾನಾರೂಪಧಾರಿಯಾಗಿ, ಸೃಷ್ಟ್ಯಾದಿ ಸಕಲಕಾರ್ಯಗಳನ್ನೂ ನಡೆಸುವೆನು.

೨೪. ನೀವೆಲ್ಲರೂ ಹಿಂತಿರುಗಿ, ನಿಮಗೆ ಕ್ಷೇಮವಾಗುವುದು ಭಯಪಡಬೇಡಿ. ನನ್ನ ವರದಂತೆ ಇನ್ನು ಮುಂದೆ ಶಂಕರನ ದೆಸೆಯಿಂದ ನಿಮಗೆ ಯಾವ ಭಯವೂ ಇಲ್ಲದಂತಾಗುವುದು.

೨೫. ಭಕ್ತವತ್ಸಲನೂ, ಭಕ್ತಪರಾಧೀನನೂ, ಭಕ್ತೇಶನೂ, ಪೂಜ್ಯನೂ ಆದ ಶಂಕರನು ಭಕ್ತರ ಸೇವೆಯಿಂದ ಬಹಳ ಬೇಗ ಸಂತೊಷಪಡುವವನಾಗಿರುವನು.

೨೬. ಸುದರ್ಶನಚಕ್ರವೂ, ಶಿವನೂ, ನನ್ನ ಪ್ರಾಣಕ್ಕಿಂತಲೂ ಪ್ರಿಯತಮವಾದವರು. ಎಲೈ ಬ್ರಹ್ಮನೇ, ಇವರಿಬ್ಬರಿಗಿಂತಲೂ ಶ್ರೇಷ್ಠರಾದ ತೇಜಸ್ವಿಗಳು ಬ್ರಹ್ಮಾಂಡದಲ್ಲಿಯೇ ಯಾರೂ ಇಲ್ಲ.

ಶಕ್ತಃ ಸ್ರಷ್ಟುಂ ಮಹಾದೇವಃ ಸೂರ್ಯಕೋಟಿಂ ಚ ಲೀಲಯಾ ।
ಕೋಟಿಂ ಚ ಬ್ರಹ್ಮಣಾಮೇವಂ ಕಿಮಸಾಧ್ಯಂ ಚ ಶೂಲಿನಃ ॥ ೨೭ ॥

ಬಾಹ್ಯಜ್ಞಾನಂ ತನ್ನಕಿಂಚಿದ್ಧ್ಯಾಯತೋ ಮಾಂ ದಿವಾನಿಶಂ ।
ಮನ್ನಾಮ ಮದ್ಗುಣಂ ಭಕ್ತ್ಯಾ ಪಂಚವಕ್ತ್ರೇಣ ಗೀಯತೇ ॥ ೨೮ ॥

ಅಹಮೇವಂ ಚಿಂತಯಾಮಿ ತತ್ಕಲ್ಯಾಣಂ ದಿವಾನಿಶಂ ।
ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ॥ ೨೯ ॥

ಶಿವಸ್ವರೂಪೋ ಭಗವಾಂಚ್ಛಿವಾಧಿಷ್ಠಾತೃದೇವತಾ ।
ಶಿವೋ ಭವತಿ ಯಸ್ಮಾಚ್ಚ ಶಿವಂ ತೇನ ವಿದುರ್ಬುಧಾಃ ॥ ೩೦ ॥

---

೨೭. ಶೂಲಾಯುಧವನ್ನು ಧರಿಸಿರುವ ಮಹಾದೇವನು ಕೋಟಿಸೂರ್ಯರನ್ನೂ, ಕೋಟಿಬ್ರಹ್ಮರನ್ನೂ, ಲೀಲಾಮಾತ್ರದಿಂದಲೇ ಸೃಜಿಸಲು ಶಕ್ತನು. ಅವನಿಗಸಾಧ್ಯವಾದುದಾವುದು ?

೨೮. ಹಗಲು ರಾತ್ರಿ ನನ್ನನ್ನೇ ಧ್ಯಾನಮಾಡುವ ಆ ಶಿವನಿಗೆ ಬಾಹ್ಯಪ್ರಪಂಚದ ಅರಿವೇ ಇರುವುದಿಲ್ಲ. ನನ್ನ ದಿವ್ಯ ನಾಮವನ್ನೂ, ನನ್ನ ಗುಣಗಳನ್ನೂ, ಅವನು ತನ್ನ ಐದು ಮುಖಗಳಿಂದಲೂ ಭಕ್ತಿಯಿಂದ ಭಜಿಸುವನು.

೨೯. ನಾನೂ ಕೂಡ ಹಗಲು ರಾತ್ರಿ ಶಿವನಿಗೆ ಕಲ್ಯಾಣವಾಗುವಂತೆ ಹರಸುತ್ತಿದ್ದೇನೆ. ಯಾರು ನನ್ನನ್ನು ಯಾವ ಅಭಿಪ್ರಾಯದಿಂದ ಸೇವಿಸುವರೋ, ಅವರನ್ನು ನಾನು ಅದೇ ರೀತಿಯಾಗಿ ಪೊರೆಯುವೆನು.

೩೦. ಆ ಭಗವಂತನು ಶಿವ (ಮಂಗಳ) ಸ್ವರೂಪನೂ, ಶಿವೆ (ಪಾರ್ವತಿ) ಗೆ ಅಧಿಷ್ಠಾತೃದೇವತೆಯೂ, ಸಕಲರಿಗೂ ಶಿವ (ಮಂಗಳ) ಕಾರಕನೂ ಆದುದರಿಂದ ಅವನನ್ನು ಪಂಡಿತರು ಶಿವನೆಂದು ಕರೆಯುವರು.

ಏತಸ್ಮಿನ್ನಂತರೇ ತತ್ರ ಚಾಗಮಚ್ಛಂಕರಃ ಸ್ವಯಂ ।
ಶೂಲಹಸ್ತೋ ವೃಷಾರೂಢೋ ರಕ್ತಪಂಕಜಲೋಚನಃ ॥ ೩೧ ॥

ಅವರುಹ್ಯ ವೃಷಾತ್ತೂರ್ಣಂ ಭಕ್ತಿನಮ್ರಾತ್ಮಕಂಧರಃ ।
ನನಾಮ ಭಕ್ತ್ಯಾ ತಂ ಶಾಂತಂ ಲಕ್ಷ್ಮೀಕಾಂತಂ ಪರಾತ್ಪರಂ ॥ ೩೨ ॥

ರತ್ನಸಿಂಹಾಸನಸ್ಥಂ ಚ ರತ್ನಾಲಂಕಾರಭೂಷಿತಂ ।
ಕಿರೀಟಿನಂ ಕುಂಡಲಿನಂ ಚಕ್ರಿಣಂ ವನಮಾಲಿನಂ ॥ ೩೩ ॥

ನವೀನನೀರದಶ್ಯಾಮಂ ಸುಂದರಂ ಚ ಚತುರ್ಭುಜಂ ।
ಚತುರ್ಭುಜೈಃ ಸೇವಿತಂ ಚ ಶ್ವೇತಚಾಮರವಾಯುನಾ ॥ ೩೪ ॥

ಚಂದನೋಕ್ಷಿತಸರ್ವಾಂಗಂ ಭೂಷಿತಂ ಪೀತವಾಸಸಾ ।
ಲಕ್ಷ್ಮೀಪ್ರದತ್ತತಾಂಬೂಲಂ ಭುಕ್ತವಂತಂ ಚ ನಾರದ ॥ ೩೫ ॥

---

೩೧. ಈ ಸಮಯಕ್ಕೆ ಸರಿಯಾಗಿ ಕೆಂದಾವರೆಯಂತೆ ಕಣ್ಣುಳ್ಳವನೂ, ಶೂಲಾಯುಧಧಾರಿಯೂ, ವೃಷಭಾರೂಢನೂ ಆದ ಶಂಕರನು ಅಲ್ಲಿಗೆ ಬಂದನು.

೩೨. ಜಾಗ್ರತೆಯಾಗಿ ವೃಷಭವಾಹನದಿಂದಿಳಿದು ಭಕ್ತಿಯಿಂದ ತಲೆತಗ್ಗಿಸಿಕೊಂಡು ಶಾಂತಾಕಾರನೂ, ಲಕ್ಷ್ಮೀಪತಿಯೂ, ಪರಾತ್ಪರನೂ ಆದ ನಾರಾಯಣನಿಗೆ ನಮಸ್ಕರಿಸಿದನು.

೩೩–೩೪. ನವಮೇಘಶ್ಯಾಮನೂ, ಸುಂದರನೂ, ಚತುರ್ಭುಜನೂ ಆದ ನಾರಾಯಣನು ಕಿರೀಟಕುಂಡಲಗಳನ್ನೂ, ರತ್ನಾಲಂಕಾರಗಳನ್ನೂ ಧರಿಸಿ ವನಮಾಲಾಲಂಕೃತನಾಗಿ, ಚಕ್ರಾಯುಧವನ್ನು ಹಿಡಿದು, ರತ್ನಸಿಂಹಾಸನದಲ್ಲಿ ಚತುರ್ಭುಜರಾದ ಪಾರ್ಷದರಿಂದ ಶ್ವೇತಚಾಮರಸೇವೆಯನ್ನು ಕೈಗೊಳುತ್ತ ಕುಳಿತಿದ್ದನು.

೩೫–೩೬. ಎಲೈ ನಾರದನೇ, ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು, ಪೀತಾಂಬರಧಾರಿಯಾಗಿ, ಲಕ್ಷ್ಮೀದೇವಿಯು ಕೊಡುತ್ತಿರುವ ತಾಂಬೂಲ

ವಿದ್ಯಾಧರೀ ನೃತ್ಯಗೀತಂ ಶೃಣ್ವಂತಂ ಸಸ್ಮಿತಂ ಮುದಾ ।
ಈಶ್ವರಂ ಪರಮಾತ್ಮಾನಂ ಭಕ್ತಾನುಗ್ರಹವಿಗ್ರಹಂ ॥ ೩೬ ॥

ತಂ ನನಾಮ ಮಹಾದೇವೋ ಬ್ರಹ್ಮಾಣಂ ಚ ನನಾಮ ಸಃ ।
ನನಾಮ ಸೂರ್ಯೋ ಭಕ್ತ್ಯಾ ಚ ಸಂತ್ರಸ್ತಶ್ಚಂದ್ರಶೇಖರಂ ॥ ೩೭ ॥

ಕಶ್ಯಪಶ್ಚ ಮಹಾಭಕ್ತ್ಯಾ ತುಷ್ಟಾವ ಚ ನನಾಮ ಚ ।
ಶಿವಃ ಸಂಸ್ತೂಯ ಸರ್ವೇಶಂ ಸಮುವಾಸ ಸುಖಾಸನೇ ॥ ೩೮ ॥

ಸುಖಾಸನೇ ಸುಖಾಸೀನಂ ವಿಶ್ರಾಂತಂ ಚಂದ್ರಶೇಖರಂ ।
ಶ್ವೇತಚಾಮರವಾತೇನ ಸೇವಿತಂ ವಿಷ್ಣುಪಾರ್ಷದೈಃ ॥ ೩೯ ॥

ಅಕ್ರೋಧಂ ಸತ್ವಸಂಸರ್ಗಾತ್ಪ್ರಸನ್ನಂ ಸಸ್ಮಿತಂ ಮುದಾ ।
ಸ್ತೂಯಮಾನಂ ಪಂಚವಕ್ತ್ರೈಃ ಪರಂ ನಾರಾಯಣಂ ವಿಭುಂ ॥ ೪೦ ॥

ವನ್ನು ಸೇವಿಸುತ್ತ, ವಿದ್ಯಾಧರಸ್ತ್ರೀಯರ ನೃತ್ಯಗೀತಗಳನ್ನು ಕೇಳಿ ಮಂದಸ್ಮಿತನಾಗಿರುವ ಭಕ್ತಾನುಗ್ರಹವಿಗ್ರಹನೂ ಸರ್ವಶಕ್ತನೂ ಆದ ನಾರಾಯಣನಿಗೆ ಶಂಕರನು ವಂದಿಸಿದನು.

೩೭. ನಾರಾಯಣನಿಗೆ ನಮಸ್ಕರಿದನಂತರ ಮಹಾದೇವನು ಬ್ರಹ್ಮನಿಗೂ ನಮಸ್ಕರಿಸಿದನು. ಆಗ ಭೀತನಾದ ಸೂರ್ಯದೇವನು ಭಕ್ತಿಯಿಂದ ಚಂದ್ರಶೇಖರನಿಗೆ ವಂದಿಸಿದನು.

೩೮. ಕಶ್ಯಪ ಪ್ರಜಾಪತಿಯೂ ಕೂಡ ಶಂಕರನನ್ನು ಸ್ತುತಿಸಿ ಭಕ್ತಿಯಿಂದ ನಮಸ್ಕರಿಸಿದನು. ಶಿವನು ಸರ್ವೇಶ್ವರನಾದ ನಾರಾಯಣನನ್ನು ಸ್ತುತಿಸಿದನಂತರ ಸುಖಾಸನದಲ್ಲಿ ಕುಳಿತನು.

೩೯–೪೦. ವಿಷ್ಣುವಿನ ಪಾರ್ಷದರು ಬೀಸುತ್ತಿರುವ ಶ್ವೇತಚಾಮರದ ಗಾಳಿಯನ್ನು ಸೇವಿಸುತ್ತ, ಸುಖಾಸನದಲ್ಲಿ ಸುಖವಾಗಿ ಕುಳಿತು ವಿಶ್ರಾಂತಿಗೊಳ್ಳುತ್ತಲಿರುವ ಸತ್ವೋದ್ರೇಕದಿಂದ ಕ್ರೋಧರಹಿತನೂ, ಸ್ಮಿತವದನನೂ, ಪ್ರಸನ್ನನೂ ಆದ ಶಿವನು ತನ್ನ ಐದು ಮುಖಗಳಿಂದಲೂ ವಿಭುವಾದ ನಾರಾಯಣನನ್ನು ಸ್ತುತಿಸುತ್ತಿದ್ದನು.

ತಮುವಾಚ ಪ್ರಸನ್ನಾತ್ಮಾ ಪ್ರಸನ್ನಂ ಸುರಸಂಸದಿ ।
ಪೀಯೂಷತುಲ್ಯಂ ಮಧುರಂ ವಚನಂ ಸುಮನೋಹರಂ ॥ ೪೧ ॥

॥ ಶ್ರೀ ಭಗವಾನುವಾಚ ॥

ಅತ್ಯಂತಮುಪಹಾಸ್ಯಂ ಚ ಶಿವಪ್ರಶ್ನಂ ಶಿವೇ ಶಿವಂ ।
ಲೌಕಿಕಂ ವೈದಿಕಂ ಚೈವ ತ್ವಾಂ ಪೃಚ್ಛಾಮಿ ತಥಾಪಿ ಶಂ ॥ ೪೨ ॥

ತಪಸಾಂ ಫಲದಾತಾರಂ ದಾತಾರಂ ಸರ್ವಸಂಪದಾಂ ।
ಸಂಪತ್ಪ್ರಶ್ನಂ ತಪಃಪ್ರಶ್ನಮಯೋಗ್ಯಂ ತ್ವಾಂ ಚ ಸಾಂಪ್ರತೇ ॥ ೪೩ ॥

ಜ್ಞಾನಾಧಿದೇವೇ ಸರ್ವಜ್ಞೇ ಜ್ಞಾನಂ ಪೃಚ್ಛಾಮಿ ಕಿಂ ವೃಥಾ ।
ನಿರಾಪದಿ ವಿಪತ್ಪ್ರಶ್ನಮಲಂ ಮೃತ್ಯುಂಜಯೇ ಹರೇ ॥ ೪೪ ॥

ತ್ವಾಮೇವ ವಾಗ್ಧನಂ ಪ್ರಶ್ನಮಲಂ ಸ್ವಾಶ್ರಯೆಮಾಗಮೇ ।
ಆಗತೋಽಸಿ ಕಥಂ ವೇಗಾದಿತ್ಯುವಾಚ ರಮಾಪತಿಃ ॥ ೪೫ ॥

ಆ ಚಂದ್ರಶೇಖರನನ್ನು ಕುರಿತು ಪ್ರಸನ್ನಾಂತರಂಗನಾದ ನಾರಾಯಣನು ದೇವತೆಗಳ ಸಭೆಯಲ್ಲಿ ಮನೋಹರವೂ ಅಮೃತೋಪಮವೂ ಆದ ಮಧುರವಚನಗಳನ್ನಾಡಿದನು.

೪೨. ಶ್ರೀ ಭಗವಾನ್ :— ಎಲೈ ಶಿವನೇ, ಸಕಲರಿಗೂ ಶಿವಂಕರನಾದ ನಿನ್ನಲ್ಲಿ ನಾನು ಕೇಳುವ ಪ್ರಶ್ನೆಯು ಹಾಸ್ಯಾಸ್ಪದವಾಗಬಹುದು. ಹಾಗಾದರೂ ಲೌಕಿಕ ಮತ್ತು ವೈದಿಕ ಕ್ರಮದಂತೆ ನಾನು ನಿನ್ನ ಕುಶಲಪ್ರಶ್ನೆಯನ್ನು ಕೇಳುತ್ತೇನೆ.

೪೩. ತಪಃಫಲದಾತೃವೂ, ಸರ್ವಸಂಪತ್ಪ್ರದಾತೃವೂ ಆದ ನಿನ್ನನ್ನು ಸಂಪತ್ಪ್ರಶ್ನೆಯನ್ನಾಗಲೀ, ತಪಃಪ್ರಶ್ನೆಯನ್ನಾಗಲೀ ಕೇಳುವುದನುಚಿತವಾಗುವುದು.

೪೪. ಸರ್ವಜ್ಞನೂ, ಜ್ಞಾನಾಧಿದೇವತೆಯೂ ಆದ ನಿನ್ನನ್ನು ಜ್ಞಾನದ ವಿಷಯವಾಗಿ ಪ್ರಶ್ನೆಮಾಡುವುದೂ ವ್ಯರ್ಥ. ಮೃತ್ಯುಂಜಯನಾಗಿ ಮೃತ್ಯುರಹಿತನಾದ ನಿನಗೆ ವಿಪತ್ತೊದಗಿರುವುದೇ ಎಂದು ಕೇಳುವುದೂ ಅನುಚಿತ.

೪೫. ವೇದಶಾಸ್ತ್ರಗಳಿಗೆಲ್ಲ ಆಶ್ರಯನಾದ ನಿನಗೆ ವಾಕ್ಚಾತುರ್ಯವಿಲ್ಲವೇ ? ಎಂದು ಪ್ರಶ್ನಿಸುವುದೂ ಅನ್ಯಾಯ. ಆದ್ದರಿಂದ ನೀನು ವೇಗದಿಂದ ಇಲ್ಲಿಗೆ ಬರಲು ಕಾರಣವೇನು ? ಎಂದು ಮಾತ್ರ ಕೇಳುವೆನು.

॥ ಶ್ರೀ ಮಹಾದೇವ ಉವಾಚ ॥

ವೃಷಧ್ವಜಂ ಚ ಮದ್ಭಕ್ತಂ ಮಮ ಪ್ರಾಣಾಧಿಕಪ್ರಿಯಂ ।
ಸೂರ್ಯಃ ಶಶಾಪ ಇತಿ ಮೇ ಹೇತುರಾಗಮಕೋಪಯೋಃ ॥ ೪೬ ॥

ಪುತ್ರವಾತ್ಸಲ್ಯಶೋಕೇನ ಸೂರ್ಯಂ ಹಂತುಂ ಸಮುದ್ಯತಃ ।
ಸ ಬ್ರಹ್ಮಾಣಂ ಪ್ರಪನ್ನಶ್ಚ ಸಸೂರ್ಯಶ್ಚ ವಿಧಿಸ್ತ್ವಯಿ ॥ ೪೭ ॥

ತ್ವಾಂ ಯೇ ಶರಣಮಾಪನ್ನಾ ಧ್ಯಾನೇನ ವಚಸಾಪಿ ವಾ ।
ನಿರಾಪದಸ್ತೇ ನಿಶ್ಶಂಕಾ ಜರಾಮೃತ್ಯುಶ್ಚ ವರ್ಜಿತಃ ॥ ೪೮ ॥

ಸಾಕ್ಷಾದ್ಯೇ ಶರಣಾಪನ್ನಾಸ್ತತ್ಫಲಂ ಕಿಂ ವದಾಮಿ ಭೋಃ ।
ಹರಿಸ್ಮೃತಿಶ್ಚಾಭಯದಾ ಸರ್ವಮಂಗಲದಾ ಸದಾ ॥ ೪೯ ॥

---

೪೬. ಶ್ರೀ ಮಹಾದೇವ:— ನನ್ನ ಪರಮಭಕ್ತನೂ, ನನ್ನ ಪ್ರಾಣಕ್ಕಿಂತ ಪ್ರಿಯತಮನೂ ಆದ ವೃಷಧ್ವಜನೆಂಬುವನನ್ನು ಸೂರ್ಯನು ಶಪಿಸಿದುದೇ ನಾನು ಕೋಪಗೊಂಡು ಇಲ್ಲಿಗೆ ಬರಲು ಕಾರಣ.

೪೭. ಪುತ್ರಸದೃಶನಾದ ವೃಷಧ್ವಜನಲ್ಲಿ ವಾತ್ಸಲ್ಯಭರಿತನಾದ ನಾನು ಸೂರ್ಯನನ್ನು ದಂಡಿಸಲು ಹೋದಾಗ ಅವನು ಬ್ರಹ್ಮನನ್ನು ಮರೆಹೊಕ್ಕನು. ಬ್ರಹ್ಮನೂ ಕೂಡ ಸೂರ್ಯನೊಡನೆ ನಿನ್ನನ್ನು ಶರಣುಹೊಕ್ಕನು.

೪೮. ನಿನ್ನನ್ನು ಧ್ಯಾನಿಸಿದರಾಗಲೀ, ಸ್ತುತಿಸಿದರಾಗಲೀ, ಶರಣಾಗತರೆಲ್ಲರೂ ನಿರಾಪದರೂ, ನಿರ್ಭಯರೂ, ಮೃತ್ಯುಂಜಯರೂ ಆಗುವರು.

೪೯. ಹೀಗಿರುವಾಗ ನಿನ್ನನ್ನೇ ಸಾಕ್ಷಾತ್ತಾಗಿ ಶರಣುಹೊಂದಿದವರ ಸತ್ಫಲವನ್ನು ಏನೆಂದು ಹೇಳೋಣ. ಹರಿಸ್ಮರಣೆಯು ಯಾವಾಗಲೂ ಅಭಯವನ್ನೂ, ಸಮಸ್ತ ಮಂಗಳವನ್ನೂ ಕೊಡುವುದು.

ಕಿಂ ಮೇ ಭಕ್ತಸ್ಯ ಭವಿತಾ ತನ್ಮೇ ಬ್ರೂಹಿ ಜಗತ್ಪ್ರಭೋ ।
ಶ್ರೀಹತಸ್ಯಾಸ್ಯ ಮೂಢಸ್ಯ ಸೂರ್ಯಶಾಪೇನ ಹೇತುನಾ　॥ ೫೦ ॥

॥ ಶ್ರೀ ಭಗವಾನುವಾಚ ॥

ಕಾಲೋಽತಿಯಾತೋ ದೈವೇನ ಯುಗಾನಾಮೇಕವಿಂಶತಿಃ ।
ವೈಕುಂಠೇ ಘಟಿಕಾರ್ಧೇನ ಶೀಘ್ರಂ ಯಾಹಿ ನೃಪಾಲಯಂ　॥ ೫೧ ॥

ವೃಷಧ್ವಜೋ ಮೃತಃ ಕಾಲಾದ್ದುರ್ನಿವಾರ್ಯಾತ್ಸುದಾರುಣಾತ್ ।
ಹಂಸಧ್ವಜಶ್ಚ ತತ್ಪುತ್ರೋ ಮೃತಃ ಸೋಽಪಿ ಶ್ರಿಯಾಹತಃ　॥ ೫೨ ॥

ತತ್ಪುತ್ರೌ ಚ ಮಹಾಭಾಗೌ ಧರ್ಮಧ್ವಜಕುಶಧ್ವಜೌ ।
ಹತಶ್ರಿಯೌ ಸೂರ್ಯಶಾಪಾತ್ತೌ ವೈ ಪರಮವೈಷ್ಣವೌ　॥ ೫೩ ॥

ರಾಜ್ಯಭ್ರಷ್ಟೌ ಶ್ರಿಯಾಭ್ರಷ್ಟೌ ಕಮಲಾತಾಪಸಾವುಭೌ ।
ತಯೋಶ್ಚ ಭಾರ್ಯಯೋರ್ಲಕ್ಷ್ಮೀಃ ಕಲಯಾ ಚ ಜನಿಷ್ಯತಿ　॥ ೫೪ ॥

---

೫೦. ಆದ್ದರಿಂದ ಈಗ ನಾನು ಸೂರ್ಯನನ್ನು ಏನೂ ಮಾಡುವಂತಿಲ್ಲ. ಎಲೈ ಜಗದೊಡೆಯನೇ, ಸೂರ್ಯ ಶಾಪದಿಂದ ಮೂಢನೂ, ದರಿದ್ರನೂ ಆದ ನನ್ನ ಭಕ್ತನಿಗೆ ಮುಂದೇನುಗತಿ ಎಂಬುದನ್ನು ಹೇಳು.

೫೧. ಶ್ರೀ ಭಗವಾನ್ :— ಎಲೈ ಶಂಕರನೇ, ವೈಕುಂಠದಲ್ಲಿ ನೀವೆಲ್ಲರೂ ಅರ್ಧ ಘಳಿಗೆ ಕಳೆಯುವುದರೊಳಗಾಗಿ ಭೂಲೋಕದಲ್ಲಿ ದೈವಯೋಗದಿಂದ ಇಪ್ಪತ್ತೊಂದು ಯುಗಗಳು ಕಳೆದುಹೋಗಿವೆ.

೫೨. ಅತಿ ದಾರುಣವೂ, ನಿವಾರಿಸಲಸಾಧ್ಯವೂ ಆದ ಕಾಲಚಕ್ರಕ್ಕೆ ಸಿಲುಕಿ ವೃಷಧ್ವಜನು ಈಗಾಗಲೇ ಮೃತನಾದನು. ಅವನ ಪುತ್ರನಾದ ಹಂಸಧ್ವಜನೂ ಕೂಡ ಸಂಪದ್ರಹಿತನಾಗಿದ್ದು ಮೃತನಾದನು.

೫೩. ಇವನ ಇಬ್ಬರು ಮಕ್ಕಳಾದ ಧರ್ಮಧ್ವಜ, ಕುಶಧ್ವಜರೆಂಬುವರೂ ಕೂಡ ಪರಮ ವಿಷ್ಣುಭಕ್ತರಾದರೂ ಸೂರ್ಯ ಶಾಪದಿಂದ ಸಂಪದ್ರಹಿತರಾದರು.

೫೪. ಅವರಿಬ್ಬರೂ ರಾಜ್ಯಭ್ರಷ್ಟರೂ, ಸಂಪದ್ಭ್ರಷ್ಟರೂ ಆಗಿ ಲಕ್ಷ್ಮಿಯನ್ನು ಕುರಿತು ತಪವೆಸಗುತ್ತಿರುವರು. ಅವರಿಬ್ಬರ ಪತ್ನಿಯರಲ್ಲಿ ಲಕ್ಷ್ಮಿಯು ತನ್ನದೊಂದು ಕಲೆಯಿಂದ ಜನಿಸುವಳು.

ಸಂಪದ್ಯುಕ್ತೌ ತದಾ ತೌ ಚ ನೃಪಶ್ರೇಷ್ಠೌ ಭವಿಷ್ಯತಃ ।
ಮೃತಸ್ತೇ ಸೇವಕಃ ಶಂಭೋ ಗಚ್ಛ ಯೂಯಂ ಚ ಗಚ್ಛತ ॥ ೫೫ ॥

ಇತ್ಯುಕ್ತ್ವಾ ಚ ಸಲಕ್ಷ್ಮೀಕಃ ಸಭಾತೋಽಭ್ಯಂತರಂ ಗತಃ ।
ದೇವಾ ಜಗ್ಮುಶ್ಚ ಸಂಹೃಷ್ಟಾಃ ಸ್ವಾಶ್ರಮಂ ಪರಮಂ ಮುದಾ ॥ ೫೬ ॥

ಶಿವಶ್ಚ ತಪಸೇ ಶೀಘ್ರಂ ಪರಿಪೂರ್ಣತಮೋ ಯಯೌ ॥ ೫೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನಂ ನಾಮ
ತ್ರಯೋದಶೋಽಧ್ಯಾಯಃ

---

೫೫. ಆಗ ಆ ರಾಜರಿಬ್ಬರೂ ಸಂಪದ್ಯುಕ್ತರಾಗುವರು. ಎಲೈ ಶಂಭುವೇ, ನಿನ್ನ ಸೇವಕನಾದ ವೃಷಧ್ವಜನು ಮೃತನಾದನು. ಈಗ ನೀನು ಹೋಗು. ಎಲೈ ಬ್ರಹ್ಮಾದಿಗಳೇ, ನೀವೂ ಹಿಂತಿರುಗಿರಿ.

೫೬. ಹೀಗೆಂದು ನುಡಿದು ನಾರಾಯಣನು ಲಕ್ಷ್ಮಿಯೊಡಗೂಡಿ ಸಭೆಯಿಂದ ಎದ್ದು ಒಳಕ್ಕೆ ಹೋದನು. ಆ ದೇವತೆಗಳೆಲ್ಲರೂ ಸಂತುಷ್ಟಮನಸ್ಕರಾಗಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

೫೭. ಪರಿಪೂರ್ಣಸ್ವರೂಪನಾದ ಶಿವನೂ ಕೂಡ ತನ್ನ ಭಕ್ತನ ರಕ್ಷಣೆಗಾಗಿ ತಪವೆಸಗಲು ಹೋದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ನಾರಾಯಣನಾರದಸಂವಾದ
ರೂಪವಾದ ಪ್ರಕೃತಿಖಂಡದಲ್ಲಿ ತುಲಸ್ಯುಪಾಖ್ಯಾನರೂಪವಾದ
ಹದಿಮೂರನೆಯ ಅಧ್ಯಾಯವು ಮುಗಿದುದು.

ಹದಿಮೂರನೆಯ ಅಧ್ಯಾಯದ ಸಾರಾಂಶವು

ಪೂರ್ವದಲ್ಲಿ ದಕ್ಷಸಾವರ್ಣಿಯೆಂಬ ಮನುವಿನ ವಂಶದಲ್ಲಿ ಹುಟ್ಟಿದ ವೃಷಧ್ವಜನೆಂಬುವನು ಈಶ್ವರನ ಪರಮಭಕ್ತನಾಗಿ ನಾರಾಯಣ, ಲಕ್ಷ್ಮಿ, ಸರಸ್ವತಿ ಮುಂತಾದ ಎಲ್ಲ ದೇವತೆಗಳ ಪೂಜೆಯನ್ನೂ ದೂರಮಾಡಿದ್ದನು. ಆಗ ಇವನ ಅಹಂಕಾರವನ್ನು ತಿಳಿದ ಸರ್ವಾತ್ಮಕನಾದ ಸೂರ್ಯದೇವನು ಇವನ ಸಂಪತ್ತೆಲ್ಲವೂ ನಾಶವಾಗುವಂತೆ ಶಾಪವಿತ್ತನು. ತನ್ನ ಭಕ್ತನು ಸೂರ್ಯನ ಶಾಪಕ್ಕೊಳಗಾದುದನ್ನು ತಿಳಿದ ಪರಶಿವನು ಸೂರ್ಯನನ್ನು ನಿಗ್ರಹಿಸಲು ಹೊರಟಾಗಸೂರ್ಯನು ತನ್ನ ತಂದೆಯಾದ ಕಶ್ಯಪನೊಡನೆ ಬ್ರಹ್ಮನನ್ನು ಮರೆಹೊಕ್ಕನು. ಶಿವನು ತ್ರಿಶೂಲಧಾರಿಯಾಗಿ ಬ್ರಹ್ಮಲೋಕಕ್ಕೆ ಹೋಗಲು, ಬ್ರಹ್ಮನು ಅವರೊಡನೆ ವೈಕುಂಠಕ್ಕೆ ಹೋಗಿ ನಾರಾಯಣನನ್ನು ಮರೆಹೊಕ್ಕನು. ಶಿವನು ಅಲ್ಲಿಯೂ ಬೆಂಬಿಡದಿರಲು, ಅವರೆಲ್ಲರೂ ಭಕ್ತವತ್ಸಲನಾದ ನಾರಾಯಣನನ್ನು ಭಕ್ತಿಯಿಂದ ಭಜಿಸಿ ಅವನ ಕೃಪೆಗೆ ಪಾತ್ರರಾದರು.

ಆಗ ನಾರಾಯಣನು ತಾನೇ ತ್ರಿಮೂರ್ತ್ಯಾತ್ಮಕನಾದುದರಿಂದ, ವೃಷಧ್ವಜನು ಶಿವನನ್ನು ಮಾತ್ರ ಸರ್ವೋತ್ತಮನೆಂದು ತಿಳಿದು ಸೂರ್ಯನ ಶಾಪಕ್ಕೊಳಗಾದನೆಂದೂ, ತ್ರಿಮೂರ್ತಿಗಳಲ್ಲಿ ಪರಸ್ಪರ ಭೇದವನ್ನೆಣಿಸುವುದು ಮಹಾಪಾಪಕರವೆಂದೂ ಬೋಧಿಸಿದನು. ನಾರಾಯಣನ ಅನುಗ್ರಹಕ್ಕೆ ಪಾತ್ರನಾದ ಸೂರ್ಯನನ್ನು ಶಿವನೂ ಕ್ಷಮಿಸಿ ವೃಷಧ್ವಜನ ಉದ್ಧಾರಕ್ಕೆ ಮಾರ್ಗವೇನೆಂದು ನಾರಾಯಣನನ್ನು ಕೇಳಿದನು. ಅಷ್ಟು ಹೊತ್ತಿಗೆ ವೃಷಧ್ವಜನೂ, ಅವನ ಪುತ್ರನಾದ ಹಂಸಧ್ವಜನೂ ಮೃತನಾಗಿ ಹಂಸಧ್ವಜನ ಮಕ್ಕಳಾದ ಧರ್ಮಧ್ವಜ, ಕುಶಧ್ವಜರು ಲಕ್ಷ್ಮಿಯನ್ನು ಕುರಿತು ತಪಸ್ಸು ಮಾಡುತ್ತಿದ್ದರು. ಮಹಾಲಕ್ಷ್ಮಿಯು ತನ್ನದೊಂದು ಕಲೆಯಿಂದ ಅವರಿಬ್ಬರ ವಂಶದಲ್ಲಿ ಹುಟ್ಟಿ ಅವರಿಗೆ ಅನುಗ್ರಹ ಮಾಡುವಳೆಂದು ನಾರಾಯಣನು ಹೇಳಿ, ಶಿವನನ್ನೂ, ಬ್ರಹ್ಮಾದಿ ದೇವತೆಗಳನ್ನೂ ಬೀಳ್ಕೊಟ್ಟನು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಚತುರ್ದಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಲಕ್ಷ್ಮೀಂ ತೌ ಚ ಸಮಾರಾಧ್ಯ ಚೋಗ್ರೇಣ ತಪಸಾ ಮುನೇ ।
ಪ್ರತ್ಯೇಕಂ ವರಮಿಷ್ಟಂಚ ಸಂಪ್ರಾಪತುರಭೀಪ್ಸಿತಂ ॥ ೧ ॥

ಮಹಾಲಕ್ಷ್ಮ್ಯಾ ವರೇಣೈವ ತೌ ಪೃಥ್ವೀಶೌ ಬಭೂವತುಃ ।
ಧನವಂತೌ ಪುತ್ರವಂತೌ ಧರ್ಮಧ್ವಜಕುಶಧ್ವಜೌ ॥ ೨ ॥

ಕುಶಧ್ವಜಸ್ಯ ಪತ್ನೀ ಚ ದೇವೀ ಮಾಲಾವತೀ ಸತೀ ।
ಸಾ ಸುಷಾವ ಚ ಕಾಲೇನ ಕಮಲಾಂಶಾಂ ಸುತಾಂ ಸತೀಂ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧. ನಾರಾಯಣ:—ಎಲೈ ನಾರದಋಷಿಯೇ, ಆ ಧರ್ಮಧ್ವಜ-ಕುಶಧ್ವಜರಿಬ್ಬರೂ ಲಕ್ಷ್ಮೀದೇವಿಯನ್ನು ಉಗ್ರತಪಸ್ಸಿನಿಂದ ತೃಪ್ತಿಗೊಳಿಸಿ, ತಮತಮಗೆ ಇಷ್ಟವಾದ ವರವನ್ನು ಪ್ರತ್ಯೇಕವಾಗಿ ಪಡೆದರು.

೨. ಮಹಾಲಕ್ಷ್ಮಿಯ ವರದಿಂದ ಆ ಧರ್ಮಧ್ವಜ ಕುಶಧ್ವಜರಿಬ್ಬರೂ ಪುನಃ ರಾಜ್ಯಾಧಿಪತಿಗಳಾಗಿ ಹಣವಂತರೂ, ಸತ್ಪುತ್ರಯುತರೂ ಆದರು.

೩. ಹೀಗಿರಲು ಕೆಲವು ಕಾಲದ ಮೇಲೆ ಕುಶಧ್ವಜನ ಧರ್ಮಪತ್ನಿಯಾದ ಮಾಲಾವತೀದೇವಿಯು ಲಕ್ಷ್ಮೀದೇವಿಯ ಅಂಶದಿಂದ ಕೂಡಿದ, ಸುಲಕ್ಷಣ ಸಂಪನ್ನೆಯಾದ ಪುತ್ರಿಯೊಬ್ಬಳನ್ನು ಪ್ರಸುವಿಸಿದಳು.

ಸಾ ಚ ಭೂತಲಸಂಬದ್ಧಾ ಜ್ಞಾನಯುಕ್ತಾ ಬಭೂವ ಹ ।
ಕೃತ್ವಾ ವೇದಧ್ವನಿಂ ಸ್ಪಷ್ಟಮುತ್ತಸ್ಥೌ ಸೂತಿಕಾಗೃಹೇ ॥ ೪ ॥

ವೇದಧ್ವನಿಂ ಸಾ ಚಕಾರ ಜಾತಮಾತ್ರೇಣ ಕನ್ಯಕಾ ।
ತಸ್ಮಾತ್ತಾಂ ತೇ ವೇದವತೀಂ ಪ್ರವದಂತಿ ಮನೀಷಿಣಃ ॥ ೫ ॥

ಜಾತಮಾತ್ರೇಣ ಸುಸ್ನಾತಾ ಜಗಾಮ ತಪಸೇ ವನಂ ।
ಸರ್ವೈರ್ನಿಷಿದ್ಧಾ ಯತ್ನೇನ ನಾರಾಯಣ ಪರಾಯಣಾ ॥ ೬ ॥

ಏಕಮನ್ವಂತರಂ ಚೈವ ಪುಷ್ಕರೇ ಚ ತಪಸ್ವಿನೀ ।
ಅತ್ಯುಗ್ರಾಂ ವೈ ತಪಸ್ಯಾಂ ತು ಲೀಲಯಾ ಚ ಚಕಾರ ಸಾ ॥ ೭ ॥

ತಥಾಪಿ ಪುಷ್ಟಾ ನ ಕೃಶಾ ನವಯೌವನಸಂಯುತಾ ।
ಶುಶ್ರಾವ ಖೇ ಚ ಸಹಸಾ ಸಾ ವಾಚಮಶರೀರಿಣೀಂ ॥ ೮ ॥

---

೪. ಆ ಕನ್ಯೆಯೂ ಕೂಡ ಭೂತಲಸ್ಪರ್ಶದಿಂದಲೇ ದಿವ್ಯಜ್ಞಾನಯುತಳಾಗಿ, ಸ್ಪಷ್ಟವಾಗಿ ವೇದಮಂತ್ರನ್ನುಚ್ಚರಿಸುತ್ತ ಸೂತಿಕಾಗೃಹದಿಂದ ಮೇಲಕ್ಕೆದ್ದಳು.

೫. ಆ ಕನ್ಯೆಯು ಹುಟ್ಟಿದಾಗಲೇ ವೇದೋಚ್ಚಾರಣೆ ಮಾಡಿದ ಕಾರಣದಿಂದ ಅವಳನ್ನು "ವೇದವತೀ" ಎಂದು ಬಲ್ಲವರು ಕರೆದರು.

೬. ಅಲ್ಲದೆ ಆ ಬಾಲೆಯು ಹುಟ್ಟಿದಾಗಲೇ ಶುದ್ಧಸ್ನಾನಮಾಡಿ, ಯಾರು ಎಷ್ಟು ತಡೆದರೂ ಬಿಡದೆ ಶ್ರೀಮನ್ನಾರಾಯಣನಲ್ಲಿ ಭಕ್ತಿಯುತಳಾಗಿ ತಪವೆಸಗಲು ವನಕ್ಕೆ ತೆರಳಿದಳು.

೭. ಆ ವೇದವತಿಯು ಒಂದು ಮನ್ವಂತರಕಾಲ ಪುಷ್ಕರಕ್ಷೇತ್ರದಲ್ಲಿ ತಪಸ್ಸು ಮಾಡುತ್ತ, ಬಹಳ ಸುಲಭವಾಗಿ ಕಾಲಕಳೆದಳು.

೮. ಹಾಗಿದ್ದರೂ, ಅವಳು ನವಯೌವನ ಸಂಪನ್ನಳೂ, ದೇಹಪುಷ್ಟಿಯುತಳೂ, ಆಗಿದ್ದಳೇ ಹೊರತು ಕೃಶಳಾಗಲಿಲ್ಲ. ಹೀಗಿರುವಾಗ ಒಮ್ಮೆ ಆಕಾಶದಲ್ಲಿ ಅಶರೀರವಾಣಿಯೊಂದು ಅವಳಿಗೆ ಇಂತು ನುಡಿಯಿತು.

ಜನ್ಮಾಂತರೇ ತೇ ಭರ್ತಾ ಚ ಭವಿಷ್ಯತಿ ಹರಿಃ ಸ್ವಯಂ ।
ಬ್ರಹ್ಮಾದಿಭಿರ್ದುರಾರಾಧ್ಯಂ ಪತಿಂ ಲಪ್ಸ್ಯಸಿ ಸುಂದರಿ ॥ ೯ ॥

ಇತಿ ಶ್ರುತ್ವಾ ತು ಸಾ ರುಷ್ಟಾ ಚಕಾರ ಚ ಪುನಸ್ತಪಃ ।
ಅತೀವ ನಿರ್ಜನಸ್ಥಾನೇ ಪರ್ವತೇ ಗಂಧಮಾದನೇ ॥ ೧೦ ॥

ತತ್ರೈವಂ ಸುಚಿರಂ ತಪ್ತ್ವಾ ವಿಶ್ವಸ್ಯ ಸಮುವಾಸ ಸಾ ।
ದದರ್ಶ ಪುರತಸ್ತತ್ರ ರಾವಣಂ ದುರ್ನಿವಾರಣಂ ॥ ೧೧ ॥

ದೃಷ್ಟ್ವಾ ಸಾತಿಥಿಭಕ್ತ್ಯಾ ಚ ಪಾದ್ಯಂ ತಸ್ಮೈ ದದೌ ಕಿಲ ।
ಸುಸ್ವಾದುಫಲಮೂಲಂ ಚ ಜಲಂ ಚಾಪಿ ಸುಶೀತಲಂ ॥ ೧೨ ॥

ತಚ್ಚ ಭುಕ್ತ್ವಾ ಸ ಪಾಪಿಷ್ಠಶ್ಚಾವಾತ್ಸೀತ್ತತ್ಸಮೀಪತಃ ।
ಚಕಾರ ಪ್ರಶ್ನಮಿತಿ ತಾಂ ಕಾ ತ್ವಂ ಕಲ್ಯಾಣಿ ಚೇತಿ ಚ ॥ ೧೩ ॥

---

೯. ಎಲೌ ಸುಂದರಾಂಗಿಯೇ. ಬ್ರಹ್ಮಾದಿದೇವತೆಗಳೂ ಪೂಜಿಸಿ ಮೆಚ್ಚಿಸಲಾಗದ ಶ್ರೀಮನ್ನಾರಾಯಣನನ್ನೇ ನೀನು ಜನ್ಮಾಂತರದಲ್ಲಿ ಪತಿಯಾಗಿ ಪಡೆಯುವೆ.

೧೦. ಈ ಮಾತನ್ನು ಕೇಳಿ ಅಸಂತುಷ್ಟಳಾದ ಆ ವೇದವತಿಯು ಗಂಧಮಾದನ ಪರ್ವತದ ನಿರ್ಜನಪ್ರದೇಶದಲ್ಲಿ ಪುನಃ ಘೋರವಾದ ತಪಸ್ಸನ್ನು ಆಚರಿಸಿದಳು.

೧೧. ಅಲ್ಲಿಯೇ, ಬಹಳ ಕಾಲದವರೆಗೆ ತಪಸ್ಸುಮಾಡಿಕೊಂಡು, ಆ ವೇದವತಿಯು ಕುಳಿತಿದ್ದಾಗ ಒಮ್ಮೆ ದುಷ್ಟನಾದ ರಾವಣನು ಅಲ್ಲಿಗೆ ಬಂದು ಆಕೆಯ ಮುಂದೆ ನಿಂತನು.

೧೨. ಆಗ ಆಕೆಯು, ಬಂದ ಅತಿಥಿಗೆ ಭಕ್ತಿಯಿಂದ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು, ಸತ್ಕರಿಸಿ, ಸುಪಕ್ವವಾದ ಫಲಮೂಲಗಳನ್ನೂ, ಶೀತಲೋದಕವನ್ನೂ ಸಮರ್ಪಿಸಿದಳು.

೧೩. ಅದನ್ನೆಲ್ಲ ಭುಜಿಸಿ ಆ ಪಾಪಿಯಾದ ರಾವಣನು ಆಕೆಯನ್ನು ಸಮೀಪಿಸಿ, ಎಲೌ ಮಂಗಳಾಂಗಿಯೇ, ನೀನಾರು? ಏಕೆ ತಪವೆಸಗುವೆ? ಮುಂತಾಗಿ ಪ್ರಶ್ನಿಸಲಾರಂಭಿಸಿದನು.

ತಂ ಚ ದೃಷ್ಟ್ವಾ ವರಾರೋಹಾಂ ಪೀನೋನ್ನತಪಯೋಧರಾಂ ।
ಶರತ್ಪದ್ಮನಿಭಾಸ್ಯಾಂ ಚ ಸಸ್ಮಿತಾಂ ಸುದತೀಂ ಸತೀಂ　　|| ೧೪ ||

ಮೂರ್ಛಾಮವಾಪ ಕೃಪಣಃ ಕಾಮಬಾಣಪ್ರಪೀಡಿತಃ ।
ತಾಂ ಕರೇಣ ಸಮಾಕೃಷ್ಯ ಸಂಭೋಗಂ ಕರ್ತುಮುದ್ಯತಃ　　|| ೧೫ ||

ಸಾ ಸತೀ ಕೋಪದೃಷ್ಟ್ಯಾ ಚ ಸ್ತಂಭಿತಂ ತಂ ಚಕಾರ ಹ ।
ಸ ಜಡೋ ಹಸ್ತಪಾದೈಶ್ಚ ಕಿಂಚಿದ್ವಕ್ತುಂ ನ ಚ ಕ್ಷಮಃ　　|| ೧೬ ||

ತುಷ್ಟಾವ ಮನಸಾ ದೇವೀಂ ಪದ್ಮಾಂಶಾಂ ಪದ್ಮಲೋಚನಾಂ ।
ಸಾ ತತ್ಸ್ತವೇನ ಸಂತುಷ್ಟಾ ಪ್ರಾಕೃತಂ ತಂ ಮುಮೋಚ ಹ　　|| ೧೭ ||

೧೪–೧೫. ಪೀನೋನ್ನತಸ್ತನದ್ವಯದಿಂದಲೂ, ಶರಚ್ಚಂದ್ರಸಂತಿರುವ ಸುಂದರ ವದನದಿಂದಲೂ, ಕೂಡಿ ಮುಗುಳುನಗೆಯಿಂದ ಮನೋಹರವಾದ ದಂತಪಂಕ್ತಿಗಳನ್ನು ಪ್ರಕಟಿಸುತ್ತಿರುವ ಆಕೆಯನ್ನು ನೋಡಿ, ಪಾಪಿಯಾದ ಆ ರಾವಣನು ಮನ್ಮಥಬಾಣಪೀಡಿತನಾಗಿ ಮೂರ್ಛೆಗೊಂಡುದಲ್ಲದೆ ಆಕೆಯನ್ನು ಬಲಾತ್ಕಾರದಿಂದ ಹಿಡಿದೆಳೆದು ಸಂಭೋಗಿಸಲುದ್ಯುಕ್ತನಾದನು.

೧೬. ಆಗ ಪತಿವ್ರತೆಯಾದ ಆಕೆಯು ಕ್ರೂರದೃಷ್ಟಿಯಿಂದೊಮ್ಮೆ, ಅವನನ್ನು ನೋಡಿ, ಚಲಿಸದಂತೆ ಮಾಡಿದಳು. ಅವನು ಕೈಕಾಲುಗಳನ್ನು ಆಡಿಸಲಾಗಲಿಲ್ಲ. ಅವನ ಬಾಯಿನಿಂದ ಒಂದು ಮಾತು ಹೊರಡದಂತಾಯಿತು.

೧೭. ಆಗ ದುಃಖಿತನಾದ ರಾವಣನು ಮನಸ್ಸಿನಲ್ಲಿಯೇ, ಪದ್ಮಾಂಶಸಂಭೂತಳೂ, ಪದ್ಮಲೋಚನಳೂ ಆದ ವೇದವತೀದೇವಿಯನ್ನು ಬಗೆಬಗೆಯಾಗಿ ಸ್ತುತಿಸಿದನು. ಆ ಸ್ತೋತ್ರದಿಂದ ತೃಪ್ತಳಾದ ಆಕೆಯು ಪಾಪಿಯಾದ ಅವನನ್ನು ಚಲಿಸುವಂತೆ ಮಾಡಿಬಿಟ್ಟು ಕಳುಹಿದಳು.

ಶಶಾಪ ಚ ಮದರ್ಥೇ ತ್ವಂ ವಿನಶ್ಯಸಿ ಸಬಾಂಧವಃ ।
ಸ್ಪೃಷ್ಟಾಹಂ ಚ ತ್ವಯಾ ಕಾಮಾದ್ವಿಸೃಜಾಮ್ಯವಲೋಕಯ ॥ ೧೮ ॥

ಇತ್ಯುಕ್ತ್ವಾ ಸಾ ಚ ಯೋಗೇನ ದೇಹತ್ಯಾಗಂ ಚಕಾರ ಹ ।
ಗಂಗಾಯಾಂ ತಾಂ ಚ ಸಂನ್ಯಸ್ಯ ಸ್ವಗೃಹಂ ರಾವಣೋ ಯಯೌ ॥ ೧೯ ॥

ಅಹೋ ಕಿಮದ್ಭುತಂ ದೃಷ್ಟಂ ಕಿಂ ಕೃತಂ ವಾ ಮಯಾಧುನಾ ।
ಇತಿ ಸಂಚಿಂತ್ಯ ಸಂಸ್ಮೃತ್ಯ ವಿಲಲಾಪ ಪುನಃ ಪುನಃ ॥ ೨೦ ॥

ಸಾ ಚ ಕಾಲಾಂತರೇ ಸಾಧ್ವೀ ಬಭೂವ ಜನಕಾತ್ಮಜಾ ।
ಸೀತಾದೇವೀತಿ ವಿಖ್ಯಾತಾ ಯದರ್ಥೇ ರಾವಣೋ ಹತಃ ॥ ೨೧ ॥

ಮಹಾತಪಸ್ವಿನೀ ಸಾ ಚ ತಪಸಾ ಪೂರ್ವಜನ್ಮನಃ ।
ಲೇಭೇ ರಾಮಂ ಚ ಭರ್ತಾರಂ ಪರಿಪೂರ್ಣತಮಂ ಹರಿಂ ॥ ೨೨ ॥

೧೮-೧೯. 'ನನಗಾಗಿ ನೀನು ಬಂಧುಮಿತ್ರರೊಡನೆ ಮೃತಿಹೊಂದುವೆ' ಎಂದು ಶಾಪವಿತ್ತುದಲ್ಲದೆ, 'ಕಾಮಿಯಾದ ನೀನು ನನ್ನ ಶರೀರಸ್ಪರ್ಶಮಾಡಿ ಅಶುಚಿಗೊಳಿಸಿದುದರಿಂದ ನಿನ್ನ ಕಣ್ಣೆದುರಿನಲ್ಲಿಯೇ ಈ ದೇಹವನ್ನು ತ್ಯಜಿಸುವೆನು' ಎಂದು ಹೇಳುತ್ತ ಯೋಗಶಕ್ತಿಯಿಂದ ದೇಹತ್ಯಾಗ ಮಾಡಿದಳು. ರಾವಣನು ಆಕೆಯ ಮೃತಶರೀರವನ್ನು ಗಂಗೆಯೊಳಗೆ ಮುಳುಗಿಸಿ ತನ್ನ ಮನೆಗೆ ಹಿಂತಿರುಗಿದನು.

೨೦. ಮನೆಗೆ ಬಂದವನೇ 'ಅಯ್ಯೋ, ಏನನರ್ಥವಾಯಿತು. ಅತ್ಯದ್ಭುತವಾದ ಸ್ತ್ರೀರೂಪವನ್ನು ನೋಡಿ ನಾನು ಮಾಡಿದುದೇನು? ಅದರ ಪರಿಣಾಮವೇನು?' ಎಂದು ನೆನೆಸಿಕೊಳ್ಳುತ್ತಾ ಮತ್ತೆ ಮತ್ತೆ ಗೋಳಾಡಿದನು.

೨೧. ಇತ್ತ, ಸಾಧ್ವೀಶಿರೋಮಣಿಯಾದ ಆ ವೇದವತಿಯು ಜನ್ಮಾಂತರ ಹೊಂದಿ, ಜನಕರಾಜನ ಪುತ್ರಿಯಾದಳು. ಸೀತಾದೇವಿ ಎಂದು ಪ್ರಸಿದ್ಧಳಾದ ಆಕೆಯ ಸಲುವಾಗಿಯೇ ರಾವಣನು ಬಂಧುಮಿತ್ರರೊಡನೆ ಮೃತಿಹೊಂದಿದನು.

೨೨. ಮಹಾತಪಸ್ವಿನಿಯಾದ ಆಕೆಯು ಪೂರ್ವಜನ್ಮದ ತಪೋಮಹಿಮೆಯಿಂದ ಹರಿಯ ಪರಿಪೂರ್ಣಾವತಾರಿಯಾದ ಶ್ರೀರಾಮನನ್ನು ಪತಿಯಾಗಿ ಪಡೆದಳು.

ಸಂಪ್ರಾಪ್ಯ ತಪಸಾರಾಧ್ಯ ಸ್ವಾಮಿನಂ ಚ ಜಗತ್ಪತಿಂ ।
ಸಾ ರಮಾ ಸುಚಿರಂ ರೇಮೇ ರಾಮೇಣ ಸಹ ಸುಂದರೀ ॥ ೨೩ ॥

ಜಾತಿಸ್ಮರಾ ಸ್ಮಸ್ಮರತಿ ತಪಸಶ್ಚ ಕ್ರಮಂ ಪುರಾ ।
ಸುಖೇನ ತಜ್ಜಹೌ ಸರ್ವಂ ದುಃಖಂ ಚಾಪಿ ಸುಖಂ ಲಭೇತ್ ॥ ೨೪ ॥

ನಾನಾಪ್ರಕಾರವಿಭವಂ ಚಕಾರ ಸುಚಿರಂ ಸತೀ ।
ಸಂಪ್ರಾಪ್ಯ ಸುಕುಮಾರಂತಮತೀವ ನವಯೌವನಂ ॥ ೨೫ ॥

ಗುಣಿನಂ ರಸಿಕಂ ಶಾಂತಂ ಕಾಂತವೇಷಮನುತ್ತಮಂ ।
ಸ್ತ್ರೀಣಾಂ ಮನೋಜ್ಞಂ ರುಚಿರಂ ತಥಾ ಲೇಭೇ ಯಥೇಪ್ಸಿತಂ ॥ ೨೬ ॥

---

೨೩. ತಪಸ್ಸಿನಿಂದ ಮೆಚ್ಚಿಸಿ, ವರಿಸಿದ ಜಗತ್ಪತಿಯಾದ ತನ್ನ ಪತಿದೇವನನ್ನು (ಶ್ರೀರಾಮನನ್ನು) ಕೂಡಿ, ಲಕ್ಷ್ಮೀದೇವಿಯ ಅವತಾರಳಾದ ಆಕೆಯು ಬಹುಕಾಲ ರಮಿಸಿದಳು.

೨೪. ಜಾತಿಸ್ಮರಳಾದ ಆಕೆಯು ತನ್ನ ಪೂರ್ವಜನ್ಮದ ತಪಸ್ಸಿನ ಕಷ್ಟಗಳೆಲ್ಲವನ್ನೂ ಈ ಜನ್ಮದ ಸುಖದಿಂದ ಮರೆತು ತಲ್ಲೀನಳಾಗಿದ್ದಳು.

೨೫. ಅತಿಮನೋಹರನೂ, ನವಯೌವನಸಂಪನ್ನನೂ, ಆದ ಪತಿದೇವನನ್ನು ಕೂಡಿ ಆಕೆಯು ಅನೇಕ ರೀತಿಯಾದ ಶೃಂಗಾರರಸಾನುಭವವನ್ನು ಬಹಳ ಕಾಲ ಪಡೆದಳು.

೨೬. ಗುಣವಂತನೂ, ರಸಿಕಶ್ರೇಷ್ಠನೂ, ಸುಂದರವೇಷಭೂಷಿತನೂ, ಶಾಂತನೂ, ಸ್ತ್ರೀಯರಿಗೆ ಮನೋಹರನೂ ಆದ ಪತಿಯೊಡಗೂಡಿ ಚಿರಕಾಲ ಸುಖವಾಗಿದ್ದಳು.

ಪಿತುರ್ವಚಃ ಪಾಲನಾರ್ಥಂ ಸತ್ಯಸಂಧೋ ರಘೂತ್ತಮಃ ।
ಜಗಾಮ ಕಾನನಂ ಪಶ್ಚಾತ್ಕಾಲೇನ ಚ ಬಲೀಯಸಾ ॥ ೨೭ ॥

ತಸ್ಥೌ ಸಮುದ್ರನಿಕಟೇ ಸೀತಯಾ ಲಕ್ಷ್ಮಣೇನ ಚ ।
ದದರ್ಶ ತತ್ರ ವಹ್ನಿಂ ಚ ವಿಪ್ರರೂಪಧರಂ ಹರಿಃ ॥ ೨೮ ॥

ತಂ ರಾಮಂ ದುಃಖಿತಂ ದೃಷ್ಟ್ವಾ ಸ ಚ ದುಃಖೀ ಬಭೂವ ಹ ।
ಉವಾಚ ಕಿಂಚಿತ್ಸತ್ಯೇಷ್ಟಂ ಸತ್ಯಂ ಸತ್ಯಪರಾಯಣಃ ॥ ೨೯ ॥

॥ ವಹ್ನಿರುವಾಚ ॥

ಭಗವಂಚ್ಛ್ರೂಯತಾಂ ವಾಕ್ಯಂ ಕಾಲೇನ ಯದುಪಸ್ಥಿತಂ ।
ಸೀತಾಹರಣಕಾಲೋಽಯಂ ತವೈವ ಸಮುಪಸ್ಥಿತಃ ॥ ೩೦ ॥

ದೈವಂ ಚ ದುರ್ನಿವಾರ್ಯಂ ವೈ ನ ಚ ದೈವಾತ್ಪರಂ ಬಲಂ ।
ಮತ್ಪ್ರಸೂಂ ಮಯಿ ಸಂನ್ಯಸ್ಯ ಚ್ಛಾಯಾಂ ರಕ್ಷಾಂತಿಕೇಽಧುನಾ ॥ ೩೧ ॥

---

೨೭. ಹೀಗಿರಲು, ರಘುವಂಶದಲ್ಲಿ ಶ್ರೇಷ್ಠನೂ, ಸತ್ಯಪ್ರತಿಜ್ಞನೂ ಆದ ರಾಮನು, ತನ್ನ ತಂದೆಯ ವಚನ ಪರಿಪಾಲನೆಗಾಗಿ ಕಾಲಚಕ್ರಕ್ಕೆ ಸಿಲುಕಿ, ಕಾಡಿಗೆ ತೆರಳಿದನು.

೨೮. ಸೀತಾಲಕ್ಷ್ಮಣರೊಡಗೂಡಿ, ಸಮುದ್ರದ ಸಮೀಪದಲ್ಲಿ ನಿಂತಿದ್ದಾಗ ಶ್ರೀರಾಮನು ವಿಪ್ರರೂಪಧರನಾದ ಅಗ್ನಿದೇವನನ್ನು ಕಂಡನು.

೨೯. ಸತ್ಯಪರಾಯಣನಾದ ಆ ಅಗ್ನಿದೇವನು ದುಃಖಿತನಾದ ರಾಮನನ್ನು ನೋಡಿ, ತಾನೂ ದುಃಖಿತನಾಗಿ ಮುಂದಿನ ಕೆಲವು ಮಾತುಗಳನ್ನಾಡಿದನು.

೩೦. ಅಗ್ನಿದೇವ:—ಎಲೈ, ಭಗವಂತನಾದ ಶ್ರೀರಾಮನೇ, ನಿನ್ನ ಧರ್ಮಪತ್ನಿಯಾದ ಸೀತಾದೇವಿಯನ್ನು ಪಾಪಿಯಾದ ರಾವಣನು, ಅಪಹರಿಸುವ ದಾರುಣವಾದ ಕಾಲವು ಈಗ ಬಂದೊದಗಿದೆ.

೩೧. ಯಾರಿಗಾದರೂ ವಿಧಿಯು ಮೀರಲಳವಲ್ಲ. ವಿಧಿಗಿಂತ ಅಧಿಕರಾರೂ ಇಲ್ಲ. ಆದುದರಿಂದ ನನ್ನಿಂದ ಉತ್ಪತ್ತಿ ಪಡೆದ ಸೀತೆಯನ್ನು ನನ್ನಲ್ಲಿಯೇ ಇರಿಸಿ, ಈಗ ಛಾಯಾಸೀತೆಯನ್ನು ನಿನ್ನೊಡನೆ ಕರೆದುಕೋ.

ದಾಸ್ಯಾಮಿ ಸೀತಾಂ ತುಭ್ಯಂ ಚ ಪರೀಕ್ಷಾಸಮಯೇ ಪುನಃ ।
ದೇವೈಃ ಪ್ರಸ್ಥಾಪಿತೋಽಹಂ ಚ ನ ಚ ವಿಪ್ರೋ ಹುತಾಶನಃ ॥ ೩೨ ॥

ರಾಮಸ್ತದ್ವಚನಂ ಶ್ರುತ್ವಾ ನ ಪ್ರಕಾಶ್ಯ ಚ ಲಕ್ಷ್ಮಣಂ ।
ಸ್ವಚ್ಛಂದಂ ಸ್ವೀಚಕಾರಾಸೌ ಹೃದಯೇನ ವಿದೂಯತಾ ॥ ೩೩ ॥

ವಹ್ನಿರ್ಯೋಗೇನ ಸೀತಾವನ್ಮಾಯಾಸೀತಾಂ ಚಕಾರ ಹ ।
ತತ್ತುಲ್ಯಗುಣರೂಪಾಂ ತಾಂ ದದೌ ರಾಮಾಯ ನಾರದ ॥ ೩೪ ॥

ಸೀತಾಂ ಗೃಹೀತ್ವಾ ಸ ಯಯೌ ಗೋಪ್ಯಂ ವಕ್ತುಂ ನಿಷೇಧ್ಯ ಚ ।
ಲಕ್ಷ್ಮಣೋ ನೈವ ಬುಬುಧೇ ಗೋಪ್ಯಮನ್ಯಸ್ಯ ಕಾ ಕಥಾ ॥ ೩೫ ॥

---

೩೨. ಮುಂದೆ ಪರೀಕ್ಷಾಕಾಲವೊದಗಿದಾಗ ಸೀತೆಯ ಸತ್ಯಮೂರ್ತಿಯನ್ನು ನಿನಗೆ ಒಪ್ಪಿಸುವೆನು. ನಾನೂ ಸಾಮಾನ್ಯ ಬ್ರಾಹ್ಮಣನಲ್ಲ. ದೇವತೆಗಳಿಂದ ಪ್ರೇರಿಸಿ ಕಳುಹಿಸಲ್ಪಟ್ಟ ಅಗ್ನಿದೇವನೇ ನಾನು.

೩೩. ಆ ಮಾತನ್ನು ಕೇಳಿದ ರಾಮನು, ಲಕ್ಷ್ಮಣನಿಗೆ ಈ ವಿಷಯವನ್ನು ತಿಳಿಸದೆ ವ್ಯಥಿತವಾದ ಮನಸ್ಸಿನಿಂದಲೇ, ಸೀತೆಯನ್ನು ಅಗ್ನಿದೇವನಿಗೆ ಸಮರ್ಪಿಸಿ, ಛಾಯಾಸೀತೆಯನ್ನು ತನ್ನ ಇಷ್ಟದಿಂದಲೇ ಸ್ವೀಕರಿಸಲೊಪ್ಪಿದನು. (ಧೀರೋದತ್ತನಾದ ಲಕ್ಷ್ಮಣನು ಇದಕ್ಕೆ ಒಪ್ಪುತ್ತಿರಲಿಲ್ಲ.)

೩೪. ಆಗ ಅಗ್ನಿದೇವನು ಯೋಗಶಕ್ತಿಯಿಂದ ನಿಜವಾದ ಸೀತಾದೇವಿಯಂತೆಯೇ ಗುಣರೂಪಯುತಳಾದ ಛಾಯಾಸೀತೆಯನ್ನು ಸೃಜಿಸಿ ಶ್ರೀರಾಮನಿಗೆ ಒಪ್ಪಿಸಿದನು.

೩೫. ಶ್ರೀರಾಮನು ಆ ಛಾಯಾಸೀತೆಯನ್ನು ಸ್ವೀಕರಿಸಿ, ಆ ಗುಟ್ಟನ್ನು ಯಾರಿಗೂ ಹೇಳದಂತೆ ಆಕೆಗೆ ತಿಳಿಸಿದನು. ಆ ಗುಟ್ಟನ್ನು ಲಕ್ಷ್ಮಣನೇ ತಿಳಿಯಲಾಗಲಿಲ್ಲ. ಉಳಿದವರಿಗೆ ತಿಳಿಯುವುದೆಂತು?

ಏತಸ್ಮಿನ್ನಂತರೇ ರಾಮೋ ದದರ್ಶ ಕನಕಂ ಮೃಗಂ ।
ಸೀತಾ ತಂ ಪ್ರೇರಯಾಮಾಸ ತದರ್ಥೇ ಯತ್ನಪೂರ್ವಕಂ ॥ ೩೬ ॥

ಸಂನ್ಯಸ್ಯ ಲಕ್ಷ್ಮಣಂ ರಾಮೋ ಜಾನಕ್ಯಾ ರಕ್ಷಣೇ ವನೇ ।
ಸ್ವಯಂ ಜಗಾಮ ಹಂತುಂ ತಂ ವಿವ್ಯಧೇ ಸಾಯಕೇನ ಚ ॥ ೩೭ ॥

ಲಕ್ಷ್ಮಣೇತಿ ಚ ಶಬ್ದಂ ವೈ ಕೃತ್ವಾ ಮಾಯಾಮೃಗಸ್ತದಾ ।
ಪ್ರಾಣಾಂಸ್ತತ್ಯಾಜ ಸಹಸಾ ಪುರೋ ದೃಷ್ಟ್ವಾ ಹರಿಂ ಸ್ಮರನ್ ॥ ೩೮ ॥

ಮೃಗರೂಪಂ ಪರಿತ್ಯಜ್ಯ ದಿವ್ಯರೂಪಂ ವಿಧಾಯ ಚ ।
ರತ್ನನಿರ್ಮಿತಯಾನೇನ ವೈಕುಂಠಂ ಸ ಜಗಾಮ ಹ ॥ ೩೯ ॥

---

೩೬. ಅನಂತರ ಕೆಲವು ದಿವಸದ ಮೇಲೆ ಶ್ರೀರಾಮನು ಸುವರ್ಣಮೃಗವೊಂದನ್ನು ಆ ವನದಲ್ಲಿ ನೋಡಿದನು. ಸೀತೆಯು ಆ ಮೃಗವನ್ನು ಹಿಡಿದು ತರಬೇಕೆಂದು ರಾಮನನ್ನು ಬೇಡಿದಳು.

೩೭. ಆಗ ಶ್ರೀರಾಮನು ಸೀತಾರಕ್ಷಣಾರ್ಥವಾಗಿ ಲಕ್ಷ್ಮಣನನ್ನು ಆ ವನದಲ್ಲಿರಿಸಿ, ತಾನು ಮೃಗವನ್ನು ಪ್ರಯತ್ನಪೂರ್ವಕವಾಗಿ ಹಿಡಿಯಲು ಹಿಂಬಾಲಿಸಿ, ಕೊನೆಗೆ ಸಾಧ್ಯವಾಗದೆ ಬಾಣದಿಂದ ಅದನ್ನು ಕೊಂದನು.

೩೮. ಆ ಮಾಯಾಮೃಗವು " ಹೋ! ಲಕ್ಷ್ಮಣಾ! " ಎಂದು ಕೂಗುತ್ತ, ತನ್ನ ಮುಂದಿರುವ ಶ್ರೀರಾಮರೂಪಿಯಾದ ಹರಿಯನ್ನು ಸ್ಮರಿಸುತ್ತ ಪ್ರಾಣವನ್ನು ಬಿಟ್ಟಿತು.

೩೯. ಹರಿಸ್ಮರಣೆಯ ಪುಣ್ಯದಿಂದ ಮೃಗರೂಪವನ್ನು ಬಿಟ್ಟು, ದಿವ್ಯರೂಪಧಾರಿಯಾಗಿ, ರತ್ನನಿರ್ಮಿತವಾದ ದಿವ್ಯರಥದಲ್ಲಿ ಕುಳಿತು, ವೈಕುಂಠಕ್ಕೆ ತೆರಳಿತು.

ವೈಕುಂಠಸ್ಯ ಮಹಾದ್ವಾರೇ ಕಿಂಕರೋ ದ್ವಾರಪಾಲಯೋಃ ।
ಜಯವಿಜಯಯೋರ್ಶ್ಚೈವ ಬಲವಾಂಶ್ಚ ಜಯೋಭಿದಃ ॥ ೪೦ ॥

ಶಾಪೇನ ಸನಕಾದೀನಾಂ ಸಂಪ್ರಾಪ್ತೋ ರಾಕ್ಷಸೀಂ ತನುಂ ।
ಪುನರ್ಜಗಾಮ ತದ್ದ್ವಾರಮಾದೌ ಸದ್ದ್ವಾರಪಾಲಯೋಃ ॥ ೪೧ ॥

ಅಥ ಶಬ್ದಂ ಚ ಸಾ ಶ್ರುತ್ವಾ ಲಕ್ಷ್ಮಣೇತಿ ಚ ವಿಕ್ಲವಂ ।
ಸೀತಾ ತಂ ಪ್ರೇರಯಾಮಾಸ ಲಕ್ಷ್ಮಣಂ ರಾಮಸನ್ನಿಧೌ ॥ ೪೨ ॥

ಗತೇ ಚ ಲಕ್ಷ್ಮಣೇ ರಾಮಂ ರಾವಣೋ ದುರ್ನಿವಾರಣಃ ।
ಸೀತಾಂ ಗೃಹೀತ್ವಾ ಪ್ರಯಯೌ ಲಂಕಾಮೇವ ಸ್ವಲೀಲಯಾ ॥ ೪೩ ॥

ವಿಷಸಾದ ಚ ರಾಮಶ್ಚ ವನೇ ದೃಷ್ಟ್ವಾ ಚ ಲಕ್ಷ್ಮಣಂ ।
ತೂರ್ಣಂ ಚ ಸ್ವಾಶ್ರಮಂ ಗತ್ವಾ ಸೀತಾಂ ನೈವ ದದರ್ಶ ಸಃ ॥ ೪೪ ॥

೪೦–೪೧. ವೈಕುಂಠದ ಹೆಬ್ಬಾಗಿಲಿನಲ್ಲಿ ದ್ವಾರಪಾಲಕರಾಗಿದ್ದ ಜಯ, ವಿಜಯರೆಂಬ ಇಬ್ಬರು ಸೇವಕರಲ್ಲಿ ಬಲಿಷ್ಠನಾದ ಜಯನೆಂಬುವನು, ಸನಕಾದಿ ಮಹರ್ಷಿಗಳ ಶಾಪದಿಂದ ಈ ರೀತಿ ರಾಕ್ಷಸಶರೀರಧಾರಿಯಾಗಿ, ಮಾಯಾಮೃಗ ರೂಪವನ್ನು ತಾಳಿ, ರಾಮಬಾಣದಿಂದ ಮೃತಿಹೊಂದಿ, ಶಾಪವಿಮೋಚನೆ ಪಡೆದು, ಪುನಃ ದ್ವಾರಪಾಲಕನಾದನು.

೪೨. ಈ ಕಡೆ ‘ಹೋ ಲಕ್ಷ್ಮಣಾ!’ ಎಂದು ಕೂಗಿದ ಮೃಗದ ಧ್ವನಿಯನ್ನು ಕೇಳಿ, ಭಯಚಕಿತಳಾದ ಸೀತಾದೇವಿಯು, ರಾಮನ ಸಮೀಪಕ್ಕೆ ಹೋಗುವಂತೆ ಹೇಳಿ ಲಕ್ಷ್ಮಣನನ್ನು ಕಳುಹಿಸಿದಳು.

೪೩. ಲಕ್ಷ್ಮಣನು ಸೀತೆಯ ಮಾತಿನಂತೆ ರಾಮನೆಡೆಗೆ ಹೋದುದನ್ನು ತಿಳಿದ, ರಾವಣನು ಕಪಟಸನ್ಯಾಸಿಯ ರೂಪದಿಂದ ಬಂದು, ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ತೆರಳಿದನು.

೪೪. ಇತ್ತ ರಾಮನು, ಲಕ್ಷ್ಮಣನು ತನ್ನೆಡೆಗೆ ಬಂದುದನ್ನು ನೋಡಿ, ದುಃಖಿತನಾಗಿ, ಬಹಳ ಬೇಗ ಆಶ್ರಮಕ್ಕೆ ಬಂದು, ಅಲ್ಲಿ ಸೀತೆಯನ್ನು ಕಾಣದೆ ವ್ಯಸನಾಕ್ರಾಂತನಾದನು.

ಮೂರ್ಛಾಂ ಸಂಪ್ರಾಪ ಸುಚಿರಂ ವಿಲಲಾಪ ಭೃಶಂ ಪುನಃ ।
ಪುನರ್ಬಭ್ರಾಮ ಗಹನೇ ತದನ್ವೇಷಣಪೂರ್ವಕಂ ॥ ೪೫ ॥

ಕಾಲೇ ಸಂಪ್ರಾಪ್ಯ ತದ್ವಾರ್ತಾಂ ಗೃಧ್ರದ್ವಾರಾನದೀತಟೇ ।
ಸಹಾಯಂ ವಾನರಂ ಕೃತ್ವಾ ಚಾಬಧ್ನಾತ್ಸಾಗರಂ ಹರಿಃ ॥ ೪೬ ॥

ಲಂಕಾಂ ಗತ್ವಾ ರಘುಶ್ರೇಷ್ಠಶ್ಚಾವಧೀತ್ಸಾಯಕೇನ ಚ ।
ಸಬಾಂಧವಂ ರಾವಣಂ ಚ ಸೀತಾಂ ಸಂಪ್ರಾಪದುಃಖಿತಾಂ ॥ ೪೭ ॥

ತಾಂ ಚ ವಹ್ನಿಪರೀಕ್ಷಾಂ ವೈ ಕಾರಯಾಮಾಸ ಸತ್ವರಂ ।
ಹುತಾಶನಸ್ತತ್ರಕಾಲೇ ವಾಸ್ತವೀಂ ಜಾನಕೀಂ ದದೌ ॥ ೪೮ ॥

ಛಾಯಾ ಚೋವಾಚ ವಹ್ನಿಂ ಚ ರಾಮಂ ಚ ವಿನಯಾನ್ವಿತಾ ।
ಕರಿಷ್ಯಾಮೀತಿ ಕಿಮಹಂ ತದುಪಾಯಂ ವದಸ್ವ ಮೇ ॥ ೪೯ ॥

---

೪೫. ಬಹಳ ಕಾಲ ಮೂರ್ಛೆಗೊಂಡು, ಚೇತನಹೊಂದಿದ ಮೇಲೆ, ಮತ್ತೆ ಮತ್ತೆ ಗೋಳಾಡುತ್ತ, ಆಕೆಯನ್ನು ಹುಡುಕಿಕೊಂಡು, ಗೊಂಡಾರಣ್ಯದಲ್ಲಿ ಬಹುವಾಗಿ ಅವನು ಅಲೆದನು.

೪೬. ಅನಂತರ ನದಿಯ ದಡದಲ್ಲಿ ಜಟಾಯುವಿನ ಮುಖಾಂತರ, ಸೀತಾ ವೃತ್ತಾಂತವನ್ನು ತಿಳಿದು, ವಾನರರ ಸಹಾಯವನ್ನು ಪಡೆದು, ದಕ್ಷಿಣಸಮುದ್ರಕ್ಕೆ ಸೇತುಬಂಧನವನ್ನು ಮಾಡಿಸಿದನು.

೪೭. ರಘುಶ್ರೇಷ್ಠನಾದ ರಾಮನು ಲಂಕೆಗೆ ಹೋಗಿ, ರಾವಣನನ್ನೂ, ಅವನ ಬಂಧುಮಿತ್ರರನ್ನೂ ಸಂಹರಿಸಿ, ದುಃಖಿತೆಯಾದ ಸೀತೆಯನ್ನು ಸ್ವೀಕರಿಸಿದನು.

೪೮. ಆಕೆಯ ಪಾತಿವ್ರತ್ಯಪ್ರಕಟನೆಗಾಗಿ ಆಕೆಯನ್ನು ಅಗ್ನಿಕುಂಡದಲ್ಲಿ ಇಳಿಸಿ, ಮೆಚ್ಚಿದ ಅಗ್ನಿದೇವನಿಂದ, ವಾಸ್ತವಳಾದ ಸೀತೆಯನ್ನು ಪಡೆದನು.

೪೯. ಆಗ ಆ ಛಾಯಾಸೀತೆಯು ತಾನೇನು ಮಾಡಬೇಕೆಂದು ಶ್ರೀರಾಮನನ್ನೂ, ಅಗ್ನಿದೇವನನ್ನೂ ಕೇಳಿದಳು.

|| ವಹ್ನಿರುವಾಚ ||

ತ್ವಂ ಗಚ್ಛ ತಪಸೇ ದೇವಿ ಪುಷ್ಕರಂ ಚ ಸುಪುಣ್ಯದಂ |
ಕೃತ್ವಾ ತಪಸ್ಯಾಂ ತತ್ರೈವ ಸ್ವರ್ಗಲಕ್ಷ್ಮೀರ್ಭವಿಷ್ಯಸಿ || ೫೦ ||

ಸಾ ಚ ತದ್ವಚನಂ ಶ್ರುತ್ವಾ ಪ್ರತೇಪೇ ಪುಷ್ಕರೇ ತಪಃ |
ದಿವ್ಯಂ ತ್ರಿಲಕ್ಷವರ್ಷಂ ಚ ಸ್ವರ್ಗೇ ಲಕ್ಷ್ಮೀರ್ಬಭೂವ ಹ || ೫೧ ||

ಸಾ ಚ ಕಾಲೇನ ತಪಸಾ ಯಜ್ಞಕುಂಡಸಮುದ್ಭವಾ |
ಕಾಮಿನೀ ಪಾಂಡವಾನಾಂ ಚ ದ್ರೌಪದೀ ದ್ರುಪದಾತ್ಮಜಾ || ೫೨ ||

ಕೃತೇ ಯುಗೇ ವೇದವತೀ ಕುಶಧ್ವಜಸುತಾ ಶುಭಾ |
ತ್ರೇತಾಯಾಂ ರಾಮಪತ್ನೀ ಚ ಸೀತೇತಿ ಜನಕಾತ್ಮಜಾ || ೫೩ ||

---

೫೦. ಅಗ್ನಿದೇವ:—ಎಲೌ, ದೇವಿಯೇ, ನೀನು ಪುಣ್ಯಕರವಾದ ಪುಷ್ಕರ ಕ್ಷೇತ್ರಕ್ಕೆ ಹೋಗಿ ತಪವೆಸಗು. ಹೀಗೆ ಕೆಲವು ಕಾಲ ಅಲ್ಲಿ ತಪಸ್ಸು ಮಾಡಿ, ನೀನು ಸ್ವರ್ಗಲಕ್ಷ್ಮಿಯಾಗುವೆ.

೫೧. ಅಗ್ನಿದೇವನ ಈ ಮಾತನ್ನು ಕೇಳಿ, ಆ ಛಾಯಾಸೀತೆಯು ಪುಷ್ಕರ ಕ್ಷೇತ್ರದಲ್ಲಿ ದಿವ್ಯ ಮೂರುಲಕ್ಷ ವರ್ಷಗಳ ಕಾಲ ತಪಸ್ಸನಾಡಿ, ಸ್ವರ್ಗಲಕ್ಷ್ಮಿ ಯಾದಳು.

೫೨. ಕೆಲವು ಕಾಲ ಕಳೆದ ಮೇಲೆ, ಆಕೆಯೇ ತಪಃಶಕ್ತಿಯಿಂದ ಯಜ್ಞ ಕುಂಡದಲ್ಲಿ ಜನಿಸಿ, ದ್ರುಪದರಾಜನ ಮಗಳಾಗಿ, ದ್ರೌಪದಿಯೆನಿಸಿ, ಪಾಂಡವರ ಪತ್ನಿಯಾದಳು.

೫೩. ಕೃತಯುಗದಲ್ಲಿ ಕುಶಧ್ವಜನ ಮಗಳಾಗಿ ವೇದವತಿಯೆಂಬ ಹೆಸರಿನಿಂದ ಜನಿಸಿದ ಮಂಗಳಾಂಗಿಯೇ, ತ್ರೇತಾಯುಗದಲ್ಲಿ ಜನಕಪುತ್ರಿಯಾಗಿ ಸೀತೆಯೆನಿಸಿ ಕೊಂಡು ಶ್ರೀರಾಮನ ಪತ್ನಿಯಾದಳು.

ತಚ್ಛಾಯಾ ದ್ರೌಪದೀದೇವೀ ದ್ವಾಪರೇ ದ್ರುಪದಾತ್ಮಜಾ ।
ತ್ರಿಹಾಯಣೀತಿ ಸಾ ಪ್ರೋಕ್ತಾ ವಿದ್ಯಮಾನಾ ಯುಗತ್ರಯೇ ॥ ೫೪ ॥

॥ ನಾರದ ಉವಾಚ ॥

ಪ್ರಿಯಾಃ ಪಂಚ ಕಥಂ ತಸ್ಯಾ ಬಭೂವುರ್ಮುನಿಪುಂಗವ ।
ಇತಿ ಮೇ ಚಿತ್ತಸಂದೇಹಂ ದೂರೀಕುರು ಮಹಾಪ್ರಭೋ ॥ ೫೫ ॥

॥ ನಾರಾಯಣ ಉವಾಚ ॥

ಲಂಕಾಯಾಂ ವಸ್ತುತಃ ಸೀತಾ ರಾಮಂ ಸಂಪ್ರಾಪ ನಾರದ ।
ರೂಪಯೌವನಸಂಪನ್ನಾ ಛಾಯಾ ಸಾ ಬಹುವಿಹ್ವಲಾ ॥ ೫೬ ॥

ರಾಮಾಗ್ನ್ಯೋರಾಜ್ಞಯಾ ತಪ್ತ್ವಾ ಯಯಾಚೇ ಶಂಕರಂ ವರಂ ।
ಕಾಮಾತುರಾ ಪತಿವ್ಯಗ್ರಾ ಪ್ರಾರ್ಥಯಂತೀ ಪುನಃ ಪುನಃ ॥ ೫೭ ॥

---

೫೪. ಛಾಯಾರೂಪವನ್ನು ಪಡೆದ ಆ ಸೀತೆಯೇ, ದ್ವಾಪರಯುಗದಲ್ಲಿ ದ್ರುಪದರಾಜನ ಮಗಳಾಗಿ ದ್ರೌಪದಿಯೆನಿಸಿಕೊಂಡಳು. ಮೂರು ಯುಗದಲ್ಲಿ ಅವತರಿಸಿದುದರಿಂದ ' ತ್ರಿಹಾಯಣೀ ' ಎಂದು ಹೆಸರು ಪಡೆದಳು.

೫೫. ನಾರದ:—ಎಲೈ, ಮುನಿಶ್ರೇಷ್ಠನೇ, ಆ ದ್ರೌಪದಿಗೆ ಐವರು ಪತಿಗಳಾಗಲು ಕಾರಣವೇನು? ಇದನ್ನು ವ್ಯಕ್ತಪಡಿಸಿ ನನ್ನ ಮನಸ್ಸಿನ ಸಂದೇಹವನ್ನು ಪರಿಹರಿಸು.

೫೬–೫೭. ನಾರಾಯಣ:—ಎಲೈ, ನಾರದನೇ, ಲಂಕೆಯಲ್ಲಿ ವಾಸ್ತವಳಾದ ಸೀತೆಯು ರಾಮನನ್ನು ಸೇರಿದ ಮೇಲೆ ರೂಪಯೌವನ ಸಂಪನ್ನಳಾದ ಛಾಯಾ ಸೀತೆಯು ಚಿಂತಾಕ್ರಾಂತಳಾಗಿ, ಅಗ್ನಿ ಮತ್ತು ಶ್ರೀರಾಮನ ಆಜ್ಞೆಯಂತೆ ಶಂಕರನನ್ನು ಕುರಿತು ತಪಸ್ಸುಮಾಡಿ, ಕಾಮಾತುರಳೂ, ಪತಿಪರಾಯಣಳೂ ಆಗಿ, ಪುನಃ ಪುನಃ ಪತಿಯನ್ನು ಬೇಡಿದಳು.

ಪತಿಂ ದೇಹಿ ಪತಿಂ ದೇಹಿ ಪತಿಂ ದೇಹಿ ತ್ರಿಲೋಚನ ।
ಪತಿಂ ದೇಹಿ ಪತಿಂ ದೇಹಿ ಪಂಚವಾರಂ ಪತಿವ್ರತಾ　　|| ೫೮ ||

ಶಿವಸ್ತತ್ಪ್ರಾರ್ಥನಾಂ ಶ್ರುತ್ವಾ ಸಸ್ಮಿತೋ ರಸಿಕೇಶ್ವರಃ ।
ಪ್ರಿಯೇ ತವ ಪ್ರಿಯಾಃ ಪಂಚ ಭವಂತೀತಿ ವರಂ ದದೌ　　|| ೫೯ ||

ತೇನಾಸೀತ್ಪಾಂಡವಾನಾಂ ಚ ಪಂಚಾನಾಂ ಕಾಮಿನೀ ಪ್ರಿಯಾ ।
ಇತ್ಯೇವಂ ಕಥಿತಃ ಸರ್ವಂ ಪ್ರಸ್ತುತಂ ವಸ್ತುತಃ ಶ್ರುಣು　　|| ೬೦ ||

ಅಥ ಸಂಪ್ರಾಪ್ಯ ಲಂಕಾಯಾಂ ಸೀತಾಂ ರಾಮೋ ಮನೋಹರಾಂ ।
ವಿಭೀಷಣಾಯ ತಾಂ ಲಂಕಾಂ ದತ್ವಾಽಯೋಧ್ಯಾಂ ಯಯೌ ಪುನಃ || ೬೧ ||

ಏಕಾದಶಸಹಸ್ರಾಬ್ದಂ ಕೃತ್ವಾ ರಾಜ್ಯಂ ಚ ಭಾರತೇ ।
ಜಗಾಮ ಸರ್ವೈರ್ಲೋಕೈಶ್ಚ ಸಾರ್ಧಂ ವೈಕುಂಠಮೇವ ಚ　　|| ೬೨ ||

೫೮–೫೯. 'ಎಲೈ ಉಮಾಪತಿಯೇ, ನನಗೆ ಪತಿದೇವನನ್ನು ಅನುಗ್ರಹಿಸು' ಎಂದು ಆತುರದಲ್ಲಿ ಐದುಬಾರಿ ಕೇಳಿದುದರ ಫಲವಾಗಿ, ರಸಿಕಶ್ರೇಷ್ಠನಾದ ಶಂಕರನು ಅವಳ ಪ್ರಾರ್ಥನೆಯಂತೆ 'ನಿನಗೆ ಐವರು ಪತಿಗಳಾಗುವರೆಂದು' ವರವನ್ನಿತ್ತನು.

೬೦. ಆದುದರಿಂದ ಆಕೆಯು ಪಂಚಪಾಂಡವರಿಗೆ ಪತ್ನಿಯಾದಳು. ಈ ರೀತಿಯಾಗಿ ಛಾಯಾಸೀತೆಯು ವಿಚಾರವನ್ನು ತಿಳಿಸಿದುದಾಯಿತು. ಇನ್ನು ವಾಸ್ತವ ಸೀತೆಯ ವಿಚಾರವನ್ನು ಅರುಹುವೆನು, ಕೇಳು.

೬೧. ಇತ್ತ ಶ್ರೀರಾಮನು ಅಗ್ನಿದೇವನಿಂದ ವಾಸ್ತವಸೀತೆಯನ್ನು ಪಡೆದು ವಿಭೀಷಣನಿಗೆ ಲಂಕೆಯಲ್ಲಿ ಅಭಿಷೇಕಮಾಡಿ, ಅಯೋಧ್ಯೆಗೆ ಮತ್ತೆ ಹಿಂದಿರುಗಿದನು.

೬೨. ಹನ್ನೊಂದುಸಾವಿರವರ್ಷ ಭರತಖಂಡದಲ್ಲಿ ರಾಜ್ಯಭಾರಮಾಡಿ. ತನ್ನ ಸಮಸ್ತ ಪ್ರಜೆಗಳೊಡನೆ, ಶ್ರೀರಾಮನು ವೈಕುಂಠಕ್ಕೆ ತೆರಳಿದನು.

ಕಮಲಾಂಶಾ ವೇದವತೀ ಕಮಲಾಯಾಂ ವಿವೇಶ ಸಾ ।
ಕಥಿತಂ ಪುಣ್ಯಮಾಖ್ಯಾನಂ ಪುಣ್ಯದಂ ಪಾಪನಾಶನಂ ॥ ೬೩ ॥

ಸತತಂ ಮೂರ್ತಿಮಂತಶ್ಚ ವೇದಾಶ್ಚತ್ವಾರ ಏವ ಚ ।
ಸಂತಿ ಯಸ್ಯಾಶ್ಚ ಜಿಹ್ವಾಗ್ರೇ ಸಾ ಚ ವೇದವತೀ ಸ್ಮೃತಾ ॥ ೬೪ ॥

ಕುಶಧ್ವಜಸುತಾಖ್ಯಾನಮುಕ್ತಂ ಸಂಕ್ಷೇಪತಸ್ತವ ।
ಧರ್ಮಧ್ವಜಸುತಾಖ್ಯಾನಂ ನಿಬೋಧ ಕಥಯಾಮಿ ತೇ ॥ ೬೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ ವೇದವತೀ
ಪ್ರಸ್ತಾವೇ ಚತುರ್ದಶೋಽಧ್ಯಾಯಃ

---

೬೩. ಇತ್ತ ಕಮಲಾಂಶ ಸಂಭೂತಳಾದ ವೇದವತಿಯು ಕಮಲೆಯಲ್ಲಿಯೇ ಐಕ್ಯವಾದಳು. ಪುಣ್ಯಕರವೂ, ಪಾಪನಾಶಕವೂ, ಆದ ಪುಣ್ಯಚರಿತ್ರೆಯನ್ನು ನಿನಗೆ ಹೇಳಿದುದಾಯಿತು.

೬೪. ಚತುರ್ವೇದಗಳು ಯಾವಾಗಲೂ ಮೂರ್ತಿಮತ್ತಾಗಿ, ಆಕೆಯ ನಾಲಗೆಯ ತುದಿಯಲ್ಲಿರುವುದರಿಂದ ಆಕೆಯನ್ನು "ವೇದವತೀ" ಎಂದು ಕರೆಯುವರು.

೬೫. ಕುಶಧ್ವಜಪುತ್ರಿಯಾದ ವೇದವತಿಯ ಕಥೆಯನ್ನು ಸಂಕ್ಷೇಪವಾಗಿ ತಿಳಿಸಿದುದಾಯಿತು. ಈಗ ಧರ್ಮಧ್ವಜನ ಪುತ್ರಿಯ ಕಥೆಯನ್ನು ಹೇಳುವೆನು. ಅವಧರಿಸು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರಾಯಣ
ನಾರದ ಸಂವಾದದಲ್ಲಿ 'ವೇದವತೀಪ್ರಸ್ಥಾನ' ರೂಪವಾದ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಹದಿನಾಲ್ಕನೆಯ ಅಧ್ಯಾಯದ ಸಾರಾಂಶವು

ಧರ್ಮಧ್ವಜ ಕುಶಧ್ವಜರಿಬ್ಬರೂ, ಮಹಾಲಕ್ಷ್ಮಿಯ ವರದಂತೆ ರಾಜ್ಯವನ್ನು ಪಡೆದು ಸುಖವಾಗಿದ್ದರು. ಕುಶಧ್ವಜನ ಧರ್ಮಪತ್ನಿಯಲ್ಲಿ ಕನ್ಯೆಯೊಬ್ಬಳು ಲಕ್ಷ್ಮಿಯ ಅಂಶದಿಂದ ಅವತರಿಸಿ ಹುಟ್ಟಿದಕ್ಷಣದಲ್ಲಿಯೇ ವೇದೋಚ್ಚಾರಣೆ ಮಾಡುತ್ತ ವೇದವತಿಯೆಂದು ಪ್ರಸಿದ್ಧಿಪಡೆದು, ನಾರಾಯಣನನ್ನು ಕುರಿತು ತಪವೆಸಗಲಾರಂಭಿಸಿದಳು. ಹೀಗಿರುವಾಗ 'ನಾರಾಯಣನು ಮುಂದಿನ ಜನ್ಮದಲ್ಲಿ ನಿನಗೆ ಪತಿಯಾಗುವ'ನೆಂದು ಅಶರೀರವಾಣಿಯು ಆಕೆಗೆ ಕೇಳಿಸಿತು. ಅಸಂತುಷ್ಟಳಾದ ಆಕೆಯು ಇನ್ನೂ ಉಗ್ರವಾದ ತಪವೆಸಗುತ್ತಿರಲು–ದುಷ್ಟನಾದ ರಾವಣನು ಅಲ್ಲಿಗೆ ಬಂದು ಆಕೆಯಿಂದ ಅತಿಥಿಸತ್ಕಾರವನ್ನು ಸ್ವೀಕರಿಸಿ, ಆಕೆಯ ಮನೋಹರರೂಪಕ್ಕೆ ಮರುಳಾಗಿ, ಸಂಭೋಗಕ್ಕೆ ಬಲಾತ್ಕಾರಪಡಿಸಿ, ಅದರ ಫಲವಾಗಿ, ಲಕ್ಷ್ಮಿಗಾಗಿಯೇ ಬಂಧುಮಿತ್ರರೊಡನೆ ನಾಶವಾಗುವಂತೆ ಶಾಪಪಡೆದನು. ವೇದವತಿಯು ಕೂಡ ಆ ಪಾಪಿಯು ಮುಟ್ಟಿದ ತನ್ನ ದೇಹವನ್ನು ಅಗ್ನಿಯಲ್ಲಿ ತ್ಯಾಗಮಾಡಿ, ಜನಕರಾಜನಿಗೆ ಪುತ್ರಿಯಾಗಿ ಜನಿಸಿ, 'ಜಾನಕೀ' ಎನಿಸಿಕೊಂಡು ನಾರಾಯಣನ ಪೂರ್ಣಾವತಾರಿಯಾದ ಶ್ರೀರಾಮನನ್ನು ವರಿಸಿದಳು. ಶ್ರೀರಾಮನು ಪಿತೃವಾಕ್ಯಪರಿಪಾಲನೆಗಾಗಿ ಆಕೆಯೊಡನೆ ಅರಣ್ಯಕ್ಕೆ ತೆರಳಿ, ದೇವತೆಗಳಿಂದ ಪ್ರೇರಿತನಾದ ವಿಪ್ರರೂಪಿಯಾದ ಅಗ್ನಿದೇವನಿಗೆ ನಿಜವಾದ ಸೀತೆಯನ್ನರ್ಪಿಸಿ, ಛಾಯಾಸೀತೆಯನ್ನು ತನ್ನೊಡನೆ ಇಟ್ಟುಕೊಂಡಿದ್ದಾಗ, ಮಾರೀಚನು ಮೃಗದ ವೇಷಧಾರಿಯಾಗಿ, ಅಲ್ಲಿಗೆ ಬಂದು, ಶ್ರೀರಾಮನನ್ನು ಬೇರೆ ಕಡೆಗೆ ಒಯ್ದನು. ಅವನು ಶ್ರೀರಾಮಬಾಣಹತನಾಗಿ 'ಹೋ, ಲಕ್ಷ್ಮಣಾ!' ಎಂದು ಕೂಗಿದಾಗ, ಲಕ್ಷ್ಮಣನೂ ಅತ್ತ ತೆರಳಲು, ರಾವಣನು ಕಪಟಸನ್ಯಾಸಿವೇಷದಿಂದ ಛಾಯಾಸೀತೆಯನ್ನು ಅಪಹರಿಸಿದನು. ಅನಂತರ, ಶ್ರೀರಾಮನು ಜಟಾಯುವಿನಿಂದ ಈ ಸಮಾಚಾರವನ್ನು ತಿಳಿದು, ವಾನರರ ಸಹಾಯದಿಂದ ಸೇತುಬಂಧನ ಮಾಡಿ, ಲಂಕೆಗೆ ತೆರಳಿ, ರಾವಣನನ್ನು ಬಂಧುಮಿತ್ರರೊಡನೆ ಸಂಹರಿಸಿ, ನಿಜವಾದ ಸೀತೆಯನ್ನು ಪುನಃ ಪಡೆದನು. ಆ ಛಾಯಾಸೀತೆಯು ಶ್ರೀರಾಮನ ಮತ್ತು ಅಗ್ನಿದೇವನ

ವಾತಿನಂತೆ ಶಂಕರನನ್ನು ಕುರಿತು ತಪಸ್ಸುಮಾಡುತ್ತ, ಕಾಮಾತುರಳಾಗಿ ಐದು ಬಾರಿ 'ಪತಿಂದೇಹಿ' ಎಂದು ಬೇಡಿದುದರ ಫಲವಾಗಿ, ಮುಂದಿನ ಜನ್ಮದಲ್ಲಿ, ದ್ರುಪದರಾಜನಿಗೆ ಪುತ್ರಿಯಾಗಿ, 'ದ್ರೌಪದಿ' ಎನಿಸಿ, ಪಂಚಪಾಂಡವರಿಗೆ ಪತ್ನಿ ಯಾದಳು. ಇತ್ತ ಶ್ರೀರಾಮನು ವಾಸ್ತವ ಸೀತೆಯೊಡನೆ ಅಯೋಧ್ಯೆಗೆ ತೆರಳಿ, ಹನ್ನೊಂದುಸಾವಿರ ವರುಷ ರಾಜ್ಯವಾಳಿಕೊಂಡಿದ್ದು ನಂತರ ತನ್ನ ಪ್ರಜೆಗಳೊಡನೆ ವೈಕುಂಠಕ್ಕೆ ತೆರಳಿದನು.

ಕಮಲಾಂಶಸಂಭೂತಳಾದ ಸೀತಾದೇವಿಯು ಕಮಲೆಯಲ್ಲಿಯೇ ಐಕ್ಯ ಳಾದಳು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಪಂಚದಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಧರ್ಮಧ್ವಜಸ್ಯ ಪತ್ನೀ ಚ ಮಾಧವೀತಿ ಚ ವಿಶ್ರುತಾ ।
ನೃಪೇಣ ಸಾರ್ಧಂ ಸಾ ರಾಗಾದ್ರೇಮೇ ವೈ ಗಂಧಮಾದನೇ ॥ ೧ ॥

ಶಯ್ಯಾಂ ರತಿಕರೀಂ ಕೃತ್ವಾ ಪುಷ್ಪಚಂದನಚರ್ಚಿತಾ ।
ಚಂದನೋಕ್ಷಿತಸರ್ವಾಂಗೀ ಪುಷ್ಪಚಂಪನವಾಯುನಾ ॥ ೨ ॥

ಸ್ತ್ರೀರತ್ನಮತಿಚಾರ್ವಂಗೀ ರತ್ನಭೂಷಣಭೂಷಿತಾ ।
ಕಾಮುಕೀ ರಸಿಕಶ್ರೇಷ್ಠಾ ರಸಿಕೇಶೇನ ಸಂಗತಾ ॥ ೩ ॥

ಹದಿನೈದನೆಯ ಅಧ್ಯಾಯವು

೧. ನಾರಾಯಣ:—ಮಾಧವೀ ಎಂದು ಪ್ರಸಿದ್ಧಳಾದ ಧರ್ಮಧ್ವಜನ ಪತ್ನಿಯೂ ಕೂಡ ರಾಜನಾದ ತನ್ನ ಪತಿಯೊಡನೆ ಬಹುಕಾಲ ಗಂಧಮಾದನ ಪರ್ವತದಲ್ಲಿ ವಿಹರಿಸಿಕೊಂಡಿದ್ದಳು.

೨-೩. ಸ್ತ್ರೀಯರಿಗೆಲ್ಲ ರತ್ನಸ್ವರೂಪಳೂ, ಸುಂದರಾಂಗಿಯೂ, ಆದ ಅವಳು ಅಂಗಾಂಗಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು, ರತ್ನಾಭರಣಗಳಿಂದ ಅಲಂಕೃತಳಾಗಿ, ಪುಷ್ಪ ಚಂದನಗಳಿಂದ ಸುವಾಸಿತವಾಗಿ ರತಿಸುಖಕ್ಕೆ ಯೋಗ್ಯವಾದ ಹಾಸಿಗೆಯನ್ನು ಹಾಸಿಕೊಂಡು ರಸಿಕಶ್ರೇಷ್ಠನಾದ ಪತಿಯೊಡಗೂಡಿ, ಅತಿ ಕಾಮುಕಳಾಗಿ ರತಿಸುಖವನ್ನು ಅನುಭವಿಸಿದಳು.

ಸುರತಾದ್ವಿರತಿರ್ನಾಸೀತ್ತಯೋಃ ಸುರತವಿಜ್ಞಯೋಃ ।
ಗತಂ ವರ್ಷಶತಂ ದೈವಂ ನ ಜಾನೀತಾಂ ದಿವಾನಿಶಾಂ ॥ ೪ ॥

ತತೋ ರಜಸ್ವಲಾಂ ಪ್ರಾಪ್ಯ ಸುರತಾದ್ವಿರರಾಮ ಸಃ ।
ಕಾಮುಕೀ ಸುಂದರೀ ಕಿಂಚಿನ್ನ ಚ ತೃಪ್ತಿಂ ಜಗಾಮ ಸಾ ॥ ೫ ॥

ದಧಾರ ಗರ್ಭಂ ಸಾ ಸದ್ಯೋ ದೇವಾಬ್ದ ಶತಕಂ ಸತೀ ।
ಶ್ರೀಗರ್ಭಾ ಶ್ರೀಯುತಾ ಸಾ ಚ ಸಂಬಭೂವ ದಿನೇ ದಿನೇ ॥ ೬ ॥

ಶುಭಕ್ಷಣೇ ಶುಭದಿನೇ ಶುಭಯೋಗೇನ ಸಂಯುತೇ ।
ಶುಭಲಗ್ನೇ ಶುಭಾಂಶೇ ಚ ಶುಭಸ್ವಾಮಿಗ್ರಹಾನ್ವಿತೇ ॥ ೭ ॥

ಕಾರ್ತಿಕೀ ಪೂರ್ಣಿಮಾಯಾಂ ಚ ಸಿತವಾರೇ ಚ ಪದ್ಮಜೇ ।
ಸುಷಾವ ಸಾ ಚ ಪದ್ಮಾಂಶಾಂ ಪದ್ಮಿನೀಂ ಸುಮನೋಹರಾಂ ॥ ೮ ॥

---

೪. ಸಂಭೋಗಸುಖಿಗಳಾದ ಅವರಿಬ್ಬರಿಗೂ, ದಿವ್ಯನೂರು ವರ್ಷಗಳು ಕಳೆದರೂ, ಹಗಲುರಾತ್ರಿಗಳ ಗಣನೆಯಿಲ್ಲದೆ ಸುರತಸುಖಾನುಭವವಾಗುತ್ತಿತ್ತು.

೫. ಅನಂತರ ಮಾಧವಿಯು ರಜಸ್ವಲೆಯಾದುದನ್ನರಿತು ಧರ್ಮಧ್ವಜನು ಸಂಭೋಗಸುಖವನ್ನು ತ್ಯಜಿಸಿದನು. ಆದರೂ ಕಾಮುಕಿಯಾದ ಆ ಸುಂದರಿಗೆ ತೃಪ್ತಿಯಾಗಲೇ ಇಲ್ಲ.

೬. ರಜಸ್ವಲೆಯಾದ ಆಕೆಯು ಋತುಸ್ನಾತಳಾಗಿ ದಿವ್ಯನೂರು ವರ್ಷಗಳ ಕಾಲ ಗರ್ಭಧಾರಣೆಮಾಡಿಕೊಂಡಿದ್ದು ದಿನದಿನಕ್ಕೂ ಗರ್ಭಶ್ರೀಯಿಂದ ಕಾಂತಿಯುತಳಾಗುತ್ತಿದ್ದಳು.

೭-೮. ಮಂಗಳಕರವಾದ ಕಾರ್ತಿಕಪೂರ್ಣಿಮಾ ಸೋಮವಾರದ ಶುಭಮುಹೂರ್ತದಲ್ಲಿ, ಗ್ರಹಪಂಚಕಗಳು ಉಚ್ಚಸ್ಥಾನದಲ್ಲಿದ್ದು, ಶುಭಯುತರಾಗಿದ್ದ ಶುಭಲಗ್ನದಲ್ಲಿ ಪದ್ಮಾಂಶಸಂಭೂತಳೂ, ಮನೋಹರಳೂ ಆದ 'ಪದ್ಮಿನಿ' ಎಂಬುವಳನ್ನು ಆಕೆಯು ಪ್ರಸವಿಸಿದಳು.

ಪಾದಪದ್ಮಯುಗೇ ಚೈವ ಪದ್ಮರಾಗವಿರಾಜಿತಾಂ ।
ರಾಜರಾಜೇಶ್ವರೀಂ ಲಕ್ಷ್ಮೀಂ ಸರ್ವಾವಯವಸುಂದರೀಂ ॥ ೯ ॥

ರಾಜಲಕ್ಷ್ಮೀಂ ಲಕ್ಷ್ಮಯುಕ್ತಾಂ ರಾಜಲಕ್ಷ್ಮ್ಯಧಿದೇವತಾಂ ।
ಶರಚ್ಛಾರ್ವಣಚಂದ್ರಾಸ್ಯಾಂ ಶರತ್ಪಂಕಜಲೋಚನಾಂ ॥ ೧೦ ॥

ಪಕ್ವಬಿಂಬಾಧರೋಷ್ಠೀಂ ಚ ಪಶ್ಯಂತೀಂ ಸಸ್ಮಿತಾಂ ಗೃಹಂ ।
ಹಸ್ತಪಾದತಲಾರಕ್ತಾಂ ನಿಮ್ನನಾಭಿಂ ಮನೋರಮಾಂ ॥ ೧೧ ॥

ತದಧಸ್ತ್ರಿವಲೀಯುಕ್ತಾಂ ವೃತ್ತವಲ್ಗುನಿತಂಬಿನೀಂ ।
ಶೀತೇ ಸುಖೋಷ್ಣಸರ್ವಾಂಗೀಂ ಗ್ರೀಷ್ಮೇ ಚ ಸುಖಶೀತಲಾಂ ॥ ೧೨ ॥

ಶ್ಯಾಮಾಂ ಸುಕೇಶೀಂ ರುಚಿರಾಂ ನ್ಯಗ್ರೋಧಪರಿಮಂಡಲಾಂ ।
ಶ್ವೇತಚಂಪಕವರ್ಣಾಭಾಂ ಸುಂದರೀಷ್ವೇಕಸುಂದರೀಂ ॥ ೧೩ ॥

---

೯. ಆಕೆಯ ತಾವರೆಯಂತಿರುವ ಎರಡು ಕಾಲುಗಳಲ್ಲೂ ಪದ್ಮರಾಗರತ್ನವು ವಿರಾಜಿಸುತ್ತಿತ್ತು. ಸರ್ವಾವಯವಗಳಿಂದಲೂ ಸುಂದರಳಾಗಿದ್ದ ಆಕೆಯು ರಾಜ ರಾಜೇಶ್ವರಿಯಾಗಿದ್ದಳು.

೧೦-೧೧. ರಾಜ್ಯಲಕ್ಷ್ಮಿಯ ದಿವ್ಯಲಕ್ಷಣಗಳಿಂದ ಕೂಡಿ, ರಾಜ್ಯಸಂಪತ್ತಿಗೆ ಅಧಿದೇವತೆಯಾದ ಆಕೆಯು ಶರಚ್ಚಂದ್ರನಂತೆ ಹೊಳೆಯುವ ಮುಖದಿಂದಲೂ, ಕೆಂದಾವರೆಯಂತೆ ವಿಶಾಲವಾಗಿರುವ ಕಣ್ಣುಗಳಿಂದಲೂ, ಚೆನ್ನಾಗಿ ಪಕ್ವವಾಗಿರುವ ಬಿಂಬಫಲದಂತೆ ಕೆಂಪಾದ ಕೆಳತುಟಿಯಿಂದಲೂ, ತಾವರೆಯ ಎಸಳಿನಂತೆ ಕೋಮಲ ವಾದ ಪಾದಗಳಿಂದಲೂ, ಗಂಭೀರನಾಭಿಯಿಂದಲೂ ಕೂಡಿ ಮನೋಹರ ಳಾಗಿದ್ದಳು.

೧೨-೧೩. ತ್ರಿವಳಿಯಿಂದ ಶೋಭಿತವಾದ ನಾಭಿಯ ಕೆಳಭಾಗದಿಂದಲೂ, ದುಂಡಾಗಿ ದಪ್ಪನಾಗಿರುವ ನಿತಂಬದ್ವಯದಿಂದಲೂ, ಶೀತಕಾಲದಲ್ಲಿ ಸುಖೋಷ್ಣವೂ, ಉಷ್ಣಕಾಲದಲ್ಲಿ ಸುಖಶೀತಲವೂ ಆದ ಅವಯವಗಳಿಂದಲೂ, ಸುಂದರವಾದ ಕೇಶ ಪಾಶಗಳಿಂದಲೂ, ಮನೋಹರಳಾದ ಆ ಯುವತಿಯು ಸಂಪಿಗೆಯಂತಿರುವ ಮೈಬಣ್ಣದಿಂದ, ಸಮಸ್ತ ಸುಂದರಿಯರನ್ನೂ ಮೀರಿದ ಸುಂದರಿಯಾಗಿದ್ದಳು.

ನರಾ ನಾರ್ಯಶ್ಚ ತಾಂ ದೃಷ್ಟ್ವಾ ತುಲನಾಂ ದಾತುಮಕ್ಷಮಾಃ ।
ತೇನ ನಾಮ್ನಾ ಚ ತುಲಸೀಂ ತಾಂ ವದಂತಿ ಪುರಾವಿದಃ ॥ ೧೪ ॥

ಸಾ ಚ ಭೂಮಿಷ್ಠಮಾತ್ರೇಣ ಯೋಗ್ಯಾ ಸ್ತ್ರೀ ಪ್ರಕೃತಿರ್ಯಥಾ ।
ಸರ್ವೈರ್ನಿಷಿದ್ಧಾ ತಪಸೇ ಜಗಾಮ ಬದರೀವನಂ ॥ ೧೫ ॥

ತತ್ರ ದೈವಾಬ್ದಲಕ್ಷಂ ಚ ಚಕಾರ ಪರಮಂ ತಪಃ ।
ಮಮ ನಾರಾಯಣಃ ಸ್ವಾಮೀ ಭವಿತೇತಿ ವಿನಿಶ್ಚಿತಾ ॥ ೧೬ ॥

ಗ್ರೀಷ್ಮೇ ಪಂಚತಪಾಃ ಶೀತೇ ತೋಯಸ್ಥಾ ಸಾ ಚ ಸುಂದರೀ ।
ಪ್ರಕಾಶಸ್ಥಾ ವೃಷ್ಟಿಧಾರಾಂ ಸಹಂತೀ ಚ ದಿವಾನಿಶಂ ॥ ೧೭ ॥

ವಿಂಶತ್ಸಹಸ್ರವರ್ಷಂ ಚ ಫಲತೋಯಾಶನಾ ಚ ಸಾ ।
ತ್ರಿಂಶಚ್ಛತಸಹಸ್ರಾಬ್ದಂ ಪತ್ರಾಹಾರಾ ತಪಸ್ವಿನೀ ॥ ೧೮ ॥

---

೧೪. ಆಕೆಯನ್ನು ನೋಡಿದ ಸಮಸ್ತ ಸ್ತ್ರೀಪುರುಷರೂ, ಆಕೆಗೆ ತುಲನೆಯನ್ನು ಹೇಳಲಾರದೆ–' ತುಲಸೀ ' (ಹೋಲಿಕೆಯಿಲ್ಲದವಳು ಅಥವಾ ನಿರುಪಮಳು) ಎಂಬ ದಿವ್ಯನಾಮವನ್ನು ಆಕೆಗಿಟ್ಟರು.

೧೫. ಆಕೆಯು ಭೂಮಿಯ ಮೇಲೆ ಹುಟ್ಟಿದ ಮಾತ್ರದಿಂದಲೇ ಉತ್ತಮ ಸ್ತ್ರೀಯಂತೆ ಯಾರು ಯಾರು ನಿಷೇಧಿಸಿದರೂ ಕೇಳದೆ ಬದರಿಕಾಶ್ರಮಕ್ಕೆ ತಪಸ್ಸಿಗಾಗಿ ತೆರಳಿದಳು.

೧೬. ಅಲ್ಲದೆ ದಿವ್ಯಲಕ್ಷವರ್ಷಗಳ ಕಾಲ ದಾರುಣವಾದ ತಪವನ್ನಾಚರಿಸಿ, ' ನನಗೆ ನಾರಾಯಣನೇ ಪತಿಯಾಗುವನೆಂ 'ದು ನಿಷ್ಕರ್ಷೆಮಾಡಿಕೊಂಡಳು.

೧೭–೧೮. ಆ ಸುಂದರಿಯು ಗ್ರೀಷ್ಮಋತುವಿನಲ್ಲಿ ಪಂಚಾಗ್ನಿಯ ಮಧ್ಯದಲ್ಲಿಯೂ, ಶಿಶಿರ ಋತುವಿನಲ್ಲಿ ನೀರಿನ ಮಧ್ಯದಲ್ಲಿಯೂ, ವರ್ಷಋತುವಿನಲ್ಲಿ ಮಳೆಗರೆಯುತ್ತಿರುವ ಬಯಲಿನಲ್ಲಿಯೂ ನಿಂತುಕೊಂಡು ತಪಸ್ಸು ಮಾಡುತ್ತಿದ್ದಳು. ಇಪ್ಪತ್ತು ಸಾವಿರವರ್ಷ ಕಂದಮೂಲಫಲಗಳನ್ನೂ, ಮೂರುಲಕ್ಷವರ್ಷ ಒಣಗಿದ

ಚತ್ವಾರಿಂಶತ್ಸಹಸ್ರಾಬ್ದಂ ವಾಯ್ವಾಹಾರಾ ಕೃಶೋದರೀ ।
ತತೋ ದಶಸಹಸ್ರಾಬ್ದಂ ನಿರಾಹಾರಾ ಬಭೂವ ಸಾ ॥ ೧೯ ॥

ನಿರ್ಲಕ್ಷ್ಯಾಂ ಚೈಕಪಾದಸ್ಥಾಂ ದೃಷ್ಟ್ವಾ ತಾಂ ಕಮಲೋದ್ಭವಃ ।
ಸಮಾಯಯೌ ವರಂ ದಾತುಂ ಪರಂ ಬದರಿಕಾಶ್ರಮಂ ॥ ೨೦ ॥

ಚತುರ್ಮುಖಂ ಚ ಸಾ ದೃಷ್ಟ್ವಾ ಪ್ರಣಂಸೀದ್ಧಂಸವಾಹನಂ ।
ತಾಮುವಾಚ ಜಗತ್ಕರ್ತಾ ವಿಧಾತಾ ಜಗತಾಮಪಿ ॥ ೨೧ ॥

॥ ಬ್ರಹ್ಮೋವಾಚ ॥

ವರಂ ವೃಣುಷ್ವ ತುಲಸಿ ಯತ್ತೇ ಮನಸಿ ವಾಂಛಿತಂ ।
ಹರಿಭಕ್ತಿಂ ಚ ಮುಕ್ತಿಂ ವಾಪ್ಯಜರಾಮರತಾಮಪಿ ॥ ೨೨ ॥

ಎಲೆಯನ್ನೂ, ನಲವತ್ತು ಸಾವಿರವರ್ಷ ವಾಯುವನ್ನೂ ಆಹಾರವಾಗಿ ಸೇವಿಸಿ ಕೃಶಾಂಗಳಾಗಿ, ಅನಂತರ ಹತ್ತುಸಾವಿರ ವರ್ಷಗಳ ಕಾಲ ಆಹಾರವೂ ಇಲ್ಲದೆಯೇ ತಪಸ್ಸು ಮಾಡಿದಳು.

೨೦. ಒಂಟಿಕಾಲಿನಲ್ಲಿ ನಿಂತುಕೊಂಡು, ದೃಷ್ಟಿಯನ್ನು ನಾಸಿಕಾಗ್ರದಲ್ಲಿಟ್ಟು ತಪಸ್ಸು ಮಾಡುತ್ತಿದ್ದ ಆಕೆಯನ್ನು ನೋಡಿ ದಯಾಮಯನಾದ ಬ್ರಹ್ಮನು ವರವನ್ನು ದಯಪಾಲಿಸಲು ಬದರಿಕಾಶ್ರಮಕ್ಕೆ ಬಂದನು.

೨೧. ಹಂಸವಾಹನನಾದ ಚತುರ್ಮುಖಬ್ರಹ್ಮನನ್ನು ನೋಡಿ ಆಕೆಯು ಸಾಷ್ಟಾಂಗ ನಮಸ್ಕಾರಮಾಡಿದಳು. ಜಗತ್ಸೃಷ್ಟಿಕರ್ತನಾದ ಆ ಬ್ರಹ್ಮನು ಆಕೆಯನ್ನು ಕುರಿತು ಇಂತು ನುಡಿದನು.

೨೨. ಬ್ರಹ್ಮದೇವ:— ಎಲೌ ತುಲಸೀದೇವಿಯೇ, ನಿನಗೆ ಅಭೀಷ್ಟವಾದ ವರವನ್ನು ಬೇಡಿಕೋ! ಹರಿಭಕ್ತಿಯನ್ನಾಗಲೀ, ಮುಕ್ತಿಯನ್ನಾಗಲೀ, ಜರಾಮರಣ ರಾಹಿತ್ಯವನ್ನಾಗಲೀ ನೀನು ಬೇಡಿಕೋ.

|| ತುಲಸ್ಯುವಾಚ ||

ಶೃಣು ತಾತ ಪ್ರವಕ್ಷ್ಯಾಮಿ ಯನ್ಮೇ ಮನಸಿ ವಾಂಛಿತಂ ।
ಸರ್ವಜ್ಞಸ್ಯಾಪಿ ಪುರತಃ ಕಾ ಲಜ್ಜಾ ಮಮ ಸಾಂಪ್ರತಂ || ೨೩ ||

ಅಹಂ ಚ ತುಲಸೀ ಗೋಪೀ ಗೋಲೋಕೇಽಹಂ ಸ್ಥಿತಾ ಪುರಾ ।
ಕೃಷ್ಣಪ್ರಿಯಾ ಕಿಂಕರೀ ಚ ತದಂಶಾ ತತ್ಸಖೀಪ್ರಿಯಾ || ೨೪ ||

ಗೋವಿಂದೇನ ಸಹಾಸಕ್ತಾಮತೃಪ್ತಾಂ ಮಾಂ ಚ ಮೂರ್ಛಿತಾಂ ।
ರಾಸೇಶ್ವರೀ ಸಮಾಗತ್ಯ ದದರ್ಶ ರಾಸಮಂಡಲೇ || ೨೫ ||

ಗೋವಿಂದಂ ಭರ್ತ್ಸಯಾಮಾಸ ಮಾಂ ಶಶಾಪ ರುಷಾನ್ವಿತಾ ।
ಯಾಹಿ ತ್ವಂ ಮಾನವೀಂ ಯೋನಿಮಿತ್ಯೇವಂ ಚ ಪಿತಾಮಹ || ೨೬ ||

---

೨೩. ತುಲಸೀದೇವಿ :—ಎಲೈ ಪಿತಾಮಹನೇ, ಸರ್ವಜ್ಞನಾದ ನಿನಗೆ ನನ್ನ ಮನೋಭಿಲಾಷೆಯನ್ನು ಅರುಹಲು ನಾನೇಕೆ ನಾಚಿಕೊಳ್ಳಬೇಕು. ನನ್ನ ಅಭಿಲಾಷೆಯನ್ನು ಹೇಳುವೆನು ಕೇಳು.

೨೪. ನಾನು 'ತುಲಸಿ' ಎಂಬ ಗೋಪಿದೇವಿಯು. ಪೂರ್ವದಲ್ಲಿ ಗೋಲೋಕದಲ್ಲಿದ್ದೆನು ಕೃಷ್ಣಪ್ರಿಯಳೂ, ಕೃಷ್ಣನ ಸೇವಕಿಯೂ ಆಗಿ, ಯಾವಾಗಲೂ ಅವನೊಡನಾಡಿಕೊಂಡಿದ್ದೆನು.

೨೫. ಶ್ರೀಕೃಷ್ಣಪರಮಾತ್ಮನಲ್ಲಿ ಅತ್ಯಾಸಕ್ತಳಾಗಿ ಅವನ ಸಹವಾಸದಿಂದ ತೃಪ್ತಳಾಗದೆ ಮೂರ್ಛೆಗೊಂಡಿದ್ದ ನನ್ನನ್ನು ರಾಸೇಶ್ವರಿಯಾದ ರಾಧಾದೇವಿಯು ರಾಸಮಂಡಲದಲ್ಲಿ ನೋಡಿದಳು.

೨೬. ಕೂಡಲೇ ಶ್ರೀಕೃಷ್ಣಪರಮಾತ್ಮನನ್ನು ಧಿಕ್ಕರಿಸಿ ನುಡಿದುದಲ್ಲದೆ ಕುಪಿತಳಾಗಿ ಮನುಜಯೋನಿಯಲ್ಲಿ ಜನ್ಮವೆತ್ತಿ ಭಾರತಕ್ಕೆ ಹೋಗುವಂತೆ ನನಗೆ ಶಾಪವನ್ನಿತ್ತಳು.

ಮಾಮುವಾಚ ಸ ಗೋವಿಂದೋ ಮದಂಶಂ ತ್ವಂ ಚತುರ್ಭುಜಂ ।
ಲಭಿಷ್ಯಸಿ ತಪಸ್ತ್ವಸ್ತ್ವಾ ಭಾರತೇ ಬ್ರಹ್ಮಣೋ ವರಾತ್ ॥ ೨೭ ॥

ಇತ್ಯೇವಮುಕ್ತ್ವಾ ದೇವೇಶೋಽಪ್ಯಂತರ್ಧಾನಮುವಾಪ ಸಃ ।
ದೇವ್ಯಾ ಭಿಯಾ ತನುಂ ತ್ಯಕ್ತ್ವಾ ಲಬ್ಧಂ ಜನ್ಮ ಮಯಾ ಭುವಿ ॥ ೨೮ ॥

ಅಹಂ ನಾರಾಯಣಂ ಕಾಂತಂ ಶಾಂತಂ ಸುಂದರವಿಗ್ರಹಂ ।
ಸಾಂಪ್ರತಂ ಲಬ್ಧುಮಿಚ್ಛಾಮಿ ವರಮೇವಂ ಚ ದೇಹಿ ಮೇ ॥ ೨೯ ॥

॥ ಬ್ರಹ್ಮೋವಾಚ ॥

ಸುದಾಮಾ ನಾಮ ಗೋಪಶ್ಚ ಶ್ರೀಕೃಷ್ಣಾಂಗಸಮುದ್ಭವಃ ।
ತದಂಶಶ್ಚಾತಿತೇಜಸ್ವೀ ಚಾಲಭಜ್ಜನ್ಮ ಭಾರತೇ ॥ ೩೦ ॥

ಸಾಂಪ್ರತಂ ರಾಧಿಕಾಶಾಪಾದ್ದನುವಂಶಸಮುದ್ಭವಃ ।
ಶಂಖಚೂಡ ಇತಿ ಖ್ಯಾತಸ್ತ್ರೈಲೋಕ್ಯೇ ನ ಚ ತತ್ಪರಃ ॥ ೩೧ ॥

---

೨೭. ಅನಂತರ ಗೋವಿಂದನು ನನ್ನನ್ನು ಸಮಾಧಾನಪಡಿಸಿ ಭಾರತದಲ್ಲಿರುವಾಗ ನನ್ನ ಅಂಶದಿಂದ ಜನಿಸಿದ ಚತುರ್ಭುಜನೇ ನಿನಗೆ ಬ್ರಹ್ಮನ ವರದಿಂದ ಪತಿಯಾಗುವನೆಂದು ಹೇಳಿದನು.

೨೮. ಹೀಗೆ ನುಡಿದು ಶ್ರೀಕೃಷ್ಣನು ಕಣ್ಮರೆಯಾಗಲು ರಾಧಾದೇವಿಯ ಭಯದಿಂದ ನಾನು ದೇಹತ್ಯಾಗಮಾಡಿ ಭಾರತಭೂಮಿಯಲ್ಲಿ ಜನ್ಮವೆತ್ತಿದೆನು.

೨೯. ಆದ್ದರಿಂದ, ನಾನು ಸುಂದರಾಂಗನೂ, ಮನೋಹರನೂ, ಶಾಂತಸ್ವರೂಪನೂ ಆದ ನಾರಾಯಣನನ್ನೇ ಪತಿಯನ್ನಾಗಿ ವರಿಸಲು ಬಯಸುವೆನು. ನೀನು ಈ ವರವನ್ನು ಅನುಗ್ರಹಿಸು.

೩೦. ಬ್ರಹ್ಮ:—ಶ್ರೀಕೃಷ್ಣಾವಯವಸಂಭೂತನಾದ ಸುದಾಮನೆಂಬ ಗೋಪನು ಭಾರತದಲ್ಲಿ ಜನ್ಮವೆತ್ತಿ, ಅತಿತೇಜಸ್ವಿಯಾಗಿದ್ದಾನೆ.

೩೧. ರಾಧಾಶಾಪದಿಂದ ಈಗ ಅವನು ದನುವಂಶದಲ್ಲಿ ಶಂಖಚೂಡನೆಂಬ ಹೆಸರಿನಿಂದ ಜನಿಸಿರುವನು. ತ್ರೈಲೋಕ್ಯದಲ್ಲಿಯೂ ಅವನಿಗೆ ಎಣೆ(ಸಮ)ಯಾದವರು ಯಾರೂ ಇರುವುದಿಲ್ಲ.

ಗೋಲೋಕೇ ತ್ವಾಂ ಪುರಾ ದೃಷ್ಟ್ವಾ ಕಾಮೋನ್ಮಥಿತಮಾನಸಃ ।
ವಿಲಂಘಿತುಂ ನ ಶಕ್ನೋತಿ ರಾಧಿಕಾಯಾಃ ಪ್ರಭಾವತಃ ॥ ೩೨ ॥

ಸ ಚ ಜಾತಿಸ್ಮರಸ್ತಪ್ತ್ವಾ ತ್ವಾಂ ಲಲಾಭ ವರೇಣ ಚ ।
ಜಾತಿಸ್ಮರಾ ತು ತ್ವಮಪಿ ಸರ್ವಂ ಜಾನಾಸಿ ಸುಂದರಿ ॥ ೩೩ ॥

ಅಧುನಾ ತಸ್ಯ ಪತ್ನೀ ಚ ಭವ ಭಾವಿನಿ ಶೋಭನೇ ।
ಪಶ್ಚಾನ್ನಾರಾಯಣಂ ಕಾಂತಂ ಶಾಂತಮೇವ ಲಭಿಷ್ಯಸಿ ॥ ೩೪ ॥

ಶಾಪಾನ್ನಾರಾಯಣಸ್ಯೈವ ಕಲಯಾ ದೈವ ಯೋಗತಃ ।
ಪ್ರಾಪ್ನೋಷಿ ವೃಕ್ಷರೂಪಂ ತಂ ತ್ವಂ ಪೂತಾ ವಿಶ್ವಪಾವನೀ ॥ ೩೫ ॥

ಪ್ರಧಾನಾ ಸರ್ವಪುಷ್ಪಾಣಾಂ ವಿಷ್ಣುಪ್ರಾಣಾಧಿಕಾ ಭವೇತ್ ।
ತ್ವಯಾ ವಿನಾ ಚ ಸರ್ವೇಷಾಂ ಪೂಜಾ ಚ ವಿಫಲಾ ಭವೇತ್ ॥ ೩೬ ॥

---

೩೨. ಹಿಂದೆ ಅವನು ಗೋಲೋಕದಲ್ಲಿ ನಿನ್ನನ್ನು ನೋಡಿ ಕಾಮೋದ್ದೀಪಿತನಾದರೂ, ರಾಧೆಯ ಪ್ರಭಾವದಿಂದ ಅತಿಕ್ರಮಮಾಡಲಾಗಲಿಲ್ಲ.

೩೩. ಜಾತಿಸ್ಮರನಾದ ಅವನು ಈಗ ತಪಸ್ಸುಮಾಡಿ, ನಿನ್ನನ್ನೇ ಹೊಂದಲು ವರಪಡೆದಿರುವನು. ಎಲೌ, ಸುಂದರಾಗಿಯೇ, ಜಾತಿಸ್ಮರಳಾದ ನೀನು ಸಕಲವನ್ನೂ ತಿಳಿದಿರುತ್ತೀಯೆ.

೩೪. ಆದುದರಿಂದ ಎಲೌ ಶೋಭನಾಂಗಿಯೇ, ಈಗ ನೀನು ಆ ಶಂಖಚೂಡನಿಗೆ ಪತ್ನಿಯಾಗಿದ್ದು, ಮುಂದಿನ ಜನ್ಮದಲ್ಲಿ ಶಾಂತನಾದ ನಾರಾಯಣನನ್ನೇ ಕಾಂತನನ್ನಾಗಿ ಹೊಂದುವೆ.

೩೫. ನಾರಾಯಣನ ಶಾಪದಂತೆ ನಿನ್ನದೊಂದು ಕಲೆಯಿಂದ ನೀನು ವೃಕ್ಷಸ್ವರೂಪಳಾಗಿ ವಿಶ್ವದಲ್ಲೆಲ್ಲಾ ಅತಿಪಾವನಳೆನಿಸುವೆ.

೩೬. ಸಮಸ್ತ ಪತ್ರಪುಷ್ಪಗಳಿಗೂ ಪ್ರಧಾನಳಾಗಿ ವಿಷ್ಣುವಿನ ಪ್ರಾಣಕ್ಕಿಂತಲೂ ಪ್ರಿಯಳಾಗುವೆ. ನಿನ್ನನ್ನು ಬಿಟ್ಟು ಮಾಡಿದ ಪೂಜೆಯೆಲ್ಲವೂ ವಿಫಲವಾಗುವುದು.

ವೃಂದಾವನೇ ವೃಕ್ಷರೂಪಾ ನಾಮ್ನಾ ವೃಂದಾವನೀತಿ ಚ ।
ತ್ವತ್ಪತ್ರೈರ್ಗೋಪಿಕಾ ಗೋಪಾಃ ಪೂಜಯಿಷ್ಯಂತಿ ಮಾಧವಂ ॥ ೩೭ ॥

ವೃಕ್ಷಾಧಿದೇವೀ ರೂಪೇಣ ಸಾರ್ಧಂ ಕೃಷ್ಣೇನ ಸಂತತಂ ।
ವಿಹರಿಷ್ಯಸಿ ಗೋಪೇನ ಸ್ವಚ್ಛಂದಂ ಮದ್ವರೇಣ ಚ ॥ ೩೮ ॥

ಇತ್ಯೇವಂ ವಚನಂ ಶ್ರುತ್ವಾ ಸಸ್ಮಿತಾ ಹೃಷ್ಟಮಾನಸಾ ।
ಪ್ರಣನಾಮ ಚ ಧಾತಾರಂ ತಂ ಚ ಕಿಂಚಿದುವಾಚ ಹ ॥ ೩೯ ॥

॥ ತುಲಸ್ಯುವಾಚ ॥

ಯಥಾ ಮೇ ದ್ವಿಭುಜೇ ಕೃಷ್ಣೇ ವಾಂಛಾ ಚ ಶ್ಯಾಮಸುಂದರೇ ।
ಸತ್ಯಂ ಬ್ರವೀಮಿ ಹೇ ತಾತ ನ ತಥಾ ಚ ಚತುರ್ಭುಜೇ ॥ ೪೦ ॥

---

೩೭. ವೃಂದಾವನದಲ್ಲಿ ವೃಕ್ಷರೂಪಳಾಗಿ 'ವೃಂದಾವನೀ' ಎನಿಸಿಕೊಳ್ಳುವೆ. ನಿನ್ನ ಪತ್ರದಿಂದ ಗೋಪಗೋಪಿಯರೆಲ್ಲರೂ ಶ್ರೀಕೃಷ್ಣನನ್ನು ಪೂಜಿಸುವರು.

೩೮. ವೃಕ್ಷಾಧಿದೇವತೆಯಾದ ನೀನು ಗೋಪವೇಷಧಾರಿಯಾದ ಶ್ರೀಕೃಷ್ಣನೊಡನೆ ಅನವರತ ವಿಹರಿಸುತ್ತಾ ನನ್ನ ವರದಂತೆ ಸ್ವಚ್ಛಂದ ಸುಖವನ್ನು ಪಡೆಯುತ್ತೀಯೆ.

೩೯. ಇಂತು ನುಡಿದ, ಬ್ರಹ್ಮದೇವನ ಅಮೃತವಾಣಿಯನ್ನು ಕೇಳಿ, ಆಕೆಯು ಸಂತಸಗೊಂಡು ಮುಗುಳುನಗೆಯನ್ನು ನಗುತ್ತಾ, ಬ್ರಹ್ಮನಿಗೆ ಸಾಷ್ಟಾಂಗವೆರಗಿ ಅವನನ್ನು ಕುರಿತು ಕೆಲವು ಮಾತನ್ನಾಡಿದಳು.

೪೦. ತುಳಸಿ ಎಲೌ ಪಿತಾಮಹನೇ, ಶ್ಯಾಮಸುಂದರನೂ, ದ್ವಿಭುಜನೂ ಆದ ಶ್ರೀಕೃಷ್ಣನಲ್ಲಿ ನನ್ನ ಮನವೊಲಿಯುವಂತೆ ಸತ್ಯವಾಗಿಯೂ ಚತುರ್ಭುಜನಲ್ಲಿ ಒಲಿಯುವುದಿಲ್ಲ.

ಅತೃಪ್ತಾಹಂ ಚ ಗೋವಿಂದೇ ದೈವಾಚ್ಛೃಂಗಾರಭಂಗತಃ ।
ಗೋವಿಂದಸ್ಯೈವಚನಾತ್ಪ್ರಾರ್ಥಯಾಮಿ ಚತುರ್ಭುಜಂ ॥ ೪೧ ॥

ತ್ವತ್ಪ್ರಸಾದೇನ ಗೋವಿಂದಂ ಪುನರೇವ ಸುದುರ್ಲಭಂ ।
ಧ್ರುವಮೇವಂ ಲಭಿಷ್ಯಾಮಿ ರಾಧಾಭೀತಿಂ ಪ್ರಮೋಚಯ ॥ ೪೨ ॥

॥ ಬ್ರಹ್ಮೋವಾಚ ॥

ಗೃಹಾಣ ರಾಧಿಕಾಮಂತ್ರಂ ದದೇ ವೈ ಷೋಡಶಾಕ್ಷರಂ ।
ತಸ್ಯಾಶ್ಚ ಪ್ರಾಣತುಲ್ಯಾ ತ್ವಂ ಮದ್ವರೇಣ ಭವಿಷ್ಯಸಿ ॥ ೪೩ ॥

ಶೃಂಗಾರಂ ಯುವಯೋರ್ಗೋಪ್ಯಮಾಜ್ಞಾಸ್ಯತಿ ಚ ರಾಧಿಕಾ ।
ರಾಧಾಸಮಾ ತ್ವಂ ಸುಭಗಾ ಗೋವಿಂದಸ್ಯ ಭವಿಷ್ಯಸಿ ॥ ೪೪ ॥

ಇತ್ಯೇವಮುಕ್ತ್ವಾ ದತ್ವಾ ಚ ದೇವ್ಯೈ ತತ್ಷೋಡಶಾಕ್ಷರಂ ।
ಮಂತ್ರಂ ತಸ್ಯೈ ಜಗದ್ಧಾತಾ ಸ್ತೋತ್ರಂ ಚ ಕವಚಂ ವರಂ ॥ ೪೫ ॥

---

೪೧. ದೈವಯೋಗದಿಂದ ಶೃಂಗಾರರಸಾನುಭವಕ್ಕೆ ಭಂಗಬಂದು, ನಾನು ಶ್ರೀಕೃಷ್ಣನಿಂದ ತೃಪ್ತಿಗೊಳ್ಳಲಾರದೆ ಅವನ ಮಾತಿನಂತೆಯೇ ಚತುರ್ಭುಜನನ್ನು ಬೇಡುತ್ತಿರುವೆನು.

೪೨. ಆ ಚತುರ್ಭುಜನ ಅನುಗ್ರಹದಿಂದ ಮತ್ತೆ ಅತ್ಯಂತ ದುರ್ಲಭನಾದ. ದ್ವಿಭುಜನಾದ ಶ್ರೀಕೃಷ್ಣನನ್ನು ಹೊಂದಬಲ್ಲೆನು. ಆದರೆ ನೀನು ರಾಧಾದೇವಿಯ ಭಯವನ್ನು ಮಾತ್ರ ದೂರಮಾಡು.

೪೩. ಬ್ರಹ್ಮ:—ಹದಿನಾರು ಅಕ್ಷರಗಳಿಂದ ಕೂಡಿದ ರಾಧಿಕಾ ಮಂತ್ರವನ್ನು ನಿನಗೆ ಉಪದೇಶಿಸುವೆನು. ಸ್ವೀಕರಿಸು. ಅನಂತರ ಅದರ ಜಪದಿಂದಲೂ, ನನ್ನ ವರದಿಂದಲೂ ನೀನು ರಾಧೆಗೆ ಪ್ರಾಣಸಮಳಾಗುವೆ.

೪೪. ರಾಧೆಯು ನಿಮ್ಮಿಬ್ಬರ ಗೋಪ್ಯವಾದ ಶೃಂಗಾರವನ್ನರಿಯುವಳು. ಅನಂತರ ನೀನೂ ಶ್ರೀಕೃಷ್ಣನಿಗೆ ರಾಧಾಸಮಾನಳಾಗುವೆ.

೪೫-೪೬. ಇಂತು ನುಡಿದು–ಆ ತುಲಸೀದೇವಿಗೆ ರಾಧಾದೇವಿಯ ಷೋಡಶಾಕ್ಷರ ಮಂತ್ರವನ್ನೂ, ಸ್ತೋತ್ರಕವಚಾದಿಗಳನ್ನೂ, ಸಮಸ್ತಪೂಜಾವಿಧಾನವನ್ನೂ, ಮಂತ್ರ

ಸರ್ವಂ ಪೂಜಾವಿಧಾನಂ ಚ ಪುರಶ್ಚರ್ಯಾವಿಧಿಕ್ರಮಂ ।
ಪರಂ ಶುಭಾಶಿಷಂ ಕೃತ್ವಾ ಸೋಽನ್ತರ್ಧಾನಮವಾಪ ಹ ॥ ೪೬ ॥

ಸಾ ಚ ಬ್ರಹ್ಮೋಪದೇಶೇನ ಪುಣ್ಯೇ ಬದರಿಕಾಶ್ರಮೇ ।
ಜಜಾಪ ಪರಮಂ ಮಂತ್ರಂ ಯದಿಷ್ಟಂ ಪೂರ್ವಜನ್ಮನಃ ॥ ೪೭ ॥

ದಿವ್ಯಂ ದ್ವಾದಶವರ್ಷಂ ಚ ಪೂಜಾಂ ಚೈವ ಚಕಾರ ಸಾ ।
ಬಭೂವ ಸಿದ್ಧಾ ಸಾ ದೇವೀ ತತ್ಪ್ರತ್ಯಾದೇಶಮಾಪ ಚ ॥ ೪೮ ॥

ಸಿದ್ಧೇ ತಪಸಿ ಮಂತ್ರೇ ಚ ವರಂ ಪ್ರಾಪ್ಯ ಯಥೇಪ್ಸಿತಂ ।
ಬುಭುಜೇ ಚ ಮಹಾಭಾಗಂ ಯದ್ವಿಶ್ವೇಷು ಸುದುರ್ಲಭಂ ॥ ೪೯ ॥

ಪ್ರಸನ್ನಮಾನಸಾ ದೇವೀ ತತ್ಯಾಜ ತಪಸಃ ಕ್ಲಮಂ ।
ಸಿದ್ಧೇ ಫಲೇ ನರಾಣಾಂ ಚ ದುಃಖಂ ಚ ಸುಖಮುತ್ತಮಂ ॥ ೫೦ ॥

ಪುರಶ್ಚರಣೆಯನ್ನೂ ಉಪದೇಶಿಸಿ, ಮಂಗಳಾಶೀರ್ವಾದವನ್ನಿತ್ತು, ಬ್ರಹ್ಮದೇವನು ಅಂತರ್ಧಾನ ಹೊಂದಿದನು.

೪೭. ಅವಳು ಬ್ರಹ್ಮನ ಉಪದೇಶದಂತೆ ಬದರಿಕಾಶ್ರಮದಲ್ಲಿ ತನ್ನ ಪೂರ್ವ ಜನ್ಮಾಭೀಷ್ಟವಾದ ಪರಮ ಮಂತ್ರವನ್ನು ಜಪಿಸುತ್ತಿದ್ದಳು.

೪೮. ದಿವ್ಯವಾದ ಹನ್ನೆರಡು ವರುಷಗಳ ವರೆಗೆ ಪೂಜೆಯನ್ನು ಮಾಡಿ ಅಭೀಷ್ಟ ಸಿದ್ಧಿಯನ್ನು ಪಡೆದು ರಾಧಾದೇವಿಯ ಅನುಗ್ರಹಕ್ಕೆ ಪಾತ್ರಳಾದಳು.

೪೯. ತಪಸ್ಸು ಮತ್ತು ಮಂತ್ರವು ಸಿದ್ಧಿಸಲು ತನಗೆ ಅಭೀಷ್ಟವೂ, ಪುಣ್ಯಕರವೂ, ವಿಶ್ವದಲ್ಲೆಲ್ಲಾ ದುರ್ಲಭವೂ ಆದ ವರವನ್ನು ಪಡೆದಳು.

೫೦. ಅನಂತರ ಪ್ರಸನ್ನಮನಸ್ಕಳಾದ ದೇವಿಯು ತನ್ನ ತಪಸ್ಸಿನ ಪರಿಶ್ರಮವನ್ನು ಮರೆತಳು. ನರರಿಗೆ ಫಲವು ಕೈಗೂಡಿದ ಮೇಲೆ ದುಃಖವೂ ಕೂಡ ಸುಖವಾಗಿಯೇ ಪರಿಣಮಿಸುವುದು.

ಭುಕ್ತ್ವಾ ಪೀತ್ವಾ ಚ ಸಂತುಷ್ಟಾ ಶಯನಂ ಚ ಚಕಾರ ಸಾ ।
ತಲ್ಪೇ ಮನೋರಮೇ ತತ್ರ ಪುಷ್ಪಚಂದನಚರ್ಚಿತೇ ॥ ೫೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ ತುಲಸೀವರ ಪ್ರದಾನಂ ನಾಮ ಪಂಚದಶೋಽಧ್ಯಾಯಃ

---

೫೧. ಅಲ್ಲಿಯೇ ಅನ್ನಪಾನಾದಿಗಳಿಂದ ಸಂತುಷ್ಟಳಾಗಿ, ಪುಷ್ಪಗಂಧಗಳಿಂದ ಸುವಾಸಿತವೂ, ಮನೋಹರವೂ ಆದ ದಿವ್ಯತಲ್ಪದಲ್ಲಿ ಪವಡಿಸಿದಳು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದಲ್ಲಿ ನಾರಾಯಣ-ನಾರದಸಂವಾದ ರೂಪವಾದ ಪ್ರಕೃತಿಖಂಡದಲ್ಲಿರುವ ತುಲಸ್ಯುಪಾಖ್ಯಾನದಲ್ಲಿ ತುಲಸಿಗೆ ವರಪ್ರದಾನರೂಪವಾದ ಹದಿನೈದನೆಯ ಅಧ್ಯಾಯವು ಮುಗಿದುದು.

ಹದಿನೈದನೆಯ ಅಧ್ಯಾಯದ ಸಾರಾಂಶವು

ಧರ್ಮಧ್ವಜನ ಪತ್ನಿಯಾದ ಮಾಧವಿಯು ಪುನಃ ರಾಜ್ಯಸುಖವನ್ನು ಪಡೆದ ಪತಿದೇವನೊಡನೆ ಬಹಳಕಾಲ ರತಿಸುಖಾನುಭವಮಾಡಿಕೊಂಡಿದ್ದು ಪದ್ಮಾಂಶ ಸಂಭೂತಳಾದ ಪದ್ಮಿನಿ ಎಂಬುವಳಿಗೆ ಜನ್ಮವಿತ್ತಳು. ಆಕೆಯ ಸೌಂದರ್ಯಕ್ಕೆ ಎಣೆಯಿಲ್ಲದುದನ್ನು ನೋಡಿ ಬಲ್ಲವರು ಆಕೆಗೆ "ತುಲಸೀ" ಎಂದು ನಾಮಕರಣ ಮಾಡಿದರು. ಆ ತುಲಸೀದೇವಿಯು ಶಿಶುವಾಗಿದ್ದಾಗಲೇ ಬದರಿಕಾಶ್ರಮಕ್ಕೆ ತೆರಳಿ ನಾರಾಯಣನನ್ನು ಕುರಿತು ತಪವೆಸಗಿದಳು. ಅನ್ನಾಹಾರಗಳನ್ನೂ ಬಿಟ್ಟು ಉಗ್ರ ತಪಸ್ಸು ಮಾಡುತ್ತಿದ್ದ ಆಕೆಯ ದೃಢಮನಸ್ಸಿಗೆ ಮೆಚ್ಚಿ ಬ್ರಹ್ಮದೇವನು ಪ್ರತ್ಯಕ್ಷನಾಗಿ, ನಿನಗೆ ಬೇಕಾದ ವರವನ್ನು ಬೇಡೆನ್ನಲು, ಆಕೆಯು ತನ್ನ ಪೂರ್ವಜನ್ಮದ ವೃತ್ತಾಂತ ವನ್ನೂ, ತನಗೊದಗಿದ ರಾಧಾಶಾಪವನ್ನೂ, ಬಿನ್ನವಿಸಿ, ಶ್ರೀಮನ್ನಾರಾಯಣನನ್ನೇ ಪತಿಯಾಗಿ ಪಡೆಯಲು ಬಯಸಿದಳು. ಅದಕ್ಕೆ ಬ್ರಹ್ಮನು, "ಸುದಾಮನೆಂಬ ಗೊಲ್ಲನು ಕೃಷ್ಣಾಂಶದಿಂದ ಭಾರತದಲ್ಲಿ ಶಂಖಚೂಡನೆಂಬ ಹೆಸರಿನಿಂದ, ನಿನಗಾಗಿ ತಪಸ್ಸು ಮಾಡುತ್ತಿರುವುದರಿಂದ ಈ ಜನ್ಮದಲ್ಲಿ ನೀನು ಅವನನ್ನು ವರಿಸು. ಜನ್ಮಾಂತರದಲ್ಲಿ ನಿನ್ನಿಷ್ಟದಂತೆ ನಾರಾಯಣನನ್ನೇ ಪತಿಯಾಗಿ ಪಡೆಯುವೆ. ಅಲ್ಲದೆ, ನಿನ್ನದೊಂದಂಶ ದಿಂದ ತುಳಸೀ ವೃಕ್ಷಸ್ವರೂಪಳಾಗಿ ಸಕಲಪತ್ರಪುಷ್ಪಗಳಿಗೂ ಶ್ರೇಷ್ಠಳೆನಿಸುವೆ." ಎಂದು ನುಡಿಯಲು ತುಲಸಿಯು ಮತ್ತೆ ದ್ವಿಭುಜನಾದ ಶ್ರೀಕೃಷ್ಣನಲ್ಲಿಯೇ ತನ್ನ ಮನಸ್ಸು ಬಹುವಾಗಿ ಒಲಿಯುವುದರಿಂದ ನೀನು ನನಗೆ ರಾಧಾದೇವಿಯ ಭಯವನ್ನು ತಪ್ಪಿಸು ಎಂದು ಬೇಡಲು, ಬ್ರಹ್ಮನು ರಾಧಾಮಂತ್ರವನ್ನುಪದೇಶಿಸಿ, ಪುರಶ್ಚರಣೋಪ ಕ್ರಮ ವನ್ನು ತಿಳುಹಿ ಅಂತರ್ಧಾನ ಹೊಂದಿದನು.

ತುಳಸಿಯೂ ಬದರಿಕಾಶ್ರಮದಲ್ಲಿ ಮಂತ್ರಸ್ತೋತ್ರಗಳಿಂದ ರಾಧಾದೇವಿಯನ್ನು ಮೆಚ್ಚಿಸಿ ಆಕೆಯ ಅನುಗ್ರಹವನ್ನು ಪಡೆದು ತನ್ನ ಸಕಲಾಭೀಷ್ಟಗಳನ್ನೂ ಪಡೆದು ತನ್ನ ತಪಸ್ಸಿನ ಕಷ್ಟಗಳನ್ನು ಮರೆತು ಸುಖವಾಗಿದ್ದಳು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಷೋಡಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ತುಲಸೀ ಪರಿತುಷ್ಟಾ ಸಾ ಚಾಸ್ವಾಪ್ಸೀದ್ಧೃಷ್ಟಮಾನಸಾ ।
ನವಯೌವನಸಂಪನ್ನಾ ಪ್ರಶಂಸಂತೀ ವರಾಂಗನಾ ॥ ೧ ॥

ಚಿಕ್ಷೇಪ ಪಂಚಬಾಣಶ್ಚ ಪಂಚಬಾಣಾಂಶ್ಚ ತಾಂ ಪ್ರತಿ ।
ಪುಷ್ಪಾಯುಧೇನ ಸಾ ದಗ್ಧಾ ಪುಷ್ಪಚಂದನಚರ್ಚಿತಾ ॥ ೨ ॥

ಪುಲಕಾಂಚಿತಸರ್ವಾಂಗೀ ಕಂಪಿತಾ ರಕ್ತಲೋಚನಾ ।
ಕ್ಷಣಂ ಸಾ ಶುಷ್ಕತಾಂ ಪ್ರಾಪ ಕ್ಷಣಂ ಮೂರ್ಛಾಮವಾಪ ಹ ॥ ೩ ॥

ಹದಿನಾರನೆಯ ಅಧ್ಯಾಯವು

೧. ನಾರಾಯಣ:—ನವಯೌವನಸಂಪನ್ನೆಯೂ, ಸ್ತ್ರೀಯರಲ್ಲಿ ಉತ್ತಮಳೂ ಆದ ತುಳಸೀದೇವಿಯು ಸಂತುಷ್ಟಮನಸ್ಕಳಾಗಿ ರಾಧಾದೇವಿಯನ್ನು ಸ್ತುತಿಸುತ್ತ ಪುಷ್ಪಶಯನದಲ್ಲಿ ಪವಡಿಸಿದ್ದಳು.

೨–೩. ಆಗ ಮನ್ಮಥನು ಆಕೆಯನ್ನೇ ಗುರಿಮಾಡಿಕೊಂಡು ತನ್ನ ಪಂಚ ಬಾಣಗಳನ್ನೂ ಪ್ರಯೋಗಿಸಿದನು. ಪುಷ್ಪಚಂದನಗಳಿಂದ ಅಲಂಕೃತಳಾದ ತುಳಸೀ ದೇವಿಯು ಮನ್ಮಥನ ಪುಷ್ಪಬಾಣಗಳಿಗೆ ಸಿಲುಕಿ ರೋಮಾಂಚಿತಶರೀರಳಾಗಿ, ನಡುಗ ಲಾರಂಭಿಸಿದಳು. ಆಕೆಯ ಕಣ್ಣುಗಳು ಕೆಂಪಾಗಿ, ಶರೀರವು ಶುಷ್ಕವಾಗಿ ಕ್ರಮವಾಗಿ ಮೂರ್ಛೆಹೊಂದಿದಳು.

ಕ್ಷಣಮುದ್ವಿಗ್ನತಾಂ ಪ್ರಾಪ ಕ್ಷಣಂ ತಂದ್ರಾಂ ಸುಖಾವಹಾಂ ।
ಕ್ಷಣಂ ಸಾ ದಹನಂ ಪ್ರಾಪ ಕ್ಷಣಂ ಪ್ರಾಪ ಪ್ರಮತ್ತತಾಂ　　|| ೪ ||

ಕ್ಷಣಂ ಸಾ ಚೇತನಾಂ ಪ್ರಾಪ ಕ್ಷಣಂ ಪ್ರಾಪ ವಿಷಣ್ಣತಾಂ ।
ಉತ್ತಿಷ್ಠಂತೀ ಕ್ಷಣಂ ತಲ್ಪಾದ್ಗಚ್ಛಂತೀ ನಿಕಟಂ ಕ್ಷಣಂ　　|| ೫ ||

ಭ್ರಮಂತೀ ಕ್ಷಣಮುದ್ವೇಗಾದ್ವಿವಸಂತೀ ಕ್ಷಣಂ ಪುನಃ ।
ಕ್ಷಣಮೇವ ಸಮುದ್ವೇಗಾದಸ್ವಾಪ್ಸೀತ್ಪುನರೇವ ಸಾ　　|| ೬ ||

ಪುಷ್ಪಚಂದನತಲ್ಪಂ ಚ ತದ್ಬಭೂವಾತಿಕಂಟಕಂ ।
ವಿಷಮಾಹಾರಕಂ ಸ್ವಾದು ದಿವ್ಯರೂಪಂ ಫಲಂ ಜಲಂ　　|| ೭ ||

---

೪. ಆಕೆಗೆ ಮನ್ಮಥನ ದಶಾವಸ್ಥೆಗಳೂ ಅನುಭವಕ್ಕೆ ಬಂದವು. ಕ್ಷಣಕಾಲ ಉದ್ವಿಗ್ನಳಾಗಿ ದಿಕ್ಕುಗಳನ್ನೆಲ್ಲ ಚಂಚಲತೆಯಿಂದ ನೋಡುತ್ತ ಮರುಕ್ಷಣದಲ್ಲಿಯೇ ಸುಖಕರವಾದ ತಂದ್ರಾವಸ್ಥೆಯನ್ನು ಹೊಂದಿದಳು. ಶರೀರವೆಲ್ಲ ಕಾಮಜ್ವರದಿಂದ ಪೀಡಿತಳಾಗಿ ಕ್ಷಣಕಾಲ ಆಕೆಯು ಹುಚ್ಚಳಂತೆ ವರ್ತಿಸುತ್ತಿದ್ದಳು.

೫. ಮರುಕ್ಷಣದಲ್ಲಿಯೇ ಚೇತನವನ್ನು ಹೊಂದಿ ವಿರಹದುಃಖದಿಂದ ಪೀಡಿತಳಾಗುತ್ತಿದ್ದಳು. ಉತ್ತರಕ್ಷಣದಲ್ಲಿ ಹಾಸಿಗೆಯಿಂದೆದ್ದು ತನ್ನ ಕಲ್ಪಿತಮನೋವಲ್ಲಭನನ್ನು ಕುರಿತು ಹೋಗುತ್ತಿದ್ದಳು.

೬. ಕ್ಷಣಕಾಲ ಚಿಂತೆಯಿಂದ ಉದ್ವಿಗ್ನಳಾಗಿ ಅಲ್ಲಿಂದಿಲ್ಲಿಗೆ ಅಲೆದಾಡುತ್ತಿದ್ದಳು. ಮರುಕ್ಷಣದಲ್ಲಿ ದೂರಹೋಗಿ ತನ್ನ ವಸ್ತ್ರಗಳನ್ನೆಲ್ಲ ಬಿಚ್ಚಿಡುತ್ತಿದ್ದಳು. ಮತ್ತೆ ಉದ್ವಿಗ್ನ ಮನಸ್ಕಳಾಗಿ ತನ್ನ ಹಾಸಿಗೆಯಲ್ಲಿ ಬಂದು ಮಲಗುತ್ತಿದ್ದಳು.

೭. ಚಂದನಚರ್ಚಿತವಾದ ಆ ಪುಷ್ಪಶಯನವೂ ಆಕೆಗೆ ಕಂಟಕಪ್ರಾಯವಾಗಿದ್ದಿತು. ದಿವ್ಯಾಮೃತದಂತೆ ಮಧುರವಾದ ಹಣ್ಣುಹಂಪಲುಗಳು ಅವಳಿಗೆ ವಿಷವಾಗಿ ಪರಿಣಮಿಸಿದವು.

ನಿಲಯುಶ್ಚ ನಿರಾಕಾರಃ ಸೂಕ್ಷ್ಮವಸ್ತ್ರಂ ಹುತಾಶನಃ ।
ಸಿಂದೂರಪತ್ರಕಂ ಚೈವ ವ್ರಣತುಲ್ಯಂ ಚ ದುಃಖದಂ ॥ ೮ ॥

ಕ್ಷಣಂ ದದರ್ಶ ತೆಂದ್ರಾಯಾಂ ಸುವೇಷಂ ಪುರುಷಂ ಸತೀ ।
ಸುಂದರಂ ಚ ಯುವಾನಂ ಚ ಸಸ್ಮಿತಂ ರಸಿಕೇಶ್ವರಂ ॥ ೯ ॥

ಚಂದನೋಕ್ಷಿತಸರ್ವಾಂಗಂ ರತ್ನಭೂಷಣಭೂಷಿತಂ ।
ಆಗಚ್ಛಂತಂ ಮಾಲ್ಯವಂತಂ ಪಶ್ಯಂತಂ ತನ್ಮುಖಾಂಬುಜಂ ॥ ೧೦ ॥

ಕಥಯಂತಂ ರತಿಕಥಾಂ ಚುಂಬಂತಮಧರಂ ಮುಹುಃ ।
ಶಯಾನಂ ಪುಷ್ಪತಲ್ಪೇ ಚ ಸಮಾಶ್ಲಿಷ್ಯಂತಮಂಗಕಂ ॥ ೧೧ ॥

---

೮. ಆಕೆಗೆ ವಾಸಗೃಹವು ನಿರಾಕಾರವಾಗಿಯೂ, ಸೂಕ್ಷ್ಮವಸ್ತ್ರವು ಅಗ್ನಿಯಂತೆ ತಾಪಕರವಾಗಿಯೂ, ತೋರಿತು. ಹಣೆಯಲ್ಲಿ ಧರಿಸಿದ ಕುಂಕುಮದ ಬೊಟ್ಟೂ, ಕಪೋಲಗಳಲ್ಲಿ ಧರಿಸಿದ್ದ ಮಕರಿಕಾದಿ ಪತ್ರಗಳೂ ಆವಳಿಗೆ ಹುಣ್ಣು ಎದ್ದಂತೆ ತೋರಿದವು.

೯. ಆಲಸ್ಯದಿಂದ ಅರ್ಧನಿದ್ರೆ ಬಂದು ಸ್ವಪ್ನವುಂಟಾಗಿ ದಿವ್ಯಾಭರಣಗಳಿಂದ ಲಂಕೃತನಾದ ಸುಂದರಪುರುಷನ ದರ್ಶನವಾಗುತ್ತಿತ್ತು. ಆ ಪುರುಷನು ನವ ಯುವಕನೂ, ಮನೋಹರನೂ, ಸ್ಮಿತವದನನೂ, ಆಗಿ ರಸಿಕಶಿಖಾಮಣಿಯಂತೆ ತೋರುತ್ತಿದ್ದನು.

೧೦. ಸ್ವಪ್ನದಲ್ಲಿ ಕಾಣಿಸಿಕೊಂಡ ಆ ರಸಿಕನು ಸರ್ವಾಂಗಗಳಿಗೂ ಚಂದನ ವನ್ನು ಲೇಪಿಸಿಕೊಂಡು, ರತ್ನಾಭರಣಗಳಿಂದಲಂಕೃತನಾಗಿ ಕಂಠದಲ್ಲಿ ದಿವ್ಯಮಾಲೆ ಯನ್ನು ಧರಿಸಿ ತನ್ನೆದುರಿಗೆ ಬಂದು ತನ್ನ ಮುಖವನ್ನೇ ನೋಡುತ್ತ ನಿಂತಿರುವಂತೆ ಭಾಸವಾಗುವುದು.

೧೧. ಮರುಕ್ಷಣದಲ್ಲಿ ಅದೇ ಪುರುಷನು ತಾನು ಪವಡಿಸಿದ್ದ ಪುಷ್ಪಶಯನ ದಲ್ಲಿಯೇ ಪವಡಿಸಿ, ತನ್ನನ್ನು ಗಾಢವಾಗಿ ಆಲಂಗಿಸಿಕೊಂಡು ಚುಂಬಿಸುತ್ತ ರತಿ ಕಥೆಯನ್ನು ಹೇಳುವಂತೆ ತೋರುತ್ತಿದ್ದಿತು.

ಪುನರೇವ ತು ಗಚ್ಛಂತಮಾಗಚ್ಛಂತಂ ವಸಂತಕಂ ।
ಕಾಂತ ಕ್ವ ಯಾಸಿ ಪ್ರಾಣೇಶ ತಿಷ್ಠೇತ್ಯೇವಮುವಾಚ ಸಾ ॥ ೧೨ ॥

ಪುನಃ ಸ್ವಚೇತನಾಂ ಪ್ರಾಪ್ಯ ವಿಲಲಾಪ ಪುನಃ ಪುನಃ ।
ಏವಂ ತಪೋವನೇ ಸಾ ಚ ತಸ್ಥೌ ತತ್ರೈವ ನಾರದ ॥ ೧೩ ॥

ಶಂಖಚೂಡೋ ಮಹಾಯೋಗೀ ಜೈಗೀಷವ್ಯಾನ್ಮನೋರಮಂ ।
ಕೃಷ್ಣಸ್ಯ ಮಂತ್ರಂ ಸಂಪ್ರಾಪ್ಯ ಪ್ರಾಪ್ಯ ಸಿದ್ಧಿಂ ತು ಪುಷ್ಕರೇ ॥ ೧೪ ॥

ಪಠನ್ಸದಾ ತು ಕವಚಂ ಸರ್ವಮಂಗಲಮಂಗಲಂ ।
ಬ್ರಹ್ಮೇಶಾಚ್ಚ ವರಂ ಪ್ರಾಪ್ಯ ಯತ್ತನ್ಮನಸಿ ವಾಂಛಿತಂ ॥ ೧೫ ॥

ಆಜ್ಞಯಾ ಬ್ರಹ್ಮಣಃ ಸೋಽಪಿ ಬದರೀಂ ವೈ ಸಮಾಯಯೌ ।
ಆಗಚ್ಛಂತಂ ಶಂಖಚೂಡಮಪಶ್ಯತ್ತುಲಸೀ ಮುನೇ ॥ ೧೬ ॥

ನವಯೌವನಸಂಪನ್ನಂ ಕಾಮದೇವಸಮಪ್ರಭಂ ॥ ೧೭ ॥

---

೧೨. ಒಮ್ಮೆ ಕಣ್ಮರೆಯಾಗಿಯೂ, ಮತ್ತೊಮ್ಮೆ ಗೋಚರನಾಗಿಯೂ ಇದ್ದ ಆ ಪುರುಷನನ್ನು ಕುರಿತು ತುಳಸಿಯು 'ಎಲೈ ಪ್ರಾಣಕಾಂತನೇ, ನೀನು ನನ್ನನ್ನು ಬಿಟ್ಟು ಎಲ್ಲಿಗೆ ಹೋಗುವೆ,' ಎಂದು ಪ್ರಶ್ನಿಸುತ್ತಿದ್ದಳು.

೧೩. ಮತ್ತೆ ಚೇತನವನ್ನು ಪಡೆದು ತನ್ನ ಮನೋವಲ್ಲಭನು ತನ್ನ ಸಮೀಪ ದಲ್ಲಿಲ್ಲದಿರುವುದನ್ನು ತಿಳಿದು ಗೋಳಾಡುತ್ತಿದ್ದಳು. ಇಂತು ಆ ತುಳಸೀದೇವಿಯು ಆ ತಪೋವನದಲ್ಲಿ ವಿರಹವ್ಯಥೆಯಿಂದ ಕಾಲಕಳೆಯುತ್ತಿದ್ದಳು.

೧೪. ಇತ್ತ ಮಹಾಯೋಗಿಶ್ರೇಷ್ಠನಾದ ಶಂಖಚೂಡನೂ ಸಹ ಮನೋಹರ ಳಾದ ತುಳಸಿಯನ್ನು ಹೊಂದಲೋಸುಗ ಪುಷ್ಕರಕ್ಷೇತ್ರದಲ್ಲಿ ಶ್ರೀಕೃಷ್ಣನ ಮಂತ್ರೋಪ ದೇಶವನ್ನು ಹೊಂದಿ ಜಪಿಸಿ ಸಿದ್ಧಿಪಡೆದನು.

೧೫–೧೭. ಸರ್ವಮಂಗಳರೂಪವಾದ ಕವಚವನ್ನು ಪಠಿಸಿ ಬ್ರಹ್ಮ ಮತ್ತು ಈಶ್ವರನಿಂದ ತನ್ನ ಮನೋಭೀಷ್ಟವಾದ ವರವನ್ನು ಪಡೆದು ಬ್ರಹ್ಮನ ಅಪ್ಪಣೆಯಂತೆ ಬದರಿಕಾಶ್ರಮಕ್ಕೆ ತೆರಳಿದನು. ಎಲೈ ನಾರದಮುನಿಯೇ, ನವಯೌವನಸಂಪನ್ನನೂ ಮನ್ಮಥನಂತೆ ಸುಂದರನೂ ಆದ ಶಂಖಚೂಡನು ಈ ಪ್ರಕಾರವಾಗಿ ತಾನಿದ್ದ ಆಶ್ರಮಕ್ಕೇ ಬರುತ್ತಿರುವುದನ್ನು ತುಳಸಿಯು ನೋಡಿದಳು.

ಶ್ವೇತಚಂಪಕವರ್ಣಾಭಂ ರತ್ನಭೂಷಣಭೂಷಿತಂ ।
ಶರತ್ಪಾರ್ವಣಚಂದ್ರಾಸ್ಯಂ ಶರತ್ಪಂಕಜಲೋಚನಂ ॥ ೧೮ ॥

ಮಹಾರತ್ನಗುಣಾಕ್ಲಿಪ್ತವಿಮಾನಸ್ಥಂ ಮನೋಹರಂ ।
ರತ್ನಕುಂಡಲಯುಗ್ಮಾಢ್ಯಗಂಡಸ್ಥಲವಿರಾಜಿತಂ ॥ ೧೯ ॥

ಪಾರಿಜಾತಪ್ರಸೂನಾಢ್ಯಮಾಲ್ಯವಂತಂ ಚ ಸುಸ್ಮಿತಂ ।
ಕಸ್ತೂರೀಕುಂಕುಮಯುತಂ ಸುಗಂಧಿ ತಿಲಕೋಜ್ಜ್ವಲಂ ॥ ೨೦ ॥

ಸಾ ದೃಷ್ಟ್ವಾ ಸನ್ನಿಧಾನೇ ತಂ ಮುಖಮಾಚ್ಛಾದ್ಯ ವಾಸಸಾ ।
ಸಸ್ಮಿತಾ ತಂ ನಿರೀಕ್ಷಂತೀ ಸಕಟಾಕ್ಷಂ ಪುನಃ ಪುನಃ ॥ ೨೧ ॥

ಬಭೂವ ಸಾ ನಮ್ರಮುಖೀ ನವಸಂಗಮಲಜ್ಜಿತಾ ।
ಕಾಮುಕೀ ಕಾಮಬಾಣೇನ ಪೀಡಿತಾ ಪುಲಕಾನ್ವಿತಾ ॥ ೨೨ ॥

೧೮-೨೦. ಬಿಳಿಯ ಸಂಪಿಗೆಯಂತಿರುವ ಮೈಬಣ್ಣದಿಂದಲೂ, ಶರತ್ಪೂರ್ಣಿಮಾ ಚಂದ್ರನಂತಿರುವ ಮುಖದಿಂದಲೂ ಶೋಭಿಸುತ್ತಿದ್ದ ಆ ಶಂಖಚೂಡನು, ರತ್ನಾಭರಣಗಳಿಂದಲಂಕೃತನಾಗಿ, ವಜ್ರವೈಡೂರ್ಯಾದಿಗಳನ್ನು ಮೆಟ್ಟಿರುವ ವಿಮಾನದಲ್ಲಿ ಕುಳಿತು ಬರುತ್ತಿದ್ದನು. ರತ್ನಕುಂಡಲದ್ವಯದಿಂದ ಶೋಭಿತವಾದ ಕಪೋಲಗಳಿಂದಲೂ, ಪಾರಿಜಾತಪುಷ್ಪಮಾಲೆಯಿಂದ ಅಲಂಕೃತವಾದ ಕಂಠದಿಂದಲೂ, ಮನೋಹರನಾದ ಆ ಶಂಖಚೂಡನು ಕಸ್ತೂರಿ ಮತ್ತು ಕುಂಕುಮಗಳಿಂದ ಸುವಾಸಿತವಾದ ತಿಲಕವನ್ನು ಹಣೆಯಲ್ಲಿಟ್ಟು ಹಸನ್ಮುಖಿಯಾಗಿದ್ದನು.

೨೧-೨೨. ತುಳಸೀದೇವಿಯು ತನಗೆ ಅತ್ಯಂತ ಪ್ರಿಯನಾದ ಶಂಖಚೂಡನನ್ನು ತನ್ನ ಹತ್ತಿರದಲ್ಲಿಯೇ ಕಂಡು, ನವಸಂಗಮದಿಂದ ಲಜ್ಜಾನ್ವಿತಳಾಗಿ, ಸೆರಗಿನಿಂದ ತನ್ನ ನಗುಮುಖವನ್ನು ಮರೆಮಾಡಿಕೊಂಡು, ಕಟಾಕ್ಷದಿಂದ ಅವನನ್ನು ನೋಡುತ್ತ, ಕಾಮಬಾಣದಿಂದ ರೋಮಾಂಚಿತಶರೀರಳಾಗಿ, ತಲೆಯನ್ನು ತಗ್ಗಿಸಿ ನಿಂತುಕೊಂಡಳು.

ಪಿಬಂತೀ ತನ್ಮುಖಾಂಭೋಜಂ ಲೋಚನಾಭ್ಯಾಂ ಚ ಸಂತತಂ ।
ದದರ್ಶ ಶಂಖಚೂಡಶ್ಚ ಕನ್ಯಾಮೇಕಾಂ ತಪೋವನೇ ॥ ೨೩ ॥

ಪುಷ್ಪಚಂದನತಲ್ಪಸ್ಥಾಂ ವಸಂತೀಂ ವಾಸಸಾವೃತಾಂ ।
ಪಶ್ಯಂತೀಂ ತನ್ಮುಖಂ ಶಶ್ವತ್ಸಸ್ಮಿತಾಂ ಸುಮನೋಹರಾಂ ॥ ೨೪ ॥

ಸುಪೀನಕಠಿನಶ್ರೋಣೀಂ ಪೀನೋನ್ನತಪಯೋಧರಾಂ ।
ಮುಕ್ತಾಪಂಕ್ತಿಪ್ರಭಾಜುಷ್ಟದಂತಪಂಕ್ತಿಂ ಸುಬಿಭ್ರತೀಂ ॥ ೨೫ ॥

ಪಕ್ವಬಿಂಬಾಧರೋಷ್ಠೀಂ ಚ ಸುನಾಸಾಂ ಸುಂದರೀಂ ವರಾಂ ।
ತಪ್ತಕಾಂಚನವರ್ಣಾಭಾಂ ಶರಚ್ಚಂದ್ರಸಮಪ್ರಭಾಂ ॥ ೨೬ ॥

ಸ್ವತೇಜಸಾ ಪರಿವೃತಾಂ ಸುಖದೃಶ್ಯಾಂ ಮನೋರಮಾಂ ।
ಕಸ್ತೂರೀಬಿಂದುಭಿಃ ಸಾರ್ಧಮಧಶ್ಚಂದನಬಿಂದುನಾ ॥ ೨೭ ॥

---

೨೩. ತುಳಸೀದೇವಿಯು ಈ ರೀತಿಯಾಗಿ ತಪೋವನದಲ್ಲಿ ಏಕಾಂಗಿನಿಯಾಗಿರುವುದನ್ನೂ, ಎರಡು ಕಣ್ಣುಗಳಿಂದಲೂ ತನ್ನ ತಾವರೆಯಂತಿರುವ ಮುಖದ ಸೌಂದರ್ಯರಸವನ್ನು ಪಾನಮಾಡುತ್ತಿರುವುದನ್ನೂ ಶಂಖಚೂಡನು ನೋಡಿದನು.

೨೪–೨೬. ಆ ತುಳಸೀದೇವಿಯು ಪುಷ್ಪಚಂದನಗಳಿಂದ ಸುವಾಸಿತವಾದ ಶಯನದಲ್ಲಿ, ತೆಳುವಾದ ಬಟ್ಟೆಯನ್ನುಟ್ಟು ಪವಡಿಸಿ ಸ್ಮಿತವದನಳಾಗಿ ಕಟಾಕ್ಷದಿಂದ ಶಂಖಚೂಡನ ಮುಖವನ್ನೇ ನೋಡುತ್ತಿದ್ದಳು. ಆಕೆಯ ಪೀನೋನ್ನತಸ್ತನಗಳನ್ನೂ, ಕಠಿನವೂ, ವರ್ತುಳವೂ ಆದ ನಿತಂಬಬಿಂಬವನ್ನೂ, ಮುತ್ತಿನ ಸಾಲನ್ನು ಧಿಕ್ಕರಿಸುವ ದಂತಪಂಕ್ತಿಯನ್ನೂ, ಪಕ್ವವಾದ ಬಿಂಬಫಲದಂತೆ ಕೆಂಪಾದ ಕೆಳದುಟಿಯನ್ನೂ, ಸಂಪಿಗೆಯ ಎಸಳಿನಂತಿರುವ ಮೂಗನ್ನೂ, ಪುಟಕ್ಕೆ ಹಾಕಿದ ಚಿನ್ನದಂತೆಯೂ, ಶರತ್ಪೂರ್ಣಿಮಾಚಂದ್ರನಂತೆಯೂ, ಇರುವ ದೇಹಕಾಂತಿಯನ್ನೂ ನೋಡಿ ಶಂಖಚೂಡನು ಮೋಹಗೊಂಡನು.

೨೭. ಅತ್ಯಂತ ತೇಜಸ್ವಿನಿಯೂ, ಮನೋಹರೆಯೂ ಆದ ಆ ತುಳಸಿಯನ್ನು ಎಷ್ಟು ನೋಡಿದರೂ ತೃಪ್ತಿಯಾಗುವಂತಿರಲಿಲ್ಲ. ಆಕೆಯ ಹಣೆಯಲ್ಲಿ ಚಂದನ ಮತ್ತು ಕಸ್ತೂರಿ ಬೊಟ್ಟುಗಳು ವಿರಾಜಿಸುತ್ತಿದ್ದವು.

ಸಿಂದೂರಬಿಂದುನಾ ಶಶ್ವಚ್ಛ್ರೀಮಂತಾಧಃ ಸ್ಥಲೋಜ್ವಲಾಂ ।
ನಿಮ್ನನಾಭಿಗಭೀರಾಂ ಚ ತದಧಸ್ತ್ರಿವಲೀಯುತಾಂ ॥ ೨೮ ॥

ಕರಪದ್ಮತಲಾರಕ್ತಾಂ ನಖಚಂದ್ರೈರ್ವಿಭೂಷಿತಾಂ ।
ಸ್ಥಲಪದ್ಮಪ್ರಭಾಜುಷ್ಟಂ ಪಾದಪದ್ಮಂ ಚ ಬಿಭ್ರತೀಂ ॥ ೨೯ ॥

ಆರಕ್ತವರ್ಣಂ ಲಲಿತಮಲಕ್ತಕಸಮಪ್ರಭಂ ।
ಸ್ಥಲಪದ್ಮೈಶ್ಚ ಜಲಜೈಃ ಪದ್ಮರಾಗವಿರಾಜಿತಾಂ ॥ ೩೦ ॥

ಶರದಿಂದುವಿನಿಂದ್ಯೈಕನಖೇಂದ್ವೋಘವಿರಾಜಿತಾಂ ।
ಅಮೂಲ್ಯರತ್ನಸಂಮಿಶ್ರ ಯಾವಕೇನ ಸ್ವಲಂಕೃತಾಂ ॥ ೩೧ ॥

ಮಣೀಂದ್ರಮುಖ್ಯಖಚಿತ ಕ್ವಣನ್ಮಂಜೀರರಂಜಿತಾಂ ॥ ೩೨ ॥

---

೨೮. ಬೈತಲೆಯ ಕೆಳಭಾಗದಲ್ಲಿ ಚಂದ್ರದ ಬೊಟ್ಟುಗಳು ರಾರಾಜಿಸುತ್ತಿದ್ದವು. ಅತಿಗಂಭೀರವಾದ ನಾಭಿಯೂ, ಅದರ ಕೆಳಭಾಗದಲ್ಲಿ ಮನೋಹರವಾದ ತ್ರಿವಳಿಗಳೂ ಅವಳ ಸೌಂದರ್ಯವನ್ನು ಪೋಷಿಸುತ್ತಿದ್ದವು.

೨೯. ಆಕೆಯ ಅಂಗೈಗಳು ಕೆಂದಾವರೆಯಂತೆಯೂ, ಉಗುರುಗಳು ಅರ್ಧ ಚಂದ್ರನಂತೆಯೂ ಮನೋಹರವಾಗಿದ್ದವು. ಕೋಮಲವಾದ ಆಕೆಯ ಪಾದದ್ವಯವು ನೆಲದಾವರೆಯ ಕಾಂತಿಯನ್ನು ಮೀರಿದ್ದಿತು.

೩೦. ಕಾಲಿನ ಉಗುರುಗಳಿಗೆ ಅರಗಿನ ರಸವನ್ನು ರಂಜಿಸಿಕೊಂಡು, ಪದ್ಮರಾಗ ರತ್ನಗಳಿಂದಲಂಕೃತಳಾಗಿ ನೆಲದಾವರೆ ಮತ್ತು ಜಲದಾವರೆ ಹೂಗಳನ್ನು ಮುಡಿದಿದ್ದಳು.

೩೧–೩೨. ಆಕೆಯ ಉಗುರುಗಳು ಸ್ವಾಭಾವಿಕವಾಗಿ ಶರಚ್ಚಂದ್ರನಂತೆ ಕಾಂತಿಯುತವಾಗಿದ್ದವು. ಅವುಗಳಿಗೆ ರತ್ನದಂತೆ ಮಿರುಗುವ ಅರಗಿನರಸವನ್ನು ರಂಜಿಸಿಕೊಂಡಿದ್ದಳು. ಪಾದಗಳಲ್ಲಿ ಮಣಿನೂಪುರಗಳು ಝುಣಝುಣಧ್ವನಿಗೈಯ್ಯುತ್ತಿದ್ದವು.

ದಧತೀಂ ಕಬರೀಭಾರಂ ಮಾಲತೀಮಾಲ್ಯಸಂಯುತಂ ।
ಅಮೂಲ್ಯರತ್ನಸಂಕ್ಲಿಪ್ತಮಕರಾಕೃತಿರೂಪಿಣಾ ॥ ೩೩ ॥

ಚಿತ್ರಕುಂಡಲಯುಗ್ಮಶ್ರೀಸುಷುಮಾಪರಿಶೋಭಿತಾಂ ।
ರತ್ನೇಂದ್ರಮುಕ್ತಾಹಾರಶ್ರೀ ಸ್ತನಮಧ್ಯಸ್ಥಲೋಜ್ವಲಾಂ ॥ ೩೪ ॥

ರತ್ನಕಂಕಣಕೇಯೂರ ಶಂಖಭೂಷಣ ಭೂಷಿತಾಂ ।
ರತ್ನಾಂಗುಲೀಯಕೈರ್ದಿವ್ಯೈರಂಗುಲ್ಯಾವಲಿಭಿರ್ಯುತಾಂ ॥ ೩೫ ॥

ದೃಷ್ಟ್ವಾ ತಾಂ ಲಲಿತಾಂ ರಮ್ಯಾಂ ಸುಶೀಲಾಂ ಸುದತೀಂ ಸತೀಂ ।
ಉವಾಸ ತತ್ಸಮೀಪೇ ಚ ಮಧುರಂ ತಾಮುವಾಚ ಸಃ ॥ ೩೬ ॥

॥ ಶಂಖಚೂಡ ಉವಾಚ ॥

ಕಾ ತ್ವಂ ಕಸ್ಯ ಚ ಕನ್ಯಾಸಿ ಧನ್ಯೇ ಮಾನ್ಯೇ ಸುಯೋಷಿತಾಂ ।
ಕ್ವಾ ತ್ವಂ ಕಾಮಿನಿ ಕಲ್ಯಾಣಿ ಸರ್ವಕಲ್ಯಾಣದಾಯಿನಿ ॥ ೩೭ ॥

೩೩–೩೬. ಮೊಸಳೆಯಂತಿರುವ ಜಡೆಗಳಲ್ಲಿ ಜಾಜೀಹೂಮಾಲೆಯನ್ನು ಮುಡಿದು, ಅಮೂಲ್ಯರತ್ನಾಭರಣಗಳನ್ನು ತೊಟ್ಟು, ಕಿವಿಗಳಲ್ಲಿ ಹೊಳಪಾದ ಕುಂಡಲಗಳನ್ನು ಧರಿಸಿದ್ದಳು. ಮುತ್ತು ಮತ್ತು ರತ್ನಹಾರಗಳಿಂದ ಆಕೆಯ ಸ್ತನಪ್ರದೇಶವು ಶೋಭಿಸುತ್ತಿದ್ದಿತು. ರತ್ನನಿರ್ಮಿತವಾದ ಬಳೆ ಮತ್ತು ಬಾಹುಪುರಿಗಳನ್ನೂ ಶಂಖಾಭರಣಗಳನ್ನೂ ತೋಳುಗಳಲ್ಲಿ ಧರಿಸಿದ್ದಳು. ಬೆರಳುಗಳಲ್ಲಿ ರತ್ನದ ಉಂಗುರಗಳನ್ನು ಹಾಕಿಕೊಂಡಿದ್ದಳು. ಮಂದಹಾಸದಿಂದ ದಂತಕಾಂತಿಯನ್ನು ಬೀರುತ್ತಿರುವ ಮನೋಹರಳಾದ ಆಕೆಯ ಸಮೀಪದಲ್ಲಿ ಶಂಖಚೂಡನು ಕುಳಿತು ಈ ರೀತಿಯಾಗಿ ಸವಿನುಡಿಗಳನ್ನಾಡಲು ಆರಂಭಿಸಿದನು.

೩೭. ಶಂಖಚೂಡ:— ಧನ್ಯಳೂ, ಸ್ತ್ರೀಯರಲ್ಲಿ ಮಾನ್ಯಳೂ ಆದ ಮಂಗಳಾಂಗಿಯೇ ನೀನಾರು? ಯಾರ ಮಗಳು? ಶೋಭನಾಂಗಿಯಾದ ನೀನು ಎಲ್ಲರಿಗೂ ಮಂಗಳಪ್ರದಳಾಗಿರುವೆ.

ಸ್ವರ್ಗಭೋಗಾದಿಸರಿತಿ ವಿಹಾರೇ ಹಾರರೂಪಿಣಿ ।
ಸಂಸಾರದಾರಸಾರೇ ಚ ಮಾಯಾಧಾರೇ ಮನೋಹರೇ ॥ ೩೮ ॥

ಜಗದ್ವಿಲಕ್ಷಣೇ ಕ್ಷಾಮೇ ಮುನೀನಾಂ ಮೋಹಕಾರಿಣಿ ।
ಮೌನಂ ತ್ಯಕ್ತ್ವಾ ಕಿಂಕರಂ ಮಾಂ ಸಂಭಾಷಾಂ ಕುರು ಸುಂದರಿ ॥ ೩೯ ॥

ಇತ್ಯೇವಂ ವಚನಂ ಶ್ರುತ್ವಾ ಸಕಾಮಾ ವಾಮಲೋಚನಾ ।
ಸಸ್ಮಿತಾ ನಮ್ರವದನಾ ಸಕಾಮಂ ತಮುವಾಚ ಸಾ ॥ ೪೦ ॥

॥ ತುಲಸ್ಯುವಾಚ ॥

ಧರ್ಮಧ್ವಜಸುತಾಹಂ ಚ ತಪಸ್ಯಾಯಾಂ ತಪೋವನೇ ।
ತೇಪಸ್ವಿನೀಹ ತಿಷ್ಠಾಮಿ ಕಸ್ತ್ವಂ ಗಚ್ಛ ಯಥಾಸುಖಂ ॥ ೪೧ ॥

೩೮-೩೯. ನೀನು ಸ್ವರ್ಗಸುಖವೆಂಬ ಹೊಳೆಯಲ್ಲಿ ಮನಬಂದಂತೆ ವಿಹರಿಸುವ ಪುಷ್ಪಹಾರಸ್ವರೂಪಿಣಿಯಾಗಿರುವೆ. ಮಾಯೆಗೆ ಆಧಾರಸ್ವರೂಪವೂ, ಸ್ತ್ರೀಯರಿಂದ ಸಾರರೂಪವೂ ಆದ ಸಂಸಾರದಲ್ಲಿ ಮನಸ್ಸನ್ನು ಒಲಿಸಿ, ಜಗತ್ತಿಗೆಲ್ಲ ವಿಲಕ್ಷಣ ಸ್ವರೂಪಳೂ, ಮುನಿಗಳಿಗೆ ಮೋಹೋತ್ಪಾದಕಳೂ ಆಗಿರುವೆ. ಎಲೌ ಲತಾಂಗಿಯೇ. ನೀನು ಮೌನವನ್ನು ಬಿಟ್ಟು, ನಿನ್ನ ಸೇವಕನಾಗಬಯಸುವ ನನ್ನನ್ನು ಮಾತನಾಡಿಸು.

೪೦. ಶಂಖಚೂಡನ ಈ ಮಾತುಗಳನ್ನು ಕೇಳಿ ಕಾಮಪೀಡಿತಳಾದ ಆ ಸುಂದರಿಯು ಸ್ಮಿತವದನಳೂ, ನಮ್ರಮುಖಿಯೂ ಆಗಿ ಕಾಮುಕನಾದ ಶಂಖಚೂಡನನ್ನು ಕುರಿತು ಇಂತು ನುಡಿದಳು.

೪೧. ತುಳಸಿ:—ಎಲೈ ಮಹಾತ್ಮನೇ, ಧರ್ಮಧ್ವಜನ ಪುತ್ರಿಯಾದ ನಾನು ಈ ತಪೋವನದಲ್ಲಿ ತಪಸ್ಸುಮಾಡಲು ಬಂದಿದ್ದೇನೆ. ನೀನು ನನ್ನ ತಪಸ್ಸಿಗೆ ವಿಘ್ನಮಾಡದೆ ನಿನ್ನ ಇಷ್ಟಬಂದಕಡೆ ತೆರಳು.

ಕಾಮಿನೀಂ ಕುಲಜಾತಾಂ ಚ ರಹಸ್ಯೇಕಾಕಿನೀಂ ಸತೀಂ |
ನ ಪೃಚ್ಛತಿ ಕುಲೇ ಜಾತ ಏವಮೇವ ಶ್ರುತೌ ಶ್ರುತಂ || ೪೨ ||

ಲಂಪಟೋಽಸತ್ಕುಲೇ ಜಾತೋ ಧರ್ಮಶಾಸ್ತ್ರಾರ್ಥವರ್ಜಿತಃ |
ಯೇನಾಶ್ರುತಃ ಶ್ರುತೇರರ್ಥಃ ಸ ಕಾಮಿಚ್ಛತಿ ಕಾಮಿನೀಂ || ೪೩ ||

ಆಪಾತಮಧುರಾಮಂತೇ ಚಾಂತಕಾಂ ಪುರುಷಸ್ಯ ತಾಂ |
ವಿಷಕುಂಭಾಕಾರರೂಪಾಮಮೃತಾಸ್ಯಾಂ ಚ ಸಂತತಂ || ೪೪ ||

ಹೃದಯೇ ಕ್ಷುರಧಾರಾಭಾಂ ಶಶ್ವನ್ಮಧುರಭಾಷಿಣೀಂ |
ಸ್ವಕಾರ್ಯಪರಿನಿಷ್ಪತ್ತಿತತ್ಪರಾಂ ಸತತಂ ಸದಾ || ೪೫ ||

ಕಾರ್ಯಾರ್ಥೇ ಸ್ವಾಮಿವಶಗಾಮನ್ಯಥೈವಾವಶಾಂ ಸದಾ |
ಸ್ವಾಂತರ್ಮಲಿನರೂಪಾಂ ಚ ಪ್ರಸನ್ನವದನೇಕ್ಷಣಾಂ || ೪೬ ||

---

೪೨ ಸತ್ಕುಲಪ್ರಸೂತಳಾದ ಕಾಮಿನಿಯು ನಿರ್ಜನಪ್ರದೇಶದಲ್ಲಿ ಏಕಾಂಗಿನಿಯಾಗಿ ಸಂಧಿಸಿದರೆ, ಸತ್ಕುಲಪ್ರಸೂತನು ಆಕೆಯನ್ನು ಮಾತನಾಡಿಸಬಾರದೆಂದು ಶ್ರುತ್ಯುಕ್ತವಾಗಿದೆ.

೪೩. ಅಸತ್ಕುಲದಲ್ಲಿ ಹುಟ್ಟಿದವನು ವೇದಾರ್ಥವನ್ನು ಅರಿಯದೆ ಧರ್ಮಶಾಸ್ತ್ರವನ್ನು ತಿಳಿಯದೆ ಸ್ತ್ರೀಲಂಪಟನಾಗಿ ಅನ್ಯಸ್ತ್ರೀಯರನ್ನು ಬಯಸುವನು.

೪೪–೪೭. ಹೊರಗಿನ ಸೌಂದರ್ಯದಿಂದ ಮನೋಹರಳೂ, ಕೊನೆಗೆ ಪುರುಷನಿಗೆ ಅಂತಕಸ್ವರೂಪಳೂ, ಬಾಯಲ್ಲಿ ಅಮೃತದಂತೆ ಆಪ್ಯಾಯಮಾನವಾದ ನುಡಿಗಳನ್ನಾಡುತ್ತಿದ್ದರೂ ವಿಷದ ಗಡಿಗೆಯಂತೆ ಭಯಂಕರವಾದ ದೇಹವನ್ನು ಧರಿಸಿದವಳೂ, ಮಧುರಭಾಷಿಣಿಯಾದರೂ ಕತ್ತಿಯ ಅಲುಗಿನಂತೆ ಕ್ರೂರವಾದ ಹೃದಯವುಳ್ಳವಳೂ. ಯಾವಾಗಲೂ ತನ್ನ ಕಾರ್ಯವನ್ನು ಕೈಗೂಡಿಸಿಕೊಳ್ಳುವುದರಲ್ಲಿ ನಿರತಳೂ, ಕೆಲಸ ಒದಗಿದಾಗ ಮಾತ್ರ ತನ್ನ ಪತಿಯ ಅಧೀನಳಾಗಿರುವಂತೆ ನಟಿಸಿ ಉಳಿದ ಕಾಲದಲ್ಲಿ ಅವನಿಗೆ ಅವಿಧೇಯಳೂ, ಮುಖ ಮತ್ತು ಕಣ್ಣುಗಳಲ್ಲಿ ಪ್ರಸನ್ನತೆಯನ್ನು ತೋರುತ್ತಿದ್ದರೂ ಮನಸ್ಸಿನಲ್ಲಿ ಕಾಮಕ್ರೋಧಾದ್ಯರಿಷಡ್ವರ್ಗಗಳಿಂದ ಮಲಿ

ಶ್ರುತೌ ಪುರಾಣೇ ಯೋಸಾಂ ಚ ಚರಿತ್ರಮನಿರೂಪಿತಂ ।
ತಾಸು ಕೋ ವಿಶ್ವಸೇತ್ಪ್ರಾಜ್ಞೋ ಹ್ಯಪ್ರಾಜ್ಞ ಇವ ಸರ್ವದಾ ॥ ೪೭ ॥

ತಾಸಾಂ ಕೋ ವಾ ರಿಪುರ್ಮಿತ್ರಂ ಪ್ರಾರ್ಥಯಂತೀಂ ನವಂ ನವಂ ।
ದೃಷ್ಟ್ವಾ ಸುವೇಷಂ ಪುರುಷಮಿಚ್ಛಂತೀಂ ಹೃದಯೇ ಸದಾ ॥ ೪೮ ॥

ಬಾಹ್ಯೇ ಸ್ವಾತ್ಮಸತೀತ್ವಂ ಚ ಜ್ಞಾಪಯಂತೀಂ ಪ್ರಯತ್ನತಃ ।
ಶಶ್ವತ್ಕಾಮಾಂ ಚ ರಾಮಾಂ ಚ ಕಾಮಾಧಾರಾಂ ಮನೋಹರಾಂ ॥ ೪೯ ॥

ಬಾಹ್ಯೇ ಛಲಾಚ್ಛಾದಯಂತೀಂ ಸ್ವಾಂತಮ್ಮೈಥುನಲಾಲಸಾಂ ।
ಕಂತಂ ಗ್ರಸಂತೀಂ ರಹಸಿ ಬಾಹ್ಯೇಽತೀವಸುಲಜ್ಜಿತಾಂ ॥ ೫೦ ॥

ಮಾನಿನೀಂ ಮೈಥುನಾಭಾವೇ ಕೋಪಿನೀಂ ಕಲಹಾಂಕುರಾಂ ।
ಸಂಭೀತಾಂ ಭೂರಿಸಂಭೋಗಾತ್ಸ್ವಲ್ಪಮೈಥುನದುಃಖಿತಾಂ ॥ ೫೧ ॥

ನಳೂ, ವೇದಪುರಾಣಗಳಲ್ಲಿ ವರ್ಣಿಸದಿರುವ ನಡತೆಯುಳ್ಳವಳೂ ಆದ ಹೆಂಗಸನ್ನು ಪ್ರಾಜ್ಞನಾದ ಯಾವ ಮನುಜನು ತಾನೇ ಅಜ್ಞನಂತೆ ನಂಬಿಯಾನು ?

೪೮. ದುಷ್ಟರಾದ ಸ್ತ್ರೀಯರಿಗೆ ಶತ್ರುಮಿತ್ರರಾರೂ ಇಲ್ಲ. ಸುವೇಷಭೂಷಿತನಾದ ಪುರುಷನನ್ನು ನೋಡಿ ಹೊಸಹೊಸದಾಗಿ ಬಯಸುವುದೇ ಅವರ ಲಕ್ಷಣ.

೪೯–೫೦. ಹೊರಗೆ ಮಾತ್ರ ಪತಿವ್ರತೆಯೆಂದು ಪ್ರಯತ್ನಪೂರ್ವಕವಾಗಿ ಪ್ರಕಟಿಸುತ್ತಾ ಕಾಮಾಧಾರಳಾದ ತಾನು ಯಾವಾಗಲೂ ಹೃದಯದಲ್ಲಿ ಕಾಮಪೂರಿತಳಾಗಿ ಮನಸ್ಸಿನಲ್ಲಿರುವ ಪರಪುರುಷಸಂಗಮಲಾಲಸೆಯನ್ನು ಕಪಟದಿಂದ ಮರೆಮಾಡುತ್ತಾ ಲಜ್ಜಾಶೀಲಳಂತೆ ದುಷ್ಟಸ್ತ್ರೀಯು ಏಕಾಂತದಲ್ಲಿ ಕಾಂತನನ್ನು ನುಂಗುವಳು.

೫೧–೫೩. ತೃಪ್ತಿಯಾಗುವಷ್ಟು ಸಂಭೋಗಸುಖವನ್ನು ಪಡೆದರೆ ಮಾನವತಿಯಾಗಿಯೂ, ಅದಿಲ್ಲದಿದ್ದರೆ ಯಾವಾಗಲೂ ಕುಪಿತಳಾಗಿ ಕಲಹವಾಡುವವಳಾಗಿಯೂ, ಅತಿಸಂಭೋಗದಿಂದ ಭೀರುವಾಗಿಯೂ, ಅಲ್ಪಸಂಭೋಗದಿಂದ ದುಃಖಿತಳಾಗಿಯೂ,

ಸುಮೃಷ್ಟಾನ್ನಂ ಶೀತತೋಯಮಾಕಾಂಕ್ಷಂತೀಂ ಚ ಮಾನಸೇ ।
ಸುಂದರಂ ರಸಿಕಂ ಕಾಂತಂ ಯುವಾನಂ ಗುಣಿನಂ ಸದಾ ॥ ೫೨ ॥

ಸುತಾತ್ಪರಮತಿಸ್ನೇಹಂ ಕುರ್ವಂತೀಂ ರತಿಕರ್ತರಿ ।
ಪ್ರಾಣಾಧಿಕಂ ಪ್ರಿಯತಮಂ ಸಂಭೋಗಕುಶಲಂ ಪ್ರಿಯಂ ॥ ೫೩ ॥

ಪಶ್ಯಂತೀಂ ರಿಪುತುಲ್ಯಂ ಚ ವೃದ್ಧಂ ವಾ ಮೈಥುನಾಕ್ಷಮಂ ।
ಕಲಹಂ ಕುರ್ವತೀಂ ಶಶ್ವತ್ತೇನ ಸಾರ್ಧಂ ಸುಕೋಪನಾಂ ॥ ೫೪ ॥

ಚರ್ಚಯಾ ಭಕ್ಷಯಂತೀಂ ತಂ ಕೀನಾಶ ಇವ ಗೋರಜಃ ।
ದುಸ್ಸಾಹಸಸ್ವರೂಪಾಂ ಚ ಸರ್ವದೋಷಾಶ್ರಯಾಂ ಸದಾ ॥ ೫೫ ॥

ಶಶ್ವತ್ಕಪಟರೂಪಾಂ ಚ ಸರ್ವದೋಷಾಶ್ರಯಾಂ ಸದಾ ।
ಬ್ರಹ್ಮವಿಷ್ಣುಶಿವಾದೀನಾಂ ದುಸ್ತ್ಯಜ್ಯಾಂ ಮೋಹರೂಪಿಣೀಂ ॥ ೫೬ ॥

ತಪೋಮಾರ್ಗಾರ್ಗಲಾಂ ಶಶ್ವನ್ಮುಕ್ತಿದ್ವಾರಕಪಾಟಿಕಾಂ ॥ ೫೭ ॥

ಯಾವಾಗಲೂ ಮನಸ್ಸಿನಲ್ಲಿ ಮೃಷ್ಟಾನ್ನವನ್ನೂ, ತಣ್ಣೀರನ್ನೂ (ತಣ್ಣಗಿರುವ ನೀರನ್ನೂ) ಬಯಸುತ್ತ ಸುಂದರನೂ, ರಸಿಕನೂ, ಗುಣವಂತನೂ ಆದ ಯುವಕನನ್ನು ರತಿಸಮಯದಲ್ಲಿ ಮಗನಿಗಿಂತ ಹೆಚ್ಚು ಪ್ರೀತಿಸುತ್ತಾ ಸಂಭೋಗಕುಶಲನಾದ ಪ್ರಿಯನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಎಂದು ತಿಳಿಯುವಳು.

೫೪. ಸಂಭೋಗಿಸಲು ಅಶಕ್ತನಾದ ಮುದುಕನನ್ನು ಶತ್ರುವಿಗೆ ಸಮನಾಗಿ ನೋಡುತ್ತಾ ಅವನೊಡನೆ ಪದೇ ಪದೇ ಕಲಹವಾಡುವಳು.

೫೫. ಚರ್ಚೆಯಿಂದಲೇ ಗಂಡಸನ್ನು ಕೀನಾಶವೆಂಬ ಕ್ರಿಮಿಯು ಗೋರಜವನ್ನು ಹೇಗೋ ಹಾಗೆ ತಿಂದುಬಿಡುತ್ತ, ಸರ್ವದಾ ಕೆಟ್ಟ ಸಾಹಸಕಾರ್ಯಗಳಲ್ಲಿ ಆಸಕ್ತಳಾಗಿ ಸಮಸ್ತ ದೋಷಗಳಿಗೂ ಆಶ್ರಯಳಾಗಿರುವಳು.

೫೬. ಯಾವಾಗಲೂ ಕಪಟರೂಪಳಾದುದರಿಂದ ಬ್ರಹ್ಮವಿಷ್ಣುಶಿವಾದಿಗಳಿಗೂ ಮೋಹವನ್ನು ಉಂಟುಮಾಡುವಳು.

೫೭. ದುಷ್ಟಸ್ತ್ರೀಯು ತಪೋಮಾರ್ಗಕ್ಕೆ ಅಗಳಿಯಂತೆಯೂ, ಮೋಕ್ಷಮಾರ್ಗಕ್ಕೆ ಬಾಗಿಲಿನಂತೆಯೂ ಇರುವಳು.

ಹರೇರ್ಭಕ್ತಿವ್ಯವಹಿತಾಂ ಸರ್ವಮಾಯಾಕರಂಡಿಕಾಂ ।
ಸಂಸಾರಕಾರಾಗಾರೇ ಚ ಶಶ್ವನ್ನಿಗಡರೂಪಿಣೀಂ ॥ ೫೮ ॥

ಇಂದ್ರಜಾಲಸ್ವರೂಪಾಂ ಚ ಮಿಥ್ಯಾವಾದಿಸ್ವರೂಪಿಣೀಂ ।
ಬಿಭ್ರತೀಂ ಬಾಹ್ಯಸೌಂದರ್ಯಮಧ್ಯಾಂಗಮತಿಕುತ್ಸಿತಂ ॥ ೫೯ ॥

ನಾನಾ ವಿಣ್ಮೂತ್ರಪೂಯಾನಾಮಾಧಾರಂ ಮಲಸಂಯುತಂ ।
ದುರ್ಗಂಧಿದೋಷಸಂಯುಕ್ತಂ ರಕ್ತಾಕ್ತಂ ಚಾಪ್ಯಸಂಸ್ಕೃತಂ ॥ ೬೦ ॥

ಮಾಯಾರೂಪಂ ಮಾಯಿನಾಂ ಚ ವಿಧಿನಾ ನಿರ್ಮಿತಂ ಪುರಾ ।
ವಿಷರೂಪಾಂ ಮುಮುಕ್ಷೂಣಾಮದೃಶ್ಯಾಂ ಚೈವ ಸರ್ವದಾ ॥ ೬೧ ॥

ಇತ್ಯುಕ್ತ್ವಾ ತುಲಸೀ ತಂ ಚ ವಿರರಾಮ ಚ ನಾರದ ।
ಸಸ್ಮಿತಃ ಶಂಖಚೂಡಶ್ಚ ಪ್ರವಕ್ತುಮುಪಚಕ್ರಮೇ ॥ ೬೨ ॥

---

೫೮. ಹರಿಭಕ್ತಿಗೆ ತೊಂದರೆಯನ್ನುಂಟುಮಾಡುವವಳೂ, ಸಮಸ್ತರನ್ನೂ ಅಜ್ಞಾನಾಂಧಕಾರದಲ್ಲಿ ಮುಳುಗಿಸುವ ಮಾಯಾಕರಂಡಿಕಾಸ್ವರೂಪಳೂ (ಭರಣಿ ಸ್ವರೂಪಳೂ), ಸಂಸಾರವೆಂಬ ಕಾರಾಗೃಹದಲ್ಲಿ ಬಂಧಿಸುವ ನಿಗಳ (ಸಂಕೋಲೆ) ಸ್ವರೂಪಳೂ ಆಗಿರುವಳು.

೫೯. ಇಂದ್ರಜಾಲಸ್ವರೂಪಳೂ, ಮಿಥ್ಯಾವಾದಮಾಡುವವಳೂ, ಬಾಹ್ಯ ಸೌಂದರ್ಯವಿದ್ದರೂ ಅಂತತಃ ಕುತ್ಸಿತಸ್ವರೂಪಳೂ ಆಗಿರುವಳು.

೬೦–೬೧. ಮಲಮೂತ್ರಗಳಿಗೂ, ಕೀವುರಕ್ತಗಳಿಗೂ ಆಕರವಾದ ಗುಹ್ಯ ಪ್ರದೇಶದಿಂದ ಅತ್ಯಂತ ಅಸಹ್ಯಳೂ, ದುರ್ವಾಸನಾದಿ ದೋಷಗಳಿಂದ ಅಸಂಸ್ಕೃತಳೂ, ಮಾಯಿಗಳಿಗೆಲ್ಲ ಮಾಯಾರೂಪಳೂ ಆದ ದುಷ್ಟಸ್ತ್ರೀಯನ್ನು ಮೋಕ್ಷಕಾಮಿಗಳಿಗೆ ವಿಷರೂಪಳಾಗಿರುವಂತೆ ವಿಧಿಯು ನಿರ್ಮಿಸಿರುವನು. ಇಂಥ ಹೆಂಗಸಿನ ನಿಜ ಸ್ವರೂಪವನ್ನು ಯಾರೂ ತಿಳಿಯಲಾರರು.

೬೨. ಈ ರೀತಿಯಾಗಿ ನುಡಿದು ತುಳಸೀದೇವಿಯು ಸುಮ್ಮನಾಗಲು ಶಂಖ ಚೂಡನು ಅವಳನ್ನು ಕುರಿತು ಇಂತು ನುಡಿಯಲಾರಂಭಿಸಿದನು.

|| ಶಂಖಚೂಡ ಉವಾಚ ||

ತ್ವಯಾ ಯತ್ಕಥಿತಂ ದೇವಿ ನ ಚ ಸರ್ವಮಲೀಕಕಂ ।
ಕಿಂಚಿತ್ಸತ್ಯಮಲೀಕಂ ಚ ಕಿಂಚಿನ್ಮತ್ತೋ ನಿಶಾಮಯ || ೬೩ ||

ನಿರ್ಮಿತಂ ದ್ವಿವಿಧಂ ಧಾತ್ರಾ ಸ್ತ್ರೀರೂಪಂ ಸರ್ವಮೋಹನಂ ।
ಕೃತ್ಯಾರೂಪಂ ವಾಸ್ತವಂ ಚ ಪ್ರಶಸ್ಯಂ ಚಾಪ್ರಶಂಸಿತಂ || ೬೪ ||

ಲಕ್ಷ್ಮೀ ಸರಸ್ವತೀ ದುರ್ಗಾ ಸಾವಿತ್ರೀ ರಾಧಿಕಾದಿಕಂ ।
ಸೃಷ್ಟಿಸೂತ್ರಸ್ವರೂಪಂ ಚಾಪ್ಯಾದ್ಯಂ ಸ್ರಷ್ಟ್ರಾ ತು ನಿರ್ಮಿತಂ || ೬೫ ||

ಏತಾಸಾಮಂಶರೂಪಂ ಯತ್ಸ್ತ್ರೀರೂಪಂ ವಾಸ್ತವಂ ಸ್ಮೃತಂ ।
ತತ್ಪ್ರಶಂಸ್ಯಂ ಯಶೋರೂಪಂ ಸರ್ವಮಂಗಲಕಾರಣಂ || ೬೬ ||

---

೬೩. ಶಂಖಚೂಡ :—ಎಲೌ ದೇವಿಯೇ, ನೀನು ಹೇಳಿದುದೆಲ್ಲವೂ ಸುಳ್ಳಲ್ಲ. ಕೆಲವು ಭಾಗ ಸತ್ಯವೂ, ಕೆಲವು ಅಸತ್ಯವೂ ಅಹುದು. ನಾನು ಸ್ವಲ್ಪ ಹೇಳುವೆನು ಕೇಳು.

೬೪. ಸರ್ವಮೋಹಕವಾದ ಸ್ತ್ರೀರೂಪವನ್ನು ಬ್ರಹ್ಮನು ಎರಡು ರೀತಿಯಾಗಿ ಸೃಷ್ಟಿಸಿರುವನು. ಅವುಗಳಲ್ಲಿ ವಾಸ್ತವರೂಪವು ಸಕಲರಿಂದ ಪ್ರಶಂಸಿತವಾಗಿಯೂ, ಕೃತಕರೂಪವು ಅಪ್ರಶಂಸಿತವಾಗಿಯೂ ಇರುವುದು.

೬೫. ಸೃಷ್ಟಿಗೆ ಸೂತ್ರಸ್ವರೂಪರೂ, ವಾಸ್ತವರೂಪರೂ ಆದ ಲಕ್ಷ್ಮಿ, ಸರಸ್ವತಿ, ದುರ್ಗಾ, ಸಾವಿತ್ರೀ ಮತ್ತು ರಾಧಿಕಾ ಎಂಬ ಪಂಚಪ್ರಕೃತಿಗಳನ್ನು ಸೃಷ್ಟಿಕರ್ತನು ಮೊದಲು ಸೃಜಿಸಿದನು.

೬೬. ಇವರ ಅಂಶದಿಂದ ಜನಿಸಿದ ಸ್ತ್ರೀಯರೆಲ್ಲರೂ ವಾಸ್ತವಸ್ವರೂಪರು. ಕೀರ್ತಿಸ್ವರೂಪರೂ, ಸಮಸ್ತಮಂಗಳಕ್ಕೂ ಕಾರಣರೂ ಆದ ಇವರೆಲ್ಲರೂ ಪ್ರಶಂಸಾರ್ಹರು.

ಶತರೂಪಾ ದೇವಹೂತಿಸ್ಸ್ವಧಾ ಸ್ವಾಹಾ ಚ ದಕ್ಷಿಣಾ ।
ಛಾಯಾವತೀ ರೋಹಿಣೀ ಚ ವರುಣಾನೀ ಶಚೀ ತಥಾ ॥ ೬೭ ॥

ಕುಬೇರವಾಯುಪತ್ನೀ ಸಾಪ್ಯದಿತಿಶ್ಚ ದಿತಿಸ್ತಥಾ ।
ಲೋಪಾಮುದ್ರಾನಸೂಯಾ ಚ ಕೈಟಭೀ ತುಲಸೀ ತಥಾ ॥ ೬೮ ॥

ಅಹಲ್ಯಾರುಂಧತೀ ಮೇನಾ ತಾರಾ ಮಂದೋದರೀ ಪರಾ ।
ದಮಯಂತೀ ವೇದವತೀ ಗಂಗಾ ಚ ಯಮುನಾ ತಥಾ ॥ ೬೯ ॥

ಪುಷ್ಟಿಸ್ತುಷ್ಟಿಃ ಸ್ಮೃತಿರ್ಮೇಧಾ ಕಾಲಿಕಾ ಚ ವಸುಂಧರಾ ।
ಷಷ್ಠೀ ಮಂಗಲ ಚಂಡೀ ಚ ಮೂರ್ತಿರ್ವೈ ಧರ್ಮಕಾಮಿನೀ ॥ ೭೦ ॥

ಸ್ವಸ್ತಿಃ ಶ್ರದ್ಧಾ ಚ ಕಾಂತಿಶ್ಚ ತುಷ್ಟಿಃ ಶಾಂತಿಸ್ತಥಾ ಪರಾ ।
ನಿದ್ರಾ ತಂದ್ರಾ ಕ್ಷುತ್ಪಿಪಾಸಾ ಸಂಧ್ಯಾರಾತ್ರಿರ್ದಿನಾನಿ ಚ ॥ ೭೧ ॥

ಸಂಪತ್ತಿರ್ವೃತ್ತಿಕೀರ್ತ್ಯಶ್ಚ ಕ್ರಿಯಾ ಶೋಭಾ ಪ್ರಭಾಂಶಕಂ ।
ಯತ್ಸ್ತ್ರೀರೂಪಂ ಚ ಸಂಭೂತಮುತ್ತಮಂ ತದ್ಯುಗೇ ಯುಗೇ ॥ ೭೨ ॥

೬೭–೬೮. ಶತರೂಪಾ, ದೇವಹೂತಿ, ಸ್ವಧಾ, ಸ್ವಾಹಾ, ದಕ್ಷಿಣಾ, ಛಾಯಾ ವತೀ, ರೋಹಿಣೀ, ವರುಣಾನೀ, ಶಚೀ, ಮನೋರಮೆ, ವಾಯವೀ, ದಿತಿ, ಅದಿತಿ, ಲೋಪಾಮುದ್ರೆ, ಅನಸೂಯೆ, ಕೈಟಭೀ ಮತ್ತು ತುಳಸಿ. ಈ ದೇವಿಯರೆಲ್ಲರೂ ವಾಸ್ತವಸ್ವರೂಪರು.

೬೯–೭೨. ಅಂತೆಯೇ ಅಹಲ್ಯೆ, ಅರುಂಧತಿ, ಮೇನೆ, ತಾರೆ, ಮಂಡೋದರೀ, ದಮಯಂತಿ, ವೇದವತಿ, ಗಂಗೆ, ಯಮುನೆ, ಪುಷ್ಟಿ, ತುಷ್ಟಿ, ಸ್ಮೃತಿ, ಮೇಧಾ, ಕಾಲಿಕಾ, ವಸುಂಧರಾ, ಷಷ್ಠಿ, ಮಂಗಳಚಂಡಿ, ಧರ್ಮಪತ್ನಿಯಾದ ಮೂರ್ತಿದೇವಿ, ಸ್ವಸ್ತಿ, ಶ್ರದ್ಧೆ, ಕಾಂತಿ, ತುಷ್ಟಿ, ಶಾಂತಿ, ನಿದ್ರಾ, ತಂದ್ರಾ, ಕ್ಷುತ್, ಪಿಪಾಸಾ, ಸಂಧ್ಯಾ, ರಾತ್ರಿ, ದಿನ, ಸಂಪತ್ತಿ, ವೃತಿ, ಕೀರ್ತಿ, ಕ್ರಿಯಾ, ಶೋಭಾ, ಪ್ರಭಾ ಮುಂತಾದ ದೇವಿಯರೂ ಪ್ರತಿಯುಗದಲ್ಲಿ ಉತ್ಪತ್ತಿಪಡೆಯುವ ಉತ್ತಮಸ್ತ್ರೀಯರೂ ವಾಸ್ತವಸ್ವರೂಪರು.

ಕೃತ್ಯಾಸ್ವರೂಪಂ ತದ್ಯತ್ತು ಸ್ವರ್ವೇಶ್ಯಾದಿಕಮೇವ ಚ |
ತದಪ್ರಶಂಸ್ಯಂ ವಿಶ್ವೇಷು ಪುಂಶ್ಚಲೀರೂಪಮೇವ ಚ || ೭೩ ||

ಸತ್ವಪ್ರಧಾನಂ ಯದ್ರೂಪಂ ತಚ್ಚ ಶುದ್ಧಂ ಸ್ವಭಾವತಃ |
ತದುತ್ತಮಂ ಚ ವಿಶ್ವೇಷು ಸಾಧ್ವೀರೂಪಂ ಪ್ರಶಂಸಿತಂ || ೭೪ ||

ತದ್ವಾಸ್ತವಂ ಚ ವಿಜ್ಞೇಯಂ ಪ್ರವದಂತಿ ಮನೀಷಿಣಃ |
ರಜೋರೂಪಂ ತಮೋರೂಪಂ ಕೃತ್ಯಾಸು ದ್ವಿವಿಧಂ ಸ್ಮೃತಂ || ೭೫ ||

ಸ್ಥಾನಾಭಾವಾತ್ಕ್ಷಣಾಭಾವಾನ್ಮಧ್ಯವೃತ್ತೇರಭಾವತಃ |
ದೇಹಕ್ಲೇಶೇನ ರೋಗೇಣ ಸತ್ಸಂಸರ್ಗೇಣ ಸುಂದರೀ || ೭೬ ||

ಬಹುಗೋಷ್ಠ್ಯಾವೃತೇನೈವ ರಿಪುರಾಜಭಯೇನ ಚ |
ರಜೋರೂಪಸ್ಯ ಸಾಧ್ವೀತ್ವಮೇತೇನೈವೋಪಜಾಯತೇ || ೭೭ ||

---

೭೩. ದೇವವೇಶ್ಯೆಯರೆಲ್ಲರೂ ಕೃತಕಸ್ವರೂಪರು. ಪುಂಶ್ಚಲಿ (ಸೂಳೆ)ಯರಾದ ಅವರನ್ನು ವಿಶ್ವದಲ್ಲಿ ಯಾರೂ ಪ್ರಶಂಸೆಮಾಡುವುದಿಲ್ಲ.

೭೪. ಸ್ತ್ರೀರೂಪವು ಸತ್ವಪ್ರಧಾನವಾಗಿದ್ದರೆ ಸ್ವಭಾವವಾಗಿ ಶುದ್ಧವಾಗಿರುವುದು. ವಿಶ್ವದಲ್ಲೆಲ್ಲಾ ಸಾಧ್ವೀಶಿರೋಮಣಿಯರ ರೂಪವು ಉತ್ತಮವೆನಿಸಿಕೊಳ್ಳುವುದು.

೭೫. ಸತ್ವಪ್ರಧಾನವಾದ ಸ್ತ್ರೀರೂಪವು ವಾಸ್ತವವೆಂದೂ, ರಜೋಗುಣ ತಮೋಗುಣ ಪ್ರಧಾನವಾದ ಸ್ತ್ರೀರೂಪವು ಕೃತ್ಯಾಸ್ವರೂಪದ ಎರಡು ಭೇದವೆಂದೂ ಬಲ್ಲವರು ಹೇಳುವರು.

೭೬–೭೭ ದುರ್ಮಾರ್ಗಪ್ರವರ್ತನೆಗೆ ಕ್ಷಣವೂ ಅವಕಾಶಸಿಕ್ಕದಿರುವುದರಿಂದಲೂ, ಶರೀರಕ್ಲೇಶದಿಂದಲೂ, ರೋಗದಿಂದಲೂ, ಸತ್ಸಹವಾಸದಿಂದಲೂ, ಸತ್ಪುರುಷರ ಗೋಷ್ಠಿಯಲ್ಲಿ ಸೇರುವುದರಿಂದಲೂ, ಶತ್ರುರಾಜರ ಭಯದಿಂದಲೂ, ರಜಃಪ್ರಕೃತಿಯ ಸ್ತ್ರೀಯೂ ಸಾಧ್ವಿಯಾಗುವಳು.

ಇದಂ ಮಧ್ಯಮರೂಪಂ ಚ ಪ್ರವದಂತಿ ಮನೀಷಿಣಃ ।
ತಮೋರೂಪಂ ದುರ್ನಿವಾರ್ಯಮಧಮಂ ತದ್ವಿದುರ್ಬುಧಾಃ ॥ ೭೮ ॥

ನ ಪೃಚ್ಛತಿ ಕುಲೇ ಜಾತಃ ಪಂಡಿತಶ್ಚ ಪರಸ್ತ್ರಿಯಂ ।
ನಿರ್ಜನೇ ದುರ್ಜನೇ ವಾಪಿ ರಹಸ್ಯೇವ ಚ ತಾಂ ಸ್ತ್ರಿಯಂ ॥ ೭೯ ॥

ಆಗಚ್ಛಾಮಿ ತ್ವತ್ಸಮೀಪಮಾಜ್ಞಯಾ ಬ್ರಹ್ಮಣೋಽಧುನಾ ।
ಗಾಂಧರ್ವೇಣ ವಿವಾಹೇನ ತ್ವಾಂ ಗ್ರಹೀಷ್ಯಾಮಿ ಶೋಭನೇ ॥ ೮೦ ॥

ಅಹಮೇವ ಶಂಖಚೂಡೋ ದೇವವಿದ್ರಾವಕಾರಕಃ ।
ದನುವಂಶೋದ್ಭವೋ ವಿಶ್ವೇ ಸುದಾಮಾಹಂ ಹರೇಃ ಪುರೇ ॥ ೮೧ ॥

ಅಹಮಷ್ಟಸು ಗೋಪೇಷು ಗೋಗೋಪೀಪಾರ್ಶದೇಷು ಚ ।
ಅಧುನಾ ದಾನವೇಂದ್ರೋಽಹಂ ರಾಧಿಕಾಯಾಶ್ಚ ಶಾಪತಃ ॥ ೮೨ ॥

---

೭೮. ಇದನ್ನು ಪಂಡಿತರು ಮಧ್ಯಮತರಗತಿಯ ಸ್ತ್ರೀರೂಪವೆನ್ನುವರು. ತಮಃಸ್ವರೂಪದ ಸ್ತ್ರೀಯರು ದುರ್ನಿವಾರ್ಯರೂ. ಅಧಮರೂ ಎಂದು ಪಂಡಿತರು ಹೇಳುವರು.

೭೯. ಸತ್ಕುಲಪ್ರಸೂತನಾದ ಪಂಡಿತನು ಪರಸ್ತ್ರೀಯನ್ನು ಮಾತನಾಡಿಸುವುದಿಲ್ಲ. ನಿರ್ಜನಪ್ರದೇಶದಲ್ಲಾಗಲೀ, ದುರ್ಜನ ಪರಿವೃತಸ್ಥಳದಲ್ಲಾಗಲೀ, ಸಜ್ಜನನು ಪರಸ್ತ್ರೀಯನ್ನು ಮಾತನಾಡಿಸನು.

೮೦. ಅದು ಇರಲಿ, ಈಗ ನಾನು ಬ್ರಹ್ಮನ ಆಜ್ಞೆಯಂತೆ ನಿನ್ನೆಡೆಗೆ ಬಂದಿದ್ದೇನೆ. ಎಲೌ, ಶೋಭನಾಂಗಿಯೇ, ಗಾಂಧರ್ವವಿವಾಹದಿಂದ ನಾನು ನಿನ್ನನ್ನು ಸ್ವೀಕರಿಸುವೆನು.

೮೧. ದೇವತೆಗಳಿಗೂ ಭಯವನ್ನುಂಟುಮಾಡಬಲ್ಲ ನಾನೇ ದನುವಂಶದಲ್ಲಿ ಹುಟ್ಟಿದ ಶಂಖಚೂಡನೆಂಬುವನು. ಹಿಂದೆ ವೈಕುಂಠದಲ್ಲಿ ಸುದಾಮನೆಂಬ ಗೋಪಾಲನಾಗಿದ್ದವನು ನಾನೇ.

೮೨. ಅಷ್ಟಗೋಪರು ಗೋವುಗಳು, ಗೋಪಿಯರು ಮತ್ತು ಪಾರ್ಷದರ ಮಧ್ಯದಲ್ಲಿ ವಿಹರಿಸುತ್ತಿದ್ದ ನಾನೇ ರಾಧಾಶಾಪದಿಂದ ದಾನವ (ರಾಕ್ಷಸ) ನಾಗಿ ಜನಿಸಿರುವೆನು.

ಜಾತಿಸ್ಮರೋಽಹಂ ಜಾನಾಮಿ ಕೃಷ್ಣಮಂತ್ರಪ್ರಭಾವತಃ ।
ಜಾತಿಸ್ಮರಾ ತ್ವಂ ತುಲಸೀ ಸಂಸಕ್ತಾ ಹರಿಣಾ ಪುರಾ ॥ ೮೩ ॥

ತ್ವಮೇವ ರಾಧಿಕಾಶಾಪಾಜ್ಜಾತಾಸಿ ಭಾರತೇ ಭುವಿ ।
ತ್ವಾಂ ಸಂಭೋಕ್ತುಮಿಚ್ಛುಕೋಽಹಂ ನಾಲಂ ರಾಧಾಭಯಾತ್ತತಃ ॥ ೮೪ ॥

ಇತ್ಯೇವಮುಕ್ತ್ವಾ ಸ ಪುಮಾನ್ನಿರರಾಮ ಮಹಾಮುನೇ ।
ಸಸ್ಮಿತಾ ತುಲಸೀ ಹೃಷ್ಟಾ ಪ್ರವಕ್ತುಮುಪಚಕ್ರಮೇ ॥ ೮೫ ॥

॥ ತುಲಸ್ಯುವಾಚ ॥

ಏವಂವಿಧೋ ಬುಧೋ ವಿಶ್ವೇ ಬುಧೇಷು ಚ ಪ್ರಶಂಸಿತಃ ।
ಕಾಂತಮೇವಂ ವಿಧಂ ಕಾಂತಾ ಶಶ್ವದಿಚ್ಛತಿ ಕಾಮತಃ ॥ ೮೬ ॥

---

೮೩. ನಾನೀಗ ಶ್ರೀಕೃಷ್ಣಮಂತ್ರಪ್ರಭಾವದಿಂದ, ಜಾತಿಸ್ಮರನಾಗಿ ನೀನಾರೆಂಬುದನ್ನು ತಿಳಿದಿದ್ದೇನೆ. ಎಲೌ ತುಳಸಿಯೇ, ನೀನು ಪೂರ್ವದಲ್ಲಿ ಶ್ರೀಹರಿಯೊಡನೆ ಸಂಸಕ್ತಳಾಗಿದ್ದೆ ಎಂಬುದನ್ನು ಜಾತಿಸ್ಮರಳಾದ ನೀನೂ ಬಲ್ಲೆಯಲ್ಲವೇ?

೮೪. ನೀನೂ ಕುಪಿತಳಾದ ರಾಧೆಯ ಶಾಪಕ್ಕೊಳಗಾಗಿ ಭಾರತಭೂಮಿಯಲ್ಲಿ ಹುಟ್ಟಿರುವೆ. ನಾನು ನಿನ್ನೊಡನೆ ಸಂಭೋಗಿಸಲು ಬಯಸಿ ಬಂದಿರುವೆನು. ಆದ್ದರಿಂದ ರಾಧಾದೇವಿಯ ಭಯವನ್ನು ಬಿಡು.

೮೫. ಇಂತು ನುಡಿದು ಆ ಶಂಖಚೂಡನು ಸುಮ್ಮನಾಗಲು, ಸ್ಮಿತವದನಳಾದ ತುಳಸಿಯು ಅವನನ್ನು ಕುರಿತು ಇಂತು ನುಡಿಯಲಾರಂಭಿಸಿದಳು.

೮೬. ತುಲಸೀ :—ಎಲೈ ಶಂಖಚೂಡನೇ, ನಿನ್ನಂತಿರುವ ಪಂಡಿತನೇ ಸಕಲ ಪಂಡಿತರಿಂದ ಪ್ರಶಂಸಾರ್ಹನಾಗುವನು. ಉತ್ತಮಸ್ತ್ರೀಯೂ ಕೂಡ ನೀನು ಹೇಳಿದಂಥ ಪತಿಯನ್ನೇ ಯಾವಾಗಲೂ ಬಯಸುವಳು.

ತ್ವಯೋಹಮಧುನಾ ಸತ್ಯಂ ವಿಚಾರೇಣ ಪರಾಜಿತಾ ।
ಸನಿಂದಿತಶ್ಚಾಪ್ಯಶುಚಿರ್ಯಃ ಪುಮಾಂಶ್ಚ ಸ್ತ್ರಿಯಾಜಿತಃ ॥ ೮೭ ॥

ನಿಂದಂತಿ ಪಿತರೋ ದೇವಾ ಬಾಂಧವಾಃ ಸ್ತ್ರೀಜಿತಂ ಜನಂ ।
ಸ್ತ್ರೀಜಿತಂ ಮನಸಾ ವಾಚಾ ಪಿತಾ ಭ್ರಾತಾ ಚ ನಿಂದತಿ ॥ ೮೮ ॥

ಶುದ್ಧ್ಯೇದ್ವಿಪ್ರೋ ದಶಾಹೇನ ಜಾತಕೇ ಮೃತಕೇ ತಥಾ ।
ಭೂಮಿಪೋ ದ್ವಾದಶಾಹೇನ ವೈಶ್ಯಃ ಪಂಚದಶಾಹತಃ ॥ ೮೯ ॥

ಶೂದ್ರೋ ಮಾಸೇನ ವೇದೇಷು ಮಾತೃವದ್ವರ್ಣಸಂಕರಃ ।
ಅಶುಚಿಃ ಸ್ತ್ರೀಜಿತಃ ಶುಧ್ಯೇಚ್ಚಿತಾದಾಹನಕಾಲತಃ ॥ ೯೦ ॥

---

೮೭. ನಮ್ಮಿಬ್ಬರಿಗೂ ವಾಗ್ವಾದ ನಡೆದು ಈಗ ನಾನು ಸತ್ಯವಾಗಿಯೂ ನಿನಗೆ ಸೋತೆನು. ಪುರುಷನು ಸ್ತ್ರೀಗೆ ಸೋತರೆ ಅವನು ಸಕಲರಿಂದ ನಿಂದಿತನೂ, ಅಶುಚಿಯೂ ಆಗುವನು.

೮೮. ಹೆಂಗಸಿಗೆ ಸೋತ ಮನುಷ್ಯನನ್ನು ಪಿತೃಗಳೂ, ದೇವತೆಗಳೂ, ಬಾಂಧವರೂ ನಿಂದಿಸುವರು. ತಂದೆಯೂ ಸಹೋದರರೂ, ಮಾತು ಮತ್ತು ಮನಸ್ಸಿನಿಂದಲೂ, ಸ್ತ್ರೀಜಿತನನ್ನು ನಿಂದಿಸುವರು.

೮೯. ಬ್ರಾಹ್ಮಣನು ಹತ್ತು ದಿನಗಳು ಕಳೆದ ಮೇಲೆ ಜಾತಾಶೌಚ ಮೃತಾಶೌಚಗಳಿಂದ ಶುದ್ಧಿ ಹೊಂದುವನು. ಕ್ಷತ್ರಿಯನು ಹನ್ನೆರಡು ದಿವಸಗಳಲ್ಲೂ, ವೈಶ್ಯನು ಹದಿನೈದು ದಿವಸಗಳಲ್ಲೂ ಶುದ್ಧಿ ಹೊಂದುವನು.

೯೦. ಶೂದ್ರನು ಒಂದು ತಿಂಗಳಾದನಂತರ ಶುದ್ಧಿ ಹೊಂದುವನು (ವೇದೇಷು ಮಾತೃವದ್ವರ್ಣಸಂಕರಃ) ಆದರೆ ಸ್ತ್ರೀಜಿತನಾದ ಅಶುಚಿಪುರುಷನು ಚಿತೆಯಲ್ಲಿ ಮಲಗಿ ದಹನಹೊಂದಿದಾಗಲೇ ಶುದ್ಧಿ ಹೊಂದುವನು.

ನ ಗೃಹ್ಣಂತೀಚ್ಛಯಾ ತಸ್ಯ ಪಿತರಃ ಪಿಂಡತರ್ಪಣಂ ।
ನ ಗೃಹ್ಣಂತೀಚ್ಛಯಾ ದೇವಾಸ್ತಸ್ಯ ಪುಷ್ಪಜಲಾದಿಕಂ ॥ ೯೧ ॥

ಕಿಂ ತಸ್ಯ ಜ್ಞಾನತಪಸಾ ಜಪಹೋಮಪ್ರಪೂಜನೈಃ ।
ಕಿಂ ವಿದ್ಯಯಾ ವಾ ಯಶಸಾ ಸ್ತ್ರೀಭಿರ್ಯಸ್ಯ ಮನೋಹೃತಂ ॥ ೯೨ ॥

ವಿದ್ಯಾಪ್ರಭಾವಜ್ಞಾನಾರ್ಥಂ ಮಯಾ ತ್ವಂ ಚ ಪರೀಕ್ಷಿತಃ ।
ಕೃತ್ವಾ ಪರೀಕ್ಷಾಂ ಕಾಂತಸ್ಯ ವೃಣೋತಿ ಕಾಮಿನೀ ವರಂ ॥ ೯೩ ॥

ವರಾಯ ಗುಣಹೀನಾಯ ವೃದ್ಧಾಯಾಜ್ಞಾನಿನೇ ತಥಾ ।
ದರಿದ್ರಾಯ ಚ ಮೂರ್ಖಾಯ ರೋಗಿಣೇ ಕುತ್ಸಿತಾಯ ಚ ॥ ೯೪ ॥

ಅತ್ಯಂತಕೋಪಯುಕ್ತಾಯ ಚಾತ್ಯಂತ ದುರ್ಮುಖಾಯ ಚ ।
ಪಂಗುಲಾಯಾಂಗಹೀನಾಯ ಚಾಂಧಾಯ ಬಧಿರಾಯ ಚ ॥ ೯೫ ॥

---

೯೧. ಸ್ತ್ರೀಜಿತನು ಕೊಡುವ ಪಿಂಡವನ್ನೂ, ತಿಲೋದಕವನ್ನೂ ಪಿತೃಗಳು ಇಚ್ಛಾಪೂರ್ವಕವಾಗಿ ಸ್ವೀಕರಿಸುವುದಿಲ್ಲ. ಅವನು ಅರ್ಪಿಸುವ ಪುಷ್ಪಫಲೋದಕಗಳನ್ನು ದೇವತೆಗಳೂ ಇಚ್ಛೆಯಿಂದ ಸ್ವೀಕರಿಸುವುದಿಲ್ಲ.

೯೨. ಹೆಂಗಸಿಗೆ ಅಧೀನನಾದ ಮನುಷ್ಯನು ಎಷ್ಟು ಜ್ಞಾನಾರ್ಜನೆ ಮಾಡಿದ್ದರೇನು? ಎಷ್ಟು ಜಪತಪಹೋಮಪೂಜಾದಿಗಳನ್ನು ಆಚರಿಸಿದ್ದರೇನು? ಎಷ್ಟು ವಿದ್ಯಾವಂತನಾಗಿ ಕೀರ್ತಿಗಳಿಸಿದ್ದರೇನು? ಎಲ್ಲವೂ ವ್ಯರ್ಥವೇ.

೯೩. ನಿನ್ನ ವಿದ್ಯಾಮಹಿಮೆಯನ್ನು ತಿಳಿಯಲೋಸುಗ ನಾನು ನಿನ್ನನ್ನು ಪರೀಕ್ಷಿಸಿದೆನು. ತಿಳಿವಳಿಕೆಯುಳ್ಳ ಹೆಂಗಸು ತನ್ನ ಕಾಂತನನ್ನು ಚೆನ್ನಾಗಿ ಪರೀಕ್ಷಿಸಿ ವರಿಸುವಳು.

೯೪–೯೬. ಗುಣಹೀನನೂ, ಮುದುಕನೂ, ಅಜ್ಞಾನಿಯೂ, ದರಿದ್ರನೂ, ಮೂರ್ಖನೂ, ರೋಗಿಯೂ, ದುರಾಚಾರಿಯೂ, ಬಹಳ ಕೋಪಿಷ್ಠನೂ. ಯಾವಾಗಲೂ ಗಂಟುಮುಖವುಳ್ಳವನೂ, ಆದ ಪುರುಷನಿಗೂ ಅಂತೆಯೇ ಕುಂಟನಿಗೂ,

ಜಡಾಯ ಚೈವ ಮೂಕಾಯ ಕ್ಲೀಬತುಲ್ಯಾಯ ಪಾಪಿನೇ |
ಬ್ರಹ್ಮಹತ್ಯಾಂ ಲಭೇತ್ಸೋಽಪಿ ಯಃ ಸ್ವಕನ್ಯಾಂ ದದಾತಿ ಚ || ೯೬ ||

ಶಾಂತಾಯ ಗುಣಿನೇ ಚೈವ ಯೂನೇ ಚ ವಿದುಷೇಽಪಿ ಚ |
ವೈಷ್ಣವಾಯ ಸುತಾಂ ದತ್ವಾ ದಶವಾಜಿಫಲಂ ಲಭೇತ್ || ೯೭ ||

ಯಃ ಕನ್ಯಾಪಾಲನಂ ಕೃತ್ವಾ ಕರೋತಿ ವಿಕ್ರಯಂ ಯದಿ |
ವಿಪದಾ ಧನಲೋಭೇನ ಕುಂಭೀಪಾಕಂ ಸ ಗಚ್ಛತಿ || ೯೮ ||

ಕನ್ಯಾಮೂತ್ರಪುರೀಷಂ ಚ ತತ್ರ ಭಕ್ಷತಿ ಪಾತಕೀ |
ಕೃಮಿಭಿರ್ದಂಶಿತಃ ಕಾಕೈರ್ಯಾವದಿಂದ್ರಾಶ್ಚತುರ್ದಶ || ೯೯ ||

ತದಂತೇ ವ್ಯಾಧಯೋನೌ ಚ ಲಭತೇ ಜನ್ಮ ನಿಶ್ಚಿತಂ |
ವಿಕ್ರೀಣಾತಿ ಮಾಂಸಭಾರಂ ವಹತ್ಯೇವ ದಿವಾನಿಶಂ || ೧೦೦ ||

ಅಂಗಹೀನನಿಗೂ, ಕುರುಡನಿಗೂ, ಕಿವುಡನಿಗೂ, ಜಡನಿಗೂ, ಮೂಕನಿಗೂ, ನಪುಂಸಕನಿಗೂ, ಪಾಪಿಗೂ ಮಗಳನ್ನು ಕೊಡುವ ತಂದೆಯು ಬ್ರಹ್ಮಹತ್ಯೆಗೆ ಸಮನಾದ ಪಾಪವನ್ನು ಹೊಂದುವನು.

೯೭. ಶಾಂತನೂ, ಗುಣವಂತನೂ, ಯುವಕನೂ, ವಿದ್ವಾಂಸನೂ, ವಿಷ್ಣುಭಕ್ತನೂ ಆದ ಮನುಜನಿಗೆ ಮಗಳನ್ನು ಕೊಡುವುದರಿಂದ ದಶಾಶ್ವಮೇಧಯಾಗ ಮಾಡಿದ ಫಲವನ್ನು ಹೊಂದುವನು.

೯೮. ಯಾವ ಮನುಷ್ಯನು ಕಷ್ಟಕ್ಕೆ ಸಿಕ್ಕಿ ದುಡ್ಡಿನ ಆಸೆಗಾಗಿ ತಾನು ಕಾಪಾಡಿದ ಹೆಣ್ಣುಮಗಳನ್ನು ಮತ್ತೊಬ್ಬರಿಗೆ ಮಾರುವನೋ ಅವನು ಕುಂಭೀಪಾಕ ನರಕದಲ್ಲಿ ನರಳುವನು.

೯೯. ಅಲ್ಲದೆ ಆ ಪಾಪಿಯು ಅಲ್ಲಿ ತನ್ನ ಮಗಳ ಮಲಮೂತ್ರಗಳನ್ನೇ ತಿಂದುಕೊಂಡಿದ್ದು ಚತುರ್ದಶೇಂದ್ರರ ಜೀವಿತಕಾಲದವರೆಗೆ ಕಾಗೆಗಳಿಂದಲೂ, ಕ್ರಿಮಿಗಳಿಂದಲೂ ಕಚ್ಚಿಸಿಕೊಳ್ಳುತ್ತಿರುವನು.

೧೦೦. ಅನಂತರ ಬೇಡರ ಜಾತಿಯಲ್ಲಿ ಜನ್ಮಪಡೆದು ಪ್ರಾಣಿಗಳನ್ನು ಕೊಂದು ಮಾಂಸವನ್ನು ಹಗಲೂರಾತ್ರಿ ತಂದು ಮಾರುತ್ತಿರುವನು.

ಇತ್ಯೇವಮುಕ್ತ್ವಾ ತುಲಸೀ ವಿರರಾಮ ತಪೋವನೇ ।
ಏತಸ್ಮಿನ್ನಂತರೇ ಬ್ರಹ್ಮಾ ತಯೋರಂತಿಕಮಾಯಯೌ ॥ ೧೦೧ ॥

ಮೂರ್ಧ್ನಾ ನನಾಮ ತುಲಸೀ ಶಂಖಚೂಡಶ್ಚ ನಾರದ ।
ಉವಾಸ ತತ್ರ ದೇವೇಶಶ್ಚೋವಾಚ ಚ ತಯೋರ್ಹಿತಂ ॥ ೧೦೨ ॥

ಕಿಂ ಕರೋಷಿ ಶಂಖಚೂಡ ಸಂವಾದಮನಯಾ ಸಹ ।
ಗಾಂಧರ್ವೇಣ ವಿವಾಹೇನ ತ್ವಮಸ್ಯಾ ಗ್ರಹಣಂ ಕುರು ॥ ೧೦೩ ॥

ತ್ವಂ ಚ ಪುರುಷರತ್ನಂ ಚ ಸ್ತ್ರೀರತ್ನಂ ಸ್ತ್ರೀಷ್ವಿಯಂ ಸತೀ ।
ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ಭವೇತ್ ॥ ೧೦೪ ॥

---

೧೦೧. ಇಂತು ಆ ತಪೋವನದಲ್ಲಿ ತುಳಸಿಯು ಶಂಖಚೂಡನಿಗೆ ತಿಳಿಸಿ ಸುಮ್ಮನಾದಳು. ಇಷ್ಟು ಹೊತ್ತಿಗೆ ಬ್ರಹ್ಮನು ಅವರಿಬ್ಬರ ಸಮೀಪಕ್ಕೆ ಬಂದನು.

೧೦೨. ಎಲೈ, ನಾರದನೇ, ಕೂಡಲೇ ತುಳಸಿ ಮತ್ತು ಶಂಖಚೂಡರು ತಲೆಬಾಗಿ ಬ್ರಹ್ಮನಿಗೆ ವಂದಿಸಿದರು. ಅನಂತರ ದೇವಶ್ರೇಷ್ಠನಾದ ಬ್ರಹ್ಮನು ಅಲ್ಲಿ ಕುಳಿತು ಅವರಿಗೆ ಹಿತನುಡಿಗಳನ್ನಾಡಿದನು.

೧೦೩. ಎಲೈ, ಶಂಖಚೂಡನೇ, ಈ ತುಳಸೀದೇವಿಯೊಡನೆ ನೀನು ಮಾಡುವ ವಾಗ್ವಾದವೇನು ? ಗಾಂಧರ್ವವಿವಾಹಕ್ರಮದಿಂದ ನೀನು ಇವಳ ಪಾಣಿಗ್ರಹಣ ಮಾಡು.

೧೦೪. ನೀನು ಪುರುಷರಲ್ಲೆಲ್ಲಾ ಶ್ರೇಷ್ಠನು. ಈ ತುಳಸೀದೇವಿಯೂ ಸ್ತ್ರೀಯರಲ್ಲೆಲ್ಲಾ ಶ್ರೇಷ್ಠಳಾದವಳು ನಿಮ್ಮಿಬ್ಬರಿಗೂ ಸಮಾಗಮವಾದರೆ ವಿದಗ್ಧಳಾದ ಸ್ತ್ರೀಯು ವಿದಗ್ಧಪುರುಷನೊಡನೆ ಸೇರಿದಂತಾಗಿ ಗುಣಯುತವಾಗುವುದು.

ನಿರ್ವಿರೋಧಸುಖಂ ರಾಜನ್ ಕೋವಾ ತ್ಯಜತಿ ದುರ್ಲಭಂ।
ಯೋಽವಿರೋಧಸುಖತ್ಯಾಗೀ ಸ ಪಶುರ್ನಾತ್ರ ಸಂಶಯಃ ॥ ೧೦೫ ॥

ಕಿಮುಪೇಕ್ಷಸಿ ತ್ವಂ ಕಾಂತಮೀದೃಶಂ ಗುಣಿನಂ ಸತೀ।
ದೇವಾನಾಮಸುರಾಣಾಂ ಚ ದಾನವಾನಾಂ ವಿಮರ್ದನಂ ॥ ೧೦೬ ॥

ಯಥಾಲಕ್ಷ್ಮೀಶ್ಚ ಲಕ್ಷ್ಮೀಶೇ ಯಥಾ ಕೃಷ್ಣೇ ಚ ರಾಧಿಕಾ।
ಯಥಾ ಮಯಿ ಚ ಸಾವಿತ್ರೀ ಭವಾನೀ ಚ ಭವೇ ಯಥಾ ॥ ೧೦೭ ॥

ಯಥಾ ಧರಾ ವರಾಹೇ ಚ ಯಥಾ ಮೇನಾ ಹಿಮಾಲಯೇ।
ಯಥಾತ್ರಾವನಸೂಯಾ ಚ ದಮಯಂತೀ ನಲೇ ಯಥಾ ॥ ೧೦೮ ॥

ರೋಹಿಣೀ ಚ ಯಥಾ ಚಂದ್ರೇ ಯಥಾ ಕಾಮೇ ರತಿಃ ಸತೀ।
ಯಥಾ ದಿತಿಃ ಕಶ್ಯಪೇ ಚ ವಶಿಷ್ಠೇಽರುಂಧತೀ ಯಥಾ ॥ ೧೦೯ ॥

---

೧೦೫. ಎಲೈ ರಾಜನೇ, ದುರ್ಲಭವೂ, ವಿರೋಧರಹಿತವೂ ಆದ ಸುಖವನ್ನು ಯಾರು ತಾನೇ ತ್ಯಜಿಸಿಯಾರು? ವಿರೋಧರಹಿತವಾದ ಇಂಥ ಸುಖವನ್ನು ಬಿಡುವವನು ಪಶುಸಮಾನನೆಂಬುದರಲ್ಲಿ ಸಂದೇಹವಿಲ್ಲ.

೧೦೬. ಎಲೌ, ಸುಂದರಾಂಗಿಯಾದ ತುಳಸೀದೇವಿಯೇ, ದೇವದಾನವರನ್ನೂ, ರಾಕ್ಷಸರನ್ನೂ ಸಂಹರಿಸಲು ಶಕ್ತನೂ ಗುಣವಂತನೂ ಆದ ಇಂಥ ಪತಿಯನ್ನು ನೀನೇಕೆ ಉಪೇಕ್ಷಿಸುತ್ತಿರುವೆ?

೧೦೭–೧೦೯. ಲಕ್ಷ್ಮೀದೇವಿಯು ನಾರಾಯಣನಲ್ಲಿಯೂ, ರಾಧಾದೇವಿಯು ಶ್ರೀಕೃಷ್ಣನಲ್ಲಿಯೂ, ಸಾವಿತ್ರೀದೇವಿಯು ನನ್ನಲ್ಲಿಯೂ, ಪಾರ್ವತಿಯು ಈಶ್ವರನಲ್ಲಿಯೂ, ಭೂದೇವಿಯು ಆದಿವರಾಹನಲ್ಲಿಯೂ, ಮೇನೆಯು ಹಿಮವಂತನಲ್ಲಿಯೂ, ಅನಸೂಯೆಯು ಅತ್ರಿಮಹರ್ಷಿಯಲ್ಲಿಯೂ, ದಮಯಂತಿಯು ನಳನಲ್ಲಿಯೂ, ರೋಹಿಣಿಯು ಚಂದ್ರನಲ್ಲಿಯೂ, ಅದಿತಿಯು ಕಶ್ಯಪನಲ್ಲಿಯೂ, ಅರುಂಧತಿಯು ವಸಿಷ್ಠನಲ್ಲಿಯೂ ಪ್ರೀತಿಯಿಟ್ಟಿರುವಂತೆ ನೀನೂ ಶಂಖಚೂಡನಲ್ಲಿ ಪ್ರೀತಿಯಿಡು.

ಯಥಾಹಲ್ಯಾ ಗೌತಮೇ ಚ ದೇವಹೂತಿಶ್ಚ ಕರ್ದಮೇ ।
ಯಥಾ ಬೃಹಸ್ಪತೌ ತಾರಾ ಶತರೂಪಾ ಮನೌ ಯಥಾ　　॥ ೧೧೦ ॥

ಯಥಾ ಚ ದಕ್ಷಿಣಾ ಯಜ್ಞೇ ಯಥಾ ಸ್ವಾಹಾ ಹುತಾಶನೇ ।
ಯಥಾ ಶಚೀ ಮಹೇಂದ್ರೇ ಚ ಯಥಾಪುಷ್ಟಿರ್ಗಣೇಶ್ವರೇ　　॥ ೧೧೧ ॥

ದೇವಸೇನಾ ಯಥಾ ಸ್ಕಂದೇ ಧರ್ಮೇಮೂರ್ತಿರ್ಯಥಾ ಸತೀ ।
ಸೌಭಾಗ್ಯಾಸು ಪ್ರಿಯಾತ್ವಂ ಚ ಶಂಖಚೂಡೇ ತಥಾ ಭವ　　॥ ೧೧೨ ॥

ಅನೇನ ಸಾರ್ಧಂ ಸುಚಿರಂ ಸುಂದರೇಣ ಚ ಸುಂದರೀ ।
ಸ್ಥಾನೇ ಸ್ಥಾನೇ ವಿಹಾರಂ ಚ ಯಥೇಚ್ಛಂ ಕುರು ಸಂತತಂ　　॥ ೧೧೩ ॥

ಪಶ್ಚಾತ್ಪ್ರಾಪ್ಸ್ಯಸಿ ಗೋವಿಂದಂ ಗೋಲೋಕೇ ಪುನರೇವ ಚ ।
ಚತುರ್ಭುಜಂ ಚ ವೈಕುಂಠೇ ಶಂಖಚೂಡೇ ಮೃತೇ ಸತಿ　　॥ ೧೧೪ ॥

೧೧೦–೧೧೨. ಅಹಲ್ಯೆಯು ಗೌತಮನಲ್ಲಿಯೂ, ದೇವಹೂತಿಯು ಕರ್ದಮನಲ್ಲಿಯೂ, ತಾರಾದೇವಿಯು ಬೃಹಸ್ಪತ್ಯಾಚಾರ್ಯನಲ್ಲಿಯೂ, ಶತರೂಪೆಯು ಸ್ವಾಯಂಭುವಮನುವಿನಲ್ಲಿಯೂ, ದಕ್ಷಿಣಾದೇವಿಯು ಯಜ್ಞಪುರುಷನಲ್ಲಿಯೂ, ಸ್ವಾಹಾದೇವಿಯು ಅಗ್ನಿದೇವನಲ್ಲಿಯೂ, ಶಚೀದೇವಿಯು ಮಹೇಂದ್ರನಲ್ಲಿಯೂ, ಪುಷ್ಟಿದೇವಿಯು ಗಣಪತಿಯಲ್ಲಿಯೂ, ದೇವಸೇನೆಯು ಷಣ್ಮುಖನಲ್ಲಿಯೂ, ಸತಿಯಾದ ಮೂರ್ತಿದೇವಿಯು ಧರ್ಮಪುರುಷನಲ್ಲಿಯೂ ಪ್ರೀತಿಯನ್ನಿಟ್ಟು ಸೌಭಾಗ್ಯವತಿಯರಾಗಿರುವಂತೆ ನೀನೂ ಶಂಖಚೂಡನಲ್ಲಿ ಪ್ರೀತಿಯಿಟ್ಟು ಸೌಭಾಗ್ಯವತಿಯಾಗು.

೧೧೩. ಎಲೌ ಸುಂದರಾಂಗಿಯೇ, ಸುಂದರನಾದ ಶಂಖಚೂಡನೊಡನೆ ಅನೇಕ ಕಾಲದವರೆಗೆ ನಿನಗಿಷ್ಟಬಂದ ಸ್ಥಳಗಳಲ್ಲಿ ಇಚ್ಛೆ ಬಂದಂತೆ ವಿಹರಿಸಿಕೊಂಡಿರು.

೧೧೪. ಶಂಖಚೂಡನು ಮೃತನಾದನಂತರ ಗೋಲೋಕದಲ್ಲಿ ಗೋವಿಂದನನ್ನೂ, ವೈಕುಂಠದಲ್ಲಿ ಚತುರ್ಭುಜನನ್ನೂ ಹೊಂದಿ ಸುಖವಾಗಿರುವೆ.

ಇತ್ಯೇವಮಾಶಿಷಂ ಕೃತ್ವಾ ಸ್ವಾಲಯಂ ಪ್ರಯಯೌ ವಿಧಿಃ ।
ಗಾಂಧರ್ವೇಣ ವಿವಾಹೇನ ಜಗೃಹೇ ತಾಂ ಚ ದಾನವಃ ॥ ೧೧೫ ॥

ಸ್ವರ್ಗೇ ದುಂದುಭಿವಾದ್ಯಂ ಚ ಪುಷ್ಪವೃಷ್ಟಿರ್ಬಭೂವ ಹ ।
ಸ ರೇಮೇ ರಮಯಾ ಸಾರ್ಧಂ ವಾಸಗೇಹೆ ಮನೋಹರೇ ॥ ೧೧೬ ॥

ಮೂರ್ಛಾಂ ಸಂಪ್ರಾಪ ತುಲಸೀ ನವಸಂಗಮಸಂಗತಾ ।
ನಿಮಗ್ನಾ ನಿರ್ಜನೇ ಸಾಧ್ವೀ ಸಂಭೋಗ ಸುಖಸಾಗರೇ ॥ ೧೧೭ ॥

ಚತುಃಷಷ್ಟಿಕಲಾಮಾನಂ ಚತುಃಷಷ್ಟಿವಿಧಂ ಸುಖಂ ।
ಕಾಮಶಾಸ್ತ್ರೇ ಯನ್ನಿರುಕ್ತಂ ರಸಿಕಾನಾಂ ಯಥೇಪ್ಸಿತಂ ॥ ೧೧೮ ॥

ಅಂಗಪ್ರತ್ಯಂಗ ಸಂಶ್ಲೇಷಪೂರ್ವಕಂ ಸ್ತ್ರೀಮನೋಹರಂ ।
ತತ್ಸರ್ವಂ ಸುಖಶೃಂಗಾರಂ ಚಕಾರ ರಸಿಕೇಶ್ವರಃ ॥ ೧೧೯ ॥

---

೧೧೫. ಇಂತು ಆಶೀರ್ವದಿಸಿ ಬ್ರಹ್ಮನು ತನ್ನ ಲೋಕಕ್ಕೆ ಹಿಂತಿರುಗಿದನು. ಇತ್ತ ದಾನವನಾದ ಶಂಖಚೂಡನು ಗಾಂಧರ್ವವಿಧಿಯಿಂದ ಅವಳನ್ನು ಸ್ವೀಕರಿಸಿದನು.

೧೧೬. ಆಗ ಸ್ವರ್ಗಲೋಕದಲ್ಲಿ ನಗಾರಿಯ ಧ್ವನಿಯಾಯಿತು. ಹೂಮಳೆಯು ಸುರಿಯಿತು. ಆ ಶಂಖಚೂಡನು ಮನೋಹರವಾದ ವಾಸಗೃಹದಲ್ಲಿ ಆ ತುಳಸೀ ದೇವಿಯೊಡನೆ ವಿಹರಿಸಿಕೊಂಡಿದ್ದನು.

೧೧೭. ನಿರ್ಜನಪ್ರದೇಶದಲ್ಲಿ ತನ್ನ ಪತಿಯೊಡನೆ ನವಸಂಗತಳಾದ ಆ ಸಾಧ್ವೀಮಣಿಯು ಸಂಭೋಗಸುಖಸಾಗರದಲ್ಲಿ ಮುಳುಗಿ ಮೂರ್ಛೆಗೊಂಡಳು.

೧೧೮–೧೧೯. ಕಾಮಶಾಸ್ತ್ರೋಕ್ತವಾದ ರಸಿಕರಿಗೆ ಅಭೀಷ್ಟವಾದ ಅರವತ್ತು ನಾಲ್ಕು ಕಲಾಪರಿಮಿತವಾದ ಸುಖಗಳನ್ನೂ, ಅಂಗಪ್ರತ್ಯಂಗಾಲಿಂಗನಪೂರ್ವಕವಾದ ಸುಖವೆಲ್ಲವನ್ನೂ ರಸಿಕಶ್ರೇಷ್ಠನಾದ ಆ ಶಂಖಚೂಡನು ಅನುಭವಿಸಿದನು.

ಅತೀವರಮ್ಯದೇಶೇ ಚ ಸರ್ವಜಂತುವಿವರ್ಜಿತೇ ।
ಪುಷ್ಪಚಂದನತಲ್ಪೇ ಚ ಪುಷ್ಪಚಂದನವಾಯುನಾ ॥ ೧೨೦ ॥

ಪುಷ್ಪೋದ್ಯಾನೇ ನದೀತೀರೆ ಪುಷ್ಪಚಂದನಚರ್ಚಿತೇ ।
ಗೃಹೀತ್ವಾ ರಸಿಕಾಂ ರಾಮಾಂ ಪುಷ್ಪಚಂದನಚರ್ಚಿತಾಂ ॥ ೧೨೧ ॥

ಭೂಷಿತಾಂ ಭೂಷಣೈಃ ಸರ್ವೈರತೀವ ಸುಮನೋಹರಾಂ ।
ಸುರತೇವಿರತಿರ್ನಾಸ್ತಿ ತಯೋಃ ಸುರತವಿಜ್ಞಯೋಃ ॥ ೧೨೨ ॥

ಜಹಾರ ಮಾನಸಂಭರ್ತುರ್ಲೀಲಯಾ ತುಲಸೀ ಸತೀ ।
ಚೇತನಾಂ ರಸಿಕಾಯಾಶ್ಚ ಜಹಾರ ರಸಭಾವವಿತ್ ॥ ೧೨೩ ॥

ವಕ್ಷಸಶ್ಚಂದನಂ ಬಾಹ್ವೋಸ್ತಿಲಕಂ ವಿಜಹಾರ ಸಾ ।
ಸ ಚ ಜಗ್ರಾಹ ತಸ್ಯಾಶ್ಚ ಸಿಂಧೂರ ಬಿಂದುಪತ್ರಕಂ ॥ ೧೨೪ ॥

೧೨೦-೧೨೧. ಸಮಸ್ತ ಪ್ರಾಣಿಗಳಿಂದಲೂ ರಹಿತವಾಗಿ ಏಕಾಂತವಾಗಿರುವ ರಮ್ಯ ಪ್ರದೇಶದಲ್ಲಿ ಪುಷ್ಪಚಂದನಗಳಿಂದ ರಚಿತವಾದ ಹಾಸಿಗೆಯಲ್ಲಿ ಸುವಾಸಿತವಾದ ವಾಯುವನ್ನು ಸೇವಿಸುತ್ತಾ, ನದೀತೀರದ ಪುಷ್ಪೋದ್ಯಾನದಲ್ಲಿ, ಪುಷ್ಪಚಂದನಗಳಿಂದ ಲಿಪ್ತವಾದ ಅವಯುವವುಳ್ಳವನಾಗಿ ಪುಷ್ಪಚಂದನಚರ್ಚಿತಳೂ, :ಮನೋಹರಳೂ ಆದ ಆ ತುಳಸಿಯನ್ನು ಸಂಗಮಿಸಿ ಸುಖಪಡಿಸುತ್ತಿದ್ದನು.

೧೨೨. ಸರ್ವಾಭರಣಗಳಿಂದ ಅಲಂಕೃತರಾದ ಆ ಸುರತರಸಿಕರಿಬ್ಬರೂ ರತಿಸುಖದಲ್ಲಿ ತೃಪ್ತರಾಗದೇ ಅನುಸ್ಯೂತವಾಗಿ ಸುಖಾನುಭವಮಾಡುತ್ತಿದ್ದರು.

೧೨೩. ಸತಿಯಾದ ತುಳಸಿಯು ಪತಿಯ ಮನಸ್ಸನ್ನು ಲೀಲೆಯಿಂದಲೇ ಆಕರ್ಷಿಸಿದಳು. ರಸಿಕೇಶ್ವರನಾದ ಶಂಖಚೂಡನೂ ಕೂಡ ರಸಾನುಭವಮಾಡಿಸಿ ಆಕೆಯ ಚೇತನವನ್ನು ಅಪಹರಿಸಿದನು.

೧೨೪. ರತಿಸುಖಾನುಭವಕಾಲದಲ್ಲಿ ಅವಳು ತನ್ನ ಪತಿಯ ವಕ್ಷಃಸ್ಥಲದ ಚಂದನವನ್ನೂ ಬಾಹುಪ್ರದೇಶದಲ್ಲಿ ತಿಲಕವನ್ನೂ ಅಳಿಸಿದಳು. ಅವನೂಕೂಡ ಅವಳ ಚಂದ್ರಬಿಂದುವಿನ ಪತ್ರರಚನೆಯನ್ನು ಅಳಿಸಿದನು.

ಸ ತದ್ವಕ್ಷಸಿ ತಸ್ಯಾಶ್ಚ ನಖರೇಖಾಂ ದದೌ ಮುದಾ ।
ಸಾ ದದೌ ತದ್ವಾಮಪಾರ್ಶ್ವೇ ಕರಭೂಷಣಲಕ್ಷಣಂ ॥ ೧೨೫ ॥

ರಾಜಾ ತದೋಷ್ಠಪುಟಕೇ ದದೌ ದಶನದಂಶನಂ ।
ತದ್ಗಂಡಯುಗಲೇ ಸಾ ಚ ಪ್ರದದೌ ತಚ್ಚತುರ್ಗುಣಂ ॥ ೧೨೬ ॥

ಸುರತೇರ್ವಿರತೌ ತೌ ಚ ಸಮುತ್ಥಾಯ ಪರಸ್ಪರಂ ।
ಸುವೇಶಂ ಚಕ್ರತುಸ್ತತ್ರ ಯತ್ತನ್ಮನಸಿ ವಾಂಛಿತಂ ॥ ೧೨೭ ॥

ಕುಂಕುಮಾಕ್ತಚಂದನೇನ ಸಾ ತಸ್ಮೈ ತಿಲಕಂ ದದೌ ।
ಸರ್ವಾಂಗೇ ಸುಂದರೇ ರಮ್ಯೇ ಚಕಾರ ಚಾನುಲೇಪನಂ ॥ ೧೨೮ ॥

ಸುವಾಸಿತಂ ಚ ತಾಂಬೂಲಂ ವಹ್ನಿಶುದ್ಧೇ ಚ ವಾಸಸೀ ।
ಪಾರಿಜಾತಸ್ಯ ಕುಸುಮಂ ಮಾಲ್ಯಂ ಚೈವ ಸುಶೋಭನಂ ॥ ೧೨೯ ॥

---

೧೨೫. ಇವನು ಅವಳ ವಕ್ಷಃಸ್ಥಳದಲ್ಲಿ ನಖಕ್ಷತಮಾಡಿದನು. ಅವಳೂ ಅವನ ಎಡಭಾಗದಲ್ಲಿ ಉಗರುಗಳಿಂದ ಕ್ಷತಮಾಡಿದಳು.

೧೨೬. ಶಂಖಚೂಡನು ಅವಳ ಚಿಗುರಿನಂತಿರುವ ಕೆಳದುಟಿಯಲ್ಲಿ ದಂತಕ್ಷತ ಮಾಡಲು, ಅವನ ಎರಡು ಕೆನ್ನೆಗಳಲ್ಲಿಯೂ ಅವಳೂ ಅದಕ್ಕೆ ನಾಲ್ಕರಷ್ಟು ದಂತಕ್ಷತ ಮಾಡಿದಳು.

೧೨೭. ಸುರತಾವಸಾನದಲ್ಲಿ ಅವರಿಬ್ಬರೂ ಎದ್ದು, ತಮತಮಗೆ ಅಭೀಷ್ಟವಾದ ಸುಂದರವೇಷವನ್ನು ಧರಿಸಿಕೊಂಡರು.

೧೨೮. ಚಂದನಗಂಧಕ್ಕೆ ಕುಂಕುಮವನ್ನು ಬೆರಸಿ ಅವಳು ಅವನಿಗೆ ತಿಲಕವಿಟ್ಟಳು. ಅಲ್ಲದೆ ರಮ್ಯವಾದ ಅವನ ಅವಯವಗಳಿಗೆಲ್ಲ ಚಂದನವನ್ನು ಲೇಪನ ಮಾಡಿದಳು.

೧೨೯–೧೩೧. ಲವಂಗಪತ್ರಾದಿಗಳಿಂದ ಸುವಾಸಿತವಾದ ತಾಂಬೂಲವನ್ನು ಸೇವಿಸುತ್ತ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ಸುಂದರವಾದ

ಅಮೂಲ್ಯರತ್ನನಿರ್ಮಾಣಮಂಗುಲೀಯಕಮುತ್ತಮಂ।
ಸುಂದರಂ ಚ ಮಣಿವರಂ ತ್ರಿಷುಲೋಕೇಷು ದುರ್ಲಭಂ ॥ ೧೩೦ ॥

ದಾಸೀ ತವಾಹಮಿತ್ಯೇವಂ ಸಮುಚ್ಚಾರ್ಯ ಪುನಃ ಪುನಃ।
ನನಾಮ ಪರಯಾ ಭಕ್ತ್ಯಾ ಸ್ವಾಮಿನಂ ಗುಣಶಾಲಿನಂ ॥ ೧೩೧ ॥

ಸಸ್ಮಿತಾ ತನ್ಮುಖಾಂಭೋಜಂ ಲೋಚನಾಭ್ಯಾಂ ಪಪೌ ಪುನಃ।
ನಿಮೇಷರಹಿತಾಭ್ಯಾಂ ಚ ಸಕಟಾಕ್ಷಂ ಚ ಸುಂದರಂ ॥ ೧೩೨ ॥

ಸ ಚ ತಾಂ ಚ ಸಮಾಕೃಷ್ಯ ಚಕಾರ ವಕ್ಷಸಿ ಪ್ರಿಯಾಂ।
ಸಸ್ಮಿತಂ ವಾಸಸಾಚ್ಛನ್ನಂ ದದರ್ಶ ಮುಖಪಂಕಜಂ ॥ ೧೩೩ ॥

ಚುಚುಂಬ ಕಠಿನೇ ಗಂಡಬಿಂಬೋಷ್ಠೇ ಪುನರೇವ ಚ।
ದದೌ ತಸ್ಯೈ ವಸ್ತ್ರಯುಗ್ಮಂ ವರುಣಾದಾಹೃತಂ ಚ ಯತ್।
ತದಾಹೃತಂ ರತ್ನಮಾಲಾಂ ತ್ರಿಷು ಲೋಕೇಷು ವಿಶ್ರುತಾಂ ॥ ೧೩೪ ॥

ಪಾರಿಜಾತಪುಷ್ಪಮಾಲೆಯನ್ನು ಮುಡಿದು ಅಮೂಲ್ಯರತ್ನಗಳಿಂದ ನಿರ್ಮಿತವಾಗಿ ಶ್ರೇಷ್ಠವಾಗಿರುವ, ಉಂಗುರವನ್ನು ಬೆರಳಿಗೆ ಧರಿಸಿ, ತ್ರಿಲೋಕದಲ್ಲಿಯೂ ದುರ್ಲಭವಾದ ಸುಂದರಮಣಿಯಿಂದ ಅಲಂಕೃತನಾದ ಪತಿದೇವನನ್ನು ಕುರಿತು 'ನಾನು ನಿನ್ನ ದಾಸಿ, ನಿನ್ನ ಸೇವೆಗೆ ಸರ್ವದಾ ಸಿದ್ಧವಾಗಿದ್ದೇನೆ' ಎಂದು ಭಕ್ತಿಯಿಂದ ಮತ್ತೆ ಮತ್ತೆ ನಮಸ್ಕರಿಸಿದಳು.

೧೩೨. ಸ್ಮಿತಮುಖಳಾಗಿ ರೆಪ್ಪೆಹೊಡೆಯದಿರುವ ಕಣ್ಣುಗಳಿಂದಲೂ, ಸುಂದರವಾದ ಕಟಾಕ್ಷದಿಂದಲೂ ಅವನ ಮುಖದಾವರೆಯ ಸವಿಯನ್ನು ಮತ್ತೆ ಮತ್ತೆ ಸವಿದಳು.

೧೩೩. ಆ ಶಂಖಚೂಡನೂ ಕೂಡ ಆಕೆಯನ್ನು ಎಳೆದು ತನ್ನ ವಕ್ಷಃಪ್ರದೇಶದಲ್ಲಿ ಅಪ್ಪಿಕೊಂಡು ಸ್ಮಿತವದನನಾಗಿ ಬಟ್ಟೆಯಿಂದ ಮರೆಮಾಡಿಕೊಂಡಿರುವ ಆಕೆಯ ಮುಖಕಮಲವನ್ನು ನೋಡಿದನು.

೧೩೪. ಮತ್ತೆ ಮತ್ತೆ ಆಕೆಯ ಕಠಿನವಾದ ಕಪೋಲಗಳಲ್ಲೂ, ಬಿಂಬಫಲದಂತಿರುವ ಓಷ್ಠಪುಟಗಳಲ್ಲೂ ಮುತ್ತಿಟ್ಟು, ವರುಣದೇವನಿಂದ ತಂದಂಥ ಎರಡು ವಸ್ತ್ರಗಳನ್ನು ಆಕೆಗೆ ಕೊಟ್ಟನು.

ದದೌ ಮಂಜರೀಯುಗ್ಮಂ ಚ ಸ್ವಾಹಾಯಾಶ್ಚ ಹೃತಂ ಚ ಯತ್ ।
ಕೇಯೂರಯುಗ್ಮಂ ಛಾಯಾಯಾ ರೋಹಿಣ್ಯಾಶ್ಚೈವ ಕುಂಡಲಂ ॥ ೧೩೫ ॥

ಅಂಗುಲೀಯಕರತ್ನಾನಿ ರತ್ಯಾಶ್ಚ ವರಭೂಷಣಂ ।
ಶಂಖಂ ಸುರುಚಿರಂ ಚಿತ್ರಂ ಯದ್ದತ್ತಂ ವಿಶ್ವಕರ್ಮಣಾ ॥ ೧೩೬ ॥

ವಿಚಿತ್ರಪೀಠಕಶ್ರೇಣೀಂ ಶಯ್ಯಾಂ ಚಾಪಿ ಸುದುರ್ಲಭಾಂ ।
ಭೂಷಣಾನಿ ಚ ದತ್ವಾ ಚ ಪರೀಹಾರಂ ಚಕಾರ ಹ ॥ ೧೩೭ ॥

ನಿರ್ಮಾಯ ಕಬರೀಭಾರಂ ತಸ್ಯಾಶ್ಚ ಮಾಲ್ಯಸಂಯುತಂ ।
ಸುಚಿತ್ರಂ ಪತ್ರಕಂ ಗಂಡೇ ಜಯಲೇಖಸಮಂ ತಥಾ ॥ ೧೩೮ ॥

ಚಂದ್ರಲೇಖಾತ್ರಿಭಿರ್ಯುಕ್ತಂ ಚಂದನೇನ ಸುಗಂಧಿನಾ ।
ಪರಿತಃ ಪರಿತಶ್ಚಿತ್ರೈಃ ಸಾರ್ಧಂ ಕುಂಕುಮಬಿಂದುಭಿಃ ॥ ೧೩೯ ॥

---

೧೩೫. ಸ್ವಾಹಾದೇವಿಯಿಂದ ತಂದ ಎರಡು ಮಣಿನೂಪುರಗಳನ್ನೂ, ಛಾಯಾದೇವಿಯಿಂದ ತಂದ ಎರಡು ಬಾಹುಪುರಿಗಳನ್ನೂ, ರೋಹಿಣೀದೇವಿಯಿಂದ ತಂದ ಕರ್ಣಕುಂಡಲದ್ವಯವನ್ನೂ ಆಕೆಗೆ ಒಲಿದು ಕೊಟ್ಟನು.

೧೩೬. ರತಿದೇವಿಯಿಂದ ತಂದ ರತ್ನದ ಉಂಗುರಗಳನ್ನೂ, ಉತ್ತಮ ಭೂಷಣಗಳನ್ನೂ, ವಿಶ್ವಕರ್ಮನು ಕೊಟ್ಟ ಚಿತ್ರವಿಚಿತ್ರವೂ ಮನೋಹರವೂ ಆದ ಶಂಖಾಭರಣಗಳನ್ನೂ ತುಳಸಿಗೆ ಮನ ಒಪ್ಪಿ ಕೊಟ್ಟನು.

೧೩೭. ಅಂತೆಯೇ ವಿಚಿತ್ರವಾದ ಪೀಠಗಳ ಸಾಲನ್ನೂ, ಬಹುಮನೋಹರವಾದ ಶಯ್ಯೆಯನ್ನೂ, ಅನೇಕ ರತ್ನಾಭರಣಗಳನ್ನೂ ಕಾಣಿಕೆಯಾಗಿ ಕೊಟ್ಟು ಅವಳ ಮನಸ್ಸನ್ನೊಲಿಸಿಕೊಂಡನು.

೧೩೮–೧೪೧. ಆಕೆಯ ಕೇಶಪಾಶಗಳಲ್ಲಿ ಸುವಾಸನೆಯಾದ ಪುಷ್ಪಗಳನ್ನು ಮುಡಿಸಿ, ಕಪೋಲಸ್ಥಳದಲ್ಲಿ ಸುಂದರವಾಗಿಯೂ, ಚಿತ್ರವಿಚಿತ್ರವಾಗಿಯೂ ಮಕರಿಕಾದಿ ಪತ್ರಗಳನ್ನು ರಚಿಸಿ ಮನ್ಮಥವಿಜಯದ ಗುರುತಿಗಾಗಿ ಹಣೆಯಲ್ಲಿ ಸುಗಂಧವಾದ ಚಂದನದಿಂದ ಮೂರು ಚಂದ್ರರೇಖೆಗಳನ್ನೂ, ಸುತ್ತಲೂ ಚಿತ್ರವಿಚಿತ್ರವಾದ ಕುಂಕುಮದ

ಜ್ವಲತ್ಪ್ರದೀಪಾಕಾರಂ ಚ ಸಿಂದೂರ ತಿಲಕಂ ದದೌ ।
ತತ್ಪಾದಪದ್ಮಯುಗಲೇ ಸ್ಥಲಪದ್ಮವಿನಿಂದಿತೇ ॥ ೧೪೦ ॥

ಚಿತ್ರಾಲಕ್ತಕರಾಗಂ ಚ ನಖರೇಷು ದದೌ ಮುದಾ ।
ಸ್ವವಕ್ಷಸಿ ಮುಹುರ್ನ್ಯಸ್ತಂ ಸರಾಗಂ ಚರಣಾಂಬುಜಂ ॥ ೧೪೧ ॥

ಹೇ ದೇವಿ ತವ ದಾಸೋಹಮಿತ್ಯುಚ್ಚಾರ್ಯ ಪುನಃ ಪುನಃ ।
ರತ್ನನಿರ್ಮಾಣಯಾನೇನ ತಾಂ ಚ ಕೃತ್ವಾ ಸ್ವವಕ್ಷಸಿ ॥ ೧೪೨ ॥

ತಪೋವನಂ ಪರಿತ್ಯಜ್ಯ ರಾಜಸ್ಥಾನಾಂತರಂ ಯಯೌ ।
ಮಲಯೇ ದೇವನಿಲಯೇ ಶೈಲೇ ಶೈಲೇ ವನೇ ವನೇ ॥ ೧೪೩ ॥

ಸ್ಥಾನೇ ಸ್ಥಾನೇಽತಿರಮ್ಯೇ ಚ ಪುಷ್ಪೋದ್ಯಾನೇಽತಿನಿರ್ಜನೇ ।
ಕಂದರೇ ಕಂದರೇ ಸಿಂಧುತೀರೇ ಚ ಸುಂದರೇ ವನೇ ॥ ೧೪೪ ॥

ಬೊಟ್ಟುಗಳನ್ನೂ ರಚಿಸಿ. ಮಧ್ಯದಲ್ಲಿ ಉರಿಯುವ ದೀಪದಂತೆ ಪ್ರಕಾಶಿಸುವ ಚಂದ್ರದ ತಿಲಕವನ್ನಿಟ್ಟು, ನೆಲದಾವರೆಯನ್ನು ಅಣಕಿಸುವ ಆಕೆಯ ಪಾದಪದ್ಮಗಳ ಉಗುರಿನಲ್ಲಿ ಕೆಂಪಾದ ಅರಗಿನ ರಸವನ್ನು ಲೇಪಿಸಿ, ಆ ಕೆಂಪಾದ ಅಡಿದಾವರೆಗಳನ್ನು ತನ್ನ ವಕ್ಷಸ್ಥಳದಲ್ಲಿಟ್ಟುಕೊಂಡು, ಎಲೌ ದೇವಿಯೇ, ನಾನು ನಿನ್ನ ಸೇವಕನು ಎಂದು ಮತ್ತೆ ಮತ್ತೆ ಹೇಳುತ್ತಾ ಆಕೆಯನ್ನು ವಕ್ಷಸ್ಥಲದಲ್ಲಿ ಧರಿಸಿರುವಂತೆಯೇ ರತ್ನನಿರ್ಮಿತವಾದ ರಥದಲ್ಲಿ ಕುಳಿತು ಆ ತಪೋವನವನ್ನು ಬಿಟ್ಟು ರಾಜಾಸ್ಥಾನಕ್ಕೆ ತೆರಳಿದನು.

೧೪೩–೧೪೭. ದೇವನಿವಾಸಭೂತವಾದ ಮಲಯದ್ವೀಪದಲ್ಲಿ ತನಗಿಷ್ಟಬಂದ ಬೆಟ್ಟಕಾಡುಗಳಲ್ಲೂ, ಅತಿಮನೋಹರವಾದ ಸ್ಥಾನಗಳಲ್ಲೂ, ನಿರ್ಜನವಾದ ಪುಷ್ಪೋದ್ಯಾನದಲ್ಲೂ, ಪರ್ವತದ ಗುಹೆಗಳಲ್ಲೂ, ನದೀತೀರದ ಸುಂದರ ಲತಾಗೃಹಗಳಲ್ಲೂ, ತಣ್ಣೆಲರು ಬೀಸುವ ಪುಷ್ಪಭದ್ರಾನದಿಯ ದಡದಲ್ಲೂ, ಮನೋಹರವಾದ ಮರಳು

ಪುಷ್ಪಭದ್ರಾನದೀತೀರೇ ನೀರವಾತಮನೋಹರೇ ।
ಪುಲಿನೇ ಪುಲಿನೇ ದಿವ್ಯೇ ನದ್ಯಾಂ ನದ್ಯಾಂ ನದೇ ನದೇ ॥ ೧೪೫ ॥

ಮಧೌ ಮಧುಕರಾಣಾಂ ಚ ಮಧುರಧ್ವನಿನಾದಿತೇ ।
ವಿನಿಸ್ಯಂದೇ ಸುಪವನೇ ನಂದನೇ ಗಂಧಮಾದನೇ ॥ ೧೪೬ ॥

ದೇವೋದ್ಯಾನೇ ದೇವವನೇ ಚಿತ್ರೇ ಚಂದನಕಾನನೇ ।
ಚಂಪಕಾನಾಂ ಕೇತಕೀನಾಂ ಮಾಧವೀನಾಂ ಚ ಮಾಧವೇ ॥ ೧೪೭ ॥

ಕುಂದಾನಾಂ ಮಾಲತೀನಾಂ ಚ ಕುಮುದಾಂಭೋಜಕಾನನೇ ।
ಕಲ್ಪವೃಕ್ಷೇ ಕಲ್ಪವೃಕ್ಷೇ ಪಾರಿಜಾತ ವನೇ ವನೇ ॥ ೧೪೮ ॥

ನಿರ್ಜನೇ ಕಾಂಚನೀಸ್ಥಾನೇ ಧನ್ಯೇ ಕಾಂಚನಪರ್ವತೇ ।
ಕಾಂಚೀವನೇ ಕಿಂಚ ನಕೇ ಕಂಚುಕೇ ಕಾಂಚನಾಕರೇ ॥ ೧೪೯ ॥

ಪುಷ್ಪಚಂದನತಲ್ಪೇ ಚ ಪುಂಸ್ಕೋಕಿಲರುತೇ ಶ್ರುತೇ ।
ಪುಷ್ಪಚಂದನಸಂಯುಕ್ತಃ ಪುಷ್ಪಚಂದನವಾಯುನಾ ॥ ೧೫೦ ॥

ರಾಶಿಗಳಲ್ಲೂ, ನವನದಿಗಳ ಸುಂದರ ಸ್ಥಳಗಳಲ್ಲೂ, ದುಂಬಿಗಳ ಇಂಚರದಿಂದ ಮನೋಹರವಾದ ವಸಂತಋತುವಿನಲ್ಲಿ ಗಿರಿ ನದೀಪ್ರವಾಹವೂ, ಮಂದಮಾರುತವೂ ಇರುವ ನಂದನವನದಲ್ಲೂ, ಗಂಧಮಾದನಪರ್ವತದಲ್ಲೂ ಕಾಮುಕನಾದ ಆ ಶಂಖ ಚೂಡನು ತುಳಸೀದೇವಿಯೊಡನೆ ವಿಹರಿಸಿದನು.

೧೪೭-೧೫೦. ದೇವತೆಗಳ ಉದ್ಯಾನದಲ್ಲೂ, ಚಿತ್ರವಾದ ಚಂದನವನದಲ್ಲೂ, ಸಂಪಿಗೆ, ತಾಳೆ, ಜಾಜಿ, ಮೊಲ್ಲೆ (ಮಾಧವೀ), ಶ್ವೇತರಕ್ತತಾವರೆ ಮುಂತಾದ ಪುಷ್ಪಗಳಿರುವ ಕಾನನದಲ್ಲೂ, ಕಲ್ಪವೃಕ್ಷದ ಕೆಳಭಾಗದಲ್ಲೂ, ಪಾರಿಜಾತಪುಷ್ಪದ ವನದಲ್ಲೂ, ಕಾಂಚನಪರ್ವತದ (ಮೇರು) ನಿರ್ಜನ ಕಾಂಚನಪ್ರದೇಶದಲ್ಲೂ, ಸುವರ್ಣಕ್ಕೆ ಆಕರವಾದ ಕಾಂಚೀವನದಲ್ಲೂ, ಗಂಡುಕೋಗಿಲೆಯ ಧ್ವನಿಯಿಂದ ಮನೋಹರವಾಗಿರುವ ಪುಷ್ಪಚಂದನಶಯನದಲ್ಲೂ, ಪುಷ್ಪಚಂದನಗಳನ್ನು ಲೇಪಿಸಿಕೊಂಡು ಪುಷ್ಪಚಂದನ

ಕಾಮುಕ್ಯಾ ಕಾಮುಕಃ ಕಾಮಾತ್ಸ ರೇಮೆ ರಾಮಯಾ ಸಹ ।
ನ ತೃಪ್ತೋ ದಾನವೇಂದ್ರಶ್ಚ ತೃಪ್ತಿಂ ನೈವ ಜಗಾಮ ಸಾ ॥ ೧೫೧ ॥

ಹವಿಷಾ ಕೃಷ್ಣವರ್ತ್ಮೇವ ವವೃಧೇ ಮದನಸ್ತಯೋಃ ।
ತಯಾ ಸಹ ಸಮಾಗತ್ಯ ಸ್ವಾಶ್ರಮಂ ದಾನವಸ್ತತಃ ॥ ೧೫೨ ॥

ರಮ್ಯಂ ಕ್ರೀಡಾಲಯಂ ಕೃತ್ವಾ ವಿಜಹಾರ ಪುನಸ್ತತಃ ।
ಏವಂ ಸಂಬುಭುಜೇ ರಾಜ್ಯಂ ಶಂಖಚೂಡಃ ಪ್ರತಾಪವಾನ್ ॥ ೧೫೩ ॥

ಏಕಮನ್ವಂತರಂ ಪೂರ್ಣಂ ರಾಜರಾಜೇಶ್ವರೋ ಬಲೀ ।
ದೇವಾನಾಮಸುರಾಣಾಂ ಚ ದಾನವಾನಾಂ ಚ ಸಂತತಂ ॥ ೧೫೪ ॥

ಗಂಧರ್ವಾಣಾಂ ಕಿನ್ನರಾಣಾಂ ರಾಕ್ಷಸಾನಾಂ ಚ ಶಾಸ್ತಿದಃ ।
ಹೃತಾಧಿಕಾರಾ ದೇವಾಶ್ಚ ಚರಂತಿ ಭಿಕ್ಷುಕಾ ಯಥಾ ॥ ೧೫೫ ॥

ವಾಯುವನ್ನು ಸೇವಿಸುತ್ತಾ, ಕಾಮುಕನಾದ ಆ ಶಂಖಚೂಡನು ಆ ಕಾಮುಕಿಯೊಡನೆ ಮನಬಂದಂತೆ ಕ್ರೀಡಿಸಿಯೂ ತೃಪ್ತನಾಗಲಿಲ್ಲ.

೧೫೨-೧೫೩. ಹವಿಸ್ಸಿನಿಂದ ಅಗ್ನಿಯು ಅಭಿವೃದ್ಧಿಗೊಳ್ಳುವಂತೆ. ರತಿಸುಖದಿಂದ ಅವರಿಬ್ಬರ ರತ್ಯಭಿಲಾಷೆಯು ಹೆಚ್ಚಿತೇ ಹೊರತು ಕಮ್ಮಿಯಾಗಲಿಲ್ಲ. ಅನಂತರ ಆ ದಾನವೇಂದ್ರನು ಆಕೆಯೊಡನೆ ತನ್ನ ಆಶ್ರಮಕ್ಕೆ ಬಂದು ಮನೋಹರವಾದ ಕ್ರೀಡಾಮಂದಿರವನ್ನು ಕಲ್ಪಿಸಿ ಅವಳೊಡನೆ ಕ್ರೀಡಿಸಲಾರಂಭಿಸಿದನು. ಇಂತು ಪ್ರತಾಪಶಾಲಿಯಾದ ಶಂಖಚೂಡನು ರಾಜ್ಯಸುಖವನ್ನು ಅನುಭವಿಸುತ್ತಿದ್ದನು.

೧೫೪-೧೫೫. ಸಕಲ ರಾಜರಿಗೂ ಶ್ರೇಷ್ಠನೂ, ಬಲಿಷ್ಠನೂ ಆದ ಶಂಖಚೂಡನು ದೇವದಾನವರಿಗೂ, ಯಕ್ಷರಕ್ಷಕಿನ್ನರರಿಗೂ, ಗಂಧರ್ವರಿಗೂ, ಶಿಕ್ಷಕನೆನಿಸಿ ಒಂದು ಮನ್ವಂತರಕಾಲ ರಾಜ್ಯವಾಳಿಕೊಂಡಿದ್ದನು. ಆಗ ದೇವತೆಗಳಿಗೂ ಕೂಡ ಅಧಿಕಾರವಾವುದೂ ಇಲ್ಲದೆ ಭಿಕ್ಷುಕರಂತೆ ಅಲೆಯಬೇಕಾಯಿತು.

ಪೂಜಾಹೋಮಾದಿಕಂ ತೇಷಾಂ ಜಹಾರ ವಿಷಯಂ ಬಲಾತ್ ।
ಆಶ್ರಯಂ ಚಾಧಿಕಾರಂ ಚ ಶಸ್ತ್ರಾಸ್ತ್ರಭೂಷಣಾದಿಕಂ ॥ ೧೫೬ ॥

ನಿರುದ್ಯಮಾಃ ಸುರಾಃ ಸರ್ವೇ ಚಿತ್ರಪುತ್ತಲಿಕಾ ಯಥಾ ।
ತೇ ಚ ಸರ್ವೇ ವಿಷಣ್ಣಾಶ್ಚ ಪ್ರಜಗ್ಮುರ್ಬ್ರಹ್ಮಣಃ ಸಭಾಂ ॥ ೧೫೭ ॥

ವೃತ್ತಾಂತಂ ಕಥಯಾಮಾಸೂ ರುರುದುಶ್ಚ ಭೃಶಂ ಮುಹುಃ ।
ತದಾ ಬ್ರಹ್ಮಾ ಸುರೈಃ ಸಾರ್ಧಂ ಜಗಾಮ ಶಂಕರಾಲಯಂ ॥ ೧೫೮ ॥

ಸರ್ವಂ ಸಂಕಥಯಾಮಾಸ ವಿಧಾತಾ ಚಂದ್ರಶೇಖರಂ ।
ಬ್ರಹ್ಮಾ ಶಿವಶ್ಚ ತೈಃ ಸಾರ್ಧಂ ವೈಕುಂಠಂ ಚ ಜಗಾಮ ಹ ॥ ೧೫೯ ॥

ಸುದುರ್ಲಭಂ ಪರಂಧಾಮ ಜರಾಮೃತ್ಯುಹರಂ ಪರಂ ।
ಸಂಪ್ರಾಪ ಚ ವರಂ ದ್ವಾರಮಾಶ್ರಮಾಣಾಂ ಹರೇರಹೋ ॥ ೧೬೦ ॥

---

೧೫೬. ದೇವತೆಗಳಿಗೆ ಸಲ್ಲತಕ್ಕ ಪೂಜಾಹೋಮಾದಿಗಳನ್ನೂ, ಅವರ ಆಶ್ರಯ ಅಧಿಕಾರ ಮುಂತಾದ ವಿಷಯಗಳನ್ನೂ, ಆಯುಧಗಳನ್ನೂ, ಅಲಂಕಾರಗಳನ್ನೂ ಶಂಖಚೂಡನು ಕಿತ್ತುಕೊಂಡನು.

೧೫೭. ದೇವತೆಗಳು ಏನೂ ಕೆಲಸವಿಲ್ಲದೆ ಚಿತ್ರಾರ್ಪಿತವಾದ ಬೊಂಬೆಯಂತಿದ್ದರು. ಆಗ ಅವರೆಲ್ಲರೂ ದುಃಖಿತರಾಗಿ ಬ್ರಹ್ಮನ ಸಭೆಗೆ ಹೋದರು.

೧೫೮. ತಾವು ಬಂದ ವೃತ್ತಾಂತವನ್ನು ಬ್ರಹ್ಮದೇವನಿಗೆ ತಿಳಿಸಿ ಬಹಳವಾಗಿ ಗೋಳಾಡಲಾರಂಭಿಸಿದರು. ಆಗ ಬ್ರಹ್ಮನು ಆ ದೇವತೆಗಳನ್ನು ಕರೆದುಕೊಂಡು ಕೈಲಾಸಪರ್ವತದಲ್ಲಿರುವ ಈಶ್ವರನ ಸಮೀಪಕ್ಕೆ ಹೋದನು.

೧೫೯. ಅಲ್ಲಿ ಚಂದ್ರಶೇಖರನನ್ನು ಕುರಿತು, ತಾವು ಬಂದ ಸಮಾಚಾರವನ್ನು ತಿಳಿಸಲು ಆ ಶಿವನು ಇವರೆಲ್ಲರನ್ನೂ ಕರೆದುಕೊಂಡು ವೈಕುಂಠಕ್ಕೆ ತೆರಳಿದನು.

೧೬೦. ಮುಪ್ಪುಮರಣಗಳನ್ನು ನಾಶಗೊಳಿಸಿ ಮೋಕ್ಷವನ್ನುಂಟುಮಾಡುವ ಪರಮಶ್ರೇಷ್ಠವೂ, ದುರ್ಲಭವೂ ಆದ ವೈಕುಂಠದ ಬಾಗಿಲಿಗೆ ಬಂದರು.

ದದರ್ಶ ದ್ವಾರಪಾಲಾಂಶ್ಚ ರತ್ನಸಿಂಹಾಸನಸ್ಥಿತಾನ್ ।
ಶೋಭಿತಾನ್ ಪೀತವಸ್ತ್ರೈಶ್ಚ ರತ್ನಭೂಷಣಭೂಷಿತಾನ್ ॥ ೧೬೧ ॥

ವನಮಾಲಾನ್ವಿತಾನ್ಸರ್ವಾನ್ ಶ್ಯಾಮಸುಂದರವಿಗ್ರಹಾನ್ ।
ಶಂಖಚಕ್ರಗದಾಪದ್ಮಧರಾಂಶ್ಚೈವ ಚತುರ್ಭುಜಾನ್ ॥ ೧೬೨ ॥

ಸಸ್ಮಿತಾನ್ ಪದ್ಮವಕ್ತ್ರಾಂಶ್ಚ ಪದ್ಮನೇತ್ರಾನ್ಮನೋಹರಾನ್ ।
ಬ್ರಹ್ಮಾ ತಾನ್ಕಥಯಾಮಾಸ ವೃತ್ತಾಂತಂ ಗಮನಾರ್ಥಕಂ ॥ ೧೬೩ ॥

ತೇನುಜ್ಞಾಂ ಚ ದದುಸ್ತಸ್ಮೈ ಪ್ರವಿವೇಶ ತದಾಜ್ಞಯಾ ।
ಏವಂ ಚ ಷೋಡಶದ್ವಾರಾನ್ನಿರೀಕ್ಷ್ಯ ಕಮಲೋದ್ಭವಃ ॥ ೧೬೪ ॥

ದೈವೈಃ ಸಾರ್ಧಂ ತಾನತೀತ್ಯ ಪ್ರವಿವೇಶ ಹರೇಃ ಸಭಾಂ ।
ದೇವರ್ಷಿಭಿಃ ಪರಿವೃತಾಂ ಪಾರ್ಷದೈಶ್ಚ ಚತುರ್ಭುಜೈಃ ॥ ೧೬೫ ॥

೧೬೧-೧೬೨. ಪೀತಾಂಬರವನ್ನುಟ್ಟು, ರತ್ನಾಭರಣಗಳನ್ನು ತೊಟ್ಟು, ವನಮಾಲೆಯನ್ನು ಕಂಠದಲ್ಲಿ ಧರಿಸಿ. ನಾಲ್ಕು ಕೈಗಳಲ್ಲೂ ಶಂಖಚಕ್ರಗದಾಪದ್ಮಗಳನ್ನು ಹಿಡಿದು ರತ್ನಸಿಂಹಾಸನದಲ್ಲಿ ಕುಳಿತಿರುವ ಶ್ಯಾಮಸುಂದರವಿಗ್ರಹರಾದ ವೈಕುಂಠದ ದ್ವಾರಪಾಲಕರನ್ನು ಬ್ರಹ್ಮಾದಿಗಳು ನೋಡಿದರು.

೧೬೩. ತಾವರೆಯಂತಿರುವ ಮುಖದಿಂದಲೂ, ನೇತ್ರದ್ವಯದಿಂದಲೂ, ಮುಗುಳುನಗೆಯನ್ನು ಬೀರುತ್ತಾ ಮನೋಹರವಾಗಿರುವ ಅವರನ್ನು ಕುರಿತು. ಬ್ರಹ್ಮನು ತಾವು ಬಂದಿರುವ ಸಮಾಚಾರವನ್ನು ತಿಳಿಸಿದನು.

೧೬೪-೧೬೫. ಅವರ ಅನುಜ್ಞೆಯನ್ನು ಪಡೆದು, ಬ್ರಹ್ಮನು ಒಳಕ್ಕೆ ಪ್ರವೇಶ ಮಾಡಿದನು. ಅಲ್ಲಿ ಹದಿನಾರು ಬಾಗಿಲುಗಳನ್ನು ಬ್ರಹ್ಮದೇವನು ದೇವತೆಗಳೊಡನೆ ದಾಟಿ ಹೋಗಿ, ಕೌಸ್ತುಭಾಭರಣಭೂಷಿತರೂ, ನಾರಾಯಣಸ್ವರೂಪರೂ ಆದ ದೇವರ್ಷಿಗಳಿಂದಲೂ, ಚತುರ್ಭುಜರಾದ ಪಾರ್ಷದರಿಂದಲೂ ಪರಿವೃತವಾದ ಹರಿಯ ಸಭೆಗೆ ಬಂದನು.

ನಾರಾಯಣಸ್ವರೂಪೈಶ್ಚ ಸರ್ವೈಃ ಕೌಸ್ತುಭಭೂಷಿತೈಃ ।
ಪೂರ್ಣೇಂದುಮಂಡಲಾಕಾರಾಂ ಚತುರಸ್ರಾಂ ಮನೋಹರಾಂ ॥ ೧೬೬ ॥

ಮಣೀಂದ್ರಸಾರನಿರ್ಮಾಣಾಂ ಹೀರಾಸಾರಸುಶೋಭಿತಾಂ ।
ಅಮೂಲ್ಯರತ್ನಖಚಿತಾಂ ರಚಿತಾಂ ಸ್ವೇಚ್ಛಯಾ ಹರೇಃ ॥ ೧೬೭ ॥

ಮಾಣಿಕ್ಯಮಾಲಾಜಾಲಾಢ್ಯಾಂ ಮುಕ್ತಾಪಂಕ್ತಿವಿಭೂಷಿತಾಂ ।
ಮಂಡಿತಾಂ ಮಂಡಲಾಕಾರೈ ರತ್ನದರ್ಪಣಕೋಟಿಭಿಃ ॥ ೧೬೮ ॥

ವಿಚಿತ್ರೈಶ್ಚಿತ್ರರೇಖಾಭಿರ್ನಾನಾಚಿತ್ರವಿಚಿತ್ರಿತಾಂ ।
ಪದ್ಮರಾಗೇಂದ್ರರಚಿತೈ ರಚಿತಾಂ ಪದ್ಮಕೃತ್ರಿಮೈಃ ॥ ೧೬೯ ॥

ಸೋಪಾನಶತಕೈರ್ಯುಕ್ತಾಂ ಸ್ಯಮಂತಕವಿನಿರ್ಮಿತೈಃ ।
ಪಟ್ಟಸೂತ್ರಗ್ರಂಥಿಯುತೈಶ್ಚಾರುಚಂದನಪಲ್ಲವೈಃ ॥ ೧೭೦ ॥

ಇಂದ ನೀಲಮಣಿಸ್ತಂಭೈರ್ವೇಷ್ಟಿತಾಂ ಸುಮನೋರಮಾಂ ।
ಸದ್ರತ್ನಪೂರ್ಣಕುಂಭಾನಾಂ ಸಮೂಹೈಶ್ಚ ಸಮನ್ವಿತಾಂ ॥ ೧೭೧ ॥

೧೬೬-೧೭೦. ಪೂರ್ಣಚಂದ್ರಮಂಡಲದಂತೆ ಮನೋಹರವೂ, ಚತುರಸ್ರಾಕಾರವೂ, ಉತ್ತಮಮಣಿಗಳಿಂದ ಖಚಿತವೂ, ವಜ್ರವೈಡೂರ್ಯಗಳಿಂದ ಅಲಂಕೃತವೂ, ಶ್ರೀಹರಿಯ ಇಚ್ಛೆಯಂತೆ ನಿರ್ಮಿತವೂ, ಮುತ್ತುಮಾಣಿಕ್ಯದ ಹಾರದಿಂದ ಸುಶೋಭಿತವೂ ಆದ ಆ ಸಭೆಯು ಮಂಡಲಾಕಾರವಾದ ರತ್ನದ ಕೋಟಿ ಕನ್ನಡಿಗಳಿಂದ ಅಲಂಕೃತವಾಗಿ ನಾನಾಚಿತ್ರಗಳಿಂದ ವಿಚಿತ್ರಿತವಾಗಿ, ಪದ್ಮರಾಗ ರತ್ನದಿಂದ ರಚಿತವಾದ ಕೃತ್ರಿಮಪದ್ಮಗಳಿಂದ ಶೋಭಿತವಾಗಿ ಸ್ಯಮಂತಕಮಣಿಯಿಂದ ನಿರ್ಮಿಸಲ್ಪಟ್ಟ ನೂರಾರು ಸೋಪಾನಗಳಿಂದಲೂ, ಗ್ರಂಥಿಸಹಿತವಾದ ಪಟ್ಟಸೂತ್ರಗಳಿಂದಲೂ, ಮನೋಹರವಾದ ಚಂದನಪಲ್ಲವ (ಚಿಗುರು) ಗಳಿಂದಲೂ, ಯುಕ್ತವಾಗಿದ್ದಿತು.

೧೭೧-೧೭೪. ಇಂದ್ರನೀಲಮಣಿಯ ಕಂಭಗಳಿಂದ ಸುತ್ತುವರಿಯಲ್ಪಟ್ಟು, ಸದ್ರತ್ನರಚಿತವಾದ ಪೂರ್ಣಕುಂಭಗಳಿಂದ ಪರಿಪೂರ್ಣವಾಗಿ, ಕಸ್ತೂರಿಕುಂಕುಮ

ಪಾರಿಜಾತಪ್ರಸೂನಾನಾಂ ಮಾಲಾಜಾಲೈರ್ವಿರಾಜಿತಾಂ ।
ಕಸ್ತೂರೀಕುಂಕುಮಾಕ್ತೈಶ್ಚ ಸುಗಂಧಿಚಂದನದ್ರವೈಃ ॥ ೧೭೨ ॥

ಸುಸಂಸ್ಕೃತಾಸ್ತು ಸರ್ವತ್ರ ವಾಸಿತಾಂ ಗಂಧವಾಯುನಾ ।
ವಿದ್ಯಾಧರೀ ಸಮೂಹಾನಾಂ ಸಂಗೀತೈಶ್ಚ ಮನೋಹರಾಂ ॥ ೧೭೩ ॥

ಸಹಸ್ರಯೋಜನಾಯಾಮಾಂ ಪರಿಪೂರ್ಣಾಂ ಚ ಕಿಂಕರೈಃ ।
ದದರ್ಶ ಶ್ರೀಹರಿಂ ಬ್ರಹ್ಮಾ ಶಂಕರೈಶ್ಚ ಸುರೈಃ ಸಹ ॥ ೧೭೪ ॥

ವಸಂತಂ ತನ್ಮಧ್ಯದೇಶೇ ಯಥೇಂದುಂ ತಾರಕಾವೃತಂ ।
ಅಮೂಲ್ಯರತ್ನನಿರ್ಮಾಣಚಿತ್ರಸಿಂಹಾಸನಸ್ಥಿತಂ ॥ ೧೭೫ ॥

ಕಿರೀಟಿನಂ ಕುಂಡಲಿನಂ ವನಮಾಲಾವಿಭೂಷಿತಂ ।
ಶಂಖಚಕ್ರಗದಾಪದ್ಮಧಾರಿಣಂ ಚ ಚತುರ್ಭುಜಂ ॥ ೧೭೬ ॥

ಕೇಸರಿಗಳಿಂದಲೂ, ಚಂದನದ್ರವದಿಂದಲೂ ಸುವಾಸಿತವಾದ, ಪಾರಿಜಾತಪುಷ್ಪಗಳ ಮಾಲಾಜಾಲಪರಿವೃತವಾಗಿ, ಎಲ್ಲೆಡೆಯಲ್ಲೂ ಸುಗಂಧಿಯಾದ ವಾಯುವಿನಿಂದ ಸುಸಂಸ್ಕೃತವಾಗಿ, ವಿದ್ಯಾಧರಸ್ತ್ರೀಯರ ಕರ್ಣಾನಂದಕರವಾದ ಸಂಗೀತದಿಂದ ಮನೋಹರವಾಗಿ, ಸಹಸ್ರಯೋಜನ ದೀರ್ಘವಾಗಿ, ಸೇವಕರಿಂದ ಪರಿಪೂರ್ಣವಾದ ಸಭೆಯ ಮಧ್ಯದಲ್ಲಿ ಕುಳಿತಿರುವ ಶ್ರೀಹರಿಯನ್ನು ಈಶ್ವರ ಮತ್ತು ಇತರ ದೇವತೆಗಳೊಡನೆ ಬ್ರಹ್ಮನು ನೋಡಿದನು.

೧೭೫. ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ಆ ಸಭಾಸದರ ಮಧ್ಯದಲ್ಲಿ ನಾರಾಯಣನು ಅಮೂಲ್ಯ ರತ್ನನಿರ್ಮಿತವಾಗಿ ವಿಚಿತ್ರವಾಗಿರುವ ಸಿಂಹಾಸನದಲ್ಲಿ ಕುಳಿತಿದ್ದನು.

೧೭೬-೧೮೦. ಕಿರೀಟಕುಂಡಲಗಳಿಂದಲೂ, ವನಮಾಲೆಯಿಂದಲೂ, ವಿಭೂಷಿತನಾಗಿ, ಚತುರ್ಭುಜಗಳಲ್ಲಿಯೂ ಶಂಖಚಕ್ರಗದಾಪದ್ಮಗಳನ್ನು ಯಥಾಕ್ರಮವಾಗಿ

ನವೀನನೀರದಶ್ಯಾಮಂ ಸುಂದರಂ ಸುಮನೋಹರಂ ।
ಅಮೂಲ್ಯರತ್ನನಿರ್ಮಾಣಸರ್ವಾಭರಣಭೂಷಿತಂ ॥ ೧೭೭ ॥

ಚಂದನೋಕ್ಷಿತಸರ್ವಾಂಗಂ ಬಿಭ್ರಂತಂ ಕೇಲಿಪಂಕಜಂ ।
ಪುರತೋ ನೃತ್ಯಗೀತಂ ಚ ಪಶ್ಯಂತಂ ಸಸ್ಮಿತಂ ಮುದಾ ॥ ೧೭೮ ॥

ಶಾಂತಂ ಸರಸ್ವತೀಕಾಂತಂ ಲಕ್ಷ್ಮೀಧೃತಪದಾಂಬುಜಂ ।
ಭಕ್ತಪ್ರದತ್ತತಾಂಬೂಲಂ ಭುಕ್ತವಂತಂ ಸುವಾಸಿತಂ ॥ ೧೭೯ ॥

ಗಂಗಯಾ ಪರಯಾ ಭಕ್ತ್ಯಾ ಸೇವಿತಂ ಶ್ವೇತಚಾಮರೈಃ ।
ಸರ್ವೈಶ್ಚ ಸ್ತೂಯಮಾನಂ ಚ ಭಕ್ತಿನಮ್ರಾತ್ಮಕಂಧರೈಃ ॥ ೧೮೦ ॥

ಏವಂ ವಿಶಿಷ್ಟಂ ತಂ ದೃಷ್ಟ್ವಾ ಪರಿಪೂರ್ಣತಮಂ ವಿಭುಂ ।
ಬ್ರಹ್ಮಾದಯಃ ಸುರಾಃ ಸರ್ವೇ ಪ್ರಣಮ್ಯ ತುಷ್ಟುವುಸ್ತದಾ ॥ ೧೮೧ ॥

ಧರಿಸಿ, ಅಮೂಲ್ಯರತ್ನಗಳಿಂದ ನಿರ್ಮಿತವಾದ ಸಕಲಾಭರಣಗಳಿಂದ ಅಲಂಕೃತನಾಗಿ, ಸರ್ವಾವಯವಗಳಿಗೂ ಚಂದನವನ್ನು ಲೇಪಿಸಿಕೊಂಡು, ಕೈಯಲ್ಲಿ ವಿಲಾಸಾರ್ಥವಾಗಿ ತಾವರೆಯ ಹೂವೊಂದನ್ನು ಹಿಡಿದು, ಮುಂದೆ ನಡೆಯುತ್ತಿರುವ ನೃತ್ಯಗೀತಾದಿಗಳನ್ನು ಸಂತೋಷದಿಂದ ಅನುಭವಿಸುತ್ತ ಇರುವ ನವಘನಶ್ಯಾಮನೂ, ಸುಂದರನೂ, ಮನೋಹರನೂ, ಶಾಂತನೂ, ಸರಸ್ವತೀಕಾಂತನೂ, ಲಕ್ಷ್ಮೀದೇವಿಯಿಂದ ಒತ್ತಲ್ಪಡುತ್ತಿರುವ ಪಾದಪದ್ಮವುಳ್ಳವನೂ, ಭಕ್ತನು ಕೊಡುತ್ತಿರುವ ಸುವಾಸಿತವಾದ ತಾಂಬೂಲವನ್ನು ಸೇವಿಸುವವನೂ, ಪರಮಭಕ್ತಿಯುತಳಾದ ಗಂಗೆಯು ಶ್ವೇತಚಾಮರಸೇವೆಯನ್ನು ಸ್ವೀಕರಿಸುತ್ತಿರುವವನೂ ಆದ ಆ ಪರಮಾತ್ಮನನ್ನು (ನಾರಾಯಣ) ಸಕಲರೂ ಭಕ್ತಿಯಿಂದ ತಲೆತಗ್ಗಿಸಿ ಹೊಗಳುತ್ತಿರುವುದನ್ನು ಬ್ರಹ್ಮಾದಿದೇವತೆಗಳು ಕಂಡರು.

೧೮೧–೧೮೨. ಈ ಪ್ರಕಾರವಾಗಿ ದಿವ್ಯಾಕಾರಧರನಾಗಿ, ಪರಿಪೂರ್ಣತಮನಾಗಿರುವ ಶ್ರೀಮನ್ನಾರಾಯಣನನ್ನು ನೋಡಿ ಬ್ರಹ್ಮಾದಿ ದೇವತೆಗಳೆಲ್ಲರೂ, ಸಂತೋ

ಪುಲಕಾಂಕಿತಸರ್ವಾಂಗಾಃ ಸಾಶ್ರುನೇತ್ರಾಃ ಸಗದ್ಗದಾಃ ।
ಭಕ್ತ್ಯಾ ಪರಮಯಾ ಭಕ್ತಾ ಭೀತಾ ನಮ್ರಾತ್ಮಕಂಧರಾಃ　　॥ ೧೮೨ ॥

ಪುಟಾಂಜಲಿಯುತೋ ಭೂತ್ವಾ ವಿಧಾತಾ ಜಗತಾಮಪಿ ।
ವೃತ್ತಾಂತಂ ಕಥಯಾಮಾಸ ವಿನಯೇನ ಹರೇಃ ಪುರಃ　　॥ ೧೮೩ ॥

ಹರಿಸ್ತದ್ವಚನಂ ಶ್ರುತ್ವಾ ಸರ್ವಜ್ಞಃ ಸರ್ವಭಾವವಿತ್ ।
ಪ್ರಹಸ್ಯೋವಾಚ ಬ್ರಹ್ಮಾಣಂ ರಹಸ್ಯಂ ಚ ಮನೋಹರಂ　　॥ ೧೮೪ ॥

॥ ಶ್ರೀ ಭಗವಾನುವಾಚ ॥

ಶಂಖಚೂಡಸ್ಯ ವೃತ್ತಾಂತಂ ಸರ್ವಂ ಜಾನಾಮಿ ಪದ್ಮಜ ।
ಮದ್ಭಕ್ತಸ್ಯ ಚ ಗೋಪಸ್ಯ ಮಹಾತೇಜಸ್ವಿನಃ ಪುರಾ　　॥ ೧೮೫ ॥

ಷದಿಂದ ರೋಮಾಂಚಿತಶರೀರರಾಗಿ, ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಗದ್ಗದಕಂಠರಾಗಿ ಪರಮಭಕ್ತಿಯಿಂದ ಭಯಭೀತರಾಗಿ ತಲೆತಗ್ಗಿಸಿಕೊಂಡು ಸ್ತುತಿಸಲಾರಂಭಿಸಿದರು.

೧೮೩. ಜಗತ್ಸೃಷ್ಟಿಕರ್ತನಾದ ಬ್ರಹ್ಮನೂ ಕೂಡ ಅಂಜಲಿಬದ್ಧನಾಗಿ ವಿನಯದಿಂದ ಶ್ರೀಹರಿಯ ಮುಂದೆ ತಾವು ಬಂದಿರುವ ಸಮಾಚಾರವನ್ನು ವಿಜ್ಞಾಪಿಸಿಕೊಂಡನು.

೧೮೪. ಸರ್ವಜ್ಞನೂ, ಸರ್ವರ ಮನೋಭಿಪ್ರಾಯವನ್ನು ತಿಳಿಯತಕ್ಕವನೂ ಆದ ಶ್ರೀಹರಿಯು ಅವನ ಮಾತನ್ನು ಕೇಳಿ ನಗುತ್ತ ಬ್ರಹ್ಮನಿಗೆ ರಹಸ್ಯವಾಗಿ ಕೆಲವು ಮಾತುಗಳನ್ನು ಹೇಳಿದನು.

೧೮೫. ಶ್ರೀಭಗವಂತ:—ಎಲೈ ಬ್ರಹ್ಮದೇವನೇ, ನನ್ನ ಪರಮಭಕ್ತನೂ, ಮಹಾತೇಜಸ್ವಿಯೂ ಆದ ಗೋಪನು ಶಂಖಚೂಡನಾಗಿ ಅವತರಿಸಿರುವ ವೃತ್ತಾಂತವನ್ನೆಲ್ಲ ನಾನು ತಿಳಿದೇ ಇರುವೆನು.

ಸುರಾಃ ಶ್ರುಣುತ ತತ್ಸರ್ವಮಿತಿಹಾಸಂ ಪುರಾತನಂ ।
ಗೋಲೋಕಸ್ಯೈವ ಚರಿತಂ ಪಾಪಘ್ನಂ ಪುಣ್ಯಕಾರಣಂ ॥ ೧೮೬ ॥

ಸುದಾಮಾ ನಾಮ ಗೋಪಶ್ಚ ಪಾರ್ಷದಪ್ರವರೋ ಮಮ ।
ಸ ಪ್ರಾಪ ದಾನವೀಂ ಯೋನಿಂ ರಾಧಾಶಾಪಾತ್ಸುದಾರುಣಾತ್ ॥ ೧೮೭ ॥

ತತ್ರೈಕದಾಹಮಗಮಂ ಸ್ವಾಲಯಾದ್ರಾಸಮಂಡಲಂ ।
ವಿಹಾಯ ಮಾನಿನೀಂ ರಾಧಾಂ ಮಮ ಪ್ರಾಣಾಧಿಕಾಂ ಪರಾಂ ॥ ೧೮೮ ॥

ಸಾಮಾಂ ವಿರಜಯಾ ಸಾರ್ಧಂ ವಿಜ್ಞಾಯ ಕಿಂಕರೀಮುಖಾತ್ ।
ಪಶ್ಚಾತ್ಕ್ರುದ್ಧಾ ಸಾ ಜಗಾಮ ಮಾಂ ದದರ್ಶ ಚ ತತ್ರ ಚ ॥ ೧೮೯ ॥

ವಿರಜಾಂ ಚ ನದೀರೂಪಾಂ ಮಾಂ ಜ್ಞಾತ್ವಾ ಚ ತಿರೋಹಿತಂ ।
ಪುನರ್ಜಗಾಮ ಸಾ ರುಷ್ಟಾ ಸ್ವಾಲಯಂ ಸಖಿಭಿಃ ಸಹ ॥ ೧೯೦ ॥

---

೧೮೬. ದೇವತೆಗಳೇ, ಗೋಲೋಕದಲ್ಲಿ ನಡೆದ ಚರಿತ್ರೆಯಾದುದರಿಂದ ಪಾಪನಾಶಕವೂ, ಪುಣ್ಯದಾಯಕವೂ ಆದ ಈ ಪುರಾತನ ಇತಿಹಾಸವನ್ನು ನೀವೆಲ್ಲರೂ ಕೇಳಿರಿ.

೧೮೭. ನನ್ನ ಪಾರ್ಷದರಲ್ಲಿ ಶ್ರೇಷ್ಠನಾದ ಸುದಾಮನೆಂಬ ಗೋಪನು ರಾಧಾದೇವಿಯ ಅತಿ ದಾರುಣವಾದ ಶಾಪದಿಂದ ದಾನವಯೋನಿಯಲ್ಲಿ ಜನ್ಮವೆತ್ತಿದನು.

೧೮೮. ಒಮ್ಮೆ ಗೋಲೋಕದಲ್ಲಿ ನಾನು ನನ್ನ ಪ್ರಾಣಕ್ಕಿಂತಲೂ ಪ್ರಿಯತಮಳೂ, ಮಾನವತಿಯೂ ಆದ ರಾಧೆಯನ್ನು ಬಿಟ್ಟು ಒಬ್ಬನೇ ನನ್ನ ಮಂದಿರದಿಂದ ರಾಸಮಂಡಲಕ್ಕೆ ತೆರಳಿದೆನು.

೧೮೯. ಅಲ್ಲಿ ನಾನು ವಿರಜಾದೇವಿಯೊಡನೆ ವಿಹರಿಸುತ್ತಿರುವುದನ್ನು ರಾಧೆಯು ದೂತಿಯ ಮುಖದಿಂದ ತಿಳಿದು, ಬಹಳ ಕೋಪಗೊಂಡು ನನ್ನನ್ನು ನೋಡಲು ಬಂದಳು.

೧೯೦. ಕೂಡಲೇ ವಿರಜೆಯು ನದಿ ರೂಪಳಾದುದನ್ನೂ, ನಾನು ಕಣ್ಮರೆಯಾದುದನ್ನೂ ತಿಳಿದು ಕುಪಿತಳಾಗಿ ಸಖಿಯರೊಡನೆ ತನ್ನ ಮಂದಿರಕ್ಕೆ ಹಿಂತಿರುಗಿದಳು.

ಮಾಂ ದೃಷ್ಟ್ವಾ ಮಂದಿರೇ ದೇವೀ ಸುದಾಮಸಹಿತಂ ಪುರಾ ।
ಭೃಶಂ ಮಾಂ ಭರ್ತ್ಸಯಾಮಾಸ ಮೌನೀಭೂತಂ ಚ ಸುಸ್ಥಿರಂ ॥ ೧೯೧ ॥

ತಚ್ಛ್ರುತ್ವಾ ಚ ಸುಮಹಾಂಶ್ಚ ಸುದಾಮಾ ತಾಂ ಚುಕೋಪ ಹ ।
ಸ ಚ ತಾಂ ಭರ್ತ್ಸಯಾಮಾಸ ಕೋಪೇನ ಮಮ ಸನ್ನಿಧೌ ॥ ೧೯೨ ॥

ತಚ್ಛ್ರುತ್ವಾ ಸಾ ಕೋಪಯುಕ್ತಾ ರಕ್ತಪಂಕಜಲೋಚನಾ ।
ಬಹಿಷ್ಕರ್ತುಂ ಚಕಾರಾಜ್ಞಾಂ ಸಂತ್ರಸ್ತಾ ಮಮ ಸಂಸದಿ ॥ ೧೯೩ ॥

ಸಖೀಲಕ್ಷಂ ಸಮುತ್ತಸ್ಥೌ ದುರ್ವಾರಂ ತೇಜಸೋಜ್ವಲಂ ।
ಬಹಿಶ್ಚಕಾರ ತಂ ತೂರ್ಣಂ ಜಲ್ಪಂತಂ ಚ ಪುನಃ ಪುನಃ ॥ ೧೯೪ ॥

ಸಾ ಚ ತದ್ವಚನಂ ಶ್ರುತ್ವಾ ಸಮಾರುಷ್ಟಾ ಶಶಾಪ ತಂ ।
ಯಾಹಿ ರೇ ದಾನವೀಂ ಯೋನಿಮಿತ್ಯೇವಂ ದಾರುಣಂ ವಚಃ ॥ ೧೯೫ ॥

---

೧೯೧. ಅನಂತರ ಸುದಾಮನೊಡನೆ ಮೌನದಿಂದ ಕುಳಿತಿದ್ದಾಗ ರಾಧೆಯು ನನ್ನನ್ನು ನೋಡಿ ದಿಟ್ಟತನದಿಂದ ಬೈದು ನನ್ನನ್ನು ಬೆದರಿಸಿದಳು.

೧೯೨. ಅದನ್ನು ಕೇಳಿ ಮಹಾತ್ಮನಾದ ಸುದಾಮನು ಸಹಿಸಲಾಗದೆ ರಾಧೆಯ ಮೇಲೆ ಕೋಪಗೊಂಡು ನನ್ನ ಇದಿರಿನಲ್ಲಿಯೇ ಅವಳನ್ನು ಬೈದನು.

೧೯೩. ಆ ಬೈಗಳನ್ನು ಕೇಳಿ ಕುಪಿತಳಾದ ರಾಧೆಯು ತಾವರೆಯಂತಿರುವ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು, ನನ್ನ ಸಭೆಯು ಸುದಾಮನಿಂದ ಹಾಳಾಗುವು ದೆಂದು ಭೀತಳಾಗಿ, ಅವನನ್ನು ಹೊರಕ್ಕೆ ಕಳುಹಿಸುವಂತೆ ಸಖಿಯರಿಗೆ ಅಪ್ಪಣೆ ಮಾಡಿದಳು.

೧೯೪. ಅವಳ ಆಜ್ಞೆಯನ್ನೇ ನಿರೀಕ್ಷಿಸುತ್ತಿದ್ದ ಲಕ್ಷಸಖಿಯರು ಕೂಡಲೇ ಮೇಲಕ್ಕೆದ್ದು, ತನ್ನ ತೇಜೋಮಹಿಮೆಯಿಂದ ಎದುರಿಸಲಸಾಧ್ಯನಾಗಿ, ಮನ ಬಂದಂತೆ ಹರಟುತ್ತಿರುವ ಸುದಾಮನನ್ನು ಹೊರದೂಡಿದರು.

೧೯೫. ರಾಧೆಯೂ ಕೂಡ ಅವನ ಅತಿಪ್ರಸಂಗತನಕ್ಕೆ ಕುಪಿತಳಾಗಿ ದಾನವ ಯೋನಿಯಲ್ಲಿ ಜನ್ಮವೆತ್ತುವಂತೆ ಅವನಿಗೆ ಕ್ರೂರ ಶಾಪವಿತ್ತಳು.

ತಂ ಗಚ್ಛಂತಂ ಶಪಂತಂ ಚ ರುದಂತಂ ಮಾಂ ಪ್ರಣಮ್ಯ ಚ ।
ವಾರಯಾಮಾಸ ಸಾ ತುಷ್ಟಾ ರುದಂತೀ ಕೃಪಯಾ ಪುನಃ　　॥ ೧೯೬ ॥

ಹೇ ವತ್ಸ ತಿಷ್ಠ ಮಾ ಗಚ್ಛ ಕ್ವ ಯಾಸೀತಿ ಪುನಃ ಪುನಃ ।
ಸಮುಚ್ಚಾರ್ಯ ಚ ತತ್ಪಶ್ಚಾಜ್ಜಗಾಮ ಸಾ ಚ ವಿಸ್ಮಿತಾ　　॥ ೧೯೭ ॥

ಗೋಪ್ಯಶ್ಚ ರುರುದುಃ ಸರ್ವಾ ಗೋಪಾಶ್ಚೇತಿ ಸುದುಃಖಿತಾಃ ।
ತೇ ಸರ್ವೇ ರಾಧಿಕಾ ಚಾಪಿ ತತ್ಪಶ್ಚಾದ್ಬೋಧಿತಾ ಮಯಾ　　॥ ೧೯೮ ॥

ಆಯಾಸ್ಯತಿ ಕ್ಷಣಾರ್ಧೇನ ಕೃತ್ವಾ ಶಾಪಸ್ಯ ಪಾಲನಂ ।
ಸುದಾಮಸ್ತ್ವಮಿಹಾಗಚ್ಛೇತ್ಯುವಾಚ ಸಾ ನಿವಾರಿತಾ　　॥ ೧೯೯ ॥

ಗೋಲೋಕಸ್ಯ ಕ್ಷಣಾರ್ಧೇನ ಚೈಕಮನ್ವಂತರಂ ಭವೇತ್ ।
ಪೃಥಿವ್ಯಾಂ ಜಗತಾಂ ಧಾತರಿತ್ಯೇವಂ ವಚನಂ ಧ್ರುವಂ　　॥ ೨೦೦ ॥

---

೧೯೬. ಕೂಡಲೇ ಸುದಾಮನು ನನಗೆ ವಂದಿಸಿ, ರಾಧೆಯನ್ನು ಶಪಿಸಿಕೊಂಡು ಗೋಳಾಡುತ್ತ ಹೊರಕ್ಕೆ ಹೊರಡಲು, ಅವನನ್ನು ನೋಡಿದ ರಾಧೆಯು ಶಾಂತ ಮನಸ್ಕಳಾಗಿ, ಹೊರಕ್ಕೆ ಹೋಗಬೇಡವೆಂದು ಕರುಣೆಯಿಂದ ಅವನನ್ನು ತಡೆದಳು.

೧೯೭. ಆದರೂ ಅವನು ಮೌನವಾಗಿ ಹೋಗುತ್ತಿರಲು, 'ಎಲೈ ವತ್ಸ, ಸುದಾಮನೇ ಎಲ್ಲಿಗೆ ಹೋಗುವೆ? ಬೇಡ, ಬೇಡ, ನಿಲ್ಲು ನಿಲ್ಲು' ಎಂದು ಹೇಳುತ್ತ ವಿಸ್ಮಿತಳಾದ ರಾಧೆಯೂ ಅವನ ಹಿಂದೆಯೇ ಹೊರಟಳು.

೧೯೮. ಈ ಅನರ್ಥವನ್ನು ನೋಡಿ ಅಲ್ಲಿದ್ದ ಗೋಪಗೋಪಿಯರೆಲ್ಲರೂ ಬಹಳ ವಾಗಿ ವ್ಯಥೆಗೊಂಡರು. ದುಃಖಿತಳಾದ ರಾಧೆಯನ್ನು ನೋಡಿ ನಾನು ಸಮಾಧಾನ ಗೊಳಿಸಿದೆನು.

೧೯೯. 'ಸುದಾಮನು ಶಾಪವಚನವನ್ನು ಪರಿಪಾಲಿಸಿಕೊಂಡು ಕ್ಷಿಪ್ರದಲ್ಲಿಯೇ ಹಿಂತಿರುಗಿ ಬರುವನು, ನೀನು ಇಲ್ಲಿಯೇ ಇರು,' ಎಂದು ರಾಧೆಗೆ ಹೇಳಿದೆನು.

೨೦೦. ಗೋಲೋಕದ ಅರೆಕ್ಷಣವು ಭೂಲೋಕಕ್ಕೆ ಒಂದು ಮನ್ವಂತರ ವಾಗುವುದರಿಂದ ನಾನಾಡಿದ ಮಾತು ಸತ್ಯವಾದುದು.

ಸ ಏವ ಶಂಖಚೂಡಶ್ಚ ಪುನಸ್ತತ್ರೈವ ಯಾಸ್ಯತಿ ।
ಮಹಾಬಲಿಷ್ಠೋ ಯೋಗೀಶಃ ಸರ್ವಮಾಯಾವಿಶಾರದಃ ॥ ೨೦೧ ॥

ಮಮ ಶೂಲಂ ಗೃಹೀತ್ವಾ ಚ ಶೀಘ್ರಂ ಗಚ್ಛತ ಭಾರತಂ ।
ಶಿವಃ ಕರೋತು ಸಂಹಾರಂ ಮಮ ಶೂಲೇನ ರಕ್ಷಸಃ ॥ ೨೦೨ ॥

ಮಮೈವ ಕವಚಂ ಕಂಠೇ ಸರ್ವಮಂಗಲಮಂಗಲಂ ।
ಬಿಭರ್ತಿ ದಾನವಃ ಶಶ್ವತ್ಸಂಸಾರವಿಜಯೀ ತತಃ ॥ ೨೦೩ ॥

ತತ್ರ ಬ್ರಹ್ಮನ್ಸ್ಥಿತೇ ಕಂಠೇ ನ ಕೋಽಪಿ ಹಿಂಸಿತುಂ ಕ್ಷಮಃ ।
ತದ್ಯಾಂಚಾಂ ಚ ಕರಿಷ್ಯಾಮಿ ವಿಪ್ರರೂಪೋಽಹಮೇವ ಚ ॥ ೨೦೪ ॥

ಸತೀತ್ವಭಂಗಸ್ತತ್ಪತ್ನ್ಯಾ ಯತ್ರ ಕಾಲೇ ಭವಿಷ್ಯತಿ ।
ತತ್ರೈವ ಕಾಲೇ ತನ್ಮೃತ್ಯುರಿತಿ ದತ್ತೋ ವರಸ್ತ್ವಯಾ ॥ ೨೦೫ ॥

---

೨೦೧. ಆದುದರಿಂದ ' ಎಲೈ ಬ್ರಹ್ಮದೇವನೇ, ಯೋಗಿಶ್ರೇಷ್ಠನೂ, ಮಹಾಬಲಿಷ್ಠನೂ, ಸಕಲ ಮಾಯಾಶಕ್ತಿಯುಳ್ಳವನೂ, ಆದ ಶಂಖಚೂಡನು ಪುನಃ ಗೋಲೋಕಕ್ಕೇ ಹಿಂತಿರುಗುವನು.

೨೦೨. ನೀವೆಲ್ಲರೂ ನನ್ನ ಶೂಲಾಯುಧವನ್ನು ತೆಗೆದುಕೊಂಡು ಶೀಘ್ರವಾಗಿ ಭಾರತಕ್ಕೆ ಹೋಗಿ. ಶಿವನು ನನ್ನ ಶೂಲಾಯುಧದಿಂದ ರಾಕ್ಷಸನನ್ನು ಸಂಹರಿಸಲಿ.

೨೦೩. ಆ ಶಂಖಚೂಡನು ಸರ್ವಮಂಗಳಕರವಾದ ನನ್ನ ಕವಚವನ್ನು ಸರ್ವದಾ ಕಂಠದಲ್ಲಿ ಧರಿಸಿರುವುದರಿಂದ ಸಂಸಾರದಲ್ಲಿ ಯಾವಾಗಲೂ ಜಯಶೀಲನಾಗಿಯೇ ಇರುವನು.

೨೦೪. ಆ ಕವಚವು ಅವನ ಕಂಠದಲ್ಲಿರುವವರೆಗೆ ಅವನನ್ನು ಯಾರೂ ಹಿಂಸಿಸಲಾರರು. ಆದುದರಿಂದ ನಾನೇ ಬ್ರಾಹ್ಮಣವೇಷಧಾರಿಯಾಗಿ ಆ ಕವಚವನ್ನು ಯಾಚಿಸುವೆನು.

೨೦೫. ಅಲ್ಲದೆ ಅವನ ಪತ್ನಿಯ ಪಾತಿವ್ರತ್ಯವು ಯಾವಾಗ ಭಂಗಗೊಳ್ಳುವುದೋ, ಆಗ ಅವನಿಗೆ ಮೃತ್ಯುಕಾಲವೆಂದು ನೀನೇ ಶಾಪಕೊಟ್ಟಿರುವೆ.

ತತ್ಪತ್ನ್ಯಾ ಶ್ಚೋದರೇ ವೀರ್ಯಮರ್ಪಯಿಷ್ಯಾಮಿ ನಿಶ್ಚಿತಂ ।
ತತ್ಕ್ಷಣೇನೈವ ತನ್ಮೃತ್ಯುರ್ಭವಿಷ್ಯತಿ ನ ಸಂಶಯಃ ॥ ೨೦೬ ॥

ಪಶ್ಚಾತ್ಸಾ ದೇಹಮುತ್ಸೃಜ್ಯ ಭವಿಷ್ಯತಿ ಪ್ರಿಯಾ ಮಮ ।
ಇತ್ಯುಕ್ತ್ವಾ ಜಗತಾಂ ನಾಥೋ ದದೌ ಶೂಲಂ ಹರಾಯ ಚ ॥ ೨೦೭ ॥

ಶೂಲಂ ದತ್ವಾ ಯಯೌ ಶೀಘ್ರಂ ಹರಿರಭ್ಯಂತರಂ ಮುದಾ ।
ಭಾರತಂ ಚ ಯಯುರ್ದೇವಾ ಬ್ರಹ್ಮರುದ್ರಪುರೋಗಮಾಃ ॥ ೨೦೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ
ಷೋಡಶೋಽಧ್ಯಾಯಃ

---

೨೦೬. ಆದಕಾರಣ ಅವನ ಪತ್ನಿಯ ಗರ್ಭದಲ್ಲಿ ನನ್ನ ವೀರ್ಯವನ್ನಿಟ್ಟು ಅವಳ ಪಾತಿವ್ರತ್ಯವನ್ನು ಭಂಗಗೊಳಿಸುವೆನು. ಆ ಕೂಡಲೇ ಅವನಿಗೆ ಮರಣ ಸಂಭವಿಸುವುದರಲ್ಲಿ ಸಂಶಯವಿಲ್ಲ.

೨೦೭. ಅನಂತರ ಅವನ ಪತ್ನಿಯು ದೇಹತ್ಯಾಗಮಾಡಿ ನನ್ನ ಪತ್ನಿಯಾಗುವಳು, ಎಂದು ಹೇಳಿ ಜಗದೊಡೆಯನಾದ ಶ್ರೀಮನ್ನಾರಾಯಣನು ಶಿವನಿಗೆ ಶೂಲಾಯುಧವನ್ನು ಕೊಟ್ಟನು.

೨೦೮. ಅನಂತರ ಶ್ರೀಹರಿಯು ತನ್ನಾಲಯಕ್ಕೆ ತೆರಳಿದನು. ಇತ್ತ ಬ್ರಹ್ಮರುದ್ರಾದಿ ಸಕಲ ದೇವತೆಗಳೂ ಭಾರತಕ್ಕೆ ಜಾಗ್ರತೆಯಾಗಿ ತೆರಳಿದರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ತುಲಸಿಯ ಉಪಾಖ್ಯಾನವೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

ಹದಿನಾರನೆಯ ಅಧ್ಯಾಯದ ಸಾರಾಂಶವು

ರಾಧಾಮಂತ್ರೋಪದೇಶವನ್ನು ಪಡೆದ ತುಳಸಿಯು ಅದನ್ನು ಜಪಿಸುತ್ತ ಪುಷ್ಪ ಶಯನದಲ್ಲಿ ಪವಡಿಸಿದಳು. ಆಗ ಮನ್ಮಥನ ಪಂಚಬಾಣಗಳಿಗೆ ಗುರಿಯಾಗಿ ವಿರಹ ತಾಪವನ್ನು ಅನುಭವಿಸಿದಳು. ಕಾಂತವಿರಹಿತಳಾದ ಅವಳಿಗೆ ಸ್ವಾಭಾವಿಕವಾಗಿ ಹಿತವಾದುದೆಲ್ಲವೂ ಅಹಿತವಾದುವು. ರಾಧೆಯ ಶಾಪಕ್ಕೊಳಗಾದ ಶಂಖಚೂಡನೂ ಕೂಡ ದಾನವ ವಂಶದಲ್ಲಿ ಹುಟ್ಟಿ, ತುಳಸಿಯನ್ನು ವರಿಸಲು ಶ್ರೀಕೃಷ್ಣಮಂತ್ರವನ್ನು ಜಪಿಸಿ, ಸಿದ್ಧಿಹೊಂದಿ, ತುಳಸಿಯ ಸಮೀಪಕ್ಕೆ ಬಂದನು. ತನ್ನ ಪ್ರಾಣಪ್ರಿಯನ ಸುಂದರ ರೂಪವನ್ನು ನೋಡಿ ತುಳಸಿಯು ಮೋಹಗೊಂಡರೂ, ಲಜ್ಜೆಯಿಂದ ತಲೆಬಾಗಿದಳು. ಆಕೆಯ ನಿರುಪಮ ಸೌಂದರ್ಯವನ್ನು ನೋಡಿ ಕಾಮಾತುರನಾದ ಶಂಖಚೂಡನು ಆಕೆಯೊಡನೆ ಸರಸಸಲ್ಲಾಪಗಳಿಗೆ ತೊಡಗಿದನು. ಆಗ ತುಳಸಿಯು, ಉತ್ತಮ ಪುರುಷನು ಏಕಾಕಿನಿಯಾದ ಸ್ತ್ರೀಯನ್ನು ಮಾತನಾಡಿಸುವುದುಚಿತವಲ್ಲವೆಂದೂ, ಪರಪುರುಷನೊಡನೆ ಮಾತನಾಡುವ ಸ್ತ್ರೀಯರು ಕುಲಟೆಯರೆಂದೂ, ಸ್ತ್ರೀಯ ಬಾಹ್ಯ ಸೌಂದರ್ಯಕ್ಕೆ ಪುರುಷನು ಎಂದಿಗೂ ಮರಳಾಗಬಾರದೆಂದೂ ಹೇಳಿದಳು. ಅದಕ್ಕೆ ಶಂಖಚೂಡನು, 'ಸ್ತ್ರೀಯರಲ್ಲಿ ವಾಸ್ತವ ಮತ್ತು ಕೃತ್ಯಾಸ್ವರೂಪಿಣಿಯರೆಂದು ಎರಡು ಬಗೆಯುಂಟು. ಪ್ರಕೃತಿಯ ಪಂಚವಿಧ ದೇವಿಯರೂ, ಪ್ರಕೃತಿಯ ಅಂಶದಿಂದ ಅವತರಿಸಿದವರೂ ವಾಸ್ತವ ಸ್ವರೂಪಿಣಿಯರು. ದೇವವೇಶ್ಯೆಯರೂ, ಕುಲಟೆಯರೂ. ಕೃತ್ಯಾಸ್ವರೂಪಿಣಿಯರು. ಇದನ್ನರಿತ ಮಾನವನು ವಾಸ್ತವರೂಪಿಣಿಯರನ್ನು ವರಿಸುವನು' ಎಂದು ನುಡಿದನು. ಶಂಖಚೂಡನ ಮಾತಿಗೆ ಸೋತ ತುಳಸಿಯು, ಸಮಾಜದಲ್ಲಿ ಸ್ತ್ರೀಜಿತನಾದ ಪುರುಷನ ದುಃಸ್ಥಿತಿಯನ್ನು ವಿವರಿಸಿದಳು. ಅಷ್ಟು ಹೊತ್ತಿಗೆ ಬ್ರಹ್ಮನು ಆ ತಪೋವನಕ್ಕೆ ಬಂದು ಅವರಿಬ್ಬರ ಪೂರ್ವವೃತ್ತಾಂತವನ್ನೂ ತಿಳಿಸಿ, ಇಬ್ಬರೂ ಗಾಂಧರ್ವಕ್ರಮದಿಂದ ವಿವಾಹಿತರಾಗಿರಬೇಕೆಂದೂ, ಶಾಪಾವಸಾನ ದಲ್ಲಿ ನಿಮ್ಮ ಲೋಕಕ್ಕೆ ಹಿಂತಿರುಗಬೇಕೆಂದೂ ತಿಳಿಸಿ ಅಂತರ್ಧಾನಹೊಂದಿದನು. ಬ್ರಹ್ಮನ ಅಪ್ಪಣೆಯಂತೆ ಶಂಖಚೂಡನು ತುಳಸಿಯ ಪಾಣಿಗ್ರಹಣಮಾಡಿ ಅವಳೊಡನೆ ಸ್ವೇಚ್ಛಾವಿಹಾರಿಯಾಗಿದ್ದುದಲ್ಲದೆ, ದೇವದಾನವರಾಕ್ಷಸರನ್ನೆಲ್ಲ ನಿಗ್ರಹಿಸಿ, ರಾಜ್ಯ ಭಾರಮಾಡುತ್ತಿದ್ದನು. ಆಗ ಅಧಿಕಾರಚ್ಯುತರಾದ ದೇವತೆಗಳೆಲ್ಲರೂ ವಿಷ್ಣುವಿನಲ್ಲಿ ಮೊರೆಹೋಗಲು, 'ನಾನು ಬ್ರಾಹ್ಮಣರೂಪದಿಂದ ಬಂದು ಶಂಖಚೂಡನ ವೈಷ್ಣವ ಕವಚವನ್ನು ಬೇಡಿ ತೆಗೆದುಕೊಳ್ಳುವುದಲ್ಲದೆ ಅವನಪತ್ನಿಯ ಪಾತಿವ್ರತ್ಯವನ್ನು ಭಂಗಗೊಳಿಸುವೆನು. ಅನಂತರ ಶಿವನು ಶೂಲಾಯುಧದಿಂದ ಅವನನ್ನು ಸಂಹರಿಸಲು ಸುಲಭವಾಗುವುದು.' ಎಂದು ಹೇಳಿ ವಿಷ್ಣುವು ದೇವತೆಗಳನ್ನು ಬೀಳ್ಕೊಟ್ಟನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಸಪ್ತದಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಬ್ರಹ್ಮಾ ಶಿವಂ ಸಂನಿಯೋಜ್ಯ ಸಂಹಾರೇ ದಾನವಸ್ಯ ಚ ।
ಜಗಾಮ ಸ್ವಾಲಯಂ ತೂರ್ಣಂ ಯಥಾ ಸ್ಥಾನಂ ಮಹಾಮುನೇ ॥ ೧ ॥

ಚಂದ್ರಭಾಗಾನದೀತೀರೇ ವಟಮೂಲೇ ಮನೋಹರೇ ।
ತತ್ರ ತಸ್ಥೌ ಮಹಾದೇವೋ ದೇವನಿಸ್ತಾರಹೇತವೇ ॥ ೨ ॥

ದೂತಂ ಕೃತ್ವಾ ಪುಷ್ಪದಂತಂ ಗಂಧರ್ವೇಶ್ವರಮೀಪ್ಸಿತಂ ।
ಶೀಘ್ರಂ ಪ್ರಸ್ಥಾಪಯಾಮಾಸ ಶಂಖಚೂಡಾಂತಿಕಂ ಮುದಾ ॥ ೩ ॥

ಹದಿನೇಳನೆಯ ಅಧ್ಯಾಯವು

೧. ನಾರಾಯಣಮಹರ್ಷಿ :—ದಾನವನಾದ ಶಂಖಚೂಡನ ಸಂಹಾರಕ್ಕೆ ಶಿವನನ್ನು ನಿಯಮಿಸಿ ಬ್ರಹ್ಮದೇವನು ಜಾಗ್ರತೆಯಾಗಿ ತನ್ನ ನಿವಾಸಸ್ಥಾನಕ್ಕೆ ಹಿಂತಿರುಗಿದನು.

೨. ಇತ್ತ ಮಹಾದೇವನು ಚಂದ್ರಭಾಗಾನದೀತೀರದ ವಟವೃಕ್ಷದ ಕೆಳಗೆ ನಿಂತು ದೇವತೆಗಳ ಕಷ್ಟನಿವಾರಣೆಗಾಗಿ ಚಿಂತಿಸುತ್ತಿದ್ದನು.

೩. ಸ್ವಲ್ಪಹೊತ್ತಿನ ಮೇಲೆ ತನ್ನ ಪ್ರೀತಿಗೆ ಪಾತ್ರನೂ, ಗಂಧರ್ವಶ್ರೇಷ್ಠನೂ ಆದ ಪುಷ್ಪದಂತನನ್ನು ಶಂಖಚೂಡನ ಸಮೀಪಕ್ಕೆ ಹೋಗಿ ಯುದ್ಧಕ್ಕೆ ಸಿದ್ಧವಾಗಿರ ಬೇಕೆಂದು ಹೇಳಲು ಕಳುಹಿಸಿದನು.

ಸ ಚೇಶ್ವರಾಜ್ಞಯಾ ಶೀಘ್ರಂ ಯಯೌ ತನ್ನಗರಂ ವರಂ ।
ಮಹೇಂದ್ರನಗರೋತ್ಕೃಷ್ಟಂ ಕುಬೇರಭವನಾಧಿಕಂ ॥ ೪ ॥

ಪಂಚಯೋಜನವಿಸ್ತೀರ್ಣಂ ದೈರ್ಘ್ಯೇ ತದ್ವಿಗುಣಂ ಮುನೇ ।
ಸ್ಫಟಿಕಾಕಾರಮಣಿಭಿಸ್ಸಮಂತಾತ್ಪರಿವೇಷ್ಟಿತಂ ।
ಸಪ್ತಭಿಃ ಪರಿಖಾಭಿಶ್ಚ ದುರ್ಗಮಾಭಿಃ ಸಮನ್ವಿತಂ ॥ ೫ ॥

ಜ್ವಲದಗ್ನಿನಿಭೈರ್ನಿತ್ಯಂ ಶೋಭಿತಂ ರತ್ನಕೋಟಿಭಿಃ ।
ಯುಕ್ತಂ ಚ ವೀಥಿಶತಕೈರ್ಮಣಿವೇದಿಸಮನ್ವಿತೈಃ ॥ ೬ ॥

ಪರಿತೋ ವಣಿಜಾಂ ಸಂಘೈರ್ನಾನಾವಸ್ತುವಿರಾಜಿತೈಃ ।
ಸಿಂದೂರಾಕಾರಮಣಿಭಿರ್ನಿರ್ಮಿತೈಶ್ಚ ವಿಚಿತ್ರಿತೈಃ ॥ ೭ ॥

---

೪. ಆ ಪುಷ್ಪದಂತನು ಈಶ್ವರನ ಅಪ್ಪಣೆಯಂತೆ ಶಂಖಚೂಡನ ನಿವಾಸ ಸ್ಥಾನಕ್ಕೆ ಹೋದನು. ಅದು ಇಂದ್ರನ ಅಮರಾವತಿಗೂ, ಕುಬೇರನ ಅಲಕಾನಗರಿಗೂ ಮಿಗಿಲಾದ ಸೌಂದರ್ಯದಿಂದ ಶೋಭಿಸುತ್ತಿತ್ತು.

೫–೬. ಎಲೈ ನಾರದನೇ, ಆ ನಗರಿಯು ಐದು ಯೋಜನ ವಿಸ್ತೀರ್ಣವಾಗಿಯೂ, ಹತ್ತು ಯೋಜನ ದೀರ್ಘವಾಗಿಯೂ ಇದ್ದುದದಲ್ಲದೆ ಸುತ್ತಲೂ ಸ್ಫಟಿಕ ಮಣಿಗಳಿಂದ ಸುತ್ತುವರಿಯಲ್ಪಟ್ಟಿದ್ದಿತು. ಪಟ್ಟಣದ ಸುತ್ತಲೂ ದಾಟಲಾಗದ ಏಳು ಕಂದಕಗಳಿದ್ದವು. ಅಗ್ನಿಜ್ವಾಲೆಯಂತೆ ಪ್ರಕಾಶಮಾನವಾದ ರತ್ನಗಳಿಂದಲೂ, ಜಗಲಿಗಳಲ್ಲಿ ಮೆಟ್ಟಿರುವ ಶ್ರೇಷ್ಠಮಣಿಗಳಿಂದಲೂ ಆ ನಗರದ ರಾಜಬೀದಿಗಳು ಶೋಭಿಸುತ್ತಿದ್ದವು.

೭. ವರ್ತಕರು ಎಲ್ಲಕಡೆಯಲ್ಲೂ ಅನೇಕ ಪಣ್ಯವಸ್ತುಗಳನ್ನು ಇಟ್ಟುಕೊಂಡು ವ್ಯಾಪಾರಮಾಡುತ್ತಿದ್ದರು. ಅಂಗಡಿಬೀದಿಗಳಲ್ಲಿ ಸಿಂಧೂರವರ್ಣದ ಮಣಿಗಳಿಂದ ನಿರ್ಮಿತವಾಗಿ ಚಿತ್ರವಿಚಿತ್ರವಾಗಿದ್ದವು.

ಭೂಷಿತಂ ಭೂಷಿತೈರ್ದಿವ್ಯೈರಾಶ್ರಮೈಃ ಶತಕೋಟಿಭಿಃ ।
ಗತ್ವಾ ದದರ್ಶ ತನ್ಮಧ್ಯೇ ಶಂಖಚೂಡಾಲಯಂ ವರಂ ॥ ೮ ॥

ಅತೀವ ವಲಯಾಕಾರಂ ಯಥಾ ಪೂರ್ಣೇಂದುಮಂಡಲಂ ।
ಜ್ವಲದಗ್ನಿಶಿಖಾಭಿಶ್ಚ ಪರಿಖಾಭಿಶ್ಚತಸೃಭಿಃ ॥ ೯ ॥

ಸುದುರ್ಗಮಂ ಚ ಶತ್ರೂಣಾಮನ್ಯೇಷಾಂ ಸುಗಮಂ ಸುಖಂ ।
ಅತ್ಯುಚ್ಚೈರ್ಗಗನಸ್ಪರ್ಶಮಣಿಪ್ರಾಚೀರವೇಷ್ಟಿತಂ ॥ ೧೦ ॥

ರಾಜಿತಂ ದ್ವಾದಶದ್ವಾರೈರ್ದ್ವಾರಪಾಲಸಮನ್ವಿತೈಃ ।
ರತ್ನಕೃತ್ರಿಮಪದ್ಮಾಢ್ಯೈ ರತ್ನದರ್ಪಣಭೂಷಿತೈಃ ॥ ೧೧ ॥

ಮಣೀಂದ್ರಸಾರಖಚಿತೈಃ ಶೋಭಿತಂ ಲಕ್ಷಮಂದಿರೈಃ ।
ಶೋಭಿತಂ ರತ್ನಸೋಪಾನೈ ರತ್ನಸ್ತಂಭವಿರಾಜಿತೈಃ ॥ ೧೨ ॥

---

೮. ದಿವ್ಯವಾದ ನೂರಾರು ಮಂದಿರಗಳಿಂದ ಸುತ್ತುವರಿಯಲ್ಪಟ್ಟ ಮಧ್ಯೆ ಮನೋಹರವಾಗಿರುವ ಆ ಶಂಖಚೂಡನ ದಿವ್ಯಮಂದಿರವನ್ನು ಪುಷ್ಪದಂತನು ನೋಡಿದನು.

೯–೧೨. ಆ ನಗರವು ಚಂದ್ರನ ಪೂರ್ಣಬಿಂಬದಂತೆ ಮಂಡಲಾಕಾರವಾಗಿಯೂ ಅಗ್ನಿಜ್ವಾಲೆ ಮತ್ತು ನಾಲ್ಕು ಕಂದಕಗಳಿಂದ ಪರಿವೃತವಾಗಿಯೂ, ಶತ್ರುಗಳಿಗೆ ದುರ್ಗಮವೂ ಇತರರಿಗೆ ಸುಗಮವೂ ಅತ್ಯುನ್ನತವಾದುದರಿಂದ ಗಗನಸ್ಪರ್ಶಿಯೂ ಆದ ಮಣಿಗೋಪುರಗಳಿಂದ ಶೋಭಿತವಾಗಿಯೂ, ದ್ವಾರಪಾಲಕರಿರುವ ದ್ವಾದಶ ದ್ವಾರಗಳಿಂದ ವಿರಾಜಿತವಾಗಿಯೂ, ಕೃತ್ರಿಮವಾದ ರತ್ನಕಮಲ ಮತ್ತು ರತ್ನಗನ್ನಡಿಗಳಿಂದ ಭೂಷಿತವಾಗಿಯೂ, ಉತ್ತಮಮಣಿಗಳನ್ನು ಮೆಟ್ಟಿ ಮನೋಹರವಾಗಿರುವ ಲಕ್ಷಮಂದಿರಗಳಿಂದ ಶೋಭಿತವಾಗಿಯೂ, ರತ್ನಸೋಪಾನಗಳಿಂದಲೂ. ರತ್ನಸ್ತಂಭಗಳಿಂದಲೂ ಚಿತ್ತಾಕರ್ಷಕವಾಗಿಯೂ ಇದ್ದಿತು.

ರತ್ನಚಿತ್ರಕಪಾಟಾದ್ಯೈಃ ಸದ್ರತ್ನಕಲಶಾನ್ವಿತೈಃ ।
ರತ್ನೇಂದ್ರಚಿತ್ರರಾಜೀಭಿಃ ಸುದೀಪ್ತಾಭಿರ್ವಿರಾಜಿತೈಃ ॥ ೧೩ ॥

ಪರಿತೋ ರಕ್ಷಿತಂ ಶಶ್ವದ್ದಾನವೈಃ ಶತಕೋಟಿಭಿಃ ।
ದಿವ್ಯಾಸ್ತ್ರಧಾರಿಭಿಃ ಶೂರೈರ್ಮಹಾಬಲಪರಾಕ್ರಮೈಃ ॥ ೧೪ ॥

ಸುಂದರೈಶ್ಚ ಸುವೇಷೈಶ್ಚ ನಾನಾಲಂಕಾರಭೂಷಿತೈಃ ।
ತಾನ್ದೃಷ್ಟ್ವಾ ಪುಷ್ಪದಂತೋಽಪಿ ವರದ್ವಾರಂ ದದರ್ಶ ಸಃ ॥ ೧೫ ॥

ದ್ವಾರೇ ನಿಯುಕ್ತಂ ಪುರುಷಂ ಶೂಲಹಸ್ತಂ ಚ ಸಸ್ಮಿತಂ ।
ತಿಷ್ಠಂತಂ ಪಿಂಗಲಾಕ್ಷಂ ಚ ತಾಮ್ರವರ್ಣಂ ಭಯಂಕರಂ ॥ ೧೬ ॥

ಕಥಯಾಮಾಸ ವೃತ್ತಾಂತಂ ಜಗಾಮ ತದನುಜ್ಞಯಾ ।
ಅತಿಕ್ರಮ್ಯ ನವದ್ವಾರಂ ಜಗಾಮಾಭ್ಯಂತರಂ ಪುರಂ ॥ ೧೭ ॥

---

೧೩. ರತ್ನಖಚಿತವಾದ ಬಾಗಿಲಿನ ಉಭಯಪಾರ್ಶ್ವಗಳಲ್ಲೂ ಉತ್ತಮವಾದ ರತ್ನಕಲಶಗಳನ್ನಿಟ್ಟಿದ್ದರು. ಮಿರುಗುಟ್ಟುವ ರತ್ನಗಳಿಂದ ಮೆಟ್ಟಿಲ್ಪಟ್ಟ ಆ ಮಂದಿರವು ದೇದೀಪ್ಯಮಾನವಾಗಿದ್ದಿತು.

೧೪. ಆ ಮಂದಿರದ ಸುತ್ತಲೂ ಮಹಾಬಲಶಾಲಿಗಳೂ, ದಿವ್ಯಸ್ತ್ರಧಾರಿಗಳೂ ಆದ ನೂರುಕೋಟಿದಾನವರು ನಿರಂತರವಾದ ರಕ್ಷಣೆಯನ್ನು ಕೊಡುತ್ತಿದ್ದರು.

೧೫. ಅವರೆಲ್ಲರೂ ಸುಂದರರೂ ಸುವೇಷಭೂಷಿತರೂ ಮನೋಹರರೂ ಆಗಿದ್ದರು. ಪುಷ್ಪದಂತನು ಅವರೆಲ್ಲರನ್ನೂ ನೋಡುತ್ತ ಹೆಬ್ಬಾಗಿಲಿನ ಮುಂದಕ್ಕೆ ಹೋದನು.

೧೬–೧೭. ಅಲ್ಲಿ ಅತಿಕೆಂಪಾದ ದೇಹಕಾಂತಿಯಿಂದಲೂ, ಹೊಂಬಣ್ಣವಾದ ಕಣ್ಣುಗಳಿಂದಲೂ, ಕೈಯ್ಯಲ್ಲಿರುವ ಶೂಲಾಯುಧದಿಂದಲೂ, ಭಯಂಕರವಾಗಿರುವ ದ್ವಾರಪಾಲಕನಿಗೆ ಪುಷ್ಪದಂತನು ತಾನು ಬಂದಿರುವ ಉದ್ದಿಶ್ಯವನ್ನು ತಿಳಿಸಿದನು. ಕೂಡಲೇ ದ್ವಾರಪಾಲಕನು ಸ್ಮಿತಮುಖನಾಗಿ ಪ್ರವೇಶಕ್ಕೆ ಅನುಜ್ಞೆಯನ್ನು ಕೊಡಲು ಪುಷ್ಪದಂತನು ನವದ್ವಾರಗಳನ್ನು ದಾಟಿ ಮಂದಿರದ ಒಳಕ್ಕೆ ಪ್ರವೇಶಿಸಿದನು.

ನ ಕೈಶ್ಚಿದ್ವಾರಿತೋ ದೂತೋ ದೂತರೂಪೇಣ ತಸ್ಯ ಚ ।
ಗತ್ವಾ ಸೋಽಭ್ಯಂತರಂ ದ್ವಾರಂ ದ್ವಾರಪಾಲಮುವಾಚ ಹ ॥ ೧೮ ॥

ರಣಸ್ಯ ಸರ್ವವೃತ್ತಾಂತಂ ವಿಜ್ಞಾಪಯಿತುಮೀಶ್ವರಂ ।
ಸ ಚ ತಂ ಕಥಯಿತ್ವಾ ಚ ದೂತಂ ಗಂತುಮುವಾಚ ಹ ॥ ೧೯ ॥

ಸ ಗತ್ವಾ ಶಂಖಚೂಡಂ ತಂ ದದರ್ಶ ಸುಮನೋಹರಂ ।
ಸಭಾಮಂಡಲಮಧ್ಯಸ್ಥಂ ಸ್ವರ್ಣಸಿಂಹಾಸನಸ್ಥಿತಂ ॥ ೨೦ ॥

ಮಣೀಂದ್ರಖಚಿತಂ ಚಿತ್ರಂ ರತ್ನದಂಡಸಮನ್ವಿತಂ ।
ರತ್ನಕೃತ್ರಿಮಪುಷ್ಪೈಶ್ಚ ಪ್ರಶಸ್ತಂ ಶೋಭಿತಂ ಸದಾ ॥ ೨೧ ॥

ಭೃತ್ಯೇನ ಹಸ್ತವಿಧೃತಂ ಸ್ವರ್ಣಛತ್ರಂ ಮನೋಹರಂ ।
ಸೇವಿತಂ ಪಾರ್ಷದಗಣೈರ್ವ್ಯಜನೈಃ ಶ್ವೇತಚಾಮರೈಃ ॥ ೨೨ ॥

---

೧೮. ಪುಷ್ಪದಂತನು ದೂತನ ವೇಷದಲ್ಲಿದ್ದುದರಿಂದ ಯಾವ ದ್ವಾರರಕ್ಷಕರೂ ಅವನನ್ನು ತಡೆಯಲಿಲ್ಲ. ಕೊನೆಗೆ ಒಳಬಾಗಿಲಿನ ಸಮೀಪಕ್ಕೆ ಅವನು ಹೋಗಿ ಅಲ್ಲಿದ್ದ ದ್ವಾರಪಾಲಕನಿಗೆ ಇಂತು ನುಡಿದನು.

೧೯. 'ಎಲೈ ದ್ವಾರರಕ್ಷಕನೇ, ಈಶ್ವರನು ಯುದ್ಧಕ್ಕೆ ಸಿದ್ಧನಾಗಿದ್ದಾನೆಂದು ಶಂಖಚೂಡನಿಗೆ ತಿಳಿಸು' ಎನಲು ದ್ವಾರರಕ್ಷಕನು ಈ ಮಾತನ್ನು ಶಂಖಚೂಡನಿಗೆ ತಿಳಿಸಿ ಅವನ ಅಪ್ಪಣೆಯಂತೆ ಪುಷ್ಪದಂತನನ್ನು ಒಳಕ್ಕೆ ಕರೆದೊಯ್ದನು.

೨೦. ಅಲ್ಲಿ ಪುಷ್ಪದಂತನು ಸಭಾಮಂಟಪದ ಮಧ್ಯದಲ್ಲಿ ಸ್ವರ್ಣಸಿಂಹಾಸನವನ್ನಲಂಕರಿಸಿರುವ ಮನೋಹರನಾದ ಶಂಖಚೂಡನನ್ನು ನೋಡಿದನು.

೨೧. ರತ್ನಖಚಿತವಾದ ಆ ಸಭಾಮಂಟಪವು ರತ್ನದಂಡಗಳಿಂದಲೂ, ರತ್ನಸ್ತಂಭಗಳಿಂದಲೂ, ರತ್ನನಿರ್ಮಿತವಾದ ಕೃತ್ರಿಮಪುಷ್ಪಗಳಿಂದಲೂ, ಸುಶೋಭಿತವಾಗಿದ್ದಿತು.

೨೨. ಭೃತ್ಯನೊಬ್ಬನು ಮನೋಹರವಾದ ಸುವರ್ಣಛತ್ರವೊಂದನ್ನು ರಾಜನಿಗೆ ಹಿಡಿದಿದ್ದನು. ಪಾರ್ಷದರು ರಾಜನಿಗೆ ಶ್ವೇತಚಾಮರಗಳನ್ನೂ, ಬೀಸಣಿಗೆಗಳನ್ನೂ ಬೀಸುತ್ತಿದ್ದರು.

ಸುವೇಷಂ ಸುಂದರಂ ರಮ್ಯಂ ರತ್ನಭೂಷಣಭೂಷಿತಂ ।
ಮಾಲ್ಯಾನುಲೇಪನಂ ಸೂಕ್ಷ್ಮವಸ್ತ್ರಂ ಚ ದಧತಂ ಮುನೇ ॥ ೨೩ ॥

ದಾನವೇಂದ್ರೈಃ ಪರಿವೃತಂ ಸುವೇಷಂ ಚ ತ್ರಿಕೋಟಿಭಿಃ ।
ಶತಕೋಟಿಭಿರನ್ಯೈಶ್ಚ ಭ್ರಮದ್ಭಿಶ್ಶಸ್ತ್ರಧಾರಿಭಿಃ ॥ ೨೪ ॥

ಏವಂ ಭೂತಂ ಚ ತಂ ದೃಷ್ಟ್ವಾ ಪುಷ್ಪದಂತಃ ಸವಿಸ್ಮಿತಃ ।
ಉವಾಚ ರಣವೃತ್ತಾಂತಂ ಯದುಕ್ತಂ ಶಂಕರೇಣ ಚ ॥ ೨೫ ॥

॥ ಪುಷ್ಪದಂತ ಉವಾಚ ॥

ರಾಜೇಂದ್ರ ಶಿವದೂತೋಽಹಂ ಪುಷ್ಪದಂತೋಽಭಿಧಃ ಪ್ರಭೋ ।
ಯದುಕ್ತಂ ಶಂಕರೇಣೈವ ತದ್ಬ್ರವೀಮಿ ನಿಶಾಮಯ ॥ ೨೬ ॥

ರಾಜ್ಯಂ ದೇಹಿ ಚ ದೇವಾನಾಮಧಿಕಾರಂ ಚ ಸಾಂಪ್ರತಂ ।
ದೇವಾಶ್ಚ ಶರಣಾಪನ್ನಾ ದೇವೇಶೇ ಶ್ರೀಹರೌ ಪರೇ ॥ ೨೭ ॥

೨೩-೨೪. ಆ ಶಂಖಚೂಡನು ಅಂಗಾಂಗಗಳಿಗೆ ದಿವ್ಯ ಚಂದನವನ್ನು ಲೇಪಿಸಿಕೊಂಡು ಸುಗಂಧಿಪುಷ್ಪಮಾಲೆಯನ್ನು ಧರಿಸಿ, ನವುರಾದ ಬಟ್ಟೆಯನ್ನುಟ್ಟು ರತ್ನಾಭರಣಗಳಿಂದಲಂಕೃತನಾಗಿದ್ದನು. ಅವನ ಸುತ್ತಲೂ ಮೂರು ಕೋಟಿ ದಾನವ ಶ್ರೇಷ್ಠರು ಸುತ್ತುವರಿದಿದ್ದರು. ನೂರು ಕೋಟಿ ಸೇವಕರು ಶಸ್ತ್ರಧಾರಿಗಳಾಗಿ ಅವನ ಆಜ್ಞೆಯನ್ನು ಪರಿಪಾಲಿಸಲು ಇಲ್ಲಿಂದಲ್ಲಿಗೆ ಓಡಾಡುತ್ತಿದ್ದರು.

೨೫. ಈ ರೀತಿ ಮಹಾಮಹಿಮೆಯಿಂದ ಕೂಡಿದ ಆ ಶಂಖಚೂಡನನ್ನು ನೋಡಿ ಪುಷ್ಪದಂತನು ತಾನು ಬಂದಿರುವ ಸಮಾಚಾರವನ್ನು ಅವನಿಗೆ ತಿಳುಹಿದನು

೨೬. ಪುಷ್ಪದಂತ:—ಎಲೈ ರಾಜೇಂದ್ರನೇ, ನಾನು ಈಶ್ವರನ ದೂತನು. ನನ್ನನ್ನು ಪುಷ್ಪದಂತನೆನ್ನುವರು. ಶಂಕರನು ನನ್ನೊಡನೆ ಹೇಳಿ ಕಳುಹಿಸಿರುವ ನುಡಿಗಳನ್ನು ಈಗ ನಿನಗೆ ಹೇಳುವೆನು.

೨೭. ದೇವತೆಗಳ ರಾಜ್ಯವನ್ನೂ ಅವರವರ ಅಧಿಕಾರವನ್ನೂ ಅವರಿಗೆ ಹಿಂದಕ್ಕೆ ಕೊಡು. ರಾಜ್ಯಚ್ಯುತರಾದ ದೇವತೆಗಳೆಲ್ಲರೂ ಶ್ರೀಹರಿಯನ್ನು ಶರಣುಹೊಂದಿರುವರು.

ದತ್ವಾ ತ್ರಿಶೂಲಂ ಹರಿಣಾ ತುಭ್ಯಂ ಪ್ರಸ್ಥಾಪಿತಃ ಶಿವಃ ।
ಚಂದ್ರಭಾಗಾನದೀತೀರೆ ವಟಮೂಲೇ ತ್ರಿಲೋಚನಃ ॥ ೨೮ ॥

ವಿಷಯಂ ದೇಹಿ ತೇಷಾಂ ಚ ಯುದ್ಧಂ ವಾ ಕುರು ನಿಶ್ಚಿತಂ ।
ಗತ್ವಾ ವಕ್ಷ್ಯಾಮಿ ಕಿಂ ಶಂಭುಂ ತದ್ಭವಾನ್ವಕ್ತುಮರ್ಹತಿ ॥ ೨೯ ॥

ದೂತಸ್ಯ ವಚನಂ ಶ್ರುತ್ವಾ ಶಂಖಚೂಡಃ ಪ್ರಹಸ್ಯ ಚ ।
ಪ್ರಭಾತೇ ಹ್ಯಾಗಮಿಷ್ಯಾಮಿ ತ್ವಂ ಚ ಗಚ್ಛೇತ್ಯುವಾಚ ಹ ॥ ೩೦ ॥

ಸ ಗತ್ವೋವಾಚ ತೂರ್ಣಂ ತಂ ವಟಮೂಲಸ್ಥಮೀಶ್ವರಂ ।
ಶಂಖಚೂಡಸ್ಯ ವಚನಂ ತದೀಯಂ ಯತ್ಪರಿಚ್ಛದಂ ॥ ೩೧ ॥

---

೨೮. ಶ್ರೀಹರಿಯು ನಿನ್ನ ಸಂಹಾರಕ್ಕಾಗಿ ತ್ರಿಶೂಲಾಯುಧವನ್ನು ಶಂಕರನಿಗೆ ಕೊಟ್ಟು ಕಳುಹಿಸಿರುವನು. ಶಂಕರನು ಚಂದ್ರಭಾಗಾನದಿಯ ತೀರದ ಆಲದಮರದ ನೆರಳಿನಲ್ಲಿ ಈಗ ಬಿಡಾರಮಾಡಿರುವನು.

೨೯. ದೇವತೆಗಳ ರಾಜ್ಯವನ್ನು ಅವರಿಗೇ ಬಿಟ್ಟುಕೊಡುವೆಯಾ? ಅಥವಾ ಶಂಕರನೊಡನೆ ಯುದ್ಧಮಾಡಲು ಸಿದ್ಧನಾಗುವೆಯಾ? ಈಗ ನಾನು ಈಶ್ವರನಿಗೆ ಏನು ಹೇಳಲಿ? ತಿಳಿಸು?

೩೦. ದೂತನಾಡಿದ ಈ ಮಾತುಗಳನ್ನು ಕೇಳಿ ಶಂಖಚೂಡನು ಮಂದಹಾಸದಿಂದ ' ಈಗ ನೀನು ಹಿಂತಿರುಗು, ನಾನು ಬೆಳಗಾಗುತ್ತಲೂ ಯುದ್ಧಕ್ಕೆ ಬರುವೆನು ' ಎಂದನು.

೩೧. ಅವನ ಮಾತಿನಂತೆ ಪುಷ್ಪದಂತನು ಹಿಂತಿರುಗಿ, ವಟವೃಕ್ಷದ ಕೆಳಗೆ ಬಿಡಾರಮಾಡಿಕೊಂಡಿರುವ ಶಂಕರನಿಗೆ ಶಂಖಚೂಡನ ನಗರದ ಮನೋಹರತೆಯನ್ನೂ ಅವನು ಹೇಳಿ ಕಳುಹಿಸಿದ ಮಾತುಗಳನ್ನೂ ತಿಳಿಸಿದನು.

ಏತಸ್ಮಿನ್ನಂತರೇ ಸ್ಕಂದ ಆಜಗಾಮ ಶಿವಾಂತಿಕಂ ।
ವೀರಭದ್ರಶ್ಚ ನಂದೀ ಚ ಮಹಾಕಾಲಃ ಸುಭದ್ರಕಃ ॥ ೩೨ ॥

ವಿಶಾಲಾಕ್ಷಶ್ಚ ಬಾಣಶ್ಚ ಪಿಂಗಲಾಕ್ಷೋ ವಿಕಂಪನಃ ।
ವಿರೂಪೋ ವಿಕೃತಿಶ್ಚೈವ ಮಣಿಭದ್ರಶ್ಚ ಬಾಷ್ಕಲಃ ॥ ೩೩ ॥

ಕಪಿಲಾಕ್ಷೋ ದೀರ್ಘದಂಷ್ಟ್ರೋ ವಿಕಟಸ್ತಾಮ್ರಲೋಚನಃ ।
ಕಾಲಕಂಠೋ ಬಲೀಭದ್ರಃ ಕಾಲಜಿಹ್ವಃ ಕುಟೀಚರಃ ॥ ೩೪ ॥

ಬಲೋನ್ಮತ್ತೋ ರಣಶ್ಲಾಘೀ ದುರ್ಜಯೋ ದುರ್ಗಮಸ್ತಥ ।
ಅಷ್ಟೌ ಚ ಭೈರವಾ ರೌದ್ರಾ ರುದ್ರಾಶ್ಚೈಕಾದಶ ಸ್ಮೃತಾಃ ॥ ೩೫ ॥

ವಸವೋ ವಾಸವಾದ್ಯಾಶ್ಚ ಆದಿತ್ಯಾ ದ್ವಾದಶ ಸ್ಮೃತಾಃ ।
ಹುತಾಶನಶ್ಚ ಚಂದ್ರಶ್ಚ ವಿಶ್ವಕರ್ಮಾಶ್ವಿನೌ ಚ ತೌ ॥ ೩೬ ॥

ಕುಬೇರಶ್ಚ ಯಮಶ್ಚೈವ ಜಯಂತೋ ನಲಕೂಬರಃ ।
ವಾಯುಶ್ಚ ವರುಣಶ್ಚೈವ ಬುಧೋನ್ಯೈ ಮಂಗಲಸ್ತಥಾ ॥ ೩೭ ॥

---

೩೨. ಆ ಸಮಯಕ್ಕೆ ಸರಿಯಾಗಿ ಶಂಕರನ ಸಮೀಪಕ್ಕೆ ಷಣ್ಮುಖ, ವೀರಭದ್ರ, ನಂದಿ, ಮಹಾಕಾಲ, ಸುಭದ್ರ ಮುಂತಾದ ವೀರರೆಲ್ಲ ಬಂದರು.

೩೩–೩೬. ವಿಶಾಲಾಕ್ಷ, ಬಾಣ, ಪಿಂಗಲಾಕ್ಷ ಮತ್ತು ವಿಕಂಪನರೂ, ವಿರೂಪ, ವಿಕೃತಿ, ಮಣಿಭದ್ರ ಮತ್ತು ಬಾಷ್ಕಲರೂ, ಕಪಿಲಾಕ್ಷದೀರ್ಘದಂಷ್ಟ್ರರೂ, ವಿಕಟತಾಮ್ರಲೋಚನರೂ, ಕಾಲಕಂಠಬಲೀಭದ್ರರೂ, ಕಾಲಜಿಹ್ವಕುಟೀಚರರೂ, ಬಲೋನ್ಮತ್ತರಣಶ್ಲಾಘಿಗಳೂ, ದುರ್ಜಯದುರ್ಗಮರೂ, ರೌದ್ರಾಕಾರವುಳ್ಳ ಅಷ್ಟ ಭೈರವರೂ, ಅಷ್ಟವಸುಗಳೂ, ಚಂದ್ರ, ಅಗ್ನಿ, ವಿಶ್ವಕರ್ಮ ಮತ್ತು ಅಶ್ವಿನೀ ಕುಮಾರರೂ, ಶಿವನ ಸಮೀಪಕ್ಕೆ ಬಂದರು.

೩೭–೩೮. ಕುಬೇರ, ಯಮ, ಜಯಂತ, ನಲಕೂಬರ, ವಾಯು, ವರುಣ, ಬುಧ, ಮಂಗಲ, ಧರ್ಮ, ಶನಿ, ಈಶಾನ, ಉಗ್ರದಂಷ್ಟ್ರ ಮುಂತಾದ ದೇವತೆಗಳೂ,

ಧರ್ಮಶ್ಚ ಶನಿರೀಶಾನಃ ಕಾಮದೇವಶ್ಚ ವೀರ್ಯವಾನ್ ।
ಉಗ್ರದಂಷ್ಟ್ರಾ ಚೋಗ್ರಚಂಡಾಕೋಟ್ಟರೀಕೈಟಭೀ ತಥಾ ॥ ೩೮ ॥

ಸ್ವಯಂ ಶತಭುಜಾದೇವೀ ಭದ್ರಕಾಲೀ ಭಯಂಕರೀ ।
ರತ್ನೇಂದ್ರರಾಜಖಚಿತವಿಮಾನೋಪರಿಸಂಸ್ಥಿತಾ ॥ ೩೯ ॥

ರಕ್ತವಸ್ತ್ರಪರೀಧಾನಾ ರಕ್ತಮಾಲ್ಯಾನುಲೇಪನಾ ।
ನೃತ್ಯಂತೀ ಚ ಹಸಂತೀ ಚ ಗಾಯಂತೀ ಸುಸ್ವರಂ ಮುದಾ ॥ ೪೦ ॥

ಅಭಯಂ ದದತೀ ಭಕ್ತಮುಭಯಾ ಸಾ ಭಯಂ ರಿಪುಂ ।
ಬಿಭ್ರತೀ ವಿಕಟಾಂ ಜಿಹ್ವಾಂ ಸುಲೋಲಾಂ ಯೋಜನಾಯತಾಂ ॥ ೪೧ ॥

ಖರ್ಪರಂ ವರ್ತುಲಾಕಾರಂ ಗಂಭೀರಂ ಯೋಜನಾಯತಂ ।
ತ್ರಿಶೂಲಂ ಗಗನಸ್ಪರ್ಶಿ ಶಕ್ತಿಂ ಚ ಯೋಜನಾಯತಾಂ ॥ ೪೨ ॥

ಪರಾಕ್ರಮಿಯಾದ ಮನ್ಮಥನೂ, ಉಗ್ರಚಂಡಾ, ಕೊಟ್ಟರೀ, ಕೈಟಭೀ, ಶತಭುಜಾ. ಭದ್ರಕಾಳಿ, ಭಯಂಕರಿ ಮುಂತಾದ ದೇವಿಯರೂ ಅಲ್ಲಿಗೆ ಬಂದರು.

೩೯. ಭುಜಶತಗಳಿಂದ ಭಯಂಕರಳಾಗಿದ್ದ ಭದ್ರಕಾಳೀದೇವಿಯು ರತ್ನ ನಿರ್ಮಿತವಾದ ವಿಮಾನದಲ್ಲಿ ಕುಳಿತು ಅಲ್ಲಿಗೆ ಬಂದಳು.

೪೦. ಕೆಂಪುವಸ್ತ್ರವನ್ನು ಧರಿಸಿ, ಕೆಂಪಾದ ಹೂಮಾಲೆಯನ್ನು ಮುಡಿದು, ಚಂದನಗಂಧವನ್ನು ಅಂಗಾಂಗಗಳಿಗೆಲ್ಲ ಲೇಪಿಸಿಕೊಂಡಿದ್ದ ಆಕೆಯು ಸ್ಮಿತವದನ ಳಾಗಿ ನರ್ತನಮಾಡುತ್ತಲೂ, ಸುಸ್ವರದಿಂದ ಹಾಡುತ್ತಲೂ ಇದ್ದಳು.

೪೧-೪೩. ಒಂದು ಯೋಜನದೀರ್ಘವೂ, ಅತಿಚಂಚಲವೂ ಆದ ನಾಲಿಗೆ ಯಿಂದಲೂ, ಅತಿಭಯಂಕರವೂ, ವರ್ತುಳಾಕಾರವೂ, ಯೋಜನದೀರ್ಘವೂ ಆದ ಕೋರೆದಾಡೆಗಳಿಂದಲೂ, ಭಯಂಕರಳಾಗಿದ್ದ ಆ ಭದ್ರಕಾಳಿಯು ಆಕಾಶವನ್ನು ಮುಟ್ಟುವಂತಿರುವ ತ್ರಿಶೂಲವನ್ನೂ, ಯೋಜನದೀರ್ಘವಾದ ಶಕ್ತ್ಯಾಯುಧವನ್ನೂ

ಶಂಖಂ ಚಕ್ರಂ ಗದಾಂ ಪದ್ಮಂ ಶರಾಂಶ್ಚಾಪಂ ಭಯಂಕರಂ ।
ಮುದ್ಗರಂ ಮುಶಲಂ ವಜ್ರಂ ಖಡ್ಗಂ ಫಲಕಮುಜ್ಜ್ವಲಂ ॥ ೪೩ ॥

ವೈಷ್ಣವಾಸ್ತ್ರಂ ವಾರುಣಾಸ್ತ್ರಮಾಗ್ನೇಯಂ ನಾಗಪಾಶಕಂ ।
ನಾರಾಯಣಾಸ್ತ್ರಂ ಬ್ರಹ್ಮಾಸ್ತ್ರಂ ಗಾಂಧರ್ವಂ ಗಾರುಡಂ ತಥಾ ॥ ೪೪ ॥
ಪಾರ್ಜನ್ಯಂ ವೈ ಪಾಶುಪತಂ ಜೃಂಭಣಾಸ್ತ್ರಂ ಚ ಪಾರ್ವತಂ ।

ಮಾಹೇಶ್ವರಾಸ್ತ್ರಂ ವಾಯವ್ಯಂ ದಂಡಂ ಸಂಮೋಹನಂ ತಥಾ ।
ನಾನಾವಿಧಾನ್ಯಾಯುಧಾನಿ ದಿವ್ಯಾಸ್ತ್ರಶತಕಂ ಪರಂ ॥ ೪೫ ॥

ಆಗತ್ಯ ತತ್ರ ತಸ್ಥೌ ಸಾ ಯೋಗಿನೀನಾಂ ತ್ರಿಕೋಟಿಭಿಃ ।
ಸಾರ್ಧಂ ವೈ ಡಾಕಿನೀನಾಂ ಚ ವಿಕಟಾನಾಂ ತ್ರಿಕೋಟಿಭಿಃ ॥ ೪೬ ॥

ಧರಿಸಿ, ಶಂಖಚಕ್ರಗದಾಪದ್ಮಗಳನ್ನೂ, ಧನುರ್ಬಾಣಗಳನ್ನೂ, ಮುದ್ಗರ, ಮುಸಲ, ವಜ್ರ, ಖಡ್ಗ ಮತ್ತು ಫಲಕಗಳನ್ನೂ ಹಲವು ಕೈಗಳಲ್ಲಿ ಹಿಡಿದಿದ್ದಳು.

೪೪–೪೬. ಅಲ್ಲದೆ ವೈಷ್ಣವಾಸ್ತ್ರವಾರುಣಾಸ್ತ್ರಗಳನ್ನೂ, ಆಗ್ನೇಯಾಸ್ತ್ರ ನಾಗಾಸ್ತ್ರಗಳನ್ನೂ, ಪಾಶಾಸ್ತ್ರ, ನಾರಾಯಣಾಸ್ತ್ರ ಮತ್ತು ಬ್ರಹ್ಮಾಸ್ತ್ರಗಳನ್ನೂ, ಗಾಂಧರ್ವಾಸ್ತ್ರ, ಗಾರುಡಾಸ್ತ್ರ ಮತ್ತು ಪರ್ಜನ್ಯಾಸ್ತ್ರಗಳನ್ನೂ. ಪಾಶುಪತಾಸ್ತ್ರ, ಜೃಂಭಕಾಸ್ತ್ರ ಮತ್ತು ಪರ್ವತಾಸ್ತ್ರಗಳನ್ನೂ, ಮಹೇಶ್ವರಾಸ್ತ್ರ, ವಾಯುವ್ಯಾಸ್ತ್ರ ಮತ್ತು ಸಮ್ಮೋಹನಾಸ್ತ್ರಗಳನ್ನೂ ಧರಿಸಿದ್ದುದರಿಂದ ನೋಡಲು ಭಯಂಕರಳಾಗಿದ್ದರೂ ಭಕ್ತರಿಗೆ ಪ್ರಸನ್ನಳಾಗಿ ಅಭಯದಾನಮಾಡುತ್ತಿದ್ದ ಆ ಭದ್ರಕಾಳಿಯು ಮೂರು ಕೋಟಿ ಯೋಗಿನಿಯರೊಡನೆಯೂ, ವಿಕಟರಾದ ಮೂರುಕೋಟಿ ಡಾಕಿನಿಯರೊಡನೆಯೂ ಬಂದು ಶಿವನ ಸಮೀಪದಲ್ಲಿ ಯುದ್ಧಕ್ಕೆ ಸಿದ್ಧಳಾಗಿ ನಿಂತಳು.

ಭೂತಪ್ರೇತಪಿಶಾಚಾಶ್ಚ ಕೂಷ್ಮಾಂಡಾ ಬ್ರಹ್ಮರಾಕ್ಷಸಾಃ ।
ವೇತಾಲಾಶ್ಚೈವ ಯಕ್ಷಾಶ್ಚ ರಾಕ್ಷಸಾಶ್ಚೈವ ಕಿನ್ನರಾಃ ॥ ೪೭ ॥

ತಾಭಿಶ್ಚೈವ ಸಹ ಸ್ಕಂದಃ ನತ್ವಾ ವೈ ಚಂದ್ರಶೇಖರಂ ।
ಪಿತುಃ ಪಾರ್ಶ್ವೇ ಸಭಾಯಾಂ ಚ ಸಮುವಾಸ ಭವಾಜ್ಞಯಾ ॥ ೪೮ ॥

ಅಥ ದೂತೇ ಗತೇ ತತ್ರ ಶಂಖಚೂಡಃ ಪ್ರತಾಪವಾನ್ ।
ಉವಾಚ ತುಲಸೀಂ ವಾರ್ತಾಂ ಗತ್ವಾಭ್ಯಂತರಮೇವ ಚ ॥ ೪೯ ॥

ರಣವಾರ್ತಾಂ ಚ ಸಾ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಾ ।
ಉವಾಚ ಮಧುರಂ ಸಾಧ್ವೀ ಹೃದಯೇನ ವಿದೂಯತಾ ॥ ೫೦ ॥

॥ ತುಲಸ್ಯುವಾಚ ॥

ಹೇ ಪ್ರಾಣನಾಥ ಹೇ ಬಂಧೋ ತಿಷ್ಠ ಮೇ ವಕ್ಷಸಿ ಕ್ಷಣಂ ।
ಹೇ ಪ್ರಾಣಾಧಿಷ್ಠಾತೃದೇವ ರಕ್ಷ ಮೇ ಜೀವನಂ ಕ್ಷಣಂ ॥ ೫೧ ॥

೪೭–೪೮. ಭೂತಪ್ರೇತಪಿಶಾಚಗಳೊಡನೆಯೂ, ಕೂಷ್ಮಾಂಡಬ್ರಹ್ಮರಾಕ್ಷಸರೊಡನೆಯೂ, ವೇತಾಲ, ಯಕ್ಷ, ರಾಕ್ಷಸ ಮತ್ತು ಕಿನ್ನರರೊಡನೆಯೂ ಬಂದ ಷಣ್ಮುಖನು ಪರಶಿವನಿಗೆ ನಮಸ್ಕರಿಸಿ ಅವನ ಅಪ್ಪಣೆಯಂತೆ ಪಕ್ಕದಲ್ಲಿ ಕುಳಿತನು.

೪೯. ಇತ್ತ ಪುಷ್ಪದಂತನು ಹೊರಟು ಹೋದಮೇಲೆ ಪ್ರತಾಪಶಾಲಿಯಾದ ಶಂಖಚೂಡನು ಮಂದಿರದೊಳಕ್ಕೆ ಹೋಗಿ ತುಳಸಿಗೆ ಯುದ್ಧಸಮಾಚಾರವನ್ನು ತಿಳಿಸಿದನು.

೫೦. ಪತಿಯು ಯುದ್ಧಕ್ಕೆ ಹೊರಡುವನೆಂಬ ಸಮಾಚಾರವನ್ನು ಕೇಳಿ ತುಳಸಿಯು ಒಣಗಿದ ಕಂಠತಾಲುಗಳುಳ್ಳವಳಾಗಿ, ಮನಸ್ಸಿನಲ್ಲಿಯೇ ಕೊರಗುತ್ತ, ಪತಿಯನ್ನು ಕುರಿತು ಈರೀತಿ ಮಧುರನುಡಿಗಳನ್ನಾಡಿದಳು.

೫೧. ತುಳಸಿ:—ಎಲೈ ನನ್ನ ಪ್ರಾಣಪದಕವೇ, ನನ್ನ ಪ್ರಾಣಕ್ಕೆ ಅಧಿಷ್ಠಾತೃದೇವನೇ, ಕ್ಷಣಕಾಲ ನನ್ನ ವಕ್ಷಃಸ್ಥಲದಲ್ಲಿ ನೆಲೆಸಿದ್ದು ನನ್ನ ಜೀವವನ್ನು ಕಾಪಾಡು.

ಭುಂಕ್ಷ್ವ ಜನ್ಮ ಸುಭೋಗ್ಯಂ ತದ್ಯದ್ವೈ ಮನಸಿ ವಾಂಛಿತಂ ।
ಪಶ್ಯಾಮಿ ತ್ವಾಂ ಕ್ಷಣಂ ಕಿಂಚಿಲ್ಲೋಚನಾಭ್ಯಾಂ ಪಿಪಾಸಿತಾ || ೫೨ ||

ಆಂದೋಲಯಂತಿ ಪ್ರಾಣಾ ಮೇ ಮನೋದಗ್ಧಂ ಚ ಸಂತತಂ ।
ದುಸ್ಸ್ವಪ್ನಂ ಚ ಮಯಾ ದೃಷ್ಟಂ ಚಾದ್ಯೈವ ಚರಮೇ ನಿಶಿ || ೫೩ ||

ತುಲಸೀವಚನಂ ಶ್ರುತ್ವಾ ಭುಕ್ತ್ವಾ ಪೀತ್ವಾ ನೃಪೇಶ್ವರಃ ।
ಉವಾಚ ವಚನಂ ಪ್ರಾಜ್ಞೋ ಹಿತಂ ಸತ್ಯಂ ಯಥೋಚಿತಂ || ೫೪ ||

|| ಶಂಖಚೂಡ ಉವಾಚ ||

ಕಾಲೇನ ಯೋಜಿತಂ ಸರ್ವಂ ಕರ್ಮಭೋಗನಿಬಂಧನೇ ।
ಶುಭಂ ಹರ್ಷಂ ಸುಖಂ ದುಃಖಂ ಭಯಂ ಶೋಕಮಮಂಗಲಂ || ೫೫ ||

---

೫೨. ಈ ಜನ್ಮದಲ್ಲಿ ನಿನಗೆ ಅಭಿಲಷಿತವಾದ ಇಷ್ಟಾರ್ಥಗಳೆಲ್ಲವನ್ನೂ ಪೂರ್ಣವಾಗಿ ಅನುಭವಿಸು. ನಾನೂ ಪಿಪಾಸಿತವಾದ ನನ್ನ ನಯನಾಂಜಲಿಗಳಿಂದ ನಿನ್ನ ಮುಖದಾವರೆಯ ಮಕರಂದವನ್ನು ಪಾನಮಾಡುವೆನು.

೫೩. ನನ್ನ ಪ್ರಾಣಗಳು ಚಂಚಲವಾಗಿವೆ. ನನ್ನ ಮನಸ್ಸು ಕುದಿಯುತ್ತಿದೆ. ಇದೇತಕ್ಕೋ ನಾನರಿಯೆ. ಇಂದು ಮುಂಜಾವದಲ್ಲಿ ನಾನು ದುಃಸ್ವಪ್ನವೊಂದನ್ನು ಕಂಡೆನು.

೫೪. ತುಳಸಿಯಾಡಿದ ಮಾತುಗಳನ್ನು ಕೇಳಿ ಪ್ರಾಜ್ಞನಾದ ಶಂಖಚೂಡನು ಹಸಿವು ಬಾಯಾರಿಕೆಗಳನ್ನು ನೀಗಿಕೊಂಡು, ಅವಳನ್ನು ಕುರಿತು ಹಿತವೂ ಸತ್ಯವೂ ಆದ ಕೆಲವು ಮಧುರವಚನಗಳನ್ನಾಡಿದನು.

೫೫. ಶಂಖಚೂಡ:— ಮನುಜನಿಗೆ ಕರ್ಮಬಂಧನವೂ, ಕರ್ಮಫಲಪ್ರಾಪ್ತಿಯೂ, ಸುಖದುಃಖಗಳೂ, ಶುಭಾಶುಭಗಳೂ, ಭಯಶೋಕಗಳೂ, ಹರ್ಷಾಮರ್ಷಗಳೂ ಕಾಲನಿಯಮದಂತೆ ಸಂಭವಿಸುವುವು.

ಕಾಲೇ ಭವಂತಿ ವೃಕ್ಷಾಶ್ಚ ಶಾಖಾವಂತಶ್ಚ ಕಾಲತಃ ।
ಕ್ರಮೇಣ ಪುಷ್ಪವಂತಶ್ಚ ಫಲವಂತಶ್ಚ ಕಾಲತಃ ॥ ೫೬ ॥

ತೇಷಾಂ ಫಲಾನಿ ಪಕ್ವಾನಿ ಪ್ರಭವಂತ್ಯೇವ ಕಾಲತಃ ।
ತೇ ಸರ್ವೇ ಫಲಿನಃ ಕಾಲೇ ಕಾಲೇ ಕಾಲಂ ಪ್ರಯಾಂತಿ ಚ ॥ ೫೭ ॥

ಭವಂತಿ ಕಾಲೇ ಭೂತಾನಿ ಕಾಲೇ ಕಾಲಂ ಪ್ರಯಾಂತಿ ಚ ।
ಕಾಲೇ ಭವಂತಿ ವಿಶ್ವಾನಿ ಕಾಲೇ ನಶ್ಯಂತಿ ಸುಂದರಿ ॥ ೫೮ ॥

ಸ್ರಷ್ಟಾ ಚ ಕಾಲೇ ಸೃಜತಿ ಪಾತಾ ಪಾತಿ ಚ ಕಾಲತಃ ।
ಸಂಹರ್ತಾ ಸಂಹರೇತ್ಕಾಲೇ ಸಂಚರಂತಿ ಕ್ರಮೇಣ ತೇ ॥ ೫೯ ॥

ಬ್ರಹ್ಮವಿಷ್ಣುಶಿವಾದೀನಾಮೀಶ್ವರಃ ಪ್ರಕೃತೇಃ ಪರಃ ।
ಸ್ರಷ್ಟಾ ಪಾತಾ ಚ ಸಂಹರ್ತಾ ಸ ಕೃತ್ಸ್ನಾಂಶೇನ ಸರ್ವದಾ ॥ ೬೦ ॥

---

೫೬. ಭೂಮಿಯಲ್ಲಿ ಬಿತ್ತಿದ ಬೀಜವು ಕಾಲನಿಯಮದಂತೆ ಮೊಳೆತು, ಕೊಂಬೆಗಳು ಮೂಡಿ, ಮರವಾಗಿ ಫಲಪುಷ್ಪಭರಿತವಾಗುವುದು.

೫೭. ಅಂತೆಯೇ ಕಾಲಾನುಗುಣವಾಗಿ ಆ ಫಲಗಳು ಪಕ್ವವಾಗುವುವು. ಕಾಲದಲ್ಲಿ ಫಲಿತವಾದ ವೃಕ್ಷಗಳೆಲ್ಲವೂ ಕಾಲನಿಯಮದಂತೆ ಒಣಗಿಹೋಗುವುವು.

೫೮. ಜೀವಿಗಳು ಕಾಲಚಕ್ರಕ್ಕೆ ಸಿಲುಕಿ ಅದರ ನಿಯಮದಂತೆ ಉತ್ಪತ್ತಿ ವಿನಾಶಗಳನ್ನು ಹೊಂದುವುವು. ಎಲೌ ಸುಂದರಿಯೇ, ನಿಖಿಲವಿಶ್ವವೂ ಕಾಲಾನುಗುಣವಾಗಿ ಸೃಷ್ಟಿಸ್ಥಿತಿಲಯಗಳನ್ನು ಹೊಂದುವುದು.

೫೯. ಕಾಲನಿಯಮಕ್ಕೆ ಬದ್ಧನಾಗಿ ಬ್ರಹ್ಮನು ಜಗತ್ತನ್ನು ಸೃಜಿಸುವನು. ವಿಷ್ಣುವು ಪರಿಪಾಲಿಸುವನು. ರುದ್ರನು ಸಂಹರಿಸುವನು. ಕಾಲನಿಯಮದಂತೆ ಅವರು ಕ್ರಮವಾಗಿ ತಮ್ಮ ತಮ್ಮ ಕರ್ತವ್ಯಕರ್ಮಗಳನ್ನು ಮಾಡುವರು.

೬೦. ಬ್ರಹ್ಮ, ವಿಷ್ಣು, ಶಿವ ಮುಂತಾದ ದೇವತೆಗಳಿಗೆಲ್ಲ ವರಿಷ್ಠನೂ, ಪ್ರಕೃತಿಯ ಮಾಯೆಗೆ ಸಿಲುಕದವನೂ ಆದ ಪರಮಾತ್ಮನೊಬ್ಬನೇ ಬ್ರಹ್ಮಾದಿ ಸಕಲರ ಹೃದಯದಲ್ಲಿ ಅಂತರ್ಯಾಮಿಯಾಗಿದ್ದು, ಸೃಷ್ಟಿಸ್ಥಿತಿಲಯಾದಿ ವ್ಯಾಪಾರಗಳಿಗೆ ಆದಿ ಕಾರಣನಾಗಿರುವನು.

ಕಾಲೇ ಸ ಏವ ಪ್ರಕೃತಿಂ ನಿರ್ಮಾಯ ಸ್ವೇಚ್ಛಯಾ ಪ್ರಭುಃ ।
ನಿರ್ಮಾಯ ಪ್ರಾಕೃತಾನ್ಸರ್ವಾನ್ವಿಶ್ವಸ್ಥಾಂಶ್ಚ ಚರಾಚರಾನ್ ॥ ೬೧ ॥

ಆಬ್ರಹ್ಮಸ್ತಂಬಪರ್ಯಂತಂ ಸರ್ವಂ ಕೃತ್ರಿಮಮೇವ ಚ ।
ಪ್ರವದಂತಿ ಚ ಕಾಲೇನ ನಶ್ಯತ್ಯಪಿ ಹಿ ನಶ್ವರಂ ॥ ೬೨ ॥

ಭಜ ಸತ್ಯಂ ಪರಂಬ್ರಹ್ಮ ರಾಧೇಶಂ ತ್ರಿಗುಣಾತ್ಪರಂ ।
ಸರ್ವೇಶಂ ಸರ್ವರೂಪಂ ಚ ಸರ್ವಾತ್ಮಾನಂ ತಮೀಶ್ವರಂ ॥ ೬೩ ॥

ಜಲಂ ಜಲೇನ ಸೃಜತಿ ಜಲಂ ಪಾತಿ ಜಲೇನ ಯಃ ।
ಹರೇಜ್ಜಲಂ ಜಲೇನೈವ ತಂ ಕೃಷ್ಣಂ ಭಜಸಂತತಂ ॥ ೬೪ ॥

ಯಸ್ಯಾಜ್ಞಯಾ ವಾತಿ ವಾತಃ ಶೀಘ್ರಗಾಮೀ ಚ ಸಂತತಂ ।
ಯಸ್ಯಾಜ್ಞಯಾ ಚ ತಪನಸ್ತಪಯತ್ಯೇವ ಯಥಾಕ್ಷಣಂ ॥ ೬೫ ॥

---

೬೧. ಸ್ವೇಚ್ಛಾಮಾತ್ರಪ್ರಭುವಾದ ಆ ಪರಮಾತ್ಮನು ಕಾಲದಲ್ಲಿ ಪ್ರಕೃತಿಯನ್ನು ವ್ಯಕ್ತಗೊಳಿಸಿ, ಚರಾಚರಾತ್ಮಕವಾದ ಪ್ರಾಕೃತವಿಶ್ವವನ್ನೆಲ್ಲ ನಿರ್ಮಿಸಿ, ಕಾಲ ಬಂದಾಗ ನಾಶಗೊಳಿಸುವನು.

೬೨. ಬ್ರಹ್ಮನಿಂದ ಒಂದು ಹುಲ್ಲುಗರಿಯ ವರೆಗಿರುವ ನಿಖಿಲ ಪ್ರಪಂಚವೂ ಕೃತ್ರಿಮ ಮತ್ತು ನಶ್ವರವಾದರೂ ಕಾಲಮಹಿಮೆಯಿಂದ ಅದು ಗೋಚರವಾಗುವುದಿಲ್ಲ.

೬೩. ಆದುದರಿಂದ ಎಲೌ ತುಳಸಿಯೇ, ರಾಧಾಪತಿಯೂ, ಸುರೇಶ್ವರನೂ, ಸರ್ವಾತ್ಮನೂ, ಸತ್ಯಸ್ವರೂಪನೂ, ಅನಾದ್ಯನಂತನೂ, ತ್ರಿಗುಣಾತೀತನೂ ಆದ ಸರ್ವೇಶ್ವರನನ್ನು ಭಜಿಸು.

೬೪. ಯಾರು ನೀರಿನಿಂದಲೇ ನೀರನ್ನು ಸೃಜಿಸಿ, ನೀರಿನಿಂದಲೇ ನೀರನ್ನು ಕಾಪಾಡಿ, ನೀರಿನಿಂದಲೇ ನೀರನ್ನು ನಾಶಗೊಳಿಸುವನೋ ಅಂಥ ಶ್ರೀಕೃಷ್ಣಪರಮಾತ್ಮನನ್ನು ಭಜಿಸು.

೬೫–೬೬. ಯಾರ ಅನುಜ್ಞೆಯಂತೆ ವಾಯುವು ಸರ್ವದಾ ಸಂಚಾರಶೀಲನೂ ಶೀಘ್ರಗಾಮಿಯೂ ಆಗಿರುವನೋ, ಯಾರ ಅಪ್ಪಣೆಯಂತೆ ಹಗಲಿನಲ್ಲಿ ಎಡಬಿಡದೆ

ಯಥಾಕ್ಷಣಂ ವರ್ಷತೀಂದ್ರೋ ಮೃತ್ಯುಶ್ಚರತಿ ಜಂತುಷು ।
ಯಥಾಕ್ಷಣಂ ದಹತ್ಯಗ್ನಿಶ್ಚಂದ್ರೋ ಭ್ರಮತಿ ಭೀತವತ್ ॥ ೬೬ ॥

ಮೃತ್ಯೋರ್ಮೂಲಂ ಕಾಲಮೂಲಂ ಯಮಸ್ಯ ಚ ಯಮಂ ಪರಂ ।
ಸ್ರಷ್ಟಾರಂ ಸ್ರಷ್ಟುರಪಿ ಚ ಪಾತುಃ ಪಾಲಕಮೇವ ಚ ॥ ೬೭ ॥

ಸಂಹರ್ತಾರಂ ಚ ಸಂಹರ್ತುಸ್ತಂ ಕೃಷ್ಣಂ ಶರಣಂ ವ್ರಜ ।
ಕೋ ಬಂಧುಶ್ಚೈವ ಕೇಷಾಂ ವಾ ಸರ್ವಬಂಧುಂ ಭಜ ಪ್ರಿಯೇ ॥ ೬೮ ॥

ಅಹಂ ಕೋ ವಾ ತ್ವಂ ಚ ಕಾ ವಾ ವಿಧಿನಾ ಯೋಜಿತಃ ಪುರಾ ।
ತ್ವಯಾ ಸಾರ್ಧಂ ಕರ್ಮಣಾ ಚ ಪುನಸ್ತೇನ ವಿಯೋಜಿತಃ ॥ ೬೯ ॥

ಸೂರ್ಯನು ಪ್ರಪಂಚವನ್ನು ಬೆಳಗುವನೋ, ಇಂದ್ರನು ಕಾಲಾನುಗುಣವಾಗಿ ಮಳೆಗರೆಯುವನೋ, ಅಗ್ನಿದೇವನು ದಹನಮಾಡುವನೋ, ಚಂದ್ರನು ಭೂಪ್ರದಕ್ಷಿಣೆ ಮಾಡುವನೋ, ಮೃತ್ಯುದೇವತೆಯು ಸಕಲಜೀವಿಗಳ ಶರೀರದಲ್ಲೂ ಸಂಚರಿಸುವಳೋ ಆ ಸರ್ವಶಕ್ತನಾದ ಪರಮಾತ್ಮನನ್ನು ಭಜಿಸು.

೬೭-೬೮. ಕಾಲಕಾಲನೂ, ಮೃತ್ಯುಂಜಯನೂ, ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣರಾದ ಬ್ರಹ್ಮ ವಿಷ್ಣು ಮಹೇಶ್ವರರ ಸೃಷ್ಟಿಸ್ಥಿತಿಲಯಗಳಿಗೆ ಮೂಲಕಾರಣನೂ, ಆದ ಪರಮಾತ್ಮನನ್ನುಳಿದು ಯಾರಿಗೆ ಯಾರೂ ಬಂಧುಗಳಿಲ್ಲ. ಆದ ಕಾರಣ ಸಕಲರ ಬಂಧುವಾದ ಶ್ರೀಕೃಷ್ಣಪರಮಾತ್ಮನನ್ನು ಭಜಿಸು.

೬೯. ನೀನಾರು ? ನಾನಾರು ? ಆದರೂ ವಿಧಿನಿಯಮದಂತೆ ನಾವಿಬ್ಬರೂ ಒಂದೆಡೆ ಸೇರಿದ್ದೇವೆ. ನಮ್ಮಿಬ್ಬರ ಕರ್ಮವು ಸವೆದ ಮೇಲೆ ಇಬ್ಬರಿಗೂ ವಿಯೋಗವು ಸಿದ್ಧವಾದುದು.

ಅಜ್ಞಾನೀ ಕಾತರಃ ಶೋಕೇ ವಿಪತ್ತ್ಯಾ ಚ ನ ಪಂಡಿತಃ ।
ಸುಖಂ ದುಃಖಂ ಭ್ರಮತ್ಯೇವ ಚಕ್ರನೇಮಿಕ್ರಮೇಣ ಚ　　॥ ೨೦ ॥

ನಾರಾಯಣಂ ತಂ ಸರ್ವೇಶಂ ಕಾಂತಂ ಪ್ರಾಪ್ಸ್ಯಸಿ ನಿಶ್ಚಿತಂ ।
ತಪಃ ಕೃತಂ ಯದರ್ಥೇ ಚ ಪುರಾ ಬದರಿಕಾಶ್ರಮೇ　　॥ ೨೧ ॥

ಮಯಾ ತ್ವಂ ತಪಸಾ ಲಬ್ಧಾ ಬ್ರಹ್ಮಣಶ್ಚ ವರೇಣ ಹಿ ।
ಹರೇರರ್ಥೇ ತವ ತಪೋ ಹರಿಂ ಪ್ರಾಪ್ಸ್ಯಸಿ ಕಾಮಿನೀ　　॥ ೨೨ ॥

ವೃಂದಾವನೇ ಚ ಗೋವಿಂದಂ ಗೋಲೋಕೇ ತ್ವಂ ಲಭಿಷ್ಯಸಿ ।
ಅಹಂ ಯಾಸ್ಯಾಮಿ ತಲ್ಲೋಕಂ ತನುಂ ತ್ಯಕ್ತ್ವಾ ಚ ದಾನವೀಂ　　॥ ೨೩ ॥

---

೨೦. ಕಷ್ಟನಿಷ್ಠೂರಗಳು ಒದಗಿದಾದ ಅಜ್ಞನು ದುಃಖಿತನಾಗುವನೇ ಹೊರತು ಪಂಡಿತನು ದುಃಖಿಸುವುದಿಲ್ಲ. ಸುಖದುಃಖಗಳು ಚಕ್ರಧಾರೆಯಂತೆ ಕ್ರಮವಾಗಿ ಬಳಸಿ ಬರುವುವು.

೨೧. ಆದಕಾರಣ ಯಾರನ್ನು ಹೊಂದಲೋಸುಗ ನೀನು ಹಿಂದೆ ಬದರಿಕಾಶ್ರಮದಲ್ಲಿ ತಪಸ್ಸುಮಾಡಿದೆಯೋ, ಆ ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ಮುಂದೆ ನಿನ್ನ ಪತಿಯನ್ನಾಗಿ ಪಡೆಯುವುದರಲ್ಲಿ ಸಂಶಯವಿಲ್ಲ.

೨೨. ನಾನು ನಿನಗಾಗಿ ತಪಸ್ಸುಮಾಡಿದುದರಿಂದ ಬ್ರಹ್ಮನ ವರದಂತೆ ನಿನ್ನನ್ನು ಪಡೆದೆನು. ನೀನು ಶ್ರೀಹರಿಯನ್ನು ಹೊಂದಲು ತಪಸ್ಸುಮಾಡಿದುದರಿಂದ ಶ್ರೀಹರಿಯನ್ನೇ ಹೊಂದುವೆ.

೨೩. ಗೋಲೋಕದ ವೃಂದಾವನದಲ್ಲಿರುವ ಗೋವಿಂದನನ್ನು ನೀನು ಭಜಿಸು. ನಾನು ಈ ದಾನವದೇಹವನ್ನು ಬಿಟ್ಟು ಗೋಲೋಕಕ್ಕೆ ತೆರಳುವೆನು.

ತತ್ರ ದ್ರಕ್ಷ್ಯಸಿ ಮಾಂ ತ್ವಂ ಚ ತ್ವಾಂ ಚ ದ್ರಕ್ಷ್ಯಾಮಿ ಸಂತತಂ ।
ಆಗಮಂ ರಾಧಿಕಾಶಾಪಾದ್ಭಾರತಂ ಚ ಸುದುರ್ಲಭಂ ॥ ೭೪ ॥

ಪುನರ್ಯಾಸ್ಯಾಮಿ ತತ್ರೈವ ಕಃ ಶೋಕೋ ಮೇ ಶೃಣು ಪ್ರಿಯೇ ।
ತ್ವಂ ಹಿ ದೇಹಂ ಪರಿತ್ಯಜ್ಯ ದಿವ್ಯರೂಪಂ ವಿಧಾಯ ಚ ॥ ೭೫ ॥

ತತ್ಕಾಲಂ ಪ್ರಾಪ್ಸ್ಯಸಿ ಹರಿಂ ಮಾ ಕಾಂತೇ ಕಾತರಾ ಭವ ।
ಇತ್ಯುಕ್ತ್ವಾ ಚ ದಿನಾಂತೇ ಚ ತಯಾಸಾರ್ಧಂ ಮನೋಹರೇ ॥ ೭೬ ॥

ಸುಷ್ವಾಪ ಶೋಭನೇ ತಲ್ಪೇ ಪುಷ್ಪಚಂದನಚರ್ಚಿತೇ ।
ನಾನಾಪ್ರಕಾರವಿಭವೇ ಚಚಾರ ರತ್ನಮಂದಿರೇ ॥ ೭೭ ॥

ರತ್ನಪ್ರದೀಪಸಂಯುಕ್ತೇ ಸ್ತ್ರೀರತ್ನಂ ಪ್ರಾಪ್ಯ ಸುಂದರೀಂ ।
ನಿನಾಯ ರಜನೀಂ ರಾಜಾ ಕ್ರೀಡಾಕೌತುಕಮಂಗಲೈಃ ॥ ೭೮ ॥

---

೭೪. ಅಲ್ಲಿ ನಾವಿಬ್ಬರೂ ಸರ್ವದಾ ಅನ್ಯೋನ್ಯ ದರ್ಶನಸುಖವನ್ನು ಪಡೆಯುತ್ತಿರಬಹುದು. ನಾನು ರಾಧೆಯ ಶಾಪದಿಂದ ಸುದುರ್ಲಭವಾದ ಈ ಭರತಖಂಡಕ್ಕೆ ಬರಬೇಕಾಯಿತು.

೭೫–೭೭. ನಾನು ಪುನಃ ಗೋಲೋಕಕ್ಕೆ ಹಿಂತಿರುಗುವುದರಿಂದ ದುಃಖಪಡಬೇಕಾದುದಿಲ್ಲ. ನೀನೂ ಸಹ ಈ ಪ್ರಾಕೃತದೇಹವನ್ನು ಬಿಟ್ಟು ದಿವ್ಯರೂಪಧಾರಿಣಿಯಾಗಿ ಕಾಲನಿಯಮದಂತೆ ಶ್ರೀಹರಿಯನ್ನು ಹೊಂದುವುದರಿಂದ ವ್ಯಥೆಪಡಬೇಕಾದುದಿಲ್ಲ. ಈ ಮಾತುಗಳನ್ನು ಹೇಳಿ ಶಂಖಚೂಡನು ರಾತ್ರಿಯಾಗುತ್ತಲೂ ತುಳಸಿದೇವಿಯೊಡನೆ ಪುಷ್ಪಶಯನದಲ್ಲಿ ಪವಡಿಸಿದನು. ಅಲ್ಲದೆ ರತ್ನಮಂದಿರದ ವಿವಿಧವೈಭವವನ್ನು ಅನುಭವಿಸಿದನು.

೭೮. ರತ್ನಪ್ರದೀಪಗಳಿಂದ ದೀಪ್ತವಾದ ಶಯನಾಗಾರದಲ್ಲಿ ಸುಂದರಿಯಾದ ತುಳಸಿಯೊಡಗೂಡಿ ನಾನಾವಿಧ ರತಿಕ್ರೀಡೆಗಳಿಂದ ರಾತ್ರಿಯನ್ನು ಕಳೆದನು.

ಕೃತ್ವಾ ವಕ್ಷಸಿ ಕಾಂತಾಂ ತಾಂ ರುದಂತೀಮತಿದುಃಖಿತಾಂ ।
ಕೃಶೋದರೀಂ ನಿರಾಹಾರಾಂ ನಿಮಗ್ನಾಂ ಶೋಕಸಾಗರೇ ॥ ೭೯ ॥

ಪುನಸ್ತಾಂ ಬೋಧಯಾಮಾಸ ದಿವ್ಯಜ್ಞಾನೇನ ಬೋಧವಿತ್ ।
ಪುರಾ ಕೃಷ್ಣೇನ ಯದ್ದತ್ತಂ ಭಾಂಡೀರೇ ತತ್ವಮುತ್ತಮಂ ॥ ೮೦ ॥

ಸ ಚ ತಸ್ಯೈ ದದೌ ತಚ್ಚ ಸರ್ವಶೋಕಹರಂ ಪರಂ ।
ಜ್ಞಾನಂ ಸಂಪ್ರಾಪ್ಯ ಸಾ ದೇವೀ ಪ್ರಸನ್ನವದನೇಕ್ಷಣಾ ॥ ೮೧ ॥

ಕ್ರೀಡಾಂ ಚಕಾರ ಹರ್ಷೇಣ ಸರ್ವಂ ಮತ್ವಾತಿನಶ್ವರಂ ।
ತೌ ದಂಪತೀ ಚ ಕ್ರೀಡಾರ್ತೌ ನಿಮಗ್ನೌ ಸುಖಸಾಗರೇ ॥ ೮೨ ॥

ಪುಲಕಾಂಕಿತಸರ್ವಾಂಗೌ ಮೂರ್ಛಿತೌ ನಿರ್ಜನೇ ಮುನೇ ।
ಅಂಗಪ್ರತ್ಯಂಗಸಂಯುಕ್ತೌ ಸುಪ್ರೀತೌ ಸುರತೋತ್ಸುಕೌ ॥ ೮೩ ॥

೭೯–೮೦. ನಿರಾಹಾರಳೂ, ಕೃಶೋದರಿಯೂ, ಶೋಕಸಾಗರನಿಮಗ್ನಳೂ ಆದ ಆ ಕಾಂತಾಮಣಿಯನ್ನು ತನ್ನ ವಕ್ಷಃಸ್ಥಲದಲ್ಲಿ ಧರಿಸಿ, ಆಕೆಗೆ ದಿವ್ಯಜ್ಞಾನವನ್ನು ಬೋಧಿಸಿದನು. ಹಿಂದೆ ಗೋಲೋಕದಲ್ಲಿ ಶ್ರೀಕೃಷ್ಣನು ತನಗೆ ಉಪದೇಶಿಸಿದ ಶೋಕನಾಶಕವಾದ ಉತ್ತಮತತ್ವಗಳನ್ನೆಲ್ಲ ಬೋಧಿಸಿದನು.

೮೧. ದಿವ್ಯಜ್ಞಾನವನ್ನು ಪಡೆದ ತುಳಸಿಯು ಪ್ರಸನ್ನಮುಖಿಯಾಗಿ ದಿವ್ಯ ದೃಷ್ಟಿಯಿಂದ ಸಕಲವೂ ನಶ್ವರವೆಂದು ತಿಳಿದು ಪತಿಯೊಡನೆ ನಿಷ್ಕಾಮಳಾಗಿ ಕ್ರೀಡಿಸಿದಳು. ಇಂತು ಆ ದಂಪತಿಗಳಿಬ್ಬರೂ ರತಿಕ್ರೀಡೆಯ ಸುಖದಲ್ಲಿ ನಿಮಗ್ನರಾದರು.

೮೨–೮೩. ಎಲೈ ನಾರದಮುನಿಯೇ, ನಿರ್ಜನವಾದ ಆ ಸ್ಥಳದಲ್ಲಿ ಶಂಖಚೂಡ ತುಳಸಿಯರು ರತಿಸುಖಾತಿರೇಕದಿಂದ ರೋಮಾಂಚಿತಶರೀರರಾಗಿ ಮೂರ್ಛೆಗೊಂಡು ಗಾಢಾಲಿಂಗನದಲ್ಲಿ ನಿಮಗ್ನರಾಗಿದ್ದರು.

ಏಕಾಂಗೌ ಚ ತಥಾ ತೌ ದ್ವೌ ಚಾರ್ಧನಾರೀಶ್ವರೌ ಯಥಾ ।
ಪ್ರಾಣೇಶ್ವರಂ ಚ ತುಲಸೀ ಮೇನೇ ಪ್ರಾಣಾಧಿಕಂ ಪರಂ ॥ ೮೪ ॥

ಪ್ರಾಣಾಧಿಕಾಂ ಚ ತಾಂ ಮೇನೇ ರಾಜಾ ಪ್ರಾಣಾಧಿಕೇಶ್ವರೀಂ ।
ತೌ ಸ್ಥಿತೌ ಸುಖಸುಪ್ತೌ ಚ ತೆಂತ್ರಿತೌ ಸುಂದರೌ ಸಮೌ ॥ ೮೫ ॥

ಸುವೇಷೌ ಸುಖಸಂಭೋಗಾದಚೇಷ್ಟೌ ಸುಮನೋಹರೌ ।
ಕ್ಷಣಂ ಸಚೇತನೌ ತೌ ಚ ಕಥಯಂತೌ ರಸಾಶ್ರಯಾಂ ॥ ೮೬ ॥

ಭುಕ್ತವಂತೌ ಚ ತಾಂಬೂಲಂ ಪ್ರದತ್ತಂ ಚ ಪರಸ್ಪರಂ ॥ ೮೭ ॥

ಪರಸ್ಪರಂ ಸೇವಿತೌ ಚ ಸುಪ್ರೀತ್ಯಾ ಶ್ವೇತಚಾಮರೈಃ ।
ಕ್ಷಣಂ ಶಯಾನೌ ಸಾನಂದೌ ವಸಂತೌ ಚ ಕ್ಷಣಂ ಪುನಃ ॥ ೮೮ ॥

---

೮೪. ಅವರಿಬ್ಬರೂ ಅರ್ಧನಾರೀಶ್ವರರಂತೆ ಏಕಾಂಗಿಯಾಗಿ ತೋರುತ್ತಿದ್ದರು. ತುಳಸಿಯು ತನ್ನ ಪ್ರಾಣಕಾಂತನನ್ನು ಪ್ರಾಣಾಧಿಕನೆಂದು ತಿಳಿದಳು.

೮೫. ಶಂಖಚೂಡನೂ ತನ್ನ ಪ್ರಾಣಕಾಂತೆಯಾದ ತುಳಸಿಯನ್ನು ಪ್ರಾಣಾಧಿಕಳೆಂದು ತಿಳಿದನು. ಆ ಸುಂದರದಂಪತಿಗಳು ಸುಖಸುಪ್ತರಾಗಿ ಬಹಳಕಾಲ ಬಾಹ್ಯಪ್ರಪಂಚವನ್ನು ಅರಿಯದೆ ಇದ್ದರು.

೮೬–೮೮. ಸುವೇಷಭೂಷಿತರಾದ ಆ ದಂಪತಿಗಳು ಸುಖಸಂಭೋಗದಿಂದ ಸ್ವಲ್ಪಕಾಲ ಅಚೇತನರಾಗಿದ್ದು, ಮರುಕ್ಷಣದಲ್ಲಿ ಚೇತನವನ್ನು ಹೊಂದಿ, ರತಿರಸಾನುಗುಣವಾದ ಸಂಲಾಪಮಾಡಲುಪಕ್ರಮಿಸಿದರು. ಅಲ್ಲದೆ ಪರಸ್ಪರವಾಗಿ ತಾಂಬೂಲವನ್ನು ವಿನಿಮಯಮಾಡಿಕೊಂಡು, ಶ್ವೇತಚಾಮರದ ಮಂದಮಾರುತವನ್ನು ಸೇವಿಸುತ್ತ, ಆನಂದಪರವಶರಾಗಿ ಕ್ಷಣಕಾಲ ಕುಳಿತುಕೊಂಡೂ, ಕ್ಷಣಕಾಲ ಮಲಗಿಕೊಂಡೂ ಕ್ರೀಡಿಸಿದರು.

ಕ್ಷಣಂ ಕೇಲಿನಿಯುಕ್ತೌ ಚ ರಸಭಾವಸಮನ್ವಿತೌ ।
ಸುರತಾದ್ವಿರತಿರ್ನಾಸ್ತಿ ತೌ ತದ್ವಿಷಯಪಂಡಿತೌ ॥ ೮೯ ॥

ಸತತಂ ಜಯಯುಕ್ತೌ ದ್ವೌ ಕ್ಷಣಂ ನೈವ ಪರಾಜಿತೌ ॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ
ತುಲಸೀಶಂಖಚೂಡಸಂಭೋಗೋ ನಾಮ
ಸಪ್ತದಶೋಽಧ್ಯಾಯಃ

---

೮೯. ರಸಭಾವಾನುಗುಣವಾಗಿ ರತಿಕೇಳಿಯಲ್ಲಿ ಆಸಕ್ತರಾಗಿದ್ದ ಆ ವಿಲಾಸ ದಂಪತಿಗಳಿಗೆ ಸುರತಸುಖದಿಂದ ತೃಪ್ತಿಯೇ ಉಂಟಾಗಲಿಲ್ಲ.

೯೦. ರತಿಕೇಳಿಯಲ್ಲಿ ಒಬ್ಬರನ್ನೊಬ್ಬರು ಜಯಿಸುತ್ತ, ಯಾರೊಬ್ಬರೂ ಸೋಲದೆ ಸುಖವನ್ನನುಭವಿಸುತ್ತಿದ್ದರು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಶಂಖಚೂಡತುಳಸಿ
ದೇವಿಯರ ಸಂಭೋಗವರ್ಣನಾತ್ಮಕವಾದ ಹದಿನೇಳನೆಯ
ಅಧ್ಯಾಯವು ಮುಗಿದುದು.

ಹದಿನೇಳನೆಯ ಅಧ್ಯಾಯದ ಸಾರಾಂಶವು

ಶಂಖಚೂಡನನ್ನು ಸಂಹಾರಮಾಡಲು ಶ್ರೀಕೃಷ್ಣನಿಂದ ಪ್ರೇರಿತನಾದ ಪರಶಿವನು ಚಂದ್ರಭಾಗಾನದಿಯತೀರದ ವಟವೃಕ್ಷದ ಕೆಳಗೆ ಬಿಡಾರಮಾಡಿಕೊಂಡು, ಪುಷ್ಪದಂತನೆಂಬ ದೂತನೊಡನೆ ಶಂಖಚೂಡನಿಗೆ ಹೇಳಿಕಳುಹಿಸಿದನು. ಪುಷ್ಪದಂತನು ಶಂಖಚೂಡನ ಅರಮನೆಯ ದ್ವಾದಶದ್ವಾರಗಳನ್ನು ದಾಟಿ, ಸಭಾಮಂಟಪದ ಮಧ್ಯದಲ್ಲಿ ದಿವ್ಯಾಲಂಕಾರಭೂಷಿತನಾಗಿ ರತ್ನಸಿಂಹಾಸನದಲ್ಲಿ ಕುಳಿತಿರುವ ಶಂಖಚೂಡನನ್ನು ಕಂಡು ತಾನು ತಂದಿರುವ ಸಮಾಚಾರವನ್ನು ಬಿನ್ನವಿಸಿ ಹಿಂತಿರುಗಿದನು. ಇತ್ತ ಶಂಖಚೂಡನು ಈಶ್ವರನೊಡನೆ ಯುದ್ಧಕ್ಕೆ ಹೋಗುವುದಾಗಿ ತನ್ನ ಪತ್ನಿಯಾದ ತುಳಸಿದೇವಿಗೆ ತಿಳಿಸಿ, ಪ್ರಾಕೃತಪ್ರಪಂಚವೆಲ್ಲ ನಶ್ವರವಾದುದೆಂದೂ, ಶ್ರೀಕೃಷ್ಣಪರಮಾತ್ಮನೊಬ್ಬನೇ ಅನಾದ್ಯನಂತನೆಂದೂ ಬೋಧಿಸಿ, ತಾವು ಶಾಪಗ್ರಸ್ತರಾಗಿದ್ದ ಸಮಾಚಾರವನ್ನು ವಿವರಿಸಿದನು. ಅಲ್ಲದೆ ನಿಶ್ಚಲಭಕ್ತಿಯಿಂದ ತಪಸ್ಸುಮಾಡಿ ಶ್ರೀಹರಿಯನ್ನು ವರಿಸಿ ಗೋಲೋಕದಲ್ಲಿ ಶಾಶ್ವತಸುಖವನ್ನು ಪಡೆಯಬಹುದೆಂದು ತಿಳಿಸಿ ಕೊನೆಯದಾಗಿ ಅವಳೊಡನೆ ವಿಧವಿಧವಾದ ರತಿಕ್ರೀಡೆಗಳನ್ನಾಡಿ ಆನಂದಸಾಗರದಲ್ಲಿ ಮುಳುಗಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಅಷ್ಟಾದಶೋಽಧ್ಯಾಯಃ ||

|| ನಾರಾಯಣ ಉವಾಚ ||

ಶ್ರೀಕೃಷ್ಣಂ ಮನಸಾ ಧ್ಯಾತ್ವಾ ರಾಜಾ ಕೃಷ್ಣಪರಾಯಣಃ ।
ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಪುಷ್ಪತಲ್ಪಾನ್ಮನೋಹರಾತ್ || ೧ ||

ರಾತ್ರಿವಾಸಃ ಪರಿತ್ಯಜ್ಯ ಸ್ನಾತ್ವಾ ಮಂಗಲವಾರಿಣಾ ।
ಧೌತೇ ಚ ವಾಸಸೀ ಧೃತ್ವಾ ಕೃತ್ವಾ ತಿಲಕಮುಜ್ವಲಂ || ೨ ||

ಚಕಾರಾಹ್ನಿಕಮಾವಶ್ಯಮಭೀಷ್ಟಗುರುವಂದನಂ ।
ದಧ್ಯಾಜ್ಯಂ ಮಧುಲಾಜಾಂಶ್ಚ ಸೋಽಪಶ್ಯದ್ವಸ್ತುಮಂಗಲಂ || ೩ ||

ಹದಿನೆಂಟನೆಯ ಅಧ್ಯಾಯವು

೧–೩. ನಾರಾಯಣಮಹರ್ಷಿ :—ಪರಮವೈಷ್ಣವನಾದ ಶಂಖಚೂಡನು ಮನಸ್ಸಿನಲ್ಲಿಯೇ ಶ್ರೀಕೃಷ್ಣಪರಮಾತ್ಮನನ್ನು ಸ್ಮರಿಸುತ್ತ ಮನೋಹರವಾದ ಪುಷ್ಪ ಶಯನದಿಂದ ಬ್ರಾಹ್ಮಮೂಹೂರ್ತದಲ್ಲಿ ಎದ್ದು, ರಾತ್ರಿಯುಟ್ಟ ಬಟ್ಟೆಯನ್ನು ಕಳೆದು, ಮಂಗಳಸ್ನಾನಮಾಡಿ, ಶುಭ್ರವಾದ ವಸ್ತ್ರದ್ವಯವನ್ನು ಧರಿಸಿ, ಹಣೆಯಲ್ಲಿ ಉಜ್ಜ್ವಲ ವಾದ ತಿಲಕವನ್ನು ಧರಿಸಿ, ಪ್ರಾತಃಕಾಲದ ನಿತ್ಯವಿಧಿಯನ್ನೂ ಇಷ್ಟದೇವತಾವಂದನೆ ಯನ್ನೂ ಮಾಡಿ, ಮೊಸರು ತುಪ್ಪ ಜೇನು ಅರಳು ಮುಂತಾದ ಮಂಗಳದ್ರವ್ಯಗಳನ್ನು ದರ್ಶನಮಾಡಿದನು.

ರತ್ನಶ್ರೇಷ್ಠಂ ಮಣಿಶ್ರೇಷ್ಠಂ ವಸ್ತ್ರಶ್ರೇಷ್ಠಂ ಚ ಕಾಂಚನಂ ।
ಬ್ರಾಹ್ಮಣೇಭ್ಯೋ ದದೌ ಭಕ್ತ್ಯಾ ಯಥಾ ನಿತ್ಯಂ ಚ ನಾರದ ॥ ೪ ॥

ಅಮೂಲ್ಯರತ್ನಂ ಯತ್ಕಿಂಚಿನ್ಮುಕ್ತಾಮಾಣಿಕ್ಯ ಹೀರಕಂ ।
ದದೌ ವಿಪ್ರಾಯ ಗುರವೇ ಯಾತ್ರಾಮಂಗಲಹೇತವೇ ॥ ೫ ॥

ಗಜರತ್ನಂ ಚಾಶ್ವರತ್ನಂ ಧೇನುರತ್ನಂ ಮನೋಹರಂ ।
ದದೌ ಸರ್ವಂ ದರಿದ್ರಾಯ ವಿಪ್ರಾರ್ಥಂ ಮಂಗಲಾಯ ಚ ॥ ೬ ॥

ಕೋಶಾಗಾರಸಹಸ್ರಂ ಚ ನಗರಾಣಾಂ ತ್ರಿಲಕ್ಷಕಂ ।
ಗ್ರಾಮಾಣಾಂ ಶತಕೋಟಿಂ ಚ ಬ್ರಾಹ್ಮಣೇಭ್ಯೋ ದದೌ ಮುದಾ ॥ ೭ ॥

ಪುತ್ರಂ ಕೃತ್ವಾ ಚ ರಾಜೇಂದ್ರಂ ಸುಚಂದ್ರಂ ದಾನವೇಷು ಚ ।
ಪುತ್ರೇ ಸಮರ್ಪ್ಯ ಭಾರ್ಯಾಂ ಚ ರಾಜ್ಯಂ ವೈ ಸರ್ವಸಂಪದಂ ॥ ೮ ॥

---

೪. ಅನಂತರ ಉತ್ತಮವಾದ ಧನಕನಕವಸ್ತ್ರವಾಹನಾದಿಗಳನ್ನೂ, ಮುತ್ತು ಮಾಣಿಕ್ಯವಜ್ರವೈಡೂರ್ಯಗಳನ್ನೂ ಬ್ರಾಹ್ಮಣರಿಗೆ ಭಕ್ತಿಯಿಂದ ದಾನಮಾಡಿದನು.

೫. ಅಲ್ಲದೆ ಚೈತ್ರಯಾತ್ರೆಯ ಮಂಗಳಕ್ಕಾಗಿ ಅಮೂಲ್ಯವಾದ ರತ್ನಾಭರಣಗಳನ್ನೂ, ನವರತ್ನಗಳನ್ನೂ ಗುರುಗಳಿಗೂ ಬ್ರಾಹ್ಮಣರಿಗೂ ದಾನಮಾಡಿದನು.

೬. ಉತ್ತಮವಾದ ಆನೆಕುದುರೆಗಳನ್ನೂ, ಹಾಲುಕರೆಯುವ ಗೋವನ್ನೂ, ದರಿದ್ರನಾದ ವಿಪ್ರನಿಗೆ ದಾನಮಾಡಿ ಮಂಗಳಾಶೀರ್ವಾದವನ್ನು ಪಡೆದನು.

೭. ಸಾವಿರಾರು ಬೊಕ್ಕಸಗಳನ್ನೂ, ಮೂರುಲಕ್ಷನಗರಗಳನ್ನೂ, ಮೂರು ಕೋಟಿಗ್ರಾಮಗಳನ್ನೂ ಬ್ರಾಹ್ಮಣರಿಗೆ ಸಂತೋಷದಿಂದ ದಾನಮಾಡಿದನು.

೮–೯. ದಾನವಶ್ರೇಷ್ಠನಾದ ಸುಚಂದ್ರನೆಂಬ ತನ್ನ ಪುತ್ರನನ್ನು ರಾಜನನ್ನಾಗಿ ಮಾಡಿ, ತನ್ನ ಪತ್ನಿಯನ್ನೂ, ಪ್ರಜೆಗಳನ್ನೂ, ಅನುಚರರನ್ನೂ. ರಾಜ್ಯದ

ಪ್ರಜಾನುಚರಸಂಘಂ ಚ ಕೋಶೌಘಂ ವಾಹನಾದಿಕಂ ।
ಸ್ವಯಂ ಸನ್ನಾಹಯುಕ್ತಶ್ಚ ಧನುಷ್ಪಾಣಿರ್ಬಭೂವ ಹ ॥ ೯ ॥

ಭೃತ್ಯದ್ವಾರಾ ಕ್ರಮೇಣೈವ ಸ ಚಕ್ರೇ ಸೈನ್ಯಸಂಚಯಂ ।
ಅಶ್ವಾನಾಂ ಚ ತ್ರಿಲಕ್ಷೇಣ ಪಂಚಲಕ್ಷೇಣ ಹಸ್ತಿನಾಂ ॥ ೧೦ ॥

ರಥಾನಾಮಯುತೇನೈವ ಧಾನುಷ್ಕಾಣಾಂ ತ್ರಿಕೋಟಿಭಿಃ ।
ತ್ರಿಕೋಟಿಭಿಶ್ಚ ವರ್ಮಿಣಾಂ ಚ ಶೂಲಿನಾಂ ಚ ತ್ರಿಕೋಟಿಭಿಃ ॥ ೧೧ ॥

ಕೃತಾ ಸೇನಾಃಪರಿಮಿತಾ ದಾನವೇಂದ್ರೇಣ ನಾರದ ।
ಯಸ್ಯಾಂ ಸೇನಾಪತಿಶ್ಚೈವ ಯುದ್ಧಶಾಸ್ತ್ರವಿಶಾರದಃ ॥ ೧೨ ॥

ಮಹಾರಥಃ ಸ ವಿಜ್ಞೇಯೋ ರಥಿನಾಂ ಪ್ರವರೋ ರಣೇ ।
ತ್ರಿಲಕ್ಷಾಕ್ಷೌಹಿಣೀ ಸೇನಾಪತಿಂ ಕೃತ್ವಾ ನರಾಧಿಪಃ ॥ ೧೩ ॥

ತ್ರಿಂಶದಕ್ಷೌಹಿಣೀವಾದ್ಯಭಾಂಡೌಘಂ ಚ ಚಕಾರ ಸಃ ।
ಬಹಿರ್ಬಭೂವ ಶಿಬಿರಾನ್ಮನಸಾ ಶ್ರೀಹರಿಂ ಸ್ಮರನ್ ॥ ೧೪ ॥

ಸಕಲಸಂಪತ್ತನ್ನೂ, ಕೋಶವಾಹನಾದಿಗಳನ್ನೂ ಅವನ ರಕ್ಷಣೆಗೊಳಪಡಿಸಿ. ತಾನು ಧನುಸ್ಸನ್ನು ತೆಗೆದುಕೊಂಡು ಯುದ್ಧಸನ್ನದ್ಧನಾದನು.

೧೦–೧೨. ಮೂರು ಲಕ್ಷಕುದುರೆಗಳಿಂದಲೂ, ಐದುಲಕ್ಷ ಆನೆಗಳಿಂದಲೂ, ಹತ್ತುಸಾವಿರ ರಥಗಳಿಂದಲೂ, ಮೂರುಕೋಟಿ ಧನುರ್ಧಾರಿಗಳಿಂದಲೂ, ಮೂರು ಕೋಟಿ ವರ್ಮಧಾರಿಗಳಿಂದಲೂ, ಮೂರುಕೋಟಿ ಶೂಲಧಾರಿಗಳಿಂದಲೂ ಪರಿಮಿತ ವಾದ ಸೇನೆಯನ್ನು ಸೇವಕರ ಮೂಲಕ ಸಿದ್ಧಪಡಿಸಿ ಅದಕ್ಕೆ ಶಸ್ತ್ರವಿದ್ಯಾಪಾರಂಗತ ನೊಬ್ಬನನ್ನು ಸೇನಾಪತಿಯನ್ನಾಗಿ ಮಾಡಿದನು.

೧೩–೧೪. ಯುದ್ಧದಲ್ಲಿ ಹತ್ತು ಸಾವಿರ ಸೈನಿಕರೊಡನೆ ಒಬ್ಬನೇ ಕಾದಾಡಿದರೆ ಅವನನ್ನು ಮಹಾರಥಿಕನೆನ್ನುವರು. ಅಂಥ ಮಹಾರಥಿಕನೊಬ್ಬನನ್ನು ಮೂರುಲಕ್ಷ ಅಕ್ಷೌಹಿಣೀಸೈನ್ಯಕ್ಕೆ ಸೇನಾನಿಯನ್ನಾಗಿ ಮಾಡಿ, ಮೂವತ್ತು ಅಕ್ಷೌಹಿಣೀ ವಾದ್ಯ ಭಾಂಡಗಳನ್ನು ಸಿದ್ಧಗೊಳಿಸಿ, ಶಂಖಚೂಡನು ಮನಸಿನಲ್ಲಿ ಶ್ರೀಹರಿಯನ್ನು ಸ್ಮರಿಸುತ್ತ, ಯುದ್ಧಶಿಬಿರದಿಂದ ಹೊರಕ್ಕೆ ಹೊರಟನು.

ರತ್ನೇಂದ್ರಸಾರಖಚಿತಂ ವಿಮಾನಂ ಹ್ಯಾರುರೋಹ ಸಃ ।
ಗುರುವರ್ಗಾನ್ಪುರಸ್ಕೃತ್ಯ ಪ್ರಯಯೌ ಶಂಕರಾಂತಿಕಂ ॥ ೧೫ ॥

ಪುಷ್ಪಭದ್ರಾನದೀತೀರೇ ಯತ್ರಾಕ್ಷಯವಟಃ ಶುಭಃ ।
ಸಿದ್ಧಾಶ್ರಮಂ ಚ ಸಿದ್ಧಾನಾಂ ಸಿದ್ಧಿಕ್ಷೇತ್ರಂ ಚ ನಾಮತಃ ॥ ೧೬ ॥

ಕಪಿಲಸ್ಯ ತಪಸ್ಥಾನಂ ಪುಣ್ಯಕ್ಷೇತ್ರಂ ಚ ಭಾರತೇ ।
ಪಶ್ಚಿಮೋದಧಿಪೂರ್ವೇ ಚ ಮಲಯಸ್ಯ ಚ ಪಶ್ಚಿಮೇ ॥ ೧೭ ॥

ಶ್ರೀಶೈಲೋತ್ತರಭಾಗೇ ಚ ಗಂಧಮಾದನದಕ್ಷಿಣೇ ।
ಪಂಚಯೋಜನವಿಸ್ತೀರ್ಣಾ ದೈರ್ಘ್ಯೇ ಶತಗುಣಾ ತಥಾ ।
ಶಾಶ್ವತೀ ಜಲಪೂರ್ಣಾ ಚ ಪುಷ್ಪಭದ್ರಾನದೀ ಶುಭಾ ॥ ೧೮ ॥

ಲವಣೋದಪ್ರಿಯಾ ಭಾರ್ಯಾ ಶಶ್ವತ್ಸೌಭಾಗ್ಯಸಂಯುತಾ ।
ಶುದ್ಧಸ್ಫಟಿಕಸಂಕಾಶಾ ಭಾರತೇ ಚ ಸುಪುಣ್ಯದಾ ॥ ೧೯ ॥

---

೧೫. ಗುರುಹಿರಿಯರನ್ನು ಮುಂದುಮಾಡಿಕೊಂಡು ಶ್ರೇಷ್ಠರತ್ನದಿಂದ ನಿರ್ಮಿತವಾದ ವಿಮಾನದಲ್ಲಿ ಕುಳಿತು ಈಶ್ವರನ ಸಮೀಪಕ್ಕೆ ಹೋದನು.

೧೬. ಪುಷ್ಪಭದ್ರಾನದೀತೀರದಲ್ಲಿ ಅಕ್ಷಯವಟವೃಕ್ಷದ ಸಮೀಪದಲ್ಲಿ ಸಿದ್ಧ ಪುರುಷರೆಲ್ಲ ಸಿದ್ಧಿಯನ್ನು ಪಡೆದ ಸಿದ್ಧಾಶ್ರಮವೊಂದಿದೆ.

೧೭–೧೮. ಆ ಸಿದ್ಧಾಶ್ರಮದಲ್ಲಿ ಕಪಿಲಮಹರ್ಷಿಯು ತಪಸ್ಸುಮಾಡಿದುದರಿಂದ ಅದು ಭಾರತದಲ್ಲಿ ಪುಣ್ಯಕ್ಷೇತ್ರವೆನಿಸಿದೆ. ಪಶ್ಚಿಮಸಮುದ್ರಕ್ಕೆ ಪೂರ್ವದಲ್ಲಿಯೂ, ಮಲಯಪರ್ವತಕ್ಕೆ ಪಶ್ಚಿಮದಲ್ಲಿಯೂ, ಶ್ರೀಶೈಲಕ್ಕೆ ಉತ್ತರದಲ್ಲಿಯೂ, ಗಂಧಮಾದನಕ್ಕೆ ದಕ್ಷಿಣಭಾಗದಲ್ಲಿಯೂ ಇರುವ ಪುಷ್ಪಭದ್ರಾನದಿಯು ಐದುಯೋಜನ ವಿಸ್ತೀರ್ಣವಾಗಿಯೂ, ಅದರ ನೂರರಷ್ಟು ದೀರ್ಘವಾಗಿಯೂ, ಸರ್ವದಾ ಜಲಪೂರ್ಣವಾಗಿಯೂ ಅಲ್ಲಿ ಕಂಗೊಳಿಸುತ್ತಿದೆ.

೧೯. ಲವಣಸಮುದ್ರಕ್ಕೆ ಪ್ರಿಯಪತ್ನಿಯಾದ ಆ ಪುಷ್ಪಭದ್ರಾನದಿಯು ಸಕಲಸೌಭಾಗ್ಯಯುತವೂ, ಶುದ್ಧಸ್ಫಟಿಕದಂತೆ ನಿರ್ಮಲವೂ, ಭಾರತದಲ್ಲಿ ಪುಣ್ಯಪ್ರದವೂ ಆಗಿದೆ.

ಶರಾವತೀ ಮಿಶ್ರಿತಾ ಚ ನಿರ್ಗತಾ ಸಾ ಹಿಮಾಲಯಾತ್ ।
ಗೋಮಂತಂ ವಾಮತಃ ಕೃತ್ವಾ ಪ್ರವಿಷ್ಟಾ ಪಶ್ಚಿಮೋದಧೌ ॥ ೨೦ ॥

ತತ್ರ ಗತ್ವಾ ಶಂಖಚೂಡೋ ಲುಲೋಕೆ ಚಂದ್ರಶೇಖರಂ ।
ವಟಮೂಲೇ ಸಮಾಸೀನಂ ಸೂರ್ಯಕೋಟಿಸಮಪ್ರಭಂ ॥ ೨೧ ॥

ಕೃತ್ವಾ ಯೋಗಾಸನೇ ಸ್ಥಿತ್ವಾ ಮುದ್ರಾಯುಕ್ತಂ ಚ ಸಸ್ಮಿತಂ ।
ಶುದ್ಧಸ್ಫಟಿಕಸಂಕಾಶಂ ಜ್ವಲಂತಂ ಬ್ರಹ್ಮತೇಜಸಾ ॥ ೨೨ ॥

ತ್ರಿಶೂಲಪಟ್ಟಿಶಧರಂ ವ್ಯಾಘ್ರಚರ್ಮಾಬರಂ ವರಂ ।
ತಪ್ತಕಾಂಚನವರ್ಣಾಭಂ ಜಟಾಜಾಲಂ ಚ ಬಿಭ್ರತಂ ॥ ೨೩ ॥

ತ್ರಿನೇತ್ರಂ ಪಂಚವಕ್ತ್ರಂ ಚ ನಾಗಯಜ್ಞೋಪವೀತಿನಂ ।
ಮೃತ್ಯುಂಜಯಂ ಕಾಲಮೃತ್ಯುಂ ವಿಶ್ವಮೃತ್ಯುಕರಂ ಪರಂ ॥ ೨೪ ॥

---

೨೦. ಆ ನದಿಯು ಹಿಮಾಲಯದಲ್ಲಿ ಹುಟ್ಟಿ, ಶರಾವತೀನದಿಯೊಡನೆ ಸೇರಿ, ಗೋಮಂತಕ್ಷೇತ್ರವನ್ನು ಎಡಕ್ಕೆಬಿಟ್ಟು ಪಶ್ಚಿಮಸಮುದ್ರಕ್ಕೆ ಸೇರುವುದು.

೨೧. ಶಂಖಚೂಡನು ಆನದಿಯ ಸಮೀಪಕ್ಕೆ ಹೋಗಿ, ಅದರ ತೀರದ ವಟವೃಕ್ಷದ ಕೆಳಗೆ ಬಿಡಾರಮಾಡಿಕೊಂಡಿರುವ ಕೋಟಿಸೂರ್ಯಸಮಪ್ರಭನಾದ ಚಂದ್ರಶೇಖರನನ್ನು ನೋಡಿದನು.

೨೨-೨೩. ಯೋಗಾಸನಾಸೀನನಾಗಿ, ಕೈಯಲ್ಲಿ ಅಭಯಮುದ್ರೆಯನ್ನು ಧರಿಸಿ, ಮುಖದಲ್ಲಿ ಮಂದಹಾಸವನ್ನು ಬೀರುತ್ತಿರುವ, ಶುದ್ಧಸ್ಫಟಿಕಮಣಿಯಂತೆ ತೇಜಸ್ವಿಯೂ, ವ್ಯಾಘ್ರಚರ್ಮಾಂಬರನೂ, ತ್ರಿಶೂಲಪಟ್ಟಿಶಧರನೂ, ಜಟಾಶೇಖರನೂ ತಪ್ತಕಾಂಚನದಂತೆ ಗೌರವರ್ಣನೂ ಆದ ಶಂಕರನನ್ನು ನೋಡಿದನು.

೨೪-೨೫. ಪಂಚಮುಖನೂ, ತ್ರಿಣೇತ್ರನೂ, ನಾಗಯಜ್ಞೋಪವೀತಿಯೂ, ಶಾಂತನೂ, ಗೌರೀಕಾಂತನೂ, ಮನೋಹರನೂ, ಕಾಲಕಾಲನೂ, ಮೃತ್ಯುಂಜಯನೂ,

ಭಕ್ತಮೃತ್ಯುಹರಂ ಶಾಂತಂ ಗೌರೀಕಾಂತಂ ಮನೋರಮಂ ।
ತಪಸಾಂ ಫಲದಾತಾರಂ ದಾತಾರಂ ಸರ್ವಸಂಪದಾಂ ॥ ೨೫ ॥

ಆಶುತೋಷಂ ಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ।
ವಿಶ್ವನಾಥಂ ವಿಶ್ವರೂಪಂ ವಿಶ್ವಬೀಜಂ ಚ ವಿಶ್ವಜಂ ॥ ೨೬ ॥

ವಿಶ್ವಂಭರಂ ವಿಶ್ವವರಂ ವಿಶ್ವಸಂಹಾರಕಾರಣಂ ।
ಕಾರಣಂ ಕಾರಣಾನಾಂ ಚ ನರಕಾರ್ಣವತಾರಣಂ ॥ ೨೭ ॥

ಜ್ಞಾನಪ್ರದಂ ಜ್ಞಾನಬೀಜಂ ಜ್ಞಾನಾನಂದಂ ಸನಾತನಂ ।
ಅವರುಹ್ಯ ವಿಮಾನಾಚ್ಚ ಸಂದೃಷ್ಟ್ವಾ ದಾನವೇಶ್ವರಃ ॥ ೨೮ ॥

ಸರ್ವೈಃ ಸಾರ್ಧಂ ಭಕ್ತಿಯುಕ್ತಃ ಶಿರಸಾ ಪ್ರಣನಾಮ ಸಃ ।
ವಾಮತೋ ಭದ್ರಕಾಲೀಂ ಚ ಸ್ಕಂದಂ ತತ್ಪುರತಃ ಸ್ಥಿತಂ ॥ ೨೯ ॥

ದುಷ್ಟರಿಗೆ ಮೃತ್ಯುಸ್ವರೂಪನೂ, ಭಕ್ತರ ಮೃತ್ಯುಪರಿಹಾರಕನೂ, ತಪಃಫಲದಾತನೂ, ಸರ್ವಸಂಪತ್ಪ್ರದಾತನೂ ಆದ ಪರಶಿವನನ್ನು ನೋಡಿದನು.

೨೬–೨೭. ಆಶುತೋಷನೂ, ಪ್ರಸನ್ನವದನನೂ, ಭಕ್ತಾನುಗ್ರಹದಾಯಕನೂ, ವಿಶ್ವಕಾರಣನೂ, ವಿಶ್ವನಾಥನೂ, ವಿಶ್ವರೂಪನೂ, ವಿಶ್ವಂಭರನೂ, ವಿಶ್ವಸಂಹಾರಕನೂ ಕಾರಣಗಳಿಗೆಲ್ಲ ಆದಿಕಾರಣನೂ, ನರಕಾರ್ಣವತಾರಣನೂ ಆದ ತ್ರಿಪುರಾಂತಕನನ್ನು ನೋಡಿದನು.

೨೮–೨೯. ಅನಾದಿಯೂ, ಜ್ಞಾನಬೀಜನೂ, ಜ್ಞಾನಕಾರಣನೂ, ಜ್ಞಾನಾನಂದಮಯನೂ ಆದ ಆ ಸರ್ವೇಶನನ್ನೂ ಅವನ ವಾಮಭಾಗದಲ್ಲಿ ಭದ್ರಕಾಳಿಯನ್ನೂ, ಮುಂಭಾಗದಲ್ಲಿ ಸೇನಾನಿಯಾದ ಷಣ್ಮುಖನನ್ನೂ ನೋಡಿ ದಾನವೋತ್ತಮನಾದ ಶಂಖಚೂಡನು ವಿಮಾನದಿಂದಿಳಿದು ಎಲ್ಲರಿಗೂ ಭಯಭಕ್ತಿಯಿಂದ ವಂದಿಸಿದನು.

ಆಶಿಷಂ ಚ ದದೌ ತಸ್ಮೈ ಕಾಲೀ ಸ್ಕಂದಶ್ಚ ಶಂಕರಃ ।
ಉತ್ತಸ್ಥುರ್ದಾನವಂ ದೃಷ್ಟ್ವಾ ಸರ್ವೇ ನಂದೀಶ್ವರಾದಯಃ ॥ ೩೦ ॥

ಪರಸ್ಪರಂ ಚ ಸಂಭಾಷಾಂ ತೇ ಚಕ್ರುಸ್ತತ್ರ ಸಾಂಪ್ರತಂ ।
ರಾಜಾ ಕೃತ್ವಾ ಚ ಸಂಭಾಷಾಮುವಾಸ ಶಿವಸನ್ನಿಧೌ ॥ ೩೧ ॥

ಪ್ರಸನ್ನಾತ್ಮಾ ಮಹಾದೇವೋ ಭಗವಾಂಸ್ತಮುವಾಚ ಹ ॥ ೩೨ ॥

॥ ಶ್ರೀ ಮಹಾದೇವ ಉವಾಚ ॥

ವಿಧಾತಾ ಜಗತಾಂ ಬ್ರಹ್ಮಾ ಪಿತಾ ಧರ್ಮಸ್ಯ ಧರ್ಮವಿತ್ ।
ಮರೀಚಿಸ್ತಸ್ಯ ಪುತ್ರಶ್ಚ ವೈಷ್ಣವಶ್ಚಾಪಿ ಧಾರ್ಮಿಕಃ ॥ ೩೩ ॥

ಕಶ್ಯಪಶ್ಚಾಪಿ ತತ್ಪುತ್ರೋ ಧರ್ಮಿಷ್ಠಶ್ಚ ಪ್ರಜಾಪತಿಃ ।
ದಕ್ಷಃ ಪ್ರೀತ್ಯಾ ದದೌ ತಸ್ಮೈ ಭಕ್ತ್ಯಾ ಕನ್ಯಾಸ್ತ್ರಯೋದಶ ॥ ೩೪ ॥

---

೩೦. ಕೂಡಲೇ ಭದ್ರಕಾಳಿ, ಷಣ್ಮುಖ ಮತ್ತು ಶಂಕರರು ಅವನಿಗೆ ಆಶೀರ್ವದಿಸಿದರು. ಇತ್ತ ದಾನವೇಶ್ವರನಾದ ಶಂಖಚೂಡನನ್ನು ನೋಡಿ ನಂದೀಶ್ವರಾದಿಗಳೆಲ್ಲ ಪ್ರತ್ಯುತ್ಥಾನಮಾಡಿದರು.

೩೧. ಅನಂತರ ಎಲ್ಲರೂ ಪ್ರತ್ಯೇಕವಾಗಿ ಕುಶಲಪ್ರಶ್ನೆ ಮಾಡಿದರು. ರಾಜನಾದ ಶಂಖಚೂಡನೂ ಕೂಡ ಎಲ್ಲರನ್ನೂ ಮಾತನಾಡಿಸಿ ಶಿವನ ಸಮೀಪದಲ್ಲಿ ಕುಳಿತನು.

೩೨. ಅನಂತರ ಷಡ್ಗುಣೈಶ್ವರ್ಯಪರಿಪೂರ್ಣನಾದ ಮಹಾದೇವನು ಪ್ರಸನ್ನಾಂತರಂಗನಾಗಿ ಶಂಖಚೂಡನನ್ನು ಕುರಿತು ಇಂತೆಂದನು.

೩೩–೩೪. ಶ್ರೀಮಹಾದೇವ:—ಎಲೈ ಶಂಖಚೂಡನೇ, ಜಗತ್ಸೃಷ್ಟಿಕರ್ತನೂ, ಧರ್ಮಪಿತನೂ, ಧರ್ಮಜ್ಞನೂ ಆದ ಬ್ರಹ್ಮನಿಗೆ ಮರೀಚಿಯು ಪುತ್ರನಾಗಿ ಜನಿಸಿ ಪರಮಧಾರ್ಮಿಕನೂ ವಿಷ್ಣುಭಕ್ತನೂ ಎನಿಸಿದನು. ಆ ಮರೀಚಿಗೆ ಕಶ್ಯಪಪ್ರಜಾಪತಿಯು ಪುತ್ರನಾಗಿ ಧರ್ಮಪರಾಯಣನಾದನು. ದಕ್ಷಬ್ರಹ್ಮನು ತನ್ನ ಹದಿಮೂರು ಹೆಣ್ಣುಮಕ್ಕಳನ್ನು ಆ ಕಶ್ಯಪನಿಗೆ ಪ್ರೀತಿಯಿಂದ ವಿವಾಹಮಾಡಿಕೊಟ್ಟನು.

ತಾಸ್ವೇಕಾ ಚ ದನುಃ ಸಾಧ್ವೀ ತತ್ಸೌಭಾಗ್ಯೇನ ವರ್ಧಿತಾ ।
ಚತ್ವಾರಿಂಶದ್ದನೋಃ ಪುತ್ರಾ ದಾನವಾಸ್ತೇಜಸೋಜ್ವಲಾಃ ॥ ೩೫ ॥

ತೇಷ್ವೇಕೋ ವಿಪ್ರಚಿತ್ತಿಶ್ಚ ಮಹಾಬಲಪರಾಕ್ರಮಃ ।
ತತ್ಪುತ್ರೋ ಧಾರ್ಮಿಕೋ ದಂಭೋ ವಿಷ್ಣುಭಕ್ತೋ ಜಿತೇಂದ್ರಿಯಃ ॥ ೩೬ ॥

ಜಜಾಪ ಪರಮಂ ಮಂತ್ರಂ ಪುಷ್ಕರೇ ಲಕ್ಷವತ್ಸರಂ ।
ಶುಕ್ರಾಚಾರ್ಯಂ ಗುರುಂ ಕೃತ್ವಾ ಕೃಷ್ಣಸ್ಯ ಪರಮಾತ್ಮನಃ ॥ ೩೭ ॥

ತದಾ ತ್ವಾಂ ತನಯಂ ಪ್ರಾಪ ಪರಂ ಕೃಷ್ಣಪರಾಯಣಂ ।
ಪುರಾ ತ್ವಂ ಪಾರ್ಷದೋ ಗೋಪೋ ಗೋಪೇಷ್ವಷ್ಟಸು ಧಾರ್ಮಿಕಃ ॥ ೩೮ ॥

ಅಧುನಾ ರಾಧಿಕಾಶಾಪಾದ್ಭಾರತೇ ದಾನವೇಶ್ವರಃ ।
ಆಬ್ರಹ್ಮಸ್ತಂಬಪರ್ಯಂತಂ ಭ್ರಮಂ ಮೇನೇ ಚ ವೈಷ್ಣವಃ ॥ ೩೯ ॥

---

೩೫. ಅವರಲ್ಲಿ ಸಾಧ್ವೀಮಣಿಯಾದ ದನುವೆಂಬುವಳೊಬ್ಬಳು ಪತಿಯ ಸೌಭಾಗ್ಯದಿಂದ ವೃದ್ಧಿಗೊಳ್ಳುತ್ತ, ಬಲಪರಾಕ್ರಮಿಗಳಾದ ಹದಿನಾಲ್ಕು ಮಂದಿ ದಾನವರನ್ನು ಪಡೆದಳು.

೩೬. ಆ ದಾನವರಲ್ಲಿ ಮಹಾಬಲಶಾಲಿಯಾದ ವಿಪ್ರಚಿತ್ತಿಯೆಂಬುವನಿಗೆ ಧಾರ್ಮಿಕನೂ, ವಿಷ್ಣುಭಕ್ತನೂ ಜಿತೇಂದ್ರಿಯನೂ ಆದ ದಂಭನೆಂಬ ಒಬ್ಬ ಮಗನಿದ್ದನು.

೩೭. ಅವನು ಗುರುಗಳಾದ ಶುಕ್ರಾಚಾರ್ಯರಿಂದ ಶ್ರೀಕೃಷ್ಣಮಂತ್ರೋಪದೇಶವನ್ನು ಪಡೆದು ಪುಷ್ಕರಕ್ಷೇತ್ರದಲ್ಲಿ ಲಕ್ಷವರ್ಷಗಳಕಾಲ ಜಪಮಾಡಿದನು.

೩೮. ಅನಂತರ ಕೃಷ್ಣಪರಾಯಣನಾದ ನಿನ್ನನ್ನು ಪುತ್ರನನ್ನಾಗಿ ಪಡೆದನು. ನೀನು ಪೂರ್ವದಲ್ಲಿ ಶ್ರೀಕೃಷ್ಣನ ಪಾರ್ಶದರಾದ ಅಷ್ಟಗೋಪರಲ್ಲೊಬ್ಬನಾಗಿ ಪರಮ ಧಾರ್ಮಿಕನಾಗಿದ್ದೆ.

೩೯. ಈಗ ರಾಧಾದೇವಿಯ ಶಾಪದಿಂದ ಭಾರತದಲ್ಲಿ ದಾನವೇಶ್ವರನಾಗಿ ಜನಿಸಿರುವೆ. ವಿಷ್ಣುಭಕ್ತನಾದವನು ಬ್ರಹ್ಮನಿಂದ ಹುಲ್ಲುಗರಿಕೆಯವರೆಗಿರುವ ಪ್ರತಿಯೊಂದು ವಸ್ತುವೂ ನಶ್ವರವೆಂದು ತಿಳಿದಿರುವನು.

ಸಾಲೋಕ್ಯ ಸಾರ್ಷ್ಟಿ ಸಾರೂಪ್ಯ ಸಾಮೀಪ್ಯೈಕ್ಯಂ ಹರೇರಪಿ ।
ದೀಯಮಾನಂ ನ ಗೃಹ್ಣಂತಿ ವೈಷ್ಣವಾಃ ಸೇವನಂ ವಿನಾ ॥ ೪೦ ॥

ಬ್ರಹ್ಮತ್ವಮಮರತ್ವಂ ವಾ ತುಚ್ಛಂ ಮೇನೆ ಚ ವೈಷ್ಣವಃ ।
ಇಂದ್ರತ್ವಂ ವಾ ಕುಬೇರತ್ವಂ ನ ಮೇನೆ ಗಣನಾಸು ಚ ॥ ೪೧ ॥

ಕೃಷ್ಣಭಕ್ತಸ್ಯ ತೇ ಕಿಂ ವಾ ದೇವಾನಾಂ ವಿಷಯೇ ಭ್ರಮೇ ।
ದೇಹಿ ರಾಜ್ಯಂ ಚ ದೇವಾನಾಂ ಮತ್ಪ್ರೀತಿಂ ಕುರು ಭೂಮಿಪ ॥ ೪೨ ॥

ಸುಖಂ ಸ್ವರಾಜ್ಯೇ ತ್ವಂ ತಿಷ್ಠ ದೇವಾಃ ಸಂತು ಸ್ವಕೇ ಪದೇ ।
ಅಲಂ ಭ್ರಾತೃವಿರೋಧೇನ ಸರ್ವೇ ಕಶ್ಯಪವಂಶಜಾಃ ॥ ೪೩ ॥

ಯಾನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ಜ್ಞಾತಿದ್ರೋಹಸ್ಯ ಪಾಪಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೪೪ ॥

---

೪೦. ವೈಷ್ಣವರು ವಿಷ್ಣುವಿನ ಸೇವೆಯೊಂದನ್ನುಳಿದು, ಸಾಲೋಕ್ಯ, ಸಾರ್ಷ್ಟಿ, ಸಾರೂಪ್ಯ ಮತ್ತು ಸಾಮೀಪ್ಯರೂಪವಾದ ಚತುರ್ವಿಧಮುಕ್ತಿಯನ್ನೂ ಬಯಸುವುದಿಲ್ಲ.

೪೧. ವಿಷ್ಣುಭಕ್ತನು ದೇವತಾಸ್ವರೂಪವನ್ನಾಗಲೀ, ಸಾಕ್ಷಾತ್ ಬ್ರಹ್ಮಸ್ವರೂಪವನ್ನೇ ಆಗಲೀ ಹೊಂದಲು ಬಯಸುವುದಿಲ್ಲ. ಅವನು ಇಂದ್ರನ ಪದವಿಯನ್ನೂ, ಕುಬೇರನ ಪದವಿಯನ್ನೂ ತುಚ್ಛವಾಗೆಣಿಸುವನು.

೪೨. ಆದುದರಿಂದ ಎಲೈ ಶಂಖಚೂಡನೇ, ಶ್ರೀಕೃಷ್ಣಭಕ್ತನಾದ ನಿನಗೆ ದೇವತೆಗಳ ಚಂಚಲವಾದ ರಾಜ್ಯಸಿರಿಯೇಕೆ? ದೇವತೆಗಳ ರಾಜ್ಯವನ್ನು ಅವರಿಗೇ ಕೊಟ್ಟು ನನ್ನ ಪ್ರೀತಿಗೆ ಪಾತ್ರನಾಗು.

೪೩. ನಿನ್ನ ಸ್ವರಾಜ್ಯಸುಖವನ್ನು ಅನುಭವಿಸಿಕೊಂಡು ನೀನು ಸುಖವಾಗಿರು. ದೇವತೆಗಳು ಅವರವರ ಸ್ಥಾನದಲ್ಲಿ ಸುಖವಾಗಿರಲಿ. ಕಶ್ಯಪನ ವಂಶದಲ್ಲಿಯೇ ಜನಿಸಿ ಸಹೋದರರೆನಿಸಿರುವ ನಿಮ್ಮಲ್ಲಿ ಪರಸ್ಪರದ್ವೇಷವೇಕೆ?

೪೪. ಬ್ರಹ್ಮಹತ್ಯಾದಿ ಸಕಲಪಾಪಗಳೂ ಜ್ಞಾತಿದ್ರೋಹದಿಂದ ಸಂಭವಿಸುವ ಮಹಾಪಾಪದ ಹದಿನಾರನೆಯ ಒಂದಂಶಕ್ಕಿಂತಲೂ ಕಮ್ಮಿಯಾದವು. ಅಂದಮೇಲೆ ಜ್ಞಾತಿದ್ರೋಹವು ಎಂಥ ಉಗ್ರಪಾಪವೆಂಬುದನ್ನು ಯೋಚಿಸು?

ಸ್ವಸಂಪದಾಂ ಚ ಹಾನಿಂ ಚ ಯದಿ ರಾಜೇಂದ್ರ ಮನ್ಯಸೇ ।
ಸರ್ವಾವಸ್ಥಾಸು ಸಮತಾ ಕೇಷಾಂ ಯಾತಿ ಚ ಸರ್ವದಾ ॥ ೪೫ ॥

ಬ್ರಹ್ಮಣಶ್ಚ ತಿರೋಭಾವೋ ಲಯೇ ಪ್ರಾಕೃತಿಕೇ ಸತಿ ।
ಆವಿರ್ಭಾವಃ ಪುನಸ್ತಸ್ಯ ಪ್ರಭವೇದೀಶ್ವರೇಚ್ಛಯಾ ॥ ೪೬ ॥

ಜ್ಞಾನಂ ಬುದ್ಧಿಶ್ಚ ತಪಸಾ ಸ್ಮೃತಿರ್ಲೋಕಸ್ಯ ನಿಶ್ಚಿತಂ ।
ಕರೋತಿ ಸೃಷ್ಟಿಂ ಜ್ಞಾನೇನ ಸ್ರಷ್ಟಾ ಸೋಽಪಿ ಕ್ರಮೇಣ ಚ ॥ ೪೭ ॥

ಪರಿಪೂರ್ಣತಮೋ ಧರ್ಮಃ ಸತ್ಯೇ ಸತ್ಯಾಶ್ರಯಃ ಸದಾ ।
ಸೋಽಪಿ ತ್ರಿಭಾಗಸ್ತ್ರೇತಾಯಾಂ ದ್ವಿಭಾಗೋ ದ್ವಾಪರೇ ಸ್ಮೃತಃ ॥ ೪೮ ॥

ಏಕಭಾಗಃ ಕಲೇಃ ಪೂರ್ವೇ ತದ್ಧ್ರಾಸಶ್ಚ ಕ್ರಮೇಣ ಚ ।
ಕಲಾಮಾತ್ರಂ ಕಲೇಃ ಶೇಷೇ ಕುಹ್ವಾಂ ಚಂದ್ರಕಲಾ ಯಥಾ ॥ ೪೯ ॥

---

೪೫. ಎಲೈ ರಾಜೇಂದ್ರನೇ, ದೇವತೆಗಳ ರಾಜ್ಯವನ್ನು ಹಿಂದಕ್ಕೆ ಕೊಟ್ಟರೆ ನಿನ್ನ ಸಂಪತ್ತೆಲ್ಲ ಕೈಬಿಟ್ಟುಹೋಗುವುದೆಂದು ಚಿಂತಿಸುವೆಯಲ್ಲವೇ? ಯಾರಿಗೆ ತಾನೇ ಎಲ್ಲ ಕಾಲದಲ್ಲೂ ಒಂದೇ ಸಮನಾದ ಸ್ಥಿತಿ ಇರುವುದು ?

೪೬. ಸರ್ವೇಶ್ವರನ ಇಚ್ಛೆಯಂತೆ ಪ್ರಾಕೃತಪ್ರಳಯವುಂಟಾದರೆ ಬ್ರಹ್ಮಾದಿ ಸಕಲಜೀವಿಗಳೂ ಲಯವಾಗುವರು. ಈಶ್ವರೇಚ್ಛೆಯಂತೆ ಪುನಃ ಸಕಲಸೃಷ್ಟಿಯೂ ಆಗುವುದು.

೪೭ ಲೋಕದ ಜನರಿಗೆ ಜ್ಞಾನ, ಬುದ್ಧಿ ಮತ್ತು ಸ್ಮೃತಿಯು ತಪೋಬಲಕ್ಕೆ ಅನುಗುಣವಾಗಿ ಸಿದ್ಧಿಸುವುದು. ಜಗತ್ಸೃಷ್ಟಿಕರ್ತನಾದ ಬ್ರಹ್ಮನೂ ಕೂಡ ತಪೋಬಲದಿಂದ ಜ್ಞಾನಾದಿಗಳನ್ನು ಹೊಂದಿ ಸೃಷ್ಟಿಮಾಡುವನು.

೪೮-೪೯. ಸತ್ಯಯುಗದಲ್ಲಿ ಧರ್ಮವು ಸತ್ಯವನ್ನೇ ಆಶ್ರಯಿಸಿಕೊಂಡು ಪರಿಪೂರ್ಣವಾಗಿದ್ದು, ತ್ರೇತಾಯುಗದಲ್ಲಿ ನಾಲ್ಕರಲ್ಲಿ ಮೂರುಪಾಲೂ, ದ್ವಾಪರ ಯುಗದಲ್ಲಿ ಎರಡುಪಾಲೂ ಇರುವುದು. ಕಲಿಯುಗದ ಆದಿಭಾಗದಲ್ಲಿ ಧರ್ಮವು ನಾಲ್ಕರಲ್ಲಿ ಒಂದುಭಾಗವಿದ್ದು ಕ್ರಮೇಣ ಕಮ್ಮಿಯಾಗಿ ಕೊನೆಗೆ ಅಮಾವಾಸ್ಯೆಯ ಚಂದ್ರನ ಕಲೆಯಂತೆ ಕಣ್ಮರೆಯಾಗುವುದು.

ಯಾದೃಕ್ತೇಜೋ ರವೇರ್ಗ್ರೀಷ್ಮೇ ನ ತಾದೃಕ್ಶಿಶಿರೇ ಪುನಃ ।
ದಿನೇ ಚ ಯಾದೃಙ್ಮಧ್ಯಾಹ್ನೇ ಸಾಯಂ ಪ್ರಾತರ್ನ ತತ್ಸಮಂ　॥ ೫೦ ॥

ಉದಯಂ ಯಾತಿ ಕಾಲೇನ ಬಾಲ್ಯತಾಂ ಚ ಕ್ರಮೇಣ ಚ ।
ಪ್ರಕಾಂಡತಾಂ ಚ ತತ್ಪಶ್ಚಾತ್ಕಾಲೇಽಸ್ತಂ ಪುನರೇವ ಸಃ　॥ ೫೧ ॥

ದಿನೇ ಪ್ರಚ್ಛನ್ನತಾಂ ಯಾತಿ ಕಾಲೇ ವೈ ದುರ್ದಿನೇ ಘನೇ ।
ರಾಹುಗ್ರಸ್ತೇ ಕಂಪಿತಶ್ಚ ಪುನರೇವ ಪ್ರಸನ್ನತಾಂ　॥ ೫೨ ॥

ಪರಿಪೂರ್ಣತಮಶ್ಚಂದ್ರಃ ಪೂರ್ಣಿಮಾಯಾಂ ಚ ಯಾದೃಶಃ ।
ತಾದೃಶೋ ನ ಭವೇನ್ನಿತ್ಯಂ ಕ್ಷಯಂ ಯಾತಿ ದಿನೇ ದಿನೇ　॥ ೫೩ ॥

---

೫೦. ಗ್ರೀಷ್ಮಋತುವಿನಲ್ಲಿ ಸೂರ್ಯನ ತೇಜಸ್ಸು ಪ್ರಖರವಾಗಿರುವಷ್ಟು ಶಿಶಿರಋತುವಿನಲ್ಲಿರುವುದಿಲ್ಲ. ಮಧ್ಯಾಹ್ನದಲ್ಲಿರುವ ಬಿಸಲಿನ ತಾಪವು ಬೆಳಗ್ಗೆ ಮತ್ತು ಸಾಯಂಕಾಲದಲ್ಲಿ ಇರುವುದಿಲ್ಲ.

೫೧. ಸೂರ್ಯನು ಕಾಲನಿಯಮದಂತೆ ಉದಯಿಸಿ, ಬಾಲ್ಯಾವಸ್ಥೆಯಿಂದ ಕ್ರಮವಾಗಿ ವೃದ್ಧಿಹೊಂದಿ, ಮಧ್ಯಾಹ್ನಕ್ಕೆ ಪ್ರಚಂಡನಾಗಿ ಸಾಯಂಕಾಲದಲ್ಲಿ ಅಸ್ತನಾಗುವನು.

೫೨. ದಿಕ್ಕುಗಳೆಲ್ಲ ನಿರ್ಮಲವಾಗಿರುವ ದಿವಸ ತೇಜೋಮಯನಾದ ಸೂರ್ಯನು ಮೇಘಾಚ್ಛಾದಿತವಾದ ದುರ್ದಿನದಲ್ಲಿ ಕಣ್ಮರೆಯಾಗುವನು. ರಾಹುಗ್ರಸ್ತನಾಗಿ ಭಯಕಂಪಿತನಾಗುವ ಸೂರ್ಯನೇ ವಿಮುಕ್ತನಾದಾಗ ಪ್ರಸನ್ನತೆಯನ್ನು ಹೊಂದುವನು.

೫೩. ಚಂದ್ರನು ಪೂರ್ಣಿಮಾದಿವಸ ಪೂರ್ಣಮಂಡಲದಿಂದ ರಾಜಿಸುವಂತೆ ಪ್ರತಿದಿನವೂ ಪ್ರಕಾಶಿಸುವುದಿಲ್ಲ. ಕೃಷ್ಣಪಕ್ಷದಲ್ಲಿ ದಿನದಿನವೂ ಕ್ಷಯಹೊಂದುತ್ತಿರುವನು.

ಪುನಃ ಸ ಪುಷ್ಟತಾಂ ಯಾತಿ ಪರಕುಹ್ವಾ ದಿನೇ ದಿನೇ ।
ಸಂಪದ್ಯುಕ್ತಃ ಶುಕ್ಲಪಕ್ಷೇ ಕೃಷ್ಣೇ ಮ್ಲಾನಶ್ಚ ಯಕ್ಷ್ಮಣಾ ॥ ೫೪ ॥

ರಾಹುಗ್ರಸ್ತೇ ದಿನೇ ಮ್ಲಾನೋ ದುರ್ದಿನೇ ನಿಬಿಡೇ ಘನೇ ।
ಕಾಲೇ ಚಂದ್ರೋ ಭವೇಚ್ಛುದ್ಧೋ ಭ್ರಷ್ಟಶ್ರೀಃ ಕಾಲಭೇದಕೇ ॥ ೫೫ ॥

ಭವಿಷ್ಯತಿ ಬಲಿಶ್ಚೇಂದ್ರೋ ಭ್ರಷ್ಟಶ್ರೀಃ ಸುತಲೇಽಧುನಾ ।
ಕಾಲೇನ ಪೃಥ್ವೀ ಸಸ್ಯಾಢ್ಯಾ ಸರ್ವಾಧಾರಾ ವಸುಂಧರಾ ॥ ೫೬ ॥

ಕಾಲೇ ಜಲೇ ನಿಮಗ್ನಾ ಸಾ ತಿರೋಭೂತಾ ವಿಪದ್ಗತಾ ।
ಕಾಲೇ ನಶ್ಯಂತಿ ವಿಶ್ವಾನಿ ಪ್ರಭವಂತ್ಯೇವ ಕಾಲತಃ ॥ ೫೭ ॥

ಚರಾಚರಾಶ್ಚ ಕಾಲೇನ ನಶ್ಯಂತಿ ಪ್ರಭವಂತಿ ಚ ।
ಈಶ್ವರಸ್ಯೈವ ಸಮತಾ ಕೃಷ್ಣಸ್ಯ ಪರಮಾತ್ಮನಃ ॥ ೫೮ ॥

---

೫೪. ಅಮಾವಾಸ್ಯೆಯು ಕಳೆದನಂತರ ಪುನಃ ಕಳಾಪೂರ್ಣನಾಗುವನು. ಶುಕ್ಲಪಕ್ಷದಲ್ಲಿ ಕ್ರಮವಾಗಿ ಷೋಡಶಕಳಾಪರಿಪೂರ್ಣನಾಗುವ ಚಂದ್ರನೇ ಕೃಷ್ಣಪಕ್ಷದಲ್ಲಿ ಕ್ಷಯರೋಗಿಯಂತೆ ಕ್ಷೀಣಿಸುವನು

೫೫ ರಾತ್ರಿಯಹೊತ್ತು ರಾಹುಗ್ರಸ್ತನಾಗಿ, ಅಥವಾ ಮೇಘಾಚ್ಛಾದಿತನಾಗಿ ಕಾಂತಿಹೀನನಾಗುವ ಚಂದ್ರನೇ ನಿರ್ಮಲಾಕಾಶದಲ್ಲಿ ಕಾಂತಿಪೂರ್ಣನಾಗುವನು.

೫೬-೫೭. ಸುತಲದಲ್ಲಿ ಒಂದಾನೊಂದುಕಾಲದಲ್ಲಿ ಚಕ್ರವರ್ತಿಯಾಗಿದ್ದ ಬಲಿಯು ಈಗ ಸಂಪದ್ರಹಿತನಾಗಿದ್ದಾನೆ. ಸರ್ವಾಧಾರವೂ, ವಸುಂಧರೆಯೂ, ಎನಿಸುವ ಪೃಥಿವಿಯೂ ಕೂಡ ಒಂದುಕಾಲದಲ್ಲಿ ಸಸ್ಯಪರಿಪೂರ್ಣವಾಗಿದ್ದು ಮತ್ತೊಂದು ಕಾಲದಲ್ಲಿ ಜಲಪೂರ್ಣವಾಗಿ ಕಣ್ಮರೆಯಾಗುವುದು. ಅಂತೆಯೇ ನಿಖಿಲಪ್ರಪಂಚವೂ ಕಾಲಾನುಗುಣವಾಗಿ ಉತ್ಪತ್ತಿವಿನಾಶಗಳನ್ನು ಪಡೆಯುವುದು.

೫೮. ಸ್ಥಾವರಜಂಗಮಾತ್ಮಕವಾದ ನಿಖಿಲಪ್ರಪಂಚವೂ ಉತ್ಪತ್ತಿವಿನಾಶಗಳೊಳಗಾಗುವುದು. ಸರ್ವೇಶ್ವರನಾದ ಶ್ರೀಕೃಷ್ಣಪರಮಾತ್ಮನೊಬ್ಬನೇ ಅನಾದ್ಯನಂತನಾಗಿ ಸರ್ವದಾ ವಿಕಾರರಹಿತನಾಗುವನು.

ಅಹಂ ಮೃತ್ಯುಂಜಯೋ ಯಸ್ಮಾದಸಂಖ್ಯಂ ಪ್ರಾಕೃತಂ ಲಯಂ ।
ಅದೃಶ್ಯಂ ಚಾಪಿ ಪಶ್ಯಾಮಿ ವಾರಂ ವಾರಂ ಪುನಃ ಪುನಃ ॥ ೫೯ ॥

ಸ ಚ ಪ್ರಕೃತಿರೂಪಶ್ಚ ಸ ಏವ ಪುರುಷಃ ಸ್ಮೃತಃ ।
ಸ ಚಾತ್ಮಾ ಸರ್ವಜೀವಶ್ಚ ನಾನಾರೂಪಧರಃ ಪರಃ ॥ ೬೦ ॥

ಕರೋತಿ ಸತತಂ ಯೋಹಿ ತನ್ನಾಮಗುಣಕೀರ್ತನಂ ।
ಕಾಲಂ ಮೃತ್ಯುಂ ಸ ಜಯತಿ ಜನ್ಮರೋಗಂ ಜರಾಂ ಭಯಂ ॥ ೬೧ ॥

ಸ್ರಷ್ಟಾ ಕೃತೋ ವಿಧಿಸ್ತೇನ ಪಾತಾ ವಿಷ್ಣುಃ ಕೃತೋ ಭವೇ ।
ಅಹಂ ಕೃತಶ್ಚ ಸಂಹರ್ತಾ ವಯಂ ವಿಷಯಿಣೋ ಯತಃ ॥ ೬೨ ॥

---

೫೯. ನಾನು ಮೃತ್ಯುವನ್ನು ಜಯಿಸಿರುವೆನಾದುದರಿಂದ ಇತರ ದೇವತೆಗಳಾರೂ ನೋಡಲಾಗದ ಅಸಂಖ್ಯಪ್ರಾಕೃತಪ್ರಳಯವನ್ನು ಪುನಃಪುನಃ ನೋಡಬಲ್ಲೆನು.

೬೦. ಶ್ರೀಕೃಷ್ಣಪರಮಾತ್ಮನೇ ಪ್ರಕೃತಿ ಮತ್ತು ಪುರುಷರೂಪನಾಗಿ ತೋರುವನು. ಅಲ್ಲದೆ ವಿಶ್ವಾಧಾರನಾದ ಅವನೇ ಅನೇಕ ರೂಪಧರನಾಗಿ ಜೀವನೆನಿಸಿಕೊಳ್ಳುವನು.

೬೧. ಯಾರು ಆ ಪರಮಾತ್ಮನ ನಾಮರೂಪಗಳ ಸಂಕೀರ್ತನೆಮಾಡವರೋ, ಅವರು ಕಾಲಮೃತ್ಯುಗಳನ್ನೂ, ರೋಗದುಃಖಗಳನ್ನೂ, ಜನ್ಮಜರಾಮರಣಗಳನ್ನೂ ಜಯಿಸಬಲ್ಲರು.

೬೨. ನಾವೆಲ್ಲರೂ ವಿಷಯಾಭಿಲಾಷಿಗಳಾದುದರಿಂದ, ಬ್ರಹ್ಮನನ್ನು ಸೃಷ್ಟಿಕರ್ತನನ್ನಾಗಿಯೂ, ವಿಷ್ಣುವನ್ನು ಪಾಲಕನನ್ನಾಗಿಯೂ, ನನ್ನನ್ನು ಸಂಹಾರಕನನ್ನಾಗಿಯೂ ಪರಮಾತ್ಮನು ನಿಯಮಿಸಿದನು.

ಕಾಲಾಗ್ನಿರುದ್ರಂ ಸಂಹಾರೇ ನಿಯುಜ್ಯ ವಿಷಯೇ ನೃಪ ।
ಅಹಂ ಕರೋಮಿ ಸತತಂ ತನ್ನಾಮ ಗುಣಕೀರ್ತನಂ ॥ ೬೩ ॥

ತೇನ ಮೃತ್ಯುಂಜಯೋಽಹಂ ಚ ಜ್ಞಾನೇನಾನೇನ ನಿರ್ಭಯಃ ।
ಮೃತ್ಯುರ್ಮತ್ತೋ ಭಯಾದ್ಯಾತಿ ವೈನತೇಯಾದಿವೋರಗಃ ॥ ೬೪ ॥

ಇತ್ಯುಕ್ತ್ವಾ ಸ ಚ ಸರ್ವೇಶಃ ಸರ್ವಜ್ಞಃ ಸರ್ವಭಾವನಃ ।
ವಿರರಾಮಾಥ ಶರ್ವಶ್ಚ ಸಭಾಮಧ್ಯೇ ಚ ನಾರದ ॥ ೬೫ ॥

ರಾಜಾ ತದ್ವಚನಂ ಶ್ರುತ್ವಾ ಪ್ರಶಶಂಸ ಪುನಃ ಪುನಃ ।
ಉವಾಚ ಸುಂದರಂ ದೇವಂ ಪರಂ ವಿನಯಪೂರ್ವಕಂ ॥ ೬೬ ॥

॥ ಶಂಖಚೂಡ ಉವಾಚ ॥

ತ್ವಯಾ ಯತ್ಕಥಿತಂ ನಾಥ ಸರ್ವಂ ಸತ್ಯಂ ಚ ನಾನೃತಂ ।
ತಥಾಪಿ ಕಿಂಚಿದ್ಯತ್ಸತ್ಯಂ ಶ್ರೂಯತಾಂ ಮನ್ನಿವೇದನಂ ॥ ೬೭ ॥

---

೬೩. ಆದರೆ ನಾನು ಮಾತ್ರ ಕಾಲಾಗ್ನಿರುದ್ರನನ್ನು ಸಂಹಾರಕಾರ್ಯದಲ್ಲಿ ನಿಯಮಿಸಿ, ಸರ್ವದಾ ಪರಮಾತ್ಮನ ದಿವ್ಯನಾಮವನ್ನು ಸಂಕೀರ್ತನೆಮಾಡುತ್ತಿರುವೆನು.

೬೪. ನಾನು ದಿವ್ಯಜ್ಞಾನವನ್ನು ಪಡೆದಿರುವುದರಿಂದಲೇ ಮೃತ್ಯುವನ್ನು ಜಯಿಸಿ ನಿರ್ಭಯನಾಗಿರುವೆನು. ಮೃತ್ಯುವು ನನ್ನನ್ನು ಕಂಡಾಗ ಗರುಡನನ್ನು ನೋಡಿದ ಹಾವು ದೂರ ಓಡುವಂತೆ ಓಡುವುದು.

೬೫. ನಾರಾಯಣ:—ಎಲೈ ನಾರದನೇ, ಸರ್ವಜ್ಞನೂ, ಸರ್ವೇಶ್ವರನೂ ಆದ ಪರಶಿವನು ಸಭಾಮಧ್ಯದಲ್ಲಿ ಇಂತು ನುಡಿದು ಸುಮ್ಮನಾದನು.

೬೬. ರಾಜನಾದ ಶಂಖಚೂಡನು ಪರಶಿವನ ನುಡಿಯನ್ನು ಕೇಳಿ ಪುನಃ ಪುನಃ ಅವನನ್ನು ಸ್ತುತಿಸುತ್ತ, ವಿನಯಪೂರ್ವಕವಾಗಿ ಈ ರೀತಿ ವಿಜ್ಞಾಪಿಸಿಕೊಂಡನು.

೬೭. ಶಂಖಚೂಡ:—ಎಲೈ ಪ್ರಭುವೇ, ನೀನು ನುಡಿದುದೆಲ್ಲವೂ ಪರಮ ಸತ್ಯವಾದುದು. ಸುಳ್ಳಲ್ಲ. ಆದರೂ ನಾನು ಅರಿತಿರುವ ಕೆಲವು ವಿಷಯಗಳನ್ನು ವಿಜ್ಞಾಪಿಸಿಕೊಳ್ಳುವೆನು. ಅದರ ಸತ್ಯಾಸತ್ಯತೆಯನ್ನು ನೀನೆನಗೆ ತಿಳಿಸು.

ಜ್ಞಾತಿದ್ರೋಹೇ ಮಹತ್ಪಾಪಂ ತ್ವಯೋಕ್ತಮಧುನಾ ತ್ರಯಂ ।
ಗೃಹೀತ್ವಾ ತಸ್ಯ ಸರ್ವಸ್ವಂ ಕುತಃ ಪ್ರಸ್ಥಾಪಿತೋ ಬಲಿಃ ॥ ೬೮ ॥

ಮಯಾ ಸಮುದ್ಧೃತಂ ಸರ್ವಮೈಶ್ವರ್ಯಂ ವಿಕ್ರಮೇಣ ಚ ।
ಸುತಲಾಚ್ಚ ಸಮುದ್ಧರ್ತುಂ ನಾಲಂ ಸೋಽಪಿ ಗದಾಧರಃ ॥ ೬೯ ॥

ಸಭ್ರಾತೃಕೋ ಹಿರಣ್ಯಾಕ್ಷಃ ಕಥಂ ದೇವೈಶ್ಚ ಹಿಂಸಿತಃ ।
ಶುಂಭಾದಯಶ್ಚಾಸುರಾ ವೈ ಕಥಂ ದೇವೈರ್ನಿಪಾತಿತಾಃ ॥ ೭೦ ॥

ಪುರಾ ಸಮುದ್ರಮಥನೇ ಪೀಯೂಷಂ ಭಕ್ಷಿತಂ ಸುರೈಃ ।
ಕ್ಲೇಶಭಾಜೋ ವಯಂ ತತ್ರ ತೈಃ ಸರ್ವಫಲಭಾಜನೈಃ ॥ ೭೧ ॥

ಕ್ರೀಡಾಭಾಂಡಮಿದಂ ವಿಶ್ವಂ ಕೃಷ್ಣಸ್ಯ ಪರಮಾತ್ಮನಃ ।
ಯದಾ ದದಾತಿ ಯಸ್ಮೈ ಸ ತಸ್ಯೈಶ್ವರ್ಯಂ ಭವೇತ್ತದಾ ॥ ೭೨ ॥

---

೬೮. ಜ್ಞಾತಿದ್ರೋಹವು ಮಹಾಪಾಪವೆಂದು ಈಗ ನೀನೇ ಹೇಳಿದೆ. ಹಾಗಿದ್ದರೆ, ಬಲಿಚಕ್ರವರ್ತಿಯು ನಿಮ್ಮ ಜ್ಞಾತಿಯಲ್ಲವೇ? ಅವನ ಸರ್ವಸ್ವವನ್ನೂ ಅಪಹರಿಸಿಕೊಂಡು ಅವನನ್ನು ಎಲ್ಲಿಗೆ ಕಳುಹಿಸಿದಿರಿ?

೬೯. ನಾನು ನನ್ನ ಸ್ವಂತ ಪರಾಕ್ರಮದಿಂದ ಸಕಲಸಂಪತ್ತನ್ನೂ ಸಂಪಾದಿಸಿಕೊಂಡಿರುವೆನು. ಸುತಲದಲ್ಲಿ ತುಳಿದುಹೋಗಿರುವ ಬಲಿಚಕ್ರವರ್ತಿಯ ಐಶ್ವರ್ಯವನ್ನು ಮೇಲಕ್ಕೆತ್ತಲು ಗದಾಧರನಾದ ವಿಷ್ಣುವಿಗೂ ಸಾಧ್ಯವಿಲ್ಲ.

೭೦. ಹಿರಣ್ಯಾಕ್ಷ ಹಿರಣ್ಯಕಶಿಪುಗಳನ್ನು ದೇವತೆಗಳು ಹಿಂಸೆಪಡಿಸಿದುದು ನ್ಯಾಯವೇ? ಶುಂಭಾದಿ ರಾಕ್ಷಸರನ್ನು ದೇವತೆಗಳು ಸಂಹರಿಸಿದುದು ಉಚಿತವೇ?

೭೧. ಹಿಂದೆ ಸಮುದ್ರಮಥನಮಾಡಿದಾಗ ದೇವತೆಗಳು ಅಮೃತವನ್ನು ಪಾನಮಾಡಿದರು. ಸಮುದ್ರಮಥನಕ್ಕಾಗಿ ಹೆಚ್ಚು ಕಷ್ಟಪಟ್ಟವರು ನಾವು. ಫಲಹೊಂದಿದವರು ಅವರು.

೭೨. ಈ ಪ್ರಪಂಚವು ಶ್ರೀಕೃಷ್ಣಪರಮಾತ್ಮನ ಆಟದ ಒಂದು ಕುಡಿಕೆಯಂತಿರುವುದು. ಅವನು ಯಾರಿಗೆ ಯಾವಾಗ ಅನುಗ್ರಹಿಸುವನೋ ಆಗಲೇ ಅವರಿಗೆ ಐಶ್ವರ್ಯವು ಬರುವುದು.

ದೇವದಾನವಯೋರ್ವಾದಃ ಶಶ್ವನ್ನೈಮಿತ್ತಿಕಃ ಸದಾ।
ಪರಾಜಯೋ ಜಯಸ್ತೇಷಾಂ ಕಾಲೇಽಸ್ಮಾಕಂ ಕ್ರಮೇಣ ಚ ॥ ೭೩ ॥

ತತ್ರಾವಯೋರ್ವಿರೋಧೇ ಚ ಗಮನಂ ನಿಷ್ಫಲಂ ತವ।
ಸಮಸಂಬಂಧಿನೋರ್ಬಂಧ್ವೋರೀಶ್ವರಸ್ಯ ಮಹಾತ್ಮನಃ ॥ ೭೪ ॥

ಜಾಯತೇ ಮಹತೀ ಲಜ್ಜಾ ಸ್ಪರ್ಧಾಸ್ಮಾಭಿಃ ಸಹಾಽಧುನಾ।
ತತೋಽಧಿಕಾ ಚ ಸಮರೇ ಕೀರ್ತಿಹಾನಿಃ ಪರಾಜಯೇ ॥ ೭೫ ॥

ಶಂಖಚೂಡವಚಃ ಶ್ರುತ್ವಾ ಪ್ರಹಸ್ಯಾಹ ತ್ರಿಲೋಚನಃ।
ಯಥೋಚಿತಂ ಸುಮಧುರಮತ್ಯುಗ್ರಂ ದಾನವೇಶ್ವರಂ ॥ ೭೬ ॥

---

೭೩. ದೇವದಾನವರಿಗೆ ಪದೇ ಪದೇ ಯಾವದಾದರೊಂದು ನಿಮಿತ್ತದಿಂದ ವಾದವಿವಾದಗಳಿದ್ದೇ ಇರುವುವು. ಇಬ್ಬರಿಗೂ ಕಾಲನುಗುಣವಾಗಿ ಜಯಪರಾಜಯುಗಳೂ ಸಂಭವಿಸುತ್ತಲೇ ಇರುವುವು.

೭೪. ಆದುದರಿಂದ ದೇವದಾನವರ ವಿರೋಧವನ್ನು ತಪ್ಪಿಸಿ ಸಂಧಾನ ಮಾಡಿಸಲು ನೀನು ಬಂದಿರುವುದು ವಿಫಲವಾಗುವುದು. ಶ್ರೀಕೃಷ್ಣಪರಮಾತ್ಮನಿಗೆ ದೇವದಾನವರು ಸಮಾನಬಂಧುಗಳು.

೭೫. ಆದಕಾರಣ ನಮ್ಮೊಡನೆ ನೀನು ಸ್ಪರ್ಧಿಸಲು ಹೊರಟಿರುವುದು ಬಹಳ ಲಜ್ಜಾಸ್ಪದವಾದುದು. ಅಷ್ಟೇ ಅಲ್ಲ. ಯುದ್ಧದಲ್ಲಿ ನೀನೇನಾದರೂ ಸೋತರೆ ಅಪಕೀರ್ತಿಗೂ ಒಳಗಾಗುವೆ.

೭೬. ಶಂಖಚೂಡನಾಡಿದ ಮಾತುಗಳನ್ನು ಕೇಳಿ ತ್ರಿಲೋಚನನು ನಸುನಗುತ್ತ, ಅತ್ಯುಗ್ರನಾದ ಆ ದಾನವೇಶ್ವರನನ್ನು ಕುರಿತು ಕೆಲವು ಹಿತನುಡಿಗಳನ್ನು ಹೇಳಿದನು.

॥ ಶ್ರೀ ಮಹಾದೇವ ಉವಾಚ ॥

ಯುಷ್ಮಾಭಿಃ ಸಹ ಯುದ್ಧಂ ಮೇ ಬ್ರಹ್ಮವಂಶಸಮುದ್ಭವೈಃ ।
ಕಾ ಲಜ್ಜಾ ಮಹತೀ ರಾಜನ್ನಕೀರ್ತಿರ್ವಾ ಪರಾಜಯೇ ॥ ೭೭ ॥

ಯುದ್ಧಮಾದೌ ಹರೇರೇವಮಧುನಾ ಕೈಟಭೇನ ಚ ।
ಹಿರಣ್ಯಕಶಿಪೋಶ್ಚೈವ ಸಹ ತೇನಾತ್ಮನಾ ನೃಪ ॥ ೭೮ ॥

ಹಿರಣ್ಯಾಕ್ಷಸ್ಯ ಯುದ್ಧಂ ಚ ಪುನಸ್ತೇನ ಗದಾಭೃತಾ ।
ತ್ರಿಪುರೈಃ ಸಹ ಯುದ್ಧಂ ಚ ಮಯಾ ಚಾಪಿ ಪುರಾಕೃತಂ ॥ ೭೯ ॥

ಸರ್ವೇಶ್ವರ್ಯಾಃ ಸರ್ವಮಾತುಃ ಪ್ರಕೃತ್ಯಾಶ್ಚ ಬಭೂವ ಹ ।
ಸಹ ಶುಂಭಾದಿಭಿಃ ಪೂರ್ವಂ ಸಮರಂ ಪರಮಾದ್ಭುತಂ ॥ ೮೦ ॥

ಪಾರ್ಷದಪ್ರವರಸ್ತ್ವಂ ಚ ಕೃಷ್ಣಸ್ಯ ಪರಮಾತ್ಮನಃ ।
ಯೇ ಯೇ ಹತಾಶ್ಚ ತೇ ದೈತ್ಯಾ ನ ಹಿ ಕೇಽಪಿ ತ್ವಯಾ ಸಮಾಃ ॥ ೮೧ ॥

---

೭೭. ಶ್ರೀಮಹಾದೇವ :—ಎಲೈ ರಾಜೇಂದ್ರನೇ, ಬ್ರಹ್ಮನ ವಂಶಜರಾದ ನಿಮ್ಮೊಡನೆ ಯುದ್ಧಮಾಡುವದರಿಂದ ನಾಚಿಕೆಯೇನು? ಸೋತರೆ ಅಪಕೀರ್ತಿಯೆಲ್ಲಿಯದು ?

೭೮. ಸೃಷ್ಟಿಯ ಆದಿಯಲ್ಲೇ ಶ್ರೀಹರಿಗೂ ಮಧುಕೈಟಭರಿಗೂ ಯುದ್ಧವಾಯಿತು. ಅನಂತರ ಶ್ರೀಹರಿಯೇ ನೃಸಿಂಹಾವತಾರ ಮಾಡಿ ಹಿರಣ್ಯಕಶಿಪುವಿನೊಡನೆ ಯುದ್ಧಮಾಡಿದನು.

೭೯. ಹಿರಣ್ಯಾಕ್ಷನೆಂಬ ರಾಕ್ಷಸನೊಡನೆಯೂ, ಶ್ರೀಹರಿಯು ಯುದ್ಧಮಾಡಿದನು. ನಾನೂ ಕೂಡ ಹಿಂದೆ ತ್ರಿಪುರಾಸುರನೊಡನೆ ಯುದ್ಧಮಾಡಿದೆನು.

೮೦. ಲೋಕಮಾತೆಯೂ, ಸಕಲೈಶ್ವರ್ಯರೂಪಿಣಿಯೂ ಆದ ಪ್ರಕೃತಿದೇವಿಯೂ ಕೂಡ ಶುಂಭಾದಿರಾಕ್ಷಸರೊಡನೆ ಅತ್ಯದ್ಭುತವಾದ ಯುದ್ಧಮಾಡಿದಳು.

೮೧. ನೀನು ಶ್ರೀಕೃಷ್ಣಪರಮಾತ್ಮನ ಪಾರ್ಷದರಲ್ಲಿ ಶ್ರೇಷ್ಠನಾದವನು. ಮೇಲೆ ಹೇಳಿದ ಯಾವ ರಾಕ್ಷಸರೂ ನಿನಗೆ ಸರಿಸಮಾನರಲ್ಲ.

ಕಾ ಲಜ್ಜಾ ಮಹತೀ ರಾಜನ್ಮಮ ಯುದ್ಧೇ ತ್ವಯಾ ಸಹ ।
ಸುರಾಣಾಂ ಶರಣಸ್ಯೈವ ಪ್ರೇಷಿತಸ್ಯ ಹರೇರಹೋ ॥ ೮೨ ॥

ದೇಹಿ ರಾಜ್ಯಂ ಚ ದೇವಾನಾಂ ವಾಗ್ವ್ಯಯೇ ಕಿಂ ಪ್ರಯೋಜನಂ ।
(ಅಲಂ ಕಲಹಕಾರಣಮಿತಿ ಪಾಠಃ)
ಯುದ್ಧಂ ಮಾ ಕುರು ಮತ್ಸಾರ್ಧಮಿತಿ ಮೇ ನಿಶ್ಚಿತಂ ವಚಃ ॥ ೮೩ ॥

ಇತ್ಯುಕ್ತ್ವಾ ಶಂಕರಸ್ತತ್ರ ವಿರರಾಮ ಚ ನಾರದ ।
ಉತ್ತಸ್ಥೌ ಶಂಖಚೂಡಶ್ಚ ಸ್ವಾಮಾತ್ಯೈಃ ಸಹ ಸತ್ವರಃ ॥ ೮೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದ ನಾರಾಯಣಸಂವಾದೇ ತುಲಸ್ಯುಪಾಖ್ಯಾನೇ ಶಿವಶಂಖಚೂಡ ಸಂವಾದೇ ಅಷ್ಟಾದಶೋಽಧ್ಯಾಯಃ

---

೮೨. ಎಲೈ ಶಂಖಚೂಡನೇ, ನಿನ್ನಿಂದ ಪೀಡಿತರಾದ ದೇವತೆಗಳ ಮರೆಹೊಗಲು, ಶ್ರೀಹರಿಯು ನಿನ್ನೊಡನೆ ಯುದ್ಧಮಾಡಲು ನನ್ನನ್ನು ಕಳುಹಿದನು ಹೀಗಿರುವಾಗ ನನಗೇಕೆ ನಾಚಿಕೆ?

೮೩. ಆದಕಾರಣ ನ್ಯಾಯವಾಗಿ ದೇವತೆಗಳ ರಾಜ್ಯವನ್ನು ಅವರಿಗೆ ಕೊಟ್ಟುಬಿಡು. ಬರಿಮಾತಿನಿಂದ ಪ್ರಯೋಜನವಿಲ್ಲ. ನನ್ನ ಮಾತಿನಂತೆ ಅವರ ರಾಜ್ಯವನ್ನು ಅವರಿಗೆ ಹಿಂದಕ್ಕೆ ಕೊಟ್ಟರೆ ನಮ್ಮಿಬ್ಬರಿಗೆ ಯುದ್ಧವೇ ಸಂಭವಿಸುವುದಿಲ್ಲ. ಇದು ನಿಶ್ಚಯ.

೮೪. ಎಲೈ ನಾರದನೇ, ಶಂಕರನು ಈ ರೀತಿ ಹೇಳಿ ಸುಮ್ಮನಾದನು. ಆದರೂ ಶಂಖಚೂಡನು ತನ್ನ ಮಂತ್ರಿಗಳೊಡನೆ ಆಲೋಚಿಸಿ ಯುದ್ಧಕ್ಕೆ ಸಿದ್ಧನಾದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಶಿವಶಂಖಚೂಡರ ಸಂವಾದರೂಪವಾದ ಹದಿನೆಂಟನೆಯ ಅಧ್ಯಾಯವು ಮುಗಿದುದು.

ಹದಿನೆಂಟನೆಯ ಅಧ್ಯಾಯದ ಸಾರಾಂಶವು

ಮರುದಿನ ಶಂಖಚೂಡನು ಬ್ರಾಹ್ಮಮುಹೂರ್ತದಲ್ಲೆದ್ದು, ಮಂಗಳಸ್ನಾನ ಮಾಡಿ, ಶುಭ್ರವಸ್ತ್ರಧರನಾಗಿ, ದೇವಗುರುವಂದನೆಗಳನ್ನು ಮಾಡಿ, ಕೋಶದಲ್ಲಿರುವ ದ್ರವ್ಯಾಭರಣಗಳನ್ನೆಲ್ಲ ಬ್ರಾಹ್ಮಣರಿಗೆ ದಾನಮಾಡಿ, ಅಸಂಖ್ಯಸೇನೆಯೊಡನೆ ಯುದ್ಧ ಸನ್ನದ್ಧನಾಗಿ ಹೊರಟನು. ಪುಷ್ಪಭದ್ರಾನದಿಯ ವಟವೃಕ್ಷದ ಕೆಳಗೆ ಭದ್ರಕಾಳಿ ಮತ್ತು ಷಣ್ಮುಖನೊಡನೆ ಸುಖಾಸೀನನಾಗಿರುವ ಶಂಕರನನ್ನು ಕಂಡು ಭಕ್ತಿಯಿಂದ ವಂದಿಸಿ ಆಶೀರ್ವಾದ ಪಡೆದನು. ಅನಂತರ ಶಂಕರನು ಶಂಖಚೂಡನ ಜನ್ಮಾಂತರದ ಕಥೆಯನ್ನೆಲ್ಲ ವಿವರಿಸಿ, ದೇವತೆಗಳೂದಾನವರೂ ಜ್ಞಾತಿಗಳಾದುದರಿಂದಲೂ, ಜ್ಞಾತಿದ್ರೋಹಮಾಡಿದರೆ ಮಹಾಪಾಪಸಂಭವಿಸುವುದರಿಂದಲೂ, ದೇವತೆಗಳ ರಾಜ್ಯ ವನ್ನು ಅವರಿಗೇ ಕೊಡುವುದುಚಿತವೆಂದು ತಿಳಿಸಿದನು. ಹಾಗಾದರೆ ದೇವತೆಗಳು ಹಿರಣ್ಯಾಕ್ಷನೇ ಮುಂತಾದ ರಾಕ್ಷಸರನ್ನು ಸಂಹರಿಸಿದುದೂ, ಸಮುದ್ರಮಥನ ಮಾಡಿದ ಮೇಲೆ ರಾಕ್ಷಸರಿಗೆ ಅಮೃತವನ್ನು ಕೊಡದೆ ವಂಚನೆಮಾಡಿದುದೂ ಅಯುಕ್ತ ವಾಗುವುದೆಂದು ತಿಳಿಸಿ, ಕಾಲಾನುಗುಣವಾಗಿ ಜ್ಞಾತಿಗಳೂ ಕಾದಾಡಿ ಜಯಾಪಜಯ ಗಳನ್ನು ಪಡೆಯಬೇಕಾಗುವುದೆಂದು ಶಂಖಚೂಡನು ಸ್ಪಷ್ಟಪಡಿಸಿದನು. ಅಲ್ಲದೆ ಪರಶಿವನನ್ನು ಕುರಿತು 'ನಾನು ದೇವತೆಗಳಿಗೆ ರಾಜ್ಯವನ್ನು ಕೊಡುವುದಿಲ್ಲ. ನಿನ್ನ ಸಂಧಾನವು ನಿಷ್ಫಲವಾಗುವುದಲ್ಲದೆ, ನೀನು ನನ್ನೊಡನೆ ಯುದ್ಧಮಾಡಿ ಘೋರತರ ಅಪಕೀರ್ತಿಗೊಳಗಾಗುವೆ. ಆದಕಾರಣ ನೀನು ಹಿಂತಿರುಗು' ಎಂದು ಹೇಳಿದನು. ಅನಂತರ ಶಂಕರನು 'ಎಲೈ ದಾನವೋತ್ತಮನೇ, ಶ್ರೀಹರಿಯು ಹಿರಣ್ಯಾಕ್ಷಾದಿ ದಾನವರೊಡನೆ ಯುದ್ಧಮಾಡಿ ಗೆದ್ದಿರುವಾಗ ಬ್ರಹ್ಮವಂಶಜನಾದ ನಿನ್ನೊಡನೆ ನಾನು ಯುದ್ಧಮಾಡುವುದರಿಂದ ಯಾವ ಅಪಕೀರ್ತಿಯೂ ಉಂಟಾಗುವುದಿಲ್ಲ. ನ್ಯಾಯ ವಾಗಿ ದೇವತೆಗಳ ರಾಜ್ಯವನ್ನು ಅವರಿಗೆ ಬಿಟ್ಟುಕೊಡದಿದ್ದರೆ ನಾನು ನಿನ್ನೊಡನೆ ಯುದ್ಧಮಾಡಲೇ ಬೇಕಾಗುವುದು' ಎಂದನು. ಕೂಡಲೇ ಶಂಖಚೂಡನು ತನ್ನ ಮಂತ್ರಿಗಳೊಡನೆ ಪರ್ಯಾಲೋಚಿಸಿ ಯುದ್ಧಕ್ಕೆ ಸಿದ್ಧನಾದನು.

—|| ೭೭ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕೋನವಿಂಶೋಽಧ್ಯಾಯಃ ||

|| ನಾರಾಯಣ ಉವಾಚ ||

ಶಿವಂ ಪ್ರಣಮ್ಯ ಶಿರಸಾ ದಾನವೇಂದ್ರಃ ಪ್ರತಾಪವಾನ್ ।
ಸಮಾರುರೋಹ ಯಾನಂ ಚ ಸ್ವಾಮಾತ್ಯೈಃ ಸಹ ಸತ್ವರಃ || ೧ ||

ಬಭೂವುಸ್ತೇ ಚ ಸಂಕ್ಷುಬ್ಧಾಃ ಸ್ಕಂದಶಕ್ತ್ಯಾರ್ದಿತಾಸ್ತದಾ ।
ನೇದುರ್ದುಂದುಭಯಃ ಸ್ವರ್ಗೇ ಪುಷ್ಪವೃಷ್ಟಿರ್ಬಭೂವ ಹ || ೨ ||

ಹತ್ತೊಂಭತ್ತನೆಯ ಅಧ್ಯಾಯವು

೧. ನಾರಾಯಣ :—ಪ್ರತಾಪಶಾಲಿಯಾದ ದಾನವನು ಶಿವನಿಗೆ ತಲೆಬಾಗಿ ವಂದಿಸಿ, ತನ್ನ ಮಂತ್ರಿಗಳೊಡಗೂಡಿ ಜಾಗ್ರತೆ ಯುದ್ಧಯಾನದಲ್ಲಿ ಕುಳಿತನು.

೨. ಅನಂತರ ಎಲ್ಲರೂ ಈಶ್ವರನ ಸೇನೆಯನ್ನು ಎದುರಿಸಲು ಹೋಗಿ ಷಣ್ಮುಖನೊಬ್ಬನನ್ನೇ ಎದುರಿಸಲಾರದೆ ಭಯಭೀತರಾದರು. ಆಗ ಸ್ವರ್ಗದಲ್ಲಿ ನಗಾರಿಗಳ ಧ್ವನಿಯೂ, ಪುಷ್ಪವೃಷ್ಟಿಯೂ ಆಯಿತು.

ಸ್ಕಂದಸ್ಯೋಪರಿ ತತ್ರೈವ ಸಮರೇ ಚ ಭಯಂಕರೇ ।
ಸ್ಕಂದಸ್ಯ ಸಮರಂ ದೃಷ್ಟ್ವಾ ಮಹದದ್ಭುತಮುಲ್ಬಣಂ ॥ ೩ ॥

ದಾನವಾನಾಂ ಕ್ಷಯಕರಂ ಯಥಾ ಪ್ರಾಕೃತಿಕಂ ಲಯಂ ।
ರಾಜಾ ವಿಮಾನಮಾರುಹ್ಯ ಶರವರ್ಷಂ ಚಕಾರ ಹ ॥ ೪ ॥

ನೃಪಸ್ಯ ಶರವೃಷ್ಟಿಶ್ಚ ಘನವೃಷ್ಟಿರ್ಯಥಾ ತಥಾ ।
ಮಹಾಘೋರಾಂಧಕಾರಶ್ಚ ವಹ್ನ್ಯುತ್ಥಾನಂ ಬಭೂವ ಹ ॥ ೫ ॥

ದೇವಾಃ ಪ್ರದುದ್ರುವುಶ್ಚಾನ್ಯೇ ಸರ್ವೇ ನಂದೀಶ್ವರಾದಯಃ ।
ಏಕಾಕೀ ಕಾರ್ತಿಕೇಯಸ್ತು ತಸ್ಥೌ ಸಮರಮೂರ್ಧನಿ ॥ ೬ ॥

ಪರ್ವತಾನಾಂ ಚ ಸರ್ಪಾಣಾಂ ಶಿಲಾನಾಂ ಶಾಖಿನಾಂ ತಥಾ ।
ಶಶ್ವಚ್ಚಕಾರ ವೃಷ್ಟಿಂ ಚ ದುರ್ವಾಹ್ಯಾಂ ಚ ಭಯಂಕರೀಂ ॥ ೭ ॥

೩-೪. ಪ್ರಾಕೃತಪ್ರಳಯದಂತೆ ಭಯಂಕರವೂ, ಅತ್ಯಾಶ್ಚರ್ಯಕರವೂ, ದಾನವನಾಶಕವೂ ಆದ ಷಣ್ಮುಖನ ಯುದ್ಧಕೌಶಲ್ಯವನ್ನು ನೋಡಿ, ಶಂಖಚೂಡನೂ ವಿಮಾನಾರೂಢನಾಗಿ ಬಾಣವೃಷ್ಟಿಯನ್ನು ಸುರಿಸಲಾರಂಭಿಸಿದನು.

೫. ಶಂಖಚೂಡನು ಸುರಿಸಿದ ಬಾಣವೃಷ್ಟಿಯು ಕಾರ್ಮೋಡದ ವೃಷ್ಟಿಯಂತೆ ಸರ್ವದಾ ಗಾಢಾಂಧಕಾರವನ್ನು ಪಸರಿಸುತ್ತ ಗಾಳಿಯನ್ನೆಬ್ಬಿಸಿತು.

೬. ಆಗ ನಂದೀಶ್ವರನೇ ಮುಂತಾದ ಈಶ್ವರನ ಪರಿವಾರದೇವತೆಗಳು ಆ ಬಾಣವೃಷ್ಟಿಯನ್ನು ಸಹಿಸಲಾರದೆ ಪಲಾಯನಮಾಡಿದರು. ಷಣ್ಮುಖನೊಬ್ಬನೇ ಯುದ್ಧಾಂಕಣದಲ್ಲಿ ನಿಂತು ಅದನ್ನು ಎದುರಿಸಿದನು.

೭. ಅನಂತರ ಶಂಖಚೂಡನು ಅತಿಭಯಂಕರವೂ, ಅಪ್ರತಿಹತವೂ, ಆದ ಯುದ್ಧವನ್ನು ಪ್ರಾರಂಭಿಸಿದನು. ಪರ್ವತದ ಬಂಡೆಗಳನ್ನೂ ದೊಡ್ಡ ದೊಡ್ಡ ಮರಗಳನ್ನೂ, ಸರ್ಪಗಳನ್ನೂ ಧಾರಾಕಾರವಾಗಿ ಸುರಿಸಿದನು.

ನೃಪಸ್ಯ ಶರವೃಷ್ಟ್ಯಾ ಚ ಪ್ರಚ್ಛನ್ನಃ ಶಿವನಂದನಃ ।
ನೀರದೇನ ಚ ಸಾಂದ್ರೇಣ ಸಂಚ್ಛನ್ನೋ ಭಾಸ್ಕರೋ ಯಥಾ ॥ ೮ ॥

ಧನುಸ್ಸ್ಕಂದಸ್ಯ ಚಿಚ್ಛೇದ ದುರ್ವಹಂ ಚ ಭಯಂಕರಂ ।
ಬಭಂಜ ಚ ರಥಂ ದಿವ್ಯಂ ಚಿಚ್ಛೇದ ರಥಘೋಟಕಾನ್ ॥ ೯ ॥

ಮಯೂರಂ ಜರ್ಝರೀಭೂತಂ ದಿವ್ಯಾಸ್ತ್ರೇಣ ಚಕಾರ ಸಃ ।
ಶಕ್ತಿಂ ಚಿಕ್ಷೇಪ ಸೂರ್ಯಾಭಾಂ ತಸ್ಯ ವಕ್ಷೋವಿಭೇದಿನೀಂ ॥ ೧೦ ॥

ಕ್ಷಣಂ ಮೂರ್ಛಾಂ ಚ ಸಂಪ್ರಾಪ್ಯ ಚೇತನಾಮುಪಲಭ್ಯ ಸಃ ।
ಗೃಹೀತ್ವಾನ್ಯದ್ಧನುರ್ದಿವ್ಯಂ ಯದ್ದತ್ತಂ ವಿಷ್ಣುನಾ ಪುರಾ ॥ ೧೧ ॥

ರತ್ನೇಂದ್ರಸಾರಖಚಿತಂ ಯಾನಮಾರುಹ್ಯ ಚಾಗ್ನಿಭೂಃ ।
ಶಸ್ತ್ರಮಸ್ತ್ರಂ ಗೃಹೀತ್ವಾ ಚ ಚಕಾರ ರಣಮುಲ್ಬಣಂ ॥ ೧೨ ॥

---

೮. ಶಂಖಚೂಡನ ಬಾಣವರ್ಷದಿಂದ ಮುಚ್ಚಿಹೋದ ಷಣ್ಮುಖನು ಸಾಂದ್ರವಾದ ನೀಲಮೇಘದಿಂದ ಆವೃತನಾದ ಸೂರ್ಯನಂತೆ ತೇಜೋಹೀನನಾದನು.

೯. ಅತಿಭಾರವೂ, ಅತ್ಯಂತ ಭಯಂಕರವೂ, ಆದ ಷಣ್ಮುಖನ ಧನುಸ್ಸನ್ನೂ ದಿವ್ಯವಾದ ರಥವನ್ನೂ, ರಥಾಶ್ವಗಳನ್ನೂ, ಶಂಖಚೂಡನು ಕತ್ತರಿಸಿದನು.

೧೦. ಅಲ್ಲದೆ ತನ್ನ ದಿವ್ಯಾಸ್ತ್ರದಿಂದ ಅವನ ರಥದ ಧ್ವಜವಾದ ನವಿಲನ್ನು ಪುಡಿಪುಡಿಮಾಡಿದನು. ಅನಂತರ ಸೂರ್ಯನಂತೆ ಪ್ರಜ್ವಲಿಸುವ ಶಕ್ತ್ಯಾಯುಧವನ್ನು ಪ್ರಯೋಗಿಸಿ ಷಣ್ಮುಖನ ಎದೆಯನ್ನು ಭೇದಿಸಿದನು.

೧೧-೧೨. ಅದರಿಂದ ಕ್ಷಣಕಾಲ ಮೂರ್ಛೆಗೊಂಡು ಚೇತನವನ್ನು ಹೊಂದಿದ ಷಣ್ಮುಖನು ವಿಷ್ಣುದತ್ತವಾದ ದಿವ್ಯಧನುಸ್ಸೊಂದನ್ನು ತೆಗೆದುಕೊಂಡು, ರತ್ನನಿರ್ಮಿತವಾದ ರಥವನ್ನು ಹತ್ತಿ, ಧನುಸ್ಸಿನಲ್ಲಿ ಬಾಣವನ್ನು ಹೂಡಿ ಅತಿಭಯಂಕರವಾಗಿ ಯುದ್ಧಮಾಡಲಾರಂಭಿಸಿದನು.

ಸರ್ಪಾಂಶ್ಚ ಪರ್ವತಾಂಶ್ಚೈವ ವೃಕ್ಷಾಂಶ್ಚ ಪ್ರಸ್ತರಾಂಸ್ತಥಾ ।
ಸರ್ವಾಂಶ್ಚಿಚ್ಛೇದ ಕೋಪೇನ ದಿವ್ಯಾಸ್ತ್ರೇಣ ಶಿವಾತ್ಮಜಃ ॥ ೧೩ ॥

ಆಗ್ನೇಯಂ ವಾರುಣಾಸ್ತ್ರೇಣ ವಾರಯಾಮಾಸ ವೈ ಗುಹಃ ।
ರಥಂ ಧನುಶ್ಚ ಚಿಚ್ಛೇದ ಶಂಖಚೂಡಸ್ಯ ಲೀಲಯಾ ॥ ೧೪ ॥

ಸವಾಹಂ ಸಾರಥಿಂ ಚೈವ ಕಿರೀಟಂ ಮುಕುಟೋಜ್ಜ್ವಲಂ ।
ಚಿಕ್ಷೇಪ ಶಕ್ತಿಮುಲ್ಕಾಭಾಂ ದಾನವೇಂದ್ರಸ್ಯ ವಕ್ಷಸಿ ॥ ೧೫ ॥

ಮೂರ್ಛಾಂ ಸಂಪ್ರಾಪ್ಯ ರಾಜೋಽಪಲಭ್ಯ ವೈ ಚೇತನಾಂ ಪುನಃ ।
ಆರುಹ್ಯ ವೈ ಯಾನಮನ್ಯಂ ಧನುರ್ಜಗ್ರಾಹ ಸತ್ವರಃ ॥ ೧೬ ॥

---

೧೩. ತನ್ನ ದಿವ್ಯಾಸ್ತ್ರಗಳ ಸಮೂಹದಿಂದ ಶಂಖಚೂಡನ ಸರ್ಪಾಸ್ತ್ರ, ವೃಕ್ಷಾಸ್ತ್ರ ಮತ್ತು ಪರ್ವತಾಸ್ತ್ರಗಳನ್ನು ಶಿವನ ಪುತ್ರನಾದ ಕಾರ್ತಿಕೇಯನು ಕತ್ತರಿಸಿ ಬಿಸುಟನು.

೧೪. ಆಗ ಇಬ್ಬರಿಗೂ ಯುದ್ಧದಲ್ಲಿ ಪೈಪೋಟಿಗಾರಂಭವಾಯಿತು. ಶಂಖಚೂಡನು ಪ್ರಯೋಗಿಸಿದ ಆಗ್ನೇಯಾಸ್ತ್ರವನ್ನು ಷಣ್ಮುಖನು ವಾರುಣಾಸ್ತ್ರದಿಂದ ಪ್ರಶಮನಗೊಳಿಸಿ, ಅವನ ರಥವನ್ನೂ, ಧನುಸ್ಸನ್ನೂ ಲೀಲೆಯಿಂದಲೇ ಕತ್ತರಿಸಿದನು.

೧೫. ರಥಾಶ್ವಗಳನ್ನೂ, ಸಾರಥಿಯನ್ನೂ, ತೇಜೋಮಯವಾದ ಕಿರೀಟವನ್ನೂ ಕತ್ತರಿಸಿ, ಉರಿಯುತ್ತಿರುವ ಕೊಳ್ಳಿಯಂತೆ ಭಯಂಕರವಾದ ಶಕ್ತ್ಯಾಯುಧದಿಂದ ಶಂಖಚೂಡನ ಎದೆಗೆ ಗುರಿಯಿಟ್ಟು ಹೊಡೆದನು.

೧೬. ಆ ಶಕ್ತ್ಯಾಯುಧದ ಏಟಿನಿಂದ ಶಂಖಚೂಡನು ಕ್ಷಣಕಾಲ ಮೂರ್ಛೆಗೊಂಡು, ಸ್ವಲ್ಪಹೊತ್ತಿನ ಮೇಲೆ ಚೇತನವನ್ನು ಪಡೆದು, ಮತ್ತೊಂದು ರಥವನ್ನು ಹತ್ತಿ ಜಾಗ್ರತೆಯಾಗಿ ಧನುರ್ಬಾಣಗಳನ್ನು ಹಿಡಿದನು.

ಚಕಾರ ಶರಜಾಲಂ ಚ ಮಾಯಯಾ ಮಾಯಿನಾಂ ವರಃ ।
ಗುಹಂ ಚಾಚ್ಛಾದ್ಯ ಸಮರೇ ಶರಜಾಲೇನ ನಾರದ ॥ ೧೭ ॥

ಜಗ್ರಾಹ ಶಕ್ತಿಮವ್ಯರ್ಥಾಂ ಶತಸೂರ್ಯಸಮಪ್ರಭಾಂ ।
ಪ್ರಲಯಾಗ್ನಿಶಿಖಾರೂಪಾಂ ವಿಷ್ಣೋರ್ವೈ ತೇಜಸಾವೃತಾಂ ॥ ೧೮ ॥

ಚಿಕ್ಷೇಪ ತಾಂ ಚ ಕೋಪೇನ ಮಹಾವೇಗೇನ ಕಾರ್ತಿಕೇ ।
ಪಪಾತ ಶಕ್ತಿಸ್ತದ್ಗಾತ್ರೇ ವಹ್ನಿರಾಶಿರಿವೋಜ್ಜ್ವಲಾ ॥ ೧೯ ॥

ಮೂರ್ಛಾಂ ಸಂಪ್ರಾಪ ಶಕ್ತ್ಯಾ ಚ ಕಾರ್ತಿಕೇಯೋ ಮಹಾಬಲಃ ।
ಕಾಲೀ ಗೃಹೀತ್ವಾ ತಂ ಕ್ರೋಡೇ ನಿನಾಯ ಶಿವಸನ್ನಿಧೌ ॥ ೨೦ ॥

ಶಿವಸ್ತಂ ದರ್ಶನಾದೇವ ಜೀವಯಾಮಾಸ ಲೀಲಯಾ ।
ದದೌ ಬಲಮನಂತಂ ಚ ಸಚೋತ್ತಸ್ಥೌ ಪ್ರತಾಪವಾನ್ ॥ ೨೧ ॥

೧೭-೧೯. ಮಾಯಾವಿಗಳಲ್ಲಿ ಶ್ರೇಷ್ಠನಾದ ಆ ಶಂಖಚೂಡನು ಮಾಯಾ ಮಹಿಮೆಯಿಂದ ಬಾಣಸಮೂಹವನ್ನು ಕಲ್ಪಿಸಿ, ಅವುಗಳ ಪ್ರಯೋಗದಿಂದ ಷಣ್ಮುಖನನ್ನು ಮುಚ್ಚಿದನು. ಅಲ್ಲದೆ ಶತಸೂರ್ಯರಂತೆ ತೇಜೋಮಯವೂ, ಪ್ರಲಯಾಗ್ನಿಯಂತೆ ಜಾಜ್ವಲ್ಯಮಾನವೂ, ವಿಷ್ಣುತೇಜಸ್ಸಿನಂತೆ ಅಪ್ರತಿಹತವೂ ಆದ ಶಕ್ತ್ಯಾಯುಧವನ್ನು ತೆಗೆದುಕೊಂಡು ಷಣ್ಮುಖನ ಮೇಲೆ ಪ್ರಯೋಗಿಸಲು, ಆ ಶಕ್ತಿಯು ಷಣ್ಮುಖನ ದೇಹವನ್ನು ಅಂಗಾರದಂತೆ ಸುಡಲಾರಂಭಿಸಿತು.

೨೦. ಅಪ್ರತಿಮವೀರನಾದ ಕಾರ್ತಿಕೇಯನೂ ಕೂಡ ಆ ಶಕ್ತ್ಯಾಯುಧದ ಪ್ರಭಾವವನ್ನು ಸಹಿಸಲಾರದೆ ಮೂರ್ಛೆಗೊಂಡನು. ಕೂಡಲೇ ಕಾಳಿಕಾದೇವಿಯು ಅವನನ್ನು ಎದೆಗೆ ಅಪ್ಪಿಕೊಂಡು ಶಿವನ ಸಮೀಪಕ್ಕೆ ಕರೆತಂದಳು.

೨೧. ನೋಡಿದ ಮಾತ್ರದಿಂದಲೇ ಶಿವನು ಅವನನ್ನು ಪ್ರತ್ಯುಜ್ಜೀವನಗೊಳಿಸಿ ಅವನಿಗೆ ಅಪರಿಮಿತ ಬಲವನ್ನು ಅನುಗ್ರಹಿಸಿದನು. ಆಗ ಷಣ್ಮುಖನು ಪ್ರತಾಪಯುತನಾಗಿ ಮೇಲಕ್ಕೆದ್ದನು.

ಶಿವಃ ಸ್ವಸೈನ್ಯಂ ದೇವಾಂಶ್ಚ ಪ್ರೇರಯಾಮಾಸ ಸತ್ವರಃ ।
ದಾನವೇಂದ್ರೈಃ ಸಸೈನ್ಯೈಶ್ಚ ಯುದ್ಧಾರಂಭೋ ಬಭೂವ ಹ ॥ ೨೨ ॥

ಸ್ವಯಂ ಮಹೇಂದ್ರೋ ಯುಯುಧೇ ಸಾರ್ಧಂ ಚ ವೃಷಪರ್ವಣಾ ।
ಭಾಸ್ಕರೋ ಯುಯುಧೇ ವಿಪ್ರಚಿತ್ತಿನಾ ಸಹ ಸತ್ವರಃ ॥ ೨೩ ॥

ದಂಭೇನ ಸಹ ಚಂದ್ರಶ್ಚ ಚಕಾರ ಸಮರಂ ಪರಂ ।
ಕಾಲೇಶ್ವರೇಣ ಕಾಲಶ್ಚ ಗೋಕರ್ಣೇನ ಹುತಾಶನಃ ॥ ೨೪ ॥

ಕುಬೇರಃ ಕಾಲಕೇಯೇನ ವಿಶ್ವಕರ್ಮಾ ಮಯೇನ ಚ ।
ಭಯಂಕರೇಣ ಮೃತ್ಯುಶ್ಚ ಸಂಹಾರೇಣ ಯಮಸ್ತಥಾ ॥ ೨೫ ॥

ಕಲವಿಂಕೇನ ವರುಣಶ್ಚಂಚಲೇನ ಸಮೀರಣಃ ।
ಬುಧಶ್ಚ ಘೃತಪುಷ್ಪೇನ ರಕ್ತಾಕ್ಷೇಣ ಶನೈಶ್ಚರಃ ॥ ೨೬ ॥

---

೨೨. ಅನಂತರ ದೇವತೆಗಳೆಲ್ಲರೂ ಸೈನ್ಯಸಮೇತ ಯುದ್ಧಕ್ಕೆ ಹೋಗುವಂತೆ ಶಿವನು ಪ್ರೇರಿಸಿದನು. ಅದರಂತೆ ಸೈನ್ಯಸಮೇತರಾಗಿ ಹೊರಟ ದೇವತೆಗಳಿಗೂ, ದಾನವರಿಗೂ ಪುನಃ ಯುದ್ಧವು ಪ್ರಾರಂಭವಾಯಿತು.

೨೩. ದೇವೇಂದ್ರನು ವೃಷಪರ್ವನೆಂಬ ದಾನವನೊಡನೆಯೂ, ಸೂರ್ಯನು ವಿಪ್ರಚಿತ್ತಿಯೆಂಬ ದಾನವನೊಡನೆಯೂ ಕದನವಾಡಲಾರಂಭಿಸಿದರು.

೨೪. ದಂಭಾಸುರನೊಡನೆ ಚಂದ್ರನೂ, ಕಾಲೇಶ್ವರನೊಡನೆ ಯಮನೂ, ಗೋಕರ್ಣನೊಡನೆ ಅಗ್ನಿದೇವನೂ ಘೋರವಾದ ಯುದ್ಧಮಾಡಿದರು.

೨೫–೨೬. ಕುಬೇರನು ಕಾಲಕೇಯನೊಡನೆಯೂ, ವಿಶ್ವಕರ್ಮನು ಮಯನೊಡನೆಯೂ, ಮೃತ್ಯುವು ಭಯಂಕರನೆಂಬ ದಾನವನೊಡನೆಯೂ, ಯಮನು ಸಂಹಾರನೆಂಬುವನ ಜತೆಯಲ್ಲೂ, ವರುಣನು ಕಲವಿಂಕನೊಡನೆಯೂ, ವಾಯುದೇವನು ಚಂಚಲನೊಡನೆಯೂ, ಬುಧನು ಘೃತಪುಷ್ಪನೊಡನೆಯೂ, ಶನೀಶ್ವರನು ರಕ್ತಾಕ್ಷನೊಡನೆಯೂ ಘೋರಯುದ್ಧಮಾಡಿದರು.

ಜಯಂತೋ ರತ್ನಸಾರೇಣ ವಸವೋ ವರ್ಚಸಾಂಗಣೈಃ ।
ಅಶ್ವಿನೌ ವೈ ದೀಪ್ತಿಮತಾ ಧೂಮ್ರೇಣ ನಲಕೂಬರಃ ॥ ೨೭ ॥

ಧನುರ್ಧರೇಣ ಧರ್ಮಶ್ಚ ಮಂಡೂಕಾಕ್ಷೇಣ ಮಂಗಲಃ ।
ಶೋಭಾಕರೇಣೈವೇಶಾನಃ ಪಿಠರೇಣ ಚ ಮನ್ಮಥಃ ॥ ೨೮ ॥

ಉಲ್ಕಾಮುಖೇನ ಧೂಮ್ರೇಣ ಖಡ್ಗೇನಾಪಿ ಧ್ವಜೇನ ಚ ।
ಕಾಂಚೀಮುಖೇನ ಪಿಂಡೇನ ಧೂಮ್ರೇಣ ಸಹ ನಂದಿನಾ ॥ ೨೯ ॥

ವಿಶ್ವೇನ ಚ ಪಲಾಶೇನ ಚಾದಿತ್ಯಾ ಯುಯುಧುಃ ಪರಂ ।
ಏಕಾದಶಮಹಾರುದ್ರಾಶ್ಚೈಕಾದಶಭಯಂಕರೈಃ ॥ ೩೦ ॥

ಮಹಾಮಾರೀ ಚ ಯುಯುಧೇ ಚೋಗ್ರದಂಡಾಧಿಭಿಃ ಸಹ ।
ನಂದೀಶ್ವರಾದಯಃ ಸರ್ವೇ ದಾನವಾನಾಂ ಗಣೈಃ ಸಹ ॥ ೩೧ ॥

೨೭-೨೮. ಜಯಂತ-ರತ್ನಸಾರ, ಅಷ್ಟವಸುಗಳು-ವರ್ಚಸರು, ಅಶ್ವಿನೀ ಕುಮಾರರು-ದೀಪ್ತಿಮಂತ, ನಲಕೂಬರ-ಧೂಮ್ರ, ಧರ್ಮ-ಧನುರ್ಧಾರಿ, ಮಂಗಲ ಮಂಡೂಕಾಕ್ಷ, ಈಶಾನ-ಶೋಭಾಕರ, ಮನ್ಮಥ-ಪಿಠರರೆಂಬ ದೇವದಾನವದ್ವಂದ್ವಕ್ಕೆ ಘೋರಯುದ್ಧವಾಯಿತು.

೨೯-೩೦. ಉಲ್ಕಾಮುಖ, ಧೂಮ್ರ, ಖಡ್ಗ, ಧ್ವಜ, ಕಾಂಚೀಮುಖ, ಪಿಂಡ, ಧೂಮ್ರ, ನಂದಿ ಮತ್ತು ಪಲಾಶ ಮುಂತಾದ ದಾನವರೊಡನೆ ದ್ವಾದಶಾದಿತ್ಯರು ಘೋರಯುದ್ಧಮಾಡಿದರು. ಏಕಾದಶರುದ್ರರೂ ಕೂಡ ಅತಿ ಭಯಂಕರರಾದ ಏಕಾದಶ ದಾನವರೊಡನೆ ಕಾದಾಡಿದರು.

೩೧. ಮಹಾಮಾರಿಯು ಉಗ್ರದಂಡನೇ ಮುಂತಾದ ದಾನವರೊಡನೆ ಯುದ್ಧಮಾಡಿದಳು. ಇದೇ ರೀತಿಯಾಗಿ ನಂದೀಶ್ವರಾದಿ ಸಕಲ ದೇವತೆಗಳೂ ಅಸಂಖ್ಯದಾನವರೊಡನೆ ಕಾದಾಡಿದರು.

ಯುಯುಧುಶ್ಚ ಮಹದ್ಯುದ್ಧೇ ಪ್ರಲಯೇ ಚ ಭಯಂಕರೇ ।
ವಟಮೂಲೇ ಚ ಶಂಭುಶ್ಚ ತಸ್ಥೌ ಕಾಲ್ಯಾ ಸುತೇನ ಚ ॥ ೩೨ ॥

ಸರ್ವೇ ಚ ಯುಯುಧುಃ ಸೈನ್ಯಸಮೂಹಾಃ ಸತತಂ ಮುನೇ ।
ರತ್ನಸಿಂಹಾಸನೇ ರಮ್ಯೇ ಕೋಟಿಭಿರ್ದಾನವೈಃ ಸಹ ॥ ೩೩ ॥

ಉವಾಸ ಶಂಖಚೂಡಶ್ಚ ರತ್ನಭೂಷಣಭೂಷಿತಃ ।
ಶಂಕರಸ್ಯ ಚ ಯೋಧಾಶ್ಚ ಯುದ್ಧೇ ಸರ್ವೇ ಪರಾಜಿತಾಃ ॥ ೩೪ ॥

ದೇವಾಶ್ಚ ದುದ್ರುವುಃ ಸರ್ವೇ ಭೀತಾಶ್ಚ ಕ್ಷತವಿಕ್ಷತಾಃ ।
ಚಕಾರ ಕೋಪಂ ಸ್ಕಂದಶ್ಚ ದೇವೇಭ್ಯಶ್ಚಾಭಯಂ ದದೌ ॥ ೩೫ ॥

ಬಲಂ ಚ ಸ್ವಗಣಾನಾಂ ವೈ ವರ್ಧಯಾಮಾಸ ತೇಜಸಾ ।
ಸ್ವಯಮೇಕಶ್ಚ ಯುಯುಧೇ ದಾನವಾನಾಂ ಗಣೈಃ ಸಹ ॥ ೩೬ ॥

---

೩೨. ಪರಶಿವನೂ, ಮಹಾಕಾಳಿಯೂ, ಷಣ್ಮುಖನೂ ಸಹ ವಟವೃಕ್ಷದ ಕೆಳಗೇ ಕುಳಿತು, ಪ್ರಳಯಕಾಲದಂತೆ ಅತಿ ಭೀಕರವಾದ ದೇವದಾನವರ ಆ ಯುದ್ಧವನ್ನು ನೋಡುತ್ತಿದ್ದರು.

೩೩–೩೪. ಶಂಖಚೂಡನ ಪಕ್ಷದಲ್ಲಿ ಸಕಲ ಸೈನಿಕರೂ ಯುದ್ಧನಿರತರಾಗಿದ್ದರು. ಶಂಖಚೂಡನು ಮಾತ್ರ ರತ್ನಾಭರಣಗಳನ್ನು ತೊಟ್ಟು, ರತ್ನಸಿಂಹಾಸನದಲ್ಲಿ ಕುಳಿತು ದಾನವಕೋಟಿಯಿಂದ ಪರಿವೃತನಾಗಿ ಸೇವೆಗೊಳ್ಳುತ್ತಿದ್ದನು. ಬಲಿಷ್ಠರಾದ ದಾನವರನ್ನು ಎದುರಿಸಲಾರದೆ ಶಂಕರನ ಸೈನಿಕರೆಲ್ಲರೂ ಯುದ್ಧದಲ್ಲಿ ಸೋತರು.

೩೫. ದೇವತೆಗಳೆಲ್ಲರೂ ಘಾಯಗೊಂಡು ಭಯಭೀತರಾಗಿ ಓಡಿಬಂದುದನ್ನು ನೋಡಿ, ಕುಪಿತನಾದ ಷಣ್ಮುಖನು ಎಲ್ಲ ದೇವತೆಗಳಿಗೂ ಅಭಯದಾನಮಾಡಿದನು.

೩೬. ಅಲ್ಲದೆ ತನ್ನ ತೇಜಸ್ಸಿನ ಪ್ರಭಾವದಿಂದ ಸೈನಿಕರ ಬಲವನ್ನೆಲ್ಲ ಅಭಿವೃದ್ಧಿಗೊಳಿಸಿದನು ಮತ್ತು ತಾನೊಬ್ಬನೇ ಆ ರಾಕ್ಷಸರ ಸಮೂಹದೊಡನೆ ಯುದ್ಧ ಮಾಡಲನುವಾದನು.

ಅಕ್ಷೌಹಿಣೀನಾಂ ಶತಕಂ ಸಮರೇ ಸ ಜಘಾನ ಹ ।
ಖರ್ಪರಂ ಪಾತಯಾಮಾಸ ಕಾಲೀ ಕಮಲಲೋಚನಾ ॥ ೩೭ ॥

ಪಪೌ ರಕ್ತಂ ದಾನವಾನಾಂ ಕ್ರುದ್ಧಾ ಸಾ ಶತಖರ್ಪರಂ ।
ದಶಲಕ್ಷಂ ಗಜೇಂದ್ರಾಣಾಂ ಶತಲಕ್ಷಂ ಚ ವಾಜಿನಾಂ ॥ ೩೮ ॥

ಸಮಾದಾಯೈಕಹಸ್ತೇನ ಮುಖೇ ಚಿಕ್ಷೇಪ ಲೀಲಯಾ ।
ಕಬಂಧಾನಾಂ ಸಹಸ್ರಂ ಚ ನನರ್ತ ಸಮರೇ ಮುನೇ ॥ ೩೯ ॥

ಸ್ಕಂದಸ್ಯ ಶರಜಾಲೇನ ದಾನವಾಃ ಕ್ಷತವಿಕ್ಷತಾಃ ।
ಭೀತಾಶ್ಚ ದುದ್ರುವುಃ ಸರ್ವೇ ಮಹಾಬಲಪರಾಕ್ರಮಾಃ ॥ ೪೦ ॥

ವೃಷಪರ್ವಾ ವಿಪ್ರಚಿತ್ತಿರ್ದಂಭಶ್ಚಾಪಿ ವಿಕಂಕನಃ ।
ಸ್ಕಂದೇನ ಸಾರ್ಧಂ ಯುಯುಧುಸ್ತೇ ಚ ಸರ್ವೇ ಕ್ರಮೇಣ ಚ ॥ ೪೧ ॥

---

೩೭. ಯುದ್ಧದಲ್ಲಿ ಷಣ್ಮುಖನು ದಾನವರ ನೂರು ಅಕ್ಷೌಹಿಣೀಸೇನೆಯನ್ನು ನೆಲಕ್ಕುರುಳಿಸಿದನು. ಆಗ ಕಮಲದಳನಯನೆಯಾದ ಕಾಳಿಕಾದೇವಿಯು ರಕ್ತಪಾನ ಮಾಡಲು ಮಡಕೆಯ ಚಿಪ್ಪನ್ನು ಸಿದ್ಧಗೊಳಿಸಿಕೊಂಡಳು.

೩೮. ಕುಪಿತಳಾದ ಕಾಳಿಯು ನೂರುಮಡಕೆಯ ಚಿಪ್ಪುಗಳಲ್ಲಿ ದಾನವರ ರಕ್ತವನ್ನು ಪಾನಮಾಡಿದಳು. ಅಲ್ಲದೆ ಹತ್ತುಲಕ್ಷ ಆನೆ ಮತ್ತು ನೂರುಲಕ್ಷ ಕುದುರೆಗಳ ರಕ್ತವನ್ನೂ ಪಾನಮಾಡಿದಳು.

೩೯. ತಲೆಯಿಲ್ಲದ ಸಾವಿರ ಕಳೇಬರವನ್ನು ಒಂದೇ ಕೈಯ್ಯಲ್ಲಿ ತೆಗೆದುಕೊಂಡು ಲೀಲಾಮಾತ್ರದಿಂದ ತನ್ನ ಬಾಯಿಗೆ ಹಾಕಿಕೊಂಡು ಯುದ್ಧಾಂಕಣದಲ್ಲೇ ನರ್ತಿಸಲಾರಂಭಿಸಿದಳು.

೪೦. ಇತ್ತ ಷಣ್ಮುಖನ ಬಾಣವೃಷ್ಟಿಯಿಂದ ಆಹತರಾಗಿ ದಿಕ್ಕುತೋಚದ ಮಹಾಪರಾಕ್ರಮಿಗಳೆಂದು ಮೆರೆಯುತ್ತಿದ್ದ ದಾನವರೆಲ್ಲರೂ ಭಯಗ್ರಸ್ತರಾಗಿ ಓಡಲಾರಂಭಿಸಿದರು.

೪೧. ವೃಷಪರ್ವ, ವಿಪ್ರಚಿತ್ತಿ, ದಂಭ ಮತ್ತು ವಿಕಂಕನರೆಂಬ ದಾನವರು ಮಾತ್ರ ಕ್ರಮವಾಗಿ ಷಣ್ಮುಖನೊಡನೆ ಯುದ್ಧಮಾಡಿದರು.

ಕಾಲೀ ಜಗಾಮ ಸಮರಮರಕ್ಷತ್ಕಾರ್ತಿಕಂ ಶಿವಃ |
ವೀರಾಸ್ತಾಮನುಜಗ್ಮುಶ್ಚ ತೇ ಚ ನಂದೀಶ್ವರಾದಯಃ || ೪೨ ||

ಸರ್ವೇ ದೇವಾಶ್ಚ ಗಂಧರ್ವಾ ಯಕ್ಷರಾಕ್ಷಸಕಿನ್ನರಾಃ |
ರಾಜ್ಯಾಭಾಂಡಾಶ್ಚ ಬಹುಶಃ ಶತಕೋಟಿರ್ಬಲಾಹಕಾಃ || ೪೩ ||

ಸಾ ಚ ಗತ್ವಾ ಚ ಸಂಗ್ರಾಮಂ ಸಿಂಹನಾದಂ ಚಕಾರ ಹ |
ದೇವ್ಯಾ ವೈ ಸಿಂಹನಾದೇನ ಪ್ರಾಪುರ್ಮೂರ್ಛಾಂ ಚ ದಾನವಾಃ || ೪೪ ||

ಅಟ್ಟಾಟ್ಟಹಾಸಮಶಿವಂ ಚಕಾರ ಚ ಪುನಃ ಪುನಃ |
ಹೃಷ್ಟಾ ಪಪೌ ಚ ಮಾಧ್ವೀಕಂ ನನರ್ತ ರಣಮೂರ್ಧನಿ || ೪೫ ||

ಉಗ್ರದಂಷ್ಟ್ರಾ ಚೋಗ್ರಚಂಡಾ ಕೌಟ್ಟರೀ ಚ ಪಪೌ ಮಧು |
ಯೋಗಿನೀನಾಂ ಡಾಕಿನೀನಾಂ ಗಣಾಃ ಸುರಗಣಾದಯಃ || ೪೬ ||

---

೪೨. ಅನಂತರ ಕಾಳಿಯು ಯುದ್ಧಾಂಕಣಕ್ಕೆ ತೆರಳಿದಳು. ಶಿವನು ಕಾರ್ತಿಕೇಯನನ್ನು ಮಾತ್ರ ಯುದ್ಧರಂಗದಿಂದ ಹಿಂತಿರುಗಿಸಿದನು. ನಂದೀಶ್ವರಾದಿ ವೀರರೆಲ್ಲರೂ ಆ ಕಾಳಿಯನ್ನು ಅನುಸರಿಸಿಕೊಂಡು ರಣಾಂಗಣಕ್ಕೆ ತೆರಳಿದರು.

೪೩. ಗಂಧರ್ವ, ಯಕ್ಷ, ರಾಕ್ಷಸ, ಕಿನ್ನರಾದಿ ಸಕಲ ದೇವತೆಗಳೂ ಯುದ್ಧರಂಗಕ್ಕೆ ತೆರಳಿದರು. ಅಪರಿಮಿತರಾಜರುಗಳೂ, ನೂರುಕೋಟಿ ಕುದುರೆಗಳೂ ಅಲ್ಲಿ ಸೇರಿದವು.

೪೪. ಇಷ್ಟು ಪರಿವಾರದೊಡಗೂಡಿ ಕಾಳಿಯು ರಣರಂಗದಲ್ಲಿ ಸಿಂಹನಾದ ಮಾಡಿದಳು. ಆ ಸಿಂಹಗರ್ಜನೆಯನ್ನು ಕೇಳಿ ದಾನವರೆಲ್ಲರೂ ಮೂರ್ಛೆಹೊಂದಿದರು

೪೫. ಕಾಳಿಯು ಪದೇ ಪದೇ ಭಯಂಕರವಾಗಿ ಅಟ್ಟಹಾಸಗೈಯ್ಯುತ್ತ. ಪುನಃ ಪುನಃ ಮಧ್ಯಪಾನಮಾಡಿ ಸಂತೋಷದಿಂದ ನರ್ತನಮಾಡುತ್ತಿದ್ದಳು.

೪೬. ಆ ಯುದ್ಧದಲ್ಲಿ ಉಗ್ರದಂಷ್ಟ್ರಾ, ಉಗ್ರಚಂಡಾ, ಕೊಟ್ಟರೀ ಮುಂತಾದ ಕಾಳಿಯ ಪರಿವಾರದವರೂ, ಯೋಗಿನಿಡಾಕಿನಿಯರೂ, ಚಂಡದೇವತೆಗಳೂ ರಕ್ತಪಾನ ಮಾಡಿದರು.

ದೃಷ್ಟ್ವಾ ಕಾಲೀಂ ಶಂಖಚೂಡಃ ಶೀಘ್ರಮಾಜಿಂ ಸಮಾಯಯೌ ।
ದಾನವಾಶ್ಚ ಭಯಂ ಪ್ರಾಪ್ತಾ ರಾಜಾ ತೇಭ್ಯೋಽಭಯಂ ದದೌ ॥ ೪೭ ॥

ಕಾಲೀ ಚಿಕ್ಷೇಪ ಚಾಗ್ನೇಯಂ ಪ್ರಲಯಾಗ್ನಿಶಿಖೋಪಮಂ ।
ರಾಜಾ ನಿರ್ವಾಪಯಾಮಾಸ ವಾರುಣೇನ ಸ ಲೀಲಯಾ ॥ ೪೮ ॥

ಚಿಕ್ಷೇಪ ವಾರುಣಂ ಸಾ ಚ ಶತ್ರೀವ್ರಂ ಮಹದದ್ಭುತಂ ।
ಗಾಂಧರ್ವೇಣ ಚ ಚಿಚ್ಛೇದ ದಾನವೇಂದ್ರಶ್ಚ ಲೀಲಯಾ ॥ ೪೯ ॥

ಮಾಹೇಶ್ವರಂ ಪ್ರಚಿಕ್ಷೇಪ ಕಾಲೀ ವಹ್ನಿಶಿಖೋಪಮಂ ।
ರಾಜಾ ಜಘಾನ ತಚ್ಛೀಘ್ರಂ ವೈಷ್ಣವೇನ ಚ ಲೀಲಯಾ ॥ ೫೦ ॥

---

೪೭. ಈ ರೀತಿಯಾದ ಕಾಳಿಕಾದೇವಿಯ ಘೋರಯುದ್ಧವನ್ನು ನೋಡಿ ಶಂಖಚೂಡನು ಜಾಗ್ರತೆಯಾಗಿ ತಾನೇ ಯುದ್ಧಾಂಕಣಕ್ಕೆ ಬಂದುದಲ್ಲದೆ ಭಯಗೊಂಡ ದಾನವರಿಗೆಲ್ಲ ಅಭಯದಾನ ಮಾಡಿದನು.

೪೮. ಅನಂತರ ಶಂಖಚೂಡನಿಗೂ ಕಾಳಿಕಾದೇವಿಗೂ ಯುದ್ಧವಾರಂಭವಾಯಿತು. ಕಾಳಿಯು ಪ್ರಯೋಗಿಸಿದ ಪ್ರಳಯಾಗ್ನಿಜ್ವಾಲೆಯಂತೆ ಭಯಂಕರವಾದ ಆಗ್ನೇಯಾಸ್ತ್ರವನ್ನು, ವಾರುಣಾಸ್ತ್ರದಿಂದ ಶಂಖಚೂಡನು ಆರಿಸಿದನು.

೪೯. ಕೂಡಲೇ ಕಾಳಿಯು ಅತಿತೀವ್ರವೂ, ಅತ್ಯದ್ಭುತವೂ ಆದ ವಾರುಣಾಸ್ತ್ರವನ್ನು ಬಿಡಲು ದಾನವೇಂದ್ರನಾದ ಶಂಖಚೂಡನು ಅದನ್ನು ಗಾಂಧರ್ವಾಸ್ತ್ರದಿಂದ ಕತ್ತರಿಸಿದನು.

೫೦. ಅನಂತರ ಕಾಳಿಯು ಅಗ್ನಿಜ್ವಾಲೆಯಂತೆ ಭಯಂಕವಾದ ಮಾಹೇಶ್ವರಾಸ್ತ್ರವನ್ನು ಪ್ರಯೋಗಿಸಲು ದಾನವೇಂದ್ರನು ಅದನ್ನು ವೈಷ್ಣವಾಸ್ತ್ರದಿಂದ ಬಹಳ ಶೀಘ್ರವಾಗಿ ಕತ್ತರಿಸಿದನು.

ನಾರಾಯಣಾಸ್ತ್ರಂ ಸಾ ದೇವೀ ಚಿಕ್ಷೇಪ ಮಂತ್ರಪೂರ್ವಕಂ ।
ರಾಜಾ ನನಾಮ ತಂ ದೃಷ್ಟ್ವಾ ಚಾವರುಹ್ಯ ರಥಾದಹೋ ॥ ೫೧ ॥

ಊರ್ಧ್ವಂ ಜಗಾಮ ತಚ್ಛಸ್ತ್ರಂ ಪ್ರಲಯಾಗ್ನಿಶಿಖೋಪಮಂ ।
ಪಪಾತ ಶಂಖಚೂಡಶ್ಚ ಭಕ್ತ್ಯಾ ವೈ ದಂಡವದ್ಭುವಿ ॥
ಬ್ರಹ್ಮಾಸ್ತ್ರಂ ಸಾ ಚ ಚಿಕ್ಷೇಪ ಯತ್ನತೋ ಮಂತ್ರಪೂರ್ವಕಂ ॥ ೫೨ ॥

ಬ್ರಹ್ಮಾಸ್ತ್ರೇಣ ಮಹಾರಾಜಾ ನಿರ್ವಾಣಂ ಚ ಚಕಾರ ಹ ।
ಚಿಕ್ಷೇಪಾತೀವದಿವ್ಯಾಸ್ತ್ರಂ ಸಾ ದೇವೀ ಮಂತ್ರಪೂರ್ವಕಂ ॥ ೫೩ ॥

ರಾಜಾ ದಿವ್ಯಾಸ್ತ್ರಜಾಲೇನ ನಿರ್ವಾಣಂ ಚ ಚಕಾರ ಹ ।
ದೇವೀ ಚಿಕ್ಷೇಪ ಶಕ್ತಿಂ ಚ ಯತ್ನತೋ ಯೋಜನಾಯತಾಂ ॥ ೫೪ ॥

---

೫೧. ಆಗ ದೇವಿಯು ಮಂತ್ರೋಚ್ಚಾರಣೆಪೂರ್ವಕವಾಗಿ ನಾರಾಯಣಾಸ್ತ್ರವನ್ನು ಬಿಡಲು ಕೂಡಲೇ ರಾಜನು ರಥದಿಂದಿಳಿದು ಭಕ್ತಿಯಿಂದ ಆ ಅಸ್ತ್ರಕ್ಕೆ ತಲೆಬಾಗಿ ವಂದಿಸಿದನು.

೫೨. ಶಂಖಚೂಡನು ಭಕ್ತಿಯಿಂದ ಭೂಮಿಯ ಮೇಲೆ ಸಾಷ್ಟಾಂಗವೆರಗಿದುದನ್ನು ನೋಡಿ ಪ್ರಳಯಾಗ್ನಿಜ್ವಾಲೆಯಂತೆ ತೀಕ್ಷ್ಣವಾದ ಆ ಅಸ್ತ್ರವು ಅವನನ್ನು ನೋಯಿಸದೆ ಮೇಲೆಯೇ ಹಾರಿಹೋಯಿತು. ಆಗ ಕಾಳಿಯು ಬ್ರಹ್ಮಾಸ್ತ್ರವನ್ನು ಮಂತ್ರಪೂರ್ವಕವಾಗಿ ಪ್ರಯೋಗಮಾಡಿದಳು.

೫೩. ಶಂಖಚೂಡನೂ ಕೂಡ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿ ಆ ಅಸ್ತ್ರವನ್ನು ಅರ್ಧದಲ್ಲಿಯೇ ಖಂಡಿಸಿದನು. ಆಗ ದೇವಿಯು ಅತ್ಯಾಶ್ಚರ್ಯಕರವಾದ ದಿವ್ಯಾಸ್ತ್ರವನ್ನು ಮಂತ್ರಪೂರ್ವಕವಾಗಿ ಪ್ರಯೋಗಿಸಿದಳು.

೫೪. ಶಂಖಚೂಡನೂ ಕೂಡ ದಿವ್ಯಾಸ್ತ್ರಗಳ ಸಮೂಹದಿಂದಲೇ ನಿರ್ವಾಣಗೊಳಿಸಿದನು. ಆಗ ದೇವಿಯು ಯೋಜನದೀರ್ಘವಾದ ಶಕ್ತ್ಯಾಯುಧವೊಂದನ್ನು ಪ್ರಯತ್ನಪೂರ್ವಕವಾಗಿ ಪ್ರಯೋಗಿಸಿದಳು.

ರಾಜಾ ತೀಕ್ಷ್ಣಾಸ್ತ್ರಜಾಲೇನ ಶತಖಂಡಂ ಚಕಾರ ಹ ।
ಜಗ್ರಾಹ ಮಂತ್ರಪೂರ್ವಂ ಚ ದೇವೀ ಪಾಶುಪತಂ ರುಷಾ ॥ ೫೫ ॥

ನಿಕ್ಷೇಪ್ತುಂ ಸಾ ನಿಷಿದ್ಧಾ ಚ ವಾಗ್ಬಭೂವಾಶರೀರಿಣೀ ।
ಮೃತ್ಯುಃ ಪಾಶುಪತೇ ನಾಸ್ತಿ ನೃಪಸ್ಯ ಚ ಮಹಾತ್ಮನಃ ॥ ೫೬ ॥

ಯಾವದಸ್ತ್ಯೇವ ಕಂಠೇಽಸ್ಯ ಕವಚಂ ಹಿ ಹರೇರಿತಿ ।
ಯಾವತ್ಸತೀತ್ವಮಸ್ತೀಹ ಸತ್ಯಾಶ್ಚ ನೃಪಯೋಷಿತಃ ॥ ೫೭ ॥

ತಾವದಸ್ಯ ಜರಾಮೃತ್ಯುರ್ನಾಸ್ತೀತಿ ಬ್ರಹ್ಮಣೋ ವರಃ ।
ಇತ್ಯಾಕರ್ಣ್ಯ ಮಹಾಕಾಲೀ ನ ತಚ್ಚಿಕ್ಷೇಪ ಸಾ ಸತೀ ॥ ೫೮ ॥

---

೫೫. ರಾಜನು ಆ ಶಕ್ತ್ಯಾಯುಧವನ್ನು ಅತಿತೀಕ್ಷ್ಣವಾದ ಅಸ್ತ್ರಗಳ ಸಮೂಹದಿಂದ ನೂರುಚೂರಾಗಿ ಕತ್ತರಿಸಿದನು. ಆಗ ಕುಪಿತಳಾದ ದೇವಿಯು ಪಾಶುಪತಾಸ್ತ್ರವನ್ನು ತೆಗೆದುಕೊಂಡು ಮಂತ್ರಪೂರ್ವಕವಾಗಿ ಪ್ರಯೋಗಿಸುವುದರಲ್ಲಿದ್ದಳು.

೫೬. ಅಷ್ಟರಲ್ಲಿಯೇ 'ಮಹಾತ್ಮನಾದ ಶಂಖಚೂಡನಿಗೆ ಪಾಶುಪತಾಸ್ತ್ರದಿಂದಲೇ ಮರಣವುಂಟಾಗುವುದರಿಂದ ಆ ಅಸ್ತ್ರವನ್ನು ಪ್ರಯೋಗಿಸಕೂಡದು' ಎಂದು ಅಶರೀರವಾಣಿಯಾಯಿತು.

೫೭-೫೮. ಅಲ್ಲದೆ 'ಶಂಖಚೂಡನ ಕಂಠದಲ್ಲಿ ಶ್ರೀಹರಿಯ ದಿವ್ಯಕವಚವಿರುವವರೆಗೂ ಮತ್ತು ಅವನ ಪತ್ನಿಯ ಪಾತಿವ್ರತ್ಯವು ಭಂಗವಾಗದಿರುವವರೆಗೂ ಅವನಿಗೆ ಜರಾಮರಣಗಳು ಸಂಭವಿಸುವುದಿಲ್ಲವೆಂದು ಬ್ರಹ್ಮನ ವರವಿದೆ' ಎಂದ ಅಶರೀರವಾಣಿಯನ್ನು ಕೇಳಿ ಮಹಾಕಾಳಿಯು ಪಾಶುಪತಾಸ್ತ್ರವನ್ನು ತನ್ನ ಬತ್ತಳಿಕೆಯಲ್ಲಿಯೇ ಉಪಸಂಹಾರಮಾಡಿದಳು.

ಶತಲಕ್ಷಂ ದಾನಾವಾನಾಮುಗ್ರಹೀಲ್ಲೀಲಯಾ ಕ್ರುಧಾ ।
ಆಕ್ತುಂ ಜಗಾಮ ವೇಗೇನ ಶಂಖಚೂಡಂ ಭಯಂಕರೀ ॥ ೫೯ ॥

ದಿವ್ಯಾಸ್ತ್ರೇಣ ಸುತೀಕ್ಷ್ಣೇನ ವಾರಯಾಮಾಸ ದಾನವಃ ।
ಖಡ್ಗಂ ಚಿಕ್ಷೇಪ ಸಾ ದೇವಿ ಗ್ರೀಷ್ಮಸೂರ್ಯೋಪಮಂ ಪರಂ ॥ ೬೦ ॥

ದಿವ್ಯಾಸ್ತ್ರೈರ್ದಾನವೇಂದ್ರೋಯಂ ಶತಖಂಡಂ ಚಕಾರ ಸಃ ।
ಪುನರಕ್ತುಂ ಮಹಾದೇವೀ ವೇಗೇನ ಚ ಜಗಾಮ ತಂ ॥ ೬೧ ॥

ಸರ್ವಸಿದ್ಧೇಶ್ವರಃ ಶ್ರೀಮಾನ್ವವೃಧೇ ದಾನವೇಶ್ವರಃ ।
ನಿವಾರಯಾಮಾಸ ಚ ತಾಂ ಸರ್ವಸಿದ್ಧೇಶ್ವರೋ ವರಃ ॥
ವೇಗೇನ ಮುಷ್ಟಿನಾ ಕಾಲೀ ಕೋಪಯುಕ್ತಾ ಭಯಂಕರೀ ॥ ೬೨ ॥

---

೫೯. ಬಳಿಕ ಕುಪಿತಳಾದ ದೇವಿಯು ನೂರುಲಕ್ಷ ದಾನವರನ್ನು ಲೀಲೆಯಿಂದಲೇ ಕೈಸೆರೆ ಹಿಡಿದುದಲ್ಲದೆ, ಭಯಂಕರವೇಷವನ್ನು ತಾಳಿ ಶಂಖಚೂಡನನ್ನು ತಿನ್ನಲು ಅತಿವೇಗದಿಂದ ಮುಂದುವರಿದಳು.

೬೦. ಆಗ ದಾನವೇಂದ್ರನು ಅತಿತೀಕ್ಷ್ಣವಾದ ದಿವ್ಯಾಸ್ತ್ರದಿಂದ ದೇವಿಯನ್ನು ತಡೆಗಟ್ಟಿದನು. ಅನಂತರ ದೇವಿಯು ಗ್ರೀಷ್ಮಸೂರ್ಯನಂತೆ ಅತ್ಯುಗ್ರವಾದ ಕತ್ತಿಯನ್ನು ಶಂಖಚೂಡನ ಮೇಲೆ ಎಸೆದಳು.

೬೧. ದಾನವೇಶ್ವರನು ಅದನ್ನೂ ದಿವ್ಯಾಸ್ತ್ರಗಳಿಂದ ನೂರುತುಂಡು ಮಾಡಲು, ಪುನಃ ಮಹಾದೇವಿಯು ಅವನನ್ನು ತಿನ್ನಬೇಕೆಂದು ವೇಗದಿಂದ ಮೇಲೆ ಬಿದ್ದಳು.

೬೨. ಸರ್ವಸಿದ್ಧಿಯನ್ನೂ ಪಡೆದಿರುವ ಆ ದಾನವೇಂದ್ರನು ಸ್ವೇಚ್ಛೆಯಿಂದ ವೃದ್ಧಿಹೊಂದಿ ಆ ಮಹಾಕಾಳಿಯನ್ನು ಪ್ರತಿಭಟಿಸಿದನು.

ಬಭಂಜಾಥ ರಥಂ ತಸ್ಯ ಜಘಾನ ಸಾರಥಿಂ ಸತೀ ।
ಸಾ ಚ ಶೂಲಂ ಚ ಚಿಕ್ಷೇಪ ಪ್ರಲಯಾಗ್ನಿಶಿಖೋಪಮಂ ॥ ೬೩ ॥

ವಾಮಹಸ್ತೇನ ಜಗ್ರಾಹ ಶಂಖಚೂಡಶ್ಚ ಲೀಲಯಾ ।
ಮುಷ್ಟ್ಯಾ ಜಘಾನ ತಂ ದೇವೀ ಮಹಾಕೋಪೇನ ವೇಗತಃ ॥ ೬೪ ॥

ಬಭ್ರಾಮ ವ್ಯಥಯಾ ದೈತ್ಯಃ ಕ್ಷಣಂ ಮೂರ್ಛಾಮವಾಪ ಹ ।
ಕ್ಷಣೇನ ಚೇತನಾಂ ಪ್ರಾಪ್ಯ ಸಮುತ್ತಸ್ಥೌ ಪ್ರತಾಪವಾನ್ ॥ ೬೫ ॥

ನ ಚಕ್ರೇ ಬಾಹುಯುದ್ಧಂ ಸ ದೇವ್ಯಾ ಸಹ ನನಾಮ ತಾಂ ।
ದೇವ್ಯಾಶ್ಚಾಸ್ತ್ರಂ ಚ ಚಿಚ್ಛೇದ ಚಾಗ್ರಹೀತ್ಸ್ವೇನ ತೇಜಸಾ ॥ ೬೬ ॥

ನಾಸ್ತ್ರಂ ಚಿಕ್ಷೇಪ ತಾಂ ಭಕ್ತ್ಯಾ ಮಾತೃಬುದ್ಧ್ಯಾ ಚ ವೈಷ್ಣವಃ ॥ ೬೭ ॥

---

೬೩. ಕುಪಿತಳಾದ ಕಾಳಿಯು ವೇಗದಿಂದ ಮುಷ್ಟಿಪ್ರಯೋಗ ಮಾಡಿ ಅವನ ರಥವನ್ನು ಮುರಿದು, ಸಾರಥಿಯನ್ನು ಸಂಹರಿಸಿ ಪ್ರಲಯಾಗ್ನಿ ಶಿಖೆಯಂತೆ ಜಾಜ್ವಲ್ಯಮಾನವಾದ ಶೂಲವನ್ನು ಶಂಖಚೂಡನ ಮೇಲೆ ಎಸೆದಳು.

೬೪. ಶಂಖಚೂಡನು ತನ್ನ ಎಡಗೈನಿಂದ ಆ ಶೂಲವನ್ನು ಬಹಳ ಸುಲಭವಾಗಿ ತಡೆಯಲು, ಕುಪಿತಳಾದ ದೇವಿಯು ಮುಷ್ಟಿಯಿಂದಲೇ ಅವನನ್ನು ಗುದ್ದಿದಳು.

೬೫. ಕೂಡಲೆ ದೈತ್ಯನು ಸಂಕಟದಿಂದ ಒದ್ದಾಡಿ ಮೂರ್ಛೆಗೊಂಡನು ಕ್ಷಣಕಾಲವಾದ ಮೇಲೆ ಪುನಃ ಚೇತನವನ್ನು ಪಡೆದು ಪ್ರತಾಪಶಾಲಿಯಾಗಿ ಎದು ನಿಂತನು.

೬೬. ಆದರೆ ಆ ದಾನವನು ದೇವಿಯೊಡನೆ ಬಾಹುಯುದ್ಧಮಾಡಲು ಹಿಂತೆಗೆದು ಆಕೆಗೆ ನಮಸ್ಕರಿಸಿದನು. ಅಲ್ಲದೆ ದೇವಿಯ ಅಸ್ತ್ರಗಳನ್ನೆಲ್ಲ ಕತ್ತರಿಸಿ ಸ್ವತೇಜಸ್ಸಿನಿಂದಲೇ ಅಪ್ರತಿಮ ವೀರನೆನಿಸಿದನು.

೬೭. ಶಂಖಚೂಡನು ಪರಮವೈಷ್ಣವನಾದುದರಿಂದ ಕಾಳಿಕಾದೇವಿಯಲ್ಲಿ ಮಾತೃಭಾವನೆಯನ್ನಿಟ್ಟು ಅಸ್ತ್ರಪ್ರಯೋಗ ಮಾಡಲಿಲ್ಲ.

ಗೃಹೀತ್ವಾ ದಾನವಂ ದೇವೀ ಭ್ರಾಮಯಿತ್ವಾ ಪುನಃ ಪುನಃ ।
ಊರ್ಧ್ವಂ ಚ ಪ್ರೇರಯಾಮಾಸ ಮಹಾವೇಗೇನ ಕೋಪತಃ ॥ ೬೮ ॥

ಊರ್ಧ್ವಾತ್ಪಪಾತ ವೇಗೇನ ಶಂಖಚೂಡಃ ಪ್ರತಾಪವಾನ್ ।
ನಿಪತ್ಯ ಚ ಸಮುತ್ತಸ್ಥೌ ಸ ನತ್ವಾ ಭದ್ರಕಾಲಿಕಾಂ ॥ ೬೯ ॥

ರತ್ನೇಂದ್ರಸಾರಖಚಿತಂ ವಿಮಾನಾಗ್ರ್ಯಂ ಮನೋಹರಂ ।
ಆರುರೋಹ ರಥಂ ಹೃಷ್ಟೋ ನ ವಿಶ್ರಾಂತೋ ಮಹಾರಣೇ ॥ ೭೦ ॥

ಕ್ಷತಜಂ ದಾನವಾನಾಂ ಚ ಮಾಂಸಂ ಚ ವಿಪುಲಂ ಕ್ಷುಧಾ ।
ಪೀತ್ವಾ ಭುಕ್ತ್ವಾ ಭದ್ರಕಾಲೀ ಯಯೌ ಸಾ ಶಂಕರಾಂತಿಕಂ ॥ ೭೧ ॥

ಉವಾಚ ರಣವೃತ್ತಾಂತಂ ಪೌರ್ವಾಪರ್ಯಂ ಯಥಾಕ್ರಮಂ ।
ಶ್ರುತ್ವಾ ಜಹಾಸ ಶಂಭುಶ್ಚ ದಾನವಾನಾಂ ವಿನಾಶನಂ ॥ ೭೨ ॥

---

೬೮. ಅನಂತರ ದೇವಿಯು ಆ ದಾನವೇಂದ್ರನನ್ನು ಹಿಡಿದುಕೊಂಡು ವೇಗದಿಂದ ತಿರುಗಿಸಿ ಕೋಪಾವಿಷ್ಟಳಾಗಿ ಮೇಲಕ್ಕೆ ಎಸೆದಳು.

೬೯. ಪ್ರತಾಪಶಾಲಿಯಾದ ಶಂಖಚೂಡನು ಎತ್ತರದಿಂದ ಕೆಳಕ್ಕೆ ಬಿದ್ದರೂ ಸ್ವಲ್ಪವೂ ಗಾಯಗೊಳ್ಳದೇ ಕೂಡಲೇ ಮೇಲಕ್ಕೆದ್ದು ಆ ಭದ್ರಕಾಳಿಗೆ ನಮಸ್ಕರಿಸಿದನು.

೭೦. ಅಲ್ಲದೆ ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ ಮನೋಹರವಾಗಿದ್ದ ವಿಮಾನವನ್ನು ಹತ್ತಿ ಹಸನ್ಮುಖನಾಗಿ ಕುಳಿತನು. ಅಷ್ಟು ಭಯಂಕರವಾದ ಯುದ್ಧ ಮಾಡಿದರೂ ವಿಶ್ರಾಂತಿಯನ್ನು ಬಯಸಲಿಲ್ಲ.

೭೧. ಇತ್ತ ಹಸಿದು ಬಾಯಾರಿದ ಭದ್ರಕಾಳಿಯು ಆ ರಾಕ್ಷಸ ಸೈನಿಕರ ರಕ್ತಮಾಂಸಗಳನ್ನು ಮನಬಂದಷ್ಟು ಕುಡಿದು ತಿಂದು ಶಂಕರನ ಸಮೀಪಕ್ಕೆ ತೆರಳಿದಳು.

೭೨. ಯುದ್ಧಸಮಾಚಾರದಲ್ಲಿ ಚಾಚೂ ತಪ್ಪಿಲ್ಲದೆ ಯಥಾಕ್ರಮವಾಗಿ ಶಂಕರನಿಗೆ ವಿವರಿಸಿದಳು. ಈಶ್ವರನೂ ಕೂಡ ದಾನವರ ವಿನಾಶವನ್ನು ಕೇಳಿ ಸಂತೋಷದಿಂದ ನಲಿದಾಡಿದನು.

ಲಕ್ಷಂ ಚ ದಾನವೇಂದ್ರಾಣಾಮವಶಿಷ್ಟಂ ರಣೇಽಧುನಾ ।
ಉದ್ವೃತ್ತಂ ಭೂಭೃತಾ ಸಾರ್ಧಂ ತದನ್ಯಂ ಭುಕ್ತಮೀಶ್ವರ ॥ ೭೩ ॥

ಸಂಗ್ರಾಮೇ ದಾನವೇಂದ್ರಂ ಚ ಹಂತುಂ ಪಾಶುಪತೇನ ವೈ ।
ಅವಧ್ಯಸ್ತವ ರಾಜೇತಿ ವಾಗ್ಬಭೂವಾಶರೀರಿಣೀ ॥ ೭೪ ॥

ರಾಜೇಂದ್ರಶ್ಚ ಮಹಾಜ್ಞಾನೀ ಮಹಾಬಲಪರಾಕ್ರಮಃ ।
ನ ಚ ಚಿಕ್ಷೇಪ ಮಯ್ಯಸ್ತ್ರಂ ಚಿಚ್ಛೇದ ಮಮ ಸಾಯಕಂ ॥ ೭೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ
ಕಾಲೀಶಂಖಚೂಡಯುದ್ಧಯೋಗೋ ನಾಮ
ಏಕೋನವಿಂಶೋಽಧ್ಯಾಯಃ

೭೩-೭೫. 'ಈಗ ಕಂಯುದ್ಧಾಣದಲ್ಲಿ ಒಂದು ಲಕ್ಷ ಸೈನಿಕರಿದ್ದಾರೆ. ಆವರನ್ನೂ ಶಂಖಚೂಡನನ್ನೂ ಬಿಟ್ಟು ಉಳಿದ ದಾನವರನ್ನೆಲ್ಲ ಕೊಂದು ತಿಂದು ದಾಯಿತು. ದಾನವೇಂದ್ರನಾದ ಶಂಖಚೂಡನನ್ನು ನಾನು ಪಾಶುಪತಾಸ್ತ್ರದಿಂದ ಸಂಹರಿಸಲು ತೊಡಗಿದಾಗ ನಾನು ಶಂಖಚೂಡನನ್ನು ಸಂಹರಿಸಕೂಡದೆಂದು ಅಶರೀರವಾಣಿಯ ಯಿತು. ಅನಂತರ ಮಹಾಜ್ಞಾನಿಯೂ, ಮಹಾಪರಾಕ್ರಮ ಶಾಲಿಯೂ ಆದ ಶಂಖಚೂಡನೂ ಕೂಡ ನನ್ನ ಮೇಲೆ ಅಸ್ತ್ರಗಳನ್ನು ಪ್ರಯೋಗಿಸದೆ, ನಾನು ಪ್ರಯೋಗಿಸಿದ ಅಸ್ತ್ರಗಳನ್ನು ಮಾತ್ರ ಕತ್ತರಿಸಿದನು' ಎಂದು ಭದ್ರಕಾಳಿಯು ಶಂಕರನಿಗೆ ತಿಳಿಸಿದಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದನಾರಾಯಣರ
ಸಂವಾದ ಪ್ರಸಂಗದಲ್ಲಿ ತುಳಸೀದೇವಿಯ ಉಪಾಖ್ಯಾನವನ್ನು ತಿಳಿಸುವಾಗ
ಕಾಳಿ ಮತ್ತು ಶಂಖಚೂಡರ ಯುದ್ಧವನ್ನು ವರ್ಣಿಸುವ
ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಹತ್ತೊಂಭತ್ತನೆಯ ಅಧ್ಯಾಯದ ಸಾರಾಂಶವು

ಧಾನವೇಶ್ವರನಾದ ಶಂಖಚೂಡನಿಗೂ ಷಣ್ಮುಖನಿಗೂ ಘೋರಯುದ್ಧವಾಯಿತು. ಅದರ ಪರಿಣಾಮವಾಗಿ ಮೊದಲು ಷಣ್ಮುಖನ ಧನುರ್ಬಾಣಗಳೂ, ರಥಾಶ್ವಗಳೂ ನಾಶವಾಗಿ, ದಾನವನ ಬಾಣಾಘಾತದಿಂದ ಷಣ್ಮುಖನು ಮೂರ್ಛೆಗೊಂಡನು. ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡು ಶಂಖಚೂಡನ ವಾಹನಾದಿಗಳನ್ನು ಕತ್ತರಿಸಿ ಬಿಸುಟನು. ಷಣ್ಮುಖನ ಶಕ್ತ್ಯಾಯುಧದ ಏಟಿಗೆ ಮೂರ್ಛೆಗೊಂಡು ಸ್ವಲ್ಪಹೊತ್ತಿನ ಮೇಲೆ ಚೇತರಿಸಿಕೊಂಡ ಶಂಖಚೂಡನು ದಾನವೋಚಿತಪಾಪಮಾಯಾಯುದ್ಧಕ್ಕೆ ಮೊದಲುಮಾಡಿದನು. ಮತ್ತು ತನ್ನ ಶಕ್ತ್ಯಾಯುಧದಿಂದ ಷಣ್ಮುಖನನ್ನು ಮೂರ್ಛೆಗೊಳಿಸಿದನು. ಕೂಡಲೇ ಕಾಳಿಕಾದೇವಿಯು ಷಣ್ಮುಖನನ್ನು ಶಿವನ ಸಮೀಪಕ್ಕೆ ಕರೆತರಲು ಶಿವನು ಅವನನ್ನು ಪುನರುಜ್ಜೀವಗೊಳಿಸಿ ಅವನಿಗೆ ವಿಶೇಷ ಬಲಪರಾಕ್ರಮಗಳನ್ನು ಅನುಗ್ರಹಿಸಿದನು. ಅನಂತರ ದೇವದಾನವರಿಗೆ ಉಗ್ರಕದನವಾಯಿತು. ಸೇನಾನಾಯಕನಾದ ಷಡಾನನು ಶಂಖಚೂಡನ ನೂರು ಅಕ್ಷೌಹಿಣೀ ಸೈನಿಕರನ್ನು ನೆಲಕ್ಕುರುಳಿಸಿದನು. ಭದ್ರಕಾಳಿಯು ಅವರೆಲ್ಲರ ರಕ್ತವನ್ನೂ ಪಾನಮಾಡಿದಳು. ಅನಂತರ ಕುಪಿತನಾದ ಶಂಖಚೂಡನಿಗೂ ಕಾಳಿಕಾದೇವಿಗೂ ಘೋರಕದನವಾಯಿತು. ಇಬ್ಬರೂ ಮಂತ್ರಾಸ್ತ್ರಗಳನ್ನು ಪ್ರಯೋಗಿಸಲಾರಂಭಿಸಿದರು. ಕೊನೆಗೆ ಕಾಳಿಯು ಪ್ರಯೋಗಿಸಿದ ನಾರಾಯಣಾಸ್ತ್ರಕ್ಕೆ ಶಂಖಚೂಡನು ತಲೆಬಾಗಿ ಅದರ ಏಟಿಗೆ ಸಿಲುಕದಿರಲು, ಕುಪಿತಳಾದ ಕಾಳಿಯು ಭಯಂಕರವಾದ ಶಕ್ತ್ಯಾಯುಧವನ್ನು ಅವನ ಮೇಲೆ ಎಸೆದಳು. ಶಂಖಚೂಡನು ಅದನ್ನು ತುಂಡರಿಸಲು ಕಾಳಿಯು ಕೋಪಗೊಂಡು ಪಾಶುಪತಾಸ್ತ್ರವನ್ನು ಕೈಗೆ ತೆಗೆದುಕೊಂಡಳು. ಅಷ್ಟರಲ್ಲಿ 'ಶಂಖಚೂಡನ ಕಂಠದಲ್ಲಿ ವಿಷ್ಣುಕವಚವಿರುವವರೆಗೂ, ಅವನ ಪತ್ನಿಯ ಪಾತಿವ್ರತ್ಯವು ಭಂಗವಾಗದಿರುವವರೆಗೂ, ಅವನಿಗೆ ಮರಣವು ಅಸಂಭವವಾದುದರಿಂದ ಅವನ ಮೇಲೆ ಪಾಶುಪತಾಸ್ತ್ರವನ್ನು ಪ್ರಯೋಗಿಸಕೂಡದು' ಎಂದು ಅಶರೀರವಾಣಿಯಾಯಿತು. ಆ ಬಳಿಕ ಕಾಳಿಕಾದೇವಿಗೂ ಶಂಖಚೂಡನಿಗೂ ಬಹಳ ಹೊತ್ತು ಯುದ್ಧವಾದರೂ ಶಂಖಚೂಡನು ಕಾಳಿಕಾದೇವಿಯಲ್ಲಿ ಮಾತೃಭಾವನೆಯನ್ನಿಟ್ಟು ಅಸ್ತ್ರಪ್ರಯೋಗ ಮಾಡಲಿಲ್ಲ. ಆಗ ಯುದ್ಧವನ್ನು ನಿಲ್ಲಿಸಿ ಭದ್ರಕಾಳಿಯು ಶಿವನ ಸಮೀಪಕ್ಕೆ ಬಂದು ಯುದ್ಧರಂಗದಲ್ಲಿ ನಡೆದ ಸಮಾಚಾರವನ್ನೆಲ್ಲ ತಿಳಿಸಿದಳು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ವಿಂಶತಿತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಶಿವಸ್ತತ್ತ್ವಂ ಸಮಾಕರ್ಣ್ಯ ತತ್ತ್ವಜ್ಞಾನವಿಶಾರದಃ |
ಯಯೌ ಸ್ವಯಂ ಚ ಸಮರಂ ಸ್ವಗಣೈಃ ಸಹ ನಾರದ || ೧ ||

ಶಂಖಚೂಡಃ ಶಿವಂ ದೃಷ್ಟ್ವಾ ವಿಮಾನಾದವರುಹ್ಯ ಚ |
ನನಾಮ ಪರಯಾ ಭಕ್ತ್ಯಾ ದಂಡವತ್ಪತಿತೋ ಭುವಿ || ೨ ||

ತಂ ಪ್ರಣಮ್ಯ ಚ ವೇಗೇನ ವಿಮಾನಂ ಹ್ಯಾರುರೋಹ ಸಃ |
ತೂರ್ಣಂ ಚಕಾರ ಸನ್ನಾಹಂ ಧನುರ್ಜಗ್ರಾಹ ದುರ್ವಹಂ || ೩ ||

ಇಪ್ಪತ್ತನೆಯ ಅಧ್ಯಾಯವು

೧. ನಾರಾಯಣ:— ತತ್ವಜ್ಞಾನವಿಶಾರದನಾದ ಶಿವನು ಯುದ್ಧರಂಗದಲ್ಲಿ ನಡೆದ ಸಮಾಚಾರವನ್ನು ಮಹಾಕಾಳಿಯಿಂದ ತಿಳಿದು, ತನ್ನ ಪ್ರಮಥಗಣಗಳೊಡ ಗೂಡಿ ಸ್ವತಃ ತಾನೇ ಸಮರಾಂಗಣಕ್ಕೆ ಹೊರಟನು.

೨. ಶಂಖಚೂಡನು ಪರಶಿವನನ್ನು ನೋಡಿದ ಕೂಡಲೇ ವಿಮಾನದಿಂದ ಕೆಳಗಿಳಿದು, ಪರಮ ಭಕ್ತಿಯಿಂದ ಶಿವನಿಗೆ ದಂಡಪ್ರಣಾಮಮಾಡಿದನು.

೩. ಅನಂತರ ಪುನಃ ವಿಮಾನವನ್ನೇರಿ, ಜಾಗ್ರತೆ ಯುದ್ಧಸನ್ನದ್ಧನಾಗಿ ದುರ್ವಹವಾದ ಧನುಸ್ಸನ್ನು ಧರಿಸಿ ನಿಂತನು.

ಶಿವದಾನವಯೋರ್ಯುದ್ಧಂ ಪೂರ್ಣಮಬ್ದಂ ಬಭೂವ ಹ ।
ನ ವೈ ಬಭೂವತುರ್ಬ್ರಹ್ಮನ್ ತಯೋರ್ಜಯಪರಾಜಯೌ ॥ ೪ ॥

ನ್ಯಸ್ತ ಶಸ್ತ್ರಶ್ಚ ಭಗವಾನ್ನ್ಯಸ್ತ ಶಸ್ತ್ರಶ್ಚ ದಾನವಃ ।
ರಥಸ್ಥಃ ಶಂಖಚೂಡಶ್ಚ ವೃಷಸ್ಥೋ ವೃಷಭಧ್ವಜಃ ॥ ೫ ॥

ದಾನವಾನಾಂ ಚ ಶತಕಮುದ್ವೃತ್ತಂ ಚ ಬಭೂವ ಹ ।
ರಣೇ ಯೇ ಯೇ ಮೃತಾಃ ಶಂಭೋರ್ಜೀವಯಾಮಾಸ ತಾನ್ವಿಭುಃ ॥ ೬ ॥

ತತೋ ವಿಷ್ಣುರ್ಮಹಾಮಾಯೋ ವೃದ್ಧಬ್ರಾಹ್ಮಣರೂಪಧೃಕ್ ।
ಆಗತ್ಯ ಚ ರಣಸ್ಥಾನಮುವಾಚದಾನವೇಶ್ವರಂ ॥ ೭ ॥

---

೪. ಪರಶಿವನಿಗೂ ಶಂಖಚೂಡನಿಗೂ ಒಂದು ವರ್ಷಕಾಲ ದೀರ್ಘಯುದ್ಧ ವಾಯಿತು. ನಾರದಮಹರ್ಷಿಯೇ, ಆ ಶೂರರಲ್ಲಿ ಯಾರೊಬ್ಬರಿಗೂ ಜಯಪರಾಜಯ ಗಳುಂಟಾಗಲಿಲ್ಲ.

೫. ಆಗ ಶಂಖಚೂಡ ಚಂದ್ರಚೂಡರಿಬ್ಬರೂ ಅಸ್ತ್ರತ್ಯಾಗ ಮಾಡಿದರು ಶಂಖಚೂಡನು ರಥದಲ್ಲಿಯೇ ಕುಳಿತಿದ್ದನು. ಚಂದ್ರಚೂಡನು ವೃಷಭವಾಹನ ನಾಗಿಯೇ ಇದ್ದನು.

೬. ಆಗ ನೂರಾರು ದಾನವರು ಉದ್ಧತವರ್ತನೆಯಲ್ಲಿ ತೊಡಗಿದರು. ಇತ್ತ ಯುದ್ಧದಲ್ಲಿ ಅದುವರೆಗೆ ಮೃತರಾಗಿದ್ದ ತನ್ನ ಕಡೆಯವರನ್ನೆಲ್ಲ ಶಂಕರನು ಪುನರು ಜ್ಜೀವನಗೊಳಿಸಿದನು.

೭. ಆ ಸಮಯದಲ್ಲಿ ಮಹಾಮಾಯಿಯಾದ ವಿಷ್ಣುವು ವೃದ್ಧ ಬ್ರಾಹ್ಮಣ ರೂಪವನ್ನು ಧರಿಸಿ, ಶಂಖಚೂಡನ ಸಮೀಪಕ್ಕೆ ಬಂದು ಅವನನ್ನು ಕುರಿತಿಂತೆಂದನು.

॥ ವೃದ್ಧಬ್ರಾಹ್ಮಣ ಉವಾಚ ॥

ದೇಹಿ ಭಿಕ್ಷಾಂ ಚ ರಾಜೇಂದ್ರ ಮಹ್ಯಂ ವಿಪ್ರಾಯ ಸಾಂಪ್ರತಂ ।
ತ್ವಂ ಸರ್ವಸಂಪದಾಂ ದಾತಾ ಯನ್ಮೇ ಮನಸಿ ವಾಂಛಿತಂ ॥ ೮ ॥

ನಿರಾಹಾರಾಯ ವೃದ್ಧಾಯ ತೃಷಿತಾಯಾತುರಾಯ ಚ ।
ಪಶ್ಚಾತ್ತ್ವಾಂ ಕಥಯಿಷ್ಯಾಮಿ ಪುರಃ ಸತ್ಯಂ ಚ ಕುರ್ವಿತಿ ॥ ೯ ॥

ಓಮಿತ್ಯುವಾಚ ರಾಜೇಂದ್ರಃ ಪ್ರಸನ್ನವದನೇಕ್ಷಣಃ ।
ಕವಚಾರ್ಥೀ ಜನಶ್ಚಾಹಮಿತ್ಯುವಾಚ ಸ ಮಾಯಯಾ ॥ ೧೦ ॥

ತಚ್ಛ್ರುತ್ವಾ ದಾನವಶ್ರೇಷ್ಠೋ ದದೌ ಕವಚಮುತ್ತಮಂ ।
ಗೃಹೀತ್ವಾ ಕವಚಂ ದಿವ್ಯಂ ಜಗಾಮ ಹರಿರೇವ ಚ ॥ ೧೧ ॥

---

೮. ವೃದ್ಧಬ್ರಾಹ್ಮಣ :—ಬೇಡಿದವರ ಇಷ್ಟಾರ್ಥವನ್ನು ಪೂರ್ಣಗೊಳಿಸುವ ಎಲೈ ರಾಜೇಂದ್ರನೇ, ಬ್ರಾಹ್ಮಣನಾದ ನನಗೆ ನನ್ನ ಮನೋಭಿಲಷಿತವಾದ ಭಿಕ್ಷೆಯನ್ನು ನೀಡು.

೯. ಆಹಾರ ನೀರುಗಳಿಲ್ಲದೆ ರೋಗದಿಂದ ನರಳುತ್ತಿರುವ ಮುದುಕನಾದ ನನ್ನ ಅಭಿಲಾಷೆಯನ್ನು ಈಡೇರಿಸಿದನಂತರ ನಿನ್ನ ಜನ್ಮಾಂತರದ ವಿಷಯವನ್ನು ನೆನಪಿಗೆ ತರುವೆನು.

೧೦. ವೃದ್ಧಬ್ರಾಹ್ಮಣನ ದೀನವಾಕ್ಯಗಳನ್ನು ಕೇಳಿ ಕೂಡಲೇ ಪ್ರಸನ್ನವದನನಾದ ದಾನವೇಂದ್ರನು ಅವನ ಇಷ್ಟಾರ್ಥವನ್ನು ನೆರವೇರಿಸುವುದಾಗಿ ಪ್ರತಿಜ್ಞೆ ಮಾಡಲು, ಮಾಯಾವಿಷ್ಣುವು ದಾನವೇಂದ್ರನು ಧರಿಸಿದ್ದ ವಿಷ್ಣುಕವಚವನ್ನು ಬೇಡಿದನು

೧೧. ಕೂಡಲೇ ದಾನವೇಂದ್ರನು ತಾನು ಕಂಠದಲ್ಲಿ ಧರಿಸಿದ್ದ ಅತ್ಯುತ್ತಮವಾದ ನಾರಾಯಣ ಕವಚವನ್ನು ಕಳಚಿ ವೃದ್ಧಬ್ರಾಹ್ಮಣನಿಗೆ ದಾನಮಾಡಿದನು. ಇದಲ್ಲವೇ ಸತ್ಯಪ್ರತಿಜ್ಞರ ಲಕ್ಷಣ? ಇತ್ತ ಆ ಕವಚವನ್ನು ಸ್ವೀಕರಿಸಿದ ಶ್ರೀಹರಿಯು ಪರಿಪೂರ್ಣಮನೋರಥನಾಗಿ ಅಲ್ಲಿಂದ ಹೊರಟುಹೋದನು.

ಶಂಖಚೂಡಸ್ಯ ರೂಪೇಣ ಜಗಾಮ ತುಲಸೀಂ ಪ್ರತಿ ।
ಗತ್ವಾ ತಸ್ಯಾಂ ಮಾಯಯಾ ಚ ವೀರ್ಯಾಧಾನಂ ಚಕಾರ ಹ ॥ ೧೨ ॥

ಅಥ ಶಂಭುರ್ಹರೇಃ ಶೂಲಂ ದಾನವಾರ್ಥಂ ಸಮುಗ್ರಹೀತ್ ।
ಗ್ರೀಷ್ಮಮಧ್ಯಾಹ್ನಮಾರ್ತಂಡಶತಕಪ್ರಭಮುಜ್ವಲಂ ॥ ೧೩ ॥

ನಾರಾಯಣಾಧಿಷ್ಠಿತಾಗ್ರಂ ಬ್ರಹ್ಮಾಧಿಷ್ಠಿತಮಧ್ಯಮಂ ।
ಶಿವಾಧಿಷ್ಠಿತಮೂಲಂ ಚ ಕಾಲಾಧಿಷ್ಠಿತಧಾರಕಂ ॥ ೧೪ ॥

ಕಿರಣಾವಲಿಸಂಯುಕ್ತಂ ಪ್ರಲಯಾಗ್ನಿಶಿಖೋಪಮಂ ।
ದುರ್ನಿವಾರ್ಯಂ ಚ ದುರ್ಧರ್ಷಮವ್ಯರ್ಥಂ ವೈರಿಘಾತಕಂ ॥ ೧೫ ॥

ತೇಜಸಾ ಚಕ್ರತುಲ್ಯಂ ಚ ಸರ್ವಶಸ್ತ್ರವಿಘಾತಕಂ ।
ಶಿವಕೇಶವಯೋರನ್ಯದ್ದುರ್ವಹಂ ಚ ಭಯಂಕರಂ ॥ ೧೬ ॥

---

೧೨. ಅನಂತರ ಶ್ರೀಹರಿಯು ಶಂಖಚೂಡನ ವೇಷವನ್ನು ಧರಿಸಿ, ತುಳಸಿಯ ಸಮೀಪಕ್ಕೆ ಹೋಗಿ, ಅವಳ ಗರ್ಭದಲ್ಲಿ ವೀರ್ಯಾಧಾನಮಾಡಿ ಅವಳ ಪಾತಿವ್ರತ್ಯವನ್ನು ಭಂಗಗೊಳಿಸಿದನು.

೧೩. ಇತ್ತ ಶಂಕರನು ದಾನವೇಂದ್ರನ ಸಂಹಾರಕ್ಕಾಗಿ ಗ್ರೀಷ್ಮಮಧ್ಯಾಹ್ನದಲ್ಲಿ ಏಕಕಾಲದಲ್ಲಿ ಬೆಳಗುವ ಶತಸೂರ್ಯರಂತೆ ತೇಜಸ್ವಿಯಾದ ಶೂಲಾಯುಧವನ್ನು ಕೈಗೆ ತೆಗೆದುಕೊಂಡನು.

೧೪-೧೬. ಆ ಶೂಲಾಯುಧದ ತುದಿಯಲ್ಲಿ ನಾರಾಯಣನೂ, ಮಧ್ಯದಲ್ಲಿ ಬ್ರಹ್ಮನೂ, ಮೂಲದಲ್ಲಿ ಶಿವನೂ, ಅಲುಗಿನಲ್ಲಿ ಕಾಲಪುರುಷನೂ ನೆಲೆಸಿದ್ದರು. ಆ ಶೂಲವು ಪ್ರಳಯಾಗ್ನಿಯಂತೆ ತೀಕ್ಷ್ಣವಾದ ಜ್ವಾಲೆಗಳಿಂದ ಪರಿವೃತವಾಗಿ ದುರ್ಧರವೂ ಅಪ್ರತಿಹತವೂ ಆಗಿದ್ದಿತು. ತೇಜಸ್ಸಿನಲ್ಲಿ ವಿಷ್ಣುಚಕ್ರಕ್ಕೆ ಸದೃಶವಾದ ಆ ಶೂಲಾಯುಧವು ಇತರ ಎಲ್ಲ ಆಯುಧಗಳನ್ನೂ ಭಗ್ನಮಾಡಿ, ವೈರಿಸಂಹಾರಕವಾಗಿ, ಶಿವನಾರಾಯಣರಿಗಲ್ಲದೆ ಇತರರಿಗೆ ದುರ್ಧರವಾಗಿದ್ದಿತು.

ಧನುಸ್ಸಹಸ್ರಂ ದೈರ್ಘ್ಯೇಣ ವಿಸ್ತೃತ್ಯಾ ಶತಹಸ್ತಕಂ ।
ಸಜೀವಂ ಬ್ರಹ್ಮರೂಪಂ ಚ ನಿತ್ಯರೂಪಮನಿರ್ಮಿತಂ ॥ ೧೭ ॥

ಸಂಹರ್ತುಂ ಸರ್ವವಿಧ್ಯಂಡಮೇಕದಾ ದೈವಲೀಲಯಾ ।
ಚಿಕ್ಷೇಪ ಘೂರ್ಣನಂ ಕೃತ್ವಾ ಶಂಖಚೂಡೇ ಚ ನಾರದ ॥ ೧೮ ॥

ರಾಜಾ ಚಾಪಂ ಪರಿತ್ಯಜ್ಯ ಶ್ರೀಕೃಷ್ಣಚರಣಾಂಬುಜಂ ।
ಧ್ಯಾನಂ ಚಕಾರ ಭಕ್ತ್ಯಾ ಚ ಕೃತ್ವಾ ಯೋಗಾಸನಂ ಧಿಯಾ ॥ ೧೯ ॥

ಶೂಲಂ ಚ ಭ್ರಮಣಂ ಕೃತ್ವಾ ನೃಪ ತದ್ಧಾನವೋಪರಿ ।
ಚಕಾರ ಭಸ್ಮಸಾತ್ತಂ ಚ ಸರಥಂ ಚೈವ ಲೀಲಯಾ ॥ ೨೦ ॥

ರಾಜಾ ಧೃತ್ವಾ ದಿವ್ಯರೂಪಂ ಬಾಲಕಂ ಗೋಪವೇಷಕಂ ।
ದ್ವಿಭುಜಂ ಮುರಲೀಹಸ್ತಂ ರತ್ನಭೂಷಣಭೂಷಿತಂ ॥ ೨೧ ॥

೧೭–೧೮. ಸಹಸ್ರ ಧನುಸ್ಸುಗಳಷ್ಟು ದೀರ್ಘವೂ, ನೂರುಗಜ ವಿಸ್ತಾರವೂ ಆದ ಆ ಶೂಲಾಯುಧವು ಸಜೀವವೂ, ಅಕೃತ್ರಿಮರೂಪಯುತವೂ ಆಗಿದ್ದುದಲ್ಲದೆ ಬ್ರಹ್ಮಮಯವಾಗಿ ಅಖಂಡಬ್ರಹ್ಮಾಂಡವನ್ನು ಏಕಕಾಲದಲ್ಲೇ ದೈವಲೀಲೆಯಿಂದ ನಾಶಗೊಳಿಸಲು ನಿರ್ಮಿತವಾದಂತೆ ಇತ್ತು.

೧೯. ಆ ಶೂಲಾಯುಧವನ್ನು ನೋಡಿದ ಕೂಡಲೇ ದಾನವೇಂದ್ರನು ಧನುಸ್ಸನ್ನು ತ್ಯಾಗಮಾಡಿ, ಯೋಗಾಸನಾಸೀನನಾಗಿ ಭಕ್ತಿಯಿಂದ ಶ್ರೀಕೃಷ್ಣ ಪರಮಾತ್ಮನ ಚರಣಕಮಲಗಳನ್ನು ಧ್ಯಾನಿಸಲಾರಂಭಿಸಿದನು.

೨೦. ಆಗ ಶಂಕರನ ಹಸ್ತದಿಂದ ವಿಮುಕ್ತವಾದ ಶೂಲಾಯುಧವು ಚಕ್ರಾಕಾರವಾಗಿ ಸುತ್ತುತ್ತ ಆ ರಾಕ್ಷಸನ ಮೇಲೆ ಬಿದ್ದು ಅವನನ್ನೂ ಅವನ ರಥವನ್ನೂ ಏಕಕಾಲದಲ್ಲಿಯೇ ಭಸ್ಮಾವಶೇಷಮಾಡಿತು.

೨೧–೨೨. ಮೃತನಾದ ಶಂಖಚೂಡನು ಗೋಪಕಿಶೋರವೇಷಧಾರಿಯಾಗಿ, ಕೈಯಲ್ಲಿ ಕೊಳಲನ್ನು ಹಿಡಿದು, ರತ್ನಾಭರಣಗಳಿಂದ ಭೂಷಿತನಾಗಿ, ರತ್ನಭೂಷಣ

ನಾನಾರತ್ನಭೂಷಾಢ್ಯಗೋಪಕೋಟಿಭಿರಾವೃತಂ ।
ಗೋಲೋಕಾದಾಗತಂ ಯಾನಮಾರುಹ್ಯ ತತ್ಪುರಂ ಯಯೌ ॥ ೨೨ ॥

ಗತ್ವಾ ನನಾಮ ಶಿರಸಾ ರಾಧಾಮಾಧವಯೋರ್ಮುನೇ ।
ಭಕ್ತ್ಯಾ ತಚ್ಚರಣಾಂಭೋಜಂ ರಾಸೇ ವೃಂದಾವನೇ ಮುನೇ ॥ ೨೩ ॥

ತದಾ ಚ ಚಕ್ರತುಃ ಕ್ರೋಡೇ ಸ್ನೇಹೇನ ಪರಿಸಂಪ್ಲುತೌ ।
ಅಥ ಶೂಲಶ್ಚ ವೇಗೇನ ಪ್ರಯಯೌ ಶೂಲಿನಃ ಕರಂ ॥ ೨೪ ॥

ಶಂಕರಸ್ತೇನ ಶೂಲೇನ ಶೂಲಪಾಣಿರ್ಬಭೂವ ಸಃ ।
ಸ ಶಿವಸ್ತೇನ ಶೂಲೇನ ದಾನವಸ್ಯಾಸ್ಥಿಜಾಲಕಂ ॥ ೨೫ ॥

ಪ್ರೇಮ್ಣಾ ಚ ಪ್ರೇರಯಾಮಾಸ ಲವಣೋದೇ ಚ ಸಾಗರೇ ।
ಅಸ್ಥಿಭಿಃ ಶಂಖಚೂಡಸ್ಯ ಶಂಖಜಾತಿರ್ಬಭೂವ ಹ ॥ ೨೬ ॥

ಭೂಷಿತರಾದ ಗೋಪಾಲರ ಸಮೂಹದಿಂದ ಪರಿವೃತನಾಗಿ ಗೋಲೋಕದಿಂದ ಬಂದ ದಿವ್ಯವಿಮಾನದಲ್ಲಿ ಕುಳಿತು, ಗೋಲೋಕಕ್ಕೆ ತೆರಳಿದನು.

೨೩. ಎಲೈ ನಾರದಮುನಿಯೇ, ಗೋಲೋಕದ ರಾಸಮಂಡಲದಲ್ಲಿ ಸುದಾಮನ ರೂಪದಿಂದ ತಮ್ಮ ಅಡಿದಾವರೆಗಳಿಗೆ ವಂದಿಸಿ, ಭಕ್ತಿಯಿಂದ ಭಜಿಸುತ್ತಿರುವ ಶಂಖಚೂಡನನ್ನು ನೋಡಿ ರಾಧಾಮಾಧವರು ಪ್ರಸನ್ನಮುಖಿಗಳಾದರು.

೨೪. ಅಲ್ಲದೆ ವಾತ್ಸಲ್ಯಪೂರಿತರಾಗಿ ಸುದಾಮನನ್ನು ಎದೆಗೆ ಅಪ್ಪಿಕೊಂಡರು. ಇತ್ತ ಶೂಲಾಯುಧವೂ ಕೂಡ ತನ್ನ ಕರ್ತವ್ಯವನ್ನು ನೆರವೇರಿಸಿ ಶಂಕರನ ಕೈಸೇರಿತು.

೨೫–೨೬. ಆ ಶೂಲಾಯುಧವನ್ನು ಧರಿಸಿರುವುದರಿಂದಲೇ ಶಂಕರನನ್ನು ಶೂಲಪಾಣಿಯೆನ್ನುವರು ಅನಂತರ ಶಿವನು ಶಂಖಚೂಡನ ಮೂಳೆಗಳನ್ನು ಲವಣ ಸಮುದ್ರದಲ್ಲಿ ಮುಳುಗಿಸುವಂತೆ ಶೂಲಾಯುಧಕ್ಕೆ ಅಪ್ಪಣೆಮಾಡಿದನು. ಆ ಶಂಖಚೂಡನ ಮೂಳೆಗಳಿಂದಲೇ ಸಮುದ್ರದಲ್ಲಿ ಶಂಖಗಳು ಉತ್ಪತ್ತಿಯಾದವು.

ನಾನಾಪ್ರಕಾರ ರೂಪಾ ಚ ಶ್ರೇಷ್ಠಾ ಪೂತಾ ಸುರಾರ್ಚನೇ ।
ಪ್ರಶಸ್ತಂ ಶಂಖತೋಯಂ ಚ ದೇವಾನಾಂ ಪ್ರೀತಿದಂ ಪರಂ ॥ ೨೭ ॥

ತೀರ್ಥತೋಯಸ್ವರೂಪಂ ಚ ಪವಿತ್ರಂ ಶಂಕರಂ ವಿನಾ ।
ಶಂಖಶಬ್ದೋ ಭವೇದ್ಯತ್ರ ತತ್ರ ಲಕ್ಷ್ಮೀಶ್ಚ ಸುಸ್ಥಿರಾ ॥ ೨೮ ॥

ಸ ಸ್ನಾತಃ ಸರ್ವತೀರ್ಥೇಷು ಯಃ ಸ್ನಾತಃ ಶಂಖವಾರಿಣಾ ।
ಶಂಖೋ ಹರೇರಧಿಷ್ಠಾನಂ ಯತ್ರ ಶಂಖಸ್ತತೋ ಹರಿಃ ॥ ೨೯ ॥

ತತ್ರೈವ ಸಂತತಂ ಲಕ್ಷ್ಮೀರ್ದೂರೀಭೂತಮಮಂಗಲಂ ।
ಸ್ತ್ರೀಣಾಂ ಚ ಶಂಖಧ್ವನಿಭಿಃ ಶೂದ್ರಾಣಾಂ ಚ ವಿಶೇಷತಃ ।
ಭೀತಾ ರುಷ್ಟಾ ಯಾತಿ ಲಕ್ಷ್ಮೀಃ ಸ್ಥಲಮನ್ಯಂ ಸ್ಥಲಾತ್ತತಃ ॥ ೩೦ ॥

---

೨೭. ಆ ಶಂಖಗಳು ವಿವಿಧರೂಪದಿಂದ ಕೂಡಿ ದೇವತಾರ್ಚನೆಯಲ್ಲಿ ಪವಿತ್ರವೆನಿಸಿತು. ಶಂಖೋದಕವು ಅತಿಪ್ರಶಸ್ತವಾಗಿಯೂ ದೇವತೆಗಳಿಗೆ ಪ್ರೀತಿದಾಯಕವಾಗಿಯೂ ಇದೆ.

೨೮. ಶಂಖೋದಕವು ಪುಣ್ಯತೀರ್ಥದಂತೆ ಪವಿತ್ರವಾದುದು. ಶಂಕರನನ್ನು ಬಿಟ್ಟು ಉಳಿದವರೆಲ್ಲ ಶಂಖೋದಕದಿಂದ ಪವಿತ್ರರಾಗುವರು. ಶಂಖಧ್ವನಿಯಾಗುವ ಸ್ಥಳಗಳಲ್ಲೆಲ್ಲ ಲಕ್ಷ್ಮಿಯು ಸ್ಥಿರವಾಗಿರುವಳು.

೨೯. ಶಂಖೋದಕದಿಂದ ಸ್ನಾನಮಾಡಿದಾತನು ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಹೊಂದುವನು. ಶಂಖವು ಶ್ರೀಹರಿಯ ವಾಸಸ್ಥಾನವಾದುದರಿಂದ ಶಂಖವಿರುವ ಕಡೆಯಲ್ಲೆಲ್ಲ ಶ್ರೀಹರಿಯು ಇದ್ದೇ ಇರುವನು.

೩೦. ಶಂಖವಿರುವ ಕಡೆಯಲ್ಲೆಲ್ಲ ಲಕ್ಷ್ಮೀದೇವಿಯು ನೆಲೆಸಿರುವಳು. ಅಮಂಗಲವು ದೂರವಾಗುವುದು. ಸ್ತ್ರೀಯರು ಮತ್ತು ಶೂದ್ರರು ಶಂಖಧ್ವನಿಯನ್ನು ಮಾಡಕೂಡದು. ಅವರ ಶಂಖಧ್ವನಿಯನ್ನು ಕೇಳಿ ಕುಪಿತಳಾದ ಲಕ್ಷ್ಮಿಯು ಅಲ್ಲಿಂದ ಸ್ಥಳಾಂತರಕ್ಕೆ ಹೊರಟುಹೋಗುವಳು. (ಇದು ಶಂಖದ ಮಾಹಾತ್ಮ್ಯೆ.)

ಶಿವಶ್ಚ ದಾನವಂ ಹತ್ವಾ ಶಿವಲೋಕಂ ಜಗಾಮ ಸಃ ।
ಪ್ರಹೃಷ್ಟೋ ವೃಷಮಾರುಹ್ಯ ಸ್ವಗಣೈಶ್ಚ ಸಮಾವೃತಃ ॥ ೩೧ ॥

ಸುರಾಃ ಸ್ವವಿಷಯಂ ಪ್ರಾಪುಃ ಪರಮಾನಂದಸಂಯುತಾಃ ।
ನೇದುರ್ದುಂದುಭಯಃ ಸ್ವರ್ಗೇ ಜಗುರ್ಗಂಧರ್ವಕಿನ್ನರಾಃ ॥ ೩೨ ॥

ಬಭೂವ ಪುಷ್ಪವೃಷ್ಟಿಶ್ಚ ಶಿವಸ್ಯೋಪರಿ ಸಂತತಂ ।
ಪ್ರಶಶಂಸುಃ ಸುರಾಸ್ತಂ ಚ ಮುನೀಂದ್ರಪ್ರವರಾದಯಃ ॥ ೩೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನೇ
ಶಂಖಚೂಡವಧೇ ಶಂಖಪ್ರಸ್ತಾವನೋ
ನಾಮ ವಿಂಶತಿತಮೋಽಧ್ಯಾಯಃ

---

೩೧. ಇತ್ತ ಶಂಕರನು ದಾನವೇಂದ್ರನನ್ನು ಸಂಹರಿಸಿ ಸಂತುಷ್ಟನಾಗಿ ವೃಷಭದ ಮೇಲೆ ಕುಳಿತು ತನ್ನ ಪ್ರಮಥಗಣಗಳೊಡನೆ ಶಿವಲೋಕಕ್ಕೆ ತೆರಳಿದನು.,

೩೨. ಅನಂತರ ದೇವತೆಗಳೆಲ್ಲರೂ ತಮ್ಮ ತಮ್ಮ ಅಧಿಕಾರವನ್ನು ಪುನಃ ಪಡೆದು ಪರಮಾನಂದಭರಿತರಾಗಿ ತಮ್ಮ ಲೋಕಕ್ಕೆ ತೆರಳಿದರು. ಆಗ ಸ್ವರ್ಗದಲ್ಲಿ ನಗಾರಿಗಳು ಮೊಳಗಿದವು. ಯಕ್ಷ ಗಂಧರ್ವ ಕಿನ್ನರರು ಸಂತೋಷದಿಂದ ಗಾನ ಮಾಡಿದರು.

೩೩. ಅನಂತರ ಶಿವನ ಮಸ್ತಕದ ಮೇಲೆ ಧಾರಾಕಾರವಾಗಿ ಪುಷ್ಪವೃಷ್ಟಿಯಾಯಿತು. ದೇವತೆಗಳೂ, ಋಷಿವರ್ಯರೂ ಶಿವನನ್ನು ಸ್ತುತಿಸಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ತುಳಸಿಯ
ಉಪಾಖ್ಯಾನದಲ್ಲಿ ಶಂಖಚೂಡನ ವಧೆ ಮತ್ತು ಶಂಖದ
ಮಾಹಾತ್ಮ್ಯವನ್ನು ತಿಳಿಸುವ ಇಪ್ಪತ್ತನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತನೆಯ ಅಧ್ಯಾಯದ ಸಾರಾಂಶವು

ಕಾಳಿಕಾದೇವಿಯಿಂದ ರಣರಂಗದ ಸಮಾಚಾರವನ್ನು ತಿಳಿದು ಸಾಕ್ಷಾತ್ ಶಂಕರನೇ ಯುದ್ಧಕ್ಕೆ ಏರಲು ಶಂಖಚೂಡನು ಅವನಿಗೆ ಭಕ್ತಿಯಿಂದ ವಂದಿಸಿ, ಅವನೊಡನೆ ದ್ವಂದ್ವಯುದ್ಧಕ್ಕೆ ಅನುವಾದನು. ಅವರಿಬ್ಬರಿಗೂ ಒಂದು ವರ್ಷ ಯುದ್ಧವಾದರೂ ಯಾರೂ ಸೋಲುಗೆಲವುಗಳನ್ನು ಪಡೆಯಲಿಲ್ಲ. ಆಗ ಇಬ್ಬರೂ ಅಸ್ತ್ರತ್ಯಾಗಮಾಡಿದರು. ಇತ್ತ ಶಂಕರನು ಮೃತರಾದ ತನ್ನವರನ್ನೆಲ್ಲ ಬದುಕಿಸಿದನು. ಅಷ್ಟು ಹೊತ್ತಿಗೆ ವಿಷ್ಣುವು ವೃದ್ಧಬ್ರಾಹ್ಮಣವೇಷಧಾರಿಯಾಗಿ ಶಂಖಚೂಡನ ಸಮೀಪಕ್ಕೆ ಬಂದು, ಅವನಿಂದ ಕವಚವನ್ನು ಬೇಡಿ ತೆಗೆದುಕೊಂಡು, ಅವನ ಪತ್ನಿಯಾದ ತುಳಸಿಯ ಸಮೀಪಕ್ಕೆ ಶಂಖಚೂಡನ ವೇಷದಿಂದ ಹೋಗಿ ಅವಳ ಪಾತಿವ್ರತ್ಯವನ್ನು ಭಂಗಗೊಳಿಸಿ ಅಂತರ್ಧಾನನಾದನು. ಅನಂತರ ಶಿವನು ಶೂಲಾಯುಧದಿಂದ ಶಂಖಚೂಡನನ್ನು ಲೀಲೆಯಿಂದಲೇ ಸಂಹರಿಸಿದನು. ಮೃತನಾದ ಶಂಖಚೂಡನು ಸುದಾಮನೆಂಬ ಗೋಪನಾಗಿ ಗೋಲೋಕದ ರಾಸಮಂಡಲಕ್ಕೆ ಹೋಗಿ ರಾಧಾಕೃಷ್ಣರ ಸೇವೆಯಲ್ಲಿ ನಿರತನಾದನು. ಲವಣಸಮುದ್ರದಲ್ಲಿ ಮುಳುಗಿದ ಶಂಖಚೂಡನ ಮೂಳೆಗಳೇ ಎಲ್ಲೆಲ್ಲೂ ಶಂಖರೂಪದಿಂದ ಪವಿತ್ರವೆನಿಸಿದೆ. ಶಂಖೋದಕವು ಪರಮಪವಿತ್ರವಾದುದು.

—|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕವಿಂಶತಿತಮೋಽಧ್ಯಾಯಃ ||

|| ನಾರದ ಉವಾಚ ||

ನಾರಾಯಣಶ್ಚ ಭಗವಾನ್ವೀರ್ಯಾಧಾನಂ ಚಕಾರ ಹ ।
ತುಲಸ್ಯಾಂ ಕೇನ ರೂಪೇಣ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ನಾರಾಯಣ ಉವಾಚ ||

ನಾರಾಯಣಶ್ಚ ಭಗವಾನ್ ದೇವಾನಾಂ ಸಾಧನೇನ ಚ ।
ಶಂಖಚೂಡಸ್ಯ ರೂಪೇಣ ರೇಮೇ ತದ್ರಾಮಯಾ ಸಹ || ೨ ||

ಇಪ್ಪತ್ತೊಂದನೆಯ ಅಧ್ಯಾಯವು

೧. ನಾರದ:–ಎಲೈ ನಾರಾಯಣಮಹರ್ಷಿಯೇ, ಭಗವಂತನಾದ ಶ್ರೀಮನ್ನಾರಾಯಣನು ಯಾವ ವೇಷವನ್ನು ಧರಿಸಿ, ತುಳಸಿಯ ಸಮೀಪಕ್ಕೆ ಹೋಗಿ, ಆಕೆಯಲ್ಲಿ ವೀರ್ಯಾಧಾನಮಾಡಿದನೆಂಬುದನ್ನು ನನಗೆ ಹೇಳು.

೨. ನಾರಾಯಣ:—ದೇವತೆಗಳ ಸಹಕಾರದಿಂದ ಶಂಖಚೂಡನ ವೇಷಧಾರಿಯಾಗಿ ನಾರಾಯಣನು ಆ ತುಳಸಿದೇವಿಯೊಡನೆ ರಮಿಸಿದನು.

ಶಂಖಚೂಡಸ್ಯ ಕವಚಂ ಗೃಹೀತ್ವಾ ಮಾಯಯಾ ಹರಿಃ |
ಪುನರ್ವಿಧಾಯ ತದ್ರೂಪಂ ಜಗಾಮ ತುಲಸೀಗೃಹಂ || ೩ ||

ದುಂದುಭಿಂ ವಾದಯಾಮಾಸ ತುಲಸೀದ್ವಾರಸನ್ನಿಧೌ |
ಜಯಶಬ್ದರವದ್ವಾರಾ ಬೋಧಯಾಮಾಸ ಸುಂದರೀಂ || ೪ ||

ತಚ್ಛ್ರುತ್ವಾ ಸಾ ಚ ಸಾಧ್ವೀ ಚ ಪರಮಾನಂದಸಂಯುತಾ |
ರಾಜಮಾರ್ಗಗವಾಕ್ಷೇಣ ದದರ್ಶ ಪರಮಾದರಾತ್ || ೫ ||

ಬ್ರಾಹ್ಮಣೇಭ್ಯೋ ಧನಂ ದತ್ವಾ ಕಾರಯಾಮಾಸ ಮಂಗಲಂ |
ಬಂದಿಭ್ಯೋ ಭಿಕ್ಷುಕೇಭ್ಯಶ್ಚ ವಾಚಿಕೇಭ್ಯೋ ಧನಂ ದದೌ || ೬ ||

---

೩. ಹರಿಯು ಮಾಯಾರೂಪದಿಂದ ಶಂಖಚೂಡನ ಸಮೀಪಕ್ಕೆ ಹೋಗಿ. ಅವನ ಕವಚವನ್ನು ಬೇಡಿ ತೆಗೆದುಕೊಂಡು, ಅದನ್ನು ತಾನು ಧರಿಸಿ, ಶಂಖಚೂಡ ನೆಂಬ ಭ್ರಮೆಯುಂಟಾಗುವಂತೆ ರೂಪವೇಷಗಳನ್ನು ಅನುಕರಿಸಿ, ತುಳಸಿಯ ಸಮೀಪಕ್ಕೆ ಹೋದನು.

೪. ತುಳಸಿಯ ಮನೆಯ ಬಾಗಿಲಿಗೆ ಹೋಗಿ, ನಗಾರಿಯನ್ನು ಧ್ವನಿಮಾಡಿ ದನು. ಜಯಜಯಕಾರದಿಂದ ಆ ಸುಂದರಿಯನ್ನು ಎಚ್ಚರಗೊಳಿಸಲು, ಆಕೆಯು ತನ್ನ ಪತಿಯಾದ ಶಂಖಚೂಡನು ಯುದ್ಧದಲ್ಲಿ ಗೆದ್ದು ಬಂದನೆಂದು ಊಹಿಸಿದಳ .

೫. ಜಯಜಯಕಾರವನ್ನು ಕೇಳಿದ ಆ ಸಾಧ್ವೀಮಣಿಯು ಪರಮಾನಂದ ಭರಿತಳಾಗಿ ಅತ್ಯಾದರದಿಂದ ರಾಜಮಾರ್ಗದ ಕಡೆಗಿರುವ ಗವಾಕ್ಷದ ಬಳಿಗೆ ಬಂದು ನೋಡಿದಳು.

೬. ತನ್ನ ಪತಿಯು ಯುದ್ಧದಲ್ಲಿ ಗೆದ್ದು ಬಂದಿರುವನೆಂದು ತಿಳಿದು ಬ್ರಾಹ್ಮಣರಿಗೆಲ್ಲ ಯಥೇಚ್ಛವಾಗಿ ದಾನಮಾಡಿ, ಮಂಗಳಕಾರ್ಯಗಳನ್ನು ಮಾಡಿಸಿ ದಳು. ರಾಜಬಂದಿಗಳಿಗೂ, ಭಿಕ್ಷುಕರಿಗೂ, ಪತ್ರವಾಹಕರಿಗೂ ದ್ರವ್ಯದಾನ ಮಾಡಿದಳು.

ಅವರುಹ್ಯ ರಥಾದ್ದೇವೋ ದೇವ್ಯಾಶ್ಚ ಭವನಂ ಯಯೌ ।
ಅಮೂಲ್ಯರತ್ನಸಂಕ್ಲೃಪ್ತಂ ಸುಂದರಂ ಸುಮನೋಹರಂ ॥ ೭ ॥

ದೃಷ್ಟ್ವಾ ಚ ಪುರತಃ ಕಾಂತಂ ಶಾಂತಂ ಕಾಂತಾ ಮುದಾನ್ವಿತಾ ।
ತತ್ಪಾದಂ ಕ್ಷಾಲಯಾಮಾಸ ನನಾಮ ಚ ರುರೋದ ಚ ॥ ೮ ॥

ರತ್ನಸಿಂಹಾಸನೇ ರಮ್ಯೇ ವಾಸಯಾಮಾಸ ಕಾಮುಕೀ ।
ತಾಂಬೂಲಂ ಚ ದದೌ ತಸ್ಮೈ ಕರ್ಪೂರಾದಿಸುವಾಸಿತಂ ॥ ೯ ॥

ಅದ್ಯ ಮೇ ಸಫಲಂ ಜನ್ಮ ಹ್ಯದ್ಯ ಮೇ ಸಫಲಾಃ ಕ್ರಿಯಾಃ ।
ರಣಾಗತಂ ಚ ಪ್ರಾಣೇಶಂ ಪಶ್ಯಂತ್ಯಾಶ್ಚ ಪುನರ್ಗೃಹೇ ॥ ೧೦ ॥

ಸಸ್ಮಿತಾ ಸಕಟಾಕ್ಷಂ ಚ ಸಕಾಮಾ ಪುಲಕಾಂಚಿತಾ ।
ಪಪ್ರಚ್ಛ ರಣವೃತ್ತಾಂತಂ ಕಾಂತಂ ಮಧುರಯಾ ಗಿರಾ ॥ ೧೧ ॥

---

೭. ಇತ್ತ ಶಂಖಚೂಡನ ವೇಷವನ್ನು ಧರಿಸಿದ್ದ ದೇವನು ರಥದಿಂದಿಳಿದು, ಅಮೂಲ್ಯ ರತ್ನಗಳನ್ನು ಪೆಟ್ಟಿ ಸುಂದರವೂ, ಮನೋಹರವೂ ಆಗಿರುವ ಆ ತುಳಸಿಯ ಮಂದಿರಕ್ಕೆ ಹೋದನು.

೮. ಶಾಂತನಾದ ತನ್ನ ಪ್ರಾಣಕಾಂತನು ಎದುರಿನಲ್ಲಿ ನಿಂತಿರುವುದನ್ನು ನೋಡಿ ತುಳಸಿಯು ಸಂತುಷ್ಟಳಾಗಿ, ಅವನ ಪಾದಕಮಲಗಳನ್ನು ತೊಳೆದು, ಅವನಿಗೆ ನಮಸ್ಕರಿಸಿ, ಘಾಯಗೊಂಡ ಅವನ ಅವಯವಗಳನ್ನು ನೋಡಿ ಗೋಳಾಡಿದಳು.

೯. ಕಾಮುಕಿಯಾದ ಆ ತುಳಸಿಯು ರಮ್ಯವಾದ ರತ್ನಸಿಂಹಾಸನದಲ್ಲಿ ಅವನನ್ನು ಕುಳ್ಳಿರಿಸಿ, ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ತಾಂಬೂಲವನ್ನು ಅವನಿಗೆ ಕೊಟ್ಟು ಉಪಚರಿಸಿದಳು.

೧೦–೧೧. 'ಯುದ್ಧಕ್ಕೆ ಹೋಗಿದ್ದ ನನ್ನ ಪ್ರಾಣಕಾಂತನು. ಜಯಶಾಲಿಯಾಗಿ ಪುನಃ ಮನೆಗೆ ಬಂದುದರಿಂದ, ಇಂದು ನನ್ನ ಜನ್ಮವು ಸಫಲವಾಯಿತು; ನನ್ನ ಪುಣ್ಯಕಾರ್ಯಗಳೆಲ್ಲವೂ ಇಂದು ಫಲಿತವಾದವು' ಎಂದು ಹೇಳಿಕೊಳ್ಳುತ್ತ, ರೋಮಾಂಚಿತಶರೀರಳೂ, ಸ್ಮಿತಮುಖಿಯೂ ಆಗಿ, ಕಟಾಕ್ಷವನ್ನು ಬೀರುತ್ತ, ಮಧುರ ವಾಣಿಯಿಂದ ತನ್ನ ಪತಿಯನ್ನು ಕುರಿತು ಯುದ್ಧದ ಸಮಾಚಾರವನ್ನು ವಿವರಿಸಬೇಕೆಂದು ಕೇಳಿದಳು.

|| ತುಲಸ್ಯುವಾಚ ||

ಅಸಂಖ್ಯವಿಶ್ವಸಂಹರ್ತ್ರಾ ಸಾರ್ಧಮಾಜೌ ತವ ಪ್ರಭೋ ।
ಕಥಂ ಬಭೂವ ವಿಜಯಸ್ತನ್ಮೇ ಬ್ರೂಹಿ ಕೃಪಾನಿಧೇ || ೧೨ ||

ತುಲಸೀವಚನಂ ಶ್ರುತ್ವಾ ಪ್ರಹಸ್ಯ ಕಮಲಾಪತಿಃ ।
ಶಂಖಚೂಡಸ್ಯ ರೂಪೇಣ ತಾಮುವಾಚಾನೃತಂ ವಚಃ || ೧೩ ||

|| ಶ್ರೀ ಹರಿರುವಾಚ ||

ಆವಯೋಃ ಸಮರಂ ಕಾಂತೇ ಪೂರ್ಣಮಬ್ದಂ ಬಭೂವ ಹ ।
ನಾಶೋ ಬಭೂವ ಸರ್ವೇಷಾಂ ದಾನವಾನಾಂ ಚ ಕಾಮಿನಿ || ೧೪ ||

ಪ್ರೀತಿಂ ಚ ಕಾರಯಾಮಾಸ ಬ್ರಹ್ಮಾ ಚ ಸ್ವಯಮಾವಯೋಃ ।
ದೇವಾನಾಮಧಿಕಾರಶ್ಚ ಪ್ರದತ್ತೋ ಬ್ರಹ್ಮಣಾ ಪುರಾ || ೧೫ ||

---

೧೨. ತುಳಸಿ:— ಎಲೈ ದಯಾಮಯನಾದ ಪ್ರಾಣಪ್ರಿಯನೇ, ನಿಖಿಲ ವಿಶ್ವವನ್ನೂ ಸಂಹರಿಸಲು ಶಕ್ತನಾದ ಪರಶಿವನೊಡನೆ ಮಾಡಿದ ಯುದ್ಧದಲ್ಲಿ ನಿನಗೆ ಗೆಲವು ಲಭಿಸಿದುದೇತು? ದಯವಿಟ್ಟು ವಿವರಿಸು.

೧೩. ತುಳಸಿಯ ಮಾತನ್ನು ಕೇಳಿ ಕಮಲಾಕಾಂತನು ನಸುನಗುತ್ತ ಶಂಖಚೂಡನ ಧ್ವನಿಯಿಂದಲೇ ಅವಳಿಗೆ ಕೆಲವು ಅನೃತವಚನಗಳನ್ನು ಹೇಳಿದನು.

೧೪. ಶ್ರೀಹರಿ:—ಎಲೌ ಕಾಂತೆಯೇ, ಪರಶಿವನಿಗೂ ನನಗೂ ಒಂದು ವರ್ಷ ಪೂರ್ಣವಾಗಿ ಯುದ್ಧವಾಯಿತು. ಸಮಸ್ತ ದಾನವರೂ ಆ ಯುದ್ಧದಲ್ಲಿ ಮೃತಿ ಹೊಂದಿದರು.

೧೫. ಹಿಂದೆ ಬ್ರಹ್ಮದೇವನು ದೇವತೆಗಳ ಅಧಿಕಾರವನ್ನು ನನಗೆ ಕೊಟ್ಟಿದ್ದರಿಂದ, ಈಗ ತಾನೇ ಬಂದು ನಮ್ಮಿಬ್ಬರಲ್ಲಿಯೂ ಪ್ರೀತಿಯನ್ನು ತೋರಿ, ಯುದ್ಧವನ್ನು ಶಾಂತಗೊಳಿಸಿದನು.

ಮಯಾಗತಂ ಸ್ವಭವನಂ ಶಿವಲೋಕಂ ಶಿವೋ ಗತಃ ।
ಇತ್ಯುಕ್ತ್ವಾ ಜಗತಾಂ ನಾಥಃ ಶಯನಂ ಚ ಚಕಾರ ಹ ॥ ೧೬ ॥

ರೇಮೇ ರಮಾಪತಿಸ್ತತ್ರ ರಾಮಯಾ ಸಹ ನಾರದ ।
ಸಾ ಸಾಧ್ವೀ ಸುಖಸಂಭೋಗಾದಾಕರ್ಷಣವ್ಯತಿಕ್ರಮಾತ್ ।
ಸರ್ವಂ ವಿತರ್ಕಯಾಮಾಸ ಕಸ್ತ್ವಮೇವೇತ್ಯುವಾಚ ಹ ॥ ೧೭ ॥

॥ ತುಲಸ್ಯುವಾಚ ॥

ಕೋ ವಾ ತ್ವಂ ವದ ಮಾಯೇಶೋ ಭುಕ್ತಾಹಂ ಮಾಯಯಾ ತ್ವಯಾ ॥೧೮॥
ದೂರೀಕೃತಂ ಮತ್ಸತೀತ್ವಮಥವಾ ತ್ವಾಂ ಶಪಾಮಹೇ ।
ತುಲಸೀವಚನಂ ಶ್ರುತ್ವಾ ಹರಿಃ ಶಾಪಭಯೇನ ಚ ॥ ೧೯ ॥

ದಧಾರ ಲೀಲಯಾ ಬ್ರಹ್ಮನ್ ಸ್ವಾಂ ಮೂರ್ತಿಂ ಸುಮನೋಹರಾಂ ।
ದದರ್ಶ ಪುರತೋ ದೇವೀ ದೇವದೇವಂ ಸನಾತನಂ ।
ನವೀನನೀರದಶ್ಯಾಮಂ ಶರತ್ಪಂಕಜಲೋಚನಂ ॥ ೨೦ ॥

---

೧೬. ಆದ್ದರಿಂದ ನಾನು ನನ್ನ ಮನೆಗೆ ಹಿಂತಿರುಗಿದೆನು. ಶಿವನು ಶಿವಲೋಕಕ್ಕೆ ತೆರಳಿದನು. ಇಂತು ನುಡಿದು ಜಗನ್ನೊಡೆಯನಾದ ನಾರಾಯಣನು ರತ್ನಪರ್ಯಂಕದಲ್ಲಿ ಪವಡಿಸಿದನು.

೧೭. ಎಲೈ ನಾರದನೇ, ರಮಾಪತಿಯು ಆ ತುಳಸಿಯೊಡನೆ ಸಂಭೋಗಿಸಿದನು. ಆ ಪತಿವ್ರತಾಶಿರೋಮಣಿಯು ಸಂಭೋಗಸುಖದಲ್ಲಿ ತನ್ನ ಮನಸ್ಸನ್ನು ಆಕರ್ಷಿಸುವ ಕ್ರಮವ್ಯತ್ಯಾಸದಿಂದ 'ಇವನು ಯಾರೋ ಪರಪುರುಷನು' ಎಂದು ಮನಸ್ಸಿನಲ್ಲೇ ತರ್ಕಿಸುತ್ತ, ನೀನಾರೆಂದು ಅವನನ್ನು ಕೇಳಿದಳು.

೧೮. ತುಳಸಿ:- ಮಾಯೆಯಿಂದ ನನ್ನೊಡನೆ ಉಪಭೋಗಿಸಿದ ಮಾಯಾವಿಯೇ, ನೀನಾರು ?

೧೯. 'ನನ್ನ ಪಾತಿವ್ರತ್ಯವನ್ನು ಭಂಗಗೊಳಿಸಿದ ನೀನಾರೆಂಬುದನ್ನು ಹೇಳುವೆಯೋ ಅಥವಾ ಪತಿವ್ರತೆಯ ಶಾಪಕ್ಕೊಳಗಾಗುವೆಯೋ' ಎನಲು ಶಾಪಭೀತನಾದ ಹರಿಯು ತನ್ನ ಸುಮನೋಹರವಾದ ರೂಪವನ್ನು ಆಕೆಗೆ ತೋರಿದನು.

೨೦-೨೧. ನವಮೇಘಶ್ಯಾಮನೂ, ಶರದೃತುವಿನ ಕಮಲದಳದಂತೆ ವಿಶಾಲನಯನನೂ, ರತ್ನಾಭರಣಭೂಷಿತನೂ, ಪೀತಾಂಬರಧಾರಿಯೂ ಆಗಿ, ಮಂದಹಾಸ

ಕೋಟಿಕಂದರ್ಪಲೀಲಾಭಂ ರತ್ನಭೂಷಣಭೂಷಿತಂ ।
ಈಷದ್ಧಾಸ್ಯಂ ಪ್ರಸನ್ನಾಸ್ಯಂ ಶೋಭಿತಂ ಪೀತವಾಸಸಾ ॥ ೨೧ ॥

ತಂ ದೃಷ್ಟ್ವಾ ಕಾಮಿನೀ ಕಾಮಾನ್ಮೂರ್ಛಾಂ ಸಂಪ್ರಾಪ ಲೀಲಯಾ ।
ಪುನಶ್ಚ ಚೇತನಾಂ ಪ್ರಾಪ್ಯ ಪುನಃ ಸಾ ತಮುವಾಚ ಹ ॥ ೨೨ ॥

ಹೇ ನಾಥ ತೇ ದಯಾ ನಾಸ್ತಿ ಪಾಷಾಣಸದೃಶಸ್ಯ ಚ ।
ಛಲೇನ ಧರ್ಮಭಂಗೇನ ಮಮ ಸ್ವಾಮೀ ತ್ವಯಾ ಹತಃ ॥ ೨೩ ॥

ಪಾಷಾಣಸದೃಶಸ್ತ್ವಂ ಚ ದಯಾಹೀನೋ ಯತಃ ಪ್ರಭೋ ।
ತಸ್ಮಾತ್ಪಾಷಾಣರೂಪಸ್ತ್ವಂ ಭುವಿ ದೇವ ಭವಾಧುನಾ ॥ ೨೪ ॥

ಯೇ ವದಂತಿ ದಯಾಸಿಂಧುಂ ತ್ವಾಂ ತೇ ಭ್ರಾಂತಾ ನ ಸಂಶಯಃ ।
ಭಕ್ತೋ ವಿನಾಪರಾಧೇನ ಪರಾರ್ಥೇ ಚ ಕಥಂ ಹತಃ ॥ ೨೫ ॥

ದಿಂದ ಪ್ರಸನ್ನವದನನಾಗಿ ಕೋಟಿಮನ್ಮಥರ ಲಾವಣ್ಯವನ್ನು ಮೀರಿರುವ ಅನಾದಿಯಾದ ದೇವದೇವನನ್ನು ತುಳಸಿಯು ನೋಡಿದಳು.

೨೨. ಆ ಸುಂದರರೂಪವನ್ನು ನೋಡಿ ಕಾಮುಕಿಯಾದ ತುಳಸಿಯು ಮೋಹದಿಂದ ಮೂರ್ಛೆಗೊಂಡಳು. ಕ್ಷಣಕಾಲಾನಂತರ ಚೇತನವನ್ನು ಹೊಂದಿ ಪುನಃ ಅವನನ್ನು ಕುರಿತು ಇಂತು ನುಡಿದಳು

೨೩. ಎಲೈ ಜಗನ್ನಾಥನೇ, ಪಾಷಾಣದಂತೆ ನೀನು ನಿರ್ದಯಸ್ವಭಾವನಾಗಿರುವೆ. ಮೋಸದಿಂದ ನನ್ನ ಪತಿಯನ್ನು ಸಂಹರಿಸಿ, ನನ್ನ ಪಾತಿವ್ರತ್ಯವನ್ನು ಭಂಗಗೊಳಿಸಿರುವೆ.

೨೪. ಆದಕಾರಣ ದಯಾಹೀನನೂ ಪಾಷಾಣ (ಕಲ್ಲು) ಹೃದಯನೂ ಆದ ನೀನು ಭೂಲೋಕದಲ್ಲಿ ಪಾಷಾಣ (ಸಾಲಿಗ್ರಾಮ ಶಿಲೆ) ರೂಪದಿಂದಲೇ ಪೂಜ್ಯನಾಗು.

೨೫. ನಿನ್ನನ್ನು ದಯಾಸಮುದ್ರನೆಂದು ಕರೆಯುವವರೆಲ್ಲರೂ ಭ್ರಾಂತರೆಂಬುದರಲ್ಲಿ ಸಂದೇಹವಿಲ್ಲ. ನಿರಪರಾಧಿಯಾದ ಭಕ್ತನನ್ನು ಇನ್ನೊಬ್ಬರ ಹಿತಕ್ಕಾಗಿ ನೀನು ಕೊಂದುದು ನ್ಯಾಯವೇ ?

ದುರ್ವೃತ್ತಸ್ತ್ವಂ ಚ ಸರ್ವಜ್ಞೋ ನ ಜಾನಾಸಿ ಪರವ್ಯಥಾಂ ।
ಅತಸ್ತ್ವಮೇಕಜನುಷಿ ಸ್ವಮೇವ ವಿಸ್ಮರಿಷ್ಯಸಿ ॥ ೨೬ ॥

ಇತ್ಯುಕ್ತ್ವಾ ಚ ಮಹಾಸಾಧ್ವೀ ನಿಪತ್ಯ ಚರಣೇ ಹರೇಃ ।
ಭೃಶಂ ರುರೋದ ಶೋಕಾರ್ತಾ ವಿಲಲಾಪ ಮುಹುರ್ಮುಹುಃ ॥ ೨೭ ॥

ತಸ್ಯಾಶ್ಚ ಕರುಣಾಂ ದೃಷ್ಟ್ವಾ ಕರುಣಾಮಯಸಾಗರಃ ।
ನಾರಾಯಣಸ್ತಾಂ ಬೋಧಯಿತುಮುವಾಚ ಕಮಲಾಪತಿಃ ॥ ೨೮ ॥

॥ ಶ್ರೀ ಭಗವಾನುವಾಚ ॥

ತಪಸ್ತ್ವಯಾ ಕೃತಂ ಸಾಧ್ವೀ ಮದರ್ಥೇ ಭಾರತೇ ಚಿರಂ ।
ತ್ವದರ್ಥೇ ಶಂಖಚೂಡಶ್ಚ ಚಕಾರ ಸುಚಿರಂ ತಪಃ ॥ ೨೯ ॥

ಕೃತ್ವಾ ತ್ವಾಂ ಕಾಮಿನೀಂ ಕಾಮೀ ವಿಜಹಾರ ಚ ತತ್ಫಲಾತ್ ।
ಅಧುನಾ ದಾತುಮುಚಿತಂ ತವೈವ ತಪಸಃ ಫಲಂ ॥ ೩೦ ॥

---

೨೬. ದುಷ್ಟಕಾರ್ಯದಲ್ಲಿ ನಿರತನಾದ ನೀನು ಸರ್ವಜ್ಞನಾದರೂ, ಮತ್ತೊಬ್ಬರ ಮನೋವ್ಯಥೆಯನ್ನು ಅರಿಯದಿರುವುದರಿಂದ, 'ಒಂದು ಜನ್ಮದಲ್ಲಿ ನಿನ್ನನ್ನೇ ನೀನು ಮರೆಯುವಂತಾಗಲಿ.'

೨೭. ಆ ಸಾಧ್ವೀಶಿರೋಮಣಿಯು ಹೀಗೆ ಹೇಳುತ್ತ ಶ್ರೀಹರಿಯ ಚರಣಗಳಿಗೆ ವಂದಿಸಿ, ಪತಿಯ ವಿರಹದುಃಖದಿಂದ ಪುನಃ ಪುನಃ ಗೋಳಾಡಿದಳು.

೨೮. ಕರುಣಾಸಮುದ್ರನೂ, ಕಮಲಾಕಾಂತನೂ ಆದ ನಾರಾಯಣನು ಅವಳ ದುಃಖವನ್ನು ನೋಡಲಾರದೆ, ಅವಳನ್ನು ಸಮಾಧಾನಗೊಳಿಸಲು ಇಂತೆಂದನು.

೨೯. ಶ್ರೀಭಗವಾನ್ :—ಎಲೌ ಸಾಧ್ವೀಶಿರೋಮಣಿಯೇ, ನೀನು ಭಾರತ ಖಂಡದಲ್ಲಿ ನನಗಾಗಿ ಬಹುಕಾಲ ತಪಸ್ಸುಮಾಡಿದೆ. ಶಂಖಚೂಡನು ನಿನಗಾಗಿ ಬಹುಕಾಲ ತಪಸ್ಸುಮಾಡಿದನು

೩೦. ಅದರ ಫಲವಾಗಿ ಕಾಮಿಯಾದ ಶಂಖಚೂಡನು ನಿನ್ನನ್ನು ಕಾಮಿನಿ (ಪತ್ನಿ)ಯನ್ನಾಗಿ ಪಡೆದು ನಿನ್ನೊಡನೆ ವಿಹರಿಸಿದನು ಈಗ ನೀನು ಮಾಡಿದ ತಪಸ್ಸಿಗೆ ಫಲವನ್ನು ಕೊಡುವುದು ನನ್ನ ಕರ್ತವ್ಯವಾಯಿತು.

ಇದಂ ಶರೀರಂ ತ್ಯಕ್ತ್ವಾ ಚ ದಿವ್ಯಂ ದೇಹಂ ವಿಧಾಯ ಚ ।
ರಾಸೇ ಮೇ ರಮಯಾ ಸಾರ್ಧಂ ತ್ವಂ ರಮಾಸದೃಶೀ ಭವ ॥ ೩೧ ॥

ಇಯಂ ತನುರ್ನದೀರೂಪಾ ಗಂಡಕೀತಿ ಚ ವಿಶ್ರುತಾ ।
ಪೂತಾ ಸುಪುಣ್ಯದಾ ನೄಣಾಂ ಪುಣ್ಯಾ ಭವತು ಭಾರತೇ ॥ ೩೨ ॥

ತವ ಕೇಶಸಮೂಹಾಶ್ಚ ಪುಣ್ಯವೃಕ್ಷಾ ಭವಂತ್ವಿತಿ ।
ತುಲಸೀ ಕೇಶಸಂಭೂತಾ ತುಲಸೀತಿ ಚ ವಿಶ್ರುತಾ ॥ ೩೩ ॥

ತ್ರಿಲೋಕೇಷು ಚ ಪುಷ್ಪಾಣಾಂ ಪತ್ರಾಣಾಂ ದೇವಪೂಜನೇ ।
ಪ್ರಧಾನರೂಪಾ ತುಲಸೀ ಭವಿಷ್ಯತಿ ವರಾನನೇ ॥ ೩೪ ॥

ಸ್ವರ್ಗೇ ಮರ್ತ್ಯೇ ಚ ಪಾತಾಲೇ ವೈಕುಂಠೇ ಮಮ ಸನ್ನಿಧೌ ।
ಭವಂತು ತುಲಸೀವೃಕ್ಷಾ ವರಾಃ ಪುಷ್ಪೇಷು ಸುಂದರಿ ॥ ೩೫ ॥

---

೩೧. ಆದುದರಿಂದ ನೀನು ಈ ಪ್ರಾಕೃತದೇಹವನ್ನು ಳಿದು ದಿವ್ಯಶರೀರ ಧಾರಿಣಿಯಾಗಿ ಗೋಲೋಕದ ರಾಸಮಂಡಲಕ್ಕೆ ಬಂದು ರಮೆಯೊಡನೆ ವಿಹರಿಸು.

೩೨. ಈ ನಿನ್ನ ಶರೀರವು ಗಂಡಕೀಯೆಂಬ ನದೀರೂಪದಿಂದ ವಿಖ್ಯಾತವಾಗಿ ಭರತಖಂಡದಲ್ಲಿ ಪವಿತ್ರವೆನಿಸಲಿ. ಅಲ್ಲಿ ಸ್ನಾನಮಾಡುವ ಮನುಷ್ಯರಿಗೆ ಸತ್ಫಲವು ಲಭಿಸಲಿ.

೩೩. ನಿನ್ನ ತಲೆಗೂದಲುಗಳ ರಾಶಿಯೆಲ್ಲವೂ ಪುಣ್ಯವೃಕ್ಷವಾಗುವುದು. ಎಂದು ಭಗವಂತನು ಹೇಳಿದನು. ಅದರಂತೆ ತುಳಸೀದೇವಿಯ ಕೇಶಸಮೂಹ ದಿಂದಲೇ ತುಳಸೀಗಿಡಗಳೆಲ್ಲವೂ ಉತ್ಪನ್ನವಾದವು.

೩೪ ಎಲೌ ಸುಂದರಿಯೇ, ತ್ರಿಲೋಕದಲ್ಲೂ ದೇವಪೂಜೆಗೆ ಬೇಕಾದ ಪತ್ರ ಪುಷ್ಪಗಳಲ್ಲಿ ತುಳಸಿಯೇ ಪ್ರಧಾನವಾಗುವುದು.

೩೫. ಸ್ವರ್ಗಮರ್ತ್ಯಪಾತಾಳಗಳಲ್ಲೂ ವೈಕುಂಠದಲ್ಲೂ ತುಳಸೀ ವೃಕ್ಷಗಳಿದು ಪುಷ್ಪಗಳಲ್ಲೆಲ್ಲ ಶ್ರೇಷ್ಠತೆಯನ್ನು ಪಡೆಯಲಿ.

ಗೋಲೋಕೇ ವಿರಜಾತೀರೇ ರಾಸೇ ವೃಂದಾವನೇ ಭುವಿ ।
ಭಾಂಡೀರೇ ಚಂಪಕವನೇ ರಮ್ಯೇ ಚಂದನಕಾನನೇ ॥ ೩೬ ॥

ಮಾಧವೀ ಕೇತಕೀಕುಂದಮಲ್ಲಿಕಾಮಾಲತೀವನೇ ।
ಭವಂತು ತರವಸ್ತತ್ರ ಪುಷ್ಪಸ್ಥಾನೇಷು ಪುಣ್ಯದಾ ॥ ೩೭ ॥

ತುಲಸೀತರುಮೂಲೇ ಚ ಪುಣ್ಯದೇಶೇ ಸುಪುಣ್ಯದೇ ।
ಅಧಿಷ್ಠಾನಂ ತು ತೀರ್ಥಾನಾಂ ಸರ್ವೇಷಾಂ ಚ ಭವಿಷ್ಯತಿ ॥ ೩೮ ॥

ತತ್ರೈವ ಸರ್ವದೇವಾನಾಂ ಸಮಧಿಷ್ಠಾನಮೇವ ಚ ।
ತುಲಸೀಪತ್ರಪತನಪ್ರಾಯೋ ಯಶ್ಚ ವರಾನನೇ ॥ ೩೯ ॥

ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ।
ತುಲಸೀಪತ್ರತೋಯೇನ ಯೋಽಭಿಷೇಕಂ ಸಮಾಚರೇತ್ ॥ ೪೦ ॥

೩೬-೩೭. ಗೋಲೋಕದಲ್ಲೂ ವಿರಜಾನದಿಯ ದಡದಲ್ಲೂ ರಾಸಮಂಡಲದ ವೃಂದಾವನದಲ್ಲೂ, ಭೂಲೋಕದಲ್ಲೂ ಭಾಂಡೀರ ಮತ್ತು ಚಂಪಕಾರಣ್ಯದಲ್ಲೂ ರಮ್ಯವಾದ ಚಂದನಾರಣ್ಯದಲ್ಲೂ ಮಾಧವೀ, ತಾಳೆ, ಮೊಲ್ಲೆ, ಮಲ್ಲಿಗೆ ಮತ್ತು ಜಾಜಿಹೂಗಳಿರುವ ವನದಲ್ಲೂ ಸುಗಂಧಿಪುಷ್ಪಗಳಿರುವ ಇತರಕಡೆಗಳಲ್ಲೂ ತುಳಸಿಯು ಚೆನ್ನಾಗಿ ಬೆಳೆಯಲಿ.

೩೮. ತುಳಸೀ ಗಿಡಗಳಿರುವ ಸ್ಥಳವೆಲ್ಲ ಪುಣ್ಯಪ್ರದೇಶವೆನಿಸಿ ಪುಣ್ಯಕರವಾಗುವುದು. ಅಲ್ಲಿ ಸಕಲಪುಣ್ಯತೀರ್ಥಗಳೂ ನೆಲೆಸಿರುವುವು.

೩೯. ತುಳಸೀ ಎಲೆಯು ಉದುರಿರುವ ಸ್ಥಳದಲ್ಲೂ ಸಮಸ್ತ ದೇವತೆಗಳೂ ನೆಲೆಸಿ ಆ ಸ್ಥಳವನ್ನು ಪವಿತ್ರಗೊಳಿಸುವರು.

೪೦. ತುಳಸೀಪತ್ರೋದಕದಿಂದ ಸ್ನಾನಮಾಡುವವರು ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಪುಣ್ಯಕ್ಕೂ, ಸಮಸ್ತ ಯಜ್ಞಗಳಲ್ಲಿ ದೀಕ್ಷೆಯನ್ನು ವಹಿಸಿದ ಪುಣ್ಯಕ್ಕೂ ಭಾಗಿಗಳಾಗುವರು,

ಸುಧಾಘಟಸಹಸ್ರೇಣ ಸಾ ತುಷ್ಟಿರ್ನಭವೇದ್ಧರೇಃ ।
ಯಾ ಚ ತುಷ್ಟಿರ್ಭವೇನ್ನೃಣಾಂ ತುಲಸೀಪತ್ರದಾನತಃ ॥ ೪೧ ॥

ಗವಾಮಯುತದಾನೇನ ಯತ್ಫಲಂ ಲಭತೇ ನರಃ ।
ತುಲಸೀಪತ್ರದಾನೇನ ತತ್ಫಲಂ ಲಭತೇ ಸತಿ ॥ ೪೨ ॥

ತುಲಸೀಪತ್ರತೋಯಂ ಚ ಮೃತ್ಯುಕಾಲೇ ಚ ಯೋ ಲಭೇತ್ ।
ಸ ಮುಚ್ಯತೇ ಸರ್ವಪಾಪಾದ್ವಿಷ್ಣುಲೋಕಂ ಸ ಗಚ್ಛತಿ ॥ ೪೩ ॥

ನಿತ್ಯಂ ಯಸ್ತುಲಸೀತೋಯಂ ಭುಙ್ಕ್ತೇ ಭಕ್ತ್ಯಾ ಚ ಯೋ ನರಃ ।
ಸ ಏವ ಜೀವನ್ಮುಕ್ತಶ್ಚ ಗಂಗಾಸ್ನಾನಫಲಂ ಲಭೇತ್ ॥ ೪೪ ॥

ನಿತ್ಯಂ ಯಸ್ತುಲಸೀಂ ದತ್ವಾ ಪೂಜಯೇನ್ಮಾಂ ಚ ಮಾನವಃ ।
ಲಕ್ಷಾಶ್ವಮೇಧಜಂ ಪುಣ್ಯಂ ಲಭತೇ ನಾತ್ರ ಸಂಶಯಃ ॥ ೪೫ ॥

---

೪೧. ಮನುಷ್ಯರು ತುಳಸೀದಳವನ್ನು ಪೂಜಿಸಿದರೆ ಪರಮಾತ್ಮನಿಗೆ ಎಷ್ಟು ತೃಪ್ತಿಯಾಗುವುದೋ ಆ ತೃಪ್ತಿಯು ಸಾವಿರಾರು ಅಮೃತಕಲಶಗಳ ಸಮರ್ಪಣೆಯಿಂದ ಉಂಟಾಗುವುದಿಲ್ಲ.

೪೨. ಹತ್ತು ಸಾವಿರ ಗೋವುಗಳನ್ನು ದಾನಮಾಡುವುದರಿಂದ ದೊರಕುವ ಪುಣ್ಯವು, ಒಂದು ತುಳಸೀಪತ್ರದಾನದಿಂದ ದೊರಕುವುದು.

೪೩. ಮೃತ್ಯುಕಾಲದಲ್ಲಿ ತುಳಸೀದಳವಿರುವ ಜಲವನ್ನು ಪಾನಮಾಡುವವನು ಸಕಲ ಪಾಪದಿಂದಲೂ ಮುಕ್ತನಾಗಿ ವಿಷ್ಣುಲೋಕವನ್ನು ಸೇರುವನು.

೪೪. ಯಾವ ಮನುಷ್ಯನು ಪ್ರತಿದಿನವೂ ಭಕ್ತಿಯಿಂದ ತುಳಸಿಯ ತೀರ್ಥವನ್ನು ಪಾನಮಾಡುವನೋ ಅವನು ಜೀವನ್ಮುಕ್ತನಾಗಿ ಗಂಗಾಸ್ನಾನವಮಾಡಿದ ಪುಣ್ಯಫಲವನ್ನು ಪಡೆಯುವನು.

೪೫. ಯಾವ ಮನುಷ್ಯನು ಪ್ರತಿನಿತ್ಯವೂ ತುಳಸಿಯಿಂದ ನನ್ನನ್ನು ಪೂಜಿಸುವನೋ ಅವನು ಲಕ್ಷ ಅಶ್ವಮೇಧಯಾಗವನ್ನು ಮಾಡಿದ ಪುಣ್ಯಕ್ಕೆ ಭಾಗಿಯಾಗುವುದರಲ್ಲಿ ಸಂಶಯವಿಲ್ಲ.

ತುಲಸೀಂ ಸ್ವಕರೇ ಧೃತ್ವಾ ದೇಹೇ ಧೃತ್ವಾ ಚ ಮಾನವಃ ।
ಪ್ರಾಣಾಂಸ್ತ್ಯಜತಿ ತೀರ್ಥೇಷು ವಿಷ್ಣುಲೋಕಂ ಸ ಗಚ್ಛತಿ ॥ ೪೬ ॥

ತುಲಸೀಕಾಷ್ಠನಿರ್ಮಾಣಮಾಲಾಂ ಗೃಹ್ಣಾತಿ ಯೋ ನರಃ ।
ಪದೇ ಪದೇಽಶ್ವಮೇಧಸ್ಯ ಲಭತೇ ನಿಶ್ಚಿತಂ ಫಲಂ ॥ ೪೭ ॥

ತುಲಸೀಂ ಸ್ವಕರೇ ಧೃತ್ವಾ ಸ್ವೀಕಾರಂ ಯೋ ನ ರಕ್ಷತಿ ।
ಸ ಯಾತಿ ಕಾಲಸೂತ್ರಂ ಚ ಯಾವಚ್ಚಂದ್ರದಿವಾಕರೌ ॥ ೪೮ ॥

ಕರೋತಿ ಮಿಥ್ಯಾಶಪಥಂ ತುಲಸ್ಯಾ ಯೋ ಹಿ ಮಾನವಃ ।
ಸ ಯಾತಿ ಕುಂಭೀಪಾಕಂ ಚ ಯಾವದಿಂದ್ರಾಶ್ಚತುರ್ದಶ ॥ ೪೯ ॥

ತುಲಸೀತೋಯಕಣಿಕಾಂ ಮೃತ್ಯುಕಾಲೇ ಚ ಯೋ ಲಭೇತ್ ।
ರತ್ನಯಾನಂ ಸಮಾರುಹ್ಯ ವೈಕುಂಠಂ ಸ ಪ್ರಯಾತಿ ಚ ॥ ೫೦ ॥

---

೪೬. ತುಳಸೀದಳವನ್ನು ಕೈಯಲ್ಲಾಗಲೀ, ಶರೀರದಲ್ಲಾಗಲೀ ಧರಿಸಿ ಪುಣ್ಯ ಕ್ಷೇತ್ರಗಳಲ್ಲಿ ಪ್ರಾಣತ್ಯಾಗಮಾಡಿದ ಮನುಷ್ಯನು ವಿಷ್ಣುಲೋಕಕ್ಕೆ ಹೋಗಿ ಸೇರುತ್ತಾನೆ.

೪೭. ತುಳಸೀಕಾಷ್ಠದಿಂದ ನಿರ್ಮಿತವಾದ ಮಾಲೆಯನ್ನು ಕಂಠದಲ್ಲಿ ಧರಿಸುವಾತನು ಅನೇಕಸಾರಿ ಅಶ್ವಮೇಧಯಾಗಮಾಡಿದ ಫಲಕ್ಕೆ ಭಾಗಿಯಾಗುವನು.

೪೮. ತುಳಸೀದಳವನ್ನು ಕೈಯಲ್ಲಿ ಹಿಡಿದು ಮಾಡಿದ ಪ್ರತಿಜ್ಞೆಯನ್ನು ಪರಿಪಾಲಿಸದವನು ಚಂದ್ರಸೂರ್ಯರಿರುವವರೆಗೆ ಕಾಲಸೂತ್ರವೆಂಬ ನರಕಕ್ಕೆ ಬೀಳುವನು.

೪೯. ಯಾವ ಮನುಷ್ಯನು ತುಳಸಿಯನ್ನು ಧರಿಸಿ ಮಿಥ್ಯಾಪ್ರತಿಜ್ಞೆಮಾಡುವನೋ ಅವನು ಚತುರ್ದಶೇಂದ್ರರ ಜೀವಿತಕಾಲದವರೆಗೆ ಕುಂಭೀಪಾಕನರಕದಲ್ಲಿ ತೊಳಲುವನು.

೫೦. ತುಳಸೀಸ್ಪೃಷ್ಟವಾದ ಒಂದು ಬಿಂದು ಜಲವನ್ನು ಮೃತ್ಯುಕಾಲದಲ್ಲಿ ಕುಡಿದ ಮನುಜನು ರತ್ನವಿಮಾನವನ್ನೇರಿ ವೈಕುಂಠಕ್ಕೆ ಹೋಗಿ ಸೇರುವನು.

ಪೂರ್ಣಿಮಾಯಾಮಮಾಯಾಂ ಚ ದ್ವಾದಶ್ಯಾಂ ರವಿಸಂಕ್ರಮೇ ।
ತೈಲಾಭ್ಯಂಗೇ ಚಾಸ್ನಾತೇ ಚ ಮಧ್ಯಾಹ್ನೇ ನಿಶಿಸಂಧ್ಯಯೋಃ ॥ ೫೧ ॥

ಆಶೌಚೇಽಶುಚಿಕಾಲೇ ವಾ ರಾತ್ರಿವಾಸಾನ್ವಿತೇ ನರಾಃ ।
ತುಲಸೀಂ ಯೇ ಚ ಛಿಂದಂತಿ ತೇ ಛಿಂದಂತಿ ಹರೇಃ ಶಿರಃ ॥ ೫೨ ॥

ತ್ರಿರಾತ್ರಂ ತುಲಸೀಪತ್ರಂ ಶುದ್ಧಂ ಪರ್ಯುಷಿತಂ ಸತಿ ।
ಶ್ರಾದ್ಧೇ ವ್ರತೇ ವಾ ದಾನೇ ವಾ ಪ್ರತಿಷ್ಠಾಯಾಂ ಸುರಾರ್ಚನೇ ॥ ೫೩ ॥

ಭೂಗತಂ ತೋಯಪತಿತಂ ಯದ್ದತ್ತಂ ವಿಷ್ಣವೇ ಸತಿ ।
ಶುದ್ಧಂ ತು ತುಲಸೀಪತ್ರಂ ಕ್ಷಾಲನಾದನ್ಯಕರ್ಮಣಿ ॥ ೫೪ ॥

ವೃಕ್ಷಾಧಿಷ್ಠಾತ್ರೀ ಯಾ ದೇವೀ ಗೋಲೋಕೇ ಚ ನಿರಾಮಯೇ ।
ಕೃಷ್ಣೇನ ಸಾರ್ಧಂ ರಹಸಿ ನಿತ್ಯಂ ಕ್ರೀಡಾಂ ಕರಿಷ್ಯತಿ ॥ ೫೫ ॥

೫೧–೫೨. ಪೂರ್ಣಿಮಾ, ಅಮಾವಾಸ್ಯೆ, ದ್ವಾದಶಿ ಮತ್ತು ಸಂಕ್ರಮಣದ ದಿವಸಗಳಲ್ಲೂ, ತೈಲಾಭ್ಯಂಗಮಾಡಿಕೊಂಡಿರುವಾಗಲೂ, ಸ್ನಾನಮಾಡುವುದಕ್ಕೆ ಮೊದಲೂ, ಮಧ್ಯಾಹ್ನ, ಅರ್ಧರಾತ್ರಿ ಮತ್ತು ಉಭಯಸಂಧ್ಯೆಗಳಲ್ಲೂ, ಆಶೌಚ ಮತ್ತು ಅಶುಚಿಕಾಲದಲ್ಲೂ, ರಾತ್ರಿಯುಟ್ಟ ಬಟ್ಟೆಯನ್ನು ಬದಲಾಯಿಸದಿರುವಾಗಲೂ ಯಾರು ತುಳಸಿಯನ್ನು ಕೊಯ್ಯುವರೋ ಅವರು ಶ್ರೀಹರಿಯ ತಲೆಯನ್ನು ಕತ್ತರಿಸಿದಂತಾಗುವುದು.

೫೩. ಶ್ರಾದ್ಧಕರ್ಮದಲ್ಲೂ, ವ್ರತದಾನಗಳಲ್ಲೂ, ವಿಗ್ರಹಪ್ರತಿಷ್ಠೆಯನ್ನು ಮಾಡುವಾಗಲೂ, ದೇವತಾರ್ಚನೆಯಲ್ಲೂ ತುಳಸೀಪತ್ರವು ಕೊಯ್ದು ಮೂರು ದಿವಸವಾಗಿ ಬಾಡಿಹೋಗಿದ್ದರೂ ಶುದ್ಧವೆನಿಸುವುದು.

೫೪. ನೆಲದಮೇಲೆ ಅಥವಾ ಕೊಚ್ಚೆನೀರಿನಲ್ಲಿ ಬಿದ್ದ ಮತ್ತು ಒಮ್ಮೆ ವಿಷ್ಣುವಿಗೆ ಪೂಜಿಸಿದ ತುಳಸೀದಳವನ್ನು ತೊಳೆದು ಶುದ್ಧಿಮಾಡುವುದರಿಂದ ಇತರ ಕರ್ಮಗಳಿಗೆ ಯೋಗ್ಯವೆನಿಸುವುದು.

೫೫. ತುಳಸೀವೃಕ್ಷಕ್ಕೆ ಅಧಿಷ್ಠಾತೃದೇವಿಯಾದ ತುಳಸೀದೇವಿಯು ಜರಾಮರಣರಹಿತವಾದ ಗೋಲೋಕದಲ್ಲಿ ಶ್ರೀಕೃಷ್ಣನೊಡನೆ ನಿತ್ಯವೂ ಏಕಾಂತದಲ್ಲಿ ಕ್ರೀಡಿಸುವಳು.

ನದ್ಯಧಿಷ್ಠಾತೃದೇವೀ ಯಾ ಭಾರತೇ ಚ ಸುಪುಣ್ಯದಾ ।
ಲವಣೋದಸ್ಯ ಚ ಪತ್ನೀ ಚ ಮದಂಶಸ್ಯ ಭವಿಷ್ಯತಿ ॥ ೫೬ ॥

ತ್ವಂ ಚ ಸ್ವಯಂ ಮಹಾಸಾಧ್ವೀ ವೈಕುಂಠೇ ಮಮ ಸನ್ನಿಧೌ ।
ರಮಾ ಸಮಾ ಚ ರಾಸೇ ಚ ಭವಿಷ್ಯಸಿ ನ ಸಂಶಯಃ ॥ ೫೭ ॥

ಅಹಂ ಚ ಶೈಲರೂಪೀ ಚ ಗಂಡಕೀತೀರಸನ್ನಿಧೌ ।
ಅಧಿಷ್ಠಾನಂ ಕರಿಷ್ಯಾಮಿ ಭಾರತೇ ತವ ಶಾಪತಃ ॥ ೫೮ ॥

ವಜ್ರಕೀಟಾಶ್ಚ ಕೃಮಯೋ ವಜ್ರದಂಷ್ಟ್ರಾಶ್ಚ ತತ್ರ ವೈ ।
ತಚ್ಛಿಲಾಕುಹರೇ ಚಕ್ರಂ* ಕರಿಷ್ಯಂತಿ ಮದೀಯಕಂ ॥ ೫೯ ॥

ಏಕದ್ವಾರೇ ಚತುಶ್ಚಕ್ರಂ ವನಮಾಲಾವಿಭೂಷಿತಂ ।
ನವೀನನೀರದಶ್ಯಾಮಂ ಲಕ್ಷ್ಮೀನಾರಾಯಣಾಭಿಧಂ ॥ ೬೦ ॥

---

೫೬. ಭಾರತದಲ್ಲಿ ಪುಣ್ಯಕರವಾದ ಗಂಡಕೀನದಿಗೆ ಅಭಿಮಾನಿದೇವತೆಯಾದ ತುಳಸಿಯು, ನನ್ನ ಅಂಶದಿಂದ ಹುಟ್ಟಿರುವ ಲವಣಸಮುದ್ರನಿಗೆ ಪತ್ನಿಯಾಗುವಳು.

೫೭. ಸಾಧ್ವೀಶಿರೋಮಣಿಯಾದ ನೀನು ಕೂಡ ವೈಕುಂಠದಲ್ಲಿ ಲಕ್ಷ್ಮೀದೇವಿಗೆ ಸಮಳಾಗಿ ನನ್ನ ಸಮೀಪದಲ್ಲಿಯೂ, ರಾಸಮಂಡಲದಲ್ಲಿಯೂ ನೆಲೆಸಿರುವೆ. ಇದರಲ್ಲಿ ಸಂಶಯವಿಲ್ಲ.

೫೮. ನಾನು ನಿನ್ನ ಶಾಪದಂತೆ ಭರತಖಂಡದಲ್ಲಿ ಗಂಡಕೀನದಿಯ ತೀರದಲ್ಲಿ ಶಿಲಾರೂಪದಿಂದ ನೆಲೆಸಿರುವೆನು.

೫೯. ವಜ್ರದ ಕೋರೆದಾಡೆಗಳುಳ್ಳ ವಜ್ರಕೀಟವೆಂಬ ಹುಳುಗಳು ಆ ಶಿಲೆಗಳನ್ನು ತೊರೆದು ಅದರೊಳಗೆ ವಿಷ್ಣುಚಕ್ರವನ್ನು ರಚಿಸುವುವು.

೬೦. ಆ ರೀತಿಯಾದ ನಾಲ್ಕು ಚಕ್ರಗಳಿಂದ ಕೂಡಿ ವನಮಾಲಾವಿಭೂಷಿತವೂ ನವಘನಶ್ಯಾಮಲವೂ ಆದ ಏಕದ್ವಾರವುಳ್ಳ ಶಿಲೆಯು ' ಲಕ್ಷ್ಮೀನಾರಾಯಣ ' ನೆನಿಸುವುದು.

---

* ತಚ್ಛಿಲಾಸುಹರೇಶ್ಚಕ್ರಂ ಇತಿಪಾಠಃ.

ಏಕದ್ವಾರೇ ಚತುಶ್ಚಕ್ರಂ ನವೀನನೀರದೋಪಮಂ ।
ಲಕ್ಷ್ಮೀಜನಾರ್ದನಂ ಜ್ಞೇಯಂ ರಹಿತಂ ವನಮಾಲಯಾ ॥ ೬೧ ॥

ದ್ವಾರದ್ವಯೇ ಚತುಶ್ಚಕ್ರಂ ಗೋಷ್ಪದೇನ ಸಮನ್ವಿತಂ ।
ರಘುನಾಥಾಭಿಧಂ ಜ್ಞೇಯಂ ರಹಿತಂ ವನಮಾಲಯಾ ॥ ೬೨ ॥

ಅತಿಕ್ಷುದ್ರಂ ದ್ವಿಚಕ್ರಂ ಚ ನವೀನಜಲದಪ್ರಭಂ ।
ದಧಿವಾಮನಾಭಿಧಂ ಜ್ಞೇಯಂ ಗೃಹಿಣಾಂಚ ಸುಖಪ್ರದಂ ॥ ೬೩ ॥

ಅತಿಕ್ಷುದ್ರಂ ದ್ವಿಚಕ್ರಂ ಚ ವನಮಾಲಾವಿಭೂಷಿತಂ ।
ವಿಜ್ಞೇಯಂ ಶ್ರೀಧರಂ ದೇವಂ ಶ್ರೀಪ್ರದಂ ಗೃಹಿಣಾಂ ಸದಾ ॥ ೬೪ ॥

ಸ್ಥೂಲಂ ಚ ವರ್ತುಲಾಕಾರಂ ರಹಿತಂ ವನಮಾಲಯಾ ।
ದ್ವಿಚಕ್ರಂ ಸ್ಫುಟಮತ್ಯಂತಂ ಜ್ಞೇಯಂ ದಾಮೋದರಾಭಿಧಂ ॥ ೬೫ ॥

---

೬೧. ಚತುಶ್ಚಕ್ರವಿಭೂಷಿತವಾಗಿ ವನಮಾಲಾರಹಿತವೂ ನವಘನಶ್ಯಾಮಲವೂ ಆದ ಏಕದ್ವಾರವುಳ್ಳ ಶಿಲೆಯು 'ಲಕ್ಷ್ಮೀಜನಾರ್ದನ'ನೆನಿಸುವುದು.

೬೨. ಗೋಪಾದದ ಚಿಹ್ನೆಗಳಿಂದಲೂ ಚತುಶ್ಚಕ್ರಗಳಿಂದಲೂ ಕೂಡಿ ವನಮಾಲಾರಹಿತವಾದ ದ್ವಾರದ್ವಯಶೋಭಿತವಾದ ಶಿಲೆಯು 'ರಘುನಾಥ'ನೆಂಬ ಹೆಸರಿನಿಂದ ವಿಖ್ಯಾತವಾಗುವುದು.

೬೩. ನವಘನಶ್ಯಾಮವೂ, ಚಕ್ರದ್ವಯಶೋಭಿತವೂ, ಅತಿ ಸೂಕ್ಷ್ಮವೂ ಆದ ಸಾಲಿಗ್ರಾಮಶಿಲೆಯು 'ದಧಿವಾಮನ' ನೆಂಬ ಹೆಸರಿನಿಂದ ವಿಖ್ಯಾತವಾಗಿ ಸಂಸಾರಿಗಳಿಗೆ ಸುಖದಾಯಕವಾಗುವುದು.

೬೪. ಅತಿಸೂಕ್ಷ್ಮವೂ, ದ್ವಿಚಕ್ರಶೋಭಿತವೂ, ವನಮಾಲಾಲಂಕೃತವೂ ಆಗಿರುವ ಶಿಲೆಯು 'ಶ್ರೀಧರ' ನೆಂಬ ನಾಮದಿಂದ ವಿಖ್ಯಾತವಾಗಿ ಗೃಹಸ್ಥರಿಗೆ ಸಂಪತ್ಪ್ರದವಾಗುವುದು.

೬೫. ದಪ್ಪವಾಗಿಯೂ ವರ್ತುಳಾಕಾರವಾಗಿಯೂ ವಿಸ್ಪಷ್ಟವಾದ ಚಕ್ರದ್ವಯದಿಂದ ಶೋಭಿತವಾಗಿಯೂ, ವನಮಾಲಾರಹಿತವಾಗಿಯೂ ಇರುವ ಸಾಲಿಗ್ರಾಮಶಿಲೆಯು 'ದಾಮೋದರ'ನೆಂಬ ಹೆಸರಿನಿಂದ ವಿಖ್ಯಾತವಾಗುವುದು.

ಮಧ್ಯಮಂ ವರ್ತುಲಾಕಾರಂ ದ್ವಿಚಕ್ರಂ ಬಾಣವಿಕ್ಷತಂ ।
ರಣರಾಮಾಭಿಧಂ ಜ್ಞೇಯಂ ಶರತೂಣಸಮನ್ವಿತಂ ॥ ೬೬ ॥

ಮಧ್ಯಮಂ ಸಪ್ತಚಕ್ರಂ ಚ ಛತ್ರತೂಣಸಮನ್ವಿತಂ ।
ರಾಜರಾಜೇಶ್ವರಂ ಜ್ಞೇಯಂ ರಾಜಸಂಪತ್ಪ್ರದಂ ನೃಣಾಂ ॥ ೬೭ ॥

ದ್ವಿಸಪ್ತಚಕ್ರಂ ಸ್ಥೂಲಂ ಚ ನವೀನಜಲದಪ್ರಭಂ ।
ಅನಂತಾಖ್ಯಂ ಚ ವಿಜ್ಞೇಯಂ ಚತುರ್ವರ್ಗಫಲಪ್ರದಂ ॥ ೬೮ ॥

ಚಕ್ರಾಕಾರಂ ದ್ವಿಚಕ್ರಂ ಚ ಸಶ್ರೀಕಂ ಜಲದಪ್ರಭಂ ।
ಸಗೋಷ್ಪದಂ ಮಧ್ಯಮಂ ಚ ವಿಜ್ಞೇಯಂ ಮಧುಸೂದನಂ ॥ ೬೯ ॥

---

೬೬. ಅತಿದೊಡ್ಡದೂ ಅತಿಸಣ್ಣದೂ ಆಗಿರದೆ ಮಧ್ಯಮವಾಗಿ ವರ್ತುಳಾಕಾರವಾಗಿಯೂ ಚಕ್ರದ್ವಯ ಶೋಭಿತವಾಗಿಯೂ ಬಾಣಕ್ಷತವಾಗಿಯೂ, ಬಾಣಬತ್ತಳಿಕೆಗಳಿಂದ ಭೂಷಿತವಾಗಿಯೂ ಇರುವ ಸಾಲಿಗ್ರಾಮಶಿಲೆಯನ್ನು 'ರಣರಾಮ' ನೆನ್ನುವರು.

೬೭. ಮಧ್ಯಮಾಕಾರವಾಗಿದ್ದು ಏಳು ಚಕ್ರಗಳಿಂದಲೂ, ಛತ್ರದಿಂದಲೂ, ಬತ್ತಳಿಕೆಯಿಂದಲೂ ಶೋಭಿಸುತ್ತ, ಮನುಜರಿಗೆ ರಾಜಸಂಪತ್ತನ್ನು ಕೊಡುವ ಶಿಲೆಯನ್ನು ' ರಾಜರಾಜೇಶ್ವರ' ನೆನ್ನುವರು.

೬೮. ಸ್ಥೂಲಾಕಾರವಾಗಿದ್ದು ಹದಿನಾಲ್ಕು ಚಕ್ರಗಳಿಂದ ಶೋಭಿತವಾಗಿ ನವಮೇಘಶ್ಯಾಮವೂ, ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವರ್ಗಫಲಪ್ರದವೂ ಆದ ಶಿಲೆಯನ್ನು 'ಅನಂತ' ನೆನ್ನುವರು.

೬೯. ಚಕ್ರಾಕಾರವೂ, ಚಕ್ರದ್ವಯ ಶೋಭಿತವೂ, ನೀಲಮೇಘಶ್ಯಾಮವೂ ಗೋಪಾದಚಿಹ್ನಸಹಿತವೂ ಆಗಿ ಮಧ್ಯಮವಾದ ಶಿಲೆಯನ್ನು ' ಮಧುಸೂದನ ನೆನ್ನುವರು.

ಸುದರ್ಶನಂ ಚೈಕಚಕ್ರಂ ಗುಪ್ತಚಕ್ರಂ ಗದಾಧರಂ ।
ದ್ವಿಚಕ್ರಂ ಹಯವಕ್ತ್ರಾಭಂ ಹಯಗ್ರೀವಂ ಪ್ರಕೀರ್ತಿತಂ ॥ ೭೦ ॥

ಅತೀವ ವಿಸ್ತೃತಾಸ್ಯಂ ಚ ದ್ವಿಚಕ್ರಂ ವಿಕಟಂ ಸತಿ ।
ನರಸಿಂಹಾಭಿಧಂ ಜ್ಞೇಯಂ ಸದ್ಯೋ ವೈರಾಗ್ಯದಂ ನೃಣಾಂ ॥ ೭೧ ॥

ದ್ವಿಚಕ್ರಂ ವಿಸ್ತೃತಾಸ್ಯಂ ಚ ವನಮಾಲಾಸಮನ್ವಿತಂ ।
ಲಕ್ಷ್ಮೀನೃಸಿಂಹಂ ವಿಜ್ಞೇಯಂ ಗೃಹಿಣಾಂ ಸುಖದಂ ಸದಾ ॥ ೭೨ ॥

ದ್ವಾರದೇಶೇ ದ್ವಿಚಕ್ರಂ ಚ ಸಶ್ರೀಕಂ ಚ ಸಮಂ ಸ್ಫುಟಂ ।
ವಾಸುದೇವಂ ಚ ವಿಜ್ಞೇಯಂ ಸರ್ವಕಾಮಫಲಪ್ರದಂ ॥ ೭೩ ॥

ಪ್ರದ್ಯುಮ್ನಂ ಸೂಕ್ಷ್ಮಚಕ್ರಂ ಚ ನವೀನನೀರದಪ್ರಭಂ ।
ಸುಷಿರೇಚ್ಛಿದ್ರಬಹುಲಂ ಗೃಹಿಣಾಂ ಚ ಸುಖಪ್ರದಂ ॥ ೭೪ ॥

---

೭೦. ಏಕಚಕ್ರಶೋಭಿತವಾದ ಶಿಲೆಯನ್ನು 'ಸುದರ್ಶನ' ನೆಂದೂ, ಗೂಢವಾದ ಚಕ್ರವುಳ್ಳದ್ದನ್ನು 'ಗದಾಧರ' ನೆಂದೂ. ಎರಡು ಚಕ್ರದಿಂದ ಕೂಡಿ ಅಶ್ವದ ಮುಖದಂತಿರುವುದನ್ನು 'ಹಯಗ್ರೀವ' ನೆಂದೂ ಕರೆಯುವರು.

೭೧. ಅತಿವಿಸ್ತೃತಮುಖವೂ, ವಿಕಟಾಕಾರವೂ, ದ್ವಿಚಕ್ರಶೋಭಿತವೂ ಆಗಿ, ಅದನ್ನು ಪೂಜಿಸಿದ ಮನುಜರಿಗೆ ಸದ್ಯಃ ವೈರಾಗ್ಯಬುದ್ಧಿಯನ್ನು ಕೊಡುವ ಶಿಲೆಯನ್ನು 'ನರಸಿಂಹ' ನೆನ್ನುವರು.

೭೨. ವಿಸ್ತೃತಮುಖವೂ, ಚಕ್ರದ್ವಯಶೋಭಿತವೂ, ವನಮಾಲಾವಿಭೂಷಿತವೂ ಆಗಿ, ಪೂಜಿಸುವ ಗೃಹಸ್ಥರಿಗೆ ಸರ್ವದಾ ಸುಖವನ್ನು ಕೊಡುವ ಶಿಲೆಯನ್ನು 'ಲಕ್ಷ್ಮೀನೃಸಿಂಹ' ನೆನ್ನುವರು.

೭೩. ದ್ವಾರಪ್ರದೇಶದಲ್ಲಿ ಚಕ್ರದ್ವಯಶೋಭಿತವಾಗಿ ಸಮವೂ, ಸ್ಫುಟವೂ, ಇಷ್ಟಾರ್ಥಫಲಪ್ರದವೂ ಆದ ಶಿಲೆಯನ್ನು 'ವಾಸುದೇವ' ನೆನ್ನುವರು.

೭೪. ಸೂಕ್ಷ್ಮಚಕ್ರಯುತವೂ, ನವನೀರದಶ್ಯಾಮವೂ, ಛಿದ್ರಶತಶೋಭಿತವೂ, ಸಂಸಾರಿಗಳಿಗೆ ಸುಖಪ್ರದವೂ ಆದ ಶಿಲೆಯನ್ನು 'ಪ್ರದ್ಯುಮ್ನ' ನೆನ್ನುವರು.

ದ್ವೇ ಚಕ್ರೇ ಚೈಕಲಗ್ನೇ ಚ ಪೃಷ್ಠೇ ಯತ್ರ ತು ಪುಷ್ಕಲಂ |
ಸಂಕರ್ಷಣಂ ತು ವಿಜ್ಞೇಯಂ ಸುಖದಂ ಗೃಹಿಣಾಂ ಸದಾ || ೭೫ ||

ಅನಿರುದ್ಧಂ ತು ಪೀತಾಭಂ ವರ್ತುಲಂ ಚಾತಿಶೋಭನಂ |
ಸುಖಪ್ರದಂ ಗೃಹಸ್ಥಾನಾಂ ಪ್ರವದಂತಿ ಮನೀಷಿಣಃ || ೭೬ ||

ಶಾಲಗ್ರಾಮಶಿಲಾ ಯತ್ರ ತತ್ರ ಸನ್ನಿಹಿತೋ ಹರಿಃ |
ತತ್ರೈವ ಲಕ್ಷ್ಮೀರ್ವಸತಿ ಸರ್ವತೀರ್ಥಸಮನ್ವಿತಾ || ೭೭ ||

ಯಾನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ |
ತಾನಿ ಸರ್ವಾಣಿ ನಶ್ಯಂತಿ ಶಾಲಗ್ರಾಮಶಿಲಾರ್ಚನಾತ್ || ೭೮ ||

ಛತ್ರಾಕಾರೇ* ಭವೇದ್ರಾಜ್ಯಂ ವರ್ತುಲೇ ಚ ಮಹಾಶ್ರಿಯಃ |
ದುಃಖಂ ಚ ಶಕಟಾಕಾರೇ ಶೂಲಾಗ್ರೇ ಮರಣಂ ಧ್ರುವಂ || ೭೯ ||

---

೭೫. ಯಾವ ಶಿಲೆಯು ಹಿಂಭಾಗದಲ್ಲಿ ಎರಡು ಚಕ್ರವೂ ಒಟ್ಟಿಗೆ ಸೇರಿರುವುದೋ ಅದನ್ನು 'ಸಂಕರ್ಷಣ' ನೆನ್ನುವರು. ಅದನ್ನು ಪೂಜಿಸಿದ ಸಂಸಾರಿಗಳು ಸುಖಿಗಳಾಗುವರು.

೭೬. ಪಿಂಗಳವರ್ಣದಿಂದಲೂ ವರ್ತುಳಾಕಾರದಿಂದಲೂ ಶೋಭಿತವಾಗಿ ಗೃಹಸ್ಥರಿಗೆ ಸುಖದಾಯಕವಾದ ಸಾಲಿಗ್ರಾಮವನ್ನು 'ಅನಿರುದ್ಧ' ನೆನ್ನುವರು.

೭೭. ಸಾಲಿಗ್ರಾಮಶಿಲೆಯು ಇರುವೆಡೆಯಲ್ಲೆಲ್ಲ ಶ್ರೀಹರಿಯು ಸಾಕ್ಷಾತ್ತಾಗಿ ನೆಲೆಸಿರುವನು. ಸಕಲ ಪುಣ್ಯತೀರ್ಥಗಳೊಡಗೂಡಿ ಲಕ್ಷ್ಮೀದೇವಿಯು ಅಲ್ಲಿ ನೆಲೆಸಿರುವಳು.

೭೮. ಸಾಲಿಗ್ರಾಮ ಶಿಲೆಯನ್ನು ಭಕ್ತಿಯಿಂದ ಪೂಜಿಸುವವರ ಬ್ರಹ್ಮಹತ್ಯಾದಿ ಮಹಾಪಾಪಗಳೂ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ.

೭೯. ಸಾಲಿಗ್ರಾಮಶಿಲೆಯು ಛತ್ರಾಕಾರವಾಗಿದ್ದರೆ ರಾಜ್ಯಪ್ರದವೂ, ವರ್ತುಳಾಕಾರವಾಗಿದ್ದರೆ ಸಂಪತ್ಪ್ರದವೂ, ಶಕಟಾಕಾರವಾಗಿದ್ದರೆ ದುಃಖಪ್ರದವೂ. ಶೂಲಾಗ್ರದಂತಿದ್ದರೆ ಮರಣಕಾರಕವೂ ಆಗುವುದು.

---

* ಛತ್ರಾಕಾರಮಿತಿ ಪಾಠ.

ವಿಕೃತಾಸ್ಯೇ ಚ ದಾರಿದ್ರ್ಯಂ ಪಿಂಗಲೇ ಹಾನಿರೇವ ಚ ।
ಲಗ್ನಚಕ್ರೇ ಭವೇದ್ವ್ಯಾಧಿರ್ವಿದೀರ್ಣೇ ಮರಣಂ ಧ್ರುವಂ ॥ ೮೦ ॥

ವ್ರತಂ ದಾನಂ ಪ್ರತಿಷ್ಠಾ ಚ ಶ್ರಾದ್ಧಂ ಚ ದೇವಪೂಜನಂ ।
ಶಾಲಗ್ರಾಮಶಿಲಾಯಾಶ್ಚೈವಾಧಿಷ್ಠಾನಾತ್ಪ್ರಶಸ್ತಕಂ ॥ ೮೧ ॥

ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ।
ಶಾಲಗ್ರಾಮಶಿಲಾತೋಯೈರ್ಯೋಽಭಿಷೇಕಂ ಸಮಾಚರೇತ್ ॥ ೮೨ ॥

ಸರ್ವದಾನೇಷು ಯತ್ಪುಣ್ಯಂ ಪ್ರಾದಕ್ಷಿಣ್ಯೇ ಭುವೋ ಯಥಾ ।
ಸರ್ವಯಜ್ಞೇಷು ತೀರ್ಥೇಷು ವ್ರತೇಷ್ವನಶನೇಷು ಚ ॥ ೮೩ ॥

---

೮೦. ವಿಕಾರಮುಖವುಳ್ಳ ಸಾಲಿಗ್ರಾಮವು ಬಡತನವನ್ನೂ, ಪಿಂಗಳವರ್ಣದ ಸಾಲಿಗ್ರಾಮವು ಹಾನಿಯನ್ನೂ ಉಂಟುಮಾಡುವುದು. ಸಾಲಿಗ್ರಾಮದಲ್ಲಿ ಚಕ್ರಗಳು ಒಂದರಮೇಲೊಂದಿದ್ದರೆ ವ್ಯಾಧಿಕರವೂ, ಸೀಳಿಹೋಗಿದ್ದರೆ ಮರಣಕಾರಕವೂ ಆಗುವುದು.

೮೧. ಸಾಲಿಗ್ರಾಮಶಿಲೆಯ ಸಮ್ಮುಖದಲ್ಲಿ ಮಾಡುವ ಪ್ರತಿದಾನಗಳೂ, ವಿಗ್ರಹ ಪ್ರತಿಷ್ಠೆಯೂ, ದೇವಪಿತೃಕಾರ್ಯಗಳೂ ಅತ್ಯಂತ ಪ್ರಶಸ್ತವೆನಿಸುವುದು.

೮೨. ಸಾಲಿಗ್ರಾಮಶಿಲೋದಕದಿಂದ ಸ್ನಾನಮಾಡುವವನು ಸಕಲ ಪುಣ್ಯ ತೀರ್ಥಗಳಲ್ಲಿ ಸ್ನಾನಮಾಡಿದ ಪುಣ್ಯಕ್ಕೂ, ಸಮಸ್ತ ಯಜ್ಞಗಳಲ್ಲಿ ದೀಕ್ಷೆಯನ್ನು ಕೈಗೊಂಡ ಪುಣ್ಯಕ್ಕೂ, ಭಾಗಿಯಾಗುವನು.

೮೩. ಸಮಸ್ತ ವಿಧವಾದ ದಾನಗಳಿಂದಲೂ, ಭೂಪ್ರದಕ್ಷಿಣೆಮಾಡುವುದರಿಂದಲೂ, ಯಜ್ಞಯಾಗಗಳನ್ನು ಆಚರಿಸುವುದರಿಂದಲೂ ಸಕಲ ಪುಣ್ಯಕ್ಷೇತ್ರಗಳ ಯಾತ್ರೆಯಿಂದಲೂ, ಅನಶನಾದಿ ಸಕಲ ವ್ರತಗಳಿಂದಲೂ, ಲಭಿಸುವ ಪುಣ್ಯವು ಸಾಲಿಗ್ರಾಮಶಿಲೋದಕಸ್ನಾನದಿಂದ ಲಭಿಸುವುದು.

ತಸ್ಯ ಸ್ಪರ್ಶಂ ಚ ವಾಂಛಂತಿ ತೀರ್ಥಾನಿ ನಿಖಿಲಾನಿ ಚ ।
ಜೀವನ್ಮುಕ್ತೋ ಮಹಾಪೂತೋ ಭವೇದೇವ ನ ಸಂಶಯಃ ॥ ೮೪ ॥

ಪಾಠೇ ಚತುರ್ಣಾಂ ವೇದಾನಾಂ ತಪಸಾಂ ಕರಣೇ ಸತಿ ।
ತತ್ಪುಣ್ಯಂ ಲಭತೇ ನೂನಂ ಶಾಲಗ್ರಾಮಶಿಲಾರ್ಚನಾತ್ ॥ ೮೫ ॥

ಶಾಲಗ್ರಾಮಶಿಲಾತೋಯಂ ನಿತ್ಯಂ ಭುಂಕ್ತೇ ಚ ಯೋ ನರಃ ।
ಸುರೇಪ್ಸಿತಂ ಪ್ರಸಾದಂ ಚ ಜನ್ಮಮೃತ್ಯುಜರಾಹರಂ ॥ ೮೬ ॥

ತಸ್ಯ ಸ್ಪರ್ಶಂ ಚ ವಾಂಛಂತಿ ತೀರ್ಥಾನಿ ನಿಖಿಲಾನಿ ಚ ।
ಜೀವನ್ಮುಕ್ತೋ ಮಹಾಪೂತೋಽಪ್ಯಂತೇ ಯಾತಿ ಹರೇಃ ಪದಂ ॥ ೮೭ ॥

ತತ್ರೈವ ಹರಿಣಾ ಸಾರ್ಧಮಸಂಖ್ಯಂ ಪ್ರಾಕೃತಂ ಲಯಂ ।
ಪಶ್ಯತ್ಯೇವ ಹಿ ದಾಸ್ಯೇ ಚ ನಿರ್ಮುಕ್ತೋ ದಾಸ್ಯಕರ್ಮಣಿ ॥ ೮೮ ॥

---

೮೪. ಸಾಲಿಗ್ರಾಮಶಿಲೋದಕದಿಂದ ಸ್ನಾನಮಾಡಿ ಪವಿತ್ರವಾದವನ ಸ್ಪರ್ಶವನ್ನು ಸಕಲ ಪುಣ್ಯತೀರ್ಥಗಳೂ ಬಯಸುವುವು. ಪರಮಪವಿತ್ರನಾದ ಆತನು ಜೀವನ್ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

೮೫. ಚತುರ್ವೇದಗಳ ಪಠನದಿಂದಲೂ, ಉಗ್ರವಾದ ತಪಸ್ಸನ್ನಾಚರಿಸುವುದರಿಂದಲೂ, ಪಡೆಯುವ ಪುಣ್ಯವನ್ನು ಸಾಲಿಗ್ರಾಮಶಿಲಾರ್ಚನೆಯಿಂದಲೇ ಪಡೆಯಬಹುದು.

೮೬–೮೭. ದೇವತೆಗಳಿಗೆ ದಿವ್ಯಪ್ರಸಾದವೂ, ಜನ್ಮಜರಾಮರಣನಾಶಕವೂ ಆದ ಸಾಲಿಗ್ರಾಮ ಶಿಲೋದಕವನ್ನು ಪ್ರತಿದಿನವೂ ಪಾನಮಾಡುವ ಮನುಷ್ಯನ ಸ್ಪರ್ಶವನ್ನು ಸಕಲ ಪುಣ್ಯತೀರ್ಥಗಳೂ ಬಯಸುವುವು. ಅವನು ಮಹಾಪವಿತ್ರನೂ, ಜೀವನ್ಮುಕ್ತನೂ ಆಗಿ ಅಂತ್ಯಕಾಲದಲ್ಲಿ ಶ್ರೀಹರಿಯಸ್ಥಾನಕ್ಕೆ ಹೋಗಿ ಸೇರುವನು.

೮೮. ಅಲ್ಲಿ ಶ್ರೀಹರಿಯೊಡನಿದ್ದು ಅಸಂಖ್ಯಪ್ರಾಕೃತಪ್ರಳಯವನ್ನು ನೋಡುವನು. ಕೊನೆಗೆ ಹರಿದಾಸ್ಯದಿಂದ ಮುಕ್ತನಾಗಿ ಶ್ರೀಹರಿಯಲ್ಲೇ ಐಕ್ಯನಾಗುವನು.

ಯಾನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ತಂ ಚ ದೃಷ್ಟ್ವಾ ಭಿಯಾ ಯಾಂತಿ ವೈನತೇಯಮಿವೋರಗಾಃ ॥ ೮೯ ॥

ತತ್ಪಾದಪದ್ಮರಜಸಾ ಸದ್ಯಃ ಪೂತಾ ವಸುಂಧರಾ ।
ಪುಂಸಾಂ ಲಕ್ಷಂ ಪಿತೄಣಾಂ ನಿಸ್ತಾರಸ್ತಸ್ಯ ಜನ್ಮನಃ ॥ ೯೦ ॥

ಶಾಲಗ್ರಾಮಶಿಲಾತೋಯಂ ಮೃತ್ಯುಕಾಲೇ ಚ ಯೋ ಲಭೇತ್ ।
ಸರ್ವಪಾಪಾದ್ವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೯೧ ॥

ನಿರ್ವಾಣಮುಕ್ತಿಂ ಲಭತೇ ಕರ್ಮಭೋಗಾದ್ವಿಮುಚ್ಯತೇ ।
ವಿಷ್ಣುಪಾದೇ ಪ್ರಲೀನಶ್ಚ ಭವಿಷ್ಯತಿ ನ ಸಂಶಯಃ ॥ ೯೨ ॥

ಶಾಲಗ್ರಾಮಶಿಲಾಂ ಧೃತ್ವಾ ಮಿಥ್ಯಾವಾದಂ ವದೇತ್ತು ಯಃ ।
ಸ ಯಾತಿ ಕೂರ್ಮದಂಷ್ಟ್ರಂ ಚ ಯಾವದ್ವೈ ಬ್ರಹ್ಮಣೋ ವಯಃ ॥ ೯೩ ॥

---

೮೯. ಗರುಡನನ್ನು ಕಂಡ ಹಾವು ದೂರಓಡುವಂತೆ ಸಾಲಿಗ್ರಾಮ ಶಿಲಾವಾರಿಯನ್ನು ಪಾನಮಾಡಿದ ಮನುಷ್ಯನನ್ನು ಬಿಟ್ಟು ಬ್ರಹ್ಮಹತ್ಯಾದಿ ಸಕಲ ಪಾಪಗಳೂ ದೂರ ಓಡುವುವು.

೯೦. ಅವನ ಪಾದಕಮಲಧೂಳಿಸ್ಪರ್ಶದಿಂದ ಭೂದೇವಿಯು ಕೂಡ ಪವಿತ್ರಳಾಗುವಳು. ಅವನು ಯಾವ ವಂಶದಲ್ಲಿ ಜನಿಸಿರುವನೋ ಆ ವಂಶದ ಲಕ್ಷ ಪಿತೃಗಳು ಮುಕ್ತಿಹೊಂದುವರು.

೯೧. ಮರಣಕಾಲದಲ್ಲಿ ಸಾಲಿಗ್ರಾಮ ಶಿಲಾವಾರಿಯನ್ನು ಪಾನಮಾಡುವಾತನು ಸಕಲ ಪಾಪಗಳಿಂದ ವಿಮುಕ್ತನಾಗಿ ವಿಷ್ಣುಲೋಕಕ್ಕೆ ಹೋಗಿ ಸೇರುವನು.

೯೨. ಅಲ್ಲದೆ ಆತನು ಕರ್ಮಬಂಧನದಿಂದ ಬಿಡುಗಡೆ ಹೊಂದಿ ನಿರ್ವಾಣ ಮುಕ್ತಿಯನ್ನು ಪಡೆದು ವಿಷ್ಣುವಿನ ಚರಣಕಮಲಗಳಲ್ಲಿ ಐಕ್ಯನಾಗುವನು. ಇದರಲ್ಲಿ ಸಂಶಯವಿಲ್ಲ.

೯೩. ಸಾಲಿಗ್ರಾಮಶಿಲೆಯನ್ನು ಹಿಡಿದು ಸುಳ್ಳನ್ನು ಸತ್ಯವೆಂದು ಸಾಕ್ಷಿ ನುಡಿಯುವವನು ಬ್ರಹ್ಮನ ಜೀವಿತಕಾಲಪರ್ಯಂತ ಕೂರ್ಮದಂಷ್ಟ್ರವೆಂಬ ನರಕದಲ್ಲಿ ತೊಳಲುವನು.

ಶಾಲಗ್ರಾಮಶಿಲಾಂ ಸ್ಪೃಷ್ಟ್ವಾ ಸ್ವೀಕಾರಂ ಯೋ ನ ಪಾಲಯೇತ್ ।
ಸ ಪ್ರಯಾತ್ಯಸಿಪತ್ರಂ ಚ ಲಕ್ಷಮನ್ವಂತರಾಧಿಕಂ ॥ ೯೪ ॥

ತುಲಸೀಪತ್ರವಿಚ್ಛೇದಂ ಶಾಲಗ್ರಾಮೇ ಕರೋತಿ ಯಃ ।
ತಸ್ಯ ಜನ್ಮಾಂತರೇ ಕಾಲೇ ಸ್ತ್ರೀವಿಚ್ಛೇದೋ ಭವಿಷ್ಯತಿ ॥ ೯೫ ॥

ತುಲಸೀಪತ್ರವಿಚ್ಛೇದಂ ಶಂಖೇ ಯೋ ಹಿ ಕರೋತಿ ಚ ।
ಭಾರ್ಯಾಹೀನೋ ಭವೇತ್ಸೋಽಪಿ ರೋಗೀ ಚ ಸಪ್ತಜನ್ಮಸು ॥ ೯೬ ॥

ಶಾಲಗ್ರಾಮಂ ಚ ತುಲಸೀಂ ಶಂಖಮೇಕತ್ರ ಏವ ಚ ।
ಯೋ ರಕ್ಷತಿ ಮಹಾಜ್ಞಾನೀ ಸ ಭವೇಚ್ಛ್ರೀಹರಿಪ್ರಿಯಃ ॥ ೯೭ ॥

ಸಕೃದೇವ ಹಿ ಯೋ ಯಸ್ಯಾಂ ವೀರ್ಯಾಧಾನಂ ಕರೋತಿ ಯಃ ।
ತದ್ವಿಚ್ಛೇದೇ ತಸ್ಯ ದುಃಖಂ ಭವೇದೇವ ಪರಸ್ಪರಂ ॥ ೯೮ ॥

---

೯೪. ಸಾಲಿಗ್ರಾಮಶಿಲೆಯನ್ನು ಹಿಡಿದು ಆಡಿದ ಮಾತನ್ನು ಪರಿಪಾಲಿಸದವರು ಲಕ್ಷಮನ್ವಂತರಗಳ ಕಾಲ ಅಸಿಪತ್ರವೆಂಬ ನರಕದಲ್ಲಿ ತೊಳಲುವರು

೯೫. ಸಾಲಿಗ್ರಾಮದೊಡನೆ ತುಳಸೀದಳವನ್ನು ಯಾವಾಗಲೂ ಯೋಜಿಸಿಡಬೇಕು. ಹಾಗೆ ಮಾಡದವನು ಜನ್ಮಾಂತರದಲ್ಲಿ ಸ್ತ್ರೀವಿಚ್ಛೇದವನ್ನು ಹೊಂದುವನು.

೯೬. ಅದೇ ರೀತಿಯಾಗಿ ಶಂಖದಲ್ಲೂ ತುಳಸೀದಳವನ್ನು ಯೋಜಿಸಿಡದಿದ್ದರೆ ಸಪ್ತಜನ್ಮಗಳಲ್ಲಿಯೂ ಭಾರ್ಯಾಹೀನನೂ, ರೋಗಿಯೂ, ಆಗುವುದರಲ್ಲಿ ಸಂಶಯವಿಲ್ಲ.

೯೭. ಸಾಲಿಗ್ರಾಮ ಮತ್ತು ಶಂಖದೊಡನೆ ತುಳಸಿಯನ್ನು ಯೋಜಿಸಿಡುವವನು ಮಹಾಜ್ಞಾನಿಯೂ, ಶ್ರೀಹರಿಗೆ ಪ್ರೀತಿಪಾತ್ರನೂ ಆಗುವುದರಲ್ಲಿ ಸಂಶಯವಿಲ್ಲ.

೯೮. ಪುರುಷನೊಬ್ಬನು ಒಬ್ಬ ಸ್ತ್ರೀಯಲ್ಲಿ ಒಮ್ಮೆ ವೀರ್ಯಾಧಾನಮಾಡಿದ ಮಾತ್ರದಿಂದ ಇಬ್ಬರಿಗೂ ಅನ್ಯೋನ್ಯಾನುರಾಗವುಂಟಾಗಿ ಅವರ ವಿಚ್ಛೇದವು ದುಃಖಕರವೂ ದುಸ್ಸಹವೂ ಆಗುವುದು.

ತ್ವಂ ಪ್ರಿಯಾ ಶಂಖಚೂಡಸ್ಯ ಚೈಕಮನ್ವಂತರಾವಧಿ ।
ಶಂಖೇನ ಸಾರ್ಧಂ ತ್ವದ್ಭೇದಃ ಕೇವಲಂ ದುಃಖದಸ್ತವ ॥ ೯೯ ॥

ಇತ್ಯುಕ್ತ್ವಾ ಶ್ರೀಹರಿಸ್ತಾಂ ಚ ವಿರರಾಮ ಚ ಸಾದರಂ ।
ಸಾ ಚ ದೇಹಂ ಪರಿತ್ಯಜ್ಯ ದಿವ್ಯರೂಪಂ ದಧಾರ ಹ ॥ ೧೦೦ ॥

ಯಥಾ ಶ್ರೀಶ್ಚ ತಥಾ ಸಾ ಚಾಪ್ಯುವಾಸ ಹರಿವಕ್ಷಸಿ ।
ಪ್ರಜಗಾಮ ತಯಾಸಾರ್ಧಂ ವೈಕುಂಠಂ ಕಮಲಾಪತಿಃ ॥ ೧೦೧ ॥

ಲಕ್ಷ್ಮೀಃ ಸರಸ್ವತೀ ಗಂಗಾ ತುಲಸೀ ಚಾಪಿ ನಾರದ ।
ಹರೇಃ ಪ್ರಿಯಾಶ್ಚತಸ್ರಶ್ಚ ಬಭೂವುರೀಶ್ವರಸ್ಯ ಚ ॥ ೧೦೨ ॥

ಸದ್ಯಸ್ತದ್ದೇಹ ಜಾತಾ ಚ ಬಭೂವ ಗಂಡಕೀ ನದೀ ।
ಹರೇರಂಶೇನ ಶೈಲಶ್ಚ ತತ್ತೀರೇ ಪುಣ್ಯದೋ ನೃಣಾಂ ॥ ೧೦೩ ॥

---

೯೯. ಹೀಗಿರುವಾಗ ಎಲೌ ತುಳಸೀಪ್ರೇಯಸಿಯೇ, ಮನ್ವಂತರಕಾಲ ಶಂಖಚೂಡನಿಗೆ ಪ್ರಿಯಳಾಗಿದ್ದ ನಿನಗೆ ಶಂಖದ ದೆಸೆಯಿಂದ ವಿರಹವುಂಟಾದರೆ ದುಸ್ಸಹ ದುಃಖವುಂಟಾಗುವುದರಲ್ಲಿ ಸಂಶಯವಿಲ್ಲ.

೧೦೦. ಶ್ರೀಹರಿಯು ಆದರಪೂರ್ವಕವಾಗಿ ನುಡಿದ ಈ ಮಾತುಗಳನ್ನು ಕೇಳಿ ತುಳಸಿದೇವಿಯು ಪ್ರಾಕೃತದೇಹವನ್ನು ತ್ಯಾಗಮಾಡಿ ದಿವ್ಯರೂಪವನ್ನು ಧರಿಸಿದಳು.

೧೦೧. ಮತ್ತು ಲಕ್ಷ್ಮೀದೇವಿಯಂತೆ ತಾನೂ ಶ್ರೀಹರಿಯ ವಕ್ಷಃಸ್ಥಲದಲ್ಲಿ ನೆಲೆಸಿದಳು. ಕಮಲಾಕಾಂತನು ಆಕೆಯೊಡಗೂಡಿ ವೈಕುಂಠಕ್ಕೆ ತೆರಳಿದನು.

೧೦೨. ಎಲೈ ನಾರದನೇ, ಸರ್ವೇಶ್ವರನಾದ ಶ್ರೀಹರಿಗೆ ಈರೀತಿ ಲಕ್ಷ್ಮಿ, ಸರಸ್ವತಿ, ಗಂಗೆ ಮತ್ತು ತುಳಸಿ ಈ ನಾಲ್ವರೂ ಪ್ರಿಯಪತ್ನಿಯರಾದರು

೧೦೩. ತುಳಸಿಯ ಶರೀರದಿಂದ ಭರತಖಂಡದಲ್ಲಿ ಗಂಡಕೀ ನದಿಯು ಉತ್ಪತ್ತಿಯಾಯಿತು. ಅದರ ತೀರದಲ್ಲಿ ಶ್ರೀಹರಿಯ ಅಂಶದಿಂದ ಸಾಲಿಗ್ರಾಮ ಶೈಲವೊಂದು ವ್ಯಕ್ತವಾಗಿ ಅದನ್ನು ಪೂಜಿಸುವ ಭಕ್ತರಿಗೆ ಪುಣ್ಯಪ್ರದವಾಯಿತು.

ಕುರ್ವಂತಿ ತತ್ರ ಕೀಟಾಶ್ಚ ಶಿಲಾಂ ಬಹುವಿಧಾಂ ಮುನೇ ।
ಜಲೇ ಪತಂತಿ ಯಾ ಯಾಶ್ಚ ಜಲದಾಭಾಶ್ಚ ನಿಶ್ಚಿತಂ ॥ ೧೦೪ ॥

ಸ್ಥಲಸ್ಥಾಃ ಪಿಂಗಲಾ ಜ್ಞೇಯಾಃ ಶ್ಲೋಽಪತಾಪಾದ್ಧರೇರಿತಿ ।
ಇತ್ಯೇವಂ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೦೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ತುಲಸ್ಯುಪಾಖ್ಯಾನ
ಏಕವಿಂಶತಿತಮೋಽಧ್ಯಾಯಃ

---

೧೦೪. ಅಲ್ಲಿರುವ ವಜ್ರಕೀಟಗಳು ಆ ಶಿಲೆಯನ್ನು ವಿಧವಿಧವಾಗಿ ಖಂಡಿಸಿ ಚಿತ್ರವಿಚಿತ್ರವಾಗಿ ಕೊರೆದವು. ಗಂಡಕೀನದಿಗೆ ಬಿದ್ದ ಆ ಶಿಲಾಖಂಡವೆಲ್ಲವೂ ನೀಲ ಮೇಘದಂತೆ ಪ್ರಕಾಶಿಸಿದವು.

೧೦೫. ನೆಲದಮೇಲೆ ಬಿದ್ದ ಶಿಲೆಗಳೆಲ್ಲವೂ ವಿರಹತಾಪದಿಂದ ಪಿಂಗಳವರ್ಣ ವಾದವು. ಇಂತು ತುಳಸಿ ಶಂಖಚೂಡರ ಉಪಾಖ್ಯಾನವನ್ನು ತಿಳಿಸಿದುದಾಯಿತು. ಇನ್ನೇನನ್ನು ಕೇಳಲು ಬಯಸುವೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ತುಳಸಿಯ
ಉಪಾಖ್ಯಾನರೂಪವಾದ ಇಪ್ಪತ್ತೊಂದನೆಯ ಅಧ್ಯಾಯವು
ಮುಗಿದುದು.

ಇಪ್ಪತ್ತೊಂದನೆಯ ಅಧ್ಯಾಯದ ಸಾರಾಂಶವು

ಶ್ರೀಹರಿಯು ಶಂಖಚೂಡನ ವೇಷವನ್ನು ಧರಿಸಿ ತುಳಸೀದೇವಿಯ ಮನೆಗೆ ಬಂದನು. ತುಳಸೀದೇವಿಯು ಪತಿಯಾದ ಶಂಖಚೂಡನು ಜಯಶಾಲಿಯಾಗಿ ಬಂದನೆಂದು ಬಗೆದು ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯ ದಾನಮಾಡಿ ಮಂಗಳ ವನ್ನು ಮಾಡಿಸಿ, ಅವನನ್ನು ಕುರಿತು ಯುದ್ಧದಲ್ಲಿ ಪರಶಿವನನ್ನು ಸೋಲಿಸಿದ ಬಗೆ ಯನ್ನು ತಿಳುಹಬೇಕೆಂದು ಕೇಳಿದಳು. ಶ್ರೀಹರಿಯು ಶಂಖಚೂಡನ ಧ್ವನಿಯನ್ನೇ ಅನುಕರಿಸಿ 'ಪರಶಿವನಿಗೂ ನನಗೂ ಒಂದುವರ್ಷಕಾಲ ಯುದ್ಧವಾದರೂ ಯಾರಿಗೂ ಜಯಾಪಜಯಗಳು ಉಂಟಾಗದಿರುವುದನ್ನು ನೋಡಿ ಬ್ರಹ್ಮದೇವನು ಬಂದು ನಮ್ಮಿಬ್ಬರಿಗೂ ಸಂಧಿಮಾಡಿಸಿದುದರಿಂದ ನಾನು ಸುಖವಾಗಿ ಹಿಂತಿರುಗಿದೆ' ಎಂದು ಹೇಳಿದನು. ಆ ಮಾತಿನಿಂದ ತುಳಸಿಯು ಅವನೇ ತನ್ನ ಪತಿಯೆಂದು ನಂಬಿ ಅವನೊಡನೆ ಸುರತಕ್ರೀಡೆಯಾಡಿದಳು. ಪರಪುರುಷನ ಸಂಪರ್ಕವನ್ನರಿಯದ ಆ ಸಾಧ್ವೀಮಣಿಯು ವಿಚಿತ್ರವಾದ ಅವನ ರತಿಕ್ರೀಡೆಯಿಂದ ಅವನನ್ನು ಪರಪುರುಷ ನೆಂದು ಅರಿತು ಶಾಪಕೊಡಲುದ್ಯುಕ್ತಳಾದಳು. ಆಗ ಶಾಪಭೀತನಾದ ಶ್ರೀಹರಿಯು ತನ್ನ ನಿಜಸ್ವರೂಪವನ್ನು ತೋರಿದನು. ಆದರೂ ತುಳಸಿಯು ಪಾಷಾಣದಂತೆ ನಿರ್ದಯನಾಗಿ ತನಗೆ ವಂಚನೆಮಾಡಿದ ಶ್ರೀಹರಿಗೆ ಪಾಷಾಣ (ಸಾಲಿಗ್ರಾಮ) ವಾಗೆಂದು ಶಪಿಸಿದಳು. ಆಗ ಶ್ರೀಹರಿಯು ತುಳಸಿಯನ್ನು ಇಂತು ಸಮಾಧಾನಗೊಳಿ ಸಿದನು. 'ಎಲೌ ಸಾಧ್ವೀಮಣಿಯೇ, ನೀನು ಭರತಖಂಡದಲ್ಲಿ ನನಗಾಗಿ ಬಹಳ ಕಾಲ ತಪಸ್ಸು ಮಾಡಿದೆ. ನಿನಗಾಗಿ ಶಂಖಚೂಡನು ತಪಸ್ಸು ಮಾಡಿದನು. ಇದು ವರೆವಿಗೂ ನೀನು ಶಂಖಚೂಡನನ್ನು ವರಿಸಿದ್ದು ಅವನ ಇಷ್ಟಾರ್ಥವನ್ನು ಪೂರ್ಣ ಗೊಳಿಸಿದೆ. ನಾನು ಈಗ ನಿನ್ನ ಇಷ್ಟಾರ್ಥವನ್ನು ಪೂರ್ಣಗೊಳಿಸಿದೆನು. ಇದರಲ್ಲಿ ಯಾವ ದೋಷವೂ ಇಲ್ಲ. ಆದುದರಿಂದ ನೀನು ಈ ಪ್ರಾಕೃತದೇಹವನ್ನು ಬಿಟ್ಟು, ದಿವ್ಯಶರೀರವನ್ನು ಧರಿಸಿ ಗೋಲೋಕಕ್ಕೆ ಬಂದು ಸೇರು. ನಿನ್ನ ಈ ಪ್ರಾಕೃತಶರೀರವು

ಭರತಖಂಡದಲ್ಲಿ ಗಂಡಕೀಯೆಂಬ ನದೀರೂಪದಿಂದಿರುವುದು. ನಿನ್ನ ತಲೆಗೂದಲುಗಳ ರಾಶಿಯೆಲ್ಲವೂ ತುಳಸಿ ಗಿಡವಾಗುವುದು. ಪತ್ರಪುಷ್ಪಗಳಲ್ಲೆಲ್ಲ ಆ ತುಳಸಿಯು ಶ್ರೇಷ್ಠವೆನಿಸುವುದು. ತುಳಸಿಯನ್ನು ಪೂಜಿಸಿದರೆ ನನಗೆ ತೃಪ್ತಿಯುಂಟಾಗುವುದು. ತುಳಸಿಯ ತೀರ್ಥವು ಪರಮಪಾವನವಾಗುವುದು.

ನಾನೂ ನಿನ್ನ ಶಾಪದಂತೆ ಗಂಡಕಿಯ ತೀರದಲ್ಲಿ ಶೈಲರೂಪದಿಂದ ಕಾಣಿಸಿಕೊಳ್ಳುವೆನು. ವಜ್ರಕೀಟಗಳು ಆ ಶಿಲೆಯನ್ನು ಕೊರೆದು ಮನೋಹರವಾದ ಸಾಲಿಗ್ರಾಮಗಳನ್ನಾಗಿ ಮಾಡುವುವು. ಅವುಗಳಲ್ಲಿ ಗಂಡಕೀ ನದಿಗೆ ಉರುಳಿದ ಸಾಲಿಗ್ರಾಮಗಳು ನೀಲವರ್ಣವಾಗಿಯೂ, ದಡಕ್ಕೆ ಉರುಳಿದವು ನಿನ್ನ ವಿರಹದಿಂದ ಹೊಂಬಣ್ಣವಾಗಿಯೂ ಇರುವುವು. ಸಾಲಿಗ್ರಾಮ ಶಿಲಾರ್ಚನೆಯಿಂದ ನಾನು ತೃಪ್ತಿಗೊಳ್ಳುವೆನು. ಸಾಲಿಗ್ರಾಮಶಿಲೆಗೂ ಶಂಖಕ್ಕೂ ಯಾವಾಗಲೂ ತುಳಸೀದಳವನ್ನು ಯೋಜಿಸುವುದರಿಂದ ನಮ್ಮ ಸಮಾಗಮವಾದಂತಾಗುವುದು' ಶ್ರೀಹರಿಯಾಡಿದ ಈ ಮಾತುಗಳನ್ನು ಕೇಳಿ ತುಳಸಿಯು ಪ್ರಾಕೃತದೇಹವನ್ನು ಬಿಟ್ಟು, ದಿವ್ಯರೂಪವನ್ನು ಧರಿಸಿ ಶ್ರೀಹರಿಯ ವಕ್ಷಃಸ್ಥಳದಲ್ಲಿ ನೆಲಸಿದಳು.

(ಸಾಲಿಗ್ರಾಮ ಶಿಲಾಮಹಿಮೆಯೂ, ತುಳಸೀಪತ್ರದ ಮಹಿಮೆಯೂ ಈ ಅಧ್ಯಾಯದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ).

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ದ್ವಾವಿಂಶತಿತಮೋಽಧ್ಯಾಯಃ ॥

॥ ನಾರದ ಉವಾಚ ॥

ತುಲಸೀ ಚ ಜಗತ್ಪೂಜ್ಯಾ ಪೂತಾ ನಾರಾಯಣಪ್ರಿಯಾ ।
ತಸ್ಯಾಃ ಪೂಜಾವಿಧಾನಂ ಚ ಸ್ತೋತ್ರಂ ಕಿಂ ನ ಶ್ರುತಂ ಮಯಾ ॥ ೧ ॥

ಕೇನ ಪೂಜ್ಯಾ ಸ್ತುತಾ ಕೇನ ಪುರಾ ಪ್ರಥಮತೋ ಮುನೇ ।
ತವ ಪೂಜ್ಯಾ ಸಾ ಬಭೂವ ಕೇನ ವಾ ವದ ಮಾಮಹೋ ॥ ೨ ॥

ಇಪ್ಪತ್ತೆರಡನೆಯ ಅಧ್ಯಾಯ

೧. ನಾರದ:—ಎಲೈ ನಾರಾಯಣ ಮಹರ್ಷಿಗಳೇ, ತುಳಸಿಯು ಜಗತ್ಪೂಜ್ಯಳೂ, ಪರಮ ಪವಿತ್ರಳೂ, ನಾರಾಯಣನಿಗೆ ಪ್ರಿಯಳೂ ಆದುದನ್ನು ತಿಳಿಸಿದಿರಿ. ಆದರೆ ಆ ದೇವಿಯ ಪೂಜಾವಿಧಾನವನ್ನೂ ಸ್ತೋತ್ರಕ್ರಮವನ್ನೂ ತಿಳಿಸಲಿಲ್ಲ.

೨ ಮೊಟ್ಟಮೊದಲು ಆ ದೇವಿಯನ್ನು ಪೂಜಿಸಿ ಸ್ತುತಿಸಿದವರಾರು? ಯಾವ ಕಾರಣದಿಂದ ಅವಳು ನಿಮಗೂ ಪೂಜ್ಯಳಾದಳು? ಇದನ್ನು ನನಗೆ ವಿಸ್ತರಿಸಿ ಹೇಳಿ.

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಪ್ರಹಸ್ಯ ಗರುಡಧ್ವಜಃ ।
ಕಥಾಂ ಕಥಿತುಮಾರೇಭೇ ಪುಣ್ಯರೂಪಾಂ ಪುರಾತನೀಂ ॥ ೩ ॥

॥ ನಾರಾಯಣ ಉವಾಚ ॥

ಹರಿಃ ಸಂಪ್ರಾಪ್ಯ ತುಲಸೀಂ ರೇಮೇ ಚ ರಮಯಾ ಸಹ ।
ರಮಾಸಮಾಂ ತಾಂ ಸೌಭಾಗ್ಯಾಂ ಚಕಾರ ಗೌರವೇಣ ಚ ॥ ೪ ॥

ಸೇಹೇ ಲಕ್ಷ್ಮೀಶ್ಚ ಗಂಗಾ ಚ ತಸ್ಯಾಶ್ಚ ನವಸಂಗಮಂ ।
ಸೌಭಾಗ್ಯಂ ಗೌರವಂ ಕೋಪಾನ್ನ ಸೇಹೇ ಚ ಸರಸ್ವತೀ ॥ ೫ ॥

ಸಾ ತಾಂ ಜಘಾನ ಕಲಹೇ ಮಾನಿನೀ ಹರಿಸನ್ನಿಧೌ ।
ವ್ರೀಡಯಾಸ್ವಾಪಮಾನಾಚ್ಚ ಸಾಂತರ್ಧಾನಂ ಚಕಾರ ಹ ॥ ೬ ॥

---

೩. ಸೂತ:—ನಾರದನ ಮಾತನ್ನು ಕೇಳಿ ಗರುಡವಾಹನನಾದ ನಾರಾಯಣನು ನಸುನಕ್ಕು, ಪುರಾತನವೂ ಪುಣ್ಯಕರವೂ ಆದ ತುಳಸೀದೇವಿಯ ಕಥೆಯನ್ನು ಹೇಳಲಾರಂಭಿಸಿದನು.

೪. ನಾರಾಯಣ: —ಇತ್ತ ಶ್ರೀಹರಿಯು ತುಳಸಿಯನ್ನು ಪರಿಗ್ರಹಿಸಿ, ಅವಳೊಡನೆಯೂ, ಲಕ್ಷ್ಮೀದೇವಿಯೊಡನೆಯೂ ಆನಂದದಿಂದಿದ್ದನು. ಅಲ್ಲದೆ ಲಕ್ಷ್ಮೀದೇವಿಗೆ ಸಮಾನವಾದ ಗೌರವವನ್ನು ತುಳಸೀದೇವಿಗೂ ಕೊಟ್ಟು ಆಕೆಗೂ ಸೌಭಾಗ ಸಂಪತ್ತನ್ನು ಅನುಗ್ರಹಿಸಿದನು.

೫ ನಾರಾಯಣನು ತುಳಸಿಯೊಡನೆ ಅನುರಾಗಪೂರ್ವಕವಾಗಿ ವಿಹರಿಸಿಕೊಂಡಿದ್ದುದನ್ನು ಲಕ್ಷ್ಮಿಯೂ, ಗಂಗೆಯೂ ಸಹಿಸಿಕೊಂಡಿದ್ದರು. ಆದರೆ ಕೋಪಸ್ವಭಾವದ ಸರಸ್ವತಿಯು ತುಳಸಿಯ ಸೌಭಾಗ್ಯವನ್ನೂ ಘನತೆ ಗೌರವಗಳನ್ನೂ ನೋಡಿ ಸಹಿಸಲಿಲ್ಲ.

೬. ಅಭಿಮಾನಶೀಲಳಾದ ಸರಸ್ವತಿಯು ಶ್ರೀಹರಿಯ ಎದುರಿನಲ್ಲೇ ತುಳಸಿಯೊಡನೆ ಕಲಹವಾಡಿ ಅವಳನ್ನು ಹೊಡೆದಳು. ಅವಮಾನಿತಳಾದ ತುಳಸಿಯು ನಾಚಿಕೆಯಿಂದ ಎಲ್ಲಿಯೋ ಕಣ್ಮರೆಯಾಗಿ ಹೋದಳು.

ಸರ್ವಸಿದ್ಧೇಶ್ವರೀ ದೇವೀ ಜ್ಞಾನಿನೀ ಸಿದ್ಧಯೋಗಿನೀ ।
ಬಭೂವಾದರ್ಶನಂ ಕೋಪಾತ್ಸರ್ವತ್ರ ಚ ಹರೇರಹೋ ॥ ೭ ॥

ಹರಿರ್ನ ದೃಷ್ಟ್ವಾ ತುಲಸೀಂ ಬೋಧಯಿತ್ವಾ ಸರಸ್ವತೀಂ ।
ತದನುಜ್ಞಾಂ ಗೃಹೀತ್ವಾ ಚ ಜಗಾಮ ತುಲಸೀವನಂ ॥ ೮ ॥

ತತ್ರ ಗತ್ವಾ ಚ ಸ್ನಾತ್ವಾ ಚ ತುಲಸ್ಯಾ ತುಲಸೀಂ ಸತೀಂ
ಪೂಜಯಾಮಾಸ ಧ್ಯಾತ್ವಾ ತಾಂ ಸ್ತೋತ್ರಂ ಭಕ್ತ್ಯಾ ಚಕಾರ ಹ ॥ ೯ ॥

ಲಕ್ಷ್ಮೀಂ ಮಾಯಾ ಕಾಮವಾಣೀ ಬೀಜಪೂರ್ವಂ ದಶಾಕ್ಷರಂ ।
ವೃಂದಾವನೀತಿ ಙ್ಗೇಂತಂ ಚ ವಹ್ನಿಜಾಯಾಂತಮೇವ ಚ ॥ ೧೦ ॥

---

೭. ಜ್ಞಾನವತಿಯೂ, ಸರ್ವಸಿದ್ಧೇಶ್ವರಿಯೂ, ಸಿದ್ಧಯೋಗಿನಿಯೂ ಆದ ತುಳಸೀದೇವಿಯು ಅವಮಾನದಿಂದ ಕೋಪಗೊಂಡು ಶ್ರೀಹರಿಗೂ ಕಾಣದಂತೆ ಕಣ್ಮರೆಯಾದಳು.

೮. ಇತ್ತ ನಾರಾಯಣನು ತುಳಸಿಯನ್ನು ಕಾಣದೆ ವ್ಯಥೆಗೊಂಡವನಾಗಿ, ಮುಡುಕಿದ ಸರಸ್ವತಿಗೆ ಬುದ್ಧಿವಾದ ಹೇಳಿ ಅವಳ ಪ್ರೇರಣೆಯಂತೆ ತುಳಸೀಗಿಡಗಳಿರುವ ವನಕ್ಕೆ ತೆರಳಿದನು.

೯. ಅಲ್ಲಿ ಸ್ನಾನಮಾಡಿ ಪವಿತ್ರವಾದ ತುಳಸೀಪತ್ರದಿಂದ ಪತಿವ್ರತೆಯಾದ ತುಳಸೀದೇವಿಯನ್ನು ಪೂಜಿಸಿ ಭಕ್ತಿಯಿಂದ ಸ್ತುತಿಸಿದನು.

೧೦–೧೧. ಕ್ರಮವಾಗಿ ಲಕ್ಷ್ಮಿ, ಮಾಯೆ, ಕಾಮ ಮತ್ತು ವಾಣಿ ಎಂಬ ಅರ್ಥವನ್ನು ಕೊಡುವ 'ಶ್ರೀಂ ಹ್ರೀಂ ಕ್ಲೀಂ ಐಂ' ಎಂಬ ಬೀಜಾಕ್ಷರಗಳಿಂದ ಕೂಡಿದ ಮಧ್ಯದಲ್ಲಿ 'ವೃಂದಾವನ್ಯೈ' ಎಂಬ ಚತುರ್ಥ್ಯಂತಪದದಿಂದಲೂ, ಕೊನೆಯಲ್ಲಿ ವಹ್ನಿಪತ್ನಿಯಾದ 'ಸ್ವಾಹಾ' ಎಂಬ ಪದದಿಂದಲೂ ಕೂಡಿ ಕಲ್ಪವೃಕ್ಷದಂತೆ ಇಷ್ಟಾರ್ಥಪ್ರದವಾದ 'ಶ್ರೀಂ ಹ್ರೀಂ ಕ್ಲೀಂ ಐಂ ವೃಂದಾವನ್ಯೈಸ್ವಾಹಾ' ಎಂಬ

ಶ್ರೀಂ ಹ್ರೀಂ ಕ್ಲೀಂ ಐಂ ವೃಂದಾವನ್ಯೈ ಸ್ವಾಹಾ ।
ಅನೇನ ಕಲ್ಪತರುಣಾ ಮಂತ್ರರಾಜೇನ ನಾರದ ।
ಪೂಜಯೇಚ್ಚ ವಿಧಾನೇನ ಸರ್ವಸಿದ್ಧಿಂ ಲಭೇನ್ನರಃ ॥ ೧೧ ॥

ಘೃತದೀಪೇನ ಧೂಪೇನ ಸಿಂದೂರಚಂದನೇನ ಚ ।
ನೈವೇದ್ಯೇನ ಚ ಪುಷ್ಪೇಣ ಚೋಪಹಾರೇಣ ನಾರದ ॥ ೧೨ ॥

ಹರಿಸ್ತೋತ್ರೇಣ ತುಷ್ಟಾ ಸಾ ಚಾವಿರ್ಭೂಯ ಮಹೀರುಹಾತ್ ।
ಪ್ರಪನ್ನಾ ಚರಣಾಂಭೋಜೇ ಜಗಾಮ ಶರಣಂ ಶುಭಂ ॥ ೧೩ ॥

ವರಂ ತಸ್ಯೈ ದದೌ ವಿಷ್ಣುರ್ಜಗತ್ಪೂಜ್ಯಾ ಭವೇತಿ ಚ ।
ಅಹಂ ತ್ವಾಂ ಚ ಧರಿಷ್ಯಾಮಿ ಸ್ವಮೂರ್ಧ್ನಿ ವಕ್ಷಸೀತಿ ಚ ॥ ೧೪ ॥

ದಶಾಕ್ಷರ ಮಂತ್ರವನ್ನು ಜಪಿಸಿ, ವಿಧಿವತ್ತಾಗಿ ತುಳಸಿಯನ್ನು ಪೂಜಿಸಿದನು ಈ ರೀತಿ ತುಳಸಿಯನ್ನು ವಿಧಿವತ್ತಾಗಿ ಪೂಜಿಸುವ ಮನುಜನು ಸಕಲ ಸಿದ್ಧಿಯನ್ನೂ ಪಡೆಯುವನು.

೧೨. ಎಲೈ ನಾರದನೇ, ಶ್ರೀಹರಿಯು ಸುಗಂಧಧೂಪದಿಂದಲೂ, ಘೃತದೀಪದಿಂದಲೂ, ಅರಿಸಿನ ಕುಂಕುಮ ಚಂದ್ರ ಮುಂತಾದ ಮಂಗಳದ್ರವ್ಯದಿಂದಲೂ, ಚಂದನ ಗಂಧದಿಂದಲೂ, ವಿವಿಧ ಪತ್ರಪುಷ್ಪಗಳಿಂದಲೂ, ಭಕ್ಷ್ಯಭೋಜ್ಯಾದಿಗಳಿಂದಲೂ ತುಳಸೀದೇವಿಯನ್ನು ತುಷ್ಟಿಬಡಿಸಿದನು.

೧೩. ಶ್ರೀಹರಿಯ ಸ್ತುತಿಯಿಂದ ಸಂತುಷ್ಟಳಾದ ತುಳಸಿಯು ವೃಕ್ಷದಿಂದ ಹೊರಗೆ ಕಾಣಿಸಿಕೊಂಡು ಶ್ರೀಹರಿಯ ಚರಣಕಮಲಗಳಲ್ಲಿ ಶರಣುಹೊಕ್ಕಳು.

೧೪. ಆಗ ವಿಷ್ಣುವು 'ನೀನು ಜಗತ್ಪೂಜ್ಯಳಾಗು. ನಿನ್ನನ್ನು ನನ್ನ ತಲೆಯ ಮೇಲೂ, ವಕ್ಷಃಸ್ಥಲದಲ್ಲೂ ಸರ್ವದಾ ಧರಿಸುವೆನು' ಎಂದು ತುಳಸೀದೇವಿಗೆ ವರವಿತ್ತನು.

ಸರ್ವೇ ತ್ವಾಂ ಧರಿಷ್ಯಂತಿ ಸ್ವಯಂ ಮೂರ್ಧ್ನಿ ಸುರಾದಯಃ ।
ಇತ್ಯುಕ್ತ್ವಾ ತಾಂ ಗೃಹೀತ್ವಾ ಚ ಪ್ರಯಯೌ ಸ್ವಾಲಯಂ ವಿಭುಃ ॥ ೧೫ ॥

॥ ನಾರದ ಉವಾಚ ॥

ಕಿಂ ಧ್ಯಾನಂ ಸ್ತವನಂ ಕಿಂ ವಾ ಕಿಂ ವಾ ಪೂಜಾವಿಧಿಕ್ರಮಂ ।
ತುಲಸ್ಯಾಶ್ಚ ಮಹಾಭಾಗ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೬ ॥

॥ ನಾರಾಯಣ ಉವಾಚ ॥

ಅಂತರ್ಹಿತಾಯಾಂ ತಸ್ಯಾಂ ಚ ಗತ್ವಾ ಚ ತುಲಸೀವನಂ ।
ಹರಿಃ ಸಂಪೂಜ್ಯ ತುಷ್ಟಾವ ತುಲಸೀಂ ವಿರಹಾತುರಃ ॥ ೧೭ ॥

॥ ಶ್ರೀ ಭಗವಾನುವಾಚ ॥

ವೃಂದಾರೂಪಾಶ್ಚ ವೃಕ್ಷಾಶ್ಚ ಯದೈಕತ್ರ ಭವಂತಿ ಚ ।
ವಿದುರ್ಬುಧಾಸ್ತೇನ ವೃಂದಾಂ ಮತ್ಪ್ರಿಯಾಂ ತಾಂ ಭಜಾಮ್ಯಹಂ ॥ ೧೮ ॥

---

೧೫. ಅಲ್ಲದೆ 'ಸಕಲ ದೇವತೆಗಳೂ ನಿನ್ನನ್ನು ತಲೆಯಲ್ಲಿ ಧರಿಸುವರು' ಎಂದು ಹೇಳಿ, ತುಳಸೀದೇವಿಯನ್ನು ತನ್ನೊಡನೆ ಕರೆದುಕೊಂಡು ಶ್ರೀಹರಿಯು ತನ್ನ ಮಂದಿರಕ್ಕೆ ತೆರಳಿದನು.

೧೬. ನಾರದ:–ಮಹಾ ಭಾಗ್ಯಶಾಲಿಯಾದ ಎಲೈ ನಾರಾಯಣನೇ, ತುಳಸೀ ದೇವಿಯ ಧ್ಯಾನ ಸ್ತೋತ್ರ ಪೂಜಾದಿ ಕ್ರಮಗಳನ್ನೂ ನನಗೆ ವಿಸ್ತರಿಸಿ ಹೇಳು.

೧೭. ನಾರಾಯಣ:—ಎಲೈ ನಾರದನೇ, ತುಳಸೀದೇವಿಯು ಕಣ್ಮರೆಯಾದ ನಂತರ ವಿರಹಾತುರನಾದ ಶ್ರೀಹರಿಯು ತುಳಸಿಯ ವನಕ್ಕೆ ಹೋಗಿ ತುಳಸೀದೇವಿಯನ್ನು ಈ ರೀತಿಯಾಗಿ ಪೂಜಿಸಿ ಸ್ತುತಿಸಿದನು.

೧೮. ಶ್ರೀಭಗವಾನ್:— ತುಳಸೀಗಿಡವು ಶಾಖೋಪಶಾಖೆಗಳಿಂದ ಕೂಡಿ ಪ್ರೌಢೆಯಾಗಿ ಬೆಳೆಯುವುದರಿಂದ ಪಂಡಿತರೆಲ್ಲರೂ ತುಳಸಿಯನ್ನು ವೃಂದಾ ಎನ್ನುವರು. ನನ್ನ ಪ್ರೀತಿಗೆ ಪಾತ್ರಳಾದ ಆ ವೃಂದೆಯನ್ನು ನಾನು ಭಜಿಸುವೆನು.

ಪುರಾ ಬಭೂವ ಯಾ ದೇವೀ ಹ್ಯಾದೌ ವೃಂದಾವನೇ ವನೇ।
ತೇನ ವೃಂದಾವನೀ ಖ್ಯಾತಾ ತಾಂ ಸೌಭಾಗ್ಯಾಂ ಭಜಾಮ್ಯಹಂ　　॥ ೧೯ ॥

ಅಸಂಖ್ಯೇಷು ಚ ವಿಶ್ವೇಷು ಪೂಜಿತಾ ಯಾ ನಿರಂತರಂ।
ತೇನ ವಿಶ್ವಪೂಜಿತಾಖ್ಯಾಂ ಜಗತ್ಪೂಜ್ಯಾಂ ಭಜಾಮ್ಯಹಂ　　॥ ೨೦ ॥

ಅಸಂಖ್ಯಾನಿ ಚ ವಿಶ್ವಾನಿ ಪವಿತ್ರಾಣಿ ಯಯಾ ಸದಾ।
ತಾಂ ವಿಶ್ವಪಾವನೀಂ ದೇವೀಂ ವಿರಹೇಣ ಸ್ಮರಾಮ್ಯಹಂ　　॥ ೨೧ ॥

ದೇವಾ ನತುಷ್ಟಾಃ ಪುಷ್ಪಾಣಾಂ ಸಮೂಹೇನ ಯಯಾ ವಿನಾ।
ತಾಂ ಪುಷ್ಪಸಾರಾಂ ಶುದ್ಧಾಂ ಚ ದ್ರಷ್ಟುಮಿಚ್ಛಾಮಿ ಶೋಕತಃ　　॥ ೨೨ ॥

ವಿಶ್ವೇ ಯತ್ಪ್ರಾಪ್ತಿಮಾತ್ರೇಣ ಭಕ್ತ್ಯಾನಂದೋ ಭವೇದ್ಧ್ರುವಂ।
ನಂದಿನೀ ತೇನ ವಿಖ್ಯಾತಾ ಸಾ ಪ್ರೀತಾ ಭವಿತಾ ಹಿ ಮೇ　　॥ ೨೩ ॥

---

೧೯. ಯಾವ ದೇವಿಯು ವೃಂದಾವನದಲ್ಲಿ ಉತ್ಪತ್ತಿ ಪಡೆದು ವೃಂದಾವನೀ ಎಂದು ವಿಖ್ಯಾತಿಗೊಂಡಿರುವಳೋ ಆ ಸೌಭಾಗ್ಯವತಿಯನ್ನು ನಾನು ಭಜಿಸುವೆನು.

೨೦. ಅಗಣಿತವಾದ ವಿಶ್ವದಲ್ಲೆಲ್ಲ ಅನವರತವೂ ಪೂಜೆಗೊಂಡು ವಿಶ್ವಪೂಜ್ಯಳೆಂದು ಹೆಸರಾಂತಿರುವ ಜಗದ್ವಂದ್ಯಳನ್ನು ನಾನು ಭಜಿಸುವೆನು.

೨೧. ಯಾವ ದೇವಿಯು ಸ್ಪರ್ಶಮಾತ್ರದಿಂದ ಅಸಂಖ್ಯವಿಶ್ವವೂ, ಸರ್ವದಾ ಪವಿತ್ರವೆನಿಸುವುದೋ, ವಿಶ್ವಪಾವನೆಯಾದ ಆ ದೇವಿಯನ್ನು ವಿರಹಾತುರನಾದ ನಾನು ಸ್ಮರಿಸುವೆನು.

೨೨. ವೃಕ್ಷರೂಪಳಾದ ತುಳಸಿಯ ಪತ್ರವನ್ನು ಬಿಟ್ಟು ಇತರ ಯಾವ ಪುಷ್ಪಗಳಿಂದ ಪೂಜಿಸಿದರೂ ದೇವತೆಗಳು ಸಂತುಷ್ಟರಾಗುವುದಿಲ್ಲ. ಪುಷ್ಪಗಳಿಗೆಲ್ಲ ಸಾರರೂಪಳೂ ಪರಿಶುದ್ಧಳೂ ಆದ ಆ ತುಳಸಿಯನ್ನು ದುಃಖಿತನಾದ ನಾನು ಭಜಿಸುವೆನು.

೨೩. ತುಳಸಿಯನ್ನು ನೋಡಿದ ಮಾತ್ರದಿಂದಲೇ ಭಕ್ತಿ ಮತ್ತು ಆನಂದವು ಎಲ್ಲರಿಗೂ ಉಂಟಾಗುವುದರಿಂದ ತುಳಸಿಯು 'ನಂದಿನೀ' ಎಂದು ಪ್ರಖ್ಯಾತಳಾಗಿರುವಳು. ಸಕಲ ನಂದಿನಿಯಾದ ಆ ದೇವಿಯು ನನ್ನನ್ನೂ ಆನಂದಗೊಳಿಸಲಿ.

ಯಸ್ಯಾ ದೇವ್ಯಾಸ್ತುಲಾ ನಾಸ್ತಿ ವಿಶ್ವೇಷು ನಿಖಿಲೇಷು ಚ ।
ತುಲಸೀ ತೇನ ವಿಖ್ಯಾತಾ ತಾಂ ಯಾಮಿ ಶರಣಂ ಪ್ರಿಯೆ ॥ ೨೪ ॥

ಕೃಷ್ಣಜೀವನರೂಪಾ ಯಾ ಶಶ್ವತ್ಪ್ರಿಯತಮಾ ಸತೀ ।
ತೇನ ಕೃಷ್ಣಜೀವನೀತಿ ಮಮ ರಕ್ಷತು ಜೀವನಂ ॥ ೨೫ ॥

ಇತ್ಯೇವಂ ಸ್ತವನಂ ಕೃತ್ವಾ ತತ್ರ ತಸ್ಥೌ ರಮಾಪತಿಃ ।
ದದರ್ಶ ತುಲಸೀಂ ಸಾಕ್ಷಾತ್ಪಾದಪದ್ಮೇ ನತಾಂ ಸತೀಂ ॥ ೨೬ ॥

ರುದತೀಮಭಿಮಾನೇನ ಮಾನಿನೀಂ ಮಾನಪೂಜಿತಾಂ ।
ಪ್ರಿಯಾಂ ದೃಷ್ಟ್ವಾ ಪ್ರಿಯಃ ಶೀಘ್ರಂ ವಾಸಯಾಮಾಸ ವಕ್ಷಸಿ ॥ ೨೭ ॥

---

೨೪. ಯಾವ ದೇವಿಗೆ ನಿಖಿಲವಿಶ್ವದಲ್ಲೂ ಸಮಾನರಿಲ್ಲದುದರಿಂದ 'ತುಲಸೀ' ಎಂದು ಹೆಸರು ಬಂದಿರುವುದೋ, ಆ ನನ್ನ ಪ್ರಿಯಳಾದ ದೇವಿಯನ್ನು ಶರಣು ಹೊಂದುವೆನು.

೨೫. ಶ್ರೀಕೃಷ್ಣನಿಗೆ ಜೀವನಸ್ವರೂಪಳೂ, ಅತ್ಯಂತ ಪ್ರಿಯತಮಳೂ ಆದುದರಿಂದ 'ಕೃಷ್ಣಜೀವನೀ' ಎಂದು ಪ್ರಖ್ಯಾತಳಾದ ದೇವಿಯು ನನಗೂ ಜೀವನಸ್ವರೂಪಳಾಗಲಿ

೨೬. ರಮಾಕಾಂತನಾದ ನಾರಾಯಣನು ಈ ರೀತಿಯಾಗಿ ಸ್ತುತಿಸಿ ಸ್ವಲ್ಪ ಕಾಲ ಸುಮ್ಮನಿದ್ದನು. ಆಗ ಪತಿವ್ರತೆಯಾದ ತುಳಸೀದೇವಿಯು ಪ್ರತ್ಯಕ್ಷಳಾಗಿ ಅವನ ಪಾದಕಮಲಗಳಿಗೆ ಸಾಷ್ಟಾಂಗವೆರಗಿದಳು.

೨೭. ಮಾನವತಿಯೂ, ಮಾನಿಷ್ಠರಿಂದ ಪೂಜಿತಳೂ ಆದ ತುಳಸೀದೇವಿಯು ಅಭಿಮಾನಭಂಗದಿಂದ ಅಳುತ್ತಿರುವುದನ್ನು ನೋಡಿ ಅವಳ ಪ್ರಿಯನಾದ ನಾರಾಯಣನು ಅವಳನ್ನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಆಶ್ರಯಕೊಟ್ಟನು.

ಭಾರತ್ಯಾಜ್ಞಾಂ ಗೃಹೀತ್ವಾ ಚ ಸ್ವಾಲಯಂ ಚ ಯಯೌ ಹರಿಃ ।
ಭಾರತ್ಯಾ ಸಹ ತತ್ಪ್ರೀತಿಂ ಕಾರಯಾಮಾಸ ಸತ್ವರಂ ॥ ೨೮ ॥

ವರಂ ವಿಷ್ಣುರ್ದದೌ ತಸ್ಯೈ ವಿಶ್ವಪೂಜ್ಯಾ ಭವೇತಿ ಚ ।
ಶಿರೋಧಾರ್ಯಾ ಚ ಸರ್ವೇಷಾಂ ವಂದ್ಯಾ ಮಾನ್ಯಾ ಮಮೇತಿ ಚ ॥ ೨೯ ॥

ವಿಷ್ಣೋರ್ವರೇಣ ಸಾ ದೇವೀ ಪರಿತುಷ್ಟಾ ಬಭೂವ ಹ ।
ಸರಸ್ವತೀ ತಾಮಾಶ್ಲಿಷ್ಯ ವಾಸಯಾಮಾಸ ಸನ್ನಿಧೌ ॥ ೩೦ ॥

ಲಕ್ಷ್ಮೀರ್ಗಂಗಾ ಸಸ್ಮಿತಾ ತಾಂ ಸಮಾಶ್ಲಿಷ್ಯ ಚ ನಾರದ ।
ಗೃಹಂ ಪ್ರವೇಶಯಾಮಾಸ ವಿನಯೇನ ಸತೀಂ ತದಾ ॥ ೩೧ ॥

ವೃಂದಾಂ ವೃಂದಾವನೀಂ ವಿಶ್ವಪಾವನೀಂ ವಿಶ್ವಪೂಜಿತಾಂ ।
ಪುಷ್ಪಸಾರಾಂ ನಂದಿನೀಂ ಚ ತುಲಸೀಂ ಕೃಷ್ಣಜೀವನೀಂ ॥ ೩೨ ॥

---

೨೮. ಸರಸ್ವತಿಯ ಅನುಜ್ಞೆಯನ್ನು ಪಡೆದು ನಾರಾಯಣನು ತುಳಸಿಯೊಡನೆ ಜಾಗ್ರತೆ ತನ್ನ ಮಂದಿರಕ್ಕೆ ಹಿಂತಿರುಗಿ ಬಂದು, ಸರಸ್ವತಿಯೂ ತುಳಸಿಯೂ ಅನ್ಯೋನ್ಯ ಪ್ರೇಮದಿಂದಿರುವಂತೆ ಮಾಡಿದನು.

೨೯. 'ನೀನು ವಿಶ್ವಪೂಜ್ಯಳೂ, ಸಕಲರ ಶಿರಸ್ಸಿನಲ್ಲಿ ಧಾರ್ಯಳೂ, ವಂದ್ಯಳೂ, ಮಾನ್ಯಳೂ ಆಗು' ಎಂದು ಶ್ರೀಹರಿಯು ಅವಳಿಗೆ ವರವಿತ್ತನು.

೩೦. ವಿಷ್ಣುವಿನ ವರದಿಂದ ತುಳಸೀದೇವಿಯು ಸಂತುಷ್ಟಳಾದಳು. ಅನಂತರ ಸರಸ್ವತಿಯು ಅವಳನ್ನು ಅಪ್ಪಿಕೊಂಡು ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡಳು.

೩೧. ಪರಮ ಪತಿವ್ರತೆಯಾದ ತುಳಸಿಯು ಸ್ಮಿತಮುಖಿಯಾಗಿರುವುದನ್ನು ನೋಡಿ, ಲಕ್ಷ್ಮಿಯೂ ಗಂಗೆಯೂ ವಿನಯದಿಂದ ಸ್ವಾಗತಿಸಿ ಮನೆಯೊಳಕ್ಕೆ ಪ್ರವೇಶ ಮಾಡಿಸಿದರು.

೩೨–೩೩. ವೃಂದಾ, ವೃಂದಾವನೀ, ವಿಶ್ವಪಾವನೀ, ವಿಶ್ವಪೂಜಿತಾ, ಪುಷ್ಪಸಾರಾ, ನಂದಿನೀ, ತುಳಸೀ, ಕೃಷ್ಣಜೀವನೀ' ಎಂಬ ಅನ್ವರ್ಥವಾದ ಈ ಎಂಟು

ಏತನ್ನಾಮಾಷ್ಟಕಂ ಚೈತತ್ಸ್ತೋತ್ರಂ ನಾಮಾರ್ಥಸಂಯುತಂ ।
ಯಃ ಪಠೇತ್ತಾಂ ಚ ಸಂಪೂಜ್ಯ ಸೋಽಶ್ವಮೇಧಫಲಂ ಲಭೇತ್ ॥ ೩೩ ॥

ಕಾರ್ತಿಕೀ ಪೂರ್ಣಿಮಾಯಾಂ ಚ ತುಲಸ್ಯಾ ಜನ್ಮಮಂಗಲಂ ।
ತತ್ರ ತಸ್ಯಾಶ್ಚ ಪೂಜಾ ಚ ವಿಹಿತಾ ಹರಿಣಾ ಪುರಾ ॥ ೩೪ ॥

ತಸ್ಯಾಂ ಯಃ ಪೂಜಯೇತ್ತಾಂ ಚ ಭಕ್ತ್ಯಾ ಚ ವಿಶ್ವಪಾವನೀಂ ।
ಸರ್ವಪಾಪಾದ್ವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೩೫ ॥

ಕಾರ್ತಿಕೇ ತುಲಸೀಪತ್ರಂ ವಿಷ್ಣವೇ ಯೋ ದದಾತಿ ಚ ।
ಗವಾಮಯುತದಾನಸ್ಯ ಫಲಮಾಪ್ನೋತಿ ನಿಶ್ಚಿತಂ ॥ ೩೬ ॥

ಅಪುತ್ರೋ ಲಭತೇ ಪುತ್ರಂ ಪ್ರಿಯಾಹೀನೋ ಲಭೇತ್ಪ್ರಿಯಾಂ ।
ಬಂಧುಹೀನೋ ಲಭೇದ್ಬಂಧುಂ ಸ್ತೋತ್ರಸ್ಮರಣಮಾತ್ರತಃ ॥ ೩೭ ॥

ದಿವ್ಯನಾಮಗಳನ್ನು ಯಾರು ಸ್ತೋತ್ರಮಾಡುವರೋ, ಮತ್ತು ಭಕ್ತಿಯಿಂದ ಆ ತುಳಸೀದೇವಿಯನ್ನು ಪೂಜಿಸುವರೋ ಅವರು ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುವರು.

೩೪. ಕಾರ್ತೀಕಮಾಸದ ಪೂರ್ಣಿಮಾ ದಿನದಲ್ಲಿ ಸರ್ವಮಂಗಳೆಯಾದ ತುಳಸಿಯು ಅವತರಿಸಿದಳು. ಆದುದರಿಂದ ಆ ದಿವಸ ತುಳಸಿಯನ್ನು ಪೂಜಿಸುವುದು ಯುಕ್ತವಾದುದೆಂದು ಶ್ರೀಹರಿಯು ವಿಧಿಸಿರುವನು.

೩೫. ಆ ದಿವಸ ವಿಶ್ವಪಾವನೆಯಾದ ತುಳಸಿಯನ್ನು ಪೂಜಿಸುವವರು ಸಕಲ ಪಾಪವಿನಿರ್ಮುಕ್ತರಾಗಿ ವಿಷ್ಣುಲೋಕಕ್ಕೆ ತೆರಳುವರು.

೩೬. ಕಾರ್ತೀಕಮಾಸದಲ್ಲಿ ತುಳಸೀಪತ್ರವನ್ನು ವಿಷ್ಣುವಿಗೆ ಅರ್ಪಿಸುವವನು ಹತ್ತುಸಾವಿರ ಗೋವುಗಳನ್ನು ದಾನಮಾಡಿದ ದಿವ್ಯಫಲಕ್ಕೆ ನಿಶ್ಚಯವಾಗಿಯೂ ಭಾಗಿಯಾಗುವನು.

೩೭. ತುಳಸಿಯ ಸ್ತೋತ್ರವನ್ನು ಸ್ಮರಿಸಿದ ಮಾತ್ರದಿಂದಲೇ ಮಕ್ಕಳಿಲ್ಲದವರು ಮಕ್ಕಳನ್ನೂ, ಪತ್ನೀರಹಿತರು ಪತ್ನಿಯನ್ನೂ, ಬಂಧುಹೀನರು ಬಂಧುಗಳನ್ನೂ ಪಡೆಯುವರು.

ರೋಗೀ ಪ್ರಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಪಾಪಾನ್ಮುಚ್ಯೇತ ಪಾತಕೀ ॥ ೩೮ ॥

ಇತ್ಯೇವಂ ಕಥಿತಂ ಸ್ತೋತ್ರಂ ಧ್ಯಾನಂ ಪೂಜಾವಿಧಿಂ ಶ್ರುಣು ।
ತ್ವಮೇವ ವೇದ ಜಾನಾಸಿ ಕಾಣ್ವಶಾಖೋಕ್ತಮೇವ ಚ ॥ ೩೯ ॥

ಯದ್ವೃಕ್ಷೇ ಪೂಜಯೇತ್ತಾಂ ಚ ಭಕ್ತ್ಯಾ ಚಾವಾಹನಂ ವಿನಾ ।
ಉಪಚಾರೈಃ ಷೋಡಶಭಿರ್ಧ್ಯಾನಂ ಪಾತಕನಾಶನಂ ॥ ೪೦ ॥

ತುಲಸೀಂ ಪುಷ್ಪಸಾರಾಂ ಚ ಸತೀಂ ಪೂಜ್ಯಾಂ ಮನೋಹರಾಂ ।
ಕೃತ್ಸ್ನಪಾಪೇಧ್ಮದಾಹಾ ಯೆಜ್ವಲದಗ್ನಿಶಿಖೋಪಮಾಂ ॥ ೪೧ ॥

ಪುಷ್ಪೇಷು ತುಲನಾಪ್ಯಸ್ಯಾ ನಾಸೀದ್ದೇವೀಷು ವಾ ಮುನೇ ।
ಪವಿತ್ರರೂಪಾ ಸರ್ವಾಸು ತುಲಸೀ ಸಾ ಚ ಕೀರ್ತಿತಾ ॥ ೪೨ ॥

---

೩೮. ರೋಗಿಯು ರೋಗದಿಂದಲೂ, ಬಂಧಿತನು ಬಂಧನದಿಂದಲೂ, ಭೀತನು ಭಯದಿಂದಲೂ. ಪಾಪಿಯು ಪಾಪದಿಂದಲೂ ಬಿಡುಗಡೆ ಹೊಂದುವನು.

೩೯. ತುಳಸೀಸ್ತೋತ್ರದ ಮಹಿಮೆಯು ಈರೀತಿಯಾಗಿದೆ. ಈಗ ತುಳಸಿಯ ಧ್ಯಾನ ಮತ್ತು ಪೂಜಾವಿಧಾನವನ್ನು ವಿವರಿಸುವೆನು. ಕಾಣ್ವಶಾಖೋಕ್ತವಾದ ಪೂಜಾವಿಧಿಯು ನಿನಗೆ ತಿಳಿದೇ ಇರುವುದು.

೪೦. ಭಕ್ತಿಪೂರ್ವಕವಾಗಿ ಆವಾಹನಾದಿ ಷೋಡಶೋಪಚಾರಗಳಿಂದ ಪೂಜಿಸಿ ಧ್ಯಾನಮಾಡುವುದರಿಂದ ಸಕಲ ಪಾಪಗಳೂ ಪರಿಹಾರವಾಗುವುವು.

೪೧. ಪುಷ್ಪಗಳಿಗೆಲ್ಲ ಸಾರರೂಪಳೂ, ಪೂಜ್ಯಳೂ, ಪರಮ ಪತಿವ್ರತೆಯೂ, ಮನೋಹರಳೂ, ಪಾಪಗಳೆಂಬ ಕಟ್ಟಿಗೆಗಳನ್ನು ಸುಡಲು ಅಗ್ನಿಜ್ವಾಲೆಯಂತಿರುವ ವಳೂ ಆದ ತುಳಸೀದೇವಿಯನ್ನು ಭಕ್ತಿಯಿಂದ ಧ್ಯಾನಿಸಬೇಕು.

೪೨. ಪುಷ್ಪಗಳಲ್ಲಾಗಲೀ, ದೇವಿಯರಲ್ಲಾಗಲೀ ಈಕೆಗೆ ಸಮರಾರೂ ಇಲ್ಲ. ಸಕಲರಿಗೂ ಪವಿತ್ರಳಾದುದರಿಂದ 'ತುಳಸೀ' ಎಂದು ಖ್ಯಾತಿಗೊಂಡಿದ್ದಾಳೆ.

ಶಿರೋಧಾರ್ಯಾಂ ಚ ಸರ್ವೇಷಾಮೀಪ್ಸಿತಂ ವಿಶ್ವಪಾವನೀಂ ।
ಜೀವನ್ಮುಕ್ತಾಂ ಮುಕ್ತಿದಾಂ ಚ ಭಜೇತಾಂ ಹರಿಭಕ್ತಿದಾಂ ॥ ೪೩ ॥

ಇತಿ ಧ್ಯಾತ್ವಾ ಚ ಸಂಪೂಜ್ಯ ಸ್ತುತ್ವಾ ಚ ಪ್ರಣಮೇದ್ಬುಧಃ ।
ಉಕ್ತಂ ತುಲಸ್ಯುಪಾಖ್ಯಾನಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ತುಲಸ್ಯುಪಾಖ್ಯಾನಂ
ನಾಮ ದ್ವಾವಿಂಶತಿತಮೋಽಧ್ಯಾಯಃ

---

೪೩. ಸಕಲರ ಶಿರಸ್ಸಿನಲ್ಲಿ ಧರಿಸಲು ಯೋಗ್ಯಳೂ, ಅಭೀಷ್ಟಪ್ರದಳೂ, ವಿಶ್ವ ಪಾವನಿಯೂ, ಜೀವನ್ಮುಕ್ತಳೂ, ಭಕ್ತಿಮುಕ್ತಿಪ್ರದಳೂ ಆದ ತುಳಸೀದೇವಿಯನ್ನು ಭಜಿಸಬೇಕು.

೪೪. ಪಂಡಿತನಾದವನು ತುಳಸಿಯನ್ನು ಈ ರೀತಿಯಾಗಿ ಧ್ಯಾನಿಸಿ, ಪೂಜಾ ಸ್ತೋತ್ರಾದಿಗಳಿಂದ ಮೆಚ್ಚಿಸಿ ಸಾಷ್ಟಾಂಗನಮಸ್ಕಾರ ಮಾಡಬೇಕು. ಇಂತು ತುಳಸೀದೇವಿಯ ಪೂರ್ವಕಥೆಯನ್ನು ಹೇಳಿದುದಾಯಿತು. ಇನ್ನೇನನ್ನು ಕೇಳ ಬೇಕೆಂದು ನಿನಗೆ ಅಭಿಲಾಷೆಯಿದೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ತುಳಸ್ಯುಪಾಖ್ಯಾನ
ರೂಪವಾದ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೆರಡನೆಯ ಅಧ್ಯಾಯದ ಸಾರಾಂಶವು

ತುಳಸೀದೇವಿಯ ಮಂತ್ರಸ್ತೋತ್ರಗಳನ್ನೂ, ಧ್ಯಾನಪೂಜಾದಿಕ್ರಮವನ್ನೂ ತಿಳಿಸಬೇಕೆಂದು ಕೇಳಿದ ನಾರದನನ್ನು ಕುರಿತು ನಾರಾಯಣ ಮಹರ್ಷಿಗಳು ಇಂತೆಂದರು. ಶ್ರೀಹರಿಯು ತುಳಸೀದೇವಿಯನ್ನು ಪರಿಗ್ರಹಿಸಿ ಆಕೆಯೊಡನೆ ಆನಂದ ದಿಂದಿದ್ದುದನ್ನು ನೋಡಿ ಸರಸ್ವತಿಯು ಸಹಿಸಲಾರದೆ ತುಳಸಿಯೊಡನೆ ಕಲಹವಾಡಿ ದಳು. ಅವಮಾನಿತಳಾದ ತುಳಸಿಯು ಎಲ್ಲಿಯೋ ಕಣ್ಮರೆಯಾಗಿ ಹೋದಳು. ಶ್ರೀಹರಿಯು ಇದನ್ನು ತಿಳಿದು ಸರಸ್ವತಿಯನ್ನು ಶಾಂತಗೊಳಿಸಿ, ತುಳಸಿಯನ್ನು ಹುಡುಕಿಕೊಂಡು ಬೃಂದಾವನಕ್ಕೆ ಹೋದನು. ಅಲ್ಲಿ ಸ್ನಾನಮಾಡಿ 'ಶ್ರೀಂ ಹ್ರೀಂ ಕ್ಲೀಂ ಐಂ ಬೃಂದಾವನ್ಯೈ ಸ್ವಾಹಾ' ಎಂಬ ದಶಾಕ್ಷರ ಮಂತ್ರವನ್ನು ಜಪಿಸಿ, ಗಂಧ ಪುಷ್ಪಾಕ್ಷತೆಗಳಿಂದ ತುಳಸಿಯನ್ನು ಪೂಜಿಸಿ ತೃಪ್ತಿಪಡಿಸಿದನು. ಆಗ ತುಳಸಿಯು ವೃಕ್ಷದಿಂದ ಹೊರಕ್ಕೆ ಬಂದು ಶ್ರೀಹರಿಯ ಮರೆಹೊಕ್ಕಳು. ಶ್ರೀಹರಿಯು ಅವಳೊಡನೆ ತನ್ನ ಮಂದಿರಕ್ಕೆ ತೆರಳಿದನು. ಪಶ್ಚಾತ್ತಾಪದಿಂದ ಕೂಡಿದ ಸರಸ್ವತಿಯು ತುಳಸಿ ಯನ್ನು ಸನ್ಮಾನಿಸಿದಳು. 'ವೃಂದಾ, ವೃಂದಾವನೀ, ವಿಶ್ವಪಾವನೀ, ವಿಶ್ವಪೂಜಿತಾ, ಪುಷ್ಪಸಾರಾ, ನಂದಿನೀ, ತುಳಸೀ, ಕೃಷ್ಣಜೀವನೀ' ಎಂಬ ಅನ್ವರ್ಥವಾದ ನಾಮ ಗಳಿಂದ ಶ್ರೀಹರಿಯು ತುಳಸಿಯನ್ನು ಸ್ತುತಿಸಿದನು. ಕಾರ್ತೀಕಮಾಸದ ಪೂರ್ಣಿಮಾ ದಿವಸ ಮೇಲೆ ಹೇಳಿದ ಮಂತ್ರಸ್ತೋತ್ರಗಳಿಂದ ತುಳಸಿಯನ್ನು ಪೂಜಿಸುವಾತನು ಅಶ್ವಮೇಧಯಾಗದ ಫಲಕ್ಕೆ ಭಾಗಿಯಾಗುವನು. ಪುಷ್ಪಗಳಲ್ಲಾಗಲೀ, ದೇವಿಯ ರಲ್ಲಾಗಲೀ ಈಕೆಗೆ ಸಮರಾರೂ ಇಲ್ಲದುದರಿಂದ ಈಕೆಗೆ 'ತುಲಸೀ' ಎಂಬ ಹೆಸರು ಅನ್ವರ್ಥವಾಯಿತು.